ನೀಲಗಾರರು : ಒಂದು ಧಾರ್ಮಿಕ ಸಮುದಾಯದ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿಎಚ್.ಡಿ ಮಹಾಪ್ರಬಂಧ

ಸಂಶೋಧಕ

ಪಿ. ಟಿ. ಗುರುಪ್ರಸಾದ್

ಮಾರ್ಗದರ್ಶಕರು

ಡಾ. ಹಿ. ಚಿ. ಬೋರಲಿಂಗಯ್ಯ

ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

[illegible]ದ ಯನ ವಿಭಾಗ

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ, ೫೮೩೨೭೬

೨೦೧೨

೨೦

20

ನೀಲಗಾರರು : ಒಂದು ಧಾರ್ಮಿಕ ಸಮುದಾಯದ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿಎಚ್.ಡಿ ಮಹಾಪ್ರಬಂಧ

ಸಂಶೋಧಕ
ಸಿ.ಟಿ.ಗುರುಪ್ರಸಾದ್

ಮಾರ್ಗದರ್ಶಕರು
ಡಾ. ಹಿ. ಚಿ. ಬೋರಲಿಂಗಯ್ಯ
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಬುಡಕಟ್ಟು ಅಧ್ಯಯನ ವಿಭಾಗ

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೨

ದೃಢೀಕರಣ ಪ್ರಮಾಣ ಪತ್ರ

ಶ್ರೀ ಪಿ.ಟಿ. ಗುರುಪ್ರಸಾದ್ ಅವರು "ನೀಲಗಾರರು : ಒಂದು ಧಾರ್ಮಿಕ ಸಮುದಾಯದ ಅಧ್ಯಯನ" ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಇದರಲ್ಲಿನ ವಿಷಯಗಳನ್ನು ಅಥವಾ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿ ಮತ್ತು ಇತರ ಉದ್ದೇಶಗಳಿಗಾಗಿ ಇವರು ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ವಿದ್ಯಾರಣ್ಯ
೩೦-೦೪-೨೦೧೨

(ಡಾ. ಹಿ.ಚಿ. ಬೋರಲಿಂಗಯ್ಯ)
ಮಾರ್ಗದರ್ಶಕರು

[illegible]

[illegible]

[illegible]

[illegible]

[illegible]

[illegible]

ಪ್ರಮಾಣ ಪತ್ರ

"ನೀಲಗಾರರು : ಒಂದು ಧಾರ್ಮಿಕ ಸಮುದಾಯದ ಅಧ್ಯಯನ" ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲು ಡಾ.ಹಿ.ಚಿ.ಬೋರಲಿಂಗಯ್ಯ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಯಾವುದೇ ಉದ್ದೇಶಗಳಿಗಾಗಲಿ ಬಳಸಿ ಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

(ಸಿ.ಟಿ. ಗುರುಪ್ರಸಾದ್)
ಅಧ್ಯಾಪಕ
ಜಾನಪದ ಅಧ್ಯಯನ ವಿಭಾಗ

ಸ್ಥಳ : ವಿದ್ಯಾರಣ್ಯ
ದಿನಾಂಕ : ೩೦-೦೪-೨೦೦೨

ಕೃತಜ್ಞತೆಗಳು

ಸೇವಾ ಅವಧಿಯಲ್ಲಿ ಪಿಎಚ್.ಡಿ ಅಧ್ಯಯನಕ್ಕೆ ಅವಕಾಶ ಕಲ್ಪಿಸಿ ಪ್ರೋತ್ಸಾಹಿಸಿದ ಕನ್ನಡ ವಿಶ್ವವಿದ್ಯಾಲಯದ ಮೊದಲ ಕುಲಪತಿ ಡಾ. ಚಂದ್ರಶೇಖರ ಕಂಬಾರ ಅವರಿಗೆ ಹಾಗೂ ನಂತರದ ಕುಲಪತಿಗಳಾದ ಡಾ.ಎಂ.ಎಂ. ಕಲಬುರ್ಗಿ ಅವರಿಗೆ ಮತ್ತು ಈಗಿನ ನೆಚ್ಚಿನ ಕುಲಪತಿಗಳಾದ ಡಾ.ಎಚ್.ಜೆ. ಲಕ್ಕಪ್ಪಗೌಡ ಅವರಿಗೆ,

ಕುಲಸಚಿವರಾದ ಡಾ.ಕೆ.ವಿ.ನಾರಾಯಣ ಅವರಿಗೆ,

ಪಿಎಚ್.ಡಿ ಅಧ್ಯಯನಕ್ಕೆ ಪ್ರೋತ್ಸಾಹಿಸಿ ಈ ಮಹಾಪ್ರಬಂಧದ ರಚನೆಯ ಮಾರ್ಗದರ್ಶಕರಾಗಿ ಉಪಯುಕ್ತ ಸಲಹೆ ನೀಡಿ ಪ್ರೀತಿಯಿಂದ ಸಹಕರಿಸಿದ ಡಾ. ಹಿ.ಚಿ.ಬೋರಲಿಂಗಯ್ಯ ಅವರಿಗೆ,

ಅಧ್ಯಯನದ ಅವಧಿಯಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಡಾ. ಕರೀಗೌಡ ಬೀಚನಹಳ್ಳಿ, ಡಾ.ಪಾಂಡುರಂಗಬಾಬು, ಡಾ. ಕೇಶವನ್ ಪ್ರಸಾದ್, ಡಾ. ಮಾದವ ಪೆರಾಜೆ, ಶ್ರೀ ಎ.ಎಸ್. ಪ್ರಭಾಕರ ಡಾ. ಸಿ.ಆರ್. ಗೋವಿಂದರಾಜು, ಶ್ರೀ ಸಿ. ವೆಂಕಟೇಶ್, ಡಾ. ಸಿ. ಮಹದೇವ ಅವರುಗಳಿಗೆ,

ಪ್ರಬಂಧ ರಚನೆಯ ಸಂದರ್ಭದಲ್ಲಿ ನನ್ನೊಂದಿಗೆ ಸಹಕರಿಸಿದ ನಮ್ಮ ವಿಭಾಗದ ಮುಖ್ಯಸ್ಥರಾದ ಡಾ. ಮಂಜುನಾಥ ಬೇವಿನಕಟ್ಟಿಯವರಿಗೆ ಹಾಗೂ ವಿಭಾಗದ ಸಹೋದ್ಯೋಗಿಗಳಾದ ಡಾ.ಸ.ಚಿ. ರಮೇಶ್, ಶ್ರೀ ಮೊಗಳ್ಳಿ ಗಣೇಶ್, ಡಾ.ಎಚ್.ಕೆ. ನಾಗೇಶ್ ಹಾಗೂ ಹರಿಶ್ಚಂದ್ರ ದಿಗ್ಸಂಗೀಕರ್ ಅವರಿಗೆ,

ಪ್ರಬಂಧದಲ್ಲಿ ಬರುವ ಕೆಲವು ಭಾವಚಿತ್ರಗಳನ್ನು ನೀಡಿ ಪ್ರಬಂಧ ರಚನೆಯ ಸಂದರ್ಭದಲ್ಲಿ ಸಲಹೆ ನೀಡಿದ ಡಾ. ವೆಂಕಟೇಶ್ ಇಂದ್ವಾಡಿ ಅವರಿಗೆ, ಕ್ಷೇತ್ರಕಾರ್ಯ ಸಂದರ್ಭದಲ್ಲಿ ನನ್ನೊಂದಿಗೆ ಸಹಕರಿಸಿದ ಶ್ರೀ ಮಾರುತಿ ಅವರಿಗೆ,

ಈ ಅಧ್ಯಯನಕ್ಕೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಕನ್ನಡ ವಿಶ್ವವಿದ್ಯಾಲಯದ ಎಲ್ಲಾ ಅಧ್ಯಾಪಕ ವರ್ಗದವರಿಗೆ,

ಅಧ್ಯಯನ ಸಂದರ್ಭದಲ್ಲಿ ಸಹಕರಿಸಿದ ನನ್ನ ಎಲ್ಲಾ ಗೆಳೆಯರಿಗೆ ಮತ್ತು ವಿಶ್ವವಿದ್ಯಾಲಯದ ಸಹೋದ್ಯೋಗಿಗಳಿಗೆ,

ಕ್ಷೇತ್ರಕಾರ್ಯ ಸಂದರ್ಭದಲ್ಲಿ ಉಪಯುಕ್ತ ಮಾಹಿತಿಯನ್ನು ನೀಡಿ ಸಹಕರಿಸಿದ ಎಲ್ಲಾ ನೀಲಗಾರ ಸಮುದಾಯದವರಿಗೆ,

ನನ್ನ ಏಳ್ಗೆ ಮತ್ತು ಶ್ರೇಯಸ್ಸಿನ ಬಗ್ಗೆ ಹೆಚ್ಚು ಕಾಳಜಿ ಇರುವ ತಾಯಿಯವರಿಗೆ ಹಾಗೂ ಅತ್ತೆ-ಮಾವಂದಿರುಗಳಿಗೆ,

ಎಲ್ಲಾ ವಿಷಯದಲ್ಲಿಯೂ ನನ್ನನ್ನು ಪ್ರೋತ್ಸಾಹಿಸುತ್ತಿರುವ ಅಕ್ಕ-ಭಾವಂದಿರುಗಳಿಗೆ,

ಅಧ್ಯಯನದ ಸಂದರ್ಭದಲ್ಲಿ ಕಷ್ಟ-ಸುಖಗಳನ್ನು ನನ್ನೊಂದಿಗೆ ಹಂಚಿಕೊಂಡು ಸಹಕರಿಸಿದ ಪತ್ನಿ ಎಚ್.ಕೆ. ಚೈತ್ರಳಿಗೆ,

ಡಿ.ಟಿ.ಪಿ. ಸಂದರ್ಭದಲ್ಲಿ ಸಲಹೆ ನೀಡಿದ ಗೆಳೆಯ ಎಸ್.ಕೆ. ವಿಜಯೇಂದ್ರ ಅವರಿಗೆ,

ಪ್ರಬಂಧವನ್ನು ಅಂದವಾಗಿ ಡಿ.ಟಿ.ಪಿ. ಮಾಡಿದ ಯಾಜಿ ಗ್ರಾಫಿಕ್ಸ್, ಹೊಸಪೇಟೆ ಅವರಿಗೆ ನನ್ನ ಎಲ್ಲಾ ಬಂಧುಗಳಿಗೆ ಹೃತ್ಪೂರ್ವಕ ವಂದನೆಗಳು ಸಲ್ಲುತ್ತವೆ.

- ಸಿ.ಟಿ. ಗುರುಪ್ರಸಾದ್
ಅಧ್ಯಾಪಕ
ಜಾನಪದ ಅಧ್ಯಯನ ವಿಭಾಗ

ಪರಿವಿಡಿ

ನೀಲಗಾರರು : ಒಂದು ಧಾರ್ಮಿಕ ಸಮುದಾಯದ ಅಧ್ಯಯನ

ಅಧ್ಯಾಯ ೧

ಪ್ರಸ್ತಾವನೆ

೧.೧ ಅಧ್ಯಯನದ ಉದ್ದೇಶ ಮಹತ್ವ ಮತ್ತು ವ್ಯಾಪ್ತಿ

೧.೨ ಇಲ್ಲಿಯವರೆಗೆ ನಡೆದ ಅಧ್ಯಯನ

೧.೧ ಅಧ್ಯಯನದ ಉದ್ದೇಶ ಮಹತ್ವ ಮತ್ತು ವ್ಯಾಪ್ತಿ

ಭಾರತದ ಸಾಂಪ್ರದಾಯಿಕ ಸಮಾಜಗಳಲ್ಲಿ ಅನೇಕ ಸಮುದಾಯಗಳನ್ನು ನಾವು ಕಾಣುತ್ತೇವೆ. ವಿವಿಧ ಜನವರ್ಗಗಳು, ಆದಿವಾಸಿಗಳು, ನಾನಾ ಜಾತಿ ಸಮುದಾಯಗಳು ಮತ್ತು ಒಂದು ನಿಶ್ಚಿತ ಧಾರ್ಮಿಕ ಚೌಕಟ್ಟಿನೊಳಗೆ ಕೆಲವು ಸಮಾನ ನೆಲೆಗಳಲ್ಲಿ ಕೇಂದ್ರೀಕೃತಗೊಂಡ ಹಲವು ಸಮುದಾಯಗಳು ವಿಶಿಷ್ಟ ಸಾಂಸ್ಕೃತಿಕ ಸಂದರ್ಭಗಳಲ್ಲಿ ಧಾರ್ಮಿಕ ಸಮುದಾಯಗಳಾಗಿ ರೂಪಗೊಂಡಿರುವುದನ್ನು ಕಾಣುತ್ತೇವೆ. ಒಂದು ಜಾತಿ ತನ್ನ ಸಮುದಾಯದ ತಾತ್ವಿಕ ಚೌಕಟ್ಟಿನೊಳಗೆ ವಿಕಾಸದ ಸಾಧ್ಯಸಾಧ್ಯತೆಗೆ ಮುಖಾಮುಖಿಯಾಗುತ್ತದೆ. ಅದಕ್ಕೆ ಹಲವು ವಿಧಿ- ನಿಷೇಧಗಳು, ಅಗೋಚರ ನಿಯಮಾವಳಿಗಳು ಜಾರಿಯಲ್ಲಿದ್ದು, ಆ ಜಾತಿ ಸಮುದಾಯವನ್ನು ನಿಯಂತ್ರಿಸುತ್ತಿರುತ್ತವೆ. ಈ ನಿಯಮ ಮತ್ತು ವಿಧಿ ನಿಷೇಧಗಳು ಕೆಲವು ಸಲ ಆಯಾ ಸಮುದಾಯದ ಚಹರೆಯನ್ನು (Identity) ನಿರ್ಧರಿಸುವ, ಅಸ್ತಿತ್ವದಲ್ಲಿಡುವ ನಿಯಾಮಕಗಳಾಗಿ ಕ್ರಿಯಾಶೀಲವಾಗಿರುತ್ತವೆ. ಒಂದು ಸಮುದಾಯದ ಅಸ್ಮಿತತೆಯ ಪ್ರಶ್ನೆ ಆ ಸಮುದಾಯದ ವೈಚಾರಿಕ ಆವರಣದಲ್ಲಿ ಅನೇಕ ಸಮರ್ಥನೆಗಳನ್ನು ಜೊತೆಗಿಟ್ಟುಕೊಂಡೇ ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗುತ್ತದೆ. ಜಾತಿಗೆ ತನ್ನನ್ನು ರಕ್ಷಿಸಿಕೊಳ್ಳುವ ಅನಿರ್ಬಂಧಿತ ಸವಲತ್ತನ್ನು ನಮ್ಮ ಸಾಂಪ್ರದಾಯಿಕ ಸಾಮಾಜಿಕ ವಾತಾವರಣವೇ ಕಲ್ಪಿಸಿದೆ. ಆಧುನಿಕ ಜಗತ್ತಿನ ಮೀಸಲಾತಿ ವ್ಯವಸ್ಥೆ ಈ ರಕ್ಷಿಸಿಕೊಳ್ಳುವ ಸವಲತ್ತಿಗೆ ಒಂದು ಬಗೆಯ ರಾಜಕೀಯ ಆಯಾಮವನ್ನು ಕೊಡಮಾಡಿದೆ. ದೊಡ್ಡ ವ್ಯಂಗ್ಯವೆಂದರೆ ಒಂದು ಜಾತಿ ತನ್ನನ್ನು ರಕ್ಷಿಸಿಕೊಳ್ಳಬೇಕು ಎನ್ನುವುದು ಅದರ ಭೌತಿಕ ಸ್ವರೂಪವನ್ನು ಮಾತ್ರ. ಅದರ ವೈಚಾರಿಕ ತಹತಹ ಮಾತ್ರ ನಿರಂತರ ವಿಕಾಸಶೀಲ ಪ್ರವೃತ್ತಿಯನ್ನು ಮೈಗೂಡಿಸಿಕೊಂಡಿರುತ್ತದೆ. ಇದೇ ಕಾರಣಕ್ಕೆ "ಜಾತಿ ಸಮುದಾಯದ ವಿಕಾಸದ ಹಾದಿಯಲ್ಲಿ ರಕ್ಷಿಸಿಕೊಳ್ಳಬೇಕೆನ್ನುವ ಸ್ವಸಮರ್ಥನೆ ಅತ್ಯಂತ ಪ್ರಬಲ ಪ್ರವೃತ್ತಿಯಾಗಿಯೇ ಕಾಣುತ್ತದೆ."

ಆದರೆ ಸಮುದಾಯದ ವೈಚಾರಿಕ ವಿಕಾಸ ಮಾತ್ರ ಈ ಬಗೆಯ ಪಟ್ಟಭದ್ರ ನಿಲುವುಗಳನ್ನು ಸ್ಫೋಟಿಸುತ್ತಲೇ ಇರುತ್ತದೆ. ಸ್ವರಕ್ಷಣೆ ಎಲ್ಲಿ ಒಂದು ಜಾತಿ ಸಮುದಾಯದ ಬೌದ್ಧಿಕ ದಿಗಂತವನ್ನು ಸಂಕುಚಿತಗೊಳಿಸಲೆತ್ನಿಸುವುದೋ ಅಲ್ಲೆಲ್ಲ ಈ ವೈಚಾರಿಕ ತಹತಹ ಆ ಸಂಕುಚಿತತೆಯನ್ನು ಮೀರಿ ಸಮುದಾಯವನ್ನು ಮುನ್ನಡೆಸುತ್ತದೆ.

ಭಾರತದ ಜಾತಿ ಸಮುದಾಯಗಳು ಈ ಬಗೆಯ ಹೊಡೆತಕ್ಕೆ ಕಾಲದಿಂದ ಕಾಲಕ್ಕೆ ಒಳಗಾಗುತ್ತಲೇ ಬಂದಿವೆ. ಕಾಲದ ಅನಿವಾರ್ಯದ ಫಲವಾಗಿ ಒಂದು ನಾಡಿನ ಸೈದ್ಧಾಂತಿಕ ಬೆಳವಣಿಗೆಗಳಿಗೆ ಈ ಸಮುದಾಯಗಳು ನಿರಂತರವಾಗಿ ಸ್ಪಂದಿಸುತ್ತಲೇ ಬಂದಿವೆ. ಅದರಲ್ಲೂ ವೈದಿಕಧರ್ಮದ ಹುನ್ನಾರಗಳಿಂದ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಧಿಕಾರಗಳನ್ನು ಕಳೆದುಕೊಂಡ

ಭಾರತದ ಕೆಳಜಾತಿಗಳು ಈ ಬಗೆಯ ಸೈದ್ಧಾಂತಿಕ ಹೋರಾಟಗಳಿಗೆ ತಮ್ಮನ್ನು ಧಾರಾಳವಾಗಿ ತೆರೆದುಕೊಂಡಿವೆ. ಚಾರ್ವಾಕರಾದಿಯಾಗಿ ಇವತ್ತಿನ ಆಧುನಿಕ ಹೋರಾಟಗಳವರೆಗಿನ ಅವಧಿಯಲ್ಲಿ ಭಾರತದಲ್ಲಿ ನಡೆದ ಅನೇಕ ವೈಚಾರಿಕ ಸಂಘರ್ಷಗಳ ಜೊತೆ ಭಾರತದ ಕೆಳಜಾತಿಗಳು ತಮ್ಮನ್ನು ಗುರುತಿಸಿಕೊಳ್ಳುತ್ತಾ ಬಂದಿವೆ. ಈ ಕೆಳಜಾತಿಗಳ ಬೌದ್ಧಿಕ ಹುಡುಕಾಟಗಳು ಕೆಲವು ಸಲ ತಮ್ಮ ಸಮುದಾಯಗಳ ಅಸ್ಮಿತತೆಯ ಪ್ರಶ್ನೆಯನ್ನು ಗೌಣವಾಗಿಸಿ ಒಂದು ವೈಚಾರಿಕ ಚೌಕಟ್ಟಿನಲ್ಲಿ ಸಮುದಾಯಗಳನ್ನು ಪುನರ್ ಸಂಘಟಿತವಾಗುವಂತೆ ಮಾಡಿವೆ. ಆದ್ದರಿಂದ ಭಾರತದ ಜಾತಿ ಸಮುದಾಯಗಳಿಗೆ ಪರ್ಯಾಯವಾದ ಜಾತಿಯ ಸನಾತನ ಚೌಕಟ್ಟನ್ನು ಮೀರಿ ಒಂದು ವೈಚಾರಿಕ, ಧಾರ್ಮಿಕ ಎಲ್ಲೆಯೊಂದು ನಿರ್ಮಾಣವಾಗಿದೆ. ಈ ನಾಡಿನಲ್ಲಿ ಹುಟ್ಟಿದ ಭಕ್ತಿಚಳುವಳಿಗಳ ಅನೇಕ ಪ್ರಭಾವ ಮತ್ತು ಒತ್ತಡಗಳನ್ನು ಮೀರಿ ಈ ಕೆಳಜಾತಿಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿವೆ. ಅಂಥ ಸಮುದಾಯಗಳಲ್ಲಿ ನೀಲಗಾರರ ಧಾರ್ಮಿಕ ಸಮುದಾಯವೂ ಒಂದಾಗಿದೆ.

ಅಧ್ಯಯನದ ಮಹತ್ವ

ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ನೀಲಗಾರರಿಗೆ ವಿಶಿಷ್ಟ ಸ್ಥಾನಮಾನಗಳಿವೆ. ನೀಲಗಾರರು ಒಂದು ಜಾತಿಯ ಚೌಕಟ್ಟಿಗೆ ಒಳಪಡುವುದಿಲ್ಲ. ಅದು ಒಂದು ವೈಚಾರಿಕ ಧಾರ್ಮಿಕ ಆವರಣದಲ್ಲಿ ಸಂಘಟಿತಗೊಂಡ ಹಲವು ಜಾತಿ ಸಮುದಾಯಗಳ ಸಮೂಹ. ಮಂಟೇಸ್ವಾಮಿ ಇವರ ಸೈದ್ಧಾಂತಿಕ ನಾಯಕ. ನೀಲಗಾರರ ಚಿಂತನಾ ಪ್ರಪಂಚದ ನೆಲೆಗಟ್ಟೇ ಈ ಮಂಟೇಸ್ವಾಮಿ. ಕರ್ನಾಟಕದ ಕೆಳಜಾತಿಗಳಲ್ಲಿ ಒಂದು ತಾತ್ವಿಕ ಜಾಗೃತಿಗೆ ಕಾರಣವಾದ ವಚನಚಳುವಳಿಯ ಭಿನ್ನಮತೀಯ ಧಾರೆಯ ಜೊತೆ ಮಂಟೇಸ್ವಾಮಿ ಗುರುತಿಸಿಕೊಳ್ಳುತ್ತಾನೆ. ವಚನ ಚಳುವಳಿಯ ಪಟ್ಟಭದ್ರತೆಯನ್ನು ಪ್ರತಿರೋಧಿಸುವ ಕೆಳಜಾತಿಗಳ ಸಾಂಸ್ಕೃತಿಕ ನಾಯಕನಾಗಿ ಮಂಟೇಸ್ವಾಮಿ ರೂಪಗೊಳ್ಳುತ್ತಾನೆ. ಅದು ಅಲ್ಲಮನ ವಿರಕ್ತಧಾರೆಯ ಜಾಡಿನಲ್ಲೇ ಮಂಟೇಸ್ವಾಮಿ ಮತ್ತು ಆತನ ಒಕ್ಕಲುಗಳಾದ ನೀಲಗಾರರ ಚಿಂತನಾಕ್ರಮ ರೂಪುಗೊಂಡಿದೆ. ಈ ಚಿಂತನಾಕ್ರಮ ಒಂದು ವೈಚಾರಿಕ ಸಂಘರ್ಷದ ಒಳಗೇ ಇರುವ ಅತಾರ್ಕಿಕ ನಿಲುವುಗಳನ್ನು ಪ್ರತಿರೋಧಿಸುವ ನೆಲೆಯಲ್ಲಿ ನಿಂತಿರುತ್ತದೆ. ಈ ಚಿಂತನಾಕ್ರಮ ಶ್ರಮಿಕವರ್ಗದ ಒಪ್ಪಂದದ ಆಶಯವಾಗಿ ರೂಪಗೊಂಡಿರುತ್ತದೆ. ಸಾಂಸ್ಕೃತಿಕ ಸಮಾನತೆಯ ಜೊತೆಗೆ ಸಂಪತ್ತಿನ ಸಮಾನ ಹಂಚಿಕೆಯ ಪರವಾದ ಮಾನವೀಯ ಒಲವುಗಳನ್ನು ಅದು ಪ್ರಕಟಿಸುತ್ತದೆ. ನೀಲಗಾರರ ಪ್ರಧಾನ ಆಶಯ ಇದೇ ಆಗಿದೆ. ನೀಲಗಾರರು ಈ ಬಗೆಯ ಚಿಂತನೆಗೆ ಮುಖಾಮುಖಿಯಾದವರು. ಈ ಸಮುದಾಯದ ಅಧ್ಯಯನವೆಂದರೆ ಒಂದು ನಾಡಿನ ವೈಚಾರಿಕ ಸಂಘರ್ಷದ ಅಧ್ಯಯನವೆಂದೇ ಹೇಳಬಹುದು. ಈ ಅಧ್ಯಯನ ಭಾರತದ ಕೆಳಜಾತಿಗಳ ಬೌದ್ಧಿಕ ವಿಕಾಸವನ್ನು ಕುರಿತು ಹೆಚ್ಚು ಗಮನ ಕೊಟ್ಟಿದೆ ಎಂದು ಹೇಳಬಯಸುತ್ತೇನೆ.

ಅಧ್ಯಯನದ ಉದ್ದೇಶ

ನಾವು ಮೊದಲೇ ಹೇಳಿದಂತೆ ನೀಲಗಾರರದು ಒಂದು ವೈಚಾರಿಕ ಧಾರ್ಮಿಕ ಸಮುದಾಯ. ಧಾರ್ಮಿಕ ಸಮುದಾಯದ ಅಧ್ಯಯನವೆಂದರೆ ಒಂದು ಸಮುದಾಯದ ಜೀವನ ವಿಧಾನದ ಒಟ್ಟು ತಿಳುವಳಿಕೆ ಎಂದು ತಿಳಿಯಬೇಕು. ಆ ಸಮುದಾಯದ

ಆಚಾರ-ವಿಚಾರ, ನಂಬಿಕೆ -ಆಚರಣೆ, ರೂಢಿ-ಸಂಪ್ರದಾಯ, ಧರ್ಮ-ದೇವರುಗಳು ವಿಧಿ - ನಿಷೇಧಗಳು ಇವುಗಳು ಆ ಸಮುದಾಯದ ಮಹತ್ವದ ಘಟ್ಟಗಳಾಗಿವೆ. ಹಲವು ವಿಶಿಷ್ಟ ಅಂಶಗಳನ್ನು ಹೊಂದಿರುವ ಜನಪದ ವೃಂದವೊಂದರ ಬದುಕು ಮತ್ತು ಸಂಸ್ಕೃತಿಯ ಅಧ್ಯಯನವೇ ಇಲ್ಲಿಯ ಅಧ್ಯಯನ ಸ್ವರೂಪವಾಗಿದೆ. ಅಧ್ಯಯನದ ಮುಖ್ಯ ಉದ್ದೇಶ, ನೀಲಗಾರರ ವೈಚಾರಿಕ ಧೋರಣೆಗಳನ್ನು ಗುರುತಿಸುವುದು ಮತ್ತು ಕೆಳಜಾತಿಗಳ ಪಾರಂಪರಿಕ ಚಿಂತನಾಕ್ರಮವನ್ನು ಕಟ್ಟಿಕೊಡುವುದೇ ಆಗಿದೆ. ಒಟ್ಟಿನಲ್ಲಿ ಇದು ನಮ್ಮ ಜ್ಞಾನಪರಂಪರೆಗೆ ಹೊಸ ಬಗೆಯ ಸೇರ್ಪಡೆ ಎಂಬುದು ನನ್ನ ನಂಬಿಕೆ.

ಅಧ್ಯಯನದ ವ್ಯಾಪ್ತಿ ಮತ್ತು ವಿಧಾನ

ದಕ್ಷಿಣ ಕರ್ನಾಟಕದಲ್ಲಿ ಹಲವು ನೀಲಗಾರ ಸಮುದಾಯಗಳನ್ನು ಗುರುತಿಸಲಾಗಿದೆ. ನೀಲಗಾರ ಸಮುದಾಯ ಬೃಹತ್ ಪ್ರಮಾಣದಲ್ಲಿದ್ದು, ಮಾದರಿ ಸಮುದಾಯಗಳನ್ನು ಮಾತ್ರ ಅನುಲಕ್ಷಿಸಿ ಅಧ್ಯಯನ ಮಾಡಲಾಗಿದೆ. ಒಂದು ಸಮುದಾಯದ ಒಟ್ಟು ಜೀವನ ವಿಧಾನವನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಮುಖ್ಯವಾಗಿ ಮಂಟೇಸ್ವಾಮಿ ಕಥಾಧಾರೆಯನ್ನು ಹೊಂದಿರುವ ವೃಂದಗಳನ್ನು ಮಾತ್ರ ಅಧ್ಯಯನಕ್ಕೊಳಪಡಿಸಲಾಗಿದೆ. ಮಂಡ್ಯ, ಮೈಸೂರು, ಚಾಮರಾಜನಗರ ಜಿಲ್ಲೆಗಳಲ್ಲಿರುವ ನೀಲಗಾರರ ಕೇಂದ್ರಗಳಾದ ಕಪ್ಪಡಿ, ಚಿಕ್ಕಲ್ಲೂರು, ಬೊಪ್ಪೇಗೌಡನಪುರದ ವ್ಯಾಪ್ತಿಯಲ್ಲಿರುವ ನೀಲಗಾರ ಸಮುದಾಯಗಳನ್ನು ಗಮನಿಸಿ ಅಧ್ಯಯನ ಮಾಡಲಾಗಿದೆ.

ಪ್ರಶ್ನಾವಳಿಗಳ ಮೂಲಕ ಕೆಲವು ಆಯ್ದ ಹಳ್ಳಿಗಳ ನೀಲಗಾರರನ್ನು ಪ್ರಶ್ನಿಸಿ ಉತ್ತರ ಪಡೆಯಲಾಗಿದೆ. ಅವರ ಸಾಂಸ್ಕೃತಿಕ ಕೇಂದ್ರಗಳಲ್ಲಿ ನಡೆಯುವ ಧಾರ್ಮಿಕ ಆಚರಣೆಗಳನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಲಾಗಿದೆ. ಇಲ್ಲಿಯವರೆಗೆ ನಡೆದ ಅಧ್ಯಯನಗಳನ್ನು ಗಮನಿಸಿ ಕ್ಷೇತ್ರಕಾರ್ಯದ ಅನುಭವಗಳ ಜೊತೆ ಈ ಅಧ್ಯಯನವನ್ನು ವಿಸ್ತರಿಸಲಾಗಿದೆ.

ಮೇಲೆ ಹೇಳಿದ ಹಿನ್ನೆಲೆಯಲ್ಲಿ ಮಾಹಿತಿಗಳನ್ನು ಸಂಗ್ರಹಿಸಿ ಅಧ್ಯಯನಕ್ಕೊಳಪಡಿಸಿ ಈ ಮಹಾಪ್ರಬಂಧವನ್ನು ರಚಿಸಲಾಗಿದೆ. ಈ ಮಹಾಪ್ರಬಂಧದಲ್ಲಿ ಒಟ್ಟು ಎಂಟು ಅಧ್ಯಾಯಗಳಿವೆ. ಇದರಲ್ಲಿ ನೀಲಗಾರ ಸಮುದಾಯದ ಸಾಂಸ್ಕೃತಿಕ ಮಹತ್ವವನ್ನು ಹೇಳಲಾಗಿದೆ. ಈ ಅಧ್ಯಯನದಲ್ಲಿ ಬಹುಮುಖ್ಯವಾಗಿ ನೀಲಗಾರ ಸಮುದಾಯದ ವಿಶಿಷ್ಟ ಮಾಹಿತಿಗಳನ್ನು ಕೊಡುವುದರ ಜೊತೆಗೆ ಸಂದರ್ಭಾನುಸಾರ ವಿಶ್ಲೇಷಣೆಗಳನ್ನು ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ನೀಲಗಾರ ಸಮುದಾಯದ ಬಗೆಗೆ ಕೈಗೊಂಡ ನಮ್ಮ ಪ್ರಯತ್ನ ಇದು.

೧.೨ ಇಲ್ಲಿಯವರೆಗೆ ನಡೆದ ಅಧ್ಯಯನಗಳು

ಮಂಟೇಸ್ವಾಮಿ ಎಂಬ ಪವಾಡ ಪುರುಷನನ್ನು ಕುರಿತು ಇದುವರೆಗೂ ನೀಲಗಾರರ ಐದು ಕಾವ್ಯಗಳು ಸಂಪಾದನೆಗೊಂಡು ಹೊರ ಬಂದಿವೆ. ಅದರಲ್ಲಿ ಮುಖ್ಯವಾಗಿ ಕನ್ನಡ ಜಾನಪದದ ಬಹುಮುಖಿ ಪ್ರತಿಭೆಯ ವ್ಯಕ್ತಿಯಾಗಿ ಅತೀ ಹೆಚ್ಚು ಕ್ಷೇತ್ರಕಾರ್ಯ ನಡೆಸಿದ, ಡಾ.ಜೀ.ಶಂ.ಪರಮಶಿವಯ್ಯನವರು ಸಂಪಾದಿಸಿ ಪ್ರಕಟಿಸಿದ "ಶ್ರೀ ಮಂಟೇಸ್ವಾಮಿ ಕಾವ್ಯ." (೧೯೭೩). ಹಾಗೆಯೇ ಜೀವನಹಳ್ಳಿ ಚೌಡೇಗೌಡ ಅವರು "ಧರೆಗೆ ದೊಡ್ಡವರ ವಚನ" ಎಂಬ ಕೃತಿಯನ್ನು ಸಂಪಾದಿಸಿದ್ದಾರೆ. ಅದೇ ರೀತಿ ತಲಕಾಡಿನ

ಮಲ್ಲಯ್ಯ ಪರಮಶಿವಮೂರ್ತಿಯವರು "ಧರೆಗೆ ದೊಡ್ಡವರ ಕಾವ್ಯ" (೧೯೮೦) ಎಂಬ ಕೃತಿ ಹೊರತಂದಿದ್ದಾರೆ. ಡಾ.ರಾ.ವೆಂಕಟೇಶ ಇಂದ್ವಾಡಿಯವರು "ಧರೆಗೆ ದೊಡ್ಡವರ ಕತೆ" (೧೯೯೯) ಎಂಬ ಕಥಾನಕವನ್ನು ಸಂಪಾದಿಸಿದ್ದಾರೆ. ಮಂಟೇಸ್ವಾಮಿ ನೀಲಗಾರರನ್ನು ತುಂಬಾ ಹತ್ತಿರದಿಂದ ಕಂಡಿರುವ ಇವರು ತೀವ್ರ ಆಸಕ್ತಿಯಿಂದ ಕೆಲಸ ಮಾಡಿದ್ದಾರೆ. ಕೊನೆಯದಾಗಿ ಡಾ.ಹಿ.ಚಿ.ಬೋರಲಿಂಗಯ್ಯ ಅವರು ಮಂಟೇಸ್ವಾಮಿ (೧೯೯೭) ಎಂಬ ಬೃಹತ್ ಕಾವ್ಯವನ್ನು ಸಂಪಾದಿಸಿದ್ದು, ಇದು ಸುದೀರ್ಘವಾದ ಕಥಾನಕವಾಗಿದೆ. ಇವಿಷ್ಟು ಪಠ್ಯಗಳು ಮಂಟೇಸ್ವಾಮಿ ಕತೆಯನ್ನೇ ಹೇಳುತ್ತಿದ್ದರೂ ಈ ಐದು ಪಠ್ಯಗಳು ಐದು ಬಗೆಯ ಸ್ವರೂಪಗಳನ್ನು ಒಳಗೊಂಡಿದೆ. ಪ್ರತಿಯೊಬ್ಬ ಕಲಾವಿದನು ಪ್ರತಿ ಪಠ್ಯಗಳನ್ನು ಸೃಷ್ಟಿಸಬಲ್ಲ ಎಂಬುದಕ್ಕೆ ಹಾಗೂ ಮೌಖಿಕ ಕಾವ್ಯಗಳು ಲಿಖಿತ ಕಾವ್ಯಗಳಿಗಿಂತ ಸಂಪೂರ್ಣ ಭಿನ್ನ ಎಂಬುದಕ್ಕೆ ಮೇಲಿನ ಕೃತಿಗಳು ನಿದರ್ಶನವಾಗಿವೆ.

ಈ ಐದು ಪಠ್ಯಗಳಲ್ಲದೆ ಗದ್ಯ ಪಠ್ಯಗಳು ಕೂಡ ಇವೆ. ಶ್ರೀಮತಿ ಮಂಜುಳಾದೇವಿಯವರು "ಧರೆಗೆ ದೊಡ್ಡವರು ಮಂಟೇಸ್ವಾಮಿ" (೧೯೭೧) ಎಂಬ ಕೃತಿಯನ್ನು ಸಂಪಾದಿಸಿದ್ದಾರೆ. ಶ್ರೀ ರುದ್ರಪ್ಪ ಅವರು "ಜನಪದ ಸಾಹಿತ್ಯದಲ್ಲಿ ಮಂಟೇಸ್ವಾಮಿ" (೧೯೯೫) ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ಈ ಇಬ್ಬರು ಲೇಖಕರೂ ನೀಲಗಾರರು ಹಾಡುವ ಕಾವ್ಯವನ್ನು ಕೇಳಿಸಿಕೊಂಡು ಅದರ ಕಥಾ ಸಾರಾಂಶವನ್ನು ಗದ್ಯಕ್ಕೆ ಅನುವಾದಿಸಿ ಕೊಟ್ಟಿದ್ದಾರೆ.

ನೀಲಗಾರರ ಆಚರಣೆ ಸಂಪ್ರದಾಯಗಳ ಬಗ್ಗೆ ಬಹು ಮುಖ್ಯ ಮಾಹಿತಿಗಳನ್ನು ನೀಡುವ "ಮಂಟೇಸ್ವಾಮಿ ಪರಂಪರೆ" (೧೯೯೯) ಎಂಬ ಕೃತಿಯನ್ನು ಕನ್ನಡ ವಿಶ್ವವಿದ್ಯಾಲಯದ ಪತಿಯಿಂದ ಡಾ.ರಾ.ವೆಂಕಟೇಶ ಇಂದ್ವಾಡಿಯವರು ಪ್ರಕಟಿಸಿದ್ದಾರೆ. ಈ ಕೃತಿಯು ಮಂಟೇಸ್ವಾಮಿ ಪರಂಪರೆಯ ನೀಲಗಾರರ ಬಗ್ಗೆ ಅಧ್ಯಯನ ಕೈಗೊಳ್ಳುವವರಿಗೆ ಉತ್ತಮ ಆಕರ ಗ್ರಂಥವಾಗುತ್ತದೆ.

ಆರಂಭದಲ್ಲಿ ಪ್ರಸ್ತಾಪಿಸಲಾದ ಕಾವ್ಯದ ಮೂರು ಸಂಪಾದನೆಗಳು ಲಿಖಿತ ಪಠ್ಯಕ್ರಮದ ಗ್ರಂಥ ಸಂಪಾದನೆಯ ಕ್ರಮವನ್ನು ಅನುಸರಿಸಿ ಬಂದವು. ಆದ್ದರಿಂದ ಅವರು ಒಬ್ಬ ಗಾಯಕ ಹಾಡಿದ್ದನ್ನು ಮೂಲ ಪಠ್ಯವೆಂದು ಪರಿಗಣಿಸಿ ಇತರ ಗಾಯಕರ ಪಠ್ಯವನ್ನು ಕ, ಪಠ್ಯ ಗ, ಪಠ್ಯಗಳೆಂದು ಗುರುತಿಸುತ್ತಾರೆ. ಮೂಲತಃ ಈ ಕ್ರಮ ಲಿಖಿತ ಸಾಹಿತ್ಯಕ್ಕೆ ಅನ್ವಯವಾಗುವಂತೆ ಜನಪದ ಸಾಹಿತ್ಯಕ್ಕೆ ಅನ್ವಯವಾಗುವುದಿಲ್ಲ. ಏಕೆಂದರೆ ಪ್ರತಿಯೊಬ್ಬ ಗಾಯಕನ ಪಠ್ಯಗಳೂ ಒಂದೊಂದು ಸ್ವತಂತ್ರ ಪಠ್ಯಗಳೇ ಆಗಿರುತ್ತವೆ. ಮೈಸೂರು ಜಿಲ್ಲೆಯ ಗುರುಪರಂಪರೆಯವರು ಮೈಸೂರಿನ ಸುತ್ತಮುತ್ತಲಿನ ಪ್ರದೇಶದ ಸಾಂಸ್ಕೃತಿಕ ವಿವರಗಳಿಗೆ ಹೆಚ್ಚು ಒತ್ತುಕೊಟ್ಟರೆ, ಮಂಡ್ಯ ಜಿಲ್ಲೆಯ ಗುರುಪರಂಪರೆಯವರು ತಮ್ಮ ಜಿಲ್ಲೆಯ ಸಾಂಸ್ಕೃತಿಕ ವಿವರಗಳಿಗೆ ಹೆಚ್ಚು ಒತ್ತು ಕೊಡುತ್ತಾರೆ. ಇದರಲ್ಲಿ ಮೂಲಪಠ್ಯ ಯಾವುದು ಎಂಬ ಜಿಜ್ಞಾಸೆ ಉಂಟಾಗುತ್ತದೆ. ಇಲ್ಲಿ ಎರಡು ವಿವರಗಳು ಮುಖ್ಯವಾಗುತ್ತವೆ.

ನಾನೀಗಾಗಲೇ ಹೇಳಿದಂತೆ ಮಂಟೇಸ್ವಾಮಿಯನ್ನು ಮೊಟ್ಟಮೊದಲಿಗೆ ಜಾನಪದ ಕ್ಷೇತ್ರಕ್ಕೆ ಪರಿಚಯಿಸಿದ ಕೀರ್ತಿ ಜೀ.ಶಂ.ಪರಮಶಿವಯ್ಯ ಅವರಿಗೆ ಸಲ್ಲುತ್ತದೆ. "ದಕ್ಷಿಣ ಕರ್ನಾಟಕದ ಜನಪದ ಕಾವ್ಯಪ್ರಕಾರಗಳು" ಎನ್ನುವ ಅವರ ಪಿಎಚ್.ಡಿ ಮಹಾಪ್ರಬಂಧದಲ್ಲಿ "ಮಂಟೇಸ್ವಾಮಿ ಪರಂಪರೆ ನೀಲಗಾರ ಸಂಪ್ರದಾಯ"ವೆಂಬ ಒಂದು ಅಧ್ಯಾಯವೇ ಇದೆ. ಜೀ.ಶಂ.ಪ. ಅವರು ಸವಿಸ್ತಾರವಾದ ಈ ಕತೆಯನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿದ್ದಾರೆ. ೧. ಧರೆಗೆ ದೊಡ್ಡವರ ಸಾಲು ೨. ಸಿದ್ದಪ್ಪಾಜಿ

ಸಾಲು ೩. ರಾಚಪ್ಪಾಜಿ ಸಾಲು ೪. ಚಿಕ್ಕಲ್ಲೂರು ಸಾಲು ಎಂದು ವಿಭಾಗಿಸಿದ್ದಾರೆ. ಆದರೆ ಈ ವಿಭಾಗಕ್ರಮಕ್ಕನುಗುಣವಾಗಿಯೇ ಕಲಾವಿದರು ಹಾಡುವುದಿಲ್ಲ. ಅವರು ಪ್ರಸಂಗಗಳ ತರಹದಲ್ಲಿ ಈ ಕತೆಯನ್ನು ಹಾಡಲು ಮುಖ್ಯ ಕಾರಣ ಅವು ಒಂದೊಂದು ರಾತ್ರಿಯಲ್ಲಿ ಮುಗಿಯಬೇಕಾಗಿರುವುದೇ ಆಗಿದೆ. ಹಾಗೆ ಹಾಡುವಾಗ ಎಲ್ಲ ಪ್ರಸಂಗಗಳಿಗೂ ತಾಳು-ತುದಿಯ ಕತೆಗಳನ್ನು ಸೇರಿಸಿಕೊಂಡು ಹಾಡುತ್ತಾರೆ. ಆದ್ದರಿಂದ ಇದರಲ್ಲಿ ಆದಿ-ಅಂತ್ಯಗಳ ಕಲ್ಪನೆ ನಮ್ಮ ಶಿಷ್ಟಕಾವ್ಯಗಳಿಗಿಂತ ಭಿನ್ನವಾದುದು. ಒಂದೊಂದು ಪ್ರಸಂಗವನ್ನು ಅಖಂಡವಾಗಿ ಕಟ್ಟುವುದರಲ್ಲಿ ಅವರಿಗೆ ಆಸಕ್ತಿ ಇರುತ್ತದೆ. ಜೀ.ಶಂ.ಪ. ಅವರ ಪಠ್ಯದ ಪ್ರಧಾನ ಗಾಯಕರು ಶ್ರೀ ಮಳವಳ್ಳಿ ರಾಚಯ್ಯನವರು ಇವರು ಮಂಡ್ಯ ಜಿಲ್ಲೆಯ ಗುರುಪರಂಪರೆಯ ಹಿರಿಯ ತಲೆಮಾರಿನವರು. ನಂತರದಲ್ಲಿ ತಲಕಾಡಿನ ಮಲ್ಲಯ್ಯ ಪರಶಿವಮೂರ್ತಿಯವರು ೧೯೭೦ರಲ್ಲಿ ತಲಕಾಡಿನ ಶ್ರೀ ಪುಟ್ಟಮಾದಯ್ಯನವರು ಹಾಡಿದ ಕಾವ್ಯವನ್ನು ಮುಖ್ಯವಾಗಿಟ್ಟುಕೊಂಡು ''ಧರೆಗೆ ದೊಡ್ಡವರ ಕಾವ್ಯ''ವನ್ನು ಸಂಪಾದಿಸಿದ್ದಾರೆ. ಈ ಪಠ್ಯದಲ್ಲಿ ಮಡಿವಾಳ ಮಾಚಯ್ಯನ ಪ್ರಸಂಗವೇ ಮೊದಲು ಬಂದು ಕಲ್ಯಾಣದ ಭಾಗ ಕೊನೆಯಲ್ಲಿ ಬರುತ್ತದೆ. ಇದು ಕತೆಗಿಂತ ಆಚರಣೆಗಳಿಗೆ ಹೆಚ್ಚು ಒತ್ತುಕೊಟ್ಟು ಬೆಳೆದಿರುವ ಪಠ್ಯ ಆಗಿದೆ. ಸಿದ್ದಪ್ಪಾಜಿಯವರಿಗೆ ದೀಕ್ಷೆ ಕೊಡುವ ಭಾಗವಂತೂ ಉಳಿದೆಲ್ಲಾ ಪಠ್ಯಗಳಿಗಿಂತ ವರ್ಣಮಯವಾಗಿದೆ. ನಂತರ ವಿಶ್ವಾಲಯ ಪ್ರಕಾಶನದಿಂದ ಡಾ. ಇಂದ್ವಾಡಿ ಅವರ ''ಧರೆಗೆ ದೊಡ್ಡವರ ಕತೆ'' ಎಂಬ ಕೃತಿ ಪ್ರಕಟವಾಯಿತು. ಈ ಕತೆಯನ್ನು ಹಾಡಿದವರು ಮೋಳೆರಾಚಯ್ಯನವರು, ಕೊನೆಯದಾಗಿ ೧೯೯೭ರಲ್ಲಿ ಮಂಟೇಸ್ವಾಮಿ ಎಂಬ ಬೃಹತ್ ಕಾವ್ಯವನ್ನು ಬುಡಕಟ್ಟು ಮಹಾಕಾವ್ಯ ಮಾಲೆಯ ಅಡಿಯಲ್ಲಿ ಕನ್ನಡ ವಿಶ್ವವಿದ್ಯಾಲಯ ಪ್ರಕಟಮಾಡಿದೆ. ಈ ಪಠ್ಯವನ್ನು ಹಾಡಿದವರು ಹಿನಕಲ್ಲು ಮಹಾದೇವಯ್ಯನವರು. ಈ ಪಠ್ಯದ ಸಂಪಾದಕರು ಡಾ.ಹಿ.ಚಿ.ಬೋರಲಿಂಗಯ್ಯನವರು. ಈ ಪಠ್ಯ ಉಳಿದೆಲ್ಲ ಪಠ್ಯಗಳಿಗಿಂತ ಸುದೀರ್ಘವಾಗಿದ್ದು, ಉತ್ತಮ ಪ್ರಸ್ತಾವನೆಯನ್ನು ಒಳಗೊಂಡ ಸಮಗ್ರವಾದ ಕಥಾನಕವಾಗಿದೆ. ಡಾ.ವೆಂಕಟೇಶ ಇಂದ್ವಾಡಿಯವರು ಮತ್ತು ಡಾ.ಹಿ.ಚಿ.ಬೋರಲಿಂಗಯ್ಯ ಅವರು ಸಂಪಾದಿಸಿರುವ ಪಠ್ಯಗಳು ಆಧುನಿಕವಾದ ಸಂಪಾದನಾ ಕ್ರಮಕ್ಕೆ ಉದಾಹರಣೆಗಳಾಗಿವೆ. ಹಲವು ಗಾಯಕರಿಂದ ಹಾಡಿಸಿ ಅತ್ಯುತ್ತಮ ಭಾಗಗಳನ್ನು ಆಯ್ದು ಒಂದು ಸಮಗ್ರ ಕತೆಯನ್ನು ಕಟ್ಟಿಕೊಡುವ ಹಳೆಯ ಸಂಪಾದನ ವಿಧಾನಕ್ಕಿಂತ ಒಂದು ವಿಶಿಷ್ಟ ಸಂದರ್ಭದಲ್ಲಿ ಒಬ್ಬನೇ ಗಾಯಕ ಹಾಡಿದ ಸಮಗ್ರ ಕಥನವನ್ನು ಆಮೂಲಾಗ್ರವಾಗಿ ಸಂಗ್ರಹಿಸಿ ಪ್ರಕಟಿಸುವ ಮೂಲಕ ಹೊಸ ಅಧ್ಯಯನ ಮಾದರಿಗೆ ಉತ್ತಮ ಆಕರಗಳನ್ನು ಒದಗಿಸಿದಂತೆ ಆಗಿದೆ. ಹೀಗೆ ಮಾಡುವುದರಿಂದ ''ಸಂದರ್ಭ ಸಿದ್ಧಾಂತ''ವನ್ನು ಮತ್ತಷ್ಟು ಗಟ್ಟಿಗೊಳಿಸಿದಂತಾಗಿದೆ. ಆಯಾ ವಿಶಿಷ್ಟ ಸಂದರ್ಭದಲ್ಲಿ ಒಬ್ಬ ಗಾಯಕ ಹಾಡುವ ಇಡೀ ಪಠ್ಯ ಆ ಸಂದರ್ಭದ ಒಂದು ಸ್ವತಂತ್ರ ಕೃತಿಯಾಗಿರುತ್ತದೆ ಎಂಬ ವಾದಕ್ಕೆ ಈ ಮೇಲಿನ ಎರಡು ಸಂಪಾದನೆಗಳು ಉದಾಹರಣೆಗಳಾಗಿವೆ. ಇಷ್ಟು ಬಿಟ್ಟರೆ ಅಲ್ಲಲ್ಲಿ ಕೆಲವು ಪುಸ್ತಕಗಳಲ್ಲಿ ಸಣ್ಣ ಪುಟ್ಟ ಲೇಖನಗಳು ಪ್ರಕಟವಾಗಿವೆ. ಉಳಿದಂತೆ ಎಲ್ಲಿಯೂ ಸಹ ಈ ಮಂಟೇಸ್ವಾಮಿಯ ನೀಲಗಾರರ ಪರಂಪರೆ ಕುರಿತು ಸಮಗ್ರವಾದ ಅಧ್ಯಯನ ನಡೆದಿರುವುದಿಲ್ಲ ಎಂದು ಹೇಳಬಹುದಾಗಿದೆ.

ಅಧ್ಯಾಯ ೨

ಚರಿತ್ರೆ

೨.೧ ಮಧ್ಯಕಾಲೀನ ಧಾರ್ಮಿಕ ಚಟುವಟಿಕೆಗಳು

೨.೨ ಕೆಳಜಾತಿಗಳ ಪರ್ಯಾಯ ಚಿಂತನೆಗಳು

೨.೩ ನೀಲಗಾರರ ಚಾರಿತ್ರಿಕ ಬೆಳವಣಿಗೆ

೨ : ೧. ಮಧ್ಯಕಾಲೀನ ಧಾರ್ಮಿಕ ಚಟುವಟಿಕೆಗಳು

ಮಧ್ಯಕಾಲೀನ ಕನ್ನಡ ಸಾಹಿತ್ಯ ಗಡಿಯನ್ನು ೧೧೦೦ ರಿಂದ ೧೮ - ೧೯ನೇ ಶತಮಾನವೆಂದು ಪರಿಗಣಿಸಲಾಗಿದೆ. ಈ ಅವಧಿಯಲ್ಲಿ ಒಂದೇ ರೀತಿಯ ಸಾಹಿತ್ಯ ಶೈಲಿ, ಒಲವು-ನಿಲುವುಗಳು, ಪ್ರವೃತ್ತಿ, ಸಾಹಿತ್ಯ ಸೃಷ್ಟಿಯಲ್ಲಿ ತುಂಬಾ ವಿಭಿನ್ನವಾಗಿರುವುದನ್ನು ಕಾಣಬಹುದು. ಈ ಕಾಲಾವಧಿಯಲ್ಲಿ ರಚಿತವಾದ ಸಾಹಿತ್ಯವನ್ನು ಇಲ್ಲಿಯವರೆಗಿನ ಸಾಹಿತ್ಯ ಚರಿತ್ರೆಕಾರರು ಎರಡು ಹಂತಗಳಲ್ಲಿ ಗುರುತಿಸಿದ್ದಾರೆ. ವಚನಯುಗ, ಷಟ್ಪದಿಯುಗ, ಬಸವಯುಗ, ಕುಮಾರವ್ಯಾಸಯುಗ ಅಥವಾ ಇನ್ನೂ ಹಿನ್ನಡೆದು ವೀರಶೈವಯುಗ, ವೈದಿಕಯುಗ ಎಂಬುದಾಗಿ ವಿಂಗಡಿಸಿದ್ದಾರೆ. ಅನೇಕ ದೃಷ್ಟಿಯಿಂದ ಈ ಯುಗಕ್ಕೆ ವೈಶಿಷ್ಟ್ಯವಿದೆ. ಈವರೆಗೆ ಜೀವನ ಮತ್ತು ಸಾಹಿತ್ಯಗಳು ಹೆಚ್ಚಾಗಿ ಪರಂಪರಾಗತವಾಗಿದ್ದುವು. ಈ ಯುಗದಲ್ಲಿ ಧಾರ್ಮಿಕ, ಸಾಮಾಜಿಕ ಜೀವನದಲ್ಲಿ ಮೂಲಭೂತವಾದ ವ್ಯತ್ಯಾಸಗಳು ಅದಕ್ಕೆ ವಿರೋಧವಾದ ಪ್ರತಿಕ್ರಿಯೆಗಳು, ಸಂಘರ್ಷ, ಸಾಮರಸ್ಯಗಳು ತಲೆದೋರಿ ಕನ್ನಡ ಸಾಹಿತ್ಯದ ಮೇಲೆ ಆಳವಾದ ವರ್ಚಸ್ಸು ಬೀರಿದವು.

ಹನ್ನೆರಡನೆ ಶತಮಾನ ಕರ್ನಾಟಕದ ಸಾಮಾಜಿಕ ಹಾಗೂ ಧಾರ್ಮಿಕ ಇತಿಹಾಸದಲ್ಲಿ ಒಂದು ಮಹತ್ವಪೂರ್ಣ ಘಟ್ಟ. ವೈದಿಕ ಹಾಗೂ ಜೈನ ಧರ್ಮಗಳು ಜನಸಾಮಾನ್ಯರಿಂದ ದೂರವಾಗಿ ಕೇವಲ ಮಠಮಂದಿರಗಳಿಗೆ ಸೀಮಿತವಾಗಿಬಿಟ್ಟಾಗ ಜನಸಾಮಾನ್ಯರನ್ನು ಸಾಂತ್ವನಪಡಿಸಲು ಈ ವೀರಶೈವಧರ್ಮ ಹುಟ್ಟಿಕೊಂಡಿತು. ಅಷ್ಟು ಹೊತ್ತಿಗಾಗಲೇ ಭಕ್ತಿಪಂಥ ನಿಧಾನಕ್ಕೆ ಬೇರು ಬಿಡುತ್ತಿತ್ತು. ಇವೆಲ್ಲ ಒಂದಾಗಿ ಅಂದಿನ ಯಜಮಾನ ಸಂಸ್ಕೃತಿಯ ವಿರುದ್ಧ ತಿರುಗಿಬಿದ್ದು, ಸಮಾಜದಲ್ಲಿ ಹೊಸ ರೀತಿಯ ಚಾಲನೆಯನ್ನು ಉಂಟುಮಾಡಿದವು. ಕರ್ನಾಟಕ ವೀರಶೈವಧರ್ಮ ಜನಸಾಮಾನ್ಯರಲ್ಲಿ ಹೆಚ್ಚು ಪ್ರಚಾರಕ್ಕೆ ಬರಲು ಸಾಹಿತ್ಯವನ್ನು ಮಾಧ್ಯಮವನ್ನಾಗಿ ಮಾಡಿಕೊಂಡಿತು. ಅಂದು ಅನಕ್ಷರಸ್ಥರು, ಅವಿದ್ಯಾವಂತರು ತುಂಬಿದ್ದ ಸಮಾಜದಲ್ಲಿ ಸಾಹಿತ್ಯ ತನ್ನಷ್ಟಕ್ಕೆ ತಾನೇ ಪ್ರಚಾರವಾಗುವಂತಿರಲಿಲ್ಲ. ಆಗ ಈ ಧರ್ಮದ ಪ್ರವರ್ತಕರು ಜನಪದ ಸಾಹಿತ್ಯ, ''ಸಾಹಿತ್ಯದ ಪ್ರಮುಖ ಲಕ್ಷಣವಾದ ತೋಂಡಿ ಸಂಪ್ರದಾಯದಲ್ಲಿ ಜನಸಾಮಾನ್ಯರ ನುಡಿಗಟ್ಟುಗಳಲ್ಲಿ ಅವರ ಪ್ರಕೃತಿ, ಪ್ರಾಣಿ ರೂಪಕಗಳಲ್ಲಿ ತಾವು ಕಟ್ಟಿದ ಧರ್ಮದ ಸಂದೇಶವನ್ನು ಹೇಳತೊಡಗಿದರು.''[೧] ಅದೇ ಇವತ್ತಿನ ಕನ್ನಡ ಸಾಹಿತ್ಯದ ಪ್ರಮುಖ ಘಟ್ಟವಾದ ವಚನಸಾಹಿತ್ಯವಾಗಿದೆ. ಈ ಚಳುವಳಿಯ ಸಂದರ್ಭದಲ್ಲಿ ಹಲವಾರು ಮತಗಳು ಹುಟ್ಟಿಕೊಂಡವು. ಅವುಗಳಲ್ಲಿನ ಜನಸಾಮಾನ್ಯರ ಶರಣರ ಧಾರ್ಮಿಕ ಚಟುವಟಿಕೆಗಳನ್ನು ಮುಂದಿನ ಭಾಗದಲ್ಲಿ ವಿವರಿಸಲಾಗುವುದು.

೨ : ೧.೧ ವಚನ ಚಳುವಳಿಯ ಧಾರ್ಮಿಕ ಪರಿಸರ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಚನಸಾಹಿತ್ಯಕ್ಕೊಂದು ವಿಶಿಷ್ಟ ಸ್ಥಾನವಿದೆ. ದಲಿತರು, ಶೋಷಿತರು, ಕೆಳಸ್ತರದವರು ಮೊದಲ ಬಾರಿಗೆ ಸಾಹಿತ್ಯದ ಮುಖಾಂತರ ಮಾತನಾಡಿದ್ದು ಇದೇ ಸಂದರ್ಭದಲ್ಲಿ. ಹನ್ನೆರಡನೆ ಶತಮಾನದ ವಚನಕಾರರು ಕನ್ನಡ ಸಾಹಿತ್ಯಕ್ಕೆ ಹೊಸ ಆಯಾಮ ನೀಡಿದವರು. ಕನ್ನಡನಾಡಿನಲ್ಲಿ ಹೊಸ ಮನ್ವಂತರವನ್ನು ತಂದವರು. ವಚನ ಸಾಹಿತ್ಯ ಕನ್ನಡದ ಚಿರಂತನ ಆಸ್ತಿ. ವಚನಕಾರರು ಹೊಸ ಚಳುವಳಿಯೊಂದನ್ನು ಹುಟ್ಟು ಹಾಕಿದ ಹರಿಕಾರರು. ಅಲ್ಲಮಪ್ರಭು, ಬಸವಣ್ಣ, ಅಕ್ಕಮಹಾದೇವಿ, ಸಿದ್ಧರಾಮ, ಅಂಬಿಗರ ಚೌಡಯ್ಯ, ಮಾದಾರಚೆನ್ನಯ್ಯ, ಡೋಹರ ಕಕ್ಕಯ್ಯ, ನುಲಿಯ ಚಂದಯ್ಯ, ಕಾಳವ್ವೆ, ಲಕ್ಕಮ್ಮ ಈ ಮುಂತಾದ ವಚನಕಾರರು ಬದುಕು-ಬರಹಗಳನ್ನು ಒಂದಾಗಿಸಿದ್ದು ತುಕ್ಕು ಹಿಡಿದ ವ್ಯವಸ್ಥೆಗೆ ಹೊಸದಿಕ್ಕು ತೋರಿಸಿದ್ದುದು ವಚನ ಚಳುವಳಿಯಲ್ಲಿ ಮರೆಯಲಾಗದ ಚರಿತ್ರೆಯಾಗಿದೆ. ಈ ಎಲ್ಲಾ ವಚನಕಾರರ ವಚನಗಳಲ್ಲಿ ದಿಮಿಗುಡುವ ಧಾರ್ಮಿಕ ಪ್ರಜ್ಞೆ ಪ್ರಸ್ತುತ ಬದುಕಿಗೆ ತೀರ ಅಗತ್ಯವಾಗಿದೆ. ನಡೆದು ನುಡಿವ ಅವರ ನುಡಿಮುತ್ತುಗಳು ಇಂದಿಗೂ ಅನಿವಾರ್ಯ ಸತ್ಯಸಂಗತಿಗಳಾಗಿವೆ. "ಅರಮನೆಯಿಂದ ಹೊರಬಂದು ರಾಜಾಶ್ರಯದಿಂದ ದೂರವಾಗಿ ಪಂಡಿತರ ಕಪಿಮುಷ್ಟಿಯಿಂದ ಪಾರಾಗಿ ಬಂದ ಕನ್ನಡ ಸಾಹಿತ್ಯ ಸಹಜವಾಗಿ ಉಸಿರಾಡಿದ್ದು ವಚನಕಾರರಲ್ಲಿ ಮಾತ್ರ."[1] ಜಾತಿ-ಮತ-ಪಂಥಗಳನ್ನು ಬಿಟ್ಟು, ದೇಶ-ಭಾಷೆ-ವಯಸ್ಸುಗಳ ಅಂತರವನ್ನು ಮರೆತು ಮೇಲು ಕೀಳೆಂಬ ತಾರತಮ್ಯವನ್ನಳಿದು ಸಾಮಾನ್ಯ ಜನತೆ ಮೊದಲ ಬಾರಿಗೆ ತಮ್ಮನ್ನು ಸಾಹಿತ್ಯದಲ್ಲಿ ತೊಡಗಿಸಿಕೊಂಡಿದ್ದು ವಚನ ಚಳುವಳಿಯ ಮಧ್ಯಕಾಲೀನ ಕನ್ನಡ ಸಾಹಿತ್ಯದ ಹುಡುಕಾಟಗಳಲ್ಲಿ ಒಂದಾಗಿದೆ.

ವಚನಕಾರರದು ಪ್ರಮುಖವಾಗಿ ಧಾರ್ಮಿಕ ಆಂದೋಲನ. ಧರ್ಮದ ಮುಖಾಂತರ ಮಾನವೀಯತೆಯನ್ನು ಬಿತ್ತುವುದು ಅವರ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿದೆ. ಅಂದಿನ ಹದಗೆಟ್ಟ ಧಾರ್ಮಿಕ ಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೋಸ್ಕರ ವಚನಕಾರರ ಪ್ರವೇಶವಾಯಿತೆಂಬುದನ್ನು ಮರೆಯಬಾರದು. ಇವರು ಸಾಹಿತ್ಯದ ವಸ್ತುವನ್ನು ಬದಲಾಯಿಸುವುದರ ಮೂಲಕ ಅದರ ಪ್ರಕಾರವನ್ನು ಬದಲಾಯಿಸಿ ವಚನದಂತಹ ಹೊಸದಾದ ವಿಶಿಷ್ಟವಾದ ಪ್ರಕಾರವನ್ನು ಪರಿಚಯಿಸುತ್ತಾ ಸಾಹಿತ್ಯ ಚರಿತ್ರೆಗೆ ಹೊಸದಿಕ್ಕು ಮೂಡಿಸಿದರು. ಆದುದರಿಂದ ವಚನಕಾರರಿಗೆ ಧರ್ಮ ಮೊದಲನೆಯ ಹಾಗೂ ಪ್ರಮುಖ ಅಂಶವಾಗಿ ಸಾಹಿತ್ಯ ಮತ್ತು ಸಮಾಜ ಎರಡನೆ ಅಂಶಗಳಾದವು. ಆದುದರಿಂದ ವಚನಕಾರರ ಸಾಧನೆ, ಹೋರಾಟ, ಕೊಡುಗೆ, ಅವರು ಬದುಕಿದ್ದ ಧಾರ್ಮಿಕ ಪರಿಸರದ ಹಿನ್ನೆಲೆಯಲ್ಲೇ ಅರ್ಥೈಸುವುದರ ಮೂಲಕ ವಚನ ಚಳುವಳಿಯ ಪ್ರಾಮುಖ್ಯತೆಯನ್ನು ಅರಿಯಬೇಕಾಗುತ್ತದೆ.

ವಚನಕಾರರು ಹೋರಾಟ ಪ್ರಾರಂಭಿಸಿದ್ದು ಧಾರ್ಮಿಕ ಕ್ಷೇತ್ರದಿಂದ. ಅವರಿಗೆ ಪ್ರಮುಖವಾದದ್ದು ಧರ್ಮ. ಅವರು ಮೊದಲು ಶರಣರು, ನಂತರ ವಚನಕಾರರು. ಧರ್ಮ ಪ್ರಚಾರಕ್ಕಾಗಿ ಅವರು ಸಾಹಿತ್ಯ ಬಳಸಿಕೊಂಡರೇ ಹೊರತು ಸಾಹಿತ್ಯ ಪ್ರಚಾರಕ್ಕಾಗಿ ಧರ್ಮದ ಆಸರೆ ಪಡೆಯಲಿಲ್ಲ. ವಚನಕಾರರು ಧಾರ್ಮಿಕ ಪುರುಷರಾಗಿದ್ದರೂ ಸಾಮಾಜಿಕವಾಗಿಯೂ ಸ್ಪಂದಿಸಿದವರು. ಜಾಯ

ಮುಚ್ಚಿಕೊಂಡು ಬದುಕಿದ್ದ ಜನತೆಯಲ್ಲಿ ಜಾಗ್ರತೆಯನ್ನುಂಟು ಮಾಡುವುದರ ಮೂಲಕ ಹೊಸ ಚೇತನವನ್ನುಂಟು ಮಾಡಿದರು. ಸಾಮಾಜಿಕ ಸಮಸ್ಯೆಗಳಲ್ಲಿ ಕೈ ಹಾಕುತ್ತಾ ಜಾತಿ ಭೇದವನ್ನು ಹೊಡೆದೋಡಿಸಲು ಪ್ರಯತ್ನಿಸಿದರು. ಆದರೆ ಈ ಎಲ್ಲಾ ಸಾಮಾಜಿಕ ಸಮಸ್ಯೆಗಳನ್ನು ಇವರು ಧಾರ್ಮಿಕ ರಂಗದ ಮೂಲಕ ನೋಡಿದರು. ಆದ್ದರಿಂದಲೇ ''ಉಳ್ಳವರು ಶಿವಾಲಯವ ಮಾಡುವರು ನಾನೇನು ಮಾಡಲಿ ಬಡವನಯ್ಯಾ'' ಎಂಬ ಕೀಳರಿಮೆಯ ಭಾವ ತಾಳಿ ಉಳ್ಳವರ ಬಡವರ ಅಂತರವನ್ನು ಕಡಿಮೆ ಮಾಡುವತ್ತ ದೃಷ್ಟಿ ಹಾಯಿಸದೆ ಉಳ್ಳವರನ್ನು ಎದುರು ಹಾಕಿಕೊಳ್ಳದೆ ಇದ್ದ ಪರಿಸರದಲ್ಲಿಯೇ ಸುಧಾರಣೆಗಳನ್ನು ತರಲು ಪ್ರಯತ್ನಿಸಿದರು. ಅಂತಹ ಸುಧಾರಣೆ ಕಾಣದಿದ್ದಾಗ ತಮ್ಮ ದೇಹವನ್ನೇ ದೇಗುಲವನ್ನಾಗಿ ಮಾಡಿಕೊಂಡು ಸಂತೋಷಪಡುತ್ತಿದ್ದರು. ''ನಾಡಿನ ಜನ ಸಮುದಾಯವನ್ನು ಜಾತಿಗಳ ಮುಖಾಂತರ ಒಡೆದಾಳುವ ಯಜಮಾನ ಸಂಸ್ಕೃತಿಯನ್ನು ವಚನಕಾರರು ನಿರ್ಭೀಡತೆಯಿಂದ ಖಂಡಿಸಿದರು.''[೩] ಮನುಷ್ಯ-ಮನುಷ್ಯರಲ್ಲಿ ಕಗ್ಗಂಟಾಗಿ ನಿಂತ ಜಾತಿಗಳ ತಾರತಮ್ಯವನ್ನು ಜಾತಿ-ಜಾತಿಯಲ್ಲಿ ಭೇದ ಹುಟ್ಟಿಸಿ ಅದರಿಂದ ಲಾಭ ಪಡೆಯುತ್ತಿದ್ದ ಸ್ವಾರ್ಥಿಗಳನ್ನು ತೀವ್ರವಾಗಿ ವಿಡಂಬಿಸಿದರು.

ಕನ್ನಡ ಸಾಹಿತ್ಯ ಚರಿತ್ರೆಯ ಸಂದರ್ಭದಲ್ಲಿ ಹನ್ನೆರಡನೆಯ ಶತಮಾನ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ದೃಷ್ಟಿಯಿಂದ ಹೊಸ ವ್ಯಾಖ್ಯಾನ ಬರೆದ ಕಾಲವದು. ಅತ್ಯಂತ ಕೆಳಸ್ತರದಿಂದ ಬಂದ ಜನ ಸಮುದಾಯ ಅಂದಿನ ನೋವಿನ ವಿರುದ್ಧ ಬಂಡೆದ್ದ ಸಮಯ ಇಡೀ ಚರಿತ್ರೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಹೋರಾಡಿದವರಲ್ಲಿ ಈ ಶತಮಾನದ ಶರಣರು ತುಂಬಾ ಗಮನಾರ್ಹರು. ಶರಣರಲ್ಲಿ ಕ್ರಾಂತಿ ಎಂಬ ಮಾತನ್ನು ಅತ್ಯಂತ ವ್ಯಾಪಕ ಅರ್ಥದಲ್ಲಿ ನೋಡಬೇಕಾಗುತ್ತದೆ. ''ಒಂದು ಸಮಾಜದ ಆಮೂಲಾಗ್ರ ಬದಲಾವಣೆ ಆಗಬೇಕಾದರೆ ಆ ಸಮುದಾಯದ ಜನಸಮುದಾಯದ ಮನಸ್ಸನ್ನು ಸಿದ್ಧಗೊಳಿಸುವ ಪ್ರಾಥಮಿಕ ಕಾರ್ಯ ವಿಚಾರವಾದದಿಂದ ಪ್ರಾರಂಭವಾಗುತ್ತದೆ.''[೪] ಮಡಿ ಮೈಲಿಗೆಗಳನ್ನು ಕಿತ್ತೊಗೆದ ವಚನಕಾರರ ಸರಳ ಜೀವನ ಹೇಳುವುದನ್ನು ಬಿಟ್ಟು ಅವರನ್ನು ಗೊಡ್ಡು ವೈದಿಕರಂತೆ ಚಿತ್ರಿಸಿದ, ಧಾರ್ಮಿಕ ಸಾಮಾಜಿಕ ಆರ್ಥಿಕವಾಗಿ ಸತ್ತುಹೋಗಿದ್ದ ಎಲ್ಲಾ ಸವಲತ್ತುಗಳಿಂದಲೂ ವಂಚಿತರಾಗಿದ್ದ ಕೆಳಸ್ತರದ ಜನರ ಬದುಕು ಇದ್ದೂ ಸತ್ತಂತೆಯೇ ಇತ್ತು. ಬಸವಣ್ಣ ತನ್ನ ಸಾಮಾಜಿಕ ಚಳುವಳಿಯಲ್ಲಿ ಸಮಾನತೆ ತರುವುದರ ಮೂಲಕ ಸತ್ತಂತಿದ್ದ ಕೆಳಸ್ತರದ ಜನರಿಗೆ ಹೊಸ ಬದುಕು ಕೊಟ್ಟ. ದುಡಿಮೆಯ ಅವಕಾಶ ಕಲ್ಪಿಸಿಕೊಟ್ಟ. ''ಅಪ್ಪನು ನಮ್ಮ ಮಾದರ ಚನ್ನಯ್ಯ-ಬೊಪ್ಪನು ನಮ್ಮ ಡೋಹರ ಕಕ್ಕಯ್ಯ'' ಎಂದು ಹೇಳುವುದರ ಮೂಲಕ ಶೋಷಿತ ವರ್ಗಕ್ಕೆ ಪ್ರಥಮಸ್ಥಾನ ಕಲ್ಪಿಸಿಕೊಟ್ಟ ಕಾಲವದು. ಶತಶತಮಾನಗಳಿಂದ ಮೂಕರಾಗಿದ್ದ ದಲಿತರಿಗೆ ದನಿಕೊಟ್ಟ ಕಾಲವಾಗಿತ್ತು.

ವರ್ಗ ಹೋರಾಟ ಪ್ರಾರಂಭಗೊಳ್ಳಬೇಕಾದ ಸಂದರ್ಭದಲ್ಲಿ ಅವರಿಗೆ ಎದುರಾದ ತೊಡಕು ಅವರೇ ನಿರ್ಮಿಸಿಕೊಂಡ ಭವಿ-ಭಕ್ತ ಎಂಬ ಗುಂಪುಗಳು. ವಚನಕಾರರು ಎಲ್ಲಾ ಜಾತಿಗಳನ್ನು ಬಿಟ್ಟು ಭವಿ-ಭಕ್ತ ಎಂಬ ಹೊಸ ಗುಂಪುಗಳನ್ನು ಸೃಷ್ಟಿಸಿದರು. ಭವಿ ಎಂದ ತಕ್ಷಣ ವಚನಕಾರರಿಗೆ ಎಷ್ಟು ಸಿಟ್ಟು ಬರುತ್ತದೋ ಅದೇ ಉಳ್ಳವರು ಶ್ರೀಮಂತರ ಮೇಲೆ ಖಂಡಿತಾ ಬರುವುದಿಲ್ಲ. ಭಕ್ತಿ ಇಲ್ಲದ ಶ್ರೀ ಸಾಮಾನ್ಯರನ್ನು ತಿರಸ್ಕರಿಸುತ್ತಾರೆ. ನಿಜವಾಗಿ ಶ್ರೀಮಂತ ಬಡವರ ನಡುವೆ ನಡೆಯಬೇಕಾಗಿದ್ದ ಸಂಘರ್ಷ ಭಕ್ತ-ಭವಿಗಳ ಗುಂಪಿನಲ್ಲಿ ಕರಗಿ ಇಡೀ ಹೋರಾಟವನ್ನೇ ತಣ್ಣಗಾಗಿಸುತ್ತದೆ. ಏನೆಲ್ಲವನ್ನು ಸಾಧಿಸಲೇಬೇಕಾಗಿದ್ದ ಈ

ಮಹತ್ವಪೂರ್ಣ ಚಳುವಳಿ ಧಾರ್ಮಿಕ ಚೌಕಟ್ಟಿನಲ್ಲಿ ಸಿಕ್ಕು ತಣ್ಣಗೆ ಸರಳುತ್ತದೆ. ದೇಶದಲ್ಲಿ ಮೊಟ್ಟ ಮೊದಲ ಬಾರಿಗೆ ದುಡಿವ ವರ್ಗದಿಂದ ಸಂಘಟಿತವಾದ ಈ ಹೋರಾಟ ಧರ್ಮದ ಕೈಗೆ ಸಿಕ್ಕು ನೆಲ ಕಚ್ಚುತ್ತದೆ. ಆದ್ದರಿಂದಲೇ ವಚನಕಾರರಲ್ಲಿ ವರ್ಗ ಹೋರಾಟವನ್ನು ಗುರುತಿಸುವುದೇ ಅಸಮಂಜಸವಾಗುತ್ತದೆ. ಧಾರ್ಮಿಕ ಚೌಕಟ್ಟಿನಲ್ಲಿ ಸಾಮಾಜಿಕ ಹೋರಾಟ ಮಾಡಲು ಪ್ರಾರಂಭಿಸಿದರೆ ಹೇಗೆ ದುರಂತವಾಗುತ್ತದೆಂಬುದಕ್ಕೆ ವಚನಕಾರರ ಹೋರಾಟವೇ ಉದಾಹರಣೆಯಾಗಿದೆ.

ಶರಣರ ಕ್ರಾಂತಿ ಪ್ರಾರಂಭವಾದದ್ದೇ ಧಾರ್ಮಿಕ ರಂಗದಿಂದ. ಧರ್ಮದ ಏಕತೆಯನ್ನು ತಂದರೆ ಸಮಾಜದ ಇನ್ನಿತರ ಅಂಶಗಳು ಸುಧಾರಣೆಯಾಗಬಲ್ಲದೆಂಬುದನ್ನು ಅವರು ಮನಗಂಡಿದ್ದರು. ಅಂತೆಯೇ ತಮ್ಮ ಮುಂದೆ ಇದ್ದ ಅನೇಕ ಧರ್ಮ ಪಂಥಗಳನ್ನು ಕಂಡು ಅವುಗಳಿಂದ ವೀರಶೈವಧರ್ಮವನ್ನಾಗಿ ಮಾಡಿದರು.[೫] ವೀರಶೈವಧರ್ಮ ಧಾರ್ಮಿಕ ಸಾಮಾಜಿಕ ಘಟಕವಾಗಲು ಒಂದು ಶಕ್ತಿಯಾಗಿ ಬೆಳೆದು ನಿಲ್ಲಲು ಬಸವೇಶ್ವರ ಹಾಗೂ ಅವರ ಸಮಕಾಲೀನರೇ ಕಾರಣರಾಗಿದ್ದಾರೆ. ಚನ್ನಬಸವಣ್ಣನವರ ವಚನಗಳಲ್ಲಿ ಇದಕ್ಕೆ ಸಂಬಂಧಿಸಿದಂತೆ ಚಿತ್ರಣವಿದೆ. ಶೈವರ ವಿಚಿತ್ರವಾದ ತಾಂತ್ರಿಕ ಆಚರಣೆಗಳನ್ನು ಖಂಡಿಸಿದ ಶರಣರು ಸಾತ್ವಿಕ ಭಕ್ತಿಯನ್ನು ಪ್ರತಿಪಾದಿಸಿದರು. ಧಾರ್ಮಿಕ ರಂಗದಲ್ಲಿ ಅಶಾಂತಿ ಎದ್ದಾಗ ಅದನ್ನು ಶಾಂತಪಡಿಸುವುದರೊಂದಿಗೆ ಅತ್ಯಂತ ಸರಳವಾದ ಹೊಸದಾರಿಯನ್ನು ತೋರಿಸಿದ್ದು ಶರಣರ ಕ್ರಾಂತಿಯ ಸಫಲತೆ ಕುರುಹು. ಹಲವಾರು ಜಾತಿಮತಗಳಲ್ಲಿ ಹರಿದು ಹಂಚಿಹೋಗಿದ್ದ ಜನಸಮುದಾಯವನ್ನು ಒಂದೇ ಒಂದು ವೇದಿಕೆ ಮೇಲೆ ತಂದು ನಿಲ್ಲಿಸಿದ್ದು ಶರಣರ ಪ್ರಯತ್ನದ ನಿಜವಾದ ಸಾರ್ಥಕತೆಯನ್ನು ತೋರಿಸುತ್ತದೆ.

ಶರಣರ ಅಂದಿನ ಧಾರ್ಮಿಕ ಗೊಂದಲದ ಸ್ಥಿತಿಯನ್ನು ಕಂಡ ಬಸವೇಶ್ವರರು ಧರ್ಮವನ್ನು ದಯೆಯ ಸಾಕಾರ ರೂಪವಾಗಿ ಬೆಳೆಸಿದರು. ವಿಚಿತ್ರವಾದ ವಾಮಮಾರ್ಗಗಳಿಗೆ ಅಸಹ್ಯ ಆಚರಣೆಗಳಿಗೆ ಎಡೆಮಾಡಿಕೊಟ್ಟಿರುವ ಧರ್ಮ, ಧರ್ಮವೇ ಅಲ್ಲವೆಂದು ಪ್ರತಿಪಾದಿಸಿದರು. ಸಂಪ್ರದಾಯವನ್ನು ಉಳಿಸಿಕೊಂಡು ಬಂದ ವೈದಿಕರ ಗೊಡ್ಡು ಆಚರಣೆಗಳು ಒಂದು ಕಡೆ ಶೋಷಣೆಗೆ ಕಾರಣವಾಗಿದ್ದರೆ ವೀರಶೈವವೆಂದು ಹೇಳಿಕೊಳ್ಳುವ ಸಂಪ್ರದಾಯವಾದಿ ಜಾತಿ ಜಂಗಮರ ಉದ್ಧಟತನಗಳು ಸಾಮಾನ್ಯ ಜನರನ್ನು ಕತ್ತಲಲ್ಲಿಟ್ಟಿದ್ದರೆ ಸಕಲ ಜನರ ಕಲ್ಯಾಣಕ್ಕಾಗಿ ಅಭ್ಯುದಯಕ್ಕಾಗಿ ಹುಟ್ಟಿದ ಧರ್ಮ ಸ್ವಾರ್ಥಿಗಳ ಸಂಪ್ರದಾಯವಾದಿಗಳ ಕೈಗೆ ಸಿಕ್ಕು ಮನುಷ್ಯನ ನಿರಂತರ ಶೋಷಣೆಗೆ ಕಾರಣವಾಗುವ ಬಹುದೇವೋಪಾಸನೆಯನ್ನು ಕೈಬಿಟ್ಟು ಏಕದೇವೋಪಾಸನೆಯ ಇಷ್ಟಲಿಂಗದ ಕಡೆ ಕರೆದೊಯ್ಯುವ ಮುಖ್ಯ ಕಾರಣ ಅಂದಿನ ಧಾರ್ಮಿಕ ಕ್ಷೇತ್ರದಲ್ಲಿನ ಶೋಷಣೆಯನ್ನು ತಪ್ಪಿಸುವುದಾಗಿತ್ತೆಂಬುದು ಬಹಳ ಮುಖ್ಯ ಆಗುತ್ತದೆ.

ಭಾರತೀಯ ಧರ್ಮಗಳಲ್ಲಿ ಭಕ್ತಿಗೆ ಪ್ರಥಮ ಪ್ರಾಶಸ್ತ್ಯವಿದೆ. ಆ ಭಕ್ತಿಯ ಒಂದು ಸಾಕಾರವನ್ನು ಬಸವೇಶ್ವರರ ವ್ಯಕ್ತಿತ್ವದಲ್ಲಿ ಕಾಣಬಹುದಾಗಿದೆ. ಸಾಮಾನ್ಯವಾಗಿ ಎಲ್ಲಾ ಧರ್ಮಗಳಲ್ಲಿ ಭಕ್ತಿಯ ಉದ್ದೇಶ ಮೋಕ್ಷ ಸಾಧನೆಯಾಗಿದೆ. ಬಸವೇಶ್ವರರ ವಚನ ಚಳುವಳಿ ಮೂಲಕ ಅದು ಇನ್ನೂ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ಯಜ್ಞ-ಯಾಗಾದಿಗಳಿಗೆ ದೇವರು ಒಲಿಯಲಾರ. ಕಲ್ಲು - ಮರ-ಮಡಿಕೆಗಳನ್ನು ಪೂಜಿಸುವುದರಿಂದಲೂ ದೇವರು ಒಲಿಯಲಾರ ಎಂದು ಸ್ಪಷ್ಟಪಡಿಸಿದ ಬಸವೇಶ್ವರರು ಭಕ್ತಿಯಿಂದ

ಮಾತ್ರ ದೇವರ ಒಲುಮೆ ಸಾಧ್ಯವೆಂದು ಹೇಳುವಲ್ಲಿ ಮಹತ್ವದ ಧ್ವನಿ ಇದೆ. ಶತಶತಮಾನಗಳಿಂದ ಮೌಢ್ಯತೆ ಸಂಪ್ರದಾಯಗಳಲ್ಲಿ ಕೊಳೆತು ಹೋದ ಅಂದಿನ ಯಜಮಾನ ಸಂಸ್ಕೃತಿ ಕಪಿಮುಷ್ಠಿಯಲ್ಲಿ ಕರಗಿಹೋದ ಅಜ್ಞಾನ, ಅಹಂಕಾರಗಳಲ್ಲಿ ಮುಳುಗಿಹೋದ ಜನಸಮುದಾಯಕ್ಕೆ ಇಷ್ಟೊಂದು ಸರಳವಾಗಿ ಭಕ್ತಿಯ ಹೆಸರಿನಲ್ಲಿ ಶರಣರು ಅವರನ್ನು ಸರಿದಾರಿಗೆ ಕರೆ ತಂದದ್ದು ನಿಜಕ್ಕೂ ಮುಖ್ಯವಾಗುತ್ತದೆ.

ಶರಣರ ಜಾತಿ ನಿವಾರಣೆಯೂ ಕೂಡ ಧಾರ್ಮಿಕ ಚೌಕಟ್ಟಿನೊಳಗೆ ನಡೆದದ್ದು. ಬ್ರಾಹ್ಮಣನಾದ ಮಧುವರಸನ ಮಗಳು ಹಾಗೂ ಕೆಳಜಾತಿಯವನಾದ ಹರಳಯ್ಯನ ಮಗ ಇವರಿಬ್ಬರ ವಿವಾಹವನ್ನು ಶರಣರು ಮಾಡುತ್ತಾರೆ. ಆದರೆ ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಹರಳಯ್ಯನ ಮಗನೂ ಮಧುವರಸನ ಮಗಳೂ ಇಬ್ಬರೂ ಲಿಂಗಧರಿಸಿದ ಮೇಲೆಯೇ ಅವರಿಗೆ ಮದುವೆ. ನೂರೆಂಟು ಜಾತಿಗಳನ್ನು ಒಂದುಗೂಡಿಸಿ ಭಕ್ತರ ಸೈನ್ಯವನ್ನು ಕಟ್ಟಿದರು. ಆದರೆ ಅದು ಉಳ್ಳವರ ವಿರುದ್ಧ ಕಟ್ಟಿದ ಸೈನ್ಯವಾಗಿ ಇರಲಿಲ್ಲ ಎಂಬುದು ಗಮನಿಸಬೇಕಾದ ಸಂಗತಿ. ಮೊದಲು ಜಾತಿ-ಜಾತಿಗಳಲ್ಲಿ ನಡೆಯುತ್ತಿದ್ದ ಹೋರಾಟಗಳು ಇವರ ಕಾಲಕ್ಕೆ ಗುಂಪು-ಗುಂಪುಗಳಾಗಿ ಹೊಡೆದಾಡಲು ನಿಂತವು. ವಚನಕಾರರು ಅರಸನ ಗುಲಾಮರಾಗದೆ ಅವನ ಸಾಮಿಪ್ಯವನ್ನು ವೈಭವವನ್ನು ತಿರಸ್ಕರಿಸಿದರು. ಅದು ಅಂದಿನ ಅರಸೊತ್ತಿಗೆಯ ವ್ಯವಸ್ಥೆಯಲ್ಲಿ ಮಾಡಿದ ಮೊಟ್ಟ ಮೊದಲ ಪ್ರತಿಭಟನೆಯ ಕ್ರಾಂತಿ. ಆದರೆ ಭಾವವೇಶರಾದ ವಚನಕಾರರು ಈ ಪ್ರತಿಭಟನೆ ಹುಟ್ಟುತ್ತಲೇ ತಣ್ಣಗಾದರು. ''ಅರಸುಮುನಿದೆಡೆ ನಾಡೊಳಗಿರಬಾರದಯ್ಯ'' ಎಂದು ಹಿಂದೇಟು ಹಾಕುವ ಹಂತಕ್ಕೆ ಅವರ ಧಾರ್ಮಿಕ ಚೌಕಟ್ಟು ಬಲಿಷ್ಠವಾಗಿತ್ತು. ಭಕ್ತಿಯ ಮಂಪರಿನಲ್ಲಿ ರಾಜಕೀಯ ಕ್ಷೇತ್ರವನ್ನೇ ನಿರ್ಲಕ್ಷಿಸಿದ್ದರಿಂದ ಚಳುವಳಿ ಮುಂದೆ ಬೇರೆ ತಿರುವು ಪಡೆದು ಹಿಂಸೆಯಲ್ಲಿ ಕೊನೆಯಾಯಿತು. ಧರ್ಮಕ್ಕೆ ಧರ್ಮದ ಆಚರಣೆಗೆ ವಚನಕಾರರು ಎಷ್ಟೇ ಬದ್ಧರಾಗಿದ್ದರೂ ಸಾಮಾಜಿಕಕ್ಕೆ ತೀವ್ರವಾಗಿ ಸ್ಪಂದಿಸುವುದರಿಂದ ಅವರು ನಮಗಿಂದಿಗೂ ಪ್ರಮುಖವಾಗಿ ಕಾಣುತ್ತಾರೆ. ಬಾಯಿ ತೆರೆಯುವುದೇ ಅಪರಾಧವಾಗಿದ್ದ ಅಂದಿನ ವ್ಯವಸ್ಥೆಯಲ್ಲಿ ದಲಿತರು, ದುಡಿಯುವ ವರ್ಗದವರು ಮೊಟ್ಟ ಮೊದಲು ಬಾಯಿ ತೆರೆದು ದನಿಯೆತ್ತಿ ಮಾತನಾಡಿದ್ದು-ಚರ್ಚಿಸಿದ್ದು-ಪ್ರಶ್ನಿಸಿದ್ದು ನಮಗಿಂದು ಬಹಳ ಮುಖ್ಯವೆನಿಸುತ್ತದೆ.

ಹೀಗಾಗಿ ವಚನ ಚಳುವಳಿ ಮುಖ್ಯವಾಗಿ ಬಸವಣ್ಣ- ಅಲ್ಲಮನಾದಿಯಾಗಿ ಮೊದಲುಗೊಂಡಂತೆ ಕೆಳವರ್ಗದ ವಚನಕಾರರು ಈ ಧಾರ್ಮಿಕ ಚಳುವಳಿಯ ಪರಿಸರಕ್ಕೆ ಸೇರಿಕೊಳ್ಳುತ್ತಾರೆ.

೨ : ೧.೨ ವೈದಿಕ ಭಕ್ತಿಪಂಥದ ಚಟುವಟಿಕೆಗಳು

ಕರ್ನಾಟಕ ಪ್ರಾಂತ್ಯದಲ್ಲಿ ಕ್ರಿ.ಶ.ಸುಮಾರು ಹನ್ನೆರಡನೆಯ ಶತಮಾನದಿಂದ ಹಿಡಿದು ಸುಮಾರು ಹದಿನೇಳನೇ ಶತಮಾನದವರೆಗೂ ನಡೆದುಕೊಂಡು ಬಂದ ಭಕ್ತಿ ಚಳುವಳಿಯ ಇತಿಹಾಸವನ್ನು ನೋಡಿದಾಗ ಸುಮಾರು ಐದುನೂರು ವರ್ಷಗಳ ಕಾಲ ನಿರಂತರವಾಗಿ ಕರ್ನಾಟಕದಲ್ಲಿ ಭಿನ್ನ ಭಿನ್ನ ಧರ್ಮಗಳು ತಂತಮ್ಮ ಧಾರ್ಮಿಕ ಆಂದೋಲನವನ್ನು ಮುಂದುವರಿಸಿಕೊಂಡು ಬಂದಿದೆ ಎಂಬುದಾಗಿ ತಿಳಿದುಬರುತ್ತದೆ. ಅಂದರೆ ಧರ್ಮಗಳು ಕಾಲಕಾಲಕ್ಕೂ ಜನಜೀವನದ ಮೇಲೆ

ಅಖಂಡವಾಗಿ ತಮ್ಮ ಪ್ರಭಾವ ಬೀರುತ್ತಲೇ ಬಂದಿವೆ. ಇದಕ್ಕೆ ಮೂಲ ಕಾರಣ ಏನೆಂಬುದನ್ನು ಹುಡುಕುತ್ತಾ ಹೊರಟಾಗ ನಮ್ಮ ದೃಷ್ಟಿಗೆ ಗೋಚರವಾಗುವ ಒಂದಂಶವೆಂದರೆ ಸಮಸ್ತ ಜನಜೀವನದ ಮೇಲೆ ವೈದಿಕ ಭಕ್ತಿಪಂಥ ತನ್ನ ಧಾರ್ಮಿಕ ಮತ್ತು ಸಾಂಸ್ಕೃತಿಕ ಹಿಡಿತವನ್ನು ಎಷ್ಟೆಷ್ಟು ಮಟ್ಟಿಗೆ ಬಿಗಿ ಮಾಡಿದರೆ ಅಷ್ಟಷ್ಟು ಬಗೆಯಲ್ಲಿ ಜನಜೀವನದ ವೈಚಾರಿಕತೆ ಹಾಗೂ ಸ್ವತಂತ್ರ ಆಲೋಚನಾ ಪ್ರವೃತ್ತಿ ವೈದಿಕ ಧರ್ಮದ ಬಿಗಿತವನ್ನು ಪ್ರಶ್ನೆ ಮಾಡುತ್ತಲೇ ಬಂದಿದೆ ಎಂಬುದು ವ್ಯಕ್ತವಾಗುತ್ತದೆ. ಹನ್ನೆರಡನೆಯ ಶತಮಾನದಲ್ಲಿ ನಡೆದ ಈ ಒಂದು ಧಾರ್ಮಿಕ ಚಳುವಳಿಯ ಮುಖ್ಯ ಪಾತ್ರ ಭಕ್ತಿ. ಆದರೆ ಮಧ್ಯಯುಗದಲ್ಲಿ ನಡೆದ ಇದೇ ರೀತಿಯ ಇನ್ನಿತರೇ ಭಕ್ತಿ ಚಳುವಳಿಗಿಂತ ಇದು ತನ್ನ ಸಾಮಾಜಿಕ ಸ್ವರೂಪದಿಂದಾಗಿ ಭಿನ್ನವಾಗಿತ್ತು, ಈ ಒಂದು ಧಾರ್ಮಿಕ ಚಳುವಳಿಯಲ್ಲಿ ಭಾಗವಹಿಸಿದ್ದವರು ವೀರಶೈವರೆಂದು ತಾವೇ ಕರೆದುಕೊಂಡರು. ಭಕ್ತಿ ಚಳುವಳಿಗಳೆಲ್ಲವೂ ಸಮಾಜದ ವಿವಿಧ ವರ್ಗದ ಸ್ತ್ರೀ-ಪುರುಷರನ್ನು ಆಕರ್ಷಿಸಿದವು. ಆದರೆ ಈ ಚಳುವಳಿಯು ಸಾಮಾಜಿಕ ಸ್ಥಾನಮಾನ ಮತ್ತು ಆರ್ಥಿಕ ನೆಲೆಗಳನ್ನು ಪರಿಗಣಿಸದೆ ಎಲ್ಲರನ್ನು ಸಮುದಾಯದ ಒಳಗೆ ಬರಮಾಡಿಕೊಂಡರು. ಹೀಗೆ ವಿವಿಧ ಮುಖಗಳಲ್ಲಿ ಬಿಚ್ಚಿಕೊಂಡ ಈ ಚಳುವಳಿಯು ನವೀನ ಜೀವನ ಪದ್ಧತಿಯನ್ನು ತನ್ನ ಗುರಿಯನ್ನಾಗಿ ಮಾಡಿಕೊಂಡಿತ್ತು. ಸಂಪ್ರದಾಯವಾದಿ ಮಡಿಮೈಲಿಗೆ ನಿಯಮಗಳನ್ನು ಈ ಭಕ್ತಿಪಂಥ ವಿರೋಧಿಸಿತು. ''ಪ್ರಧಾನ ಸಂಸ್ಕೃತಿಗೆ ಪ್ರತಿಯಾಗಿ ಈ ವೈದಿಕ ಭಕ್ತಿ ಪಂಥದವರು ಹೊಸ ಆದರ್ಶಗಳನ್ನು ಹುಟ್ಟು ಹಾಕುವುದರೊಂದಿಗೆ ತಮ್ಮ ಚಟುವಟಿಕೆಗಳಿಗೆ ಚಾಲನೆ ನೀಡಿದರು.''[೬]

''ಭಕ್ತಿ ಪರಂಪರೆ ಹಾಗೂ ಅನುಭಾವದ ಸ್ವರೂಪಗಳು ಮಧ್ಯಕಾಲೀನ ಭಾರತದ ಶಕ್ತಿಶಾಲಿಯಾದ ಧಾರ್ಮಿಕ ಸಾಮಾಜಿಕ ಬೆಳವಣಿಗೆಯಾಗುವುದರಿಂದ ಅವುಗಳು ಮನುಷ್ಯನ ಅಸ್ತಿತ್ವವನ್ನು ಕುರಿತ ಹಾಗೆ ತಳೆದ ನಿಲುವುಗಳ ಹಿನ್ನೆಲೆಯಲ್ಲಿ ಚರ್ಚೆಗೆ ಒಳಗಾಗುತ್ತವೆ.''[೭] ವಾಸ್ತವವಾಗಿ ಇಲ್ಲಿ ಮನುಷ್ಯನ ಅಸ್ತಿತ್ವವನ್ನು ಕುರಿತ ಚರ್ಚೆ ಎಂದರೆ ಧಾರ್ಮಿಕ ಮನುಷ್ಯನು ಬದುಕಿನ ನೆಲೆಗಳನ್ನು ಕುರಿತು ಮಾಡಿದಂಥ ಯೋಚನೆ ಹಾಗೂ ಹುಡುಕಾಟದ ಸ್ವರೂಪಗಳು ಮತ್ತು ಅನುಭಾವಗಳು ಹಾಗೂ ಭಕ್ತಿ ಪರಂಪರೆಯ ಧಾರ್ಮಿಕ ವ್ಯಕ್ತಿಗಳಲ್ಲಿ ರೂಪುಗೊಂಡಿದೆ. ಧಾರ್ಮಿಕ ಪ್ರಭುತ್ವ ಹಾಗೂ ಮತೀಯ ಆಚರಣೆಗಳ ಸಂಪ್ರದಾಯ ನಿಷ್ಠೆಯ ನೆಲೆಗಳೂ ಕೂಡ ಇದೇ ರೀತಿಯ ಸ್ಥಗಿತಗೊಂಡ ವಾತಾವರಣವನ್ನು ನಿರ್ಮಾಣ ಮಾಡಲು ಕಾರಣವಾಗುತ್ತದೆ. ಏಕೆಂದರೆ ಇವೆರಡರ ಸ್ವರೂಪಗಳೂ ಮನುಷ್ಯನ ಅಸ್ತಿತ್ವವನ್ನು ತಮ್ಮ ಲಾಭಕ್ಕಾಗಿ ಬಳಸಿಕೊಳ್ಳುವಂಥವುಗಳು. ಮನುಷ್ಯನ ಬದುಕಿನ ಮೇಲೆ ಹೇರಲಾಗುವಂಥಹ ಒತ್ತಾಯ ಮಾಡಲಾಗುವಂತಹ ಧಾರ್ಮಿಕ ಸ್ವರೂಪಗಳು ಸೂಕ್ಷ್ಮವಾಗಿ ಅಮಾನವೀಯ ಹಾಗೂ ಕಠೋರವಾಗಿರುವುದು ನಮಗೆಲ್ಲ ಜಗತ್ತಿನ ಧಾರ್ಮಿಕ ಇತಿಹಾಸದ ಅನೇಕ ಬೆಳವಣಿಗೆಗಳಿಂದ ತಿಳಿದಿರುವ ಸಂಗತಿಯೇ ಆಗಿದೆ. ಭಾರತದ ಪ್ರಾಚೀನ ಹಾಗೂ ಮಧ್ಯಕಾಲೀನ ಚರಿತ್ರೆಯಲ್ಲಂತೂ ಪುರೋಹಿತಶಾಹಿಯ ಪ್ರಭುತ್ವವು ಉಂಟುಮಾಡಿದ ಸಾಮಾಜಿಕ ಶ್ರೇಣೀಕರಣ ಹಾಗೂ ಈ ಕಾರಣದಿಂದ ಉಂಟಾದಂತಹ ಅನಿವಾರ್ಯ ಸಾಮಾಜಿಕ ಹಾಗೂ ವೈಯುಕ್ತಿಕ ಬೆಳವಣಿಗೆಯ ಸ್ಥಗಿತತೆಗಳು ಕಣ್ಣೆದುರಿಗೆ ಇರುವ ಸ್ಪಷ್ಟ ನಿದರ್ಶನಗಳಾಗಿವೆ. ಮನುಷ್ಯ ಮನುಷ್ಯನನ್ನು ಬೇರ್ಪಡಿಸುವ ನಿರಾಕರಿಸುವ ತೊಡೆದು ಹಾಕುವ ಕ್ರಿಯೆಯಲ್ಲಿ ಇವರ ಧಾರ್ಮಿಕ ಚಟುವಟಿಕೆಗಳು ರೂಪುಗೊಳ್ಳುತ್ತವೆ.

''ಭಕ್ತಿ ಪರಂಪರೆ ಹಾಗೂ ಅನುಭಾವಿ ಸಂತರ ಪರಂಪರೆ ಎಂದು ನಾವು ಏನು ಗುರುತಿಸುತ್ತೇವೆ.''[೮] ಆ ಪರಂಪರೆಯ ಮುಖ್ಯ ಲಕ್ಷಣಗಳ ಮೇಲೆ ವಿವರಿಸಿದ ಎಲ್ಲಾ ವಿಧವಾದ ಸ್ವರೂಪವನ್ನು ಹೊಂದಿರುವುದನ್ನು ಇವುಗಳ ಚರಿತ್ರೆಯನ್ನು ಗಮನಿಸಿದರೆ ಸ್ಪಷ್ಟವಾಗುತ್ತದೆ. ಭಕ್ತಿಪರಂಪರೆ ಹಾಗೂ ಅನುಭಾವಿ ಸಂತರಷ್ಟು ಜನರಿಗೆ ಪ್ರಿಯವಾದಂಥ ಪರಂಪರೆಯನ್ನು ಹುಡುಕಲು ಸಾಧ್ಯವೇ ಇಲ್ಲವೆನ್ನುವಷ್ಟರ ಮಟ್ಟಿಗೆ ಇವು ಜನಪ್ರಿಯತೆಯನ್ನು ಪಡೆದವುಗಳಾಗಿವೆ. ಅತ್ಯಂತ ಸಾಮಾನ್ಯ ಮನುಷ್ಯರನ್ನು ಧಾರ್ಮಿಕ ಪ್ರಜ್ಞೆಯ ಕಕ್ಷೆಯೊಳಗೆ ಒಳಪಡಿಸಿಕೊಳ್ಳಬೇಕೆನ್ನುವ ಈ ಪರಂಪರೆಗಳ ಆಶಯವು ಕಾಲಕಾಲಕ್ಕೆ ಮನುಷ್ಯನ ಅಸ್ತಿತ್ವಕ್ಕೆ ಅವನ ಬೆಳವಣಿಗೆಗೆ ವಿರೋಧ ಮಾಡುತ್ತಿದ್ದ ವಾತಾವರಣವಾಗಿದೆ. ಅದು ಹುಟ್ಟಿಸಿದ ತಾತ್ವಿಕ ನೆಲೆಗಳಿಗೆ ಕೊಟ್ಟ ಉತ್ತರವೇ ಆಗಿದೆ ಎನ್ನಬಹುದು.

''ಭಾರತದ ರಾಜ್ಯಶಾಹಿ ವ್ಯವಸ್ಥೆಯ ಸಂದರ್ಭದಲ್ಲಿ ಕಾಲಕಾಲಕ್ಕೆ ಭಕ್ತಿ ಪರಂಪರೆಯ ಉಗಮವು ಅತ್ಯಂತ ವ್ಯಾಪ್ತಿಯಲ್ಲಿ ಹರಡಿಕೊಂಡಿರುವುದನ್ನು ನಾವು ಗಮನಿಸಬಹುದಾಗಿದೆ.''[೯] ತಮಿಳುನಾಡಿನ ಶೈವ, ವೈಷ್ಣವ ಸಂತರಿಂದ ಪ್ರಾರಂಭವಾದ ಈ ಚಳುವಳಿಯ ಲಕ್ಷಣಗಳು ಕರ್ನಾಟಕ, ಮಹಾರಾಷ್ಟ್ರ ಮತ್ತು ಉತ್ತರ ಭಾರತದ ಕಡೆಗಳಲ್ಲಿ ಬೇರೆ ಬೇರೆ ಕಾಲದಲ್ಲಿ ಹುಟ್ಟಿ ಬೆಳೆದವು. ವೈದಿಕ ಪರಂಪರೆಯ ಸಂಪ್ರದಾಯಗೊಂಡ ನಿಲುವುಗಳನ್ನು ವಿರೋಧಿಸುವ ಮುಖ್ಯ ಕಾರ್ಯದ ಜೊತೆಗೆ ಈ ಪರಂಪರೆಗಳು ಮನುಷ್ಯನ ಅಸ್ತಿತ್ವದ ಸ್ವರೂಪಗಳನ್ನು ಕುರಿತ ಹಾಗೆ ಹೊಸ ಆಲೋಚನೆಗಳನ್ನು ರೂಪಿಸಿದವು. ಪುರೋಹಿತಶಾಹಿಯ ಭದ್ರವಾದ ನೆಲೆಯಾಗಿದ್ದ ವರ್ಣವ್ಯವಸ್ಥೆಗೆ ಪೂರ್ಣ ವಿರೋಧವಾದ ಈ ಪಂಥಗಳು ಎಲ್ಲ ಮನುಷ್ಯರಿಗೂ ಸಾಮಾಜಿಕ, ಧಾರ್ಮಿಕ ಸಮಾನತೆಯ ಅಂಶವನ್ನು ಘೋಷಿಸಿದವು. ಕರ್ನಾಟಕದ ಚರಿತ್ರೆಯಲ್ಲಿ ಮನುಷ್ಯನ ಅಸ್ತಿತ್ವದ ನೆಲೆಗಳನ್ನು ಕುರಿತ ಹೊಸ ಯೋಚನೆಯೊಂದು ಈ ಚಳುವಳಿಯಿಂದ ಮೂಡಿತೆಂದು ಹೇಳಬಹುದು. ಕರ್ನಾಟಕದ ಈ ಕಾಲದ ಚಳುವಳಿಯಿಂದ ಭಕ್ತಿ ಪರಂಪರೆಯ ಅಲೆಯೊಂದು ಧಾರ್ಮಿಕ ಮನುಷ್ಯನ ಹೊಸ ಪರಂಪರೆಯನ್ನು ಪ್ರಾರಂಭಮಾಡಿತೆಂದು ಹೇಳಬಹುದು.

''ರಾಜ ಮತ್ತು ಪುರೋಹಿತಶಾಹಿಯ ಭೌತಿಕ ಸವಲತ್ತುಗಳಿಗಾಗಿ ದುಡಿಯಬೇಕಾದ ಮತ್ತು ಆ ದುಡಿತದಿಂದಲೇ ಬದುಕಬೇಕಾದ ಅಸ್ಥಿರವಾದಂಥ ಲೌಕಿಕ ಜೀವನವನ್ನು ಮೀರುವ ನೆಲೆಯನ್ನು ಅನುಭಾವ ಮತ್ತು ಭಕ್ತಿ ಪರಂಪರೆಗಳು ರೂಢಿಸಿದವು.''[೧೦] ವಚನ ಚಳುವಳಿಯ ಅನೇಕ ಅನುಭಾವಗಳು ತಮ್ಮ ಕಾಯಕವನ್ನು ಇಷ್ಟದೈವಕ್ಕೆಂದು ಮೀಸಲಾಗಿಟ್ಟಿರುವುದನ್ನು ಗಮನಿಸಬಹುದು. ಇವುಗಳ ಮುಖ್ಯ ಧೋರಣೆಯು ಧಾರ್ಮಿಕ ಮನುಷ್ಯನ ವ್ಯಕ್ತಿತ್ವದ ಬೆಳವಣಿಗೆ ಆಶಯದಿಂದಲೇ ಬೆಳೆಯುತ್ತದೆ.

ಭಕ್ತಿ ಪಂಥದ ಸ್ವರೂಪಗಳು ಭಕ್ತನ ಅಸ್ತಿತ್ವದ ಆಶಯಕ್ಕೆ ಸರಿಯಾದ ಮಾರ್ಗಗಳಾಗಿವೆ. ಇಲ್ಲಿಯ ಅಸ್ತಿತ್ವದ ಸ್ವರೂಪದ ವಿವರಗಳು ಅನೇಕ ರೀತಿಯಲ್ಲಿ ಪ್ರಕಟಗೊಳ್ಳಬಹುದು. ತನಗೆ ಸರಿಹೊಂದದ ಹಾಗೂ ಅಮಾನವೀಯ ವಾದ ರಾಜ್ಯವ್ಯವಸ್ಥೆಯು ಇವನ ಹೊಸ ಅಸ್ತಿತ್ವದಲ್ಲಿ ಬೇರೊಂದು ರೀತಿಯಲ್ಲಿ ರೂಪುಗೊಳ್ಳಬಹುದು. ಭಕ್ತಿಪಂಥದ ಸ್ವರೂಪಗಳು ಹಾಗೂ ಒಂದಾಗುವಿಕೆಯನ್ನು ಹೇಳುವ ಅನುಭಾವದ ಸ್ವರೂಪಗಳು ಮನುಷ್ಯನ ಅಸ್ತಿತ್ವವನ್ನು ಕುರಿತ ಹಾಗೆ ಮೌಲ್ಯಾತ್ಮಕವಾಗಿ

ಭಿನ್ನ ಆಲೋಚನೆಗಳನ್ನು ವ್ಯಕ್ತಪಡಿಸುತ್ತವೆ. ಭಕ್ತಿ ಪರಂಪರೆಯ ಸ್ವರೂಪಗಳು ತಾವು ಬಯಸುವ ಇನ್ನೊಂದು ವಾತಾವರಣವು ಲೋಕದ ಗುಣಗಳಿಗೆ ಸಂವಾದಿಯಾಗುವಂತೆ ಭಾವಿಸುತ್ತವೆ. ಧಾರ್ಮಿಕ ಅರಿವಿನ ಮುಖ್ಯವಾದ ಸ್ವರೂಪವೊಂದು ಮುಖ್ಯವಾಗಿ ಭವ್ಯತೆ -ಕಠೋರತೆ ಹಾಗೂ ಜೀವನವನ್ನೇ ಕುಂಠಿತಗೊಳಿಸುವ ಕರಾಳ ಸ್ವರೂಪದ ವಿರುದ್ಧವೇ ರೂಪುಗೊಳ್ಳುತ್ತವೆ. ಈ ಭಕ್ತಿ ಪರಂಪರೆ ಧಾರ್ಮಿಕ ಅರಿವಿನಲ್ಲಿ ಭವ್ಯತೆಯು ಸಂಪೂರ್ಣ ನಿರಾಕರಿಸಲಾಗಿದೆ. ಭವ್ಯತೆಯ ಸ್ವರೂಪ ಈ ಮನುಷ್ಯನಿಗೆ ನಿಬ್ಬೆರಗು ಹುಟ್ಟಿಸುವಂಥದ್ದು, ನಡುಕ ತರುವಂಥದ್ದು, ಜಗತ್ತಿನ ಭಕ್ತಿಪಂಥಗಳ ಮುಖ್ಯವಾದ ಗುಣವೆಂದರೆ ಈ ಭವ್ಯತೆ ಪರಕೀಯತೆಯ ನಿವಾರಣೆ ಆಗಿದೆ. ಧಾರ್ಮಿಕ ಮನುಷ್ಯನನ್ನು ತನ್ನ ಪಾಪಗಳಿಂದ ಆಧ್ಯಾತ್ಮಿಕ ಸಾವಿನಿಂದ ಪಾರುಮಾಡುವ ವಾತಾವರಣವೊಂದು ಇಲ್ಲಿ ಕಟ್ಟಲ್ಪಡುತ್ತದೆ. ಅನೇಕ ಸಾರಿ ಮನುಷ್ಯ ತನ್ನನ್ನು ಆಳು ಎಂದು ಕರೆದುಕೊಳ್ಳುವು ದುಂಟು. ತಾನು ಒಪ್ಪಿದ ರಕ್ಷಕನನ್ನು ರಾಜನೆಂದೋ, ದೊರೆಯೆಂದೋ ಸಂಭೋದನೆ ಮಾಡುವುದರ ಮೂಲಕ ತನ್ನನ್ನು ಸಂಪೂರ್ಣ ರಕ್ಷಿಸುವ ಹಾಗೂ ಅಧೀನವಾಗಿ ಇರಿಸಿಕೊಳ್ಳುವ ನೆಲೆಯನ್ನು ಗ್ರಹಿಸುತ್ತಾನೆ.

ಮಧ್ಯಕಾಲೀನ ಧಾರ್ಮಿಕ ಪಂಥಗಳಲ್ಲಿ ಈ ಸಂಕೇತ ಬಹುವ್ಯಾಪಕವಾಗಿ ಬಳಕೆಯಾಗುತ್ತದೆ. ಈ ಪ್ರತಿಮೆಯು ವಿಶೇಷವಾಗಿ ಬಳಕೆಯಾಗುವುದಕ್ಕೆ ಒಂದು ವಿಶಿಷ್ಟವಾದ ಸಾಂಸ್ಕೃತಿಕ ಕಾರಣವಿದೆ. ಎಲ್ಲಾ ಭಕ್ತಿ ಪಂಥೀಯ ಚಳುವಳಿ ಹಾಗೂ ಆಲೋಚನೆಗಳು ರಾಜನ ಅಸ್ತಿತ್ವವನ್ನು ನಿರಾಕರಿಸುವ ಮತ್ತು ವಿರೋಧಿಸುವ ನೆಲೆಯಿಂದಲೇ ಹೊರಟವುಗಳು. ಈ ಪಂಥದ ವಲಯದಲ್ಲಿ ಬರುವ ಮನುಷ್ಯನ ಇನ್ನೊಂದು ಪ್ರಧಾನ ನಂಬಿಕೆ ಎಂದರೆ ಪುರೋಹಿತಶಾಹಿ ಆಲೋಚನೆ. ತರ್ಕ ಸರಣೀಯ ವಿರೋಧ ಅವನನ್ನು ನಿರಾಕರಿಸಿ ತನಗೂ, ದೇವರಿಗೂ ನೇರ ಸಂಬಂಧವನ್ನು ಕಲ್ಪಿಸುವ ಪ್ರಯತ್ನ ಇವನ ಕ್ರಿಯೆಗಳಲ್ಲಿ ಒಂದಾಗಿದೆ. ಇವನ ಇನ್ನೊಂದು ಮುಖ್ಯ ನಂಬಿಕೆ ದೇವರು. ಅನಕ್ಷರಸ್ಥನಲ್ಲಿ, ಬಡವನಲ್ಲಿ, ದಲಿತನಲ್ಲಿ ತಾನೇ ತಾನಾಗಿ ವ್ಯಕ್ತನಾಗುತ್ತಾನೆನ್ನುವುದು ಇವನ ಈ ನಂಬಿಕೆಗೆ ಧಾರ್ಮಿಕ ನೆಲೆಯಲ್ಲಿ ಅರ್ಥವನ್ನು ಹುಡುಕ ಹೋಗುವುದು ತುಂಬಾ ಕಷ್ಟಸಾಧ್ಯ ಎನಿಸುತ್ತದೆ.

ಇಲ್ಲಿ ಮುಖ್ಯವಾಗಿ ಮಾನವನ ಅಸ್ತಿತ್ವದ ನೆಲೆಗಳನ್ನು ಗುರುತಿಸಿಕೊಳ್ಳುವ ಅನುಭಾವವು ಮನಸ್ಸಿನ ನೇರ ಆತಂಕಗಳ ವಲಯವೊಂದನ್ನು ಪರಿಚಯ ಮಾಡಿಕೊಡುತ್ತವೆ. ಅದು ಸ್ವಲ್ಪಮಟ್ಟಿಗೆ ಅಮೂರ್ತವಾದವು ಗಳಾಗುತ್ತವೆ. ಬಸವಣ್ಣನ ಅಭಿವ್ಯಕ್ತಿ ಸ್ವರೂಪದಲ್ಲಿಯೂ ಅಲ್ಲಮನ ಧಾರ್ಮಿಕ ಮನುಷ್ಯನನ್ನು ಕುರಿತ ಆಲೋಚನಾ ರೀತಿಯಲ್ಲಿಯೂ ಮೂಲಭೂತವಾದ ವ್ಯತ್ಯಾಸಗಳಿವೆ. ಹೀಗಿದ್ದರೂ ಅವರಿಬ್ಬರೂ ಈ ಸಂಸಾರವನ್ನು ವಾಸ್ತವವೆಂದು ಒಪ್ಪಿದರು. ಆದ್ದರಿಂದಲೇ ವಚನಕಾರರಲ್ಲಿ ಧಾರ್ಮಿಕ ಮನುಷ್ಯನೊಬ್ಬ ತನ್ನ ಲೌಕಿಕ ಅಸ್ಥಿತ್ವವನ್ನು ವಿಮರ್ಶಿಸಿ ತನ್ನ ಆಧ್ಯಾತ್ಮಿಕ ಅಸ್ತಿತ್ವಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡುವ ಅಂಶಗಳು ನಮಗೆ ಗೋಚರವಾಗುತ್ತವೆ. ಸಾಂಖ್ಯ ಯೋಗಗಳ ತಾತ್ವಿಕ ಹಿನ್ನೆಲೆಯಿಂದ ಪ್ರೇರಿತವಾಗಿರಬಹುದಾದ ಅಲ್ಲಮನಲ್ಲಿ ಮನುಷ್ಯನ ಅಸ್ತಿತ್ವವನ್ನು ಕುರಿತ ಆ ಛಾಯೆಯೊಂದು ಎದ್ದು ಕಾಣುತ್ತದೆ. ಮನುಷ್ಯನ ಅಸ್ತಿತ್ವವನ್ನು ಕುರಿತ ಜೈನ-ಬೌದ್ಧ ಧರ್ಮಗಳ ಮುಖ್ಯ ತಾತ್ವಿಕ ನೆಲೆಯಿಂದ ಇವುಗಳು ಬೇರೆಯಾದರೂ ಮನುಷ್ಯನ ಧಾರ್ಮಿಕ ಉನ್ನತಿಯ ಪ್ರಯತ್ನಗಳಿಗೆ ಕೊಟ್ಟಂತಹ ಒತ್ತುಗಳು ಆಗಿರುತ್ತವೆ. ಇಂಥ ಅನುಭಾವ ಸ್ವರೂಪವನ್ನು ಹೇಳುವ ಎಲ್ಲಾ ತತ್ವ ಹಾಗೂ ಧರ್ಮಗಳು ಒಂದು

ಸಂಕ್ರಮಣ ಕಾಲದಲ್ಲೇ ಹುಟ್ಟಿದವುಗಳು ಎನ್ನುವುದನ್ನು ಗಮನಿಸಬೇಕು. ಆದ್ದರಿಂದ ಇವುಗಳು ವ್ಯಕ್ತಿಯ ಆಧ್ಯಾತ್ಮಿಕ ಸಾಧನೆಯ ಬಗ್ಗೆ ಹೆಚ್ಚು ಒತ್ತು ಕೊಡುತ್ತವೆ. ಅನುಭಾವದ ಮುಖ್ಯ ಪ್ರಕ್ರಿಯೆ ಈ ಕ್ಷಣಿಕ ಜಗತ್ತಿನಿಂದ ದೂರವಾಗಿ ಅನಂತತೆಯೊಂದಿಗೆ ಬೆರೆಯುವುದೇ ಆಗಿದೆ.

''ಈ ಭಕ್ತಿ ಪಂಥೀಯ ಚಳುವಳಿ ತಮಿಳ್ನಾಡಿನ ಪುರಾತನ ಶಿವಶರಣರಲ್ಲಿ ನಡೆದ ನಂತರ ಬಸವಣ್ಣನ ಕಾಲದಲ್ಲಿ ಮೊಟ್ಟಮೊದಲು ಕರ್ನಾಟಕದಲ್ಲಿ ಹಬ್ಬಲು ಸಾಂಸ್ಕೃತಿಕ ಐತಿಹಾಸಿಕ ಕಾರಣಗಳೂ ಇವೆ ಎನ್ನುವುದು ಸ್ಪಷ್ಟ.''[೧೧] ಈ ಕಾರಣದಿಂದ ಜೀವನವನ್ನು ಗ್ರಹಿಸುವ ಹೊಸ ನೆಲೆಗಳತ್ತ ವಚನಕಾರರು ದೃಷ್ಟಿ ಹರಿಸಿದ್ದುದು ಕೂಡ ಅನಿವಾರ್ಯ ಸಂಗತಿ ಆಗಿದೆ. ಧಾರ್ಮಿಕ ಅಭಿವ್ಯಕ್ತಿಗಳನ್ನು ಒಂದು ಕಾಲದ ಸಾಂಸ್ಕೃತಿಕ ಅಭಿವ್ಯಕ್ತಿಗಳೆಂದು ನೋಡಲು ಸಾಧ್ಯವಾಗುತ್ತದೆ. ಆದ್ದರಿಂದ ಶರಣರ ಕಾಲದ ಭಕ್ತಿಪಂಥದ ಚಳುವಳಿಯ ಸಂದರ್ಭದಲ್ಲಿ ಮನುಷ್ಯನ ಹೊಸ ಅಸ್ತಿತ್ವವನ್ನು ಕುರಿತುಂತೆ ಅನಿವಾರ್ಯ ಬೆಳವಣಿಗೆಯ ಸ್ವರೂಪ ಯಾವುದು ಎಂದು ಗಮನಿಸುವುದು ಇಲ್ಲಿ ಮುಖ್ಯ ಸಂಗತಿಯಾಗಿದೆ.

ಹನ್ನೆರಡನೆ ಶತಮಾನದ ಒಂದೇ ಕಾಲದಲ್ಲೇ ಬಸವಣ್ಣ ಅಲ್ಲಮ ಇವರಿಬ್ಬರೂ ಮನುಷ್ಯನ ಅಸ್ತಿತ್ವದ ಸ್ವರೂಪದ ಬಗ್ಗೆ ಭಿನ್ನ ಧೋರಣೆಗಳನ್ನು ಹೊಂದಿರುವುದನ್ನು ಗಮನಿಸಬಹುದು. ವಚನ ಚಳುವಳಿಯ ಪ್ರಧಾನ ಅಂಶವಾಗಿ ರೂಪುಗೊಂಡ ಈ ಅನುಭಾವ ಹಾಗೂ ಭಕ್ತಿ ಸ್ವರೂಪಗಳು ಮನುಷ್ಯನ ಅಸ್ತಿತ್ವದ ಬಗ್ಗೆ ಹೊಸ ಅಂಶಗಳನ್ನು ರೂಪಿಸಲು ಪ್ರಯತ್ನಿಸಿದವು ಎಂದೇ ಹೇಳಬೇಕು. ಕರ್ನಾಟಕದ ಚರಿತ್ರೆಯಲ್ಲಿ ಹಿಂದೆ ಕಾಣದ ವ್ಯಕ್ತಿಯ ಬಗೆಗಿನ ಕಾಳಜಿಗಳು ಮೊದಲಬಾರಿಗೆ ಈ ಕಾಲದಲ್ಲಿ ವ್ಯಕ್ತವಾದವು ಎನ್ನಬಹುದು. ಪ್ರಾಚೀನ ಹಾಗೂ ಮಧ್ಯಕಾಲೀನ ಸಮಾಜದಲ್ಲಿ ಜಗತ್ತಿನ ಎಲ್ಲಾ ಭಾಗಗಳಲ್ಲಿಯೂ ಹುಟ್ಟಿಕೊಂಡಂಥ ಈ ಭಕ್ತಿ ಚಳುವಳಿಗಳು ತಮ್ಮ ಹಿಂದಿನ ಸಾಂಸ್ಥಿಕಗೊಂಡ ಎಲ್ಲಾ ಧಾರ್ಮಿಕ, ಸಾಮಾಜಿಕ ಸ್ವರೂಪಗಳನ್ನು ವಿಮರ್ಶಿಸುತ್ತಾ ಇಲ್ಲವೇ ವಿರೋಧಿಸುತ್ತಾ ಬೆಳೆದಿರುವುದು ಗಮನಾರ್ಹವಾಗಿದೆ. ಹೀಗಾಗಿ ಈ ಭಕ್ತಿಯ ಸ್ವರೂಪವು ತನ್ನ ಕಾಲದ ಹೊಸದೊಂದು ವರ್ಗದ ಬೆಳವಣಿಗೆಯ ಅಗತ್ಯತೆಗಾಗಿ ರೂಪುಗೊಂಡಿತೆಂದು ಹೇಳಬಹುದು.

೨ : ೧. ೩ ಭಕ್ತಿ ಪಂಥಗಳ ದೃಷ್ಟಿಯಲ್ಲಿ ಕೆಳಜಾತಿಗಳು

ಕರ್ನಾಟಕದಲ್ಲಿ ನಡೆದ ಹನ್ನೆರಡನೆ ಶತಮಾನವನ್ನು ನಾವು ಒಂದು ಮಹತ್ವದ ಯುಗ ಎಂದು ಕರೆಯಬಹುದು. ಅಂದರೆ ಬಸವಣ್ಣನಿಂದ ಪ್ರಾರಂಭವಾಗಿ ಈ ಯುಗವು ಕುಮಾರವ್ಯಾಸನವರೆಗೂ ಈ ಚಳುವಳಿ ಕೊನೆಗೊಳ್ಳುತ್ತದೆ. ಕ್ರಿ.ಶ. ಸುಮಾರು ಹನ್ನೆರಡನೆ ಶತಮಾನದಿಂದ ಹದಿನೇಳನೇ ಶತಮಾನವೆಂದು ಗುರುತಿಸಬಹುದಾಗಿದೆ. ವಚನ ಚಳುವಳಿಯಲ್ಲಿ ಬಸವಣ್ಣನವರು ಅನ್ಯಾಯದ ವಿರುದ್ಧ ಹೋರಾಡಿದವರು. ನೊಂದ ಜೀವಿಗಳಿಗೆ ಜೀವ ತಂದುಕೊಟ್ಟ ಮಹಾತ್ಮರು ಇವರಾಗಿದ್ದಾರೆ. ವಚನ ಚಳುವಳಿಯ ನಂತರ ಭಕ್ತಿ ಚಳುವಳಿ ಪ್ರಾರಂಭವಾಯಿತೆಂದು ಹೇಳಬಹುದು. ಭಕ್ತಿ ಪಂಥಗಳ ದೃಷ್ಟಿಯಲ್ಲಿ ಕೆಳಜಾತಿಗಳ ಬಗ್ಗೆ ಇರುವ ಅಂಶಗಳು ಏನೆಂಬುದನ್ನು ನಾವು ಸಮಾಲೋಚಿಸಬೇಕಾಗಿದೆ.

''ವರ್ಣಾಶ್ರಮಧರ್ಮದ ವ್ಯವಸ್ಥೆ ಕ್ರೂರವೂ, ಜಡವೂ ಆಗಿಬಿಟ್ಟ ಮೇಲೆ ಅದರಿಂದ ಅವಮಾನಕ್ಕೆ ಒಳಗಾದ ಕೆಳಜಾತಿಗಳು ಪ್ರತಿಭಟನೆಯ ನಾನಾ ಮಾರ್ಗಗಳನ್ನು ಹುಡುಕಿಕೊಳ್ಳತೊಡಗಿದವು.''[೨೭] ಕ್ರಿ.ಶ. ಎಂಟನೇ ಶತಮಾನದ ಮೇಲಂತೂ ಈ ಪ್ರಕ್ರಿಯೆ ಸ್ಪಷ್ಟವಾಗಿ ಕಾಣಿಸಿಕೊಳ್ಳತೊಡಗಿತು. ಭಾರತದಲ್ಲಿ ಕ್ರಿ.ಪೂರ್ವದಿಂದಲೂ ಹೊಸ ಹೊಸದಾಗಿ ಬೆಳೆದು ಬಂದ ಧಾರ್ಮಿಕ ಬೆಳವಣಿಗೆಗಳು ಹೊಸ ಸಾಂಸ್ಕೃತಿಕ ಆಶಯಗಳನ್ನಿಟ್ಟುಕೊಂಡೇ ಜನ್ಮ ತಾಳಿವೆ. ಅತ್ಯಂತ ಗಾಢ ಪ್ರಭಾವ ಹಾಗೂ ಬೇರುಗಳನ್ನು ಬಿಡುತ್ತಿದ್ದ ವೈದಿಕ ಧರ್ಮದ ವಿರುದ್ಧ ಬೌದ್ಧ-ಜೈನ ಧರ್ಮಗಳು ಮುಖ್ಯವಾಗಿ ಬಂಡೆದ್ದಂತವುಗಳು. ಪ್ರಾರಂಭದ ಅವಸ್ಥೆಗಳಲ್ಲಿ ತಾತ್ವಿಕ ನೆಲೆ ಹಾಗೂ ಜೀವನ ದರ್ಶನಗಳಲ್ಲಿ ವೈದಿಕ ನೆಲೆಗಳಿಗೆ ಸ್ಪಷ್ಟ ವಿರೋಧವನ್ನು ತೋರಿಸಿದವು. ಮಧ್ಯಕಾಲೀನ ಸಾಹಿತ್ಯ ಸಂದರ್ಭದಲ್ಲಿ ಭಾರತದ ಎಲ್ಲಾ ಕಡೆಗಳಲ್ಲಿ ಹರಡಿದ ಭಕ್ತಿಪಂಥದ ವಿಶಿಷ್ಟ ಸ್ವರೂಪಗಳೂ ಸಹ ಮೂಲಭೂತವಾಗಿ ವೈದಿಕ ಧರ್ಮ ಜಡಗೊಂಡ ಸಂಸ್ಕೃತಿಯ ವಿರುದ್ಧ ಬಂಡೆದ್ದವುಗಳೇ ಆಗಿವೆ. ಭಕ್ತಿಪಂಥದ ಬೆಳವಣಿಗೆಗಳೆಲ್ಲವೂ ಜಾತಿ ವ್ಯವಸ್ಥೆ ಕಟ್ಟು ಪಾಡುಗಳನ್ನು ಮುಖ್ಯವಾಗಿ ನಿರಾಕರಿಸಿದೆ ಎಂಬುದನ್ನು ಗಮನಿಸಬೇಕು. ಭಕ್ತಿ ಚಳುವಳಿಯು ಮುಖ್ಯವಾಗಿ ಜಾತಿಯ ಶ್ರೇಣೀಕರಣವನ್ನು ಮುರಿಯುವ ಆಶಯವನ್ನು ಹೊಂದಿದೆ.

''ಭಕ್ತಿ ಚಳುವಳಿಗಳು ಭಾರತದಲ್ಲಿ ಮುಖ್ಯವಾಗಿ ಬ್ರಾಹ್ಮಣೇತರ ಹಾಗೂ ಬ್ರಾಹ್ಮಣ ವಿರೋಧಿ ಚಳುವಳಿಗಳೇ ಆಗಿವೆ. ಇವು ಜಾತಿಯ ಅಂತಸ್ತಿನ ಶ್ರೇಣೀಕರಣವನ್ನು ವಿರೋಧಿಸುವ ಕೆಲಸವನ್ನು ಮಾಡಿದವು.''[೨೮] ಮುಖ್ಯವಾಗಿ ಇಲ್ಲಿ ಭಕ್ತಿ ಚಳುವಳಿಯು ಬ್ರಾಹ್ಮಣೇತರರ ವಿರುದ್ಧ ಮೊದಲು ಪ್ರಾರಂಭವಾದದ್ದು ತಮಿಳುನಾಡಿನಲ್ಲಿ ಇರಬಹುದು. ಈ ಒಂದು ಚಳುವಳಿಯು ಆರಂಭವಾಗಬೇಕಾದರೆ ಬಹುಶಃ ಬ್ರಾಹ್ಮಣ ಹಾಗೂ ಶೂದ್ರವರ್ಗಗಳ ನಡುವೆ ಅಸಂಖ್ಯಾತ ಜಾತಿಗಳು ರೂಪುಗೊಳ್ಳಲಿಲ್ಲ ಎಂಬ ಏಕೈಕ ಕಾರಣಕ್ಕಾಗಿ ವಿರೋಧಿ ನೀತಿ ಆರಂಭಗೊಂಡಿದೆ. ಮುಖ್ಯವಾಗಿ ಭಕ್ತಿ ಚಳುವಳಿಯನ್ನು ವಿರೋಧಿಸಿದರು. ಕೆಳಸ್ತರದ ಜನಾಂಗದವರು ವೃತ್ತಿಜೀವಿಗಳೇ ಆಗಿದ್ದಾರೆ. ಆಯಾ ಜಾತಿಯ ಕಟ್ಟು ಕಟ್ಟಳೆಗಳೇ ಸಾಹಿತ್ಯ ಮಾಧ್ಯಮದಲ್ಲಿ ಆಯಾ ಸಂಸ್ಕೃತಿಯ ಪರಿಕಲ್ಪನೆಗಳಾಗಿ ಚಲಾವಣೆಗೆ ಬಂದು ಪರಸ್ಪರ ಸಾಹಿತ್ಯಕ ಸ್ಪರ್ಧೆಯಿಂದ ವಿಶ್ವಧರ್ಮ ತಮ್ಮ ತಮ್ಮ ಪಂಥದಲ್ಲಿಯೇ ಇರುವುದೆಂದು ಸಾರುವ ಭ್ರಮಾತ್ಮಕಲೋಕಗಳು ಸೃಷ್ಟಿಯಾದವು, ಕೆಳಸ್ತರದ ಬದುಕಿಗೆ ಬೆನ್ನು ತಿರುಗಿ ಅವರ ಬದುಕನ್ನು ಪ್ರೋತ್ಸಾಹಿಸದ ಉಚ್ಚವರ್ಗದ ಜಾತಿಯ ಸಂಕುಚಿತ ಸೂತ್ರಗಳೇ ವಿಶ್ವಧರ್ಮಗಳಾಗಿ ಸ್ವರೂಪ ತಾಳಿ ಸಾಹಿತ್ಯ ರಚನೆಯಾಯಿತು. ಕೆಳವರ್ಗದ ಜನಪದ ರಚನೆ ಕಲೆಯಾಗಿ ಉಚ್ಚವರ್ಗದಿಂದ ಮಾನ್ಯತೆ ಹೊಂದುವ ಹೊತ್ತಿಗೆ ಅದು ಆಗಲೇ ಸಂಸ್ಕೃತೀಕರಣಕ್ಕೆ ಒಳಗಾಗಿದ್ದಿತು. ಹೀಗಾಗಿ ತಮ್ಮದಲ್ಲದ ಬದುಕನ್ನು ತಮ್ಮದಲ್ಲದ ಸಂಸ್ಕೃತಿಯನ್ನು ತಮ್ಮದಲ್ಲದ ಮಾನವೀಯತೆಯನ್ನು ತಮ್ಮದೆಂದು ಭಾವಿಸಿ ಸವಿಯುವ ಸಿದ್ಧಾಂತಕ್ಕೆ ಕೆಳವರ್ಗದವರು ಸಹೃದಯರಾಗಿ ತಮ್ಮ ಭಾವನೆಗಳನ್ನು ಒತ್ತೆ ಇಟ್ಟು ಶ್ರುತಿಗೊಳಿಸುವ ಒತ್ತಡದ ಅನಿವಾರ್ಯ ಸ್ಥಿತಿ ಕೆಳವರ್ಗದವರಿಗೆ ಉಂಟಾಯಿತು.

ಭಕ್ತಿಪಂಥದ ಬಿರುಸು ಕುಗ್ಗಿ ಹೋಗಿದ್ದಕ್ಕೆ ಮೇಲೆ ವಿವರಿಸಿದ ಕಾರಣವೂ ಮುಖ್ಯವಾದದ್ದೇ ಆಗಿದೆ. ಜಾತಿಯ ಶ್ರೇಣೀಕರಣವನ್ನು ವಿರೋಧಿಸಿದ ಭಕ್ತಿಪಂಥದ ಕೆಲವು ವಿಶಿಷ್ಠ ಬೆಳವಣಿಗೆಗಳು ಪ್ರತ್ಯೇಕ ಗುಂಪುಗಳಾಗಿ ಮಾರ್ಪಟ್ಟಿರುವುದು ಇಲ್ಲಿ ಗಮನಿಸಬೇಕಾದ ಅಂಶವಾಗಿದೆ. ಭಕ್ತಿ ಪಂಥದ ಬೆಳವಣಿಗೆ ಇಂಥ ವಾತಾವರಣದ ಅನಿವಾರ್ಯ ಬೆಳವಣಿಗೆಯಾಗಿಯೇ

ರೂಪುಗೊಂಡಿದೆ. ಜಾತಿ ವ್ಯವಸ್ಥೆಯ ಶ್ರೇಣೀಕರಣವನ್ನು ಸಂಪೂರ್ಣ ವಿರೋಧಿಸಿದ ಭಕ್ತಿ ಪಂಥದ ಬೆಳವಣಿಗೆಗಳು ವ್ಯವಸ್ಥಿತ ಸಿದ್ಧಾಂತಗಳನ್ನು ರೂಪಿಸಿಕೊಳ್ಳಲು ಪ್ರಯತ್ನಿಸಿರುವುದನ್ನು ಕಾಣಬಹುದು. ಇಂಥ ವ್ಯವಸ್ಥಿತವಾದ ಹೊಸ ಪಂಥವೊಂದರ ಬೆಳವಣಿಗೆ ಬ್ರಾಹ್ಮಣ ವರ್ಗಕ್ಕೆ ಬಿದ್ದ ದೊಡ್ಡ ಅಘಾತವೆನ್ನಬಹುದು.

ವಚನ ಚಳುವಳಿ ಬಹುತೇಕ ಕೆಳವರ್ಗ, ಕೆಳಜಾತಿ ಜನತೆಯ ಕಾರಣದಿಂದಲೇ ಒಂದು ದೊಡ್ಡ ಶಕ್ತಿಯಾಗಲು ಕಾರಣವಾಯಿತು. ವರ್ಣವ್ಯವಸ್ಥೆಯ ಶ್ರೇಣೀಕರಣವನ್ನು ಮುರಿದು ಸಮಾನ ವ್ಯಕ್ತಿತ್ವದ ಆಧಾರದ ಮೇಲೆ ಧಾರ್ಮಿಕ ಪಂಥವೊಂದನ್ನು ನಿರ್ಮಾಣ ಮಾಡುವ ಕೆಲಸವು ಇಲ್ಲಿ ನಡೆಯಿತು. ಇಲ್ಲಿ ಕೆಳವರ್ಗದ ಸಂಸ್ಕೃತಿ ಯಾವುದಿರಬಹುದು? ಅದರ ಮೂಲ ಸ್ವರೂಪವೇನು? ಇನ್ನೂ ಜೀವಂತವಾಗಿದೆಯೇ? ಇದ್ದರೆ ಅದನ್ನು ಸ್ಥಾಯಿ ಅಥವಾ ಬದಲಾದ ಸ್ವರೂಪದಲ್ಲಿ ಪುನರ್‌ರಚಿಸಬಹುದೇ ಮುಂತಾದ ಪ್ರಶ್ನೆಗಳು ತಲೆದೋರುತ್ತವೆ. ಕೆಳವರ್ಗದ ಸಂಸ್ಕೃತಿ ಹಲವು ಧಾರ್ಮಿಕ ಸುಧಾರಣೆಗಳು ಮತ್ತು ವೈಜ್ಞಾನಿಕ ಪ್ರಭಾವದ ಸತತ ಧಾಳಿಗೆ ತುತ್ತಾಗಿವೆ. ಆದರೂ ಇಂದಿಗೂ ಅವರ ಧಾರ್ಮಿಕ ವಿಧಿ ವಿಧಾನಗಳಲ್ಲಿ ದೈನಂದಿನ ನಡವಳಿಕೆಗಳಲ್ಲಿ ಆಚಾರ ವಿಚಾರಗಳಲ್ಲಿ ಸಂಸ್ಕೃತಿ ಜೀವಂತವಾಗಿ ಕ್ರಿಯಾತ್ಮಕವಾಗಿರುವುದನ್ನು ಕ್ಷೇತ್ರಕಾರ್ಯದ ಸಹಾಯದಿಂದ ಅರಿಯಬಹುದಾಗಿದೆ.

''ಜೈನ, ಶೈವ ಮತ್ತು ವೈದಿಕ ಧರ್ಮಗಳು ಕೆಳವರ್ಗದ ಸಂಸ್ಕೃತಿಯಲ್ಲಿ ಕಸಿಗೊಳ್ಳದೆ ಕೇವಲ ಕೆಳವರ್ಗದ ಭಾಷೆಯಲ್ಲಿ ಕಸಿ ಆದವು. ಮೇಲ್ವರ್ಗದವರು ಕೆಳವರ್ಗದವರ ಭಾಷೆಯನ್ನು ಸ್ವೀಕರಿಸಿ ಅವರು ಸಂಸ್ಕೃತಿಯನ್ನು ತಿರಸ್ಕರಿಸಿದರು. ಕೆಳಸ್ತರದವರ ಸಂಸ್ಕೃತಿ ಅನ್ಯ ಸಂಸ್ಕೃತಿಗಳೊಂದಿಗೆ ಅಧಿಕೃತವಾಗಿ ಕಸಿಯಾಗಲು ಕನ್ನಡ ಭಾಷೆ ಮಾಧ್ಯಮವಾಗದೇ ಹೋದುದು ಕನ್ನಡ ಸಾಹಿತ್ಯದ ಇತಿಹಾಸದ ಒಂದು ದುರಂತ.''[೧೪]

ಕರ್ನಾಟಕದಲ್ಲಿ ಧಾರ್ಮಿಕ, ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಜೀವನ ಮೇಲ್ವರ್ಗದ ಸರ್ವಾಧಿಕಾರಕ್ಕೆ ಒಳಗಾಗಿ ಸಾಹಿತ್ಯವೂ ಪ್ರತಿಷ್ಠಿತರಿಗೆ ಶರಣಾಗಿ ಕೆಳವರ್ಗದ ಸಂಸ್ಕೃತಿಯ ನಾಶಕ್ಕೆ ಕಾರಣವಾಯಿತು ಎಂಬುದು ಸಾಹಿತ್ಯ ಚರಿತ್ರೆಯ ವಸ್ತುನಿಷ್ಠ ಅಧ್ಯಯನದಿಂದ ಸ್ಪಷ್ಟವಾಗುತ್ತದೆ. ಕೆಳವರ್ಗದವರ ಬದುಕಿನ ಸಂಸ್ಕೃತೀಕರಣ ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಚಲಿಸಿದವು. ತಮ್ಮದಲ್ಲದ್ದನ್ನು ತಮ್ಮದನ್ನಾಗಿಸಿ ಮೈಗೂಡಿಸಿಕೊಳ್ಳುವ ವ್ಯರ್ಥ ಸಾಹಸ ಈ ಕೆಳವರ್ಗದವರಲ್ಲಿ ಅಂದಿನ ಸ್ಥಿತಿಯನ್ನು ಕಾಣಬಹುದಾಗಿದೆ. ವೈದಿಕ ಸಂಸ್ಕೃತಿ ಅಪಮೌಲೀಕರಣದ ಮೂಲಕ ಕಾಣಿಸಿಕೊಂಡ ಬೌದ್ಧರು, ಚಾರ್ವಕರು ಅಥವಾ ವಚನಕಾರರು ಸಂಸ್ಕೃತಿಯೊಂದನ್ನು ಕಟ್ಟಿಕೊಡುವ ವಿಶಾಲ ಹಾದಿಯಲ್ಲಿ ಸ್ವಲ್ಪ ದೂರ ನಡೆದರು. ಮೇಲುವರ್ಗ ಮತ್ತು ಕೆಳವರ್ಗದಿಂದ ಮತಾಂತರಗೊಂಡವರಲ್ಲಿ ಭೇದ ಸ್ಥಾಯಿಯಾಗಿ ಒಳಪಂಗಡಗಳು ಸೃಷ್ಟಿಯಾದವು. ಕೆಳವರ್ಗದಿಂದ ಬಂದವರು ದೀಕ್ಷೆ ಅಥವಾ ವ್ರತದಿಂದ ಸ್ವಮತಸ್ಥರಾಗಿ ಹಿಂದಿನ ಆಚರಣೆಯನ್ನು ಮುಂದುವರಿಸಿದರೆ ಅನಾಚಾರಿಗಳು ಅನ್ಯಮತಸ್ಥರಾದರೆ ಧರ್ಮದ್ರೋಹಿಗಳಾದವರು ಭವಿ ಮತ್ತು ಶೂದ್ರರಾದರು. ಮೇಲುವರ್ಗದಿಂದ ಮತಾಂತರಗೊಂಡವರು ಜಂಗಮರೂ ಆಗಿ ಧಾರ್ಮಿಕ ನಾಯಕರೂ ಭಾಷ್ಯಾಕಾರರೂ ಒಡೆಯರೂ ಆದರೆ ಕೆಳವರ್ಗದಿಂದ ಮತಾಂತರಗೊಂಡವರು.

ಭಕ್ತರೂ ಸಂದರ್ಭ ಒದಗಿದಾಗ ಬಲಿ ಕೊಟ್ಟು ಕೊಳ್ಳುವ ಧರ್ಮನಿಷ್ಠರೂ ಆದರು. ಆದರೆ ಈ ಎರಡೂ ವರ್ಗಕ್ಕೆ ಅನ್ವಯಿಸದ ಬಹುಸಂಖ್ಯಾತ ಮಂದಿ ವ್ಯವಸ್ಥೆಯನ್ನು ಒಪ್ಪಿ ವರ್ಣಧರ್ಮದ ಶೂದ್ರರ ಗುಂಪಾಗಿ ನಾಲಗೆ ಇಲ್ಲದ ದುಡಿವ ಯಂತ್ರಗಳಾದರು.

ಲಿಂಗದೀಕ್ಷೆ ಹೊಂದಿದ ಕೆಳಜಾತಿಯವರನ್ನು ಲಿಂಗದೀಕ್ಷೆ ಹೊಂದದ ಬ್ರಾಹ್ಮಣರನ್ನು ಅವಮಾನಗೊಳಿಸಿ ಸೇಡು ತೀರಿಸಿಕೊಳ್ಳುವುದಕ್ಕಾಗಿ ಕೆಳವರ್ಗದ ಶಿವಭಕ್ತರನ್ನು ಬಳಸಿಕೊಂಡಿರುವ ಪ್ರಸಂಗಗಳು ಹೇರಳವಾಗಿವೆ. ಅಂಬಿಗರ ಚೌಡಯ್ಯ, ಹಡಪದ ಅಪ್ಪಣ್ಣ, ಕುಂಬಾರ ಗುಂಡಯ್ಯ, ಜೇಡರ ದಾಸಿಮಯ್ಯ ಮುಂತಾಗಿ ಅವರವರ ಪೂರ್ವ ಜಾತಿಗಳೇ ಶರಣರಾದ ಮೇಲೂ ಅಂಟಿ ಬಂದದ್ದು ಕಂಡು ಬರುತ್ತದೆ. ಹೀಗೆ ಭಕ್ತಿಪಂಥಗಳ ದೃಷ್ಟಿಯಲ್ಲಿ ಕೆಳಜಾತಿಯವರನ್ನು ನಡೆಸಿಕೊಂಡ ಬಗೆಯನ್ನು ವಿವರಿಸಲಾಗಿದೆ.

೨ :೨ ಕೆಳಜಾತಿಗಳ ಪರ್ಯಾಯ ಚಿಂತನೆಗಳು

ಮಧ್ಯಕಾಲೀನ ಸಾಹಿತ್ಯ ಸಂದರ್ಭದಲ್ಲಿ ಬಸವಣ್ಣನವರ ಕಾಲ ತುಂಬಾ ಮಹತ್ವವಾದುದು. ೧೨ನೇ ಶತಮಾನದ ಶರಣರ ಈ ಯುಗವನ್ನು ವೈಚಾರಿಕ ಚಿಂತನೆಯ ಸುವರ್ಣಯುಗ ಎಂದು ಕರೆಯಬಹುದು. ಏಕೆಂದರೆ ಈ ಕಾಲದಲ್ಲಿ ಅನೇಕ ವಿಪ್ಲವಗಳು ಉಂಟಾಗಿ ಒಂದು ಕ್ರಾಂತಿಯೇ ನಡೆಯಿತು. ಬಸವಣ್ಣನವರ ಚಿಂತನೆಗಳಿಗೆ ಧೋರಣೆಗಳಿಗೆ ಪರ್ಯಾಯವಾಗಿ ಕೆಳವರ್ಗದ ವಚನಕಾರರು ಉದ್ಭವಿಸಿದರು. ಕರ್ನಾಟಕದಲ್ಲಿ ನಡೆದ ೧೨ನೆಯ ಶತಮಾನದ ಶರಣರ ಈ ಚಳುವಳಿ ಶ್ರೀ ಸಾಮಾನ್ಯರ ಆಲೋಚನೆಯ ದಿಕ್ಕನ್ನೇ ಪರಿವರ್ತಿಸಿದ ಒಂದು ಮಹತ್ವದ ಘಟ್ಟ ಎಂದರೆ ತಪ್ಪಾಗಲಾರದು. ಈ ಕಾಲದ ಸಂಘರ್ಷಕ್ಕೆ ಒಳಗಾದ ಕೆಳಸ್ತರದ ವಚನಕಾರರು ತಮ್ಮ ದಿಕ್ಕನ್ನೇ ಬದಲಾಯಿಸಿದ ಸಂದರ್ಭ ಇದಾಗಿದೆ. ಈ ಸಂದರ್ಭದಲ್ಲಿ ಕೆಳಜಾತಿಗಳ ಒಗ್ಗಟ್ಟು ಅನೇಕ ವಿಪ್ಲವಗಳ ನಡುವೆ ವಿಫಲವಾದ ನಂತರ ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಪ್ರಕ್ಷುಬ್ಧ ವಾತಾವರಣವೇ ಸೃಷ್ಟಿಸಲ್ಪಟ್ಟಿತು. ಬಸವಣ್ಣ, ಅಲ್ಲಮ, ಚನ್ನಬಸವಣ್ಣನವರ ನಂತರದ ಮೇಲ್ವರ್ಗಗಳಿಗೆ ಸೇರಿದ ಶರಣರ ಗುಂಪು ಕೆಳಜಾತಿಯ ವಚನಕಾರರನ್ನು ನಿರ್ಲಕ್ಷಿಸಿದವೇ ಎಂಬ ಅನುಮಾನವೂ ಇದೆ. ಇದರಿಂದ ಬೇಸತ್ತ ಕೆಳವರ್ಗದ ಕೆಲವು ನಾಯಕರು ಆ ಗುಂಪಿನಿಂದ ಸಿಡಿದು ಹೊರಬಂದು ತಮ್ಮದೇ ಆದ ಪರ್ಯಾಯ ಒಕ್ಕೂಟಗಳನ್ನು ಸ್ಥಾಪಿಸಿದಂತೆ ಕಾಣುತ್ತದೆ.

ಬಸವಣ್ಣ, ಚನ್ನಬಸವಣ್ಣ, ಅಕ್ಕಮಹಾದೇವಿ ಮುಂತಾದವರು ವಿಧಿ ವಿಧಾನಗಳಿಗೆ ಧರ್ಮಾಚರಣೆಗೆ ಪ್ರಾಮುಖ್ಯತೆ ಕೊಟ್ಟು ಧರ್ಮವನ್ನು ಅದರ ಎಲ್ಲಾ ನಿಯಮಗಳೊಂದಿಗೆ ಬೆಳೆಸಲು ಪ್ರೇರೇಪಿಸಿದರೆ, ಅಂಬಿಗರ ಚೌಡಯ್ಯ, ಡೋಹರ ಕಕ್ಕಯ್ಯ, ಮಾದಾರ ಚೆನ್ನಯ್ಯ ಮುಂತಾದ ದುಡಿವ ವರ್ಗದಿಂದ ಬಂದ ವಚನಕಾರರು ಅಲ್ಲಮಪ್ರಭು ನೇತೃತ್ವದಲ್ಲಿ ಇವರ ಆಚರಣೆ ಹೇಳಿಕೆಗಳನ್ನು ಪ್ರಶ್ನಿಸುತ್ತಾ, ಕೆಲವೊಮ್ಮೆ ಅಲ್ಲಗಳೆಯುತ್ತಾ ಚಳುವಳಿಗೆ ಹೊಸ ತಿರುವು ನೀಡಲು ಪ್ರಯತ್ನಿಸಿದರು. ಹಾಗೆಯೇ ಮೇಲ್ವರ್ಗದ ಶರಣರ ಅಷ್ಟಾವರಣ ಷಟ್‌ಸ್ಥಳ ಪಂಚಾಚಾರ ಮೊದಲಾದ ಧಾರ್ಮಿಕ ಆಚರಣೆಗಳನ್ನು ಕೆಳವರ್ಗದ ಶರಣರು ವಿರೋಧಿಸುತ್ತಾ ಬಂದಿರುವುದು ಕಂಡುಬರುತ್ತದೆ.

ಹೀಗಾಗಿ ಮೇಲ್ಕಂಡ ಕೆಲವು ಶರಣರ ವಿರುದ್ಧದ ದಿಕ್ಕಿನಲ್ಲಿ ಕೆಳಜಾತಿಯ ವಚನಕಾರರು ಪರ್ಯಾಯ ಆಲೋಚನೆಗಳ ಮೂಲಕ ಒಂದು ಹೊಸ ಒಕ್ಕೂಟವನ್ನು ಹುಟ್ಟು ಹಾಕಿದರು. ಅವರ ಪರ್ಯಾಯ ಆಲೋಚನೆಗಳನ್ನು ಈ ಮುಂದಿನಂತೆ ಕೆಳಜಾತಿಯ ವಚನಕಾರರ ಮೂಲಕ ಅರ್ಥೈಸಬಹುದು.

೨ : ೨.೧ ಕೆಳಜಾತಿಯ ವಚನಕಾರರು

ಹನ್ನೆರಡನೆಯ ಶತಮಾನದ ಶರಣರ ಚಳುವಳಿ ಸಮಾಜದ ಆಲೋಚನೆಯ ದಿಕ್ಕನ್ನೇ ಬದಲಾಯಿಸಿದ ಒಂದು ಸಂದರ್ಭ. ಈ ಸಂದರ್ಭದಲ್ಲಿ ಶರಣರ ಮುಖಂಡ ಬಸವಣ್ಣನವರ ಪಾತ್ರ ತುಂಬಾ ಮಹತ್ವದ್ದಾಗಿದೆ. ಮೇಲ್ವರ್ಗದ ಶರಣರ ಚಿಂತನೆಗಳ ವಿರುದ್ಧ ಕೆಳವರ್ಗದ ಶರಣರು ಪರ್ಯಾಯ ಒಕ್ಕೂಟವನ್ನು ಪ್ರಾರಂಭಿಸಿದರು ಎಂಬುದಾಗಿ ಈಗಾಗಲೇ ಹೇಳಿದೆ. ಅಂದಿನ ಯಜಮಾನ್ಯ ಸಂಸ್ಕೃತಿಯಲ್ಲಿ ಈ ಕೆಳಸ್ತರದ ವಚನಕಾರರು ನಿರ್ಲಕ್ಷ್ಯಕ್ಕೆ ಒಳಗಾಗಿದ್ದರು ಎಂಬುದಕ್ಕೆ ವಚನಗಳಲ್ಲೇ ಉದಾಹರಣೆಗಳಿವೆ. ಈ ಒಟ್ಟು ಚಳುವಳಿಯ ಸಂದರ್ಭದಲ್ಲಿ ಕೆಳಸ್ತರದ ಕೆಲವು ವಚನಕಾರರ ಒಳನೋಟಗಳನ್ನು ಕ್ರೋಢಿಕರಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

ಅಂಬಿಗರ ಚೌಡಯ್ಯ

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಹನ್ನೆರಡನೆಯ ಶತಮಾನ ಒಂದು ವಿಶಿಷ್ಟಯುಗ. ಕರ್ನಾಟಕದ ಜನಸಾಮಾನ್ಯರ ಬದುಕಿನಲ್ಲಿ ಮಹತ್ತರ ಬದಲಾವಣೆಯನ್ನು ಬೀರಿದ ಮಹತ್ವದ ಒಂದು ಘಟ್ಟ ಇದು. ಹಿಂದೆಂದೂ ಇಂಥ ಒಂದು ವೈಚಾರಿಕ ಬದಲಾವಣೆ ಭಾರತದ ಯಾವ ಮೂಲೆಯಲ್ಲೂ ನಡೆದ ದಾಖಲಾತಿ ಇಲ್ಲ.

''ವರ್ಣಾಶ್ರಮ ವ್ಯವಸ್ಥೆಯ ವಿರುದ್ಧ ತಿರುಗಿ ಬಿದ್ದು ಮಾನವೀಯ ನೆಲೆಯಲ್ಲಿ ಮನುಷ್ಯ ಸಂಬಂಧಗಳನ್ನು ಗೌರವಿಸಿದಂತೆ ಬದಲಾವಣೆಗೆ ಹಾತೊರೆದ ಚಳುವಳಿ ಇದು''[೧೫] ಹಾರುವ ಮೊದಲಾಗಿ ಅಂತ್ಯಜ ಕೊನೆಯಾಗಿ ಎಲ್ಲರನ್ನು ಒಂದೇ ಭಾವದಲ್ಲಿ ಕಾಣುವ ಬಸವಣ್ಣನವರ ಮಾನವೀಯ ಹಂಬಲಿಕೆಗಳ ಫಲರೂಪಿಯಾದ ಈ ಹೋರಾಟ ತನ್ನ ಗರ್ಭದಲ್ಲಿ ಹಲವು ಗೊಂದಲ ವೈರುದ್ಧ ಸಣ್ಣತನ ಅವಮಾನ ಅನುಮಾನಗಳ ಜೊತೆಗೆ ಪ್ರೀತಿ ವಾತ್ಸಲ್ಯ ಸಮಾನತೆ ಇತ್ಯಾದಿ ಮಾನವೀಯ ಕಾಮನೆಗಳನ್ನು ಹುದುಗಿಸಿಕೊಡಿದೆ. ಕಾರಣ ಈ ಆಂದೋಲನದಲ್ಲಿ ಭಾಗವಹಿಸಿದವರೆಲ್ಲ ಭಾರತದ ವರ್ಣವ್ಯವಸ್ಥೆಯ ಜಾತಿ ಗೋಡೆಗಳ ನಡುವಿನಿಂದ ಹೊರಬಂದು ಮನುಷ್ಯ ಸಂಬಂಧಗಳ ಬೆಳಕಿಗೆ ಹೊಂದಿಕೊಂಡವರು ಇವರು. ರುಚಿ-ವಾಸನೆ ಮಡಿ-ಮೈಲಿಗೆ ಆಚಾರ-ವಿಚಾರ, ಮೇಲು-ಕೀಳು ಇತ್ಯಾದಿ ಅಂಶಗಳು ಈ ಸಂದರ್ಭದಲ್ಲಿ ಒಂದಕ್ಕೊಂದು ಡಿಕ್ಕಿ ಹೊಡೆಯುವುದು ಸಹಜ. ಆದರೆ ಆ ಚಳುವಳಿಯಲ್ಲಿ ಇವೆಲ್ಲವನ್ನು ಅನುಸರಿಸಿಕೊಂಡು ಬೆಳೆಯುವ ಮನೋಧರ್ಮ ವ್ಯಕ್ತಿ ನೆಲೆಯಿಂದ ಸಮಷ್ಟಿಯ ವ್ಯಾಪ್ತಿಯವರೆಗೆ ಹಬ್ಬಿ ಹರಿದು ಒಂದು ಜೀವಶಕ್ತಿಯಾಗಿತ್ತು.

''ಭಾರತದ ಮೂಲಭೂತವಾದಿ ಧಾರ್ಮಿಕ ವ್ಯವಸ್ಥೆಯನ್ನು ಆದಿಯಿಂದಲೂ ಪೋಷಿಸಿಕೊಂಡು ಬಂದ ರಾಜಕೀಯ ಶಕ್ತಿ ಇಲ್ಲಿಯೂ ಈ ಚಳುವಳಿಯ ಬೆಳವಣಿಗೆಗೆ ದಮನಕಾರಿಯಾಗಿ ವರ್ತಿಸಿರುವುದು ಐತಿಹಾಸಿಕ ಸತ್ಯ. ಅದುವರೆಗೂ [illegible]

ಇದ್ದೂ ಇಲ್ಲದಂತಾಗಿತ್ತು. ಅಸಂಖ್ಯ ಜೀವಗಳು ಮಾತಾಡತೊಡಗಿದ್ದವು. ಅಂದಿನ ಅರಸೊತ್ತಿಗೆಯ ಕಾಲದಲ್ಲಿ ಸತ್ವ ಇದ್ದೂ ಪ್ರಕಟಿಸಿಕೊಳ್ಳಲಾಗದ ಆಲೋಚನೆಗಳಿದ್ದೂ ಹಂಚಿಕೊಳ್ಳಲಾಗದ ಸ್ಥಿತಿಯಲ್ಲಿದ್ದ ಎಷ್ಟೋ ಪ್ರತಿಭೆಗಳು ಅನಾವರಣಗೊಳ್ಳತೊಡಗಿದವು.''[೧೬]

ಬಸವಣ್ಣನವರ ಸಮಕಾಲೀನರಾದ ಅಂಬಿಗರ ಚೌಡಯ್ಯ ಅನುಭವ ಮಂಟಪದ ಮೊದಲಿಗರಲ್ಲಿ ಮುಖ್ಯನಾದವನು. ಈತ ಕೆಳವರ್ಗದ ವಚನಕಾರ. ಕೆಳವರ್ಗದ ವಚನಕಾರರ ಒಂದು ವಿಶೇಷತೆ ಏನೆಂದರೆ ತಾವು ಕೈಗೊಂಡಿದ್ದ ಕಾಯಕವನ್ನೇ ತಮ್ಮ ಆಧ್ಯಾತ್ಮ ಚಿಂತನೆಯ ಪ್ರಕಟಣೆಗೆ ಮಾಧ್ಯಮವಾಗಿಸಿಕೊಂಡಿರುವುದು. ಅಂದರೆ ಆಚರಣೆಯೊಳಗೆ ಕಾಯಕವೇ ಕೈಲಾಸವೆಂದು ಬಸವಣ್ಣ ಸಾರಿದ ತತ್ವವನ್ನು ಬಾಳಾಗಿಸಿ ತೋರುವುದರ ಮೂಲಕ ಹೀಗೆ ಬಾಳಿದ್ದರಿಂದ ಅವರ ಭಕ್ತಿ ಗುಪ್ತವಾದದ್ದೇ ಹೆಚ್ಚು. ಈ ಗುಪ್ತಶಕ್ತಿ ಪ್ರಕಟವಾಗಲು ಅವರು ಎಂದೂ ಆಸೆ ಪಟ್ಟವರಲ್ಲ.

ಅಂಬಿಗರ ಚೌಡಯ್ಯ ಅಭಿನ್ನ ಸ್ವರೂಪದವನು. ಅಭಿವ್ಯಕ್ತಿ ಪರಂಪರೆಯನ್ನು ಬೆಳೆಸಿದ ಶರಣರ ಸಾಲಿಗೆ ಸೇರಿದವನು. ದೋಣಿ ನಡೆಸುವ ಕಾಯಕವನ್ನು ಕೈಗೊಂಡು ಆದ್ಯ ವಚನಕಾರರ ಪರಂಪರೆಯನ್ನು ಒಪ್ಪಿಕೊಳ್ಳುತ್ತಲೇ ಸಂಪ್ರದಾಯವನ್ನು ಅಲ್ಲಗಳೆಯುವ, ವೀರಶೈವ ಧರ್ಮವನ್ನು ಸ್ವೀಕರಿಸುತ್ತಲೇ ಅದರ ಶಾಸ್ತ್ರ ಗುಣವನ್ನು ಖಂಡಿಸುತ್ತಾನೆ. ಈತ ನೇರ ನುಡಿಯ ನಿಷ್ಠುರವಾದಿ, ದುಡಿವ ವರ್ಗದಿಂದ ಚೌಡಯ್ಯನ ಮಾತುಗಳಲ್ಲಿ ನಿಷ್ಠುರತೆ ಇದ್ದರೂ ಸತ್ವ ಅಡಗಿದೆ. ಅವರ ವಚನಗಳಲ್ಲಿ ಅವನ ಸ್ವಭಾವ ಪಾರದರ್ಶಕವಾಗಿದೆ. ಉಳಿದ ವಚನಕಾರರಂತೆ ಈತ ವಚನ ಚಳುವಳಿಗೆ ಬದ್ಧನಾಗಿದ್ದರೂ ಅಲ್ಲಿಯ ಲೋಪದೋಷಗಳನ್ನು ಎತ್ತಿ ಹೇಳುವುದರ ಮೂಲಕ ಭಿನ್ನನಾಗುತ್ತಾನೆ. ಸಾಮಾನ್ಯವಾಗಿ ವಚನಕಾರರೆಲ್ಲಾ ತಾವು ಬರೆದ ವಚನಗಳಲ್ಲಿ ತಮ್ಮ ಇಷ್ಟ ದೈವವನ್ನು ಅಂಕಿತವಾಗಿಟ್ಟುಕೊಂಡರೆ ಚೌಡಯ್ಯ ತನ್ನ ಹೆಸರನ್ನೇ ತನ್ನ ವಚನಾಂಕಿತವನ್ನಾಗಿಟ್ಟುಕೊಂಡಿದ್ದಾನೆ.

ಈತನ ಆತ್ಮಾಭಿಮಾನ ಅಪಾರವಾದುದು. ವರ್ಣವ್ಯವಸ್ಥೆಯಲ್ಲಿ ನೋವುಂಡ ನೆಲೆಗೆ ಸೇರಿದವನಾದ ಚೌಡಯ್ಯ ತನ್ನ ಕಾಯಕವನ್ನು ಎತ್ತಿ ಅಣಕದ ಮಾತಾಡುತ್ತಿದ್ದವರಿಗೆ

''ಅಂಬಿಗ ಅಂಬಿಗ ಎಂದು ಕುಂದುನುಡಿಯದಿರು
ನಂಬಿದರೆ ಒಂದೇ ಹುಟ್ಟಲಿ ಕಡೆಯ
ಹಾಯಿಸುವನಂಬಿಗರ ಚೌಡಯ್ಯ''[೧೭]

ಎಂದು ಆತ್ಮವಿಶ್ವಾಸದಿಂದ ಸವಾಲಿನ ಶೈಲಿಯಲ್ಲಿ ವ್ಯಕ್ತಿತ್ವದ ವಿಶಿಷ್ಟತೆಯನ್ನು ಮೆರೆದಿದ್ದಾನೆ. ವಚನದಿಂದ ವಚನಕ್ಕೆ ಚೌಡಯ್ಯ ಬೆಳೆದು ನಿಂತಿದ್ದಾನೆ. ಗುರುಲಿಂಗ ಜಂಗಮ ಧರ್ಮದೇವರುಗಳ ಬಗೆಗೆ ತೋರುವ ಈತನ ಭಕ್ತಿ ಕ್ರಮೇಣ ವೈಚಾರಿಕವಾಗುತ್ತಾ ಸಾರ್ವಕಾಲಿಕ ಸತ್ಯವಾಗುತ್ತದೆ. ಗುರುಲಿಂಗ ಜಂಗಮರ ಸಂಬಂಧವನ್ನು ವಾಸ್ತವತೆಯ ತಳಹದಿಯ ಮೇಲೆ ವಿಶ್ಲೇಷಿಸುತ್ತಾ ಧರ್ಮ ದೇವರುಗಳನ್ನೇ ಪ್ರಶ್ನಿಸುವ ಹಂತಕ್ಕೆ ಬೆಳೆಯುತ್ತಾನೆ. ಪೂಜೆ ಪುರಸ್ಕಾರಗಳನ್ನು ಅಲ್ಲಗಳೆದು ಮನುಷ್ಯ ಸಾಧನೆಗೆ ಹೆಚ್ಚು ಪ್ರಾಮುಖ್ಯತೆ ಕೊಡುತ್ತಾನೆ.

''ಜಂಗಮನ ಕರೆತಂದು ಮನೆಯಲ್ಲಿ ಕುಳ್ಳಿರಿಸಿ
ಲಿಂಗದ ಮೇಲಣ ಜಪವನೆಣಿಸುವ
ಭಕ್ತನ ಬಾಯಲ್ಲಿ ಕೆರವನಿಕ್ಕಲಿ''[೧೮]

''ತನ್ನ ಮರೆದು ದೇವರ ಕಂಡಿಹನೆಂದೆಂಬರು
ತನ್ನವ ಮರೆದು ದೇವರ ಕಂಡಿಹನೆಂಬ ಕಾರಣ
ಹರಿಸುರ ಬ್ರಹ್ಮಾದಿಗಳೆಲ್ಲರೂ ತಲೆಕೆಳಗಾಗಿ ಹೋದರು.
ಆ ದೇವನ ಮರೆದು ತನ್ನವನರಿದರೆ
ತಾನೇ ನಿಜವೆಂದನಂಬಿಗ ಚೌಡಯ್ಯ''[೧೯]

ಅಂದಿನ ಇಡೀ ವ್ಯವಸ್ಥೆಯ ವಿರುದ್ಧ ಒಟ್ಟಾರೆ ವಚನಕಾರರು ಬಂಡೆದ್ದರೆ ಚೌಡಯ್ಯ ವ್ಯವಸ್ಥೆಯನ್ನು ವಿರೋಧಿಸುತ್ತಲೇ ವಚನಕಾರರ ಕೆಲವು ವಿಚಾರಗಳನ್ನು ಪ್ರಶ್ನಿಸುತ್ತಾನೆ. ''ನಿಷ್ಠಾವಂತ ಹೋರಾಟಗಾರನೊಬ್ಬ ಒಂದು ಚಳುವಳಿ ತನ್ನೊಂದಿಗೆ ಬರದಿದ್ದಾಗ ಅದನ್ನು ಹಿಂದೆ ಹಾಕಿ ಮುಂದೆ ಹೋಗಬಲ್ಲ ಸಾಮರ್ಥ್ಯ ಪಡೆಯಬಲ್ಲನೆಂಬುದಕ್ಕೆ ಚೌಡಯ್ಯನ ವಚನಗಳೇ ಸಾಕ್ಷಿ.''[೨೦] ಕಣ್ಣಿಗೆ ಕಾಣದ ಹರಿಹರ ಬ್ರಹ್ಮಾದಿಗಳನ್ನು ಅಲ್ಲಗಳೆದು ಕಣ್ಣೆದುರು ನಡೆದಾಡುವ ಶಿವಶರಣರಿಗೆ ಪ್ರಾಮುಖ್ಯತೆ ಕೊಡುವುದು ದೇವರು ಧರ್ಮಗಳು ಸುಳ್ಳೆಂದು ಗೊಂದಲವನ್ನೆಬ್ಬಿಸದೆ ಸೂಕ್ಷ್ಮವಾಗಿ ಅದರ ಬೇರುಗಳನ್ನೇ ಕಿತ್ತೆಸೆಯಲು ಪ್ರಯತ್ನಿಸುವುದು ಚೌಡಯ್ಯನ ಪ್ರಮುಖ ಉದ್ದೇಶವಾಗಿತ್ತು. ಈತ ಪ್ರಾರಂಭದಲ್ಲಿ ಬಹುದೇವೋಪಾಸನೆಯನ್ನು ಖಂಡಿಸಿ ಏಕದೇವೋಪಾಸನೆಯಾದ ಇಷ್ಟಲಿಂಗದಲ್ಲಿ ಕೇಂದ್ರೀಕೃತನಾದ ಅಂಬಿಗರ ಚೌಡಯ್ಯ, ನಂತರದ ತನ್ನ ವಚನಗಳಲ್ಲಿ ಇಷ್ಟಲಿಂಗವನ್ನು ಮೀರಿ ಮುಂದೆ ಬೆಳೆಯುತ್ತಾನೆ. ''ಕಟ್ಟಿದ ಲಿಂಗವ ಬಿಟ್ಟು ಬೆಟ್ಟದ ಲಿಂಗಕ್ಕೆ ಹೋದೆಡೆ ಮೆಟ್ಟು ತೆಗೆದುಕೊಂಡು ಹೊಡೆ'' ಎಂದು ಗರ್ಜಿಸಿದ ಚೌಡಯ್ಯ ನಂತರ ಅದೇ ಕಟ್ಟಿದ ಇಷ್ಟಲಿಂಗವನ್ನು ಕುರಿತು ''ಎರೆದರೆ ನೆನೆಯದು ಬಿಟ್ಟರೆ ಬಾಡದು'' ಎಂದು ಹೇಳುತ್ತಾನೆ. ಇದು ಚೌಡಯ್ಯನ ನಿಜವಾದ ಇವತ್ತಿನ ಬೆಳವಣಿಗೆಯನ್ನು ಸೂಚಿಸುತ್ತದೆ.

ಹೀಗೆ ಚೌಡಯ್ಯ ಅಂದಿನ ಯಜಮಾನ್ಯ ಸಂಸ್ಕೃತಿಯನ್ನು ವಿರೋಧಿಸುತ್ತಲೇ ಮೇಲ್ವರ್ಗದ ಶರಣರ ಧೋರಣೆಯ ವಿರುದ್ಧ ಪರ್ಯಾಯ ಆಲೋಚನೆಯ ದಿಕ್ಕನ್ನು ಕಾಣಲು ಬಯಸುತ್ತಾನೆ.

ಮಾದಾರ ಚನ್ನಯ್ಯ ಮತ್ತು ಡೋಹರ ಕಕ್ಕಯ್ಯ

ಇವರು ಬಸವಣ್ಣನ ಹಿರಿಯ ಸಮಕಾಲೀನರು. ಅತ್ಯಂತ ಕೆಳವರ್ಗದಿಂದ ಬಂದ ಮಾದಾರ ಚೆನ್ನಯ್ಯನನ್ನು ಜೇಡರ ದಾಸಿಮಯ್ಯ ಸ್ಮರಿಸುತ್ತಾನೆ. ಇಬ್ಬರ ಬಗ್ಗೆಯೂ ನಮಗೆ ಐತಿಹಾಸಿಕವಾಗಿ ಅತ್ಯಲ್ಪ ವಿವರ ಮಾತ್ರ ಗೊತ್ತಾಗುತ್ತದೆ. ಡೋಹರ ಕಕ್ಕಯ್ಯ ಬಸವಣ್ಣನಿಗೆ ವೈಯಕ್ತಿಕವಾಗಿ ಬಹಳ ಆತ್ಮೀಯನಾಗಿದ್ದು, ಅವನ ಹರಕೆಯಿಂದ ಚನ್ನಬಸವಣ್ಣ ಹುಟ್ಟಿದ ಎಂದು ಕತೆಗಳಿವೆ. ಈ ಇಬ್ಬರನ್ನು ಎಲ್ಲಾ ವಚನಕಾರರೂ ಅತ್ಯಂತ ಆತ್ಮೀಯವಾಗಿ ಸ್ಮರಿಸಿದ್ದಾರೆ. ''ಬಸವಣ್ಣ ಚನ್ನಯ್ಯನನ್ನು ತನ್ನ ವಚನಗಳಲ್ಲಿ ಇಪ್ಪತ್ತೊಂಬತ್ತು ಬಾರಿ ಕಕ್ಕಯ್ಯನನ್ನು ಹನ್ನೊಂದು ಬಾರಿ ನೆನೆದಿದ್ದಾನೆ.''[೨೧] ''ಇಲ್ಲಿಯ ಚನ್ನಯ್ಯ ಚೋಳನ

ಹತ್ತಿರವಿದ್ದ ಚನ್ನಯ್ಯನೇ. ಏಕೆಂದರೆ ಬಸವ ಚನ್ನಯ್ಯನ ಅಂಬಲಿಯನ್ನು ಶಿವ ಉಂಡುದು ಚೋಳನ ಹತ್ತಿರ ಚನ್ನಯ್ಯ ಕೆಲಸಕ್ಕೆ ಇದ್ದುದ್ದು ಇವುಗಳನ್ನು ಸ್ಮರಿಸಿದ್ದಾನೆ.''[೨೨]

''ಈ ಚನ್ನಯ್ಯನ ಭಕ್ತಿ ಬಸವಣ್ಣನಿಗೆ ಆದರ್ಶ. ತಾನು ಅವನ ಬಂಟ, ದಾಸನ ಮಗನ ಮಗ, ಮಗ ಮೊಮ್ಮಗ ಮರಿಮಗನೆಂದು ಬಗೆ ಬಗೆಯಾಗಿ ತನ್ನ ವಚನದಲ್ಲಿ ಹೇಳಿಕೊಂಡಿದ್ದಾನೆ. ಬಸವಣ್ಣನ ವಚನಗಳನ್ನು ಆಧರಿಸಿ ಹೇಳುವುದಾದರೆ ಅವನ ಗೌರವಕ್ಕೆ ಚನ್ನಯ್ಯನಷ್ಟು ಪಾತ್ರನಾದ ಭಕ್ತ ಮತ್ತೊಬ್ಬನಿಲ್ಲ. ಕಕ್ಕಯ್ಯನನ್ನು ಬಸವಣ್ಣ ತನ್ನ ದೊಡ್ಡಪ್ಪನೆಂದು ಕರೆದುಕೊಂಡಿದ್ದಾನೆ. ಚನ್ನಯ್ಯನ ಮನೆಯ ದಾಸಿಯ ಮಗ ಕಕ್ಕಯ್ಯನ ಮನೆಯ ದಾಸಿಯ ಮಗಳು ಇಬ್ಬರೂ ಬೆರಣೆಯಾಯಲು ಹೋಗಿ ಸಂಗವನ್ನು ಮಾಡಿದ್ದರಿಂದ ಹುಟ್ಟಿದೆನೆಂದು ಒಂದು ಕಡೆ ಹೇಳಿಕೊಂಡಿದ್ದಾನೆ.''[೨೩]

ಮಾದಾರ ಚನ್ನಯ್ಯ ಮತ್ತು ಡೋಹರ ಕಕ್ಕಯ್ಯರನ್ನು ಬೇರೆ ಬೇರೆ ವಚನಕಾರರು ಬಹುವಾಗಿ ಪ್ರಶಂಸಿಸಿದ್ದಾರೆ. ಡೋಹರಂಗೆ ಹೊಲೆಯರಿಗೆ ಶಿವನು ಒಲಿದನೆಂದು ಅಂಬಿಗರ ಚೌಡಯ್ಯ ಹೇಳುವಾಗ ಸ್ಪಷ್ಟವಾಗಿ ಅವರಿಬ್ಬರೂ ಕಕ್ಕಯ್ಯ ಚನ್ನಯ್ಯರೇ ಎಂಬಲ್ಲಿ ಅನುಮಾನವಿಲ್ಲ. ಚೌಡಯ್ಯನ ಪ್ರಕಾರ ಮತಗಳು ಮನುಷ್ಯರು ಮಾಡಿಕೊಂಡ ಕೃತಕ ಏರ್ಪಾಟುಗಳು ಈ ಮತಗಳು ಮತದ ಅಸ್ಪೃಶ್ಯತೆ ಇತ್ಯಾದಿ ಕಟ್ಟುಪಾಡುಗಳು ಬೇಡ, ಜೇಡ, ಡೋಹರ ಹೊಲೆಯರಿಗೆ ಅನ್ವಯವಾಗಲಿ ಎಂದು ಮನುಷ್ಯರು ಹೇಳಲೇಬೇಕು. ಆದರೆ ಶಾಸ್ತ್ರದ ಆ ಕಟ್ಟುಪಾಡುಗಳನ್ನು ಭಕ್ತರ ದಾರಿಯಲ್ಲಿ ಒಡ್ಡಿದರೆ ಕಲ್ಲು ಮುಳ್ಳು ಮೂಡಿಯಾವು ಎನ್ನುತ್ತಾನೆ. ಶಾಸ್ತ್ರಗಳು ಭಕ್ತರಿಗೆ ನಿರ್ಬಂಧಗಳನ್ನು ಹಾಕುವಲ್ಲಿ ನಿಷ್ಫಲವೆನ್ನುವ ಮಾತನ್ನು ಇನ್ನೊಂದು ವಚನದಲ್ಲೂ ಹೇಳುತ್ತಾನೆ. ಚನ್ನಬಸವಣ್ಣ ಸಿದ್ಧರಾಮರೂ ''ಮಾದರನಲ್ಲಿ ಉಂಡ ಶಿವನು'' ''ಚೋಳನ ಬೋಜನವನೊಲ್ಲದೆ ಚೆನ್ನಯ್ಯನ ಕೂಡ ಜಾತಿಗೆಟ್ಟು ಮೈಗೊಟ್ಟು ಒಲಿದೆ ದೇವಾ''[೨೪]

ಮಾದಾರ ಚನ್ನಯ್ಯನ ವಚನಗಳಲ್ಲಿ ಮನುಷ್ಯರನ್ನು ನಾಲ್ಕು ವರ್ಣಗಳಾಗಿ ವಿಂಗಡಿಸುವುದು ತಪ್ಪೆಂದು ನೀಚ-ಶ್ರೇಷ್ಠವೆಂಬ ಎರಡು ಕುಲಗಳೇ ಹೊರತು ಹದಿನೆಂಟು ಜಾತಿಗಳಿಲ್ಲವೆಂದೂ ಹೇಳುತ್ತಾನೆ. ಯಾವನ ನಡೆ ನುಡಿಗಳು ಸಮಂಜಸವಾಗಿವೆಯೋ ಅವನಿಗೆ ಕುಲ, ಹೊಲೆ, ಸೂತಕಗಳಿಲ್ಲವೆಂದು ಹೇಳಿ ಆಚಾರವೇ ಕುಲ ಅನಾಚಾರವೇ ಹೊಲೆ ಎಂಬ ಸೂತ್ರ ವಾಕ್ಯವನ್ನು ಕೊಟ್ಟಿದ್ದಾನೆ. ಮಾದಾರ ಚನ್ನಯ್ಯ ವಿಶೇಷವಾಗಿ ಜಾತಿ ಸಮಸ್ಯೆ ಕುರಿತು ಪ್ರಸ್ತಾಪಿಸಿರುವುದು ಸಹಜವಾಗಿದೆ. ಚರ್ಮ ಹದ ಮಾಡುವುದು ಇವನ ಮುಖ್ಯ ಕಸುಬು. ಚನ್ನಯ್ಯ ಕೀಳು ಜಾತಿಯಲ್ಲಿ ಹುಟ್ಟಿದವನೆಂದು ತಾನೇ ಹೇಳಿಕೊಂಡಿದ್ದಾನೆ. ಹೀನ ಕುಲದ ಶಾಪ ಅವಮಾನಗಳನ್ನು ಹೊತ್ತು ಬದುಕುತ್ತಿದ್ದ ಕಕ್ಕಯ್ಯನಂಥವರಿಗೆ ದೊರಕಿದ ಭಕ್ತಿಯ ಸ್ವಾತಂತ್ರ್ಯ ತೀವ್ರವಾದ ವಾತಾವರಣವನ್ನು ಸೃಷ್ಟಿಸಿತು. ಉಳಿದ ವಚನಕಾರರಿಗೆ ಭಕ್ತಿ ಗಮನಾರ್ಹವಲ್ಲದ ಮಾಮೂಲಿ ವಿಷಯವಾಗಿದ್ದರೆ ಕಕ್ಕಯ್ಯನಂಥವರಿಗೆ ಅದು ಅಪೂರ್ವ ಧಾರ್ಮಿಕ, ಸಾಮಾಜಿಕ ಅವಕಾಶವಿದ್ದು ಅದನ್ನು ಅವರು ಮನಃಪೂರ್ವಕ ಶ್ರದ್ಧೆಯಿಂದ ಆಚರಿಸಿ ತೃಪ್ತಿ ಪಡೆದರು.

ಹೀಗೆ ಕೆಳವರ್ಗದಲ್ಲಿ ಹುಟ್ಟಿದ ಮಾದಾರ ಚನ್ನಯ್ಯ ಹಾಗೂ ಡೋಹರ ಕಕ್ಕಯ್ಯನವರು ಮೇಲ್ವರ್ಗದ ವಚನಕಾರರಿಗೆ ಪರ್ಯಾಯವಾಗಿ ತಮ್ಮ ಚಿಂತನೆಗಳನ್ನು ಆತ್ಮ ವಿಶ್ವಾಸದಿಂದ ಹರಿಸಿರುವುದು ಕಂಡುಬರುತ್ತದೆ. ಹಲವು ವಿದ್ವಾಂಸರ ಮೇಲಿನ ಅನೇಕ ಉಲ್ಲೇಖಿತ ಹೇಳಿಕೆಗಳು ಇವುಗಳನ್ನು ದೃಢಪಡಿಸುತ್ತವೆ.

ಮೋಳಿಗೆ ಮಾರಯ್ಯ

ಮೋಳಿಗೆ ಮಾರಯ್ಯನು ಕೆಳವರ್ಗದ ಪ್ರಮುಖ ವಚನಕಾರ. ಹನ್ನೆರಡನೆಯ ಶತಮಾನದಲ್ಲಿ ನಡೆದ ವಚನ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದವನು. ವೀರಶೈವ ಧರ್ಮದ ದೃಷ್ಟಿಯಲ್ಲಿಯೂ ಆತನಿಗೆ ಮುಖ್ಯ ಸ್ಥಾನವಿದೆ. ಮೋಳಿಗೆ ಮಾರಯ್ಯ ಮೂಲತಃ ಕಾಶ್ಮೀರದವನು ಎಂಬ ಬಗ್ಗೆ ಸಂಶಯವೂ ಇದೆ. ವಚನ ಚಳುವಳಿಯ ಕೇಂದ್ರ ವ್ಯಕ್ತಿಯಾದ ಬಸವಣ್ಣನ ವರ್ಚಸ್ಸು ಆಕರ್ಷಕ ಗುಣ ಇವುಗಳನ್ನು ಸಂಕೇತಿಸಲು ಅವನೆಡೆಗೆ ಬಹಳ ದೂರದಿಂದ ಆಸ್ತಿ-ರಾಜ್ಯಗಳನ್ನೆಲ್ಲ ಬಿಟ್ಟು ಜನರು ಬಂದರು. ರಾಜ್ಯವನ್ನೇ ತೊರೆದು ಬಂದ ಮಾರಯ್ಯ ಕಡುಬಡವನೆಂದು ಅವನಿಗೆ ತಿಳಿಯದಂತೆ ಚಿನ್ನವನ್ನು ಬಚ್ಚಿಟ್ಟು ಬಂದ. ಬಸವಣ್ಣನ ವರ್ತನೆ ವಿರೋಧಾಭಾಸದಿಂದ ಕೂಡಿದ ತ್ಯಾಗವಾಗಿದೆ. ಮೋಳಿಗೆ ಮಾರಯ್ಯನ ವಚನಗಳಲ್ಲಿ ವಸ್ತು ವೈವಿಧ್ಯವಿಲ್ಲ, ದೃಷ್ಟಿ ವೈವಿಧ್ಯವೂ ಇಲ್ಲ. ಬಸವಣ್ಣನ ವಚನಗಳ ಜೊತೆಗೆ ಇವನ ವಚನಗಳನ್ನು ಹೋಲಿಸಿದರೆ ಈ ಅಂಶ ವ್ಯಕ್ತವಾಗುತ್ತದೆ.

ಬಸವಣ್ಣನ ವಚನಗಳ ವ್ಯಾಪ್ತಿಯಿಂದ ಹಾಗೆಯೇ ಅಲ್ಲಮನ ಗಾಢ ಅನುಭವದ ಕಾವ್ಯಾಭಿವ್ಯಕ್ತಿ ಮೋಳಿಗೆ ಮಾರಯ್ಯನಿಗಿಲ್ಲ. ಅಕ್ಕಮಹಾದೇವಿಯ ವೈಯುಕ್ತಿಕ ತುರ್ತು ಅವನ ವಚನಗಳಲ್ಲಿಲ್ಲ. ಹಾಗೆಯೇ ಮತಾಚರಣೆಯ ಕ್ರೋಡೀಕರಣವಿಲ್ಲ, ಬಿರುಸಿಲ್ಲ, ಆಕ್ರೋಶವಿಲ್ಲ ಬಹುತೇಕ ವಚನಕಾರರಂತೆ ಮೋಳಿಗಯ್ಯನೂ ತನ್ನ ನೂರಾರು ವಚನಗಳಲ್ಲಿ ಆಧ್ಯಾತ್ಮಿಕ ಅನುಭವದ ವಿಶ್ಲೇಷಣೆ ನಡೆಸುತ್ತಾನೆ. ಸಾಕಷ್ಟು ಸಂಖ್ಯೆಯಲ್ಲಿ ಬೆಡಗಿನ ವಚನಗಳನ್ನು ರಚಿಸಿದ್ದಾನೆ. ಮಾರಯ್ಯ ಮೂಲತಃ ಕಟ್ಟಿಗೆ ಮಾರುವವನು. ಈತ ಕಾಡಿನಲ್ಲಿ ಕಟ್ಟಿಗೆಗಳನ್ನಾಯ್ದು ತಂದು ಮಾರುವ ಕಾಯಕದವನು. ಆದರೆ ಮೋಳಿಗೆ ಮಾರಯ್ಯ ತನ್ನ ಕಾಯಕದ ಅನುಭವವನ್ನೇ ಬೆಡಗಿನ ವಚನದ ರೂಪದಲ್ಲಿ ಹೇಳುತ್ತಾ ಸಾಮಾನ್ಯ ಕಾಯಕ ಕೂಡ ಎಷ್ಟು ಪವಿತ್ರವಾದುದು ಎಂಬುದನ್ನು ಮನಗಾಣಿಸುತ್ತಾನೆ. ಮೋಳಿಗೆ ಮಾರಯ್ಯನ ಅಭಿವ್ಯಕ್ತಿ ಅತ್ಯಂತ ಶಾಂತ ಸ್ವರೂಪದ್ದಾಗಿದ್ದು ಅಂತರ್ಯದಲ್ಲಿ ಮೇಲುವರ್ಗದ ಧೋರಣೆಗೆ ಸೌಮ್ಯ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತದೆ.

ಹೀಗೆ ಮೋಳಿಗೆ ಮಾರಯ್ಯ ಕೆಳವರ್ಗದ ವಚನಕಾರರಲ್ಲಿ ಈತನು ಕೂಡ ಮುಖ್ಯನಾಗುತ್ತಾನೆ. ವಚನ ಚಳುವಳಿಯ ಅಂದಿನ ಯಜಮಾನ್ಯ ಸಂಸ್ಕೃತಿಯನ್ನು ವಿರೋಧಿಸಿದ ಶರಣ.

ಕಾಳವ್ವೆ

ಈಗಾಗಲೇ ಹೇಳಿದಂತೆ ಹನ್ನೆರಡನೆಯ ಶತಮಾನ ತುಂಬಾ ಮಹತ್ವಪೂರ್ಣವಾದ ಕಾಲಘಟ್ಟ. ಈ ಕಾಲಘಟ್ಟದಲ್ಲಿ ಅನೇಕ ಕೆಳವರ್ಗದ ವಚನಕಾರರು, ವಚನಕಾರ್ತಿಯರು ಹಾದುಹೋಗುತ್ತಾರೆ. ಕಾಳವ್ವೆ ಈ ಶತಮಾನದ ಇಪ್ಪತ್ತೇಳು ವಚನಕಾರ್ತಿಯರಲ್ಲಿ ಏಕೈಕ ಅಸ್ಪೃಶ್ಯ ವಚನಕಾರ್ತಿಯಾಗಿ ಕಂಡುಬರುತ್ತಾಳೆ. ''ಹೊಟ್ಟೆಪಾಡಿಗಾಗಿ ಭಕ್ತರ ಪೂಜೆಯನ್ನು

ಕೈಗೊಳ್ಳುವ ಜಂಗಮರನ್ನು ಅವರ ಸೇವೆ ಮಾಡುವ ಭಕ್ತರನ್ನು ನಾಯಕ ನರಕಕ್ಕೆ ಯೋಗ್ಯರು ಎಂದು ಅವಳು ತೀರ್ಮಾನಿಸಿದ್ದಾಳೆ.''[೨೫] ಈಕೆಯ ವಚನಗಳಲ್ಲಿ ದಿಟ್ಟತನದ ಸೂಚಕಗಳು ಕಂಡುಬರುತ್ತವೆ. ಸತ್ಯಶುದ್ಧವಿಲ್ಲದುದು ಕಾಯಕವಲ್ಲ ವ್ಯಕ್ತಿ ತನ್ನ ಉದ್ಯೋಗದಲ್ಲಿ ಪ್ರಾಮಾಣಿಕತೆಯನ್ನು ಸಾಧಿಸುವುದನ್ನು ಒತ್ತಿ ಹೇಳಿದ್ದಾಳೆ. ಶಿವಭಕ್ತರು, ಪ್ರಾತಃಕಾಲ ಗುರುಲಿಂಗ ಜಂಗಮಕ್ಕೆ ಶರಣೆನ್ನದೆ ಒಂಟಿ ಬ್ರಾಹ್ಮಣನಿಗೆ ವಂದಿಸಿದರೆ ಶಾಶ್ವತ ಪಾಪ ಬರುತ್ತದೆ ಎಂದು ಹೇಳುತ್ತಾಳೆ. ಅವಳು ತನ್ನ ಜಾತಿಯ ಜನರ ಪರವಾಗಿ ನಿಂತು ದಿಟ್ಟವಾಗಿ ವಾದಿಸಿದ ಏಕೈಕ ವಚನಕಾರ್ತಿ. ''ತನ್ನ ಜಾತಿಯನ್ನು ಕೀಳಾಗಿ ಭಾವಿಸುವುದನ್ನು ಸ್ಪಷ್ಟೋಕ್ತಿಗಳಲ್ಲಿ ಪ್ರತಿಭಟಿಸಿದ್ದಾಳೆ. ಕುರಿ, ಕೋಳಿ, ಮೀನು ತಿನ್ನುವವರು ಕುಲಜರು. ಶಿವನ ಅಭಿಷೇಕಕ್ಕೆ ಹಾಲು ಕೊಡುವ ಹಸುವನ್ನು ತಿನ್ನುವ ಕೆಳಜಾತಿಯವರು ಎಂದು ಸವಾಲು ಹಾಕುವುದಲ್ಲದೆ ಬ್ರಾಹ್ಮಣನು ಕೆಳವರ್ಗದವರಿಗಿಂತ ಹೇಗೆ ಶ್ರೇಷ್ಠ ಎಂದೂ ಪ್ರಶ್ನಿಸುತ್ತಾಳೆ.''[೨೬]

ಹೀಗೆ ವಚನ ಚಳುವಳಿಯಲ್ಲಿ ಏಕೈಕ ಕೆಳವರ್ಗದ ವಚನಕಾರ್ತಿಯಾಗಿ ಅಂದಿನ ಡೋಲಾಯ ಸ್ಥಿತಿಯಲ್ಲಿದ್ದ ಮೇಲ್ವರ್ಗದ ಶರಣರ ವಿರುದ್ಧ ಕಾಳವ್ವೆ ಎಂಬ ವಚನಕಾರ್ತಿ ಅಪರ ಕಟ್ಟುಪಾಡುಗಳನ್ನು ವಾಮನೇಮಗಳನ್ನು ಖಂಡಿಸುವುದರ ಮೂಲಕ ವಚನ ಚಳುವಳಿಗೆ ಹೊಸದೊಂದು ಆಯಾಮವನ್ನು ಕೊಟ್ಟಳು.

೨ : ೨. ೨ ವೈದಿಕ ಭಕ್ತಿ ಪಂಥ ಮತ್ತು ಕೆಳಜಾತಿಗಳು

ಭಾರತದಲ್ಲಿ ಕ್ರಿಸ್ತಪೂರ್ವದಿಂದಲೂ ಬೆಳೆದು ಬಂದ ಧಾರ್ಮಿಕ ಬೆಳವಣಿಗೆಗಳು ಹೊಸ ಸಾಂಸ್ಕೃತಿಕ ಆಶಯಗಳನ್ನಿಟ್ಟುಕೊಂಡೇ ಜನ್ಮ ತಾಳಿವೆ. ಅತ್ಯಂತ ಗಾಢ ಪ್ರಭಾವ ಹಾಗೂ ಬೇರುಗಳನ್ನು ಬಿಡುತ್ತಿದ್ದ ವೈದಿಕ ಪಂಥದ ವಿರುದ್ಧ ಬೌದ್ಧ-ಜೈನ ಪಂಥಗಳು ಮುಖ್ಯವಾಗಿ ಇಲ್ಲಿ ಬಂಡೆದ್ದಂತವುಗಳು ಆಗಿವೆ. ಮಧ್ಯಕಾಲೀನ ಯುಗದ ಸಂದರ್ಭದಲ್ಲಿ ಭಾರತದ ಎಲ್ಲಾ ಕಡೆಗಳಲ್ಲಿ ಹಬ್ಬಿದ ಭಕ್ತಿಪಂಥದ ವಿಶಿಷ್ಟ ಸ್ವರೂಪಗಳೂ ಸಹ ಮೂಲಭೂತವಾಗಿ ವೈದಿಕ ಧರ್ಮದ ಜಡಗೊಂಡ ಸಂಸ್ಕೃತಿಯ ವಿರುದ್ಧ ಬಂಡೆದ್ದವುಗಳೇ ಆಗಿವೆ. ಭಕ್ತಿಪಂಥದ ಬೆಳವಣಿಗೆಗಳು ದಕ್ಷಿಣದಿಂದ ಕಾಲಾನುಕ್ರಮದಲ್ಲಿ ಉತ್ತರ ಭಾರತದಲ್ಲೆಲ್ಲ ಹರಡಿದವು. ಈ ಭಕ್ತಿಪಂಥದ ಬೆಳವಣಿಗೆಗಳೆಲ್ಲವೂ ಜಾತಿವ್ಯವಸ್ಥೆ ಕಟ್ಟುಪಾಡುಗಳನ್ನು ಮುಖ್ಯವಾಗಿ ನಿರಾಕರಿಸಿದೆ ಎನ್ನುವುದನ್ನು ಗಮನಿಸಬೇಕು. ವೈದಿಕ ಭಕ್ತಿಪಂಥಕ್ಕೆ ಒದಗಿದಂಥ ವೈದಿಕ ವರ್ಗವು ಭಕ್ತಿಯ ನೆಲೆಗಳನ್ನು ಜಾತಿಯ ಶ್ರೇಣೀಕರಣದ ಸ್ವರೂಪದಲ್ಲೇ ಅಳವಡಿಸಿಕೊಂಡಿದೆ. ಭಕ್ತಿ ಚಳುವಳಿಯು ಜಾತಿಯ ಶ್ರೇಣೀಕರಣವನ್ನು ಮುರಿಯುವ ಆಶಯವನ್ನು ಹೊಂದಿತ್ತು.

ವಚನ ಚಳುವಳಿ ಬಹುತೇಕ ಕೆಳಜಾತಿ ಕೆಳವರ್ಗ ಜನತೆಯ ಕಾರಣದಿಂದಲೇ ಒಂದು ದೊಡ್ಡ ಶಕ್ತಿಯಾಗಲು ಕಾರಣವಾಯಿತು. ವರ್ಣವ್ಯವಸ್ಥೆಯ ಶ್ರೇಣೀಕರಣವನ್ನು ಮುರಿದು ಸಮಾನ ವ್ಯಕ್ತಿತ್ವದ ಆಧಾರದ ಮೇಲೆ ಧಾರ್ಮಿಕ ಪಂಥವೊಂದನ್ನು ನಿರ್ಮಾಣ ಮಾಡುವ ಕೆಲಸ ಆಯಿತು. ''ವೈದಿಕ ವರ್ಗದ ಎಲ್ಲಾ ಸಿದ್ಧಾಂತ ಆಚರಣೆಗಳ ವಿರೋಧವಷ್ಟೇ ಅಲ್ಲದೆ ಹಿಂದೂ ಧರ್ಮದ ಕಕ್ಷೆಯೊಳಗೆ ತರಲಾಗಿದ್ದ ಕೆಳವರ್ಗಗಳ ಆಚರಣೆ ನಂಬಿಕೆಯ ಅಂಶಗಳನ್ನು ವಿರೋಧಿಸಬೇಕಾಗಿತ್ತು.''[೨೭] ಏಕೆಂದರೆ ಇವೆರಡೂ

ತಮ್ಮ ಶ್ರೇಣೀಕೃತ ವ್ಯವಸ್ಥೆಯಲ್ಲೇ ಸುಸಂಬದ್ಧವಾದ ಸಂವಹನಗಳನ್ನು ಸ್ಥಾಪಿಸಿಕೊಂಡವು. ''ಹಿಂದೂ ವ್ಯವಸ್ಥೆಯ ರಚನಾ ಸ್ವರೂಪವನ್ನೇ ಪ್ರಶ್ನಿಸಿದ ವಚನಕಾರರು ಉಳಿದ ಭಕ್ತಿ ಚಳುವಳಿಗಳ ಹಾಗೆ ಕೇವಲ ನೀತಿ ನೆಲೆಯಲ್ಲಿಯೇ ನಿಲ್ಲದೆ ಹೊಸ ಸಾಮಾಜಿಕ ಸ್ವರೂಪಗಳ ಹೊಸ ಸಿದ್ಧಾಂತಗಳ ಆವಿಷ್ಕಾರ ಮಾಡುವುದನ್ನು ತಮ್ಮ ಮುಖ್ಯ ಗುರಿಯಾಗಿಟ್ಟುಕೊಂಡರು. ಜಾತಿ ಹಾಗೂ ವೃತ್ತಿಯ ನಡುವೆ ಇದ್ದಂಥ ಸಂಬಂಧದ ಹಳೆಯ ಸ್ವರೂಪವು ಒಂದು ವ್ಯತ್ಯಾಸದೊಡನೆ ಹಾಗೆಯೇ ಉಳಿಯಿತು. ಜಾತಿಯ ವಿವಿಧ ಬಗೆಗಳು ಇಲ್ಲವಾಗಿ ಒಂದೇ ಧರ್ಮದ ಅಡಿಯಲ್ಲಿ ವೃತ್ತಿಯ ತಮ್ಮ ಕ್ರಮವನ್ನು ಮುಂದುವರಿಸಲಾಯಿತು. ಆದರೆ ವೃತ್ತಿಗೂ ಸಾಮಾಜಿಕ ಅಂತಸ್ತಿಗೂ ಗಾಢ ಸಂಬಂಧವನ್ನು ರೂಪಿಸಿದ್ದ ಶ್ರೇಣೀಕೃತ ವ್ಯವಸ್ಥೆಯ ಗುಣಗಳನ್ನು ಸಂಪೂರ್ಣ ಹೋಗಲಾಡಿಸಲಿಲ್ಲ ಎನ್ನುವುದು ವಾಸ್ತವ ಸಂಗತಿಯೇ ಆಯಿತು.''[೫೮] ವಚನಕಾರರ ಕಾಲದಲ್ಲಿಯೇ ಈ ಬಗೆಯ ದ್ವಂದ್ವ ಬೆಳೆದು ಬಂದದ್ದನ್ನು ಕಾಣಬಹುದು.

''ಜೈನರು ವೀರಶೈವರು ಮತ್ತು ವೈದಿಕ ಭಕ್ತಿಪಂಥದ ಕವಿಗಳು ಸಾಮಾನ್ಯವರ್ಗದ ಆಚಾರ-ವಿಚಾರ ಖಂಡಿಸುವಲ್ಲಿ ಒಂದಾಗಿ ಸಂಘಟನಾ ಪ್ರಜ್ಞೆ ಕೆಲಸ ಮಾಡಿರುವುದು ಕುಂಡುಬರುತ್ತದೆ. ವೈದಿಕ ಮತದಿಂದ ಜೈನಮತಕ್ಕೆ ಮತಾಂತರವಾದ ಜೈನರ ವೈದಿಕ ಪ್ರಜ್ಞೆ ವೈದಿಕ ಮತದಿಂದ ವೀರಶೈವ ಮತಕ್ಕೆ ಮತಾಂತರವಾದ ವೀರಶೈವರ ವೈದಿಕ ಪ್ರಜ್ಞೆ ತಮ್ಮ ಮೂಲ ಸಂಸ್ಕಾರವಾದ ವೈದಿಕ ಪ್ರಜ್ಞೆಯೊಂದಿಗೆ ತಮ್ಮನ್ನು ತಾವು ಅನ್ಯ ಮತಗಳಿಗೆ ಮತಾಂತರವಾದ ಅನಂತರವೂ ಕಂಡುಕೊಂಡುದು ಉಚ್ಚವರ್ಗದ ಸಮಷ್ಠಿ ವೈದಿಕ ಪ್ರಜ್ಞೆಯಾಗಿ ಕೆಳವರ್ಗದವರ ಸಂಸ್ಕೃತಿಯನ್ನು ಖಂಡಿಸಿರುವುದು ಮುಂದೆ ಎಂದೆಂದೂ ತುಂಬಲಾರದ ಕಂದರವನ್ನು ಸಾಮಾನ್ಯ ಜನರ ನಡುವೆ ಸೃಷ್ಟಿಸಿತು.''[೫೯]

''ಇಲ್ಲಿ ಮುಖ್ಯವಾಗಿ ವೈದಿಕ ಸಂಸ್ಕೃತಿಯ ಅಪಮೌಲೀಕರಣದ ಮೂಲಕವೇ ಕಾಣಿಸಿಕೊಂಡ ಬೌದ್ಧರು ಚಾರ್ವಕರು ಅಥವಾ ವಚನಕಾರರು ಪ್ರತಿ ಸಂಸ್ಕೃತಿಯೊಂದನ್ನು ಕಟ್ಟಿಕೊಡುವ ಹಾದಿಯಲ್ಲಿ ನಡೆದರು.''[೬೦] ''ವೈದಿಕ ಭಕ್ತಿಪಂಥದವರ ದೃಷ್ಟಿಯಲ್ಲಿ ಕೆಳಜಾತಿಗಳು ಅನ್ಯಾಯಕ್ಕೆ ಒಳಗಾಗಿ ನಾಶವಾಗುತ್ತವೆ ಆದರೆ ಅರ್ಥಪೂರ್ಣ ಪ್ರತಿಭಟನೆಯಲ್ಲಿ ನಾಶವೊಂದೇ ಕೆಲಸವಲ್ಲ, ಕೆಟ್ಟದ್ದರ ನಾಶದ ನಂತರ ಒಳ್ಳೆಯದೊಂದನ್ನು ಬದಲಿಗೆ ಕಟ್ಟಿಕೊಳ್ಳುವ ಹೊಣೆ ಇರಲೇಬೇಕು. ಈ ಕಟ್ಟುವ ಕ್ರಿಯೆ ಪ್ರತಿಸಂಸ್ಕೃತಿ ಎನಿಸಿಕೊಳ್ಳುತ್ತದೆ.''[೬೧] ಮೇಲ್ವರ್ಗದ ಶರಣರು ತನ್ನನ್ನು ತಾನು ಶ್ರೇಷ್ಠವೆಂದು ಅಥವಾ ಕೆಳಜಾತಿಯವರು ತನ್ನನ್ನು ತಾನು ಕೀಳೆಂದು ಭಾವಿಸುವುದಕ್ಕೆ ವಿರುದ್ಧವಾದ ನಂಬಿಕೆಗಳು ಕೂಡ ಈ ಶ್ರೇಣೀಕೃತ ಸಂಸ್ಕೃತಿಗಳಲ್ಲಿದೆ. ಕೆಳಜಾತಿಯ ವಚನಕಾರರು ನಂತರ ಶಿವಭಕ್ತರಾದ ಮೇಲೆ ತಮ್ಮ ಹುಟ್ಟಿನ ಕೀಳರಿಮೆಯನ್ನು ಕಳೆದುಕೊಂಡು ಸ್ವಾಭಿಮಾನ ಗಳಿಸಿದಂತೆ ಮೇಲು ಜಾತಿಯಿಂದ ಬಂದ ವಚನಕಾರರು ತಮ್ಮ ಮೇಲರಿಮೆಯನ್ನು ನಿರಾಕರಿಸಿಕೊಳ್ಳುತ್ತಾ ಹೋಗುತ್ತಾರೆ.

ವೈದಿಕ ಭಕ್ತಿಪಂಥಗಳು ಸಂಸ್ಕೃತವನ್ನು ಕೈಬಿಟ್ಟಿದ್ದು ಕೈತಪ್ಪಿ ಹೋಗುತ್ತಿದ್ದ ಕೆಳವರ್ಗದ ಸಂಸ್ಕೃತಿಯನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳುವ ತಂತ್ರವಾಗಿ ಮಾತ್ರ ವೈದಿಕ ಸಂಸ್ಕೃತಿಯ ಮೂಲ ಆಕರ ಗ್ರಂಥಗಳನ್ನು ವಚನಕಾರರು ತಿರಸ್ಕರಿಸಿ ಅವರ ಬದಲಿಗೆ ಮತ್ತೆ ಕಟ್ಟಿಕೊಟ್ಟ ಪ್ರತಿಸಂಸ್ಕೃತಿಯಲ್ಲಿ ಸಮಾಜದ ಎಲ್ಲಾ ಕೆಳವರ್ಗದವರು ಸಾಮಾಜಿಕ ಸಮಾನತೆಯನ್ನು ಪಡೆಯಲು ಸಾಧ್ಯವಾಯಿತು.

ಹೀಗೆ ವೈದಿಕ ಭಕ್ತಿಪಂಥಗಳಲ್ಲಿ ಕೆಳಜಾತಿಗಳ ಪರ್ಯಾಯ ಆಲೋಚನೆಗಳನ್ನು ಗಮನಿಸಬಹುದಾಗಿದೆ. ಒಟ್ಟಿನಲ್ಲಿ ಭಾರತದ ಭಕ್ತಿಪಂಥದ ಧೋರಣೆಯ ಹಿನ್ನೆಲೆಯಲ್ಲಿ ಹೇಳುವುದಾದರೆ ವೈದಿಕ ಮೂಲದ ಭಕ್ತಿಪಂಥಗಳು ಕೇವಲ ನೀತಿಯನ್ನು ಬೋಧಿಸಿ ತಮ್ಮ ಕರ್ತವ್ಯ ಮುಗಿಯಿತೆಂದು ಕೈತೊಳೆದುಕೊಂಡರೆ ಸಾಮಾಜಿಕ ಎಚ್ಚರದಿಂದ ಹುಟ್ಟಿಕೊಂಡ ಭಕ್ತಿಪಂಥಗಳು ಮನುಷ್ಯನ ತಾರತಮ್ಯಭಾವದ ಬಗ್ಗೆ ನಿರ್ದಾಕ್ಷಿಣ್ಯ ಅಭಿಪ್ರಾಯ ವ್ಯಕ್ತಪಡಿಸಿದರು. ವಚನ ಚಳುವಳಿಯಲ್ಲಿ ಮೇಲು ನೋಟಕ್ಕೆ ಈ ಎರಡು ಬಗೆಯ ಶರಣರನ್ನು ಕಾಣಬಹುದಾದರೂ ಕೆಳವರ್ಗದ ವಚನಕಾರರ ಭಕ್ತಿಯನ್ನು ಮೀರಿದ ಸಾಮಾಜಿಕ ಎಚ್ಚರ ಮತ್ತು ತಮ್ಮದೇ ಮೂಲದ ಪರ್ಯಾಯ ಸಂಸ್ಕೃತಿಯ ಹುಡುಕಾಟ ಗಮನಿಸಬೇಕಾದ ಅಂಶವಾಗಿದೆ.

೨ :೨.೩ ಹಲವು ಧಾರ್ಮಿಕ ಸಮುದಾಯಗಳ ಉಗಮ

ಮಧ್ಯಕಾಲೀನ ಕರ್ನಾಟಕದ ಸಂದರ್ಭದಲ್ಲಿ ಕರ್ನಾಟಕದಲ್ಲಿ ಮುಗಿದು ಹೋದ ಹಲವು ಸಾಂಸ್ಕೃತಿಕ ಬದಲಾವಣೆಗಳ ಕಾರಣಕ್ಕಾಗಿ ಇಂಥ ಹಲವಾರು ಸಮುದಾಯಗಳು ಉದಯಿಸಿಕೊಂಡವು. ಹನ್ನೆರಡನೆ ಶತಮಾನದ ಶರಣರ ಚಳುವಳಿ ಅಲ್ಲಿ ನಡೆದ ಜಾತಿ ಜಗಳ ಮತ್ತು ವರ್ಣ ಸಂಕರಗಳಿಂದ ಕೆಳಜಾತಿಗಳು ಎಚ್ಚೆತ್ತಿಕೊಂಡವು. ಈ ಸಂದರ್ಭದ ಪರಿಣಾಮವಾಗಿ ಹಲವು ಕೆಳವರ್ಗದ ಸಮುದಾಯಗಳು ಪ್ರಚಾರಕ್ಕೆ ಬಂದವು. ಮುಖ್ಯವಾಗಿ ''ಇಲ್ಲಿ ಧಾರ್ಮಿಕ ಸಮುದಾಯ ಉಗಮವನ್ನು ನಿಖರವಾಗಿ ಹೀಗೆಯೆ ಆಯಿತು ಎಂದು ಹೇಳುವುದಕ್ಕಾಗುವುದಿಲ್ಲ. ಇದು ವೇದ ಉಪನಿಷತ್ತುಗಳು ಹುಟ್ಟಿದ ಸಂದರ್ಭದಲ್ಲೇ ಈ ಸಮುದಾಯಗಳ ಉಗಮವಾಯಿತೆಂದು ಹೇಳುತ್ತಾರೆ. ಭಾರತದ ಸಾಂಸ್ಕೃತಿಕ ಸಂಪತ್ತು ಪ್ರಧಾನವಾಗಿ ಭಾರತೀಯ ದರ್ಶನ ಮತ್ತು ಧರ್ಮಗಳಲ್ಲಿ ದೊರಕುತ್ತವೆ. ಅದರ ದಾರ್ಶನಿಕ ಭಾವನೆಗಳು ಮತ್ತು ಧಾರ್ಮಿಕ ನಂಬಿಕೆಗಳಿಗೆ ವೇದ ಉಪನಿಷತ್ತುಗಳೇ ಉಗಮಸ್ಥಾನ''[೩೨] ಭಾರತದ ಸಾಂಸ್ಕೃತಿಕ ಸ್ಮಾರಕಗಳೇ ನಿರಂತರವಾಗಿ ಈ ಸಂಸ್ಕೃತಿಯ ಮುನ್ನಡೆಗೆ ಮಾರ್ಗಸೂಚಿಗಳಾಗಿವೆ. ಈ ಜಾಡನ್ನು ಹಿಡಿದೇ ಭಾರತವು ಕಾಲಕಾಲಕ್ಕೂ ಮೇಲೆ ಬಂದ ಆಘಾತಗಳಿಂದ ಪಾರಾಯಿತೆಂದು ಹೇಳಲು ಸಾಧ್ಯ.

''ಹನ್ನೆರಡನೆಯ ಶತಮಾನದ ಶರಣರು ಕುಲ ಏಳು ಹದಿನೆಂಟು ಜಾತಿಗಳು ಒಂದು ಎಂದು ಸಾರಿದ್ದ ಆಶಯ ನಂತರದ ಶತಮಾನಗಳಲ್ಲಿ ವೀರಶೈವಧರ್ಮದ ಆಚಾರ ಮಾರ್ಗದಿಂದ ಅನೇಕ ಸಮುದಾಯಗಳು ಹೊರಗುಳಿದವು.''[೩೩] ಹೀಗೆ ಹೊರಗುಳಿದ ಸಮುದಾಯಗಳಲ್ಲಿ ಕೆಳವರ್ಗದ ಕಾಯಕ ಜೀವಿಗಳ ಮತ್ತು ಕುಶಲ ಕರ್ಮಿಗಳ ಸಂಖ್ಯೆ ಹೆಚ್ಚಿದೆ. ಇಂತಹ ಸಂದರ್ಭದಲ್ಲಿ ಕೆಳವರ್ಗದ ಸಾಂಸ್ಕೃತಿಕ ನಾಯಕರಾದ ಮಂಟೇಸ್ವಾಮಿ ಮತ್ತು ಮಲೆಮಾದೇಶ್ವರರು ಈ ಕೆಳವರ್ಗದ ಜನರ ಆರಾಧ್ಯದೈವಗಳಾಗಿ ಅವರ ಸಮುದಾಯಗಳ ಮೂಲಕ ಗುರುತಿಸಿಕೊಂಡಿದ್ದಾರೆ. ಈ ನಾಯಕರನ್ನು ಅನುಸರಿಸಿದ ಸಮುದಾಯಗಳು ಮುಂದೆ ಧಾರ್ಮಿಕ ಸಮುದಾಯಗಳಾಗಿ ರೂಪುಗೊಂಡಿವೆ.

''ಜೈನ ಮತ್ತು ಬೌದ್ಧ ದರ್ಶಗಳ ಉದಯವು ಧಾರ್ಮಿಕ ಪ್ರವೃತ್ತಿಯ ಮೇಲೆ ತನ್ನ ಪರಿಣಾಮವನ್ನು ಬೀರಿತು. ಈ ದರ್ಶನಗಳೂ ಸಹ ತಮ್ಮ ತಮ್ಮ ತತ್ವಾನ್ವೇಷಣೆಯು ಸಾಗುತ್ತಾ ಹೋದಂತೆ ಧಾರ್ಮಿಕ ಪ್ರಶ್ನೆಗಳನ್ನು ಎತ್ತಬೇಕಾಯಿತು. ತರುವಾಯ ಒಂದು ರೀತಿಯ ಧಾರ್ಮಿಕ ಪಂಥದ ರೂಪವನ್ನೇ ಸ್ಥಾಪಿಸಿಕೊಳ್ಳಬೇಕಾಯಿತು. ಭಾರತೀಯ ಸಮಾಜದಲ್ಲಿ

ಧರ್ಮದ ಉಗಮವಾದ ಕಾಲವನ್ನು ಮೊಹೆಂಜೊದಾರೊ ಅನ್ವೇಷಣೆಗಳಿಗಿಂತಲೂ ಸುಮಾರು ಎರಡು ಸಾವಿರ ಅಥವಾ ಅದಕ್ಕಿಂತ ಹೆಚ್ಚು ವರ್ಷಗಳಷ್ಟು ಹಿಂದೆ ತಳ್ಳಲಾಗಿದೆ.''[೬೪] ಈ ರೀತಿ ಜೈನ ಬೌದ್ಧ ಹಾಗೂ ಭಾಗವತ ಧರ್ಮಗಳ ಕ್ರಾಂತಿಕಾರರು ಧಾರ್ಮಿಕ ಪಂಥಗಳ ಉದಯ ಸಂಪ್ರದಾಯಬದ್ಧ ವ್ಯವಸ್ಥೆಯ ಮೇಲೆ ತನ್ನ ಪ್ರತಿಕ್ರಿಯೆ ತೋರಿಸಿ ಅದರ ಸೂತ್ರಗಳು ಹೆಚ್ಚು ಸುಸಂಘಟಿತವಾದ ಹಾಗೂ ತಾರ್ಕಿಕವಾದ ಸ್ವರೂಪದಲ್ಲಿ ರೂಪುಗೊಳ್ಳುವಂತೆ ಮಾಡಿತು. ಮುಖ್ಯವಾಗಿ ಇಲ್ಲಿ ಧಾರ್ಮಿಕ ಸಮುದಾಯಗಳು ವೇದ ಉಪನಿಷತ್ತುಗಳು ಮತ್ತು ಧರ್ಮಗಳ ಮೂಲಕ ಉಗಮವಾಯಿತೆಂದು ಊಹಿಸಬಹುದು.

''ಆರ್ಯರು ಭಾರತಕ್ಕೆ ಬರುವುದಕ್ಕಿಂತ ಮೊದಲೇ ಈ ದೇಶದ ಜನಾಂಗ ಮತ್ತು ಸಂಸ್ಕೃತಿಗೆ ಸಾವಿರಾರು ವರ್ಷಗಳ ಚರಿತ್ರೆ ಇತ್ತೆಂಬುದನ್ನು ಮೆಗಸ್ತನೀಸನು ತಿಳಿಸುತ್ತಾನೆ.''[೬೫] ಭಾರತದ ನೂರಾ ಹದಿನೆಂಟು ಸ್ಥಳ ಜನ್ಯ ಬುಡಕಟ್ಟು ಸಮುದಾಯಗಳು ತಮ್ಮದೇ ಆದ ಸಂಸ್ಕೃತಿ ಮತ್ತು ದೇವರುಗಳನ್ನು ವಿಭಿನ್ನ ಆಚರಣೆಗಳನ್ನು ಹೊಂದಿದ್ದು ಆಯಾ ಬುಡಕಟ್ಟು ಸಮುದಾಯಗಳ ಹುಟ್ಟಿನೊಂದಿಗೆ ಧರ್ಮ ಮತ್ತು ಸಂಸ್ಕೃತಿಗಳು ಬೆರೆತುಕೊಂಡು ಬಂದಿದ್ದವು. ಈ ಹತ್ತು ಹಲವು ಉಪಸಂಸ್ಕೃತಿಗಳು ಪ್ರಕೃತಿಗೆ ತೀರ ಹತ್ತಿರವಾಗಿದ್ದು ಸ್ಪಂದನಶೀಲವಾದವುಗಳಾಗಿದ್ದವು. ಆದರೆ ಆರ್ಯರು ಭಾರತಕ್ಕೆ ಕಾಲಿರಿಸಿ ಬೇರೂರಿದ ಮೇಲೆ ಒಟ್ಟು ಈ ಒಂದು ಸಂಸ್ಕೃತಿಯ ಚಿತ್ರಣವೇ ಬದಲಾಯಿತು. ಆಯಾಯ ದೇವರ ಗುಡಿಯಲ್ಲಿ ಆಯಾಯ ದೇವತೆಗಳನ್ನೇ ಮೂಲ ಸ್ವರೂಪದಲ್ಲಿ ಪೂಜಿಸುವಷ್ಟು ಔದಾರ್ಯವನ್ನು ಆರ್ಯರು ಬೆಳೆಯುವುದಕ್ಕೆ ಬಿಡಲಿಲ್ಲ. ಇದರಿಂದ ಕಿರು ಸಂಸ್ಕೃತಿಗಳು ಅಪ್ರಧಾನವಾಗಿ ಪರಿಣಮಿಸಿದವು. ಈ ಸಂಸ್ಕೃತಿಗಳನ್ನು ಕ್ಷುದ್ರ-ಕ್ಷುಲ್ಲಕ ಆಚರಣೆಗಳ ಗೂಡೆಂದು ಕರೆದ ಆರ್ಯರು ವೈದಿಕ ಸಂಸ್ಕೃತಿಯೇ ಈ ದೇಶದ ನಿಜವಾದ ಸಂಸ್ಕೃತಿ ಸನಾತನ ಸಂಸ್ಕೃತಿ ಎಂದೆಲ್ಲಾ ಸಾರಿದರು. ನಂತರ ಸಮುದಾಯದ ಮನಸ್ಸಿನಲ್ಲಿ ಇದೇ ರೀತಿಯ ಭಾವನೆಯನ್ನೇ ಭಿತ್ತಿ ಬೆಳೆಸಿದರು. ಉಚ್ಚ ವರ್ಗದ ಆಚರಣೆಗಳೇ ನಿಜವಾದ ಸಂಸ್ಕೃತಿ ಎಂದು ಭ್ರಮೆಗೆ ತಳ್ಳಿದ್ದಲ್ಲದೆ ಅದರ ಅನುಕರಣೆಯಲ್ಲಿಯೇ ಕಿರು ಸಮುದಾಯಗಳಿಗೆ ಮುಕ್ತಿ ಎಂದು ಸಾರಿ ಸಮುದಾಯಗಳ ನಾಶಕ್ಕೆ ಕಾರಣರಾದರು. ಹೀಗೆ ಸಮುದಾಯಗಳ ಮೇಲೆ ಪ್ರಧಾನ ಸಂಸ್ಕೃತಿಯೊಂದು ಯಜಮಾನಿಕೆ ನಡೆಸಿದ್ದರ ಫಲವಾಗಿ ಕೆಳವರ್ಗದ ಸಮುದಾಯಗಳು ನಿರಂತರವಾಗಿ ಹತ್ತು ಹಲವು ಸುಧಾರಣೆಗಳು ಹಾಗೂ ನಗರೀಕರಣದ ಧಾಳಿಗೆ ಒಳಗಾಗುತ್ತಲೇ ಬಂದವು.

ಹೀಗೆ ರಾಜಕಾರಣ ಮತ್ತು ಧರ್ಮ ಒಂದಾಗಿ ಸೇರಿ ಸಮುದಾಯದ ಸಂಸ್ಕೃತಿಯ ಮೇಲೆ ಯುದ್ಧ ಸಾರಿತು. ಜೈನರು, ವೀರಶೈವರು ಮತ್ತು ವೈದಿಕರು ಒಂದಾಗಿ ಕಿರು ಸಂಸ್ಕೃತಿಗಳ ಮೇಲೆ ಧಾಳಿ ನಡೆಸಿದರು. ಈ ಹಿನ್ನೆಲೆಯಲ್ಲಿ ಸಮುದಾಯಗಳ ಅಧ್ಯಯನವು ತೀರ ಪ್ರಸ್ತುತವಾದದ್ದಾಗಿದೆ. ಚಿಕ್ಕ ಸಮುದಾಯಗಳನ್ನು ಒಳಹಾಕಿಕೊಂಡ ದೊಡ್ಡ ಪರಂಪರೆಯು ಇತಿಹಾಸಕ್ಕೆ ಎಸಗಿದ ಮೋಸಗಳನ್ನು ಅನಾವರಣಗೊಳಿಸುವ ಸಮುದಾಯಗಳ ಅಧ್ಯಯನವು ಸಾಹಿತ್ಯ, ಶಾಸನ, ಜಾನಪದ, ವದಂತಿ, ಪುರಾಣ, ಚರಿತ್ರೆ, ಆಚರಣೆ, ನಂಬಿಕೆ ಹೀಗೆ ವೈವಿಧ್ಯಮಯ ಆಕಾರಗಳನ್ನು ಬಯಸುತ್ತದೆ.

ಮಧ್ಯಕಾಲೀನ ಕರ್ನಾಟಕದ ಶೈವ, ವೈಷ್ಣವ ಹಾಗೂ ತಾಂತ್ರಿಕ ಪಂಥಗಳ ಹತ್ತು ಹಲವು ಆರಾಧನೆಗಳ ನಡುವೆಯೂ ತನ್ನದೇ ಆದ ವಿಶಿಷ್ಟತೆಯಲ್ಲಿ ಒಂದು ಬಲಿಷ್ಠ ಸಮುದಾಯವಾಗಿ ಈ ಸಮುದಾಯಗಳು ಉಗಮಗೊಂಡಿರಬಹುದು. ಯಾವುದೇ

ಸಮುದಾಯದ ಉಗಮಕ್ಕೆ ಆಯಾಯ ಸಮುದಾಯದ ನಾಯಕನೇ ಮುಖ್ಯನಾಗುತ್ತಾನೆ. ಇವತ್ತು ನಮಗೆ ತಿಳಿದಿರುವಂತೆ ಹಲವಾರು ದೇವತೆಗಳನ್ನು ಪೂಜಿಸುವುದನ್ನು ನಾವು ಕಾಣಬಹುದು. ಅಂದರೆ ದೇವತೆಗಳನ್ನು ಪೂಜಿಸಿ, ಪೋಷಿಸಿ ಬೆಳೆಸುವುದರಿಂದ ಆ ಮೂಲಕ ಸಮುದಾಯದ ಉಗಮವಾಯಿತು ಎನ್ನಬಹುದು. ಇಲ್ಲಿ ಮುಖ್ಯವಾಗಿ ದೈವಗಳ ಆರಾಧನೆ ಮೊದಲುಗೊಂಡಂತೆ ಆಯಾಯ ದೈವಗಳ ಒಕ್ಕಲಾಗುತ್ತಾರೆ. ಆ ಒಕ್ಕಲುಗಳು ನಂತರ ಧಾರ್ಮಿಕ ಸಮುದಾಯಗಳಾಗಿ ಪರಿವರ್ತಿತವಾಗುತ್ತವೆ. ಈ ಸಂದರ್ಭದಲ್ಲಿ ಎಲ್ಲಮ್ಮ, ಮಾದೇಶ್ವರ, ಮೈಲಾರಲಿಂಗ, ಮಂಟೇಸ್ವಾಮಿ ಇವರಿಗೆ ನಡೆದುಕೊಳ್ಳುವ ಸಮುದಾಯಗಳನ್ನು ಉದಾಹರಿಸಬಹುದಾಗಿದೆ. ಮಧ್ಯ ಕರ್ನಾಟಕದ ಪ್ರಮುಖ ಆರಾಧ್ಯದೈವ, ಎಲ್ಲಮ್ಮನಿಗೆ ಚೌಡಿಕೆಯರು, ಮಾದೇಶ್ವರನಿಗೆ ಕಂಸಾಳೆಯವರು, ಮೈಲಾರನಿಗೆ ಗೊರವರು, ಮಂಟೇಸ್ವಾಮಿಗೆ ನೀಲಗಾರರು ಭಕ್ತರಾಗುತ್ತಾರೆ. ಆ ಮೂಲಕ ಹಲವು ಸಮುದಾಯಗಳು ಉಗಮವಾಗಿವೆ.

ಹೀಗೆ ಭಕ್ತರಾದ ಈ ಜನಪದರು ತಮ್ಮ ತಮ್ಮ ಆರಾಧ್ಯದೈವದ ಪರಿಣಾಮವಾಗಿ ಒಂದೊಂದು ಧಾರ್ಮಿಕ ಸಮುದಾಯಗಳಾಗಿ ಜನ್ಮ ಪಡೆಯುತ್ತವೆ.

ಆದರೆ ಇಲ್ಲಿನ ವಿಶಿಷ್ಟತೆ ಏನೆಂದರೆ ಈ ಸಮುದಾಯಗಳು ಜಾತಿ ನಿಷ್ಠವಲ್ಲ. ಹಲವು ಜಾತಿಗಳ ಜನರು ದೈವದ ಹೆಸರಿನ ಪರಿಧಿಯಲ್ಲಿ ಒಂದಾಗಿ ಸೇರುತ್ತಾರೆ. ಸಮಾನವಾದ ಸಾಂಸ್ಕೃತಿಕ ಆಸಕ್ತಿಯನ್ನು ತೋರುತ್ತಾರೆ. ಇದು ಸಾಮಾಜಿಕವಾದ ಒಗ್ಗಟ್ಟಿಗೂ ಪರ್ಯಾಯ ಸಂಸ್ಕೃತಿಯೊಂದನ್ನು ರೂಪಿಸಿಕೊಳ್ಳುವ ಧೋರಣೆಗೂ ಕಾರಣವಾಗುತ್ತದೆ. ಹಾಗೆ ನೋಡಿದರೆ ಈ ಎಲ್ಲವೂ ಒಂದು ಒಂದೊಂದು ಧಾರ್ಮಿಕ ಪಂಥಗಳಾಗಿ ರೂಪುಗೊಂಡಿವೆ. ಆ ಪಂಥದ ಮೂಲಕ ತಮ್ಮ ಮೂಲ ಸಾಂಸ್ಕೃತಿಕ ನಾಯಕರು ಪ್ರತಿಪಾದಿಸಿದ ವಿಚಾರಗಳನ್ನು ಆಧುನಿಕ ಸಂದರ್ಭದಲ್ಲಿಯೂ ಒಂದು ಸಾಂಸ್ಕೃತಿಕ ಚೌಕಟ್ಟಿನ ಒಳಗಡೆ ಪ್ರಸಾರಮಾಡುತ್ತಾರೆ.

೨ : ೩ ನೀಲಗಾರರ ಚಾರಿತ್ರಿಕ ಬೆಳವಣಿಗೆ

ನೀಲಗಾರರ ಚಾರಿತ್ರಿಕ ಬೆಳವಣಿಗೆಯನ್ನು ವಚನ ಸಾಹಿತ್ಯ ಸಂದರ್ಭದಲ್ಲಿ ಅರ್ಥೈಸಲಾಗಿದೆ. ಇಲ್ಲಿ ಮುಖ್ಯವಾಗಿ ವಚನ ಪರಂಪರೆಯ ಆಶಯಗಳನ್ನು ಮೈಗೂಡಿಸಿಕೊಂಡು ವೀರಶೈವ ಧರ್ಮಗಳ ಏಕೀರೂಪಕರಣದ ಬಗ್ಗೆ ವಿಭಿನ್ನ ಪ್ರತಿಕ್ರಿಯೆಗಳನ್ನು ತೋರುತ್ತಾ ಬಂದಿರುವ ಅನೇಕ ಸಾಂಸ್ಕೃತಿಕ ಪಂಥಗಳು ಕರ್ನಾಟಕದಲ್ಲಿ ಇವೆ. ಅವುಗಳಲ್ಲಿ ನೀಲಗಾರ ಪರಂಪರೆ ಬಹಳ ಮುಖ್ಯವಾದ ಪರಂಪರೆ ಆಗಿದೆ. "ಅಂದರೆ ಬಸವಣ್ಣನವರ ಆಚಾರ ಮಾರ್ಗವನ್ನು ಕೇಂದ್ರವಾಗಿಸಿಕೊಂಡು ವೀರಶೈವ ಧರ್ಮದ ಚೌಕಟ್ಟಿಗೆ ಮಾರ್ಪಡಿಸುವ ಪ್ರಯತ್ನ ಒಂದು ಕಡೆಯಾದರೆ ಇವುಗಳಿಂದ ಹೊರಗುಳಿದ ಕೆಳವರ್ಗದ ಸಮುದಾಯಗಳು ಅಲ್ಲಮ ಬಸವಾದಿ ಪ್ರಥಮರನ್ನು ಕೇಂದ್ರವಾಗಿಟ್ಟುಕೊಂಡು ತಮ್ಮ ಕಾಲದ ಸಾಂಸ್ಕೃತಿಕ ಆಚರಣಾತ್ಮಕ ಪಂಥಗಳಾಗಿ ಬೆಳೆದದ್ದು ಇನ್ನೊಂದು ಕಡೆಯಾಯಿತು. ಇವುಗಳಲ್ಲಿ ಮುಖ್ಯವಾಗಿ ನೀಲಗಾರ ಪರಂಪರೆ, ದೇವರ ಗುಡ್ಡರ ಪರಂಪರೆ, ಕೊಡೇಕಲ್ಲು ಬಸವಣ್ಣನವರ ಪರಂಪರೆ, ಬಾಲ ಬಸವನ ಸಂಪ್ರದಾಯ, ರೇವಣ ಸಿದ್ಧಯ್ಯ, ಸಂಪ್ರದಾಯ ಮುಂತಾದವುಗಳನ್ನು ಹೆಸರಿಸಬಹುದು. ಹಾಗಾಗಿ ಎಲ್ಲಾ ಪರಂಪರೆಗಳಲ್ಲಿ ನೀಲಗಾರ ಪರಂಪರೆ ತುಂಬಾ ಮಹತ್ವದ್ದಾಗಿದ್ದು ಈ ಪರಂಪರೆಯ ಚಾರಿತ್ರಿಕ ಬೆಳವಣಿಗೆಗಳನ್ನು ಈ ಹಿನ್ನೆಲೆಗಳ ಮೂಲಕ ಅಧ್ಯಯನ ಮಾಡಬಹುದಾಗಿದೆ."

ವಿಜಯನಗರ ಸಾಮ್ರಾಜ್ಯ ಅವನತಿ ಹೊಂದಿದ ನಂತರ ಕೆಳದಿ ಸಂಸ್ಥಾನ ಮತ್ತು ಮೈಸೂರು ಸಂಸ್ಥಾನಗಳು ಪ್ರಧಾನ ರಾಜ ವಂಶಗಳಾಗಿ ಕಾಣಿಸಿಕೊಂಡರೂ, ಆಯಾ ಆಡಳಿತ ಪ್ರದೇಶದಲ್ಲಿದ್ದ ಪಾಳೇಗಾರರು ಪ್ರಬಲವಾಗಿದ್ದ ಕಾಲವದು. ಕರ್ನಾಟಕ ಚರಿತ್ರೆಯಲ್ಲಿ ಸಾಮ್ರಾಜ್ಯಗಳ ಕೇಂದ್ರೀಕರಣ ಆಡಳಿತ ತಪ್ಪಿ ಆಯಾ ಪ್ರದೇಶದಲ್ಲಿದ್ದ ಪಾಳೇಯಗಾರರು, ಸಾಮಂತರು ಸ್ವತಂತ್ರ ಅಸ್ತಿತ್ವವನ್ನು ಹೊಂದಿದ್ದು, ರಾಜ್ಯಾಡಳಿತ ವಿಕೇಂದ್ರೀಕರಣಗೊಂಡಿದ್ದ ಕಾಲಘಟ್ಟವಿದು. ಜನಪದರು ತಮ್ಮ ನಡುವೆಯಿದ್ದ ಪಾಳೇಗಾರರ, ನಾಯಕರ ಆಡಳಿತ ವಿಧಾನ, ಜೀವನ ವಿಧಾನಗಳನ್ನು ಹತ್ತಿರದಿಂದ ಗಮನಿಸಿ ಅನೇಕ ಜನಪದ ಕಥನಗಳನ್ನು ಕಟ್ಟಿದ ಕಾಲವೂ ಕೂಡ ಇದಾಗಿದೆ. ಇದಕ್ಕೆ ಪೂರ್ವದಲ್ಲಿ ಕರ್ನಾಟಕವನ್ನು ಆಳಿದ ಕದಂಬ, ಚಾಲುಕ್ಯ, ಹೊಯ್ಸಳ ಹಾಗೂ ವಿಜಯನಗರದ ಅರಸರುಗಳು ಯಾರೂ ಈ ಜನಪದ ಕಥನಗಳ ವಸ್ತುವಾಗಲೇ ಇಲ್ಲ. ಕಂಪಿಲಿಯ ಸಾಮಂತ ದೊರೆಯ ಮಗ ಕುಮಾರರಾಮ ಜನಪದರ ಸಾಂಸ್ಕೃತಿಕ ನಾಯಕನಾಗಿದ್ದಾನೆ. ಜನರಿಂದ ದೂರಸರಿದ ಅರಸರು, ಸಾಮ್ರಾಜ್ಯಗಳು ಅವರ ಪ್ರಜ್ಞೆಗೆ ನಿಲುಕದೆ ಜನಪದ ಕಥೆಗಳಿಂದ ಹೊರಗುಳಿದಿದ್ದಾರೆ. ಹಾಗೆ ಜನಪದರಿಗೆ ಮೈಸೂರು ಸಂಸ್ಥಾನವೆಂದರೆ ಮಂಟೇಸ್ವಾಮಿ, ಸಿದ್ದಪ್ಪಾಜಿ, ರಾಚಪ್ಪಾಜಿಯವರ ಚರಿತ್ರೆ ನೆನಪಾಗುತ್ತದೆಯೇ ಹೊರತು ಮೈಸೂರು ಅರಸರ ಚರಿತ್ರೆ ಅಲ್ಲ. ಇದು ಜನಪದ ಕಥನಗಳ ವಿಶಿಷ್ಟ ಲಕ್ಷಣವಾಗಿ ಬೆಳೆದುಬಂದಿರುವುದನ್ನು ಕಾಣಬಹುದಾಗಿದೆ.

''ಉತ್ತರದಿಂದ ಬಂದ ಮಂಟೇಸ್ವಾಮಿಗಳು ಮೈಸೂರನ್ನು ತಲುಪಿದಾಗ ಅಂದಿನ ಚಾರಿತ್ರಿಕ ಸಂದರ್ಭ ಅನೇಕ ಪಾಳೇಗಾರರ ಸಾಮಂತದೊರೆಗಳ ನಡುವಿನ ಸಂಘರ್ಷದಲ್ಲಿತ್ತು. ಮೈಸೂರು ಪ್ರದೇಶ ರಾಜಕೀಯವಾಗಿ ಅನೇಕ ಘಟಕಗಳಾಗಿ ಒಡೆದು ಹೋಗಿತ್ತು. ''ಉತ್ತರ ಭಾಗದಲ್ಲಿ ಬಸವಾಪಟ್ಟಣ, ಬಿದನೂರು ಮತ್ತು ಚಿತ್ರದುರ್ಗ ನಾಯಕರು, ಬೇಲೂರು ನಾಯಕರು ಮಧ್ಯ ಭಾಗದಲ್ಲಿ, ಪೂರ್ವದಲ್ಲಿ ಚಿಕ್ಕನಾಯಕನಹಳ್ಳಿ (ಹಾಗಲವಾಡಿ) ನಾಯಕರು ಮತ್ತು ಯಲಹಂಕ ನಾಡು-ಗೌಡರು ವಾಯುವ್ಯದಲ್ಲಿ ಪಿರಿಯಾಪಟ್ಟಣ ಮತ್ತು ಹೊಳೆನರಸೀಪುರ ನಾಯಕರು ಮತ್ತು ದಕ್ಷಿಣದಲ್ಲಿ ಉಮ್ಮತ್ತೂರಿನ ಒಡೆಯರು ಹದಿನಾಡು (ಯಳಂದೂರು) ಅರಿಕುಠಾರ (ಚಾಮರಾಜನಗರ) ಮೊದಲಾದ ಸ್ಥಳಗಳಲ್ಲಿ ನಾಯಕರು''[೩೬] ಮತ್ತು ಕೊಡಗಿನಲ್ಲಿ ಚೆಂಗಾಳ್ವ ಅರಸರು ಆಡಳಿತ ನಡೆಸುತ್ತಿದ್ದರು. ಇವಿಷ್ಟು ರಾಜಮನೆತನಗಳಲ್ಲಿ ದಕ್ಷಿಣದ ರಾಜ್ಯ ಹರಿದು ಹಂಚಿಹೋಗಿದ್ದಲ್ಲದೆ ಇದರೊಳಗೆ ಇನ್ನೂ ಅನೇಕ ಪಾಳೇಗಾರರು ಆಡಳಿತವನ್ನು ನಡೆಸುತ್ತಿದ್ದರು.

ಮಂಟೇಸ್ವಾಮಿಗಳು, ರಾಚಪ್ಪಾಜಿಗಳು, ಮೈಸೂರಿಗೆ ಬಂದಾಗ ಚಾರಿತ್ರಿಕವಾಗಿ ಅದು ರಾಜ ಒಡೆಯರ ಕಾಲ (೧೫೭೮-೧೬೧೭) ಇವನು ಸಹ ತೀರ ಸೀಮಿತ ಪ್ರದೇಶವನ್ನು ಆಳುತ್ತಿದ್ದ ಸಾಮಂತದೊರೆ, ಇವನು ನಡೆಸಿದ ಕಾರುಗಳ್ಳಿಯ ಯುದ್ಧದಲ್ಲಿ ರಾಚಪ್ಪಾಜಿಯವರ ಪಾತ್ರ ಇದೆ. ಅವರು ಜಂಗಮರೂಪಿಯಾಗಿ ಪರೋಕ್ಷವಾಗಿ ನೆರವಾಗಿದ್ದಾರೆ. ಹಾಗಾಗಿ ಧರೆಗೆ ದೊಡ್ಡವರ ಕಥೆ ಕಾರುಗಳ್ಳಿಯ ಯುದ್ಧವನ್ನು ಪಿರಿಯಾಪಟ್ಟಣದ ಕಾಳಗವನ್ನು ನೆನಪಿಸುತ್ತದೆ. ಆದ್ದರಿಂದ ಈ ಮೇಲಿನ ಅಂಶಗಳು ಸೀಲಗಾರ ಚರಿತ್ರೆಯ ಮೇಲೆ ಬೆಳಕು ಚೆಲ್ಲುತ್ತವೆ. ಈಗ ಮುಖ್ಯವಾಗಿ ಮುಂದಿನ ಚರ್ಚೆಯಲ್ಲಿ ಸೀಲಗಾರ ಎಂದರೆ ಯಾರು ಎಂಬುದನ್ನು ಅರ್ಥೈಸಬೇಕಾಗುತ್ತದೆ.

೨ : ೩.೧ ನೀಲಗಾರರೆಂದರೆ ಯಾರು ?

ದಕ್ಷಿಣ ಕರ್ನಾಟಕದ ಗಡಿಯಲ್ಲಿ ಕಾವೇರಿ ನದಿಯ ಸುತ್ತಮುತ್ತಲಿನ ಏಳು ಮಲೆ ಮಾದಪ್ಪನ ಲೀಲೆಗಳನ್ನು ಕೊಂಡಾಡುವ ಕಂಸಾಳೆಯವರಷ್ಟೇ ಪ್ರಸಿದ್ಧರಾದ ಮತ್ತೊಂದು ಪ್ರಮುಖ ಸಂಪ್ರದಾಯದವರು ಈ ನೀಲಗಾರರು. ಇವರು ಮಂಟೇಸ್ವಾಮಿ ಮತ್ತು ಆತನ ಶಿಷ್ಯರಾದ ಸಿದ್ದಪ್ಪಾಜಿ ಹಾಗೂ ರಾಚಪ್ಪಾಜಿಯವರ ಲೀಲೆಗಳನ್ನು ಲೋಕದಲ್ಲಿ ಸಾರುತ್ತಾ ಸಾಗುವ ಇವರನ್ನು 'ಮಂಟೇದೇವರು' ಎಂದು ಕರೆಯುವುದುಂಟು. ತದನಂತರ ಇವರ ಲೀಲೆಗಳನ್ನು ಕೊಂಡಾಡುವುದರಿಂದ ನೀಲಗಾರ ಎಂದಾಗಿದ್ದಾರೆ. ''ನೀಲಗಾರ ಎಂಬ ಪದ 'ಲೀಲೆ' ಎಂಬ ಪದದಿಂದ ಬಂದಿದೆ. ಸಿದ್ದಪ್ಪಾಜಿಯೇ ಮೊದಲ ನೀಲಗಾರ. ಮಂಟೇಸ್ವಾಮಿ ತನ್ನ ಸಿಸುಮಗನಾಗಿ ಇವನನ್ನು ಪಡೆಯುತ್ತಾರೆ. ಇವರು ತನ್ನ ಗುರು ಮಂಟೇಸ್ವಾಮಿ ಲೀಲೆಗಳನ್ನು ಲೋಕದಲ್ಲಿ ಮೊದಲು ಮೆರೆದ ಕಾರಣ ಈ ಲೀಲೆಗಾರನೇ ನೀಲಗಾರನಾದ''[೬] ಎಂದು ಜೀ.ಶಂ.ಪ. ಅವರು ನೀಲಗಾರ ಪದವನ್ನು ನಿರ್ವಚಿಸಿದ್ದಾರೆ. ನಂತರ ಈ ಪದ ನೀಲಗಾರ ಎಂದಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಆದರೆ ಒಟ್ಟು ಪರಂಪರೆಯಲ್ಲಿ ಇದರ ವ್ಯಾಪ್ತಿ ಇನ್ನೂ ವಿಶಾಲವಾಗಿದೆ. ನೀಲಗಾರ ದೀಕ್ಷೆಯನ್ನು ಪಡೆದವರೆಲ್ಲಾ ಲೀಲೆಗಳನ್ನು ಹಾಡುವವರಲ್ಲ, ಅವರಲ್ಲಿ ಕೆಲವರಷ್ಟೇ ಈ ಕತೆ ಕಲಿತು ಕಾವ್ಯಕತೆಯ ಪರಂಪರೆಯನ್ನು ಮುಂದುವರಿಸುತ್ತಾರೆ. ಈ ಒಕ್ಕಲಿನವರು ತಮ್ಮ ಮೊದಲ ಮಗನಿಗೆ ಕಡ್ಡಾಯವಾಗಿ ನೀಲಗಾರ ದೀಕ್ಷೆ ಕೊಡಿಸುತ್ತಾರೆ. ಹೀಗೆ ದೀಕ್ಷೆ ಪಡೆದವರೆಲ್ಲಾ ನೀಲಗಾರ ಎಂಬ ಹೆಸರಿನಿಂದ ಕರೆಯಲ್ಪಡುತ್ತಾರೆ. ನಮ್ಮ ಜನಪದ ಕಲಾವಿದರಲ್ಲಿ ನೀಲಗಾರರು ಅತ್ಯಂತ ಉತ್ಕೃಷ್ಟ ಮಟ್ಟದ ಗಾಯಕರು ಕಥಾ ಪರಂಪರೆಯನ್ನು ಬೆಳೆಸಿದರೆ, ದೀಕ್ಷೆ ಪಡೆದ ನೀಲಗಾರರು ತಮ್ಮ ದೈವಕ್ಕೆ ನಡೆದುಕೊಳ್ಳುವ ಆಚರಣೆಗಳಿಂದ ನೀಲಗಾರ ಪರಂಪರೆಯನ್ನು ಬೆಳೆಸಿದ್ದಾರೆ. ಆದ್ದರಿಂದ ಈ ನೀಲಗಾರ ಎಂಬ ಪದದ ವ್ಯಾಪ್ತಿ ವಿಶಾಲವಾದದ್ದು.

ಹಾಗೆಯೇ ನೀಲಗಾರ ಎಂಬ ಪದವನ್ನು ಈ ರೀತಿಯಿಂದಲೂ ಅರ್ಥೈಸಬಹುದು. 'ನೀಲಿ', 'ನೀಲ' ಎಂಬ ಪದದ ಉಲ್ಲೇಖವು ಕಾವ್ಯದಲ್ಲಿ ಬರುತ್ತದೆ. ಪವಾಡಗಳಿಗೆ ''ಪೂರ್ವದಲ್ಲಿ ಕೆಂಪಚಾರಿ ಚಿಲುಮೆಗೆ ಮಂಟೇಸ್ವಾಮಿ ಕೆಂಡದ ಭಿಕ್ಷೆ ಕೇಳಲು ಹೋಗುತ್ತಾನೆ. ಈ ಕೆಂಡದ ಭಿಕ್ಷೆಯನ್ನು ಪಡೆದು ಭಂಗಿ ಸೇವನೆ ಮಾಡಿದಾಗ ಹನ್ನೆರಡು ಖಂಡುಗ ಭಂಗಿ, ಕಳ್ಳಿಹಾಲು, ಎಕ್ಕಡಹಾಲು, ಸುಣ್ಣದ ತಿಳಿ ನೀರಿನಲ್ಲಿ ನಾಗರ ಹಾವಿನ ವಿಷ ಸೇವಿಸಿದಾಗ ಮೂರು ಖಂಡುಗ ಭಂಗಿ ಸೊಪ್ಪು 'ಒಂದು ದಮ್ಮಿಗೆ ಮುಗಿಯಲಿಲ್ಲ, ಎರಡು ದಮ್ಮಿಗೆ ಸಾಕಗಲಿಲ್ಲ.' ಆಗ ಈ ಭಂಗಿಸೊಪ್ಪಿನ ಮತ್ತಿನಲ್ಲಿ ಏಳು ನೀಲಿಗಳು ಉತ್ಪತ್ತಿಯಾದವಂತೆ. ಹುಚ್ಚುನೀಲಿ, ಬೆಪ್ಪುನೀಲಿ, ಮಲ್ಲಾರದ ನೀಲಿ, ಆನಂದ ನೀಲಿ, ಔತಣದ ನೀಲಿ, ಮಣ್ಣು ತಿನ್ನುವ ನೀಲಿ, ರಸಸಿದ್ದರ ನೀಲಿ, ಋಷಿಸಿದ್ದರ ನೀಲಿ, ಗೋಣಿ ಸಿದ್ದರ ನೀಲಿ, ಗೋಳಗ ಸಿದ್ದರ ನೀಲಿ ಒಂದಲ್ಲ, ಎರಡಲ್ಲ ೮೮ ನೀಲಿ (ರಾಚಶೆಟ್ಟಿ ಕೊಳ್ಳೇಗಾಲ ಮೊಳೆ) ಈ ೮೮ ನೀಲಿಗಳು ಉದ್ಭವವಾದಾಗ ಆ ಒಂದು ವಿಶಿಷ್ಟ ಸ್ಥಿತಿಗೆ ಹೋಗುತ್ತಾನೆ. ಆಗ ಅತಿಮಾನುಷ ಸ್ಥಿತಿಯಲ್ಲಿ ಪವಾಡ ಮಾಡುತ್ತಾನೆ. ಒಂದು ಸ್ಥಿತಿಯಿಂದ ಮತ್ತೊಂದು ಸ್ಥಿತಿಗೆ ಹೋಗುವುದಕ್ಕೆ ನೀಲಿ ಕಾರಣೀಭೂತವಾಗುತ್ತದೆ.''[೭]

ಈ ಅರ್ಥದಲ್ಲಿ 'ನೀಲಗಾರ' ಎಂದರೆ ಅಲೌಕಿಕ ಸ್ಥಿತಿಯನ್ನು ಪಡೆಯುವಾತನಾಗುತ್ತಾನೆ. ನೀಲಗಾರ ದೀಕ್ಷೆಯಲ್ಲಿ ಒಬ್ಬ ವ್ಯಕ್ತಿಯನ್ನು ನೀಲಗಾರನಾಗಿ ಮಾಡುವಾಗ ಅಂದರೆ ದೀಕ್ಷೆ ಬಿಡುವಾಗ ಅವನಿಗೆ ಕಡ್ಡಾಯವಾಗಿ ಭಂಗಿ ಸೇವನೆ ಮಾಡಿಸುವ ಭಂಗಿ ಊಟವನ್ನು ಮಾಡಿಸುವ ಪದ್ಧತಿ ಈ ಒಕ್ಕಲಿನಲ್ಲಿ ಈಗಲೂ ಜಾತ್ರೆಗಳ ಸಂದರ್ಭದಲ್ಲಿ ಕಾಣಬಹುದು. ಸಿದ್ದಪ್ಪಾಜಿ ಮುಂತಾದವರು ಅಂದರೆ ತನ್ನ ಜಾತಿವಂತರ ಮನೆಗೆ ಕಬ್ಬಿಣ ಭಿಕ್ಷೆ ಕೇಳಲು ಹೋಗುವಾಗ ಹಿಂಜರಿಯುತ್ತಾನೆ. ''ಲಕ್ಷಿಕನಾಗಿದ್ದ ನಾನು ಭಿಕ್ಷುಕನಾಗಿದ್ದೇನೆ ತನ್ನ ಕತ್ತಿಗೆ ಕಟ್ಟಿದ ಮಣಿಯನ್ನು ಅವರು 'ಅಳ್ಳಿಕಾಯಿ' ಎಂದು ಲೇವಡಿ ಮಾಡುತ್ತಾರೆ.'' (ಮಹದೇವಸ್ವಾಮಿ, ಮಳವಳ್ಳಿ) ನನಗೆ ಧರೆಗೆ ದೊಡ್ಡವರು ಕೊಟ್ಟ ಮುತ್ತಿನ ಜೋಳ್ಗ ಮೆಟ್ಟಿ ಕಪ್ಪು ನಾಗಬೆತ್ತ ಇತ್ಯಾದಿಗಳ ಬಗ್ಗೆ ಲೇವಡಿ ಮಾಡುತ್ತಾರೆ ಎಂಬುದು ಕಂಡು ಬಂದಾಗ ಮಂಟೇಸ್ವಾಮಿ ಅವನ ಹಿಂಜರಿಕೆಯನ್ನು ಅರ್ಥಮಾಡಿಕೊಂಡು ದೊಡ್ಡಮ್ಮ ತಾಯಿಯ ಮೂಲಕ ಒಪ್ಪಿಸಿ ಕರೆದುಕೊಂಡು ಬಂದಾಗ ಮಠ ಮನೆಯ ಮುಂದೆ ಭಂಗಿ ಸೇವನೆ ಮಾಡುತ್ತಾರೆ. ಇದುವರೆಗೂ ಲೌಕಿಕ ಚಿಂತನೆ ಮೂಲಕ ತನ್ನ ಜಾತಿ ಮತದ ಹಾಗೂ ತನ್ನ ಪೂರ್ವಾಶ್ರಮದ ಶ್ರೀಮಂತಿಕೆ ಬಗ್ಗೆ ಇದ್ದ ಅಭಿಮಾನ ಬಿಟ್ಟು ಭಂಗಿ ಕುಡಿದು ನೀಲಿಗೆ ಒಳಗಾಗಿ ಹಲಗೂರು ಚಿಲ್ಲಾಪುರಕ್ಕೆ ಹೋಗಲು ಸಿದ್ಧನಾಗುತ್ತಾನೆ. ಅಂದರೆ ಪವಾಡ ಮಡುವಾಗ ಒಂದು ಸ್ಥಿತಿಯನ್ನು ಗೆದ್ದು ಮತ್ತೊಂದು ಸ್ಥಿತಿಗೆ ಹೋಗುವಾಗ 'ನೀಲಿ' ಒಂದು ಆಶಯವಾಗಿ ಅಲೌಕಿಕ ಸ್ಥಿತಿಗೆ ತಲುಪುವುದಕ್ಕೆ ಕಾರಣವಾಗುತ್ತದೆ.

ಅಂದರೆ ಇಲ್ಲಿ ಸಿದ್ದು ಪತ್ತುರ ರಸ ಒಂದು ಸಾಧನವಾಗುತ್ತದೆ. ತಾಂತ್ರಿಕ ಪಂಥದಲ್ಲಿ 'ರಸ ಸಿದ್ಧ'ರನ್ನು ಇದು ಸಂಕೇತಿಸುತ್ತದೆ. ಈ ಅರ್ಥದಲ್ಲಿಯೂ ಕೂಡ ನೀಲಗಾರ ಎಂಬ ಪದ ಬಂದಿರಬಹುದು ಎಂಬುದು ವ್ಯಕ್ತವಾಗುತ್ತದೆ.

ನೀಲಗಾರರು ಮಂಟೇಸ್ವಾಮಿ ಸಂಪ್ರದಾಯಕ್ಕೆ ಸೇರಿದವರಾದ್ದರಿಂದ ಇವರನ್ನು ಮಂಟೇದೇವರು, ಮಂಟೇದಯ್ಯ, ಮಂಟೇಸ್ವಾಮಿ ಮುಂತಾದ ಹೆಸರುಗಳಲ್ಲೂ ಕರೆಯಲಾಗುತ್ತದೆ. ''ಮಂಟೇಲಿಂಗಯ್ಯ ಎನ್ನುವ ಪದ ಮಂಟೇಸ್ವಾಮಿ ಕಥೆಯಲ್ಲಿ ಬರುವ ಧರೆಗೆ ದೊಡ್ಡವರ ಹೆಸರು ಮುಂಟಾಡು, ಮಂಟುಕೋ ಎಂಬ ಶಬ್ದ ಓಲಾಡು, ಉರುಳು, ಒರಗು ಎಂಬ ಅರ್ಥದಲ್ಲಿ''[೩೯] ದಕ್ಷಿಣ ಕರ್ನಾಟಕದ ಕೆಲವು ಭಾಗಗಳಲ್ಲಿ ಪ್ರಯೋಗದಲ್ಲಿ ಇರುವುದನ್ನು ಕಾಣಬಹುದು.

ನೀಲಗಾರರು ತಮ್ಮನ್ನು ಸಿದ್ದಪ್ಪಾಜಿಯ ಗುಡ್ಡಗಳು ಎಂದು ಕರೆದುಕೊಂಡಿದ್ದಾರೆ. ಗುಡ್ಡ ಎಂದರೆ ಶಿಷ್ಯ, ಮಾದೇಶ್ವರನ ಗುಡ್ಡರಂತೆ ಇವರು ತಮ್ಮ ದೈವದ ಮಹಿಮೆಯನ್ನು ಲೋಕದ ಮೇಲೆ ಮೆರೆಸುತ್ತಾರೆ. ಮಂಟೇಸ್ವಾಮಿ ಮಹಿಮೆಯನ್ನು ಮೊದಲು ಲೋಕದ ಮೇಲೆ ಮೆರೆಸಿದ ಶಿಷ್ಯ ಸಿದ್ದಪ್ಪಾಜಿ ತನ್ನ ಗುರುವಿನ ಲೀಲೆಗಳನ್ನು ನಾನಾ ಕಡೆಗಳಲ್ಲಿ ಪ್ರಸಾರ ಮಾಡಿದ. ಮಂಟೇಸ್ವಾಮಿ ಶಕ್ತಿಯೇನು ಎಂಬುದನ್ನು ಜನರಿಗೆ ತೋರಿಸಿದ, ಸಾವಿರಾರು ಭಕ್ತರುಗಳನ್ನು ಮಂಟೇಸ್ವಾಮಿಯ ಮಠಕ್ಕೆ ಒದಗಿಸಿದ, ತನಗೆ ಒಲಿಯದವರನ್ನು ದಂಡಿಸಿ ಗೆದ್ದುಕೊಂಡ ಕೊನೆಗೆ ತಾನೇ ತಂಬೂರಿಯನ್ನು ಹಿಡಿದು ಗುರು ಮಹಿಮೆಯನ್ನು ಹಾಡಿ ಹೊಗಳಿದ ಅದಕ್ಕಾಗಿಯೇ ಗುರು ಲೀಲೆಗಳನ್ನು ಮೆರೆದ ಸಿದ್ದಪ್ಪಾಜಿಯನ್ನು ಈ ಭಕ್ತರು ಘನಲೀಲೆ ಸಿದ್ದಯ್ಯ ಎಂದು ಕರೆದರು. ಮಂಟೇಸ್ವಾಮಿಯ ಲೀಲೆ ಎಂದರೆ ಸಿದ್ದಪ್ಪಾಜಿ ಮೆರೆದ ಪವಾಡಗಳೇ ಆಗಿದೆ. ಹಾಗಾಗಿ ಗಾಯಕರಾದ ನೀಲಗಾರರು

ಮಂಟೇಸ್ವಾಮಿ ಲೀಲೆಯನ್ನು ಬಣ್ಣಿಸುವುದರ ಮೂಲಕ ತಮ್ಮ ಹಾಡುಗಾರಿಕೆಯ ಸಂಪ್ರದಾಯವನ್ನು ಇನ್ನೂ ಜೀವಂತವಾಗಿ ಉಳಿಸಿಕೊಂಡು ಬಂದಿರುವುದನ್ನು ಕಾಣಬಹುದಾಗಿದೆ.

ನೀಲಗಾರರಲ್ಲಿ ಹೆಚ್ಚು ದಲಿತ ವರ್ಗದವರೇ ಕಂಡುಬರುವುದನ್ನು ಕಾಣಬಹುದಾಗಿದೆ. ನೀಲಗಾರರ ಸಮುದಾಯದಲ್ಲಿ ಮುಖ್ಯವಾಗಿ ಈ ಮೊದಲೇ ಹೇಳಿರುವಂತೆ ಲಿಂಗಾಯಿತರು, ಗಂಗಡಕಾರ ಒಕ್ಕಲಿಗರು, ಅರಸುಗಳು, ಕುರುಬರು, ಕುಂಬಾರರು, ಮಡಿವಾಳರು, ಆಚಾರಿಗಳು, ಉಪ್ಪಾರರು, ಹೊಲೆಯರು ಎಂಬ ಒಂಬತ್ತು ಜನವರ್ಗದ ಕಾಯಕ ಜೀವಿಗಳು ಈ ನೀಲಗಾರ ಸಮುದಾಯದ ಕಕ್ಷೆಯಲ್ಲಿ ಸೇರಿಕೊಳ್ಳುತ್ತಾರೆ. ಇವರು ಮಂಟೇಸ್ವಾಮಿ ಹೆಸರಿನಲ್ಲಿ ದೀಕ್ಷೆ ಪಡೆದು ಭಕ್ತರ ಮನೆಗಳಲ್ಲಿ ನಡೆಯುವ ಧಾರ್ಮಿಕ ವಿಧಿಗಳಲ್ಲಿ ಭಾಗವಹಿಸುವರು ''ಹೀಗೆ ದೀಕ್ಷೆ ಪಡೆದವರಲ್ಲಿ ಸಾಧಾರಣ ನೀಲಗಾರರು ಮತ್ತು ತಂಬೂರಿ ಹಿಡಿದ ನೀಲಗಾರರು ಎಂಬ ಎರಡು ಬಗೆಗಳಿವೆ.''[೮] ಸಾಧಾರಣ ನೀಲಗಾರರು ದೇವರ ಪದಗಳನ್ನಾಗಲಿ, ಲಾವಣಿಗಳನ್ನಾಗಲಿ ಇತರ ಯಾವುದೇ ಕಾವ್ಯಗಳನಾಗಲೀ ಹಾಡುವವರಲ್ಲ. ತಂಬೂರಿ ಹಿಡಿದ ನೀಲಗಾರರು ಧಾರ್ಮಿಕ ವಿಧಿ ಆಚರಣೆಗಳಲ್ಲಿ ಭಾಗವಹಿಸುವುದರ ಜೊತೆಗೆ ದೇವರ ಕಥೆಗಳನ್ನು ಹಾಡುವವರಾಗಿದ್ದಾರೆ. ಇವರಿಗೆ ದೀಕ್ಷೆಯಾದಾಗ ಮೂರು ರುದ್ರಾಕ್ಷಿಮಣಿಗಳನ್ನು ಕಟ್ಟಲಾಗುತ್ತದೆ. ಸಾಧಾರಣ ನೀಲಗಾರರಾದವರಿಗೆ ಒಂದೇ ರುದ್ರಾಕ್ಷಿಮಣಿ ಇರುತ್ತದೆ. ಹಾಗೆಯೇ ತಂಬೂರಿ ಹಿಡಿದ ನೀಲಗಾರರಿಗೆ ಮೂವತ್ತೊಂದು ಮಣಿಗಳ ರುದ್ರಾಕ್ಷಿಯ ಸರವನ್ನು ಧರಿಸಿದವರಾಗುತ್ತಾರೆ. ಇವರು ಊರೂರು ಭಿಕ್ಷೆಗೆ ಹೊರಡುವವರಾಗುತ್ತಾರೆ. ಇವರು ತಲೆಗೆ ಕೆಂಪು ರುಮಾಲು ಮೈಮೇಲೆ ಕರಿಯ ನಿಲುವಂಗಿ ಹಾಕಿ ಬಿಳಿಯ ಪಂಚೆಕಟ್ಟಿಯ ಮೂಲಕ ಕಾಣಿಸಿಕೊಳ್ಳುವ ಇವರು ತಂಬೂರಿಯನ್ನು ಭುಜಕ್ಕೆ ಹಾಕಿಕೊಂಡೇ ಊರೂರು ಸುತ್ತುತ್ತಾರೆ. ಎಲ್ಲೆಲ್ಲಿ ಧಾರ್ಮಿಕ ಆಚರಣೆಗಳು ನಡೆಯುತ್ತವೆಯೋ ಅಲ್ಲಿಗೆ ಹೋಗಿ ತಂಬೂರಿ ನುಡಿಸುತ್ತಾ ಮಂಟೇಸ್ವಾಮಿ ಲೀಲೆಯನ್ನು ಕೊಂಡಾಡುತ್ತಾರೆ.

ಇವರು ಹೆಗಲಲ್ಲಿ ಜೋಳಿಗೆ ಕೈಯಲ್ಲಿ ಕೋಲು ಇರಲೇಬೇಕು. ಇವರು ಹೆಚ್ಚಾಗಿ ಧಾರ್ಮಿಕ ವಿಧಿ ಆಚರಣೆಗಳಲ್ಲಿ ಭಾಗವಹಿಸಿದರೂ ಕಡ್ಡಾಯವಾಗಿ ಪ್ರತಿ ಸೋಮವಾರ, ಶುಕ್ರವಾರ ಭಿಕ್ಷಾಟನೆಯನ್ನು ಮಾಡಲೇಬೇಕು. ಹೀಗಾಗಿ ಮಂಟೇಸ್ವಾಮಿಯ ಶಿಷ್ಯರಾಗಿ ನೀಲಗಾರರು ತಮ್ಮ ಗುರುವಿನ ಮಹಿಮೆಯನ್ನು ಲೋಕದಲ್ಲಿ ಮೆರೆದವರು ಇವರಾಗಿದ್ದಾರೆ. ಹಾಗಾಗಿ ಇವರನ್ನು ನೀಲಗಾರ ಎಂಬ ಪದದಿಂದ ಉಚ್ಚರಿಸಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

೨ : ೩.೨ ನೀಲಗಾರರ ಪರ್ಯಾಯ ಚಿಂತನೆಗಳು

ಮಂಟೇಸ್ವಾಮಿ ಪರಂಪರೆಯನ್ನು ನಿರ್ವಚಿಸಿಕೊಂಡವರಲ್ಲಿ ನೀಲಗಾರರು ಮುಖ್ಯರಾದವರು. ಇವರು ಮಂಟೇಸ್ವಾಮಿ ಮಹಿಮೆಗಳನ್ನು ಲೋಕದಲ್ಲಿ ಮೆರೆಯುವುದು. ಆ ಮೂಲಕ ಶಿಷ್ಯತ್ವವನ್ನು ಪಡೆದು ದೀಕ್ಷೆಯಾಗಿ ಸ್ವಾಮಿಯ ಪವಾಡಗಳನ್ನು ಲೋಕಕ್ಕೆ ಸಾರುವುದು ಇವರ ಮುಖ್ಯ ಉದ್ದೇಶವಾಗಿದೆ. ಇವರು ತನ್ನ ಸಾಂಸ್ಕೃತಿಕ ನಾಯಕನ ಚರಿತ್ರೆಯನ್ನು ಪುರಾಣೀಕರಿಸಿಕೊಂಡು ಹಲವು ರಾತ್ರಿಗಳ ಕಾಲ ನಿರಂತರವಾಗಿ ಹಾಡುತ್ತಾರೆ. ಆ ಮೂಲಕ ಒಂದು ಸಂಸ್ಕೃತಿಯನ್ನು ಕಟ್ಟಿ ಶಿಷ್ಯ ಪರಂಪರೆ ಮೂಲಕ ತಮ್ಮ ಪರಂಪರೆಯನ್ನು ಮುಂದುವರಿಸುತ್ತಾರೆ. ಮಂಟೇಸ್ವಾಮಿ ನೀಲಗಾರರು ಮುಖ್ಯವಾಗಿ ದೀಕ್ಷೆ ಪಡೆಯುವ ಮೂಲಕ ತಮ್ಮ ಪರಂಪರೆಯನ್ನು ಉಳಿಸಿಕೊಂಡು ಹೋಗುತ್ತಾರೆ.

"ನೀಲಗಾರ ಗಾಯಕರು ಧರೆಗೆ ದೊಡ್ಡವರ ಕತೆಯನ್ನು ಕಲಿಯಲು ಸುಮಾರು ನಾಲ್ಕಾರು ವರ್ಷಗಳೇ ಬೇಕಾಗುತ್ತದೆ. ಮೊದಲು ಗುರುಗಳೊಟ್ಟಿಗೆ ಹೋಗಿ ಹಿಮ್ಮೇಳದಲ್ಲಿದ್ದು ಕತೆಯನ್ನು ಕಲಿತ ಮೇಲೆ ತಾವೇ ಒಂದು ತಂಡ ಕಟ್ಟಿಕೊಳ್ಳುತ್ತಾರೆ. ಕತೆ ಕಲಿಯುವ ಪ್ರತ್ಯೇಕ ಗುಂಪುಗಳಾಗುವ ತಲೆಮಾರಿನಿಂದ ತಲೆಮಾರಿಗೆ ಕತೆ ಪ್ರಸಾರವಾಗುವ ಕ್ರಮ ಇದಾಗಿದೆ. ಗುರುವಿನಿಂದ ಕತೆ ಕಲಿತ ಗಾಯಕ ನೀಲಗಾರ ತನ್ನ ಬಿಡುವಿನ ವೇಳೆಯಲ್ಲಿ ತಾನೊಬ್ಬನೇ ಊರೂರುಗಳಿಗೆ ಹೋಗಿ ಈ ಕತೆಯನ್ನು ಹಾಡಿ ಭಿಕ್ಷೆ ಬೇಡುತ್ತಾನೆ. ಜಾತ್ರೆಯ ಬಿಡದಿಗಳಲ್ಲಿ ತಂಗಿದಾಗ ಅಥವಾ ಹೊಸಮನೆಗೆ ಹೋಗುವಾಗ, ಸತ್ತವರಿಗೆ ಹಬ್ಬ ಮಾಡುವಾಗ, ಮಕ್ಕಳನ್ನು ನೀಲಗಾರನಾಗಿ ಬಿಡಿಸಿದಾಗ ಇವರು ತಂಡಗಳಾಗಿ ಹೋಗಿ ಇಡೀ ರಾತ್ರಿ ಸ್ವಾಮಿ ಕತೆ ಹಾಡುತ್ತಾರೆ. ನೀಲಗಾರರು ತಂಬೂರಿಯನ್ನು ಬಾರಿಸುತ್ತಾ ಗಗ್ಗರ ಸಿಕ್ಕಿಸಿಕೊಂಡು ಕತೆಯನ್ನು ಹಾಡಲು ಪ್ರಾರಂಭಿಸಿದರೆ ಈ ಕತೆಯ ಮುಂದೆ ಯಾವ ಕತೆಯು ಸರಿಸಾಟಿಯಾಗಲಾರದು. ನೀಲಗಾರರು ಜೀವನ ನಿರ್ವಹಣೆಗಾಗಿ ಶುಭಾಶುಭ ಸಂದರ್ಭಗಳಲ್ಲಿ ಈ ಕತೆಯನ್ನು ಹಾಡಿಕೊಂಡು ಆಗಾಗ ಭಿಕ್ಷೆ ಮಾಡಿಕೊಂಡು ಜೀವನ ಸಾಗಿಸುವುದನ್ನು ಕಾಣಬಹುದು."

"ಮಂಟೇಸ್ವಾಮಿ ನೀಲಗಾರ ವೃತ್ತಿಯೇ ಗಾಯನ ಮಂಟೇಸ್ವಾಮಿ ಕತೆಯಲ್ಲಿದೆ. ಮೂಲತಃ ವೃತ್ತಿ ಗಾಯಕರಾಗಿದ್ದರಿಂದ ಮಂಟೇಸ್ವಾಮಿಯ ಕತೆಯ ಜೊತೆಗೆ ಮಾದಪ್ಪನ ಕತೆ, ಬಾಲ ನಾಗಮ್ಮನ ಕತೆ, ಮೈದಾಳ ರಾಮ, ಚಾಮುಂಡಿ, ಸಾರಂಗಧರ, ಚೆನ್ನಿಗರಾಮ ಮುಂತಾದ ಕತೆಗಳನ್ನು ಹಾಡುವುದರ ಮೂಲಕ ತಮ್ಮ ಕಥನ ಪರಂಪರೆಯನ್ನು ಬೆಳೆಸುತ್ತಾರೆ." ಹೀಗಾಗಿ ಬಹುತೇಕ ಜನರು ಜೀವನ ಸಾಗಿಸುತ್ತಿದ್ದಾರೆ. ಈಗಾಗಲೇ ಹೇಳಿದಂತೆ ಮಂಟೇಸ್ವಾಮಿ ಕತೆಯನ್ನು ಹಲವು ರಾತ್ರಿಗಳ ಕಾಲ ಬೆಳೆಸಲಾಗುತ್ತದೆ. ಚರಿತ್ರೆಯನ್ನು ಕ್ರಮಬದ್ಧವಾಗಿ ಕಾಣುವ ನಮ್ಮ ಇಂದಿನ ಅಧ್ಯಯನ ಮಾದರಿಗಳಿಗೆ ಈ ಕತೆ ಸವಾಲಾಗಿ ಬಿಡುತ್ತದೆ. ಈ ಕಾರಣ ಪಾಶ್ಚಾತ್ಯರಿಂದ ಕಲಿತ ಚರಿತ್ರೆಯನ್ನು ಕ್ರಮಬದ್ಧವಾಗಿ ಕಾಣುವ ಮಾದರಿಯನ್ನು ಮರೆತು ಎಲ್ಲವನ್ನು ಅಖಂಡವಾಗಿ ಕಾಣುವ ಪಾರಂಪರಿಕ ಮಾದರಿಯ ಮೂಲಕ ಕಥಾಲೋಕವನ್ನು ಪ್ರವೇಶಿಸಬೇಕಾಗುತ್ತದೆ. ನೀಲಗಾರರ ಮುಖ್ಯ ಪರ್ಯಾಯ ಆಲೋಚನಾ ಉದ್ದೇಶವೆಂದರೆ ತಮ್ಮ ಪರಂಪರೆಯನ್ನು ಬೆಳೆಸುವುದು. ಲೋಕದಲ್ಲಿ ಸ್ವಾಮಿಯ ಮಹಿಮೆಗಳನ್ನು ಕೊಂಡಾಡುವುದು. ಆ ಮೂಲಕ ದೀಕ್ಷೆ ಪಡದು ಶಿಷ್ಯರಾಗಿ ಮುಂದುವರಿದು ಸ್ವಾಮಿಯ ಪವಾಡಗಳನ್ನು ಸಾರುವುದು. ನಂತರ ನೀಲಗಾರರು ಎಲ್ಲಾ ಒಕ್ಕಲುಗಳನ್ನು ತಮ್ಮ ಮಂಟೇಸ್ವಾಮಿ, ಸಿದ್ದಪ್ಪಾಜಿ, ರಾಚಪ್ಪಾಜಿ ಒಕ್ಕಲುಗಳಾಗಿ ಪಡೆದುಕೊಳ್ಳುವ ಪ್ರಕ್ರಿಯೆಯಲ್ಲಿ ಹೆಚ್ಚು ಆಸ್ಥೆವಹಿಸಿ ಮುಂದುವರಿಯುತ್ತಾರೆ.

ಹಾಗಾಗಿ ಇವತ್ತಿನ ಆಧುನಿಕತೆ ಸಂದರ್ಭದಲ್ಲಿಯೂ ಸಹ ಮಂಟೇಸ್ವಾಮಿ ಒಕ್ಕಲುಗಳ ಮುಂದುವರಿಕೆ ಪ್ರಕ್ರಿಯೆ ನಡೆಯುತ್ತಲೇ ಇರುವುದನ್ನು ಕಾಣಬಹುದು. ಆದರೂ ಈ ಆಧುನಿಕ ಸಂದರ್ಭದಲ್ಲಿ ನೀಲಗಾರರು ತಮ್ಮ ಪರಂಪರೆ ಎಲ್ಲಿ ಕೊನೆಗೊಳ್ಳುತ್ತದೋ ಎನ್ನುವ ಆತಂಕ ವ್ಯಕ್ತಪಡಿಸಿರುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಲಾಯಿತು. ಹೀಗೆ ನೀಲಗಾರರು ತಮ್ಮ ಹಲವು ಧಾರ್ಮಿಕ ವಿಧಿ ಆಚರಣೆಗಳಲ್ಲಿ ಭಾಗವಹಿಸುವುದರ ಮೂಲಕ ಪ್ರಸಿದ್ಧರಾಗಿದ್ದಾರೆ.

ಹೀಗೆ ಸ್ವಭಾವದಲ್ಲಿ, ಸ್ವರೂಪದಲ್ಲಿ ಮತ್ತು ಆಚರಣಾ ಕ್ರಮಗಳಲ್ಲಿ ಬೇರೆಲ್ಲರಿಗಿಂತ ಭಿನ್ನರಾಗಿರುವ ನೀಲಗಾರರು ತಮ್ಮ ಆಲೋಚನೆಯ ಕ್ರಮದಲ್ಲೂ ಭಿನ್ನರಾಗಿದ್ದಾರೆ. ಈ ಹಿಂದೆಯೇ ಪ್ರಸ್ತಾಪಮಾಡಿದಂತೆ ಶರಣ ಚಳುವಳಿಯನ್ನು ಅಲ್ಲಮ ಪ್ರಭುವಿನ ತತ್ವದ ಮೂಲಕ ಅರ್ಥೈಸಲು ಪ್ರಯತ್ನಿಸಿದವರಲ್ಲಿ ಮಂಟೇಸ್ವಾಮಿ ಮುಖ್ಯರಾಗುತ್ತಾರೆ. ಇವತ್ತಿನ ನೀಲಗಾರರು ಕೂಡ ಅಲ್ಲಮಪ್ರಭುವನ್ನು ಮತ್ತು ಮಂಟೇಸ್ವಾಮಿಯನ್ನು ಒಂದಾಗಿಯೇ ನೋಡುವ ಕ್ರಮವನ್ನು ಅನುಸರಿಸುತ್ತಿದ್ದಾರೆ.

''ಮಂಟೇಸ್ವಾಮಿಗೂ ಶರಣ ಚಳುವಳಿಯ ಅಲ್ಲಮ ಪ್ರಭುವಿಗೂ ಕಾವ್ಯದಲ್ಲಿ ಅವಿನಾಭಾವ ಸಂಬಂಧವಿದೆ. ಅನೇಕ ಬಾರಿ ಅಲ್ಲಮಪ್ರಭು ಜಗಂಜ್ಯೋತಿ, ಪರಂಜ್ಯೋತಿ ಎಂಬಂಥ ಪದಗಳು ಪುನರಾವರ್ತಿತವಾಗಿರುತ್ತವೆ. ಅಲ್ಲಮ ಅಂದಿನ ಶರಣರ ಗುಂಪಿನಲ್ಲಿದ್ದು ತನ್ನದೇ ಆದ ವಿಶೇಷತೆಯನ್ನು ಹೊಂದಿದ್ದ ನಿಷ್ಠುರವಾದಿ, ಕಟ್ಟಿದ ಲಿಂಗಕ್ಕಿಂತ ಆತ್ಮಲಿಂಗಕ್ಕೆ ಒತ್ತುಕೊಟ್ಟವನು, ಮಂಟೇಸ್ವಾಮಿ ತತ್ವವೂ ಇದೇ. ಅವನು ಜ್ಯೋತಿರ್ಲಿಂಗಯ್ಯ, ಹಾಗೆ ನೋಡಿದರೆ ಶೈವ ಸಂಸ್ಕೃತಿಯಲ್ಲಿ ಅಂತರ್ಗತವಾಗಿರುವ ಒಂದು ಚರ್ಚೆ ವಾಗ್ವಾದ ಇಲ್ಲಿ ಅಡಗಿದೆ. ಲಿಂಗದ ಕಲ್ಪನೆಯನ್ನು ಪುನರ್ ನಿರ್ವಚನಕ್ಕೆ ಮಂಟೇಸ್ವಾಮಿ ಒಳಪಡುತ್ತಾನೆ. ಲಿಂಗ ಎನ್ನುವುದು ಕಟ್ಟಿದ ಲಿಂಗವೇ? ಅಥವಾ ತತ್ವವೇ ಈ ಕಲ್ಪನೆ. ಅಲ್ಲಮನ ಮುಂದುವರಿಕೆಯಾಗಿಯೇ ಮಂಟೇಸ್ವಾಮಿ ಕಾವ್ಯದಲ್ಲಿ ಪ್ರಕಟವಾಗುವಂತಿದೆ. ಅಲ್ಲಮನ ತತ್ವಗಳು ಮಂಟೇಸ್ವಾಮಿ ಎಂಬ ವ್ಯಕ್ತಿಯ ರೂಪದಲ್ಲಿ ಬಂದಂತೆ ಕೆಲವು ಬಾರಿ ತೋರುತ್ತದೆ.''[೪೧]

ಹೀಗೆ ಪ್ರಧಾನವಾಗಿ ಶರಣ ಚಳುವಳಿ ಅರ್ಥೈಸಿದ ತತ್ವಗಳಿಗೆ ಭಿನ್ನವಾಗಿ ಆಲೋಚಿಸಿದ ನೀಲಗಾರ ಪರಂಪರೆ ಕಲ್ಯಾಣ ಪಟ್ಟಣವನ್ನು ರೂಪಕವನ್ನಾಗಿಟ್ಟುಕೊಂಡು ವಿಡಂಬನೆಯ ಮೂಲಕ ಸಾಂಸ್ಥಿಕಗೊಂಡ ವೀರಶೈವಧರ್ಮದ ಸ್ವರೂಪವನ್ನು ಮನಗಾಣಿಸುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ ೧೨ನೇ ಶತಮಾನದ ಕಲ್ಯಾಣದ ಘಟನೆಗಳು ಇಡೀ ಭಾರತದ ಎಚ್ಚರಗೊಂಡ ಸಮಾಜವೊಂದರ ಸಮಾನತೆಯ ಆಶಯಗಳನ್ನು ಪ್ರತಿನಿಧಿಸುತ್ತದೆ. ಬಸವಣ್ಣ, ಅಲ್ಲಮಪ್ರಭು ಅವರ ನೇತೃತ್ವದಲ್ಲಿ ಸಾಧಿಸಲಾದ ಎಲ್ಲಾ ವರ್ಗಗಳ ಸಮಾನತೆಯ ಒಗಟ್ಟು ಬಹುಬೇಗ ವಿಫಲವಾಯಿತು. ಅನಂತರದಲ್ಲಿ ಪುರೋಹಿತಶಾಹಿ ಸಂಸ್ಕೃತಿಯನ್ನು ಜಾತಿವಾದದ ಮೂಲಭೂತವಾದಿತ್ವವನ್ನು ಅನುಕರಿಸಲು ಶರಣ ಚಳುವಳಿಯ ಒಂದು ವರ್ಗ ಪ್ರಾರಂಭಿಸತೊಡಗಿದಾಗ ಅನೇಕ ಪ್ರಗತಿಪರ ಶರಣರು ಅದನ್ನು ವ್ಯಂಗ್ಯ ಮಾಡಿದ್ದಕ್ಕೆ ವಚನಗಳಲ್ಲಿಯೇ ಉದಾಹರಣೆಗಳಿವೆ. ನಂತರದ ಒಂದೆರಡು ಶತಮಾನಗಳಲ್ಲಿ ಅಲ್ಲಮಪ್ರಭುವಿನ ಚಿಂತನಾಧಾರೆಯಿಂದ ಪ್ರಭಾವಿತವಾದ ಒಂದು ವೈಚಾರಿಕ ವರ್ಗ ಸಾಂಸ್ಥಿಕಗೊಂಡ ವೀರಶೈವಧರ್ಮದ ವಿರುದ್ಧ ದನಿಯೆತ್ತ ತೊಡಗಿತು. ಆದರೆ ಬರುಬರುತ್ತಾ ಅಂತಹ ವಿರುದ್ಧ ದನಿಗಳನ್ನು ದಮನ ಮಾಡುವ ರೀತಿಯಲ್ಲಿ ಶಿಷ್ಟವರ್ಗ ನಡೆದುಕೊಂಡ ಸಂದರ್ಭದಲ್ಲಿ ತಾವು ನಂಬಿದ ವೈಚಾರಿಕ ಪಂಥವನ್ನು ಮತ್ತೆ ಪುನರ್ ಸ್ಥಾಪಿಸುವ ಧ್ಯೇಯದೊಂದಿಗೆ ಮಂಟೇಸ್ವಾಮಿಯಂತಹ ಆಧ್ಯಾತ್ಮಿಕ ಶರಣರು ದಕ್ಷಿಣದ ಕಡೆ ಹೊರಟಂತೆ ಕಾಣುತ್ತದೆ. ಅಲ್ಲಮಪ್ರಭುವಿನ ವಿಶಿಷ್ಟವಾದ ಪರ್ಯಾಯ ಚಿಂತನಾಧಾರೆಯನ್ನು ಮಂಟೇಸ್ವಾಮಿ ತನ್ನ ವಿಚಿತ್ರ ವ್ಯಕ್ತಿತ್ವ ಮತ್ತು ಆಕರ್ಷಕ ನಡೆನುಡಿಗಳಿಂದ ಪ್ರಸರಿಸಿದಂತೆ

ಕಾಣುತ್ತದೆ. ವೀರಶೈವಧರ್ಮ ನಿರಾಕರಿಸಿದ ಆದರೆ ಕೆಳವರ್ಗಗಳ ಮನೋಭಿಲಾಷೆಯ ವಿಚಾರಗಳಾದ ಮದ್ಯ, ಮಾಂಸ ಭಂಗಿ ಸೇವನೆ ಮುಂತಾದ ಪದ್ಧತಿಗಳನ್ನು ನಿಷೇಧಿಸಿದೆ. ಅವುಗಳನ್ನು ಮತ್ತೆ ಆವಾಹಿಸಿಕೊಂಡದ್ದು ಈ ಪರ್ಯಾಯ ಚಳುವಳಿಯ ಪ್ರಮುಖ ಅಂಶ. ಕೆಳವರ್ಗದ ಜನಸಮುದಾಯ ಮೆಚ್ಚುವ ಅಂಶಗಳನ್ನೇ ಅವರ ನಡುವೆ ಜನಪ್ರಿಯಗೊಳಿಸಿ ಆ ಮೂಲಕ ಹಲವು ಜಾತಿಗಳನ್ನು ಒಂದು ಪಂಥದ ಆಡಿಯಲ್ಲಿ ತಂದು ಅವರಿಗೆಲ್ಲಾ ಏಕಮನೋಧರ್ಮವೊಂದನ್ನು ಭೋದಿಸುವುದರ ಮೂಲಕ ಶೋಷಣಾ ಮೂಲ ಸಂಸ್ಕೃತಿಯ ವಿರುದ್ಧ ಒಂದು ಅಸ್ತಿತ್ವ ಸ್ಥಾಪಿಸಿದ್ದು ಬಹುಮುಖ್ಯ ಅಂಶ.

ನೀಲಗಾರ ಕಾವ್ಯವನ್ನು ಆಧಾರವಾಗಿಟ್ಟುಕೊಂಡು ಹೇಳುವುದಾದರೆ ಎರಡು ಪ್ರಮುಖ ಸಿದ್ಧಾಂತಗಳನ್ನು ಈ ಪಂಥ ಮಂಡಿಸುತ್ತದೆ. ಒಂದನೆಯದು ಆತ್ಮಶುದ್ಧಿಯಿಲ್ಲದ ಶರಣ ಕಟ್ಟಿಕೊಂಡ ಲಿಂಗ ಯಾವ ಪ್ರಯೋಜನಕ್ಕೂ ಬಾರದು ಕಟ್ಟಿದ ಭೌತಿಕ ಲಿಂಗಕ್ಕೆ ಬದಲು ಪರಿಶುದ್ಧ ಮನಸ್ಸಿನೊಳಗೆ ಆತ್ಮಲಿಂಗವನ್ನು ಪ್ರಕಾಶಿಸುವುದು ಮುಖ್ಯ. ಅಂಥ ಲಿಂಗಕ್ಕೆ ಜಾತಿಯ ಕಟ್ಟುಪಾಡು ಇರಲಿಲ್ಲ ಧರ್ಮದ ನಿಯಮಗಳೂ ಇಲ್ಲ. ನೀಲಗಾರರ ಪ್ರಕಾರ ಅಂತಹ ಒಬ್ಬ ಪರಿಶುದ್ಧ ಶರಣನೆಂದರೆ ಜ್ಯೋತಿರ್ಲಿಂಗಯ್ಯ ಎಂದು ಕರೆಯಿಸಿಕೊಂಡ ಮಂಟೇಸ್ವಾಮಿ ಮತ್ತು ಕಲ್ಯಾಣ ಚಳುವಳಿಯ ಸಂದರ್ಭದಲ್ಲಿ ಲಿಂಗದ ಕಲ್ಪನೆಯನ್ನು ನಿರಾಕರಿಸಿದ ಅಲ್ಲಮಪ್ರಭು ಆದ್ದರಿಂದಲೇ ನೀಲಗಾರರು ಮಂಟೇಸ್ವಾಮಿ ಮತ್ತು ಅಲ್ಲಮಪ್ರಭುವನ್ನು ಅಭಿನ್ನವಾಗಿ ಕಾಣುತ್ತಾರೆ ಮತ್ತು ಸಂಬೋಧಿಸುತ್ತಾರೆ.

ನೀಲಗಾರ ಪಂಥ ಪ್ರತಿಪಾದಿಸಿದ ಮತ್ತೊಂದು ಸಿದ್ಧಾಂತವೆಂದರೆ ಶ್ರೇಷ್ಠ ಶರಣರು ಇರುವುದೇ ದಲಿತ ವರ್ಗದಲ್ಲಿ ಎಂಬುದು, ಮಂಟೇಸ್ವಾಮಿ ಕಾವ್ಯದಲ್ಲಿ ಬರುವ ಕಲ್ಯಾಣ ಪಟ್ಟಣದ ಸಾಲು ಅವರು ಪ್ರತಿಪಾದಿಸಿದ ಸಿದ್ಧಾಂತಕ್ಕೆ ಒಂದು ಉದಾಹರಣೆ. ಮಂಟೇಸ್ವಾಮಿ ಕಲ್ಯಾಣಕ್ಕೆ ಹೋಗಿ ಅಲ್ಲಿನ ನಿಜಭಕ್ತಿಯಿಂದ ಪುಂಡ ಜಂಗಮರನ್ನು ನಿರರ್ಥಕಗೊಳಿಸಿ ಆ ಪರೀಕ್ಷೆಯಲ್ಲಿ ಉಳಿದ ಶರಣರನ್ನು ಹೀಗೆ ಹೆಸರಿಸುತ್ತಾರೆ ಹೊಲೆಯರ ಹೊನ್ನಪ್ಪ, ಮಡಿವಾಳ ಮಾಚಯ್ಯ, ಮಾದಾರ ಚೆನ್ನಯ್ಯ ಹಡಪದ ಅಪ್ಪಣ್ಣ ಒಕ್ಕಲಿಗರ ಮುದ್ದಯ್ಯ ಮುಂತಾದ ಕಾಯಕ ವರ್ಗದ ಶರಣರು ಮಾತ್ರ ಮಂಟೇಸ್ವಾಮಿಯ ಪರೀಕ್ಷೆಯಲ್ಲಿ ಗೆಲ್ಲುತ್ತಾರೆ. ಆ ಮೂಲಕ ಬಸವಣ್ಣನವರ ಕಣ್ಣು ತೆರೆಸುತ್ತಾರೆ. ಹೀಗೆ ಲಿಂಗದ ಪರಿಕಲ್ಪನೆ ಮತ್ತು ಕಾಯಕ ಜೀವಿಗಳ ಶುದ್ಧತೆಯ ಸಿದ್ಧಾಂತಗಳನ್ನು ಅತ್ಯಂತ ವೈಚಾರಿಕವಾಗಿ ಮತ್ತು ಪ್ರತಿಮೆಗಳ ಮೂಲಕ ನಿರೂಪಿಸುವ ನೀಲಗಾರ ಪಂಥದ ವೈಚಾರಿಕತೆ ಇತ್ತೀಚೆಗೆ ಚರ್ಚಿಸಲ್ಪಡುತ್ತಿರುವ ಪ್ರತಿಸಂಸ್ಕೃತಿ ಆಶಯಕ್ಕೆ ಅಮೂಲ್ಯ ಕೊಡುಗೆಯನ್ನು ನೀಡಿದೆ.

ಅಡಿಟಿಪ್ಪಣಿಗಳು

೧. ನಾಗರಾಜಪ್ಪ ಕೆ.ಜಿ. ಮರುಚಿಂತನೆ, ೧೯೮೫, ಪು. ೧೫.

೨. ಬಸವರಾಜ ಸಬರದ, ವಚನ ಚಳುವಳಿ, ೧೯೯೨, ಪು. ೩

೩. ಅದೇ, ಪು. ೧೩.

೪. ಅದೇ, ಪು. ೧೮

೫. ಹಿರೇಮಠ ಆರ್.ಸಿ. ಚೆನ್ನಬಸವಣ್ಣನ ವಚನಗಳು, ಪು. ೬೪೬. ವಚನ ೧೪೫೫, ಮತ್ತು ಪು. ೧೫೧ ವಚನ ೩೪೫

೬. ಬಸವರಾಜ ಕಲ್ಗುಡಿ, ಮಧ್ಯಕಾಲೀನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ ೧೯೮೮ ಪು. ೧೦೧.

೭. ಅದೇ ಪು. ೮೭.

೮. ಅದೇ ಪು. ೮೨.

೯. ಅದೇ ಪು. ೮೨.

೧೦. ಅದೇ ಪು. ೮೩.

೧೧. ಅದೇ ಪು. ೧೦೯

೧೨. ನಾಗರಾಜು ಡಿ.ಆರ್. ಸಾಹಿತ್ಯ ಕಥನ, ೧೯೯೬, ಪು. ೧೧೭.

೧೩. ಬಸವರಾಜು ಕಲ್ಗುಡಿ, ಮಧ್ಯಕಾಲೀನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ, ೧೯೮೮. ಪು. ೨೨೬.

೧೪. ನಾಗರಾಜಪ್ಪ ಕೆ.ಜಿ. ಮರುಚಿಂತನೆ, ೧೯೮೫, ಪ್ರಸ್ತಾವನೆ, ಪು.೧೮.

೧೫. ಬಸವರಾಜ ಸಬರದ ವಚನ ಚಳುವಳಿ, ೧೯೯೨, ಪು ೪೯.

೧೬. ಅದೇ, ಪು. ೫೦

೧೭. ಅದೇ, ವಚನ ೨೨೩

೧೮. ಅದೇ, ವಚನ ೬೦

೧೯. ಅದೇ, ವಚನ ೧೦೬

೨೦. ಅದೇ, ಪು. ೬೧

೨೧. ಚಿದಾನಂದಮೂರ್ತಿ, ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ, ೧೯೮೫, ಪು. ೯೫.

೨೨. ಅದೇ, ಪು. ೯೫.

೨೩. ಅದೇ, ಪು. ೯೬.

೨೪. ಅದೇ, ಪು. ೯೮.

೨೫. ಅದೇ, ಪು. ೧೦೫.

೨೬. ಅದೇ, ಪು. ೧೦೫.

೨೭. ಬಸವರಾಜು ಕಲ್ಗುಡಿ, ಮಧ್ಯಕಾಲೀನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ, ೧೯೮೮. ಪು. ೧೦೩.

೨೮. ಅದೇ, ಪು. ೧೦೯.

೨೯. ನಾಗರಾಜಪ್ಪ ಕೆ.ಜಿ., ಮರುಚಿಂತನೆ, ೧೯೮೫, ಪು. ೮೨

೩೦. ರಹಮತ್ ತರೀಕೆರೆ, ಪ್ರತಿಸಂಸ್ಕೃತಿ, ೧೯೯೩. ಪು. ೩

೩೧. ಅದೇ, ಪು. ೫

೩೨. ಹರಿದಾಸ ಭಟ್ಟಾಚಾರ್ಯ, (ಸಂ.) ಯುಗಯಾತ್ರಿ ಭಾರತೀಯ ಸಂಸ್ಕೃತಿ, ಸಂ. ೧, ೧೯೭೦. ಪು. ೧೮೨.

೩೩. ವೆಂಕಟೇಶ ಇಂದ್ವಾಡಿ ರಾ., ಮಂಟೇಸ್ವಾಮಿ ಪರಂಪರೆ, ೧೯೯೯, ಪು. ೩.

೩೪. ಹರಿದಾಸ ಭಟ್ಟಾಚಾರ್ಯ, ಪು. ೧೯೨.

೩೫. ಚಕ್ಕೆರೆ ಶಿವಶಂಕರ, ಗೊರವರ ಸಂಸ್ಕೃತಿ, ೧೯೯೩, ಪು. ೩.

೩೬. ಶಿವಣ್ಣ ಕೆ.ಎಸ್., (ಸಂ.), ಕರ್ನಾಟಕ ಚರಿತ್ರೆ ಸಂಪುಟ ೩, ೧೯೯೭, ಪು. ೪೨೮.

೩೭. ಪರಮಶಿವಯ್ಯ ಜೀ.ಶಂ., ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು, ೧೯೭೯, ಪು. ೧೨೭.

೩೮. ವೆಂಕಟೇಶ ಇಂದ್ವಾಡಿ ರಾ., ಧರೆಗೆ ದೊಡ್ಡವರ ಕತೆ. ೧೯೯೬, ಪು. ೭೭

೩೯. ಪರಮಶಿವಯ್ಯ ಜೀ.ಶಂ., ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು, ೧೯೭೯, ಪು. ೧೩೧.

೪೦. ಪರಮಶಿವಯ್ಯ ಜೀ.ಶಂ., ಮಂಟೇಸ್ವಾಮಿಯ ನೀಲಗಾರರು, ೧೯೮೦. ಪು. ೮

೪೧. ಬೋರಲಿಂಗಯ್ಯ ಹಿ.ಚಿ., ಮಂಟೇಸ್ವಾಮಿ ಪ್ರಸ್ತಾವನೆ, ಪು. XV.

ಅಧ್ಯಾಯ ೩

ಸಮಾಜ

೩.೧ ನೀಲಗಾರ ಜಾತಿಯ ವಿವಿಧ ಒಕ್ಕಲುಗಳು (ನೀಲಗಾರರ ವಿವಿಧ ಪಂಗಡಗಳು)

ಒಂದು ಜನವರ್ಗ ಸ್ಥೂಲವಾಗಿ ಒಂದೇ ಬಗೆಯ ಗುಣಲಕ್ಷಣಗಳನ್ನು ಹೊಂದಿದ್ದರೂ ಅದು ಹಲವಾರು ಬಗೆಯ ವೃತ್ತಿ ಆಚಾರ-ವಿಚಾರ-ನಡವಳಿಕೆಗಳ ಸಮಷ್ಟಿಯಾಗಿರುತ್ತದೆ ಎಂಬುದನ್ನು ಮರೆಯುವಂತಿಲ್ಲ. ಜಾತಿಗಳಲ್ಲಿ ಮತ್ತೆ ಮತ್ತೆ ಉಪಜಾತಿಗಳನ್ನು ಕಾಣುವ ಹಾಗೆ ನೀಲಗಾರರಲ್ಲಿ ಹಲವು ಒಕ್ಕಲುಗಳನ್ನು ಕಾಣುತ್ತೇವೆ.

ನೀಲಗಾರ ಒಕ್ಕಲಿನಲ್ಲಿ ಮುಖ್ಯವಾಗಿ ಒಂಬತ್ತು ಒಕ್ಕಲುಗಳನ್ನು ಮಾತ್ರ ಮಂಟೇಸ್ವಾಮಿಗಳು ತಮ್ಮ ಒಕ್ಕಲಾಗಿ ಮಾಡಿಕೊಂಡಿದ್ದಾರೆ. ಅಂದರೆ ಇಲ್ಲಿ ಲಿಂಗಾಯಿತರು, ಗಂಗಡಕಾರ ಒಕ್ಕಲಿಗರು, ಅರಸುಗಳು, ಕುರುಬರು, ಕುಂಬಾರರು ಮಡಿವಾಳರು, ಆಚಾರಿಗಳು (ವಿಶ್ವಕರ್ಮರು), ಉಪ್ಪಾರರು, ಮತ್ತು ಹರಿಜನರು ಈ ಒಕ್ಕಲಿನಲ್ಲಿ ಸೇರಿದ್ದಾರೆ. ಈ ದೈವಕ್ಕೆ ನಡೆದುಕೊಳ್ಳುವವರಿಗೆ ಇಲ್ಲಿ ಜಾತಿ ಗೌಣವಾಗಿದೆ. ಆದರೆ ಈ ಕತೆಯನ್ನು ಹಾಡುವವರಲ್ಲಿ ಲಿಂಗಾಯಿತಗೌಡ ಅರಸುಮನೆತನದವರು ಇಲ್ಲ, ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದ ಕಾಯಕ ಜೀವಿಗಳ ಸಮುದಾಯದಲ್ಲಿ ಮಾತ್ರ ಹಾಡುವವರು ಕಂಡುಬರುತ್ತಾರೆ. ಅಂದರೆ ಹರಿಜನರು ಉಪ್ಪಾರರು, ಮಡಿವಾಳರು, ಗಾಣಿಗರು, ಕುರುಬ, ಕುಂಬಾರರು ಮಾತ್ರ ಹೆಗಲಿಗೆ ತಂಬೂರಿ ಹೇರಿಸಿಕೊಂಡು ಅದನ್ನು ಬಾರಿಸುತ್ತಾ ತಂಡಕಟ್ಟಿ ಹಾಡುತ್ತಾರೆ. ಸಾಮಾಜಿಕವಾಗಿ ಆರ್ಥಿಕವಾಗಿ ಯಾವುದೇ ಅಂತಸ್ತುಗಳಿಲ್ಲದ ಜನಪದರು ಕಟ್ಟಿರುವ ಈ ಕತೆಯನ್ನು ಒಕ್ಕಲಿನ ಎಲ್ಲಾ ಜಾತಿಯವರು ಅಪಾರ ಭಕ್ತಿ-ಶ್ರದ್ಧೆ-ಗೌರವಗಳಿಂದ ಕೇಳುತ್ತಾರೆ. ಮೇಲುಜಾತಿಯವರ ಸಿರಿತನ ಅಂತಸ್ತು ಜಾತೀಯತೆಯನ್ನೆಲ್ಲಾ ಮುಖ್ಯವಾಗದಂತೆ ನೋಡಿಕೊಳ್ಳುವ ಶಕ್ತಿ ಅವರ ಕಥಾನಕಗಳಿಗಿವೆ.

ನೀಲಗಾರ ಸಮುದಾಯದಲ್ಲಿ ಒಕ್ಕಲುಗಳ ಪರಿಕಲ್ಪನೆ ಬಂದದ್ದು ೧೨ನೆ ಶತಮಾನದಲ್ಲಿ. ಈ ವಚನ ಚಳುವಳಿಯ ಸಾಹಿತ್ಯದ ಸಂದರ್ಭದಲ್ಲಿ ಬಸವಣ್ಣನವರ ಪರ್ಯಾಯ ಆಲೋಚನೆಗಳಿಗೆ ಮತ್ತು ಆಚಾರಗಳಿಗೆ ವಿರುದ್ಧ ದಿಕ್ಕಿನಲ್ಲಿ ಪರ್ಯಾಯ ಒಕ್ಕೂಟಗಳನ್ನು ಸಾಂಸ್ಕೃತಿಕ ನಾಯಕರೆನಿಸಿದ ಕೆಳವರ್ಗದ ಮಂಟೇಸ್ವಾಮಿ ಮತ್ತು ಮಲೆಮಾದೇಶ್ವರರು ವೀರಶೈವ ಧರ್ಮದ ಆಚಾರ ತತ್ವವನ್ನು ತೀವ್ರವಾಗಿ ಪ್ರತಿರೋಧಿಸಿ ಜ್ಯೋತಿರ್ಲಿಂಗ ಕಲ್ಪನೆಯನ್ನು ಕಟ್ಟಿಕೊಟ್ಟರು. ಆ ಸಂದರ್ಭದಲ್ಲಿ ಕೆಳಸ್ತರದ ಕಾಯಕ ಜೀವಿಗಳನ್ನು ಒಟ್ಟುಗೂಡಿಸಿ ಬಸವಣ್ಣನವರ ಪರ್ಯಾಯ ಒಕ್ಕೂಟವನ್ನು ಸ್ಥಾಪಿಸಿದರು. ಆದ್ದರಿಂದ ವಚನ ಚಳುವಳಿಯ ನಂತರ ನಡೆದ ವೀರಶೈವೀಕರಣ, ಪ್ರಕ್ರಿಯೆಯಾದ ಷಟ್‌ಸ್ಥಲ ಪರಿಕಲ್ಪನೆ, ಅಷ್ಟಾವರಣ, ಪಂಚಾಚಾರ, ದಾಸೋಹ ಕಲ್ಪನೆಗಳ ಕೇಂದ್ರವ್ಯಕ್ತಿಗಳಾದ ಜಂಗಮರನ್ನು ಧರೆಗೆ ದೊಡ್ಡವರು ನಿರಾಕರಿಸುವರು. ನಂತರ ಜಂಗಮರಿಗೆ ಮಂಟೇಸ್ವಾಮಿಯವರು

''ಕಲ್ಲುವಡ್ಡರಾಗಿ ಗೇಯ್ಕ ತಿನ್ನಿ'' ಎಂದು ಶಾಪಕೊಟ್ಟು ಕಲ್ಯಾಣವನ್ನು ಬರಿದು ಮಾಡುವಾಗ ಅಲ್ಲಿದ್ದ ಕೆಲವು ಶರಣರನ್ನು ಕರೆದು ಮುಂದೆ ಕಲಿಯುಗದಲ್ಲಿ ಜನ್ಮತಾಳುವಂತೆ ಹೇಳುತ್ತಾರೆ. ಆಗ ಕಾವಲುಗಾರನಾದ ಬಾಚಿಬಸಪ್ಪಾಜಿಯು ಕೆಂಪಚಾರಿಯಾಗಿ ಅಕ್ಕಮಹಾದೇವಿಯು ದೊಡ್ಡಮ್ಮತಾಯಿಯಾಗಿ ಗಂಗಾಂಬಿಕೆಯು ಚೆನ್ನಾಜಮ್ಮನಾಗಿ ಕಲಿಯುಗದಲ್ಲಿ ಹುಟ್ಟುವಂತೆ ವರ ಕೊಡುತ್ತಾರೆ. ನಂತರ ನೀಲಮ್ಮ ಮತ್ತು ಬಸವಣ್ಣನವರನ್ನು ಮಾತ್ರ ನೇರ ಕೈಲಾಸಕ್ಕೆ ಕಳುಹಿಸುತ್ತಾರೆ.

''ಹೀಗೆ ಮಾಡುವಾಗ ಕಾಯಕ ಜೀವಿಗಳಿಗೆ ಮಾತ್ರ ಆತ್ಮಲಿಂಗಧಾರಣೆ ಮಾಡುತ್ತಾರೆ. ಈ ರೀತಿ ಆತ್ಮ ಲಿಂಗಧಾರಣೆ ಮಾಡಿಸಿಕೊಂಡವರನ್ನು ಈ ಕೆಳಗಿನಂತೆ ಕಾಣಬಹುದು. ಕುರುಬರ ಬೀರಯ್ಯ, ಮಡಿವಾಳ ಮಾಚಯ್ಯ, ಹೊಲಾರ ಹೊನ್ನಯ್ಯ, ಹಡಪದ ಅಪ್ಪಣ್ಣ, ಕುಂಬಾರ ಗುಂಡಯ್ಯ, ಮಾದಾರ ಚನ್ನಯ್ಯ, ದೇವಾಂಗ ದಾಸಯ್ಯ, ಮೇಲು ಸಕ್ಕರೆ ಶೆಟ್ಟಿ, ಗಂಗಡಿಕಾರ ಒಕ್ಕಲಿಗ ಹೀಗೆ ಜಗತ್ತಿನಲ್ಲಿ ಒಂಬತ್ತೆ ಕಾಯಕ ಲಿಂಗಗಳು ಉಳಿದ ಲಿಂಗವಂತರೆಲ್ಲಾ ಕಲ್ಲುವಡ್ಡರಾಗಿ ಎಂದು ಶಾಪಕೊಟ್ಟರು ಮಹಾನುಭಾವ.''[೧]

ಇಲ್ಲಿ ಕಾಯಕ ಜೀವಿಗಳ ತತ್ವ ಪ್ರತಿಪಾದನೆಗಾಗಿ ದುಡಿವ ವರ್ಗದ ಜನರೇ ನಿಜಲಿಂಗರಾಗುತ್ತಾರೆ. ಕಾವಿ ಕಲ್ಯಾಣವನ್ನು ಬರಿದು ಮಾಡಿ ಈ ಒಂಬತ್ತು ಮಂದಿ ಲಿಂಗವಂತರು ಕಲಿಯುಗದಲ್ಲಿ ಜನ್ಮತಾಳುವಂತೆ ಹೇಳುತ್ತಾರೆ. ಅವರ ಮುಖ್ಯ ಕೆಲಸವೇನೆಂದರೆ ಮುಂದೆ ನೀಲಗಾರ ಪರಂಪರೆಯಲ್ಲಿ ಗುಡ್ಡನಬಿಟ್ಟು ಗುರುಮಣಿ ಕಟ್ಟುವಾಗ ಈ ಒಂಬತ್ತು ಮಂದಿ ಗುರುಸ್ಥಾನದಲ್ಲಿ ನಿಂತು ದೀಕ್ಷೆ ಕೊಡಬೇಕು ಎಂಬುದೇ ಆಗಿದೆ. ಅಂದರೆ ಕಾಯಕ ಜೀವಿಗಳು ಮಾತ್ರ ದೀಕ್ಷೆ ಕೊಡುವ ತೆಗೆದುಕೊಳ್ಳುವ ಹಕ್ಕುದಾರರು ಎಂದು ಹೇಳುತ್ತಾರೆ.

''ಅದುವರೆಗೆ ಮುಖ್ಯವಾಗಿ 'ಒಕ್ಕಲು' ಎನ್ನುವ ಪದ ಬೇಸಾಯವನ್ನು ಪ್ರಧಾನವಾಗಿ ಅವಲಂಬಿಸಿದ ಜನವರ್ಗದ ಹಿನ್ನೆಲೆಯಲ್ಲಿ ಬಳಕೆಗೆ ಬಂದಿತ್ತು. ಆದರೆ ಮಂಟೇಸ್ವಾಮಿ ಒಕ್ಕಲು ಎನ್ನುವುದರಲ್ಲಿ ಇದರ ಅರ್ಥವ್ಯಾಪ್ತಿ ವಿಸ್ತಾರವಾಗಿದೆ. ಮಂಟೇಸ್ವಾಮಿಯನ್ನಾಗಲಿ ಸಿದ್ದಪ್ಪಾಜಿಯನ್ನಾಗಲಿ ತಮ್ಮ ಮನೆಯ ದೇವರೆಂದು ಒಪ್ಪಿಕೊಂಡು ಆ ಮಠಕ್ಕೆ ಜಾತ್ರೆಗಳಿಗೆ ನಡೆದುಕೊಳ್ಳುವುದರ ಜೊತೆಯಲ್ಲಿ ಮನೆಯ ಹಿರಿಯ ಮಗನನ್ನು ನೀಲಗಾರನಾಗಿ ದೀಕ್ಷೆ ಬಿಡುವವರನ್ನು ''ನೀಲಗಾರ ಒಕ್ಕಲು'' ಮಂಟೇಸ್ವಾಮಿ ಒಕ್ಕಲಿನವರು ಎಂದು ಕರೆಯುತ್ತಾರೆ. ಈ ಅರ್ಥದಲ್ಲಿ ಒಕ್ಕಲಿನವರು ಎಂದರೆ ಸುವ್ಯವಸ್ಥಿತವಾದವರು ಎನ್ನುವ ಅರ್ಥ ಬರುವುದಿಲ್ಲ, ಮಂಟೇಸ್ವಾಮಿಯು ಸಿದ್ದಪ್ಪಾಜಿ ಎಂಬ ವಿಶ್ವಕರ್ಮ ಜಾತಿಯ ಆಚಾರಿಯನ್ನು ಒಕ್ಕಲು ಪಡೆಯುತ್ತಾರೆ. ನಂತರ ಕುರುಬೇಗೌಡ, (ಬೊಪ್ಪೇಗೌಡನಪುರ) ದೊಡ್ಡಮ್ಮ ತಾಯಿ, ಸಬರಾಯಪಟ್ಟಣದ ಮಕ್ಕಳು ಇವರನ್ನು ಪಡೆದರು. ಒಕ್ಕಲಾಗುವ ಪ್ರಕ್ರಿಯೆ ಕಂಡುಬರುವುದು ಸ್ವತಃ ಸಿದ್ದಪ್ಪಾಜಿಯನ್ನೇ ಸಿಸುಮಗನಾಗಿ ಪಡೆದು ದೀಕ್ಷೆ ಕೊಡುವಲ್ಲಿ, ದೊಡ್ಡಮ್ಮ ತಾಯಿಯನ್ನು ರಾಜಪ್ಪಾಜಿಗೆ ಮದುವೆ ಮಾಡಲು ಪಡೆಯುತ್ತಾನೆ. ಸಬರಾಯನ ಪಟ್ಟಣದ ಮಕ್ಕಳನ್ನು ತನ್ನ ಮಠಮನೆಯ ಗುರುಗಳಾಗಿ ನಡೆಸಿಕೊಂಡು ಹೋಗಲು ಪಡೆಯುತ್ತಾನೆ. ರಾಚಪ್ಪಾಜಿಗೆ ಕಪ್ಪಡಿಯನ್ನು ನಡೆಸಿಕೊಂಡು ಹೋಗಲು ಅಜ್ಞಾಪಿಸುತ್ತಾನೆ.'

ಆದರೆ ಕೆಂಪಾಚಾರಿಯನ್ನು ಬ್ರಹ್ಮಚಾರಿಯನ್ನಾಗಿಯೇ ಇರಿಸುತ್ತಾನೆ. ಈ ಒಕ್ಕಲಾಗುವ ಪ್ರಕ್ರಿಯೆ ಸಂಪೂರ್ಣವಾಗಿ ಕಾಣುವುದು ಸಿದ್ದಪ್ಪಾಜಿಯನ್ನು ಸಿಸುಮಗನಾಗಿ ಪಡೆಯುವಲ್ಲಿ. ಇದೇ ಅರ್ಥದಲ್ಲಿ ಈ ಕಾವ್ಯದ ಪಲ್ಲವಿ ''ಸಿದ್ದಯ್ಯಸ್ವಾಮಿ ಬನ್ನಿ ಪವಾಡ ಗೆದ್ದಯ್ಯ ನೀವೇ ಬನ್ನಿ'' ಎಂಬುದಾಗಿದೆ. ಅಂದರೆ ಅವನ ಲೀಲೆಗಳನ್ನು ಕೊಂಡಾಡುವವರಲ್ಲಿ ಸಿದ್ದಪ್ಪಾಜಿ ಮೊದಲಿಗ. ಈ ಕಾರಣ ಈ ಸಂಪ್ರದಾಯದ ಆದ್ಯ ನೀಲಗಾರ ಸಿದ್ದಪ್ಪಾಜಿಯಾಗಿ ಕಂಡುಬಂದಿದ್ದಾನೆ. ಆದ್ದರಿಂದ ಒಕ್ಕಲಾಗುವುದರಲ್ಲಿ 'ಸೇರು ಒಕ್ಕಲು', 'ಎಡೆ ಬಿದ್ದ ಒಕ್ಕಲು' ಎನ್ನುವ ಪದಗಳು ಬರುತ್ತವೆ. ಆಂಶಿಕವಾದ ಪರಿವರ್ತನೆಯನ್ನು ಅಥವಾ ಆಂಶಿಕವಾಗಿ ಈ ಪರಂಪರೆಗೆ ಸೇರಿಕೊಳ್ಳುವುದು ಕಂಡುಬರುತ್ತದೆ. ಮಂಟೇಸ್ವಾಮಿ ಸಂಪ್ರದಾಯ ಕಾಣಿಸಿಕೊಳ್ಳುವುದು ಮಧ್ಯಕಾಲೀನ ಸಾಹಿತ್ಯ ಚರಿತ್ರೆಯಲ್ಲಿ. ಆದ್ದರಿಂದ ಈಗಾಗಲೇ ಒಂದು ಜನವರ್ಗ ತನ್ನ ಸಾಂಸ್ಕೃತಿಕ ಅಗತ್ಯತೆಗಳಿಗಾಗಿ ಒಂದೊಂದು ಧರ್ಮದ ಆಚರಣೆಯಲ್ಲಿತ್ತು. ನಂತರ ಈ ಸಂತನ ಅತಿಮಾನುಷ ಶಕ್ತಿಗಳಿಗೆ ಜೀವಪರವಾದ ನಿಲುವುಗಳಿಗೆ ಒಪ್ಪಿಸಿಕೊಂಡು ಅವನ ಒಕ್ಕಲಾದರು. ಅಂದರೆ ಅವನಿಗೆ ನಡೆದುಕೊಳ್ಳುವವರಾದರು. ಹಾಗೆಂದಾಕ್ಷಣ ತಮ್ಮ ಮೂಲ ಧರ್ಮವನ್ನು ಕಡೆಗಣಿಸಿ ಬಂದರು ಎಂಬುದು ಇದರ ಅರ್ಥವಲ್ಲ. ಮಂಟೇಸ್ವಾಮಿ ಒಕ್ಕಲು ಎಂದರೆ ಅದೊಂದನ್ನೇ ಅನುಸರಿಸಬೇಕೆಂಬ ನಿಲುವು ಈಗಲೂ ಈ ಜನವರ್ಗದಲ್ಲಿ ಕಂಡು ಬಂದಿಲ್ಲ. ಹಲವು ಜಾತಿಯ ಹಲವು ಧರ್ಮದ ಜನರು ಈ ಮಂಟೇಸ್ವಾಮಿ ಒಕ್ಕಲಾಗುವುದು ಈ ಪರಂಪರೆಯ ಒಂದು ವೈಶಿಷ್ಟ್ಯವಾಗಿದೆ.

ಒಕ್ಕಲುಗಳ ಪ್ರಕ್ರಿಯೆಯಲ್ಲಿ ಮತ್ತೊಂದು ಒಕ್ಕಲು ಸೇರು ಒಕ್ಕಲುಗಳನ್ನು ಕಾಣಬಹುದು. ಇಲ್ಲಿ ಸೇರು ಒಕ್ಕಲು ಎಂದರೆ ಅವರ ಮನೆಯ ಮೊದಲ ಮಗನನ್ನು ನೀಲಗಾರನಾಗಿ ಬಿಟ್ಟು ನಂತರ ಉಳಿದ ಮಕ್ಕಳನ್ನು ಇತರ ದೇವರುಗಳಿಗೆ ಬಿಡಬಹುದು. ಮೂಲತಃ ಮಂಟೇಸ್ವಾಮಿಯನ್ನು 'ಮಂಟೇಲಿಂಗ' ಎಂದು ಕರೆಯುವುದು ವೀರಶೈವ ಧರ್ಮದ ಪ್ರಭಾವವೇ ಆಗಿದೆ. ಹಾಗೆ ಮಂಟೇಸ್ವಾಮಿಯನ್ನೇ 'ಅಲ್ಲಮಪ್ರಭು' ಎಂದು ಕರೆದುಕೊಂಡಿದ್ದಾರೆ ಎಂದು ಈಗಾಗಲೇ ಹೇಳಲಾಗಿದೆ. ಇವರಲ್ಲಿ ಕೆಲವು ಮಟ್ಟಿಗೆ ವೈಷ್ಣವ ಸಂಪ್ರದಾಯ ದೇವರುಗಳ ಆಚರಣೆಗಳು ಕಂಡುಬರುತ್ತವೆ. ಹಲಗೂರು ಪಾಂಚಾಲದವರು ಶ್ರೀರಂಗಪಟ್ಟಣದ ರಂಗಸ್ವಾಮಿಗೆ ಚಿನ್ನದ ಗರುಡಗಂಬ ಮಾಡಿಕೊಡಲು ಒಪ್ಪಿದರು. ಹಾಗೆ ಮೂರು ನಾಮದ ಮುತ್ತತ್ತಿರಾಯ ವೈಷ್ಣವ, ಒಕ್ಕಲಿನವನು, ಆದ್ದರಿಂದ ಶೈವ-ವೈಷ್ಣವ ಎರಡು ಧರ್ಮಗಳಿಗೂ ಒಗ್ಗಿಸಿಕೊಳ್ಳುವ ಶಕ್ತಿ ಈ ಪರಂಪರೆಗೆ ಇದ್ದುದರಿಂದ ಜಾತಿಯಾಗುವ ಅಪಾಯದಿಂದ ಪಾರಾಗಿದೆ. ಇಷ್ಟೇ ಅಲ್ಲದೆ ಈ ಪರಂಪರೆಗೆ ಸಿದ್ಧರು, ಆರೂಢರು, ಶಾಕ್ತ ಪಂಥಗಳ ಪರಿಚಯವೂ ಇದೆ. ಸಿದ್ದಪ್ಪಾಜಿ ಎನ್ನುವ ಹೆಸರೇ ಆರೂಢರ ಪರಿಭಾಷೆಯಾಗಿದೆ. ಇವರು ಮಾಂಸಾಹಾರಿಗಳೂ ಹೌದು. ಇವರ ತಿಲಕ ಕಪ್ಪು ಇತ್ಯಾದಿಗಳನ್ನು ಹಾಕಿಕೊಳ್ಳುವುದನ್ನು ಗಮನಿಸಿದಾಗ ಇವರಿಗೆ ತಾಂತ್ರಿಕ ಪಂಥಗಳ ಪರಿಯಚಯವು ಇದೆ ಎಂಬುದು ಕಂಡುಬರುತ್ತದೆ. ರಸಸಿದ್ಧರಲ್ಲಿ ಜ್ಞಾನವನ್ನು ಸಂಪಾದಿಸುವುದರಲ್ಲಿ ರಸಯೋಗ ತಂತ್ರವು ಒಂದು. ಸಿದ್ದಪ್ಪಾಜಿಯಾಗಲಿ, ಮಂಟೇಸ್ವಾಮಿಯಾಗಲಿ, ಭಂಗಿಸೇವೆ ಮಾಡಿದಾಗ ಉಂಟಾಗುವ ನೀಲಗಳ ವರ್ಣನೆ ರಸಯೋಗ ಸಿದ್ಧಿಯನ್ನು ಸಾಂಕೇತಿಸುತ್ತದೆ. ಈಗಲೂ ಕೆಳವರ್ಗದ ಜನರು ಗುಡ್ಡನನ್ನು ಬಿಡುವಾಗ ಭಂಗಿ ಸೇವನೆಯನ್ನು ಅವನಿಗೆ ಕಡ್ಡಾಯ ಮಾಡಿದ್ದಾರೆ. ಈ ಎಲ್ಲಾ ಹಿನ್ನೆಲೆಯಲ್ಲಿ ಶಾಕ್ತ ಪಂಥಗಳ ಮತ್ತು ತಾಂತ್ರಿಕ ಪಂಥಗಳ ಸಂಬಂಧವು ಇದೆ ಎಂಬುದು ಗೊತ್ತಾಗುತ್ತದೆ. ಹನ್ನೆರಡನೆಯ

ಶತಮಾನದ ಕಲ್ಯಾಣದ ಕ್ರಾಂತಿಯಾದ ನಂತರ ಮತ್ತೆ ಪುನರುತ್ಥಾನ ಪಡೆದ ಈ ಪಂಥ ಈ ಎಲ್ಲಾ ಕಾರಣಗಳಿಂದ ಕೆಳವರ್ಗದ ಅಸಂಖ್ಯಾತ ಭಕ್ತರ ಧರ್ಮವಾಗಿದೆ. ಯಾವುದೇ ಕಟ್ಟಳೆಗಳಿಲ್ಲದೆ ಪ್ರಕೃತಿದತ್ತವಾದ ಆಚರಣೆಗಳಿಂದ ಕೂಡಿದ ಕಾರಣ ಈ ಧರ್ಮವನ್ನೆ ಕೆಳವರ್ಗದವರು ಒಕ್ಕಲಾಗುವುದಕ್ಕೆ ಪ್ರೇರೇಪಿಸಿತು.

೩ : ೧.೧ ನೀಲಗಾರ ಒಕ್ಕಲಾಗಿರುವ ಜಾತಿಗಳು

ನೀಲಗಾರರ ಆರಾಧ್ಯದೈವ ಮಂಟೇಸ್ವಾಮಿ ಪರಂಪರೆಗೆ ಹೆಚ್ಚು ನಡೆದುಕೊಳ್ಳುವವರು ದಲಿತವರ್ಗದವರು. ಅದರಲ್ಲೂ ಹರಿಜನ ಜಾತಿಗೆ ಸೇರಿದವರು ಹೆಚ್ಚಾಗಿದ್ದಾರೆ. ಮಂಟೇಸ್ವಾಮಿಯನ್ನೇ ಕುರಿತಂತೆ ಕಾವ್ಯದಲ್ಲಿ ಅವನೊಬ್ಬ ದೈವಿಕ ಪುರುಷ ಎಂದು ಚಿತ್ರಿಸಿದ್ದಾರೆ. ಈತನೊಬ್ಬ ಚಾರಿತ್ರಿಕ ವ್ಯಕ್ತಿಯಾದರು ಚಾರಿತ್ರಿಕ ದಾಖಲೆಗಳ ಕೊರತೆಯಿಂದಾಗಿ ಮೂಲತಃ ಈತ ಯಾವ ಜನಾಂಗದವನು ಎಂಬುದು ಅಜ್ಞಾತವಾಗಿಯೇ ಉಳಿದಿದೆ. ಅನೇಕ ದಲಿತ ವರ್ಗದವರೂ ಇವನು ಸಾಂಸ್ಕೃತಿಕ ನಾಯಕ ಎಂದು ಒಪ್ಪಿಕೊಂಡು ಅವನಿಗೆ ನಡೆದುಕೊಳ್ಳುತ್ತಾರೆ. ಮೌಖಿಕ ಚರಿತ್ರೆಯನ್ನು ಕಟ್ಟಿಕೊಡುವ ವೃತ್ತಿಗಾಯಕರು ಹೆಚ್ಚು ಮಂದಿ ಕೆಳವರ್ಗದವರೇ ಆಗಿದ್ದಾರೆ. ಇವನ ಕಂಡಾಯ, ಮಟ್ಟಿಕಪ್ಪು, ದೀಕ್ಷಾ ವಿಧಾನ ಕೆಳವರ್ಗದ ಜನರ ಸಾಂಸ್ಕೃತಿಕ ಸಂಕೇತಗಳನ್ನು ಹೋಲುತ್ತದೆ. 'ಶಿಷ್ಟ ಸಮಾಜ ಕೆಟ್ಟದ್ದು' ಎಂದು ನಿರಾಕರಿಸಿದ ವಸ್ತುಗಳನ್ನೇ ಸ್ವೀಕಾರ ಮಾಡಿ ಒಂದು ಸಂಸ್ಕೃತಿಯನ್ನು ಒಂದು ಪರಂಪರೆಯನ್ನು ಕಟ್ಟಿ ಬೆಳೆಸಿದುದ್ದನ್ನು ಈ ನಾಯಕನಲ್ಲಿ ಕಾಣುತ್ತೇವೆ. ಇದಕ್ಕೆ ಭಂಗಿಸೇವನೆ-ಮಾಂಸಸೇವನೆ-ಮಟ್ಟಿಕಪ್ಪು-ದೂಳ್ತ ಕಂಡಾಯ ಇತ್ಯಾದಿಗಳೆಲ್ಲ ಉದಾಹರಣೆಯಾಗಬಹುದು.

ನೀಲಗಾರ ಒಕ್ಕಲಾಗಿರುವ ಜಾತಿಗಳಲ್ಲಿ ಪ್ರಮುಖವಾಗಿ ಒಂಬತ್ತು ಜಾತಿಗಳನ್ನು ತನ್ನ ಪರಂಪರೆಗೆ ಸೇರಿಸಿಕೊಂಡಿವೆ. ಈ ಎಲ್ಲಾ ಒಕ್ಕಲುಗಳ ಆಶಯ ಒಂದೇ ಆಗಿರುತ್ತದೆ. ಅಂದರೆ ತಮ್ಮ ಆರಾಧ್ಯ ದೈವಗಳಾದ ಮಂಟೇಸ್ವಾಮಿ, ಸಿದ್ದಪ್ಪಾಜಿ, ರಾಚಪ್ಪಾಜಿ ಪರಂಪರೆಗಳನ್ನು ಕಟ್ಟಿಕೊಡುತ್ತಾ ಶಿಷ್ಯ ವೃತ್ತಿ ಮೂಲಕ ಒಂದು ಸಂಸ್ಕೃತಿಯನ್ನು ಬೆಳೆಸುತ್ತಾ ಹೋಗುತ್ತಾರೆ. ಈ ಒಂಬತ್ತು ಒಕ್ಕಲುಗಳನ್ನು ಒಟ್ಟುಗೂಡಿಸಿ ತಮ್ಮ ದೈವದ ಧಾರ್ಮಿಕ ಆಚರಣೆ, ಹಬ್ಬಗಳ ಸಂದರ್ಭದಲ್ಲಿ ಎಲ್ಲಾ ಒಕ್ಕಲಿನ ನೀಲಗಾರರು ಒಂದೆಡೆ ಕಲೆತು ಆಚರಣೆಗಳನ್ನು ತುಂಬಾ ವಿಜೃಂಭಣೆಯಿಂದ ಆಚರಿಸುತ್ತಾರೆ. (ಈ ವಿವರಣೆಯನ್ನು ಸಾಮಾಜಿಕ ಸಂರಚನೆ ಭಾಗದಲ್ಲಿ ಚರ್ಚಿಸಲಾಗಿದೆ.)

ನೀಲಗಾರ ಒಕ್ಕಲಾಗಿರುವ ಜಾತಿಗಳನ್ನು ಈ ಕೆಳಗಿನಂತೆ ಗುರ್ತಿಸಬಹುದಾಗಿದೆ.

೧. **ಲಿಂಗಾಯತರು :** ಇವರು ನೀಲಗಾರ ಪರಂಪರೆಯಲ್ಲಿ ಸೇರಿಕೊಂಡಿದ್ದಾರೆ, ನೀಲಗಾರರ ಸಂಖ್ಯೆ. ಈ ಒಕ್ಕಲಿನಲ್ಲಿ ಹೆಚ್ಚಿದೆ. ಆದರೆ, ಇವರಲ್ಲಿ ಮಂಟೇಸ್ವಾಮಿ ಅಥವಾ ಸಿದ್ದಪ್ಪಾಜಿ ಕತೆಗಳನ್ನು ಹಾಡುವ ಗಾಯಕರಿರುವುದಿಲ್ಲ. ಇವರೂ ಸಹ ತಮ್ಮ ಆಹಾರ ಪದ್ಧತಿ, ಕುಟುಂಬ ಪದ್ಧತಿ ಮುಂತಾದ ಸಾಮಾಜಿಕ ಸಂರಚನೆಯಲ್ಲಿ ಬೇರೆ ಒಕ್ಕಲಿನಂತೆಯೇ ಇವರಲ್ಲಿಯೂ ವ್ಯತ್ಯಾಸಗಳನ್ನು ಕಂಡುಕೊಳ್ಳಬಹುದು. ಆದರೆ ನೀಲಗಾರನಾಗಿ ತಮ್ಮ ಧಾರ್ಮಿಕ ಆಚರಣೆಗಳ ಸಂದರ್ಭದಲ್ಲಿ ತಮ್ಮ ದೈವದ ಪರಂಪರೆಯನ್ನು ಸಾರುವುದು ಮತ್ತು ಆ ಪರಂಪರೆಯನ್ನು ಬೆಳೆಸುವುದು ಇಲ್ಲಿ ಮುಖ್ಯವಾಗುತ್ತದೆ. ಆದ್ದರಿಂದ ಇಲ್ಲಿ ಜಾತಿ

ಎನ್ನುವುದು ಗೌಣವಾಗುತ್ತದೆ. ಇವರ ಉದ್ದೇಶ ಆ ಪರಂಪರೆಯನ್ನು ಕಟ್ಟಿಕೊಡುವುದು ಮಾತ್ರ ಆಗಿರುತ್ತದೆ. ಇನ್ನುಳಿದಂತೆ ಹಬ್ಬಗಳ ಸಂದರ್ಭದಲ್ಲಿ ಅಥವಾ ಹುಟ್ಟು, ಮದುವೆ, ಸಾವುಗಳ ಸಮಯದಲ್ಲಿ ಇವರ ಆಚರಣೆ ಜಾತಿ ಸಂಬಂಧವಾಗಿರುತ್ತದೆ. ಆದರೆ ನೀಲಗಾರನಾದ ಲಿಂಗಾಯಿತನಿಗೆ ಮಾತ್ರ ಎಲ್ಲಾ ಒಕ್ಕಲಿನಲ್ಲಿರುವಂತೆ ಒಂದೇ ಆಚರಣೆ, ಒಂದೇ ಸಂಪ್ರದಾಯ ಇರುವುದನ್ನು ಕಾಣಬಹುದು. ಇವರು ಸಾಮಾಜಿಕವಾಗಿ ಆರ್ಥಿಕವಾಗಿ ಮುಂದುವರಿದವರಾಗಿದ್ದಾರೆ ಎಂಬುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳಿದುಬರುತ್ತದೆ.

ಹೀಗೆ ನೀಲಗಾರ ಒಕ್ಕಲಿನ ಲಿಂಗಾಯತ ನೀಲಗಾರರು ಬೇರೆ ಒಕ್ಕಲಿನವರಿಗಿಂತ ಇವರ ಸಂಖ್ಯೆ ಹೆಚ್ಚಾಗಿದೆ. ಇವರೂ ಸಹ ಬೇರೆ ಬೇರೆ ಸಂದರ್ಭದಲ್ಲಿ ಬೇರೆ ಒಕ್ಕಲಿನ ನೀಲಗಾರರನ್ನು ಕರೆಸಿ ತಮ್ಮ ದೈವದ ಕಥೆಗಳನ್ನು ತಮ್ಮ ತಮ್ಮ ಮನೆಗಳಲ್ಲಿ ಹಾಡಿಸುತ್ತಾರೆ.

೨. ಗಂಗಡಕಾರ ಒಕ್ಕಲಿಗರು : ಗಂಗಡಕಾರ ಒಕ್ಕಲಿಗರೂ ಸಹ ಈ ಪರಂಪರೆಗೆ ಸೇರಿದವರಾಗಿದ್ದಾರೆ. ಇವರ ಸಂಖ್ಯೆಯು ಅಧಿಕವಾಗಿಯೇ ಇದೆ. ಆದರೆ ಮಂಟೇಸ್ವಾಮಿ ಕಾವ್ಯವನ್ನು ಹಾಡುವ ನೀಲಗಾರ ಗಾಯಕರು ಇವರಲ್ಲಿ ಇಲ್ಲ. ಇವರು ತಮ್ಮ ಕೌಟುಂಬಿಕ ಆಚರಣೆ ಸಂದರ್ಭದಲ್ಲಿ ಗಾಯಕರಾಗಿರುವ ಬೇರೆ ಒಕ್ಕಲಿನ ನೀಲಗಾರ ತಂಡದವರನ್ನು ಕರೆಯಿಸಿ ಕಥೆ ಹಾಡಿಸುತ್ತಾರೆ. ಇವರಿಗೂ ಸಹ ತಮ್ಮ ಜಾತಿಯ ಚೌಕಟ್ಟಿನ ಸಂದರ್ಭದಲ್ಲಿ ಆಚರಣೆಗಳು ಬೇರೆ ಬೇರೆಯಾಗಿರುತ್ತವೆ. ಆದರೆ ನೀಲಗಾರನಾದ ಮೇಲೆ ಒಂದೇ ಆಚರಣೆ, ಒಂದೇ ಸಂಸ್ಕೃತಿ, ಒಂದೇ ನಡೆ, ಒಂದೇ ನುಡಿ,ಇರುವುದನ್ನು ಗಮನಿಸಬಹುದಾಗಿದೆ. ಇವರೂ ಸಹ ನೀಲಗಾರನ ಎಲ್ಲಾ ಗುಣಲಕ್ಷಣಗಳನ್ನು ಹೊಂದಿದ್ದು ತಮ್ಮ ದೈವ ಮಂಟೇಸ್ವಾಮಿಯ ಬಗ್ಗೆ ತುಂಬಾ ಗೌರವ ಪ್ರೀತಿ ಇಟ್ಟುಕೊಂಡವರಾಗಿದ್ದಾರೆ.

೩. ಅರಸುಗಳು : ಅರಸು ಮನೆತನದವರ ಕಾಣಿಕೆ ಈ ಪರಂಪರೆಗೆ ತುಂಬಾ ಪ್ರಮುಖವಾಗಿದೆ. ಇವರು ಸಂಖ್ಯೆಯಲ್ಲಿ ಕಡಿಮೆ. ಮಂಟೇಸ್ವಾಮಿ ಹಾಗೂ ಶಿಷ್ಯರ ಲೀಲಾವಿನೋದಗಳ ಕ್ಷೇತ್ರವ್ಯಾಪ್ತಿಯಲ್ಲಿ ಮೈಸೂರು ಪ್ರಾಂತ್ಯ ತುಂಬಾ ಪಾತ್ರವಹಿಸಿದೆ. ಮುಖ್ಯವಾಗಿ ಮಂಟೇಸ್ವಾಮಿ ಶಿಷ್ಯರಲ್ಲಿ ಒಬ್ಬರಾದ ರಾಚಪ್ಪಾಜಿಯವರು. ಇವರು ಮೈಸೂರು ಸಂಸ್ಥಾನದ ಮೂಲಗುರುಗಳಾಗಿದ್ದು ಒಡೆಯರ ವಂಶಸ್ಥಾಪನೆಗೆ ಕಾರಣಕರ್ತರೂ ಆಗಿದ್ದಾರೆ. ಚಾಮುಂಡೇಶ್ವರಿ ದೇವಿಯು ಮೈಸೂರು ಅರಸರ ಕುಲದೇವತೆಯಾಗಿರುವಂತೆಯೇ ಹದಿನಾಡು ಪ್ರಾಂತ್ಯವು ಜಗತ್ ಪ್ರಸಿದ್ಧವಾದ ಕಲೆ, ಸಾಹಿತ್ಯ, ಸಂಸ್ಕೃತಿಗಳ ತವರೂರು ಎನಿಸಿದ ಮೈಸೂರು ರಾಜ್ಯವಾಗಲು ರಾಚಪ್ಪಾಜಿಯವರು ವೈರಿಗಳನ್ನೆಲ್ಲಾ ನಿವಾರಿಸಿ ಸಕಲೈಶ್ವರ್ಯ ನೀಡಿ ಧರ್ಮದಿಂದ ರಾಜ್ಯವನ್ನು ಪಾಲಿಸುವಂತೆ ಆಶೀರ್ವಾದ ಮಾಡಿ ಮುಂದೆ ಸಾಗುತ್ತಾರೆ. (ವಿವರಕ್ಕೆ ಮಂಟೇಸ್ವಾಮಿ ಕತೆ ನೋಡಿ)

ಇವರು ಮೂಲತಃ ಶೈವ ಪಂಥೀಯರಾಗಿದ್ದು ನಂತರ ವೈಷ್ಣವ ಧರ್ಮಾನುಯಾಯಿಗಳಾಗಿದ್ದಾರೆ. ತಲಕಾಡು ಮೇಲುಕೋಟೆ, ನಂಜನಗೂಡು, ಶ್ರೀರಂಗಪಟ್ಟಣ ಮುಂತಾದ ದೇವಾಲಯಗಳಿಗೆ ದಾನ ದತ್ತಿ ನೀಡಿದಂತೆ ಕಪ್ಪಡಿಯ ತಮ್ಮ ಕುಲಗುರುಗಳ ಸನ್ನಿಧಿಗೂ ಭಕ್ತಿಯಿಂದ ನಡೆದುಕೊಳ್ಳುತ್ತಾ ಪೂಜೆ, ಉತ್ಸವ, ಜಾತ್ರೆ ಕಾರ್ಯಗಳೆಲ್ಲಾ ಯಶಸ್ವಿಯಾಗಿ ಜರುಗುವಂತೆ ಮೈಸೂರು

ಅರಸರು ಅನುಕೂಲ ಮಾಡಿಕೊಟ್ಟಿರುವುದಕ್ಕೆ ದಾಖಲೆಗಳಿವೆ. ಇಷ್ಟಲ್ಲದೆ ಅರಮನೆಯ ವಿಶೇಷ ಗೌರವದ ಬಿರುದು ಬಾವಲಿಗಳನ್ನು ವಾದ್ಯಗಳನ್ನು ಈ ಕ್ಷೇತ್ರಕ್ಕೆ ನೀಡಿರುತ್ತಾರೆ.

ಈ ನೀಲಗಾರ ಸಮುದಾಯಕ್ಕೆ ಅರಸು ಕುಲದವರು ಹಿಂದಿನಿಂದಲೂ ಅಧಿಕಾರಿಗಳಾಗಿದ್ದು ಇಂದಿಗೂ ಹಬ್ಬ-ಜಾತ್ರೆಗಳ ಸಂದರ್ಭದಲ್ಲಿ ಅವರಿಗೆ ಆ ಸಮುದಾಯದವರು ಪ್ರೀತಿ ಗೌರವಗಳನ್ನು ತೋರಿಸುತ್ತಾರೆ. ಇವತ್ತಿಗೂ ಅರಸು ಮನೆತನದ ಮಠದ ಬುದ್ಧಿಯವರು, ಬೊಪ್ಪೇಗೌಡನ ಪುರ ಮತ್ತು ಮಳವಳ್ಳಿ ಮಠಗಳಲ್ಲಿ ಕಾಣಬಹುದು. ಇವರಿಬ್ಬರೂ ಪ್ರತಿವರ್ಷ ಒಬ್ಬರಂತೆ ಜಾತ್ರೆ ನಡೆಯುವುದನ್ನು ವಹಿಸಿಕೊಳ್ಳುವ ಬಾಬುದಾರಿಕೆ ಇವರಿಗೆ ಮಾತ್ರ ಇದೆ. ಆದ್ದರಿಂದ ಪ್ರಸ್ತುತದಲ್ಲಿ ಗುರುಮಠದಲ್ಲಿರುವ ಮಠಾಧೀಶರು ''ಅರಸು''ಗಳೆಂದು ಕರೆದುಕೊಳ್ಳುತ್ತಾರೆ. ಇವರು ಮೈಸೂರು ಒಡೆಯರ ಮನೆತನದಿಂದ ಹೆಣ್ಣು ತರುವ ಕೊಡುವ ವೈವಾಹಿಕ ಸಂಬಂಧವನ್ನು ಈಗಲೂ ಉಳಿಸಿಕೊಂಡಿರುವುದಾಗಿ ಹೇಳುತ್ತಾರೆ. ಈ ವೈವಾಹಿಕ ಸಂಬಂಧ ಇವರೆಲ್ಲಾ ಶೈವ ಸಿದ್ಧ ಪರಂಪರೆಯವರು ಎಂಬುದನ್ನು ಮತ್ತಷ್ಟು ಖಚಿತಪಡಿಸುತ್ತದೆ. ಇವರನ್ನು ಸಖರಾಯಪಟ್ಟಣದ ಅರಸುಮನೆತನದವರು ಎಂಬ ಮಾತೂ ಸಹ ಸತ್ಯ ಎನಿಸುತ್ತದೆ. ಮಂಟೇಸ್ವಾಮಿ ಗದ್ದುಗೆ ಇರುವ ಬೊಪ್ಪೇಗೌಡನಪುರದ ಮಠಾಧಿಪತಿಗಳು ಒಡೆಯರ ಬೆಡಗಿಗೆ ಸೇರಿದವರು. ಇವರು ಸಹ ಲಿಂಗಧಾರಣೆ ಮಾಡುತ್ತಾರೆ ಮತ್ತು ಮಾಂಸಹಾರಿಗಳಲ್ಲ. ಹೀಗಾಗಿ ನೀಲಗಾರ ಪರಂಪರೆಯಲ್ಲಿ ಅರಸುಮನೆತನದವರು ಎಲ್ಲಾ ಜವಾಬ್ದಾರಿಗಳನ್ನು ನೋಡಿಕೊಳ್ಳುತ್ತಾರೆ.

೪. **ಕುರುಬರು :** ಕುರುಬ ಜನವರ್ಗದಲ್ಲಿಯೂ ನೀಲಗಾರರ ಪರಂಪರೆಗೆ ಸೇರಿದ ಅನೇಕ ಕುಟುಂಬಗಳಿವೆ. ಸಂಖ್ಯೆಯಲ್ಲಿ ಇವರು ಕಡಿಮೆ ಇದ್ದಾರೆ. ಇವರಲ್ಲಿಯೂ ಕತೆಗಳನ್ನು ಹಾಡುವ ಗಾಯಕರು ಇರುವುದಿಲ್ಲ. ಇವರು ಮೂಲತಃ ಅಲೆಮಾರಿ ಪಶುಪಾಲನೆಯಲ್ಲಿದ್ದ ಒಟ್ಟು ಜನವರ್ಗ ಬೇಸಾಯದಿಂದ ನೆಲೆಗೊಳ್ಳುವ ಪ್ರವೃತ್ತಿ ಬೆಳೆಸಿಕೊಂಡಾಗ 'ಕುರುಬ' ಎಂಬ ಪದದ ವ್ಯಾಪ್ತಿ ಸಂಕುಚಿತವಾಯಿತು. ಯಾರು ತಮ್ಮ ಪೂರ್ವದ ಕುರಿಸಾಕಾಣಿಕೆ ಕಸುಬನ್ನು ಮುಂದುವರಿಸಿಕೊಂಡರೋ ಅವರನ್ನು ಕುರುಬರೆಂದು ಗುರುತಿಸಿಕೊಳ್ಳುತ್ತಾ ಅದೊಂದು ಜಾತಿ ಸೂಚಕ ಪದವಾಗಿ ಬಳಕೆಯಾಯಿತು. ಇವರು ಕೊಡುವ -ತರುವ ವೈವಾಹಿಕ ರಕ್ತ ಸಂಬಂಧಕ್ಕಾಗಿ ಅನೇಕ ಬಳಿ ಬೆಡಗುಗಳನ್ನು ಸೃಷ್ಟಿಸಿಕೊಂಡರು. ಕುರುಬರಲ್ಲಿ ಹಾಲುಮತ, ಗೊಂಡ, ಗೊರವ, ಕಂಬಳಿ, ಅಂಡೇ ಕುರುಬ, ಒಡೇರು ಮುಂತಾದ ಪಂಗಡಗಳನ್ನು ಕಾಣುತ್ತೇವೆ.

ಮಧ್ಯಕಾಲೀನ ಚಾರಿತ್ರಿಕ ಸಂದರ್ಭಗಳಲ್ಲಿ ಹುಟ್ಟಿದ ನಾಥ-ಸಿದ್ಧ ಪರಂಪರೆಗಳಲ್ಲಿ ಇವರ ಪಾತ್ರವೇ ಹಿರಿದು. ವೈಷ್ಣವ, ವೀರಶೈವ, ಜೈನಧರ್ಮಗಳಿಂದ ಹೊರಗುಳಿದ ಇವರು ನಾಥ, ಸಿದ್ಧ, ಆರೂಢ ಪರಂಪರೆಗಳಲ್ಲಿ ಸೇರಿಕೊಂಡರು. ''ಗೃಹಸ್ಥ ಯೋಗಿಗಳಲ್ಲಿ ನೇಕಾರರು ಕುರುಬರೇ ಹೆಚ್ಚು''[೪] ರೇವಣಸಿದ್ಧ ಕೊಡೇಕಲ್ಲು ಬಸವಣ್ಣ, ಮಂಟೇಸ್ವಾಮಿ, ಮೋನಪ್ಪ ಮುಂತಾದ ಮಧ್ಯಕಾಲೀನ ಸಂತರು ಕಟ್ಟಿದ ಪರಂಪರೆಗಳೆಲ್ಲಾ ಬೇಡರ ಮತ್ತು ಕುರುಬರ ನೆಲೆವೀಡಾಗಿ ಕೆಳವರ್ಗದ ಜನರು ಈ ಪರಂಪರೆಗಳಿಗೆ ನಡೆದುಕೊಂಡಿದ್ದಾರೆ.

ಕುರುಬರಲ್ಲಿ ರೇವಣ್ಣ ಸಿದ್ದನ ಪರಂಪರೆಯವರು ಇದ್ದಾರೆ ಇವರನ್ನು ಒಡೆಯರು ಎಂದು ಕರೆಯುತ್ತಾರೆ. ಇವರು ಕುರುಬರ ಗುರುಪರಂಪರೆಗೆ ಸೇರಿದವರು. ಇವರು ಲಿಂಗಧಾರಿಗಳು ಮತ್ತು ಮಾಂಸಹಾರ ಮಾಡುವುದಿಲ್ಲ.

ಮಂಟೇಸ್ವಾಮಿಗಳು ಸಂಚರಿಸಿದ ಎಲ್ಲಾ ಕ್ಷೇತ್ರಗಳು ಕುರುಬರ ನೆಲೆಗಳು. ಕೊಡೇಕಲ್ಲಿನಿಂದ ಹೊರಡುವ ಇವರು ಮಲಪ್ರಭಾ ನದಿಯ ಸಮೀಪವಿರುವ ಕೆಲೂರನ್ನು ತಲುಪುತ್ತಾರೆ. ಕೆಲೂರಿನ ಕೊಪ್ಪದ ಮನೆತನದ ರಾಮವ್ವೆ (ಕುರುಬರು)ಯನ್ನು ಒಕ್ಕಲಾಗಿಸಿಕೊಳ್ಳುತ್ತಾರೆ. ಕೆಲೂರಿನಲ್ಲಿ ಈಗಲೂ ಈ ಮನೆತನದವರು ಇದ್ದಾರೆ. ಇವರು ಒಡೆಯರು ಎಂದು ಕರೆದುಕೊಳ್ಳುತ್ತಾರೆ. ಕೆಲೂರಿನ ಮಂಟೇಸ್ವಾಮಿ ಜಾತ್ರೆಗೆ ''ಕಳಸ'' ತರುವ ಬಾಬುದಾರಿಕೆಯನ್ನು ಈಗಲೂ ಉಳಿಸಿಕೊಂಡಿದ್ದಾರೆ. ಮುಂದೆ ಮಂಟೇಸ್ವಾಮಿಗಳ ಶಿಷ್ಯರಾದ ರಾಚಪ್ಪಾಜಿಯವರು ಮೈಸೂರು ಸಂಸ್ಥಾನದ ಒಡೆಯರ (ಒಡೆಯರು ಎಂಬುದು ಕುರುಬರ ಒಂದು ಬೆಡಗು) ಪರವಾಗಿ ನಿಂತು ಮೈಸೂರಿನಲ್ಲಿ ಒಡೆಯರ ವಂಶಸ್ಥಾಪನೆಗೆ ಕಾರಣರಾಗುತ್ತಾರೆ.

ಹೀಗೆ ಮಂಟೇಸ್ವಾಮಿಯವರು ತಾವು ನೆಲೆಗೊಳ್ಳುವ ಹಾಗೂ ಶಿಷ್ಯರನ್ನು ನೆಲೆಗೊಳಿಸುವ ಪ್ರಕ್ರಿಯೆಯಲ್ಲಿ ಕುರುಬರ ತಾಣಗಳಾದ ಕೆಲೂರು, ಕಾಗಿನೆಲೆ, ಮೈಸೂರು, ಬೊಪ್ಪೇಗೌಡನಪುರ, ಕುರುಬನಕಟ್ಟೆಗಳನ್ನೇ ಸಾಂಸ್ಕೃತಿಕ ಕೇಂದ್ರಗಳಾಗಿಸಿ ಕೊಂಡಿದ್ದಾರೆ. ಈ ಕೇಂದ್ರಗಳಿಗೆ ಇನ್ನಿತರ ಕೆಳವರ್ಗದ ಜನರು ಒಕ್ಕಲುಗಳಾಗಿ ಪರಂಪರೆಯನ್ನು ಕಟ್ಟಿದ್ದಾರೆ. ಹೀಗಾಗಿ ಕುರುಬ ಜಾತಿಯ ನೀಲಗಾರರು ಮಂಟೇಸ್ವಾಮಿ ಪರಂಪರೆಯನ್ನು, ಶಿಷ್ಯತ್ವವನ್ನು ಪಡೆಯುವುದರ ಮೂಲಕ ಈ ಪರಂಪರೆಯನ್ನು ಉಳಿಸಿ ಬೆಳೆಸಿದ್ದಾರೆ.

೬. ಮಡಿವಾಳರು : ನೀಲಗಾರ ಪರಂಪರೆಯಲ್ಲಿ ಮಡಿವಾಳರು ತುಂಬಾ ಮುಖ್ಯರಾದವರು. ಹಬ್ಬ ಜಾತ್ರೆಗಳ ಸಂದರ್ಭದಲ್ಲಿ ಮಡಿಬಟ್ಟೆ ಹಾಕುವುದಕ್ಕೆ ಇವರು ಮುಖ್ಯವಾಗಿಬೇಕು. ಹಿಂದೆ ಮಂಟೇಸ್ವಾಮಿಗಳ ಕಾಲದಲ್ಲಿ ಇವರು ಕಂಕಣ ಬಟ್ಟೆ ಉರುಗುದಾರ ಮಾರುತ್ತಿದ್ದರು ಮತ್ತು ಬಾಸಿಂಗಗಳನ್ನು ತಯಾರಿಸುವ ಹೊಣೆಗಾರಿಕೆ ಇವರಿಗೆ ಇತ್ತು. ಈಗಲೂ ಸಹ ಧಾರ್ಮಿಕ ಆಚರಣೆಗಳ ಸಂದರ್ಭದಲ್ಲಿ ಮದುವೆ, ಸಾವು, ಹುಟ್ಟುಗಳ ಸಂದರ್ಭದಲ್ಲಿ ಈ ಜನವರ್ಗದವರು ಮುಖ್ಯವಾಗಿ ಬೇಕೇಬೇಕು.

ಮಡಿವಾಳ ನೀಲಗಾರರು ಸಂಖ್ಯೆಯಲ್ಲಿ ಹೆಚ್ಚು ಇದ್ದಾರೆ. ಇವರು ಮಂಟೇಸ್ವಾಮಿ ಸಿದ್ದಪ್ಪಾಜಿ ಪರಂಪರೆಗೆ ಸೇರಿದವರಾಗಿದ್ದಾರೆ. ಇವರಲ್ಲಿ ಕಥೆಗಳನ್ನು ಹಾಡುವವರ ಸಂಖ್ಯೆ ಕಡಿಮೆ ಇದೆ. ಮಡಿವಾಳ ನೀಲಗಾರರೆಲ್ಲ ಒಂದೇ ಜಾತಿಯವರೇ ಆಗಿರುತ್ತಾರೆ. ಇವರಿಗೆ ಹನ್ನೆರಡು ಬಣ್ಣವಿರುತ್ತದೆ. ಇವರಲ್ಲಿ ಮುಖ್ಯವಾಗಿ ಕೊಂಗ ಅಗಸ, ತಂಬಳ ಅಗಸ, ತೆಲಗ ಅಗಸ, ನಾರಾಯಣಸ್ವಾಮಿ ಕುಲದ ಅಗಸ, ಎಂಬ ನಾಲ್ಕು ಪಂಗಡಗಳಿವೆ. ಇವರೆಲ್ಲರೂ ತಮ್ಮ ಕುಟುಂಬ ಪದ್ಧತಿ ಒಳಪಂಗಡ ನ್ಯಾಯಪದ್ಧತಿ ಮುಂತಾದ ಸಾಮಾಜಿಕ ವ್ಯವಸ್ಥೆಗಳೆಲ್ಲ ಬೇರೆ ಬೇರೆಯಾಗಿರುತ್ತವೆ. ಆದರೆ ನೀಲಗಾರನಾಗಿದ್ದು ಆತ ಧಾರ್ಮಿಕ ಆಚರಣೆ ಹಬ್ಬಗಳ ಸಂದರ್ಭದಲ್ಲಿ ಎಲ್ಲಾ ಜಾತಿಯ ನೀಲಗಾರರಲ್ಲಿ ಇರುವ ಆಚಾರ ಸಂಪ್ರದಾಯದಂತೆ ಇವರಲ್ಲಿಯೂ ಯಾವುದೇ ವ್ಯತ್ಯಾಸವಿಲ್ಲದೆ ಇರುವುದನ್ನು ಕಾಣಬಹುದು.

ಮಂಟೇಸ್ವಾಮಿ, ಸಿದ್ದಪ್ಪಾಜಿ ಆರಾಧಕರಾದ ಮಡಿವಾಳರು ಸಹ ತಮ್ಮ ದೈವದ ಬಗ್ಗೆ ಭಕ್ತಿ ಗೌರವಗಳಿಂದ ಅತ್ಯಂತ ಪೂಜನೀಯವಾಗಿ ಆರಾಧಿಸುತ್ತಾರೆ. ಇವರೂ ಸಹ ಮಂಟೇಸ್ವಾಮಿ, ಸಿದ್ದಪ್ಪಾಜಿ, ಕಥೆಗಳನ್ನು ಹಾಡುವುದರ ಮೂಲಕ ಶಿಷ್ಯಪರಂಪರೆಯನ್ನು ಬೆಳೆಸುವುದರಲ್ಲಿ ಇವರ ಪಾತ್ರ ಮುಖ್ಯವಾಗುತ್ತದೆ.

ಹೀಗಾಗಿ ತಮ್ಮ ಆರಾಧ್ಯ ದೈವನ್ನು ಪೂಜಿಸಿ, ಬೆಳೆಸಿ, ತಮ್ಮ ಪರಂಪರೆಯನ್ನು ಒಂದು ಸಂಸ್ಕೃತಿಯ ಮೂಲಕ ಕಟ್ಟಿಕೊಳ್ಳುವಲ್ಲಿ ಮಡಿವಾಳ ನೀಲಗಾರರು ಪ್ರಮುಖವಾಗಿದ್ದಾರೆ.

೭. ಆಚಾರಿಗಳು (ವಿಶ್ವಕರ್ಮಿಗಳು) : ನೀಲಗಾರ ಪರಂಪರೆಯಲ್ಲಿ ಕಂಡುಬರುವ ಒಕ್ಕಲುಗಳಲ್ಲಿ ವಿಶ್ವಕರ್ಮರುಗಳು ಒಂದಾಗಿದೆ. ಈ ಪರಂಪರೆಯಲ್ಲಿ ಇವರ ಸಂಖ್ಯೆ ಕಡಿಮೆ ಇದೆ. ಇವರಲ್ಲಿ ಮಂಟೇಸ್ವಾಮಿ, ಸಿದ್ದಪ್ಪಾಜಿ ಹಾಡುಗಳನ್ನು ಹಾಡುವ ಗಾಯಕರ ಸಂಖ್ಯೆಯೂ ಕಡಿಮೆ ಇದೆ. ಇವರ ಆಚರಣೆಗಳು ಸ್ವಲ್ಪ ವ್ಯತ್ಯಾಸಗಳನ್ನು ಒಳಗೊಂಡಿರುತ್ತದೆ. ಅಂದರೆ ಸಾಮಾಜಿಕ ವ್ಯವಸ್ಥೆಯ ಸಂದರ್ಭದಲ್ಲಿ ಕುಟುಂಬ ಪದ್ಧತಿ, ಒಳಪಂಗಡಗಳು ಇವುಗಳು ಬೇರೆಯೇ ಆಗಿದ್ದು ಸ್ವಲ್ಪ ವ್ಯತ್ಯಾಗಳೊಡನೆ ಕೂಡಿರುತ್ತವೆ. ಮುಖ್ಯವಾಗಿ ವಿಶ್ವಕರ್ಮಿಗಳ ಮೂಲ ಆಶಯ ಒಂದೇ ಆಗಿರುತ್ತದೆ. ಆತ ನೀಲಗಾರನಾಗಿ ದೀಕ್ಷೆ ಪಡೆದುಕೊಂಡ ನಂತರ ಧಾರ್ಮಿಕ ಆಚರಣೆಗಳು ಹಬ್ಬ, ಜಾತ್ರೆಗಳ ಸಂದರ್ಭದಲ್ಲಿ ಇವರ ವಿಧಿ ಆಚರಣೆಗಳು ಒಂದೇ ಆಗಿರುತ್ತವೆ. ಇಲ್ಲಿ ವಿಶ್ವಕರ್ಮ ಜಾತಿಯ ನೀಲಗಾರನೂ ಸಹ ತನ್ನ ದೈವ ಮಂಟೇಸ್ವಾಮಿ ಸಿದ್ದಪ್ಪಾಜಿಯವರನ್ನು ಆರಾಧಿಸುತ್ತಾ ತಮ್ಮ ದೈವಕ್ಕೆ ಶಿಷ್ಯರನ್ನಾಗಿ ಪಡೆಯುವುದರ ಮೂಲಕ ಶಿಷ್ಯತ್ವವನ್ನು ಪಡೆದುಕೊಂಡು ಆ ದೈವದ ಮಹಿಮೆ ಕೊಂಡಾಡುವುದು ಮುಖ್ಯವಾಗಿರುತ್ತದೆ. ಆ ಮೂಲಕ ಒಂದು ಸಂಸ್ಕೃತಿಯನ್ನು ಕಟ್ಟಿ ತಮ್ಮ ಪರಂಪರೆಯನ್ನು ಉಳಿಸಿ ಬೆಳೆಸುವುದು ಇವರಿಗೆ ಮುಖ್ಯವಾಗುತ್ತದೆ.

ಮಂಟೇಸ್ವಾಮಿ ಕಾವ್ಯದಲ್ಲಿ ಮುಖ್ಯವಾಗಿ ಪಾಂಚಾಳರ ಪಾತ್ರ ಪ್ರಧಾನವಾಗಿರುತ್ತದೆ. ಇಲ್ಲಿ ಸಿದ್ದಪ್ಪಾಜಿ ಮುಖ್ಯ ವ್ಯಕ್ತಿಯಾಗಿ ಪರಿಗಣಿಸಲ್ಪುಡತ್ತಾರೆ. ಕಾವ್ಯದಲ್ಲಿ ಮಂಟೇಸ್ವಾಮಿ ಸಿದ್ದಪ್ಪಾಜಿಯನ್ನು ತನ್ನ ಶಿಷ್ಯನನ್ನಾಗಿ ಪಡೆದುಕೊಂಡು ಪಾಂಚಾಳರನ್ನು ಶರಣಾಗಿಸುವಂತೆ ತನ್ನ ಶಿಷ್ಯನನ್ನು ಹಲಗೂರಿಗೆ ಕಳುಹಿಸಿದಾಗ ಆ ಪಾಂಚಾಳರು ಆ ವ್ಯಕ್ತಿಗೆ ಅವಮಾನ ಹಿಂಸೆ ಕೊಟ್ಟು ಬರಿಗೈಯಲ್ಲಿ ಕಳುಹಿಸುತ್ತಾರೆ. ಆ ಸಂದರ್ಭದಲ್ಲಿ ಮಂಟೇಸ್ವಾಮಿಯವರು ಪಾಂಚಾಳರ ಕುಲಕ್ಕೆ ಶಿಕ್ಷೆ ವಿಧಿಸಲು ತೀರ್ಮಾನಿಸಿ ಕುಂದೂರು ಬೆಟ್ಟದಲ್ಲಿ ನೆಲೆಸಿರುವ ಏಳು ಮಂದಿ ಮಾರಿಯರನ್ನು ಕರೆಯಿಸಿಕೊಂಡು ಹಲಗೂರು ಕೇರಿಯನ್ನೆಲ್ಲಾ ನಾಶಮಾಡುವಂತೆ ಅಪ್ಪಣೆ ಮಾಡುತ್ತಾರೆ. ಹೀಗೆ ಕೇರಿಯ ಪಾಂಚಾಳರನ್ನೆಲ್ಲಾ ಹೆಣಗಳಾಗಿ ಬೀಳುತ್ತಾರೆ. ನಂತರ ಊರು ಸ್ಮಶಾನವಾಗಿ ಮಾರ್ಪಡುತ್ತದೆ. ಕುಲದೇವತೆ ಊರು ಬಿಟ್ಟಿರುವ ಸಂದರ್ಭದಲ್ಲಿ ಸಿದ್ದಪ್ಪಾಜಿ ಕಣಿ ಹೇಳುವ ವೇಷ ಹಾಕಿಕೊಂಡು ಪಾಂಚಾಳ ಜನವರ್ಗದವರಿಗೆ ಅವರ ತಪ್ಪು ಅರಿವಾಗುವಂತೆ ಮಾಡುತ್ತಾರೆ. ಪಾಂಚಾಳರ ಹೃದಯ ಪಶ್ಚಾತ್ತಾಪದಿಂದ ಗುರುವಿನ ಒಕ್ಕಲಾಗಿ ಶರಣಾಗುವಂತೆ ಪರಿಹಾರವನ್ನು ಅವರಿಗೆ ಸೂಚಿಸಿ ಮರೆಯಾಗುತ್ತಾರೆ.

ಸಿದ್ದಪ್ಪಾಜಿಯವರು, ಪಾಂಚಾಳರಿಗೆ ಪರಿಹಾರ ಸೂಚಿಸಿ ಮರೆಯಾದ ನಂತರ ಶರಣಾದ ಪಾಂಚಾಳರ ಕುಲವನ್ನೆಲ್ಲವನ್ನು ಮತ್ತೆ ಬದುಕಿಸಿ ಅವರಿಗೆ ಲಾಂಛನ ನೀಡಿ ಭೋದನೆ ಮಾಡಿ ನೀಲಗಾರರನ್ನಾಗಿಸುತ್ತಾರೆ. ಆ ಮೂಲಕ ಪಾಂಚಾಳದವರನ್ನು ಶಿಷ್ಯರನ್ನಾಗಿ ಪಡೆಯುತ್ತಾರೆ. ಹೀಗಾಗಿ ಹಿಂದಿನ ಕಾಲದ ಸಂದರ್ಭದ ಶಿಷ್ಯತ್ವವನ್ನು ಇವತ್ತಿಗೂ ಈ ಜನವರ್ಗದಲ್ಲಿ ಕಾಣಬಹುದಾಗಿದೆ.

ವಿಶ್ವಕರ್ಮ ಜಾತಿಯ ನೀಲಗಾರರು ಹಬ್ಬಜಾತ್ರೆಗಳ ಸಂದರ್ಭದಲ್ಲಿ ಪ್ರತ್ಯೇಕವಾಗಿಯೇ ಆಚರಿಸುತ್ತಾರೆ. ಉದಾಹರಣೆಯಾಗಿ ಸಿದ್ದಪ್ಪಾಜಿಯವರ ಕ್ಷೇತ್ರವಾದ ಕೊಳ್ಳೇಗಾಲ ತಾಲ್ಲೂಕಿನ ಚಿಕ್ಕಲೂರು ಎಂಬ ಗ್ರಾಮದಲ್ಲಿ ನಡೆಯುವ ಸಿದ್ದಪ್ಪಾಜಿ ಜಾತ್ರೆಗೆ ತಮ್ಮ ಜನವರ್ಗದವರೇ ಪ್ರತ್ಯೇಕವಾಗಿ ಸಿದ್ದಪ್ಪಾಜಿ ಗದ್ದುಗೆಗಳನ್ನು ನಿರ್ಮಿಸಿದ್ದಾರೆ. ಇವರು ಪ್ರತ್ಯೇಕವಾಗಿ ಧಾರ್ಮಿಕ ಆಚರಣೆಗಳನ್ನು ಮಾಡುತ್ತಿರುವುದು ಇಂದಿಗೂ ಕಂಡುಬರುತ್ತದೆ. ಮುಖ್ಯವಾಗಿ ಜಾತ್ರೆ ಸಂದರ್ಭದಲ್ಲಿ ಆಚರಿಸುವ ಚಂದ್ರಮಂಡಲ, ದೊಡ್ಡಮ್ಮತಾಯಿ ಸೇವೆ, ಮುಡಿಸೇವೆ ಮುಂತಾದ ಧಾರ್ಮಿಕ ಆಚರಣೆಗಳನ್ನು ಇವರು ಬೇರೆ ನೀಲಗಾರರ ಜೊತೆ ಸೇರದೆ ಪ್ರತ್ಯೇಕವಾಗಿ ಆಚರಿಸುತ್ತಿರುವುದನ್ನು ಕಾಣಬಹುದಾಗಿದೆ.

ಹೀಗಾಗಿ ವಿಶ್ವಕರ್ಮದ ನೀಲಗಾರರು ಪ್ರತ್ಯೇಕವಾಗಿದ್ದು ಅವರ ಹುಟ್ಟು, ಮದುವೆ, ಸಾವಿನ ಸಂದರ್ಭದ ಮೂಲ ಆಚರಣೆಗಳಲ್ಲಿ ಹೆಚ್ಚು ವ್ಯತ್ಯಾಸವಿಲ್ಲದೆ ಉಳಿದುಕೊಂಡು ಬಂದಿರುವುದನ್ನು ಕಾಣಬಹುದಾಗಿದೆ.

೮. ಉಪ್ಪಾರ ಶೆಟ್ಟರು : ನೀಲಗಾರರ ಪರಂಪರೆಯನ್ನು ಒಪ್ಪಿಕೊಂಡು ಒಕ್ಕಲಾಗಿರುವ ಜನವರ್ಗದಲ್ಲಿ ಉಪ್ಪಾರ ಶೆಟ್ಟರು ಇದ್ದಾರೆ. ಇವರೂ ಸಹ ಮಂಟೇಸ್ವಾಮಿ, ಸಿದ್ದಪ್ಪಾಜಿ, ರಾಚಪ್ಪಾಜಿ, ದೈವಗಳಿಗೆ ನಡೆದುಕೊಳ್ಳುತ್ತಾರೆ. ಈ ಜಾತಿಯಲ್ಲಿಯೂ ಹೆಚ್ಚು ನೀಲಗಾರರಿರುವುದನ್ನು ಕಾಣಬಹುದಾಗಿದೆ. ಉಪ್ಪಾರರಲ್ಲಿ ತಮ್ಮ ದೈವದ ಬಗ್ಗೆ ಕತೆಗಳನ್ನು ಮಾಡುವ ಗಾಯಕರು ಈ ಜನಾಂಗದಲ್ಲಿ ಅನೇಕರಿದ್ದಾರೆ. ಇವರಲ್ಲಿಯೂ ಸಹ ಸಾಮಾಜಿಕ ವ್ಯವಸ್ಥೆ ಸಂದರ್ಭದಲ್ಲಿ ಸ್ವಲ್ಪ ವ್ಯತ್ಯಾಸಗಳನ್ನು ಕಾಣಬಹುದು. ಆದರೆ ಮುಖ್ಯ ನೀಲಗಾರನಾಗಿ ದೀಕ್ಷೆ ಪಡೆದುಕೊಂಡ ನಂತರ ಎಲ್ಲಾ ಜನವರ್ಗದ ನೀಲಗಾರರಂತೆ ಇವರ ಆಚರಣೆಯಲ್ಲಿಯೂ ಯಾವುದೇ ವ್ಯತ್ಯಾಸ ಕಂಡುಬರುವುದಿಲ್ಲ. ಉಪ್ಪಾರರು ಸಹ ತಮ್ಮ ದೈವದ ಮಹಿಮೆಗಳನ್ನು ಕೊಂಡಾಡುವುದರ ಮೂಲಕ ಶಿಷ್ಯತ್ವವನ್ನು ಪಡೆದುಕೊಂಡು ನೀಲಗಾರ ಪರಂಪರೆಯನ್ನು ಉಳಿಸಿ ಬೆಳೆಸಿದ ಜನರಲ್ಲಿ ಇವರೂ ಒಬ್ಬರಾಗಿದ್ದಾರೆ.

ಉಪ್ಪಾರರು ನೀಲಗಾರನಾದ ನಂತರ ಅವರು ಆಚರಿಸುವ ಧಾರ್ಮಿಕ ಆಚರಣೆಗಳಾದ ಹಬ್ಬ, ಜಾತ್ರೆ, ದೀಕ್ಷೆ ಸಂದರ್ಭದಲ್ಲಿ ಎಲ್ಲಾ ನೀಲಗಾರರ ಜೊತೆ ಸೇರಿ ಆಚರಿಸುತ್ತಾರೆ. ಎಲ್ಲಾ ಜಾತಿಯ ನೀಲಗಾರರೂ ಆಚರಿಸುವ ಹುಟ್ಟು, ಮದುವೆ ಮತ್ತು ಸಾವುಗಳಂತಹ ಆಚರಣೆಗಳನ್ನು ಒಂದೇ ರೀತಿ ಆಚರಿಸುವುದನ್ನು ನೋಡಬಹುದು. ಇಲ್ಲಿ ಈ ಜನವರ್ಗದವರು ನೀಲಗಾರನಾದ ಮೇಲೆ ಎಲ್ಲಾ ನೀಲಗಾರರು ಆಚರಿಸುವ ಆಚರಣಾ ಪದ್ಧತಿ ಇವರಲ್ಲಿಯೂ ಇರುವುದನ್ನು ಮುಂದೆ ಚರ್ಚಿಸಲಾಗಿದೆ.

ಹೀಗಾಗಿ ಉಪ್ಪಾರಶೆಟ್ಟಿ ನೀಲಗಾರರು ತಮ್ಮ ಪರಂಪರೆಯನ್ನು ಕಟ್ಟಿ ಬೆಳೆಸುವುದರಲ್ಲಿ ಮುಖ್ಯ ಪಾತ್ರ ವಹಿಸಿದವರಾಗಿದ್ದಾರೆ. ಹಿಂದಿನ ಕಾಲದ ಮಂಟೇಸ್ವಾಮಿಯವರು ಇದೇ ಸಂದರ್ಭದಲ್ಲಿ ಕಾಯಕ ಜೀವಿಗಳ ವರ್ಗದಲ್ಲಿ ಉಪ್ಪಾರರನ್ನು ತಮ್ಮ ಒಕ್ಕಲಾಗಿ ಪಡೆದುಕೊಂಡು ಲಿಂಗಧಾರಣೆ ಮಾಡಿರುವುದನ್ನು ಕಾವ್ಯದಲ್ಲಿ ಕಾಣಬಹುದಾಗಿದೆ.

೯. ಹರಿಜನರು : ಮಂಟೇಸ್ವಾಮಿ ಪರಂಪರೆಯ ಅಧೀನರಾಗಿ ಬಂದಿರುವ ಒಕ್ಕಲುಗಳಲ್ಲಿ ಇವರು ಪ್ರಮುಖರಾದವರು. ಕೆಳಜಾತಿಯಿಂದ ಬಂದು ನೀಲಗಾರರಾದ ಇವರು ಬೇರೆ ಜಾತಿ ನೀಲಗಾರರಿಗಿಂತ ಇವರ ಸಂಖ್ಯೆ ಜಾಸ್ತಿ ಇದೆ. ಮಂಟೇಸ್ವಾಮಿ

ಮತ್ತು ಸಿದ್ದಪ್ಪಾಜಿ ಕಾವ್ಯಗಳನ್ನು ಕಥೆಗಳನ್ನು ಹಾಡುವವರು ಹೆಚ್ಚು ಈ ಜನಾಂಗದಲ್ಲಿ ಇದ್ದಾರೆ. ಇವರು ನೀಲಗಾರ ಪರಂಪರೆಯನ್ನು ಹುಟ್ಟುಹಾಕಿ ಆ ಪರಂಪರೆಯ ಮೂಲಕ ಒಂದು ಸಂಸ್ಕೃತಿಯನ್ನು ಕಟ್ಟಿದವರಲ್ಲಿ ಅತ್ಯಂತ ಪ್ರಮುಖರಾಗಿದ್ದಾರೆ. ಆ ಮೂಲಕ ನೀಲಗಾರ ಪರಂಪರೆಯನ್ನು ಉಳಿಸಿ ಬೆಳೆಸಿದ ಗೌರವಕ್ಕೆ ಪಾತ್ರರಾಗಿದ್ದಾರೆ.

''ನೀಲಗಾರ ಪರಂಪರೆಯಲ್ಲಿ ಕಂಡುಬರುವ ಇವರನ್ನು ಜೀ.ಶಂ.ಪರಮಶಿವಯ್ಯ ಅವರು ಎಡಗೈನವರು ಬಲಗೈನವರು ಎಂದು ತಮ್ಮ ''ಮಹಾಪ್ರಬಂಧವಾದ ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು'' ಎಂಬ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ.''[೬] ಆದ್ದರಿಂದ ಇವರನ್ನು ಎಡಗೈನವರು ಮತ್ತು ಬಲಗೈನವರು ಎಂದು ಗುರುತಿಸಲಾಗಿದೆ. ಇವರಲ್ಲಿ ಕಥೆಗಳನ್ನು ಆಕಾಶವಾಣಿ ಮತ್ತು ದೂರದರ್ಶನಗಳಲ್ಲಿ ಹಾಡುವ ಅವಕಾಶವನ್ನು ಇವರು ರೂಢಿಸಿಕೊಂಡಿದ್ದಾರೆ. ಇವರು ತಮ್ಮ ಸಾಂಸ್ಕೃತಿಕ ನಾಯಕನ ಚರಿತ್ರೆಯನ್ನು ಪುರಾಣೀಕರಿಸಿಕೊಂಡು ಸುಮಾರು ಹಲವು ರಾತ್ರಿಗಳ ಕಾಲ ನಿರಂತರವಾಗಿ ಹಾಡುವ ಕಲಾವಿದರು ಇವರಲ್ಲಿ ಹೆಚ್ಚು ಇದ್ದಾರೆ.

ಈ ಜನವರ್ಗದಲ್ಲಿ ಮುಖ್ಯವಾಗಿ ಮಾದಿಗ ಪಂಗಡದವರು ನೀಲಗಾರ ದೀಕ್ಷೆಯನ್ನು ಪಡೆಯುವುದಿಲ್ಲ. ಇವರು ಆ ದೈವಕ್ಕೆ ಸೇರು ಒಕ್ಕಲಾಗಿದ್ದು ಮಂಟೇಸ್ವಾಮಿ ಮತ್ತು ಮಾದೇಶ್ವರ ಎರಡು ದೈವಗಳಿಗೆ ನಡೆದುಕೊಳ್ಳುತ್ತಾರೆ. ಅಂದರೆ ಕುಟುಂಬದ ಯಾವುದಾದರೂ ಮಗುವಿಗೆ ಕಾಯಿಲೆ, ಮೂರ್ಛೆರೋಗ ಬಂದರೆ ಆ ಸಂದರ್ಭದಲ್ಲಿ ತಮ್ಮ ದೇವರ ಹೆಸರು ಹೇಳಿ ಒಕ್ಕಲಾಗುತ್ತಾರೆ. ಇದನ್ನು ಸೇರು ಒಕ್ಕಲು ಎನ್ನುತ್ತಾರೆ. ಆದರೆ ಉಳಿದ ನೀಲಗಾರರು ಹೆಚ್ಚು ಮಂಟೇಸ್ವಾಮಿ ಭಕ್ತರಾಗಿರುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಅವಲೋಕಿಸಲಾಯಿತು. ಇವರ ಆಚರಣೆಗಳು ಆಯಾಯ ಜನವರ್ಗದಲ್ಲಿ ಪ್ರತ್ಯೇಕ ಇರುವಂತೆ, ಸಾಮಾಜಿಕ ವ್ಯವಸ್ಥೆಯಲ್ಲಿ ಬೇರೆ ಬೇರೆ ಆಗಿರುತ್ತದೆ. ಆದರೆ ಹುಟ್ಟು, ದೀಕ್ಷೆ, ಮದುವೆ, ಸಾವುಗಳ ಸಂದರ್ಭದಲ್ಲಿ ಎಲ್ಲಾ ನೀಲಗಾರರಲ್ಲಿರುವಂತೆ ಆಚರಣಾಸಂಪ್ರದಾಯಗಳು ಒಂದೇ ಆಗಿರುತ್ತವೆ. ಅದೇ ರೀತಿ ಧಾರ್ಮಿಕ ಆಚರಣೆಗಳ ಸಂದರ್ಭಗಳಲ್ಲಿ ಅಂದರೆ ಹಬ್ಬ ಜಾತ್ರೆಗಳ ಸಂದರ್ಭದಲ್ಲಿ ಇವರು ಎಲ್ಲಾ ನೀಲಗಾರರ ಜೊತೆ ಬೆರೆತು ಒಟ್ಟಿಗೆ ಸೇರುವ ಪದ್ಧತಿಯನ್ನು ಇಂದಿಗೂ ಉಳಿಸಿಕೊಂಡು ಬಂದವರಾಗಿದ್ದಾರೆ. ಆದರೆ ಇವರಲ್ಲಿ ಎಲ್ಲಾ ಜಾತಿಯ ನೀಲಗಾರರಂತೆ ತಮ್ಮ ತಮ್ಮ ಜಾತಿಯಲ್ಲೇ ಬೇರೆ ಬೇರೆ ಕುಲಗಳನ್ನು ನೋಡಿ ಮದುವೆ ಕಾರ್ಯ ನೆರವೇರಿಸುತ್ತಾರೆ. ಆದರೆ ಇವರು. ಬೇರೆ ಜಾತಿಯ ನೀಲಗಾರರೊಂದಿಗೆ ಯಾವುದೇ ಸಂಬಂಧವನ್ನು ಹೊಂದಿರುವುದಿಲ್ಲ. ಈಗಾಗಿ ಅವರು ಪ್ರತ್ಯೇಕವಾಗಿ ಇರುತ್ತಾರೆ, ಅವರ ಗುಡಿಸಲುಗಳು ಮನೆಗಳು ಅವರಿಗೆ ಪ್ರತ್ಯೇಕವಾಗಿ ಇರುವುದನ್ನು ಕಾಣಬಹುದಾಗಿದೆ. ಇವರಲ್ಲಿಯೂ ನ್ಯಾಯ ಪದ್ಧತಿಗೆ ಸಂಬಂಧಿಸಿದಂತೆ ಇವರ ಪಂಗಡದ ಒಬ್ಬ ಹಿರಿಯ ನೀಲಗಾರನನ್ನು ಪುರುಸಾನಿ ಎಂದು ನೇಮಿಸಿ ಆ ಮೂಲಕ ನ್ಯಾಯ ತೀರ್ಮಾನ ಮಾಡುವ ಹಕ್ಕು ಇವರೊಬ್ಬರಿಗೆ ಮಾತ್ರ ಇರುತ್ತದೆ. ಇವರು ಆರ್ಥಿಕವಾಗಿ ಸಾಮಾಜಿಕವಾಗಿ ಅತ್ಯಂತ ಹಿಂದುಳಿದವರಾಗಿದ್ದಾರೆ. ಇವರಲ್ಲಿ ವಿದ್ಯಾಭ್ಯಾಸ ಮತ್ತು ಉದ್ಯೋಗ ಕಡಿಮೆ ಪ್ರಮಾಣದಲ್ಲಿರುವುದನ್ನು ಕಾಣಬಹುದಾಗಿದೆ.

ಮಂಟೇಸ್ವಾಮಿ ಕಾವ್ಯದಲ್ಲಿ ಉಲ್ಲೇಖಿಸಿರುವಂತೆ ಮಂಟೇಸ್ವಾಮಿಗಳು ಕೆಳವರ್ಗದ ದಲಿತರಲ್ಲಿ ಮೊದಲಿಗೆ ನಿಂಗಯ್ಯ ಚೆನ್ನಯ್ಯ ಎಂಬುವವರನ್ನು ತಮ್ಮ ಶಿಷ್ಯರನ್ನಾಗಿ ಮಾಡಿಕೊಂಡರು. ಇವರು ದಕ್ಷಿಣದಲ್ಲಿದ್ದ ಶರಣರು, ಮಂಟೇಸ್ವಾಮಿಯವರು ಇವರಿಗೆ ದೀಕ್ಷೆ ಕೊಟ್ಟು ತಮ್ಮ ಪರಂಪರೆಗೆ ಸೇರಿಸಿಕೊಳ್ಳುತ್ತಾರೆ. ಇವರ ಗದ್ದುಗೆಗಳು ಕೊಳ್ಳೇಗಾಲ ತಾಲ್ಲೂಕಿನ ಕುರುಬನಕಟ್ಟೆಯಲ್ಲಿದೆ. ನೀಲಗಾರ ಪರಂಪರೆಯ ಎಲ್ಲಾ ಧಾರ್ಮಿಕ ಆಚರಣೆಗಳಲ್ಲೂ ಈ ನಿಂಗಯ್ಯ -ಚೆನ್ನಯ್ಯ ಕಂಡಾಯಗಳು ಮಾತ್ರ ಇರಲೇಬೇಕು. ಮಂಟೇಸ್ವಾಮಿಗಳು ಇವರಿಗೆ ''ನಾನು ಮರೆಯ ದೇವ್ರ ಆಗ್ತೀನಿ, ನೀವು ಮೆರೆಯ ದೇವ್ರಾಗಿ''[೪] ಎಂದು ವರಕೊಡುತ್ತಾರೆ. ಹೀಗೆ ಮಂಟೇಸ್ವಾಮಿಯವರ ಶಿಷ್ಯರ ಸಂಕೇತವಾಗಿ ಇವೆರಡು ಕಂಡಾಯಗಳನ್ನು ನೀಲಗಾರರು ಹೊಸಮನೆಗೆ ಹೋಗುವಾಗ, ಶುಭಕಾರ್ಯಗಳನ್ನು ಮಾಡುವಾಗ, ಕಂಡಾಯಗಳನ್ನು ಕರೆಸಿ ಮನೆ ತುಂಬಿಸಿಕೊಂಡು ಕಳುಹಿಸುತ್ತಾರೆ. ಕುರುಬನ ಕಟ್ಟೆಯಲ್ಲಿ ಯಾವಾಗಲೂ ಯಾವುದೇ ಜಾತ್ರೆ, ಉತ್ಸವ ನಡೆಯದಿದ್ದರೂ ಸಹ ಪ್ರತಿ ಶುಕ್ರವಾರ ಸೋಮುವಾರ ಈ ಒಕ್ಕಲಿನವರು ಹೋಗಿ ಪೂಜೆ ಮಾಡಿಸಿಕೊಂಡು ಬರುವುದನ್ನು ಇಂದಿಗೂ ರೂಢಿಯಲ್ಲಿರುವುದನ್ನು ಕಾಣಬಹುದಾಗಿದೆ.

ಹೀಗಾಗಿ ಮಂಟೇಸ್ವಾಮಿ ಪರಂಪರೆಯನ್ನು, ದೀಕ್ಷೆ ಪಡೆಯುವುದರ ಮುಖಾಂತರ ಶಿಷ್ಯತ್ವವನ್ನು ಪಡೆದುಕೊಂಡು ಒಕ್ಕಲಾಗಿರುತ್ತಾರೆ. ಇವರ ಮುಖ್ಯ ಉದ್ದೇಶ ನೀಲಗಾರ ಪರಂಪರೆಯನ್ನು ಬೆಳೆಸುವುದು ಆ ಮೂಲಕ ಒಕ್ಕಲು ಮಾಡಿಕೊಂಡು ಮಂಟೇಸ್ವಾಮಿಯ ಮಹಿಮೆಯನ್ನು ಜಗತ್ತಿನಲ್ಲಿ ಕೊಂಡಾಡುವುದೇ ಇವರ ಮುಖ್ಯ ಆಶಯ ಎನ್ನಬಹುದು.

೧೦. ಕುಂಬಾರರು

ನೀಲಗಾರ ಪರಂಪರೆಯನ್ನು ಲೋಕದಲ್ಲಿ ಪರಿಚಯಿಸುವುದರ ಮೂಲಕ ಒಕ್ಕಲಾಗಿರುವ ಜಾತಿಗಳಲ್ಲಿ ಕುಂಬಾರರು ಪ್ರಮುಖರಾದವರು. ಇವರು ನೀಲಗಾರ ಪರಂಪರೆಯವರಿಗೆ ಅಗತ್ಯವಾಗಿ ಬೇಕೇ ಬೇಕು. ಇವರು ಮಣ್ಣಿನ ಮಡಿಕೆ ಊಟದ ಬಟ್ಟಲು ಮುಂತಾದ ಮಣ್ಣಿನ ಸಾಮಾನುಗಳನ್ನು ತಯಾರಿಸುತ್ತಾರೆ. ನೀಲಗಾರರು ಬೇರೆ ಯಾರ ಎಂಜಲು ತಿನ್ನುವಂತಿಲ್ಲ. ಆದ್ದರಿಂದ ಕುಂಬಾರರು ಮಾಡಿದ ಮಣ್ಣಿನ ಬಟ್ಟಲಿನಲ್ಲಿಯೇ ಊಟ ಮಾಡಬೇಕು. ಇವತ್ತಿನ ಆಧುನಿಕ ಯುಗದ ಸಂದರ್ಭದಲ್ಲಿಯೂ ಸಹ ಅದಕ್ಕೆ ಹೊಂದಿಕೊಳ್ಳದೇ ಹಳೆಯ ಪದ್ಧತಿಯನ್ನೇ ಉಳಿಸಿಕೊಂಡು ಬಂದವರಾಗಿದ್ದಾರೆ.

ಕುಂಬಾರನಿಲ್ಲದ ಊರು ಇಲ್ಲವೇ ಇಲ್ಲ. ಎಲ್ಲಾ ಊರಿನಲ್ಲಿ ಇವರು ಸಾಮಾನ್ಯವಾಗಿ ಇರುತ್ತಾರೆ. ಇವರು ತಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿಯಲ್ಲಿ ಕುಂಬಾರನಾದಾಗ, ಆ ವ್ಯಕ್ತಿಯ ಕುಟುಂಬ ವ್ಯವಸ್ಥೆ ಒಳಾಡಳಿತ ನ್ಯಾಯಪದ್ಧತಿ ಮುಂತಾದವು ಆಚರಣೆ ಸಂಪ್ರದಾಯದಲ್ಲಿ ಬೇರೆಯೇ ಆಗಿರುತ್ತದೆ. ಆದರೆ ಕುಂಬಾರ ನೀಲಗಾರನಾಗಿ ದೀಕ್ಷೆ ಪಡೆದು ಲಿಂಗಧಾರಣೆ ಪಡೆದು ಕೊಂಡಾಗ ಆಚರಣೆ ಒಂದೇ ಆಗಿರುತ್ತದೆ. ಎಲ್ಲಾ ಜಾತಿಯ ನೀಲಗಾರರಲ್ಲಿ ಇರುವಂತೆ. ಹುಟ್ಟು, ದೀಕ್ಷೆ, ಮದುವೆ ಮತ್ತು ಸಾವಿನ ಸಂದರ್ಭದಲ್ಲಿ ಇವರ ಆಚರಣೆ ಒಂದೇ ಆಗಿರುವುದನ್ನು ಕಾಣಬಹುದು. ಹಾಗೆಯೇ ಧಾರ್ಮಿಕ ಆಚರಣೆಗಳ ಸಂದರ್ಭದಲ್ಲಿಯು ಯಾವುದೇ ಭಿನ್ನತೆ ಕಾಣುವುದಿಲ್ಲ. ಹಾಗಾಗಿ ನೀಲಗಾರನಾದಾಗ ಒಂದೇ ನಡೆ, ಒಂದೇ ನುಡಿ ಇರುತ್ತದೆ.

ಇವರಿಗೆ ಬೇರೆ ಜಾತಿಯ ನೀಲಗಾರರಲ್ಲಿ ಮದುವೆ ಸಂಬಂಧವಿಲ್ಲ. ಆವರ ಜಾತಿಯ ಒಳಗೆ ಹೆಣ್ಣು ತರುವ ಮತ್ತು ಕೊಡುವ ಪ್ರಕ್ರಿಯೆ ನಡೆಯುತ್ತದೆ. ಇವರು ಆರ್ಥಿಕವಾಗಿ ಸಾಮಾಜಿಕವಾಗಿ ಸ್ವಲ್ಪ ಮುಂದುವರಿದ ಮಧ್ಯಮವರ್ಗದವರಾಗಿರುವುದು ಕಂಡುಬರುತ್ತದೆ.

ಹೀಗಾಗಿ ನೀಲಗಾರ ಪರಂಪರೆಯನ್ನು ಉಳಿಸಿ, ಆ ಪರಂಪರೆಯನ್ನು ಜಗತ್ತಿನಲ್ಲಿ ಮೆರೆಯುವುದೇ ಇವರ ಮುಖ್ಯ ಆಶಯವಾಗಿರುತ್ತದೆ. ಕುಂಬಾರರ ವಿಚಾರವಾಗಿ ಮಂಟೇಸ್ವಾಮಿ ಕಾವ್ಯದಲ್ಲಿ ಉಲ್ಲೇಖಿಸಿರುವುದನ್ನು ಕಾಣಬಹುದು. ಮಂಟೇಸ್ವಾಮಿಗಳು ಕುಂಬಾರ ಗುಂಡಯ್ಯನನ್ನು ಕಾಯಕ ಜೀವಿಗಳ ವರ್ಗದಲ್ಲಿ ಸೇರಿಸಿದ್ದಾರೆ. ಇವರು ದುಡಿಯುವ ವರ್ಗದಿಂದ ಬಂದವರೆಂದು ಉಲ್ಲೇಖಿಸಿದ್ದಾರೆ. ಆದ್ದರಿಂದ ಕುಂಬಾರ ಜಾತಿಯನ್ನು ಒಳಗೊಂಡಂತೆ ಒಟ್ಟು ಒಂಬತ್ತು ಲಿಂಗಗಳನ್ನು ತಮ್ಮ ಒಕ್ಕಲಾಗಿ ಪಡೆದುಕೊಂಡಿದ್ದಾರೆ. ಮುಂದೆ ಈ ಒಂಬತ್ತು ಮಂದಿ ಲಿಂಗವಂತರು ಕಲಿಯುಗದಲ್ಲಿ ಜನ್ಮ ತಾಳಿ, ನಂತರ ನೀಲಗಾರ ಪರಂಪರೆಯಲ್ಲಿ ಗುಡ್ಡನ ಬಿಟ್ಟು ಗುರುಮಣಿ ಹಾಕಿಸಿಕೊಳ್ಳುವಾಗ ಈ ಒಂಬತ್ತು ಮಂದಿ ಜನರು ಗುರುಸ್ಥಾನದಲ್ಲಿ ನಿಂತು ದೀಕ್ಷೆ ಕೊಡಬೇಕು ಎಂಬುದೇ ಆಗಿದೆ. ಅಂದರೆ ಕಾಯಕ ಜೀವಿಗಳು ಮಾತ್ರ ದೀಕ್ಷೆ ಕೊಡುವ ಮತ್ತು ತೆಗೆದುಕೊಳ್ಳುವ ಹಕ್ಕುದಾರರಾಗಿರುವುದನ್ನು ಕಾವ್ಯದಲ್ಲಿಯೂ ಉಲ್ಲೇಖಿಸಲಾಗಿದೆ. ಆದ್ದರಿಂದ, ಮಂಟೇಸ್ವಾಮಿ ಪರಂಪರೆಗೆ ಈ ಮೇಲ್ಕಂಡ ಒಂಬತ್ತು ಜಾತಿಯವರು ನೀಲಗಾರ ಸಮುದಾಯವಾಗಿ ಒಟ್ಟುಗೂಡಿವೆ.

೩ : ೧. ೨ ಪ್ರಾದೇಶಿಕ ವಿವರ

ಮಂಟೇಸ್ವಾಮಿ ಪರಂಪರೆಯ ಒಕ್ಕಲಿನವರು ಮೈಸೂರು, ಮಂಡ್ಯ, ಬೆಂಗಳೂರು, ಚಾಮರಾಜನಗರ ಜಿಲ್ಲೆಗಳಲ್ಲಿ ಹೆಚ್ಚು ಕಂಡುಬರುತ್ತಾರೆ. ಮಂಟೇಸ್ವಾಮಿ ಗದ್ದುಗೆ ಮಳವಳ್ಳಿ ತಾಲ್ಲೂಕು ಬೊಪ್ಪೇಗೌಡನ ಪುರದಲ್ಲಿದೆ. ಇದರ ಪಕ್ಕ ಒಂದು ಕಿ.ಮೀ. ದೂರದಲ್ಲಿ ಮುಟ್ಟನಹಳ್ಳಿ ದೊಡ್ಡಮ್ಮತಾಯಿ ಗದ್ದುಗೆಯಿದೆ. ಹಾಗೂ ಮುಟ್ಟನಹಳ್ಳಿ ಕೆರೆ ತೋಪುಗಳಿವೆ. ಇಲ್ಲಿ 'ಎದರು ಸೇವೆ' ಯುಗಾದಿಯಲ್ಲಿ ನಡೆಯುತ್ತದೆ. ಕೆ.ಆರ್.ನಗರ ತಾಲ್ಲೂಕಿನಲ್ಲಿ ಕಪ್ಪಡಿ ಇದೆ. ಇಲ್ಲಿ ರಾಚಪ್ಪಾಜಿ ಗದ್ದುಗೆ ಮತ್ತು ಚೆನ್ನಾಜಮ್ಮನ ಗದ್ದುಗೆಯನ್ನು ಕಾಣುತ್ತೇವೆ. ಇಲ್ಲಿ ಶಿವರಾತ್ರಿಯಿಂದ ಯುಗಾದಿಯ ತನಕ ೨೫ ದಿನಗಳ ಜಾತ್ರೆ ನಡೆಯುತ್ತದೆ. (ಜಾತ್ರಾ ವಿವರವಾಗಿ ಆಚರಣೆ ಭಾಗದಲ್ಲಿ ವಿವರಿಸಲಾಗಿದೆ.)

ಕೊಳ್ಳೇಗಾಲ ತಾಲ್ಲೂಕು ಚಿಕ್ಕಲೂರಿನಲ್ಲಿ ಸಿದ್ದಪ್ಪಾಜಿ ಗದ್ದುಗೆಯಿದೆ. ಇಲ್ಲಿ ಜನವರಿ ತಿಂಗಳು ಜಾತ್ರೆ ನಡೆಯುತ್ತದೆ. ಮಂಡ್ಯ ಜಿಲ್ಲೆ ಮಳವಳ್ಳಿಯಲ್ಲಿ ಇನ್ನೊಂದು ಗುರುಮಠವಿದೆ. ಮಳವಳ್ಳಿ ಬುದ್ಧಿಯವರು ಈ ಮಠವನ್ನು ನಡೆಸುತ್ತಿದ್ದಾರೆ. ಹೊನ್ನಾಯಕನಹಳ್ಳಿ, ಹಲಗೂರು, ಚಿಲ್ಲಾಪುರ ಇವೆಲ್ಲಾ ಸಿದ್ದಪ್ಪಾಜಿಯವರ ಉಪಗದ್ದುಗೆಗಳು (ತೋರುಗದ್ದುಗೆಗಳು) ಇರುವುದರ ಜೊತೆಗೆ ಪವಾಡ ಮಾಡಿದ ಕಬ್ಬಿಣದ ತೊಲೆಯ ಅಡಿಗಲ್ಲು ಸಲಾಕೆ ಇತ್ಯಾದಿಗಳು ಕಂಡುಬರುತ್ತವೆ. ಮಂಡ್ಯ, ಮೈಸೂರು, ಬೆಂಗಳೂರು ಜಿಲ್ಲೆಗಳಲ್ಲಿ ಈ ಒಕ್ಕಲಿನ ಹೆಚ್ಚು ಜನರು ಕಂಡು ಬರುತ್ತಾರೆ. ಕರ್ನಾಟಕದ ಬೇರೆ ಜಿಲ್ಲೆಗಳಲ್ಲಿ ಈ ಒಕ್ಕಲಿನ ಜನ ಕಂಡು ಬರುವುದಿಲ್ಲ. ಹಾಗಾಗಿ ಈ ಮೂರು ಜಿಲ್ಲೆಗಳಲ್ಲಿ ಮಂಟೇಸ್ವಾಮಿಗಳ ಒಕ್ಕಲಿನ ನೀಲಗಾರರು ಮಾತ್ರ ಕಂಡುಬರುತ್ತಾರೆ.

೩ : ೨ ಸಾಮಾಜಿಕ ಸಂರಚನೆ

ಪ್ರಾದಿಮ ಕಾಲದಲ್ಲಿ ಮಾನವ ದಿನನಿತ್ಯದ ಆಹಾರಕ್ಕಾಗಿ ಕಾಡುಮೇಡುಗಳನ್ನು ಸುತ್ತಾಡಿ ಗೆಡ್ಡೆ-ಗೆಣಸು ಪ್ರಾಣಿ -ಪಕ್ಷಿಗಳ ಹಸಿಮಾಂಸ ಇತ್ಯಾದಿಗಳನ್ನು ಆಹಾರವಾಗಿ ಬಳಸುತ್ತಿದ್ದರು. ಬೇಟೆ ಮತ್ತು ಆಹಾರ ಸಂಗ್ರಹಣೆಯ ಸಲುವಾಗಿ ಅವರು ತಮ್ಮ ಸಮೂಹಗಳ ಜೊತೆಗೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ವಲಸೆ ಹೋಗುತ್ತಿದ್ದರು ಬಹುತೇಕ ಜೀವನ ಅಸ್ತವ್ಯಸ್ತವಾಗಿತ್ತು. ಭೂಮಿಯನ್ನು ಉತ್ತಿ ಬಿತ್ತಿ ಬೆಳೆಯುವ ವ್ಯವಸಾಯಕ್ರಮ ಮತ್ತು ಪಶುಪಾಲನೆ ರೂಢಿಗೆ ಬಂದ ಮೇಲೆ ಒಟ್ಟಾಗಿ ಜೀವಿಸುತ್ತಾ ತಮ್ಮ ಸಾಮಾನ್ಯ ಮೂಲಭೂತವಾದ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವುದಕ್ಕೋಸ್ಕರ ಒಗ್ಗಟ್ಟಾಗಿ ಬಾಳುವುದಕ್ಕೆ ತಮ್ಮದೇ ಆದ ಸಮೂಹಗಳ ಒಂದು ವ್ಯವಸ್ಥೆಯನ್ನು ಮಾಡಿಕೊಂಡರು. ಇಲ್ಲಿ ಮುಖ್ಯವಾಗಿ ಆಯಾಯ ಜಾತಿಯಲ್ಲಿ ಹುಟ್ಟಿದವನಿಗೆ ಧಾರ್ಮಿಕ ಚೌಕಟ್ಟಿನಲ್ಲಿ ಅವನ ಸ್ಥಾನಮಾನ ಬೇರೆಯೇ ಆಗಿರುತ್ತದೆ. ಹೀಗೆ ಒಳಗೆ ಒಂದು ಸೀಮಿತ ಜಾತಿಗೆ ಸೇರಿದ್ದರೂ ಒಳಗೆ ನೀಲಗಾರನಾದಾಗ ಅವನ ಸಾಮಾಜಿಕ ಸ್ಥಾನಮಾನವೇ ಬೇರೆಯಾಗಿರುತ್ತದೆ. ಅವರ ಗುರಿ, ಉದ್ದೇಶ, ಹಬ್ಬ, ಆಚರಣೆ, ಎಲ್ಲವೂ ಸಮಾನ ದೃಷ್ಟಿಕೋನದಿಂದ ಕೂಡಿರುತ್ತದೆ. ಹೀಗೆ ಕುಟುಂಬದಲ್ಲಿ ವೈವಿದ್ಯವಿದ್ದರೂ ಸಮಾಜದಲ್ಲಿ ಏಕತೆಯನ್ನು ಕಾಣುವುದೇ ಸಾಮಾಜಿಕ ಸಂರಚನೆ ಅಧ್ಯಯನ ಉದ್ದೇಶವಾಗಿದೆ. ಕಾಲಾನಂತರದಲ್ಲಿ ಇವು ಬೆಳೆದು ಸಾಮಾಜಿಕ ಸಂರಚನೆಗಳಾದವೆಂದು ತೋರುತ್ತದೆ.

ಸಮಾಜವೆಂದರೆ ಪರಸ್ಪರ ವಿವಿಧ ಬಗೆಯ ಕುಟುಂಬ ಕುಲ, ವೃಂದ ಸಂಬಂಧವುಳ್ಳ ಜನತೆಯ ಸಮುದಾಯದ ಒಂದು ಆಂತರಿಕ ವ್ಯವಸ್ಥೆ. ವಿಶಾಲಾರ್ಥದಲ್ಲಿ ನೋಡಿದಾಗ ಇದು ಇತರೆ ಪ್ರಾಣಿ - ಪಕ್ಷಿಗಳಿಗೂ ಅನ್ವಹಿಸುತ್ತದೆ. ಉದಾ : ಇರುವೆ, ಜೇನ್ನೊಣ, ಕೋತಿ, ಜಿಂಕೆ ಇತ್ಯಾದಿ ಆಹಾರ ಪಾನೀಯಗಳ ಸಂಬಂಧ ಒಟ್ಟಿಗೆ ಸಂಚರಿಸುವುದು, ರಾತ್ರಿ ಹೊತ್ತಿಗೆ ಒಟ್ಟಿಗೆ ಕೂಡುವುದು ಹೀಗೆ ಹಲವಾರು ಬಗೆಯ ಅನ್ಯೋನ್ಯ ಸಂಬಂಧಗಳು ಪ್ರಾಣಿ -ಪಕ್ಷಿಗಳಲ್ಲಿಯೂ ಇರುವುದನ್ನು ಕಾಣುತ್ತೇವೆ. ಇವು ಆಯಾಯ ಜೀವಿಗಳಿಗೆ ಒಂದು ಬಗೆಯ ಒಗ್ಗಟ್ಟು ಅಥವಾ ಏಕಮುಖತೆಯ ಸಂಕೇತವೆನ್ನಬಹುದು. ಆದರೆ ಮಾನವ ಸಮುದಾಯದಲ್ಲಿ ಈ ಬಗೆಯ ಏಕತೆ ಅಥವಾ ಒಗ್ಗಟ್ಟು ಅವರವರ ನಡುವೆ ಏರ್ಪಟ್ಟ ವಾಸ್ತವ ನೆಲೆಯ ಆಂತರಿಕವಾದ ಗಾಢ ನಿಕಟ ಸಂಬಂಧಗಳನ್ನು ಅವಲಂಬಿಸಿರುತ್ತದೆ. ಸಂಬಂಧಗಳು ಮಾನವ ಸಮುದಾಯದಲ್ಲಿ ಗಟ್ಟಿಗೊಂಡಷ್ಟು ಇತರ ಪ್ರಾಣಿ ಪಕ್ಷಿ ಸಮೂಹದಲ್ಲಿ ಸಾಧ್ಯವಿಲ್ಲ ಎನ್ನುವುದು ಮೇಲುನೋಟಕ್ಕೆ ಎದ್ದು ಕಾಣುವ ಸಂಗತಿ. ಪರಸ್ಪರ ಸಂವಹನಕ್ಕೆ ಸೃಷ್ಟಿಸಿಕೊಂಡ ಮಾನವ ತನ್ನ ವಿವಿಧ ಕಾರ್ಯಚಟುವಟಿಕೆಗಳನ್ನು ಒಂದು ಏಕಸೂತ್ರತೆ ಒಂದು ನೀತಿ ನಿಯಮಗಳ ಕಟ್ಟುಪಾಡಿಗೆ ತಂದು ತನ್ನ ಸಂರಚನೆಯನ್ನು ಉತ್ತಮಗೊಳಿಸುತ್ತಾ ನಡೆದ ಒಂದು ವ್ಯವಸ್ಥೆಯನ್ನು ಕೆಲವು ನೀತಿ ಸೂತ್ರ -ಶಿಸ್ತುಗಳಿಗೆ ಒಳಪಟ್ಟ ಸುಸಂಘಟಿತ ಸಮುದಾಯವನ್ನು ನಾವು ಸಮಾಜ ಎಂದು ಹೇಳುತ್ತೇವೆ.

ಇಲ್ಲಿ ವ್ಯಕ್ತಿಗಳ ವ್ಯವಸ್ಥಿತ ಸಮೂಹಕ್ಕೆ ಸಮಾಜ ಪದ ಅನ್ವಯಿಸುತ್ತದೆ. ಇಂಥ ಒಂದು ಸಮಾಜದಲ್ಲಿ ವಿವಿಧ ಅಂಗಗಳಿರುತ್ತವೆ. ಕುಟುಂಬ, ಗುಂಪು, ವರ್ಗ ಮುಂತಾದವು. ಆಯಾ ಸಾಮಾಜಿಕ ನಡವಳಿಕೆ ಅವರವರ ರಾಜಕೀಯ, ಆರ್ಥಿಕ

ಮತ್ತು ಧಾರ್ಮಿಕ ನೆಲೆಗಟ್ಟಿನ ಮೇಲೆ ನಿಂತಿರುತ್ತದೆ. ಆದರೆ ವಾಸ್ತವವಾಗಿ ಈ ಎಲ್ಲಾ ಸಂಗತಿಗಳ ಪೂರ್ಣ ತಿಳುವಳಿಕೆಯಲ್ಲದೆ ಸಂಘಟಿತವಾಗಿ ಜೀವನ ನಿರ್ವಹಿಸುವ ಹಲವಾರು ಜನಪದ ವೃಂದಗಳಿವೆ. ಅಂಥವರಲ್ಲಿ ನೀಲಗಾರರದೂ ಒಂದು ವೃಂದ.

ನೀಲಗಾರರಲ್ಲಿ ಸಾಮಾಜಿಕ ಸಂರಚನೆಯು ಪೂರ್ವದಿಂದ ಬೆಳೆದು ಬಂದಿದೆ. ಇತರ ಸಮುದಾಯಗಳ ಪ್ರಭಾವಕ್ಕೆ ಒಳಗಾದ ನೀಲಗಾರರ ಸಂಘಟನೆಯಲ್ಲಿ ಕೆಲವೊಂದು ಕಡ್ಡಾಯವಾದ ನಿರ್ಬಂಧನೆಗಳು ಕೂಡ ಅಡಕವಾಗಿವೆ. ಅವರು ಸಾಮಾನ್ಯವಾಗಿ ಕೊರವರು, ದುರುಗುಮುರುಗಿಯರು, ಹೊಲೆಯರು, ಮಾದೇಶ್ವರ ಒಕ್ಕಲಿನವರು, ಗೊಲ್ಲರು ಮೊದಲಾದ ಜನಪದ ಸಮುದಾಯದವರಂತೆ ಊರ ಅಂಚಿನಲ್ಲಿ ಗುಡಿಸಲು, ಮನೆಗಳನ್ನು ಕಟ್ಟಿಕೊಳ್ಳದೇ ಊರಿನ ಜೊತೆಯಲ್ಲಿಯೇ ವಾಸ ಮಾಡುತ್ತಾರೆ. ಇವರು ವಾಸಿಸುವ ಸ್ಥಳಗಳಿಗೆ ಪ್ರತ್ಯೇಕವಾದ ಹೆಸರುಗಳು ಇರುವುದಿಲ್ಲ. ತಾವು ವಾಸಿಸುವ ಊರುಗಳ ಹೆಸರುಗಳನ್ನೇ ಹೇಳಿಕೊಳ್ಳುತ್ತಾರೆ. ನೀಲಗಾರರು ಇತರ ಸಮುದಾಯದವರಲ್ಲಿ ಬೇರೆಯದೇ ಪ್ರತ್ಯೇಕವಾದ ಮನೆಗಳನ್ನು, ಗುಡಿಸಲುಗಳನ್ನು ಕಟ್ಟಿಕೊಳ್ಳುವಲ್ಲಿ ಅವರಿಗೆ ವಿಶೇಷವಾದ ಆಸಕ್ತಿ ಇರುವುದು ತಿಳಿದುಬರುತ್ತದೆ.

ಇಲ್ಲಿ ಮುಖ್ಯವಾಗಿ ನೀಲಗಾರನು ಧರ್ಮದಲ್ಲಿ ನೀಲಗಾರನಾಗಿದ್ದು ಅವರ ಒಳಾಡಳಿತ, ಕುಟುಂಬವ್ಯವಸ್ಥೆ, ನ್ಯಾಯತೀರ್ಮಾನ ಮುಂತಾದವು ಅವನಿಗೆ ವಿಶೇಷವಾಗಿರುತ್ತವೆ. ಆದರೆ ತನ್ನ ಜಾತಿಯನ್ನು ಬಿಟ್ಟು ಹೊರಗೆ ಬಂದಾಗ ಆ ನೀಲಗಾರನ ಆಚರಣೆ ಬೇರೆಯಾಗಿದ್ದು ಧಾರ್ಮಿಕ ಚೌಕಟ್ಟಿನಲ್ಲಿ ಅವರಿಗೆ ಸಾಮಾಜಿಕವಾದ ಸ್ಥಾನಮಾನ ಬೇರೆಯೇ ಆಗಿರುತ್ತದೆ.

೩: ೨.೧ ಕುಟುಂಬ ಪದ್ಧತಿ

ಸಂಘಟಿತ ಜೀವನ ವ್ಯವಸ್ಥೆಯ ಚಿಕ್ಕ ಘಟಕವಾಗಿ ರೂಪುಗೊಂಡಿರುವ ಕುಟುಂಬ ವ್ಯವಸ್ಥೆಯು ಮಾನವನ ಜೀವನ ಶೈಲಿಯನ್ನು ಪರಿಚಯಿಸುತ್ತದೆ, ರೂಪಿಸುತ್ತದೆ ಮತ್ತು ಘನೀಕೃತಗೊಳಿಸುತ್ತದೆ. ಸಮುದಾಯದ ಸಂಸ್ಕೃತಿಯನ್ನು ಅರಿಯಲು ಕುಟುಂಬದ ಆಳ-ಅಗಲಗಳನ್ನು ಸಂಬಂಧ-ಸಂಸ್ಕಾರಗಳನ್ನು ಮತ್ತು ವೃತ್ತಿ- ಪ್ರವೃತ್ತಿಗಳನ್ನು ಅಭ್ಯಸಿಸಲೇಬೇಕಾಗುತ್ತದೆ. ನಮ್ಮ ಅಧ್ಯಯನ ಶಿಸ್ತಿಗೆ ಒಳಪಟ್ಟಿರುವ ನೀಲಗಾರ ಸಮುದಾಯ ಸಾಂಸ್ಕೃತಿಕ ಅಭ್ಯಾಸಕ್ಕೆ ಬಹು ಮುಖ್ಯ ಆಕರವೆಂದರೆ ಕುಟುಂಬ ಪದ್ಧತಿ ಹಾಗೂ ಆ ಕುಟುಂಬಗಳ ಸಾಮಾಜಿಕ ಸಂರಚನೆಯಾಗಿದೆ.

ಪ್ರೀತಿ ಅನಂತವಾದುದು, ಪ್ರಕೃತಿಯ ಪ್ರೀತಿಯಲ್ಲಿ ಬೆಳೆದ ಮಾನವ ಮುಂದೆ ಕುಟುಂಬದ ಪ್ರೀತಿಯಲ್ಲಿ, ಭಾಗಿಯಾದನು. ಕುಟುಂಬವು ಸಮಾಜದ ಮೂಲಭೂತ ಸ್ಥಿತಿಯಾಗಿದ್ದು ಅದು ಚಿಕ್ಕ ಹಾಗೂ ವಿಶಾಲ ಸಮಾಜದ ಶಕ್ತಿಶಾಲಿ ಘಟಕವಾಗಿದೆ. ಕುಟುಂಬವನ್ನು ಅಧ್ಯಯನ ಮಾಡಿದಂತಹ ಸಮಾಜ ವಿಜ್ಞಾನಿಗಳು ಇದೊಂದು ಮಾನವ ಸಮಾಜದ ಪ್ರಾಥಮಿಕ ಸಂಸ್ಥೆಯಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇನ್ನೂ ಕೆಲವರು ಕುಟುಂಬವನ್ನು ಸಮಾಜ ಕೇಂದ್ರವೆಂದು ವ್ಯಕ್ತಪಡಿಸಿದ್ದಾರೆ. ನಾಗರೀಕತೆಗೆ ಸಮಾಜ ತಳಹದಿಯಾದರೆ ಸಮಾಜಕ್ಕೆ ಕುಟುಂಬವೇ ಮೂಲ ಕುಟುಂಬದ ಸ್ವರೂಪಕ್ಕೂ ಸಮಾಜದ ಸ್ವರೂಪಕ್ಕೂ ಸಂಬಂಧವಿರುತ್ತದೆ.

ಹೀಗಾಗಿ ನೀಲಗಾರ ಸಮುದಾಯದ ಕುಟುಂಬ ವ್ಯವಸ್ಥೆ ಅಧ್ಯಯನ ಈ ಸಮಾಜದ ಸಂಸ್ಕೃತಿಯ ಒಳ ಸೂಕ್ಷ್ಮ ಗ್ರಹಿಕೆಯಲ್ಲೂ ಮುಖ್ಯವಾಗುತ್ತದೆ. ಅಲ್ಲದೆ ಕುಟುಂಬದ ಅಸ್ತಿತ್ವವಿಲ್ಲದ ಯಾವುದೇ ಸಮಾಜವನ್ನು ಊಹಿಸುವುದು ಕಷ್ಟ. ಕುಟುಂಬದಲ್ಲಿ ತಲೆ ಎತ್ತಿದ ಹಲವಾರು ಸಮಸ್ಯೆಗಳು ನಾಳೆ ಸಮಾಜದಲ್ಲಿಯೂ ತಲೆ ಎತ್ತಬಹುದು, ದೇಶದಲ್ಲಿಯೂ ತೋರಬಹುದು. ಆದ್ದರಿಂದ ಕೌಟುಂಬಿಕ ಸಂಸ್ಕೃತಿಯೇ ಸಮಾಜ ಮತ್ತು ದೇಶದ ಸಂಸ್ಕೃತಿಯಾಗುತ್ತದೆ.

ಕುಟುಂಬವು ಸದಾ ಬದಲಾಗುತ್ತಿರುವ ಚಲನಾತ್ಮಕ ಸಂಸ್ಥೆಯಾಗಿದೆ. ಆದ್ದರಿಂದ ಮೆಕೈವರ್ ಮತ್ತು ಫ್ರೇಜರ್‌ರವರು ನೇರವಾಗಿ ಕುಟುಂಬವನ್ನು ಒಂದು ಪ್ರಕ್ರಿಯೆಯಾಗಿ ವಿವರಿಸಿದ್ದಾರೆ. ಕುಟುಂಬವೂ ಕೂಡ ಹಲವಾರು ಲಕ್ಷಣಗಳನ್ನು ಹೊಂದಿದೆ. ಇದನ್ನು ವಿವಿಧ ದೃಷ್ಟಿಕೋನಗಳಿಂದ ಅಧ್ಯಯನ ಮಾಡಬಹುದು. ಉದಾ : ಧಾರ್ಮಿಕ ಸಂಘವಾಗಿ ಸಂಸ್ಥೆಯಾಗಿ ಕಾರ್ಯನಿರ್ವಹಿಸುವ ಘಟಕವಾಗಿ ಮತ್ತು ವಿಕಾಸನೀಯ ಪ್ರಕ್ರಿಯೆಯಾಗಿ ಅಧ್ಯಯನ ಮಾಡಲು ಸಾಧ್ಯವಿದೆ. ಅಂದರೆ ಒಂದು ಕುಟುಂಬದಲ್ಲಿನ ವ್ಯಕ್ತಿ-ವ್ಯಕ್ತಿಗಳ ಸಂಬಂಧ ವಾಸಿಸುವ ಮನೆ, ಮಾಡುವ ಊಟ, ಆಚಾರ-ಸಂಪ್ರದಾಯ ಹಕ್ಕು-ಬಾಧ್ಯತೆ ಆರ್ಥಿಕ ಸ್ಥಿತಿಗತಿ ಮತ್ತು ಧರ್ಮ ನಂಬಿಕೆ ಹಾಗೂ ಧಾರ್ಮಿಕ ಆಚರಣೆಗಳನ್ನು ಅರ್ಥಮಾಡಿಕೊಳ್ಳಲು ಈ ಅಧ್ಯಯನ ಅಗತ್ಯವಾಗಿದೆ.

ನಮ್ಮ ದೇಶದ ಹಲವಾರು ಹಳ್ಳಿಗಳಲ್ಲಿ ಈ ಕುಟುಂಬ ಪದ್ಧತಿ ಇರುವಂತೆ ನೀಲಗಾರರಲ್ಲಿಯೂ ಪಿತೃಪ್ರಧಾನವಾದ ಕುಟುಂಬ ಪದ್ಧತಿ ಇರುವುದನ್ನು ಕಾಣಬಹುದು. ಆತನ ಹೆಂಡತಿ ಮಗ ಸೊಸೆ ಮೊಮ್ಮಕ್ಕಳು ಹೆಣ್ಣುಮಗಳು ಇವರೆಲ್ಲ ಆ ಕುಟುಂಬದ ಸದಸ್ಯರಾಗಿದ್ದು ಆತನ ಅನುಯಾಯಿಗಳಾಗಿರುತ್ತಾರೆ. ಯಾವುದೇ ಕುಟುಂಬ ಮನೆಯ ಹಿರಿಯನಿಂದಲೇ ಗುರುತಿಸಲ್ಪಡುತ್ತದೆ. ನೀಲಗಾರರಲ್ಲಿ ಮುಖ್ಯವಾಗಿ ದೀಕ್ಷೆ ಪಡೆದು ಮಣಿ ಹಾಕಿಸಿಕೊಂಡಂತಹ ವ್ಯಕ್ತಿಗೆ ಕುಟುಂಬದಲ್ಲಿ ಧಾರ್ಮಿಕ ಚೌಕಟ್ಟಿನಲ್ಲಿ ಸ್ಥಾನಮಾನವಿರುತ್ತದೆ. ಇವರಲ್ಲಿ ಕುಟುಂಬದ ಮುಖ್ಯಸ್ಥ ಯಾರೇ ಆದರೂ ಇವರಿಗೆ ಗೌರವ ಇದ್ದೇ ಇರುತ್ತದೆ. ಇವರ ಕುಟುಂಬದಲ್ಲಿ ಯಾರೇ ಸಂಪಾದಿಸುತ್ತಿದ್ದರೂ ತಂದೆಗೆ ಪ್ರಧಾನ ಸ್ಥಾನವಿದೆ. ತಂದೆಯ ನಂತರ ಮನೆಯ ಹಿರಿಯ ಮಗನೇ ತಂದೆಯ ಸ್ಥಾನ ತುಂಬುತ್ತಾನೆ. ಅವನೇ ಮುಂದಿನ ಎಲ್ಲಾ ಜವಾಬ್ದಾರಿಗಳನ್ನು ನೋಡಿಕೊಳ್ಳಬೇಕು.

ನೀಲಗಾರರಲ್ಲಿ ಕುಟುಂಬದ ಹಿರಿಯರು ನೀಲಗಾರನಾಗಿ ದೀಕ್ಷೆ ಪಡೆಯುತ್ತಾರೆ. ನಂತರ ಆ ಕುಟುಂಬದ ಹಿರಿಯ ಮಗನೂ ಸಹ ದೀಕ್ಷೆ ಪಡೆದಿರುತ್ತಾನೆ. ಆದ್ದರಿಂದ ಇವರ ಸಮುದಾಯದಲ್ಲಿ ಮೊದಲು ತಂದೆಗೆ ಪ್ರಥಮ ಸ್ಥಾನ ನಂತರ ಹಿರಿಯ ಮಗನಿಗೆ ಈ ಸ್ಥಾನ ಹಸ್ತಾಂತರಿಸಲ್ಪಡುತ್ತದೆ. ನೀಲಗಾರರಲ್ಲಿ ಅಲ್ಲಲ್ಲಿ ಅವಿಭಕ್ತ ಕುಟುಂಬಗಳೇ ಹೆಚ್ಚಾಗಿವೆ.

ಕುಟುಂಬವು ಅನೇಕ ಕಾರ್ಯಗಳನ್ನು ನಿರ್ವಹಿಸುತ್ತದೆ. ಅವುಗಳಲ್ಲಿ ಮೂಲಭೂತ ಕಾರ್ಯಗಳೆಂದರೆ ೧.ಮದುವೆ ೨. ಮಕ್ಕಳನ್ನು ಪಡೆಯುವುದು ೩. ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ ವಿಶಾಲ ಸಮಾಜಕ್ಕೆ ಅವರನ್ನು ಪರಿಚಯಿಸುವುದು ೪. ಕುಟುಂಬದ ಸದಸ್ಯರಿಗೆ ಸ್ಥಾನ-ಮಾನವನ್ನು ನಿರ್ವಹಣೆಯನ್ನು ಮಾಡುವುದು ಆಗಿದೆ. ನೀಲಗಾರ ಸಮುದಾಯದಲ್ಲಿ ಧಾರ್ಮಿಕ ಆಚರಣೆಯಲ್ಲಿ ಪಾಲ್ಗೊಂಡು ದೀಕ್ಷೆ ಪಡೆದ ನಂತರ ಮದುವೆ ಆಗುವುದು ಇವರ ಕೌಟುಂಬಿಕ ಪದ್ಧತಿ. ಆ ಕುಟುಂಬದಿಂದ

ಬೇರ್ಪಡಿಸಿಕೊಳ್ಳಬಹುದು ಅಥವಾ ಆ ಕುಟುಂಬದಲ್ಲಿಯೇ ಮುಂದುವರಿಯಬಹುದು. ಹೀಗಾಗಿ ಇವರಲ್ಲಿ ತಂದೆ-ತಮ್ಮ-ತಾಯಿ-ಮಗ-ಸೊಸೆ ಎಲ್ಲರೂ ಒಂದೇ ಕುಟುಂಬದಲ್ಲಿ ಜೀವಿಸುತ್ತಾರೆ. ಇವರ ಮುಖ್ಯ ಗುರಿ ಧಾರ್ಮಿಕ ಚೌಕಟ್ಟಿನೊಳಗೆ ಸೇರಿಕೊಳ್ಳುವುದು ಇವರ ಮುಖ್ಯ ಉದ್ದೇಶವಾಗಿದೆ. ಇವರ ಪ್ರತಿಯೊಂದು ಕುಟುಂಬದಲ್ಲಿಯೂ ಮಗ ಪ್ರೌಢಾವಸ್ಥೆಗೆ ಬಂದ ನಂತರ ಅವನನ್ನು ನೀಲಗಾರನಾಗಿ ದೀಕ್ಷೆ ಕೊಡಿಸುವುದನ್ನು ಇವರಲ್ಲಿ ಕಾಣಬಹುದಾಗಿದೆ. ಹೀಗಾಗಿ ನೀಲಗಾರರ ಕುಟುಂಬ ವ್ಯವಸ್ಥೆಯ ವಿಧಾನವನ್ನು ವಿವರಿಸಬಹುದು.

ಗಂಡು ಹೆಣ್ಣಿನ ಪರಸ್ಪರ ಶುಭಮಿಲನಕ್ಕೆ ಮೂರ್ತ ಸ್ವರೂಪ ಕೊಡುವುದೇ ಮದುವೆ. ಈ ಕುಟುಂಬದ ಕಟ್ಟಡಕ್ಕೆ ಮದುವೆಯೇ ಮಹಾದ್ವಾರ. ಇಲ್ಲಿ ಮೇಳೈಸುವ ಎಲ್ಲಾ ಸಂಬಂಧಗಳಿಗೆ ಮದುವೆ ಪ್ರೇರಕ ಶಕ್ತಿ. ಗಂಡು-ಹೆಣ್ಣಿನ ಪರಸ್ಪರ ಲೈಂಗಿಕತೆಯ ಸ್ವೇಚ್ಛಾಚಾರಕ್ಕೆ ಮದುವೆ ಎಂಬ ಮೂರಕ್ಷರವೇ ಕಾರಣ. ಒಂದುವೇಳೆ ಗಂಡು-ಹೆಣ್ಣು ಮದುವೆಯಾಗದೆ ಲೈಂಗಿಕ ಸಂಬಂಧವಿಟ್ಟುಕೊಂಡು ಸಮಾಜದಲ್ಲಿ ಬಾಳುತ್ತಿದ್ದರೆ ಅಂತಹ ಕುಟುಂಬಕ್ಕೆ ಸಮಾಜದಲ್ಲಿ ಬೆಲೆ ಇರುವುದಿಲ್ಲ. ಸಮಾಜದಲ್ಲಿ ತನ್ನದೇ ಆದ ಸ್ಥಾನವನ್ನು ಪಡೆಯಲು ಈ ಮದುವೆ ಅತ್ಯವಶ್ಯಕವಾಗಿದೆ. ಸಂಘ ಜೀವಿಯಾದ ಮಾನವ ತನ್ನ ಬಾಳಿಗೊಂದು ಅರ್ಥವನ್ನು ಸಾರ್ಥಕತೆಯನ್ನು ಪಡೆಯಲು ಹವಣಿಸುವುದಾದರೆ ಕುಟುಂಬದ ಅಗತ್ಯವನ್ನು ತಿಳಿದುಕೊಂಡಾಗ ಮಾತ್ರ ಸಾಧ್ಯ. ಹೀಗೆ ಮದುವೆ ನಂತರ ಮಕ್ಕಳನ್ನು ಪಡೆದು ಅವರನ್ನು ಸತ್‌ಪ್ರಜೆಗಳನ್ನಾಗಿ ಮಾಡಿ ಸಮಾಜಕ್ಕೆ ಅರ್ಪಿಸುವುದೇ ಈ ಕುಟುಂಬದ ಜವಾಬ್ದಾರಿಯಾಗಿದೆ.

ನೀಲಗಾರ ಸಮುದಾಯದಲ್ಲಿ ಬೇರೆ ಕುಟುಂಬಗಳಂತೆ ಪಾರಿಭಾಷಿಕ ಪದಗಳನ್ನು ಬಳಸುವುದಿಲ್ಲ. ಸಾಮಾನ್ಯ ಭಾಷೆಯನ್ನೇ ಬಳಸುತ್ತಾರೆ. ಅಜ್ಜ-ಅಜ್ಜಿಯರನ್ನು ಅವ್ವ-ತಾತ ಎಂದೂ, ತಂದೆ-ತಾಯಿಯರನ್ನು ಅಪ್ಪ-ಅಮ್ಮ ಎಂದೂ ಒಡಹುಟ್ಟಿದ ಸಹೋದರಿಯರನ್ನು ಅಕ್ಕ-ತಂಗಿಯರೆಂದು ಸಹೋದರರನ್ನು ಅಣ್ಣ-ತಮ್ಮ ಎಂದೂ ಕರೆಯುತ್ತಾರೆ. ತಂದೆಯ ಸಹೋದರಿಯನ್ನು ಸೋದರತ್ತೆ ತಾಯಿಯ ಅಣ್ಣ ತಮ್ಮಂದಿರನ್ನು ಸೋದರಮಾವಂದಿರೆಂದು ಕರೆಯುತ್ತಾರೆ. ಹಾಗೆಯೇ ಸಂಬಂಧಿಕರನ್ನು ಬಳಗದವರೆಂದು ತಂದೆಯ ಕಡೆ ಬಳಗದವರಾದರೆ ಅಪ್ಪನ ಬಳಗ, ತಾಯಿಯ ಕಡೆ ಸಂಬಂಧಿಗಳಾದರೆ ಅಮ್ಮನ ಬಳಗ ಎಂದು ಸಂಬೋಧಿಸುವ ರೂಢಿ ಇವರಲ್ಲಿ ಇದೆ. ಒಟ್ಟಿನಲ್ಲಿ ನೀಲಗಾರರ ಕುಟುಂಬ ಪದ್ಧತಿ ಪ್ರತಿಯೊಂದು ಸಮಾಜದ ಪುರುಷ ಪ್ರಧಾನ ಕುಟುಂಬದ ಎಲ್ಲಾ ಲಕ್ಷಣಗಳನ್ನು ಹೊಂದಿದೆ ಎಂದರೆ ತಪ್ಪಾಗಲಾರದು. ಅವರ ಈ ಬಂಧುತ್ವ ವ್ಯವಸ್ಥೆ ನಡವಳಿಕೆ ಹಲವಾರು ರೀತಿಯ ಪ್ರಭಾವ ಬೀರಿರುವುದನ್ನು ಇಲ್ಲಿ ಕಾಣಬಹುದು.

೩ : ೨.೨ ಮನೆಗಳ ನಿರ್ಮಾಣ

ಪ್ರಕೃತಿಯ ವೈಪರಿತ್ಯದಿಂದ ರಕ್ಷಣೆ ಪಡೆಯಲು ಮತ್ತು ಕುಟುಂಬ ವ್ಯವಸ್ಥೆಯನ್ನು ರೂಢಿಸಿಕೊಂಡ ಮಾನವ ವಾಸಿಸಲು ಪ್ರಾರಂಭದಲ್ಲಿ ಗುಹೆ, ಪೊಟರೆ, ಹುಲ್ಲಿನ ಗುಡಿಸಲುಗಳಲ್ಲಿ ಇದ್ದನು. ಕಾಲಾನಂತರದಲ್ಲಿ ಮನೆಗಳ ನಿರ್ಮಾಣಕ್ಕೆ ತೊಡಗಿದ (ಕಾಲಕ್ರಮೇಣ ಮನೆಗಳ ನಿರ್ಮಾಣದಲ್ಲಿ ಸುಧಾರಣೆಗಳಾದವು) ಭೌಗೋಳಿಕ ಪರಿಸರಕ್ಕನುಸರಿಸಿ ಗೃಹಗಳ ನಿರ್ಮಾಣವಾದವು.

ಪ್ರಸ್ತುತ ನೀಲಗಾರರು ಹೆಚ್ಚು ದಕ್ಷಿಣ ಕರ್ನಾಟಕದ ಭಾಗದಲ್ಲಿ ಮಾತ್ರ ಕಂಡುಬರುತ್ತಿದ್ದು ಇವರು ಪ್ರತಿ ಊರಿನ ಜೊತೆಯಲ್ಲಿಯೇ ಅಂದರೆ ಊರುಗಳ ಮನೆಗಳ ಪಕ್ಕದಲ್ಲಿಯೇ ನೀಲಗಾರರ ಮನೆಗಳು ಇದ್ದು ಅಲ್ಲಿಯೇ ವಾಸಿಸುತ್ತಾರೆ. ಇವರ ಮನೆಗಳು ಇತರ ಜನಾಂಗದವರ ಮನೆಗಳಂತೆಯೇ ರಚಿತವಾದವು.

ಮನುಷ್ಯನ ವಸತಿಯನ್ನು ಕುರಿತಾದ ಅಧ್ಯಯನವು ನೇರವಾಗಿ ವಾಸ್ತುಶಿಲ್ಪದ ಅಧ್ಯಯನವೇ ಆಗಿದೆ. ಅದು ಮಾನವನ ಸಾಂಸ್ಕೃತಿಕ ಬದುಕಿನ ಅಧ್ಯಯನವೂ ಹೌದು. ಮುಖ್ಯವಾಗಿ ಭೌಗೋಳಿಕ ಕಾರಣಕ್ಕಾಗಿ ವಿಶಿಷ್ಟ ವಿನ್ಯಾಸ ಮತ್ತು ಮಾದರಿಗಳ ವಸತಿಗಳು ಕರ್ನಾಟಕದ ಉದ್ದಗಲಕ್ಕೂ ಕಂಡು ಬರುವುದರಿಂದ ಈ ಅಧ್ಯಯನ ತುಂಬಾ ಮಹತ್ವಪೂರ್ಣದ್ದಾಗಿದೆ. ''ವಾಸ್ತುಶಿಲ್ಪದ ಇತಿಹಾಸದಲ್ಲಿ ಮೊದಲು ನಾವು ಕಾಣುವುದು ಗೃಹಗಳನ್ನು, ತನಗಾಗಿ, ತನ್ನವರಿಗಾಗಿ ವಾಸ ಸ್ಥಳವೊಂದನ್ನು ರಚಿಸಿಕೊಳ್ಳಬೇಕೆಂಬ ಕಲ್ಪನೆ ಮಾನವನಿಗೆ ಬಂದುದೇ ಏಳು ಸಾವಿರ ವರ್ಷಗಳ ಹಿಂದೆ, ಕ್ರಿ.ಪೂ. ಸುಮಾರು ಐದು ಸಾವಿರದ ಸುಮಾರಿಗೆ ಎನ್ನಬಹುದು. ಅದಕ್ಕೂ ಹಿಂದೆ ಆತ ತನ್ನ ಸುತ್ತಲಿನ ಪ್ರಾಕೃತಿಕ ಸನ್ನಿವೇಶಗಳನ್ನವಲಂಬಿಸಿದ್ದ ಅಲೆಮಾರಿ ಜೀವನವನ್ನು ಮುಕ್ತಾಯಗೊಳಿಸಿ ಒಂದು ಕಡೆ ಸ್ಥಿರವಾಗಿ ನೆಲಸುವುದನ್ನು ಕಲಿತು, ಜನರೊಡನೆ ಗುಂಪುಗೂಡಿ ವಾಸಮಾಡಲಾರಂಭಿಸಿ ತಾನು ತನ್ನದು ಎಂಬ ಮನೋಭಾವ ಬೆಳೆದು ಕುಟುಂಬ ಪದ್ಧತಿ ಆರಂಭವಾದಾಗ ಮನೆಯ ಅಗತ್ಯತೆ ಉಂಟಾಯಿತು. ಈ ಮನೆಗಳು ಪ್ರಾರಂಭದಲ್ಲಿ ಗುಡಿಸಲುಗಳಾಗಿದ್ದವು.''[೫] ಮೊದ ಮೊದಲು ಮನೆಗಳು ಗಾಳಿ ಮಳೆಗಳಿಂದ ರಕ್ಷಿಸಿಕೊಳ್ಳಲು ನಿರ್ಮಾಣವಾದವು. ಅನಂತರ ಕಾಲದಲ್ಲಿ ಆತನು ವ್ಯವಸಾಯ ಕೈಗೊಂಡು ಪಶುಪಾಲನೆ ಆರಂಭಿಸಿದಾಗ ಅವನಿಗೆ ಕೃಷಿ ಸಲಕರಣೆಗಳನ್ನಿಡುವುದಕ್ಕೂ ಸಾಕು ಪ್ರಾಣಿಗಳನ್ನು ಗಾಳಿ ಮಳೆಗಳಿಂದ ರಕ್ಷಿಸಿಕೊಳ್ಳುವುದಕ್ಕೂ ಮನೆಯನ್ನು ಕಟ್ಟಿದನು. ಇಂದಿನ ಹಾಗೆ, ಹಿಂದೆ ಕಲ್ಲು ಇಟ್ಟಿಗೆಗಳನ್ನು ಬಳಸಿ ಮನೆ ಕಟ್ಟುತ್ತಿರಲಿಲ್ಲವಾದರೂ, ಅವು ಭದ್ರವಾಗಿದ್ದು ಗಾಳಿ ಮಳೆಯಿಂದ ರಕ್ಷಿತವಾಗಿದ್ದವು. ಅವುಗಳನ್ನು ಕಟ್ಟುವಾಗಲೇ ನೆಲದಿಂದ ಕಡಿಮೆ ಎತ್ತರದಲ್ಲಿ ಗಾಳಿಯ ಹೊಡೆತ ಕಡಿಮೆ ಇರುವ ಸ್ಥಳವನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದರು. ಬದಲಾದ ಈಚಿನ ದಿನಗಳಲ್ಲಿ ನೀಲಗಾರರು ಇತರ ಜನವರ್ಗದವರಂತೆ ತಮಗೆ ಬೇಕಾದ ರೀತಿಯಲ್ಲಿ ಗೃಹನಿರ್ಮಾಣ ಮಾಡಿಕೊಂಡಿದ್ದಾರೆ. ಸಾಮಾನ್ಯವಾಗಿ ಇವರು ಗುಂಪು ಗುಂಪಾಗಿ ವಾಸಿಸಲು ಇಷ್ಟಪಡುತ್ತಾರೆಂಬುದು ಕ್ಷೇತ್ರಕಾರ್ಯದಿಂದ ತಿಳಿಯುತ್ತದೆ. ಪ್ರತಿಯೊಂದು ಮನೆಯ ಮುಂದೆ ಸ್ವಲ್ಪ ಜಾಗವಿರುವಂತೆ ನೋಡಿಕೊಂಡು ಮನೆಗಳನ್ನು ನಿರ್ಮಿಸಿರುತ್ತಾರೆ. ಇದಕ್ಕೆ ಅಂಗಳ (ಪಡಶಾಲೆ)ವೆಂದು ಕರೆಯುತ್ತಾರೆ.

ನೀಲಗಾರರಲ್ಲಿ ಮನೆಕಟ್ಟುವುದಕ್ಕೆ ಮೊದಲು ಸೂಕ್ತವಾದ ಸ್ಥಳವನ್ನು ಆಯ್ಕೆಮಾಡಿಕೊಂಡು ಊರಿನ ಪುರೋಹಿತ ಅಥವಾ ಜಂಗಮರಿಂದ ಶಾಸ್ತ್ರವನ್ನು ಕೇಳಿಸಿ ಆ ಸ್ಥಳದ ಬಗೆಗಿನ ವಿವರಗಳನ್ನು ತಿಳಿದುಕೊಳ್ಳುತ್ತಾರೆ. ಆ ಸ್ಥಳದಲ್ಲಿ ಭೂತ ಸ್ಥಾನಗಳೂ, ನಾಗನೆಡೆ, ಸ್ಮಶಾನದ ಜಾಗ ಇಂಥವುಗಳ ಕುರುಹುಗಳು ಇದ್ದರೆ ಆ ಜಾಗವನ್ನು ಆರಿಸಿಕೊಳ್ಳುವುದಿಲ್ಲ. ಶಾಸ್ತ್ರದ ಮುಖಾಂತರ ಸ್ಥಳ ಒಳ್ಳೆಯದಿದ್ದರೆ ತಮಗೆ ಬೇಕಾದ ಅಳತೆಯಲ್ಲಿ ಆಯವನ್ನು ನೋಡಿ ಮನೆ ಕಟ್ಟಿಸುತ್ತಾರೆ.

ಬೇರೆ ಬೇರೆ ಜನಾಂಗಗಳಂತೆ ಇವರೂ ಸಹ ಮನೆಯ ರಚನೆಯನ್ನು ಮಾಡಿಕೊಂಡಿದ್ದಾರೆ. ಮನೆಯನ್ನು ಪ್ರವೇಶಿಸಿದಾಗ ಎಡಭಾಗದಲ್ಲಿ ದನಕರುಗಳನ್ನು ಕಟ್ಟುವುದಕ್ಕೆ ತಗ್ಗಾದ ಸ್ಥಳವಿದ್ದು ಅನಂತರ ಎತ್ತರದ ಕಟ್ಟೆಯಾಕಾರದ ವಿಶಾಲವಾದ ಪಡಶಾಲೆ

ಇರುತ್ತದೆ. ಇಲ್ಲಿಯೇ ಧಾನ್ಯಗಳನ್ನು ಸಂಗ್ರಹಿಸಿಡಲು ಕಣಜವಿದ್ದು ಮತ್ತೊಂದು ಕಡೆ ರಾತ್ರಿ ಮಲಗಿಕೊಳ್ಳುವ ಸ್ಥಳ ಇರುತ್ತದೆ. ಇದರ ಪಕ್ಕದಲ್ಲಿ ಯಾವುದಾದರೂ ಸಾಮಾನುಗಳನ್ನು ಇಡುವುದಕ್ಕೆ ಒಂದು ಕೋಣೆ ಇರುತ್ತದೆ. ಪಡಸಾಲೆಯ ಅನಂತರ ಎಡಬಲಗಳಲ್ಲಿ ಒಂದೊಂದು ಮಲಗುವ ಕೋಣೆಗಳಿದ್ದು ಅನಂತರದಲ್ಲಿ ಸ್ನಾನದ ಮನೆ ಇರುತ್ತದೆ. ಮಧ್ಯದಲ್ಲಿ ನಾಲ್ಕು ಕಂಬಗಳಿಂದ ಕೂಡಿದ ಚೌಕಾಕಾರದ ತೊಟ್ಟಿ ಇರುತ್ತದೆ. ಮನೆಯ ಹಜಾರಕ್ಕೆ ಹೊಂದಿಕೊಂಡಂತೆ ದೇವರ ಮನೆ ಇರುತ್ತದೆ. ನಂತರ ಎರಡು ಕೋಣೆಗಳ ಪಕ್ಕದಲ್ಲಿ ಅಡಿಗೆ ಮನೆ ಆವರಿಸಿಕೊಂಡಿರುತ್ತದೆ. ಒಟ್ಟಿನಲ್ಲಿ ಇವರು ಮನೆಗಳನ್ನು ವಾಸ್ತು ಪ್ರಕಾರವೇ ಕಟ್ಟುತ್ತಾರೆ.

ನೀಲಗಾರರು ತಮ್ಮ ತಮ್ಮ ಮನೆಗಳನ್ನು ಅವರ ಆರ್ಥಿಕತೆಗೆ ತಕ್ಕಂತೆ ನಿರ್ಮಿಸಿಕೊಂಡಿದ್ದಾರೆ. ಕೆಲವು ಮನೆಗಳು ಹೆಂಚಿನ ಮನೆಗಳೂ ಇವೆ. ಇನ್ನೂ ಕೆಲವು ಗುಡಿಸಲು ಮನೆಗಳು ಇವೆ. ಮತ್ತೆ ನಾಲ್ಕು ಕಂಬದ ಮನೆಗಳು, ಕೆಲವು ಆರ್.ಸಿ.ಸಿ. ಮನೆಗಳು ಇವೆ, ಉಳಿದಂತೆ ಗುಡಿಸಲುಗಳೂ ಸಹ ಇವೆ. ಇವರು ಆರ್ಥಿಕವಾಗಿ ಸಾಮಾಜಿಕವಾಗಿ ಧಾರ್ಮಿಕವಾಗಿ ಪ್ರಬಲರಾಗಿರುವವರಾಗಿದ್ದು ಆಧುನಿಕ ರೀತಿಯಲ್ಲಿ ಮನೆಯನ್ನು ಕಟ್ಟಿಕೊಂಡಿದ್ದಾರೆ.

ಇವರು ಹಬ್ಬ ಹರಿದಿನಗಳಲ್ಲಿ ಮನೆಯ ಗೋಡೆಗಳಿಗೆ ಸುಣ್ಣ ಬಣ್ಣಗಳಿಂದ ಅಲಂಕರಿಸುತ್ತಾರೆ. ಮದುವೆಯ ಸಂದರ್ಭದಲ್ಲಿ ಗೋಡೆಯ ಮೇಲೆ ಹಸೆಯ ಚಿತ್ರ ಬರೆಯುವುದನ್ನು ಕಾಣಬಹುದು. ಸೂರ್ಯ, ಚಂದ್ರ, ಕಳಸ ಹಿಡಿದ ನಾರಿ, ನವಿಲು, ಮುತ್ತೈದೆಯರು, ಪಕ್ಷಿಗಳು, ಬಾಳೆಗಿಡ ಈ ಚಿತ್ರಗಳನ್ನು ಬಿಡಿಸುತ್ತಾರೆ. ಹೊಸ ಮನೆ ಪ್ರವೇಶದ ಸಂದರ್ಭದಲ್ಲಿ ಪುರೋಹಿತರು ಗೋಡೆಯ ಮೇಲೆ 'ಓಂ', 'ಶ್ರೀ' ಬರೆದಿರುವುದು ಕಂಡುಬರುತ್ತದೆ. ಇದಲ್ಲದೆ ಮನೆ ಮುಂದಿನ ಅಂಗಳವನ್ನು ಪ್ರತಿ ಸೋಮುವಾರ, ಶುಕ್ರುವಾರ ಸ್ವಚ್ಛಗೊಳಿಸಿ ರಂಗೋಲಿ ಹಾಕುತ್ತಾರೆ. ಆ ದಿನ ಪ್ರತಿಯೊಬ್ಬ ನೀಲಗಾರನೂ ಸಹ ಭಿಕ್ಷೆಗೆ ಹೋಗಲೇಬೇಕೆಂಬ ನಿಯಮವಿದೆ.

ಗೃಹಪ್ರವೇಶ : ನೀಲಗಾರರು ಮನೆಯನ್ನು ಅವರ ಅನುಕೂಲಕ್ಕೆ ತಕ್ಕಂತೆ ಕಟ್ಟಿಸಿದ ನಂತರ ಎಲ್ಲರಲ್ಲಿರುವಂತೆ ಗೃಹಪ್ರವೇಶ ಕಾರ್ಯ ಮಾಡುವುದು ವಾಡಿಕೆ. ಆ ದಿನ ಪುರೋಹಿತರಿಂದ ಶಾಸ್ತ್ರ ಕೇಳಿ ಆಯ್ಕೆ ಮಾಡಿದ ಸ್ಥಳದಲ್ಲಿ ಮನೆ ನಿರ್ಮಿಸಿದ ನಂತರ ಒಳ್ಳೆಯ ದಿನ ನೋಡಿ ಶಾಸ್ತ್ರೋಕ್ತವಾಗಿ ಗೃಹಪ್ರವೇಶ ಮಾಡುತ್ತಾರೆ. ಮೊದಲು ಮನೆಗೆ ಬಸವಣ್ಣನನ್ನು ದಾಟಿಸಿ ನಂತರ ತುಂಬಿದ ಕೊಡ ಹಾಗೂ ದವಸಧಾನ್ಯಗಳನ್ನು ಮೊದಲು ತೆಗೆದು ಕೊಂಡು ಹೋಗುವರು. ಅನಂತರ ಮಧ್ಯ ಮನೆಯ ಒಳಗೆ ಚೌಕಾಕಾರದ ಹೋಮಕ್ಕೆ ತುಪ್ಪ-ಹಾಲು-ಜೇನು- ಸಕ್ಕರೆ ಇತ್ಯಾದಿಗಳನ್ನು ಅದಕ್ಕೆ ಹಾಕುತ್ತಾರೆ. ಮನೆಯ ಸುತ್ತಲೂ ದರ್ಭೆಯ ಹುಲ್ಲಿನ ದಾರವನ್ನು ಒಂದು ಸುತ್ತು ಕಟ್ಟುತ್ತಾರೆ, ನಾಲ್ಕು ಮೂಲೆಗೂ ಒಂದೊಂದು ಕುಂಬಳಕಾಯಿ ಮತ್ತು ಕುಂಕುಮದಿಂದ ಲೇಪಿಸಿದ ಅನ್ನ ಹಾಗೂ ಕುಂಕುಮ, ಅರಿಶಿನ ತುಂಬುತ್ತಾರೆ. ನಂತರದಲ್ಲಿ ಆಯಾ ವ್ಯಕ್ತಿಗಳ ಆರ್ಥಿಕತೆಗನುಗುಣವಾಗಿ ಕುರಿ-ಕೋಳಿಯನ್ನು ಬಲಿಕೊಡುತ್ತಾರೆ ಅದರ ಮಾಂಸವನ್ನು ಅಡಿಗೆ ಮಾಡಿ ಅವರ ದೇವರಿಗೆ ಎಡೆಹಾಕಿ, ನಂತರ ಎಲ್ಲರೂ ಸಹಪಂಕ್ತಿ ಭೋಜನ ಮಾಡುತ್ತಾರೆ.

ಹೀಗಾಗಿ ನೀಲಗಾರರು ಮನೆಗಳನ್ನು ಅವರ ಸಾಮರ್ಥ್ಯಕ್ಕನುಗುಣವಾಗಿ ಕಟ್ಟಿಸಿಕೊಂಡಿದ್ದಾರೆ. ಕೆಲವರಿಗೆ ಸರ್ಕಾರವೇ ಮನೆಕಟ್ಟಿಸಿಕೊಟ್ಟಿದೆ. ಕೆಲವರು ಅವರೇ ತಮ್ಮ ಆದಾಯದಿಂದ ಮನೆ ಕಟ್ಟಿಕೊಂಡಿರುವುದನ್ನು ಕಾಣಲಾಗಿದೆ. ಇವರಲ್ಲಿ ಹೆಚ್ಚು ಹೆಂಚಿನ ಮನೆಗಳು, ಗುಡಿಸಲುಗಳೇ ಇವೆ. ಕೆಳಸ್ತರದ ನೀಲಗಾರರು ಹೆಚ್ಚು ಗುಡಿಸಲು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಆದರೆ ಈಗ ಆಧುನಿಕತೆಯ ಪ್ರಭಾವದಿಂದಾಗಿ ಅವರೂ ಸಹ ಸಣ್ಣ ಸಣ್ಣ ಮನೆಗಳನ್ನು ಕಟ್ಟಿಸಿಕೊಳ್ಳುತ್ತಿದ್ದಾರೆ.

೩ : ೨.೩ ನ್ಯಾಯ ಪದ್ಧತಿ

ಕರ್ನಾಟಕವು ಅನೇಕ ರಾಜಮನೆತನಗಳ ಆಳ್ವಿಕೆಯ ಭಾಗವಾಗಿತ್ತು. ಪ್ರತಿ ಗ್ರಾಮಗಳಲ್ಲಿ ಗ್ರಾಮ ಪಂಚಾಯತಿಗಳಿದ್ದು ಅವುಗಳಲ್ಲಿ ಗ್ರಾಮಗಳಿಗೆ ಸಂಬಂಧಿಸಿದ ನ್ಯಾಯ ತೀರ್ಮಾನ ನಡೆಯುತ್ತಿತ್ತು. ಹಿಂದೂ ಧರ್ಮದ ಹಲವಾರು ಅಂಶಗಳಲ್ಲಿ ಜಾತಿ ವ್ಯವಸ್ಥೆ ಮುಖ್ಯವಾದುದು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ಜಾತಿಗಳಿದ್ದು ಜಾತಿಯೊಳಗಿನ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಲು ಜಾತಿ ಪಂಚಾಯತ್ ವ್ಯವಸ್ಥೆ ಇತ್ತು. (ಜಾತಿಯೊಳಗಿನ ಸಮಸ್ಯೆಗಳನ್ನು ಜಾತಿ ಪಂಚಾಯತ್‌ನಲ್ಲಿ ಬಗೆಹರಿಸುತ್ತಿದ್ದರು) ಪ್ರತಿಯೊಂದು ಗ್ರಾಮಕ್ಕೂ ಗ್ರಾಮ ದೇವಾಲಯಗಳಲ್ಲದೆ ಇವರ ಅನೇಕ ಧಾರ್ಮಿಕ ಸಂಸ್ಥೆಗಳಿದ್ದು ಗ್ರಾಮದ ದೇವಾಲಯದಲ್ಲಿ ಅಲ್ಲಿಯ ಎಲ್ಲಾ ಜಾತಿಯ ಜನರು ಒಟ್ಟು ಸೇರುತ್ತಿದ್ದರು, ಗ್ರಾಮದ ಸಮಸ್ಯೆಗಳನ್ನು ಗ್ರಾಮದಲ್ಲಿ ಚರ್ಚಿಸುತ್ತಿದ್ದರು.

ನೀಲಗಾರ ಸಮುದಾಯದಲ್ಲಿ ವಂಶ ಪರಂಪರಾಗತವಾಗಿ ಬಂದ ನ್ಯಾಯಪದ್ಧತಿಯು ಸಾಂಸ್ಕೃತಿಕವಾಗಿ ಬಹು ಮಹತ್ವದ ಅಂಶವಾಗಿದೆ. ಶಾಂತ ಹಾಗೂ ವ್ಯವಸ್ಥಿತವಾಗಿ ಜೀವನ ನಡೆಸಲು ಪ್ರತಿಯೊಂದು ಜನಾಂಗವೂ ತನ್ನದೇ ಆದ ರೀತಿಯಲ್ಲಿ ನ್ಯಾಯ ವ್ಯವಸ್ಥೆಯೊಂದನ್ನು ಮಾಡಿಕೊಂಡಿರುತ್ತಾರೆ. ಇದನ್ನು 'ಕಟ್ಟೇಮನೆ ನ್ಯಾಯ' ಎಂದು ಕರೆಯುತ್ತಾರೆ. ಈ ನ್ಯಾಯ ವ್ಯವಸ್ಥೆಯಲ್ಲಿ ನೀಲಗಾರ ಸಮುದಾಯದ ಹಿರಿಯರು ಇರುತ್ತಾರೆ. ಇವರು ತಮ್ಮ ಜೀವನಾನುಭವದಲ್ಲಿ ಅನೇಕ ನ್ಯಾಯ ಪಂಚಾಯತಿಗಳಲ್ಲಿ ಭಾಗವಹಿಸುತ್ತಾರೆ. ಕಠಿಣ ಸಂದರ್ಭದಲ್ಲಿ ಸಮಯೋಚಿತವಾದ ನಿರ್ಣಯಗಳನ್ನು ಕೊಟ್ಟು ಆ ಜನರಲ್ಲಿ ಐಕ್ಯತೆಯನ್ನು ಕಾಪಾಡಿಕೊಂಡು ಬಂದಿದ್ದಾರೆ. ಇವರಿಗೆ ಸಮುದಾಯದಲ್ಲಿ ಒಳ್ಳೆಯ ಗೌರವ ನೀಡುತ್ತಾರೆ. ಅಸಭ್ಯ ರೀತಿಯಲ್ಲಿ ವರ್ತಿಸಿದರೆ, ಧರ್ಮದ ನಿಯಮಗಳನ್ನು ಮೀರಿದರೆ, ಕಟ್ಟು ಕಟ್ಟಳೆಗಳನ್ನು ಉಲ್ಲಂಘಿಸಿದರೆ ಅಂಥ ವ್ಯಕ್ತಿಗಳನ್ನು ಧರ್ಮದಿಂದ ಮತ್ತು ಜಾತಿಯಿಂದ ಹೊರಗೆ ಹಾಕುವ ಅಥವಾ ಬಹಿಷ್ಕರಿಸುವ ಎಲ್ಲಾ ಅಧಿಕಾರವನ್ನು ಇವರು ಹೊಂದಿರುತ್ತಾರೆ. ಈ ರೀತಿಯ ಅಧಿಕಾರಗಳನ್ನು ಬುಡಕಟ್ಟು ಜನಾಂಗಗಳಲ್ಲಿಯೂ ಕಾಣಬಹುದು.

ನೀಲಗಾರರಲ್ಲಿ ಈ ರೀತಿಯ ಕಠಿಣ ಕ್ರಮ ಇರುವುದಿಲ್ಲ. ಇವರಲ್ಲಿ ಮುಖ್ಯವಾಗಿ ಹತ್ತು ಹನ್ನೆರಡು ಹಳ್ಳಿಗಳಿಗೆ ಒಬ್ಬರಂತೆ ಒಬ್ಬ ನೀಲಗಾರ ಇರುತ್ತಾನೆ. ಅವನೇ ಪುರುಸೇಕಾರಿ ಇವನನ್ನು ನೀಲಗಾರ ತಂಡದವರು ನ್ಯಾಯಮೂರ್ತಿಯಾಗಿ ಮಾಡಿಕೊಂಡಿದ್ದಾರೆ. ಇವರು ಮುಖ್ಯವಾಗಿ ಧಾರ್ಮಿಕ ಆಚರಣೆಗೆ ಯಾವುದೇ ಅಡಚಣೆಯಾಗದಂತೆ ಕಾಪಾಡುವುದೇ ಈ ನ್ಯಾಯಕಟ್ಟೆಯ ಉದ್ದೇಶವಾಗಿದೆ. ಇವರಲ್ಲಿ ಪ್ರತಿತಿಂಗಳ ೭ನೇ ತಾರೀಖು ಕುಲಪಂಚಾಯತಿ ಮಾಡಲಾಗುತ್ತದೆ ಎಂಬುದು

ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳುದು ಬಂದಿದೆ. ಇವರಲ್ಲಿ ಯಾರಾದರೂ ಜಗಳ ಆಡಿದರೆ ಅಥವಾ ಬೇರೆ ಜಾತಿಯಲ್ಲಿ ಮದುವೆಯಾದರೆ, ಕಳ್ಳತನ, ಧಾರ್ಮಿಕ ಕಾರ್ಯದಲ್ಲಿ ಭಾಗಿಯಾಗದೇ ಇರುವುದು ಮುಂತಾದ ವಿಚಾರಗಳಿಗೆ ನ್ಯಾಯ ತೀರ್ಮಾನ ಮಾಡಲು ಅವರದೇ ಆದ ನೀಲಗಾರ ತಂಡದವರು ಇವರನ್ನು ನೇಮಿಸಿರುತ್ತಾರೆ. ಇವರಿಗೆ ಗುಡ್ಡರನ್ನಾಗಿ ಬಿಡುವ ದೀಕ್ಷೆ ಸಂದರ್ಭದಲ್ಲಿ ಅಥವಾ ದೀಕ್ಷೆ ಆದ ಮೇಲೆ ಯಾರಾದರೂ ಆ ಗುಡ್ಡನಿಗೆ ಕಾಲು ಅಥವಾ ಪಾದರಕ್ಷೆ ಸೋಕಿಸಿಬಿಟ್ಟರೆ ಅಂಥಹ ಸಂದರ್ಭದಲ್ಲಿ ಮುಖ್ಯವಾಗಿ ಎಲ್ಲಾ ನೀಲಗಾರರನ್ನೆಲ್ಲ ಕರೆತರಿಸಿ ಮೊದಲು ಗುಡ್ಡನನ್ನು ಬಿಟ್ಟ ರೀತಿ ಮತ್ತೆ ದೀಕ್ಷೆ ಕೊಡುವ ಆಚರಣೆಯನ್ನು ಆ ವ್ಯಕ್ತಿಗೆ ನೆರವೇರಿಸುತ್ತಾರೆ.

ಇವರಲ್ಲಿ ನ್ಯಾಯಪದ್ಧತಿಯು ರೂಢಿಗತವಾಗಿದ್ದು ಅವರವರ ಜಾತಿಗೆ ಪ್ರತ್ಯೇಕವಾದ ನ್ಯಾಯಕಟ್ಟೆಗಳು ಇರುತ್ತವೆ. ಉದಾ : ಕುಂಬಾರ ನೀಲಗಾರನನ್ನು ನ್ಯಾಯಕಟ್ಟೆಗೆ ತಂದರೆ ನ್ಯಾಯ ತೀರ್ಮಾನವನ್ನು ಆ ಜಾತಿಯಲ್ಲಿರುವ ಪುರುಸೇಕಾರಿ ಯಜಮಾನನು ತೀರ್ಪು ನೀಡುತ್ತಾನೆ. ಅದೇ ರೀತಿ ಬೇರೆ ಬೇರೆ ಜಾತಿಯಲ್ಲಿಯೂ ಅವರದೇ ಆದ ಪ್ರತ್ಯೇಕವಾದ ನ್ಯಾಯಕಟ್ಟೆ ಇರುವುದನ್ನು ಕ್ಷೇತ್ರಕಾರ್ಯದಿಂದ ಅರಿಯಲಾಗಿದೆ. ಇವರಲ್ಲಿ ನ್ಯಾಯತೀರ್ಪು ನೀಡುವ ಯಜಮಾನನಿಗೆ ಇವರ ಸಮುದಾಯದಲ್ಲಿ ಒಳ್ಳೆಯ ಗೌರವ ಇರುವುದನ್ನು ಕಾಣಬಹುದು. ಹಬ್ಬ-ಜಾತ್ರೆ- ಉತ್ಸವಗಳಲ್ಲಿ ಇವರ ಪಾತ್ರ ಪ್ರಮುಖವಾಗಿರುತ್ತದೆ. ಯಾವುದೇ ಸಂದರ್ಭದಲ್ಲಿ ಬೇಕಾದರೂ ತಪ್ಪಿತಸ್ಥರನ್ನು ಪ್ರಶ್ನಿಸುವ ವಿಚಾರಣೆ ಮಾಡುವ ಹಕ್ಕನ್ನು ಇವರು ಪಡೆದಿರುತ್ತಾರೆ. ನೀಲಗಾರರ ಜೊತೆ ಒಡಗೂಡಿ ಬದುಕುವ ಮತ್ತು ನ್ಯಾಯವ್ಯವಸ್ಥೆಯಲ್ಲಿ ಪಾಲ್ಗೊಳ್ಳುವ ಅವರು ತುಂಬಾ ಜವಾಬ್ದಾರಿಯುತ ವ್ಯಕ್ತಿಗಳಾಗಿರುತ್ತಾರೆ. ಇವರು ಆ ಸಮುದಾಯಗಳಲ್ಲಿಯೇ ಆರ್ಥಿಕವಾಗಿಯೂ, ಸಾಮಾಜಿಕವಾಗಿಯೂ ತುಂಬಾ ಶ್ರೀಮಂತರಾಗಿದ್ದು ಪ್ರತಿಷ್ಠಿತ ವ್ಯಕ್ತಿಗಳಾಗಿರುತ್ತಾರೆ.

ನ್ಯಾಯ ಕಟ್ಟೆಯ ಯಜಮಾನ (ಪುರುಸೇಕಾರಿ)ನು ವಿವಾಹ ಶುಭ ಸಂದರ್ಭ ಧಾರ್ಮಿಕ ಆಚರಣೆಗಳ ಸಂದರ್ಭದಲ್ಲಿ ಎಲ್ಲಾ ಶಾಸ್ತ್ರಗಳೂ ಸರಿಯಾಗಿ ಕ್ರಮವಾಗಿ ನಡೆಯುವಂತೆ ಜಾಗರೂಕತೆಯಿಂದ ಇವರು ಎಚ್ಚರವಹಿಸುತ್ತಾರೆ. ಅದೇ ರೀತಿ ಜಾತ್ರೆ ಪರುಸೆಗಳಿಗೆ ಹೋಗುವ ಸಂದರ್ಭದಲ್ಲಿ ಇವರ ಪಾತ್ರ ಪ್ರಮುಖವಾದುದು ಹಾಗೆಯೇ ಜಾತ್ರೆಯಲ್ಲಿ ಆಯಾಯ ಸಮುದಾಯದ ನೀಲಗಾರರಿಗೆ ಅವರವರ ಪುರುಸೇಕಾರಿ ಇದ್ದು ಜಾತ್ರೆ ಸಂದರ್ಭದಲ್ಲಿ ಯಾವುದೇ ಚ್ಯುತಿ ಬರದಂತೆ ಕಾಪಾಡಿಕೊಳ್ಳುತ್ತಾರೆ.

ನೀಲಗಾರ ಸಮುದಾಯದವರು ವಾಸಿಸುವ ವ್ಯಾಪ್ತಿಗೆ ಸೇರುವ ಜಾಗದಲ್ಲಿ ಕಟ್ಟೆಮನೆ ಯಜಮಾನನು ಕೆಲವು ನಿರ್ದಿಷ್ಟ ನ್ಯಾಯ ಕಟ್ಟೆಗಳನ್ನು ಸ್ಥಾಪಿಸುತ್ತಿದ್ದನು. ಬಸವೇಶ್ವರ ದೇವಸ್ಥಾನದ ಚಾವಡಿ ಮಾತ್ರ ಇವರಿಗೆ ನ್ಯಾಯಕಟ್ಟೆಯಾಗಿದೆ, ಇಲ್ಲಿ ಯಾರೂ ಸಹ ಸುಳ್ಳು ಹೇಳಬಾರದು. ಸತ್ಯವನ್ನೇ ನುಡಿಯಬೇಕು ಎಂಬುದು ಇವರ ವಿಶೇಷ ನಂಬಿಕೆಯಾಗಿದೆ. ಮತ್ತೆ ನ್ಯಾಯದ ಯಜಮಾನನು ಮದುವೆ ಸಂದರ್ಭ ನಾಮಕರಣ ಇತರ ಆಚರಣೆಗಳ ಸಂದರ್ಭದಲ್ಲಿ ದೇವರಿಗೆ ಹಾಕಿದ ಕಾಣಿಕೆಗಳನ್ನು ದೇವಸ್ಥಾನಕ್ಕೆ ತಲುಪಿಸುವ ಏಕೈಕ ಜವಾಬ್ದಾರಿ ಇವರಿಗೆ ಇರುತ್ತದೆ.

ಹೀಗೆ ವಂಶಪಾರಂಪರ್ಯವಾಗಿ ನ್ಯಾಯ ನೀಡುತ್ತಾ ಬಂದ ಕಟ್ಟೆಮನೆ ಯಜಮಾನ ತಮ್ಮ ಜನಾಂಗದಲ್ಲಿ ಆಗುವ ಜಗಳ, ಹಿಂಸೆ, ಅತ್ಯಾಚಾರ ಮುಂತಾದ ಕೆಟ್ಟ ಘಟನೆಗಳನ್ನು ತಮ್ಮಲ್ಲಿಯೇ ಈ ನ್ಯಾಯದ ಮೂಲಕ ಬಗೆಹರಿಸಿಕೊಳ್ಳುತ್ತಿದ್ದರು. ಯಾವುದೇ ಜಟಿಲ ಸಮಸ್ಯೆಗಳು ಎದುರಾದರೂ ತಮ್ಮ ಜನಾಂಗದ ಒಳಜಗಳಗಳ ಬಗ್ಗೆ ಅನ್ಯ ಜನಾಂಗದವರಿಗೆ ತಿಳಿಯಪಡಿಸುತ್ತಿರಲಿಲ್ಲ. ಕಾರಣ ಅವರಿಗೆ ಅವರ ಜನಾಂಗದ ಮೇಲಿನ ಗೌರವಗಳೇ ಇದಕ್ಕೆ ಕಾರಣವಾಗಿವೆ. ಆದ್ದರಿಂದ ಯಾವುದೇ ಜಗಳ ಗಲಾಟೆಗಳಾದರೂ ಅವರಲ್ಲಿಯೇ ಬಗೆಹರಿಸಿಕೊಳ್ಳುತ್ತಿದ್ದರು. ಒಟ್ಟಿನಲ್ಲಿ ಆ ಸಮುದಾಯದ ಗೌರವ ಆತ್ಮಾಭಿಮಾನವನ್ನು ಕಾಪಾಡಿಕೊಳ್ಳುವುದೇ ಇವರ ಮುಖ್ಯ ಉದ್ದೇಶವಾಗಿದೆ.

ಇವರಲ್ಲಿ ಯಾರಾದರೂ ತಪ್ಪು ಮಾಡಿದರೆ ಅವರಿಗೆ ಬೇರೆ ಜನಾಂಗದಂತೆ ಜಾತಿಯಿಂದ ಬಹಿಷ್ಕರಿಸುವುದಾಗಲಿ ಇರುವುದಿಲ್ಲ. ದಂಡವಿಧಿಸುವುದು ಎಲ್ಲರಲ್ಲಿರುವಂತೆ ಇವರಲ್ಲಿಯೂ ಇದೆ. ಇವರಲ್ಲಿ ಮುಖ್ಯವಾಗಿ ದೀಕ್ಷೆ ಕೊಡುವ ಸಂದರ್ಭದಲ್ಲಿ ಅಥವಾ ಮದುವೆಯ ಸಂದರ್ಭದಲ್ಲಿ ನೀಲಗಾರ ಸಮುದಾಯದವರಿಗೆಲ್ಲಾ ಊಟ ಹಾಕಿಸಲೇಬೇಕು. ಯಾವುದೇ ನೀಲಗಾರ ಈ ಎರಡು ಸಂದರ್ಭವನ್ನು ಕಳೆದುಕೊಂಡರೆ ಅವನನ್ನು ಅವರ ಸಮುದಾಯದಿಂದ ಯಾವುದೇ ಮುಲಾಜು ಇಲ್ಲದೆ ಹೊರಗೆ ಹಾಕುತ್ತಾರೆ. ಆತ ತಮ್ಮ ಸಮುದಾಯದವರು ಸೇರುವಂಥ ಧಾರ್ಮಿಕ ಆಚರಣೆಗಳಾದಂತಹ ಹಬ್ಬ ಜಾತ್ರೆಗಳಿಗೆ ಇವನು ಸೇರುವಂತಿಲ್ಲ. ಒಟ್ಟಿನಲ್ಲಿ ನೀಲಗಾರ ಪಂಗಡದಿಂದ ಪ್ರತ್ಯೇಕ ಮಾಡುತ್ತಾರೆ. ಹೀಗಾಗಿ ಇವರಲ್ಲಿ ಕಟ್ಟು ನಿಟ್ಟಾದ ಕ್ರಮವನ್ನು ಹಿಂದಿನಿಂದಲೂ ಪಾಲಿಸಿಕೊಂಡು ಬಂದಿರುವುದನ್ನು ಕಾಣಬಹುದು.

೩: ೨.೪ ಆಹಾರ ಪದ್ಧತಿ

ಈ ಜಗದಲ್ಲಿ ''ಎಲ್ಲಾರು ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ'' ಎಂದು ಪುರಂದರದಾಸರು ತಮ್ಮ ಕೀರ್ತನೆಯಲ್ಲಿ ಅತ್ಯಂತ ಸೊಗಸಾಗಿ ಹೇಳಿದ್ದಾರೆ. ಅದೇ ರೀತಿ ಸರ್ವಜ್ಞನು 'ಅನ್ನ ದೇವರ ಮುಂದೆ ಇನ್ನು ದೇವರು ಉಂಟೇ, ಅನ್ನವಿರುವ ತನಕ ಪ್ರಾಣವು ಜಗದೊಳ ನನ್ನದೇ ದೈವ ಸರ್ವಜ್ಞ' ಎಂದು ಹೇಳಿದ್ದಾರೆ.

ಜನಾಂಗಗಳು ವಾಸಿಸುತ್ತಿರುವ ಭೌಗೋಳಿಕ ಪರಿಸರಕ್ಕನುಗುಣವಾಗಿ ಅಡುಗೆ ಪದ್ಧತಿಯು ಇರುತ್ತದೆ. ಎಲ್ಲಾ ಕಡೆಯೂ ಒಂದೇ ರೀತಿಯ ಅಡುಗೆ ಪದ್ಧತಿ ಇರಲು ಸಾಧ್ಯವಿಲ್ಲ. ಈ ಕಾರಣದಿಂದಾಗಿ ಬಯಲು ಸೀಮೆ, ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಕರಾವಳಿಗಳಲ್ಲಿ ಊಟೋಪಚಾರಗಳಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ''ಆಹಾರ ಪಾನೀಯಗಳು ಮಾನವನಿಂದ ಮಾನವನಿಗೆ ಜನಾಂಗದಿಂದ ಜನಾಂಗಕ್ಕೆ ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಭಿನ್ನವಾಗುತ್ತಾ ಸಾಗುತ್ತದೆ. ವಸ್ತುಸ್ಥಿತಿ ಹೀಗಿರುವುದರಿಂದಲೇ ಆಹಾರಪಾನೀಯ ಪದ್ಧತಿಗಳು ಸಂಸ್ಕೃತಿಯ ದ್ಯೋತಕವೆನಿಸಿಕೊಂಡಿತ್ತು. ಅವುಗಳ ಅಧ್ಯಯನವೇ ಒಂದು ಸಮಾಜದ ಒಂದು ಸಂಸ್ಕೃತಿಯ ಪುನರ್ ರಚನೆಯಾಗುತ್ತದೆ''[೬] ಆದ್ದರಿಂದ ಒಂದು ಜನಾಂಗದಲ್ಲಿಯೇ ಅವರು ನೆಲೆಸಿರುವ ಪ್ರದೇಶಕ್ಕೆ ಅನುಗುಣವಾಗಿ ಊಟೋಪಚಾರದಲ್ಲಿ ವ್ಯತ್ಯಾಸಗಳು ಉಂಟಾಗುತ್ತವೆ. ಪ್ರಸ್ತುತ ದಕ್ಷಿಣ ಕರ್ನಾಟಕದ ನೀಲಗಾರರ ಅಡುಗೆ ಪದ್ಧತಿಯನ್ನು ಇಲ್ಲಿ ಚರ್ಚೆಗೆ ಒಳಪಡಿಸಲಾಗಿದೆ.

ನೀಲಗಾರರು ಮುಖ್ಯವಾಗಿ ಮೈಸೂರು ಪ್ರಾಂತ್ಯದಲ್ಲಿ ಕಾಣಿಸಿಕೊಳ್ಳುವುದರಿಂದ ಇವರಿಗೆ ಈ ಸ್ಥಳ ಕೇಂದ್ರಸ್ಥಾನವಾಗಿತ್ತು. ಈ ಸಂಸ್ಥಾನದಲ್ಲಿ ಮೈಸೂರು ಪ್ರದೇಶ ಒಂದು ಕಾಲದಲ್ಲಿ ಕಾಡಿನಿಂದ ಆವೃತವಾಗಿದ್ದು ಆ ಸಂದರ್ಭದಲ್ಲಿ ನೀಲಗಾರರೆಂದು ಗುರುತಿಸಿಕೊಂಡಿರುವ ಜನರು ಕಾಡಿನಲ್ಲಿ ಪ್ರಾಣಿಗಳನ್ನು ಬೇಟೆಯಾಡುವುದರ ಮುಖಾಂತರ ಜೀವನ ಸಾಗಿಸುತ್ತಿದ್ದರು. ಕಾಲನಂತರ ಬ್ರಿಟಿಷರ ಆಳ್ವಿಕೆ ಪ್ರಾರಂಭವಾಗಿ ಕಾಡುಗಳನ್ನು ಅರಣ್ಯ ಇಲಾಖೆಗಳಾಗಿ ಸರ್ಕಾರ ವಶಪಡಿಸಿಕೊಂಡು ಇವರಿಗೆ ಬೇಟೆಗೆ ತೊಂದರೆಯಾಯಿತು. ಆ ಸಂದರ್ಭದಲ್ಲಿ ಗೆಡ್ಡೆ- ಗೆಣಸು ತಿನ್ನುವುದರ ಮೂಲಕ ಹಸಿವು ನೀಗಿಸಿಕೊಳ್ಳುತ್ತಿದ್ದರು. ನಂತರ ಅವರು ಪಶುಸಂಗೋಪನೆ ಮೂಲಕ ಜೀವನ ಸಾಗಿಸುತ್ತಿದ್ದರೆಂದು ಈಗಾಗಲೇ ಬಂದಿರುವ ಮಲೆಮದೇಶ್ವರ ಕಾವ್ಯದ ಬೇವಿನಹಟ್ಟಿ ಕಾಳಮ್ಮ ಮತ್ತು ಸಂಕಮ್ಮನ ಸಾಲಿನಲ್ಲಿ ಪ್ರಸ್ತಾಪಿಸಿರುವುದನ್ನು ಕಾಣಬಹುದು.

ನೀಲಗಾರರು ಮಾಂಸಹಾರಿಗಳಾಗಿದ್ದು ಕುರಿ, ಕೋಳಿ, ಆಡು ಮೊದಲಾದವುಗಳನ್ನು ತಿನ್ನುತ್ತಾರೆ. ದನ, ಹಾವು ಮತ್ತು ಹಂದಿಯನ್ನು ತಿನ್ನುವುದಿಲ್ಲ, ಇವುಗಳನ್ನು ಈ ಸಮುದಾಯ ನಿಷೇಧಿಸಿದೆ. ಇವರ ಅಡುಗೆ ಪದ್ಧತಿಯು ಸಾಂಪ್ರದಾಯಕವಾಗಿದ್ದು ಸ್ಥಳೀಯ ಗುಣವನ್ನು ಹೊಂದಿದೆ. ಬಯಲುಸೀಮೆಯಲ್ಲಿ ವಾಸಿಸುವವರಾದ್ದರಿಂದ ಇವರಿಗೆ ರಾಗಿ ಮತ್ತು ರಾಗಿ ಮುದ್ದೆ ಪ್ರಿಯವಾದಷ್ಟೆ ಕೆಲವರಿಗೆ ರಾಗಿ ರೊಟ್ಟಿ ಜೋಳದ ರೊಟ್ಟಿ ಪ್ರಿಯವಾಗುತ್ತದೆ. ಇವರುಗಳ ಅಡುಗೆಗಳಲ್ಲಿ ದಿನನಿತ್ಯದ ಅಡುಗೆಗಳು, ಹಬ್ಬ ಮತ್ತು ಧಾರ್ಮಿಕ ಆಚರಣೆ ಸಂದರ್ಭದ ಅಡುಗೆಗಳು ಮತ್ತು ತಿಥಿ ಇತ್ಯಾದಿ ಸಂದರ್ಭದಲ್ಲಿಯ ಅಡುಗೆಗಳು ಎಂದು ಅಧ್ಯಯನಕ್ಕೋಸ್ಕರ ವಿಂಗಡಿಸಲಾಗಿದೆ. ಇವರಿಗೆ ಪ್ರಿಯವಾದದ್ದು ಭಂಗಿ ಮತ್ತು ಮಾಂಸವಾಗಿವೆ.

ನಿತ್ಯ ಅಡುಗೆಗಳು : ನೀಲಗಾರ ಸಮುದಾಯದವರ ದಿನನಿತ್ಯದ ಅಡುಗೆ ತುಂಬಾ ಸರಳವಾಗಿದ್ದು ಮತ್ತು ಅತೀ ಸರಳವಾಗಿದೆ. ಇವರು ಹೆಚ್ಚು ಬೇಸಾಯ ಅವಲಂಬಿಸಿದ್ದರಿಂದ ಹೊಲ-ಗದ್ದೆ-ತೋಟಗಳಲ್ಲಿ ಕೆಲಸ ಮಾಡಲು ಶಕ್ತಿ ಬರುವಂಥ ರಾಗಿ ಮುದ್ದೆ, ಸೊಪ್ಪಿನ ಸಾರು, ರಾಗಿರೊಟ್ಟಿಯನ್ನು ಹೆಚ್ಚಾಗಿ ಈ ಭಾಗದಲ್ಲಿ ಬಳಸುತ್ತಾರೆ. ಇವರಲ್ಲಿರುವ ವಿವಿಧ ಒಕ್ಕಲಿನವರು ಅವರಿಗೆ ಇಷ್ಟವಾದ ಅತ್ಯಂತ ಸರಳವಾದ ಅಡುಗೆಗಳನ್ನು ಮಾಡುತ್ತಾರೆ. ಬೆಳಗಿನ ಉಪಹಾರವಾಗಿ ಇಡ್ಲಿ, ದೋಸೆ, ರೊಟ್ಟಿ ಮುಂತಾದವುಗಳನ್ನು ಇವುಗಳ ನಂಜಿಕೆಗೆ ಕಾಯಿ ಚಟ್ನಿ, ಕಡ್ಲೆ ಚಟ್ನಿ, ತರಕಾರಿ ಪಲ್ಯ, ಉಪ್ಪಿನಕಾಯಿಗಳನ್ನು ಬಳಸುತ್ತಾರೆ. ಇದಲ್ಲದೆ, ಕೆಲವರು ಸಾಮಾನ್ಯವಾಗಿ ಬೆಳಗಿನ ಉಪಹಾರವಾಗಿ ರಾಗಿಮುದ್ದೆ, ಸೊಪ್ಪಿನ ಸಾರು ಊಟ ಮಾಡಿ ಹೊಲ ಗದ್ದೆಗಳಿಗೆ ಮುಂಜಾನೆ ಹೊರಡುತ್ತಾರೆ. ಅಲ್ಲದೆ ಇವರು ಅಲಸಂದೆ, ಹಸಿಕಡ್ಲೆ, ಅವರೆಕಾಳನ್ನು ಪಲ್ಯಕ್ಕಾಗಿ ಬಳಸುತ್ತಾರೆ. ಆಹಾರ ಪದ್ಧತಿಯಲ್ಲಿ ಇತರರಿಗಿಂತ ಹೆಚ್ಚು ವ್ಯತ್ಯಾಸಗಳೇನೂ ಕಂಡು ಬರುವುದಿಲ್ಲ.

ನೀಲಗಾರರು ಮುಖ್ಯವಾದ ಆಹಾರವೆಂದು ಪರಿಗಣಿಸುವುದು ಮಾಂಸಹಾರವನ್ನು, ಇದನ್ನು ವಿವರವಾಗಿ ನೋಡಬಹುದು. ಸಾಮಾನ್ಯವಾಗಿ ಮಾಂಸಹಾರಿಗಳೆಲ್ಲರೂ ಬಳಸುವ ಕೋಳಿ, ಕುರಿ, ಆಡುಗಳನ್ನು ತಿನ್ನುತ್ತಾರೆ. ಇವರು ಸೋಮುವಾರ ಮತ್ತು ಶುಕ್ರವಾರ ಮಾತ್ರ ಮಾಂಸ ತಿನ್ನುವುದಿಲ್ಲ. ಹಾಗೆಯೇ ಲಿಂಗಾಯಿತ ನೀಲಗಾರರು ಯಾವುದೇ ಮಾಂಸಹಾರಿ ಪ್ರಾಣಿಗಳನ್ನು ತಿನ್ನುವುದಿಲ್ಲ, ಅವರು ಸಸ್ಯಹಾರಿಗಳಾಗಿರುತ್ತಾರೆ. ಇವರಲ್ಲಿ ಕಡ್ಡಾಯವಾಗಿ ದೀಕ್ಷೆಪಡೆದು ಲಿಂಗಧಾರಣೆಯಾದ ನಂತರ ಮಾಂಸದ

ಊಟ ಮಾಡಿಸಿ ಅಲ್ಲಿಯ ಉಳಿದ ನೀಲಗಾರರಿಗೆ ಹಾಕಲೇಬೇಕು. ಈ ಸಂದರ್ಭದಲ್ಲಾಗದಿದ್ದರೆ, ಮದುವೆ ಸಂದರ್ಭದಲ್ಲಿಯಾದರೂ ಮಾಂಸದ ಊಟ ಹಾಕಿಸುವ ಪದ್ಧತಿ ಈ ಒಕ್ಕಲುಗಳಲ್ಲಿ ಈಗಲೂ ಕಂಡು ಬರುತ್ತದೆ. ಇದು ಇವರಲ್ಲಿಯ ಆಹಾರಪದ್ಧತಿ ನಿಯಮವಾಗಿದೆ. ಮಗುವಿನ ನಾಮಕರಣದ ಸಂದರ್ಭದಲ್ಲಿ ಒಬ್ಬಟ್ಟು, ಬೂಂದಿ, ಪಾಯಸವನ್ನು ಸಿಹಿ ಅಡುಗೆಯಾಗಿ ಮಾಡುತ್ತಾರೆ. ಸ್ವಲ್ಪ ಬಡತನದಲ್ಲಿ ಇರುವವರು ರಾಗಿ ಮುದ್ದೆ, ಸೊಪ್ಪುಸಾರು ಮಾಡುತ್ತಾರೆ. ನೀಲಗಾರರಲ್ಲಿ ಹಿಂದೆ ಋತುಮತಿಯಾದ ಹೆಣ್ಣಿಗೆ ರಾಗಿ ಮುದ್ದೆ, ರಾಗಿ ಹಿಟ್ಟು, ಹುರುಳಿಕಾಳು ಸಾರು ಕೊಡುತ್ತಿದ್ದರಂತೆ. ಆದರೆ ಇವತ್ತಿನ ಸಂದರ್ಭದಲ್ಲಿ ಗೋಧಿಹಿಟ್ಟು, ಉದ್ದಿನ ಕಾಳು ಬೇಯಿಸಿ ಕೊಡುತ್ತಾರೆ.

ಇವರಲ್ಲಿ ಕಡ್ಡಾಯವಾಗಿ ಸತ್ತ ಹನ್ನೊಂದನೆಯ ದಿನದಂದು ಮಾಂಸದ ಊಟ ಮಾಡಿಸಲೇಬೇಕು ಎಂಬುದು ಪದ್ಧತಿಯಾಗಿದೆ. ಆ ದಿನ ಬಂದ ನೀಲಗಾರರೆಲ್ಲರಿಗೂ ಮಾಂಸದ ಊಟ ಇದ್ದೇ ಇರುತ್ತದೆ. ಮುಖ್ಯವಾಗಿ ಇವರು ಹಬ್ಬ -ಹರಿದಿನಗಳಲ್ಲಿ ಜಾತ್ರೆ -ಉತ್ಸವಗಳಲ್ಲಿ ಮಾಂಸದ ಅಡುಗೆ ಮಾಡುತ್ತಾರೆ. ಕಪ್ಪಡಿ ಮತ್ತು ಚಿಕ್ಕಲೂರು ಜಾತ್ರೆ ಸಂದರ್ಭದಲ್ಲಿಯೂ ಕಡ್ಡಾಯವಾಗಿ ಭಂಗಿ ಮತ್ತು ಮಾಂಸ ಮಾಡಲೇಬೇಕು. ಇದು ಈ ಒಕ್ಕಲಿನವರಿಗೆ ತುಂಬಾ ಪ್ರಿಯವಾದ ಆಹಾರ. ಈ ಆಹಾರವನ್ನು ಕುರುಬಗೌಡರು, ಮಡಿವಾಳ ಶೆಟ್ಟರು, ಉಪ್ಪಲಿಗರು ಎಲ್ಲರೂ ಆ ಸಂದರ್ಭದಲ್ಲಿ ಊಟ ಮಾಡಲೇಬೇಕು.

ಮೇಲಿನ ಎಲ್ಲಾ ಅಂಶಗಳನ್ನು ಆಧರಿಸಿ ಒಟ್ಟಾರೆಯಾಗಿ ನೀಲಗಾರ ಅಡುಗೆಗಳಲ್ಲಿ ಅಕ್ಕಿ -ರಾಗಿ-ಜೋಳಗಳು ಪ್ರಧಾನ ಪಾತ್ರವನ್ನು ವಹಿಸಿಕೊಂಡಿವೆ. ಹಾಲು, ಮೊಸರು, ತುಪ್ಪಗಳನ್ನು ಹೇರಳವಾಗಿ ಬಳಸುತ್ತಾರೆ. ಎಣ್ಣೆಯಲ್ಲಿ ಕರಿದ ತಿಂಡಿ ತಿನಿಸುಗಳಿಗಿಂತ ಬೇಯಿಸಿದ ಅಡುಗೆಗಳನ್ನೇ ಹೆಚ್ಚಾಗಿ ಬಳಸಿಕೊಂಡಿದ್ದಾರೆ. ಹೀಗೆ ಮಾಡುವುದರಿಂದ ಆಹಾರ ಪದಾರ್ಥದ ಪೌಷ್ಟಿಕಾಂಶಗಳೂ ಕಡಿಮೆಯಾಗದೆ ದಷ್ಟಪುಷ್ಟವಾಗಿದ್ದು ಆರೋಗ್ಯದಾಯಕವಾಗಿರುತ್ತದೆ. ಇವರ ದಿನನಿತ್ಯದ ಬದುಕಿನಲ್ಲಿ ಆಧುನಿಕ ನಾಗರೀಕತೆಯ ಪ್ರಭಾವದಿಂದ ಆಹಾರ ಪದ್ಧತಿಯಲ್ಲಿ ತುಸು ಬದಲಾವಣೆ ಆಗಿವೆ, ಆದರೂ ಅವರ ಹಳೆಯ ಅಡುಗೆ ಪದ್ಧತಿಯನ್ನು ಆಧುನಿಕ ಅಡುಗೆ ಪದ್ಧತಿಗಿಂತ ಕಡಿಮೆಯೆಂದು ಭಾವಿಸದೇ ಯಾರೂ ಅವುಗಳನ್ನು ಕೈಬಿಟ್ಟಿಲ್ಲ. ಹಳೆಯ ಅಡುಗೆ ಪದ್ಧತಿ ಹೊಸದರ ಜೊತೆಗೆ ಕೂಡಿಕೊಂಡು ಬಂದರೂ ಹಳೆಯ ಆಹಾರ ಪದ್ಧತಿ ಹೆಚ್ಚು ಪ್ರಚಲಿತವಿದ್ದು ಇಂದಿಗೂ ಇವರು ಸರಳ ಆಹಾರವನ್ನು ತಿನ್ನುತ್ತಾರೆ.

ಹೀಗೆ ನೀಲಗಾರ ಸಮುದಾಯದಲ್ಲಿ ಆಹಾರ ಪದ್ಧತಿಯೂ ವಿಭಿನ್ನವಾಗಿದ್ದು ಆಯಾಯ ಒಕ್ಕಲಿನ ನೀಲಗಾರರು ಸರಳವಾದ ಆಹಾರಗಳನ್ನು ತಿನ್ನುತ್ತಾರೆ. ಎಲ್ಲಾ ಒಕ್ಕಲಿನ ನೀಲಗಾರರು ಮಾಂಸವನ್ನು ತಿನ್ನುತ್ತಾರೆ. ಆದರೆ ಲಿಂಗಾಯಿತ ನೀಲಗಾರರು, ಶೆಟ್ಟರು ಮಾಂಸ ತಿನ್ನುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಇವತ್ತಿನ ಜಾಗತೀಕರಣದ ಸಂದರ್ಭದಲ್ಲಿ ಆಧುನಿಕ ಜಗತ್ತಿಗೆ ಹೊಂದಿಕೊಳ್ಳದೇ ಹಳೆಯ ಆಹಾರ ಪದ್ಧತಿಯನ್ನೇ ನೀಲಗಾರ ಸಮುದಾಯ ರೂಢಿಸಿಕೊಂಡು ಬಂದಿರುವುದನ್ನು ಕಾಣಬಹುದಾಗಿದೆ.

೩: ೨.೫ ಉಡುಗೆ - ತೊಡುಗೆ

ಆದಿಮಾನವ ಹಿಂದೆ ಗಿಡದ ತೊಗಟೆ, ಎಲೆ, ಪ್ರಾಣಿಗಳ ಚರ್ಮವನ್ನು ಬಟ್ಟೆಯನ್ನಾಗಿ ಸಸ್ಯ, ಹೂ, ಕಾಯಿಗಳನ್ನು ಆಭರಣಗಳನ್ನಾಗಿ ಬಳಸಿಕೊಂಡು ತಮ್ಮ ಸೌಂದರ್ಯ ಪ್ರಜ್ಞೆಯನ್ನು ಪ್ರದರ್ಶಿಸಿದ್ದರೆಂದು ತಿಳಿದುಬರುತ್ತದೆ. ಕಾಡು ಮಾನವ ವಿಕಾಸಗೊಳ್ಳುತ್ತಾ, ನಾಡು ಮಾನವನಾದಷ್ಟೇ, ಈ ಕಾಲದಲ್ಲಿ ಅವನ ಸೌಂದರ್ಯ ದೃಷ್ಟಿ ವೃದ್ಧಿಸುತ್ತಾ ಬಂದಂತಿದೆ. ಆದ್ದರಿಂದ ಜನರು ತನ್ನ ಮನೆ ಅಂದವಾಗಿರಬೇಕು ತಾನು ಮಾಡುವ ಊಟ ರುಚಿಕರವಾಗಿರಬೇಕು, ತಾನು ಹಾಕುವ ಉಡುಗೆ ತೊಡುಗೆ ಸುಂದರವಾಗಿರಬೇಕು ಎಂಬ ಇತ್ಯಾದಿ ಸೌಂದರ್ಯಾಕಾಂಕ್ಷೆಗಳು ಆತನಲ್ಲಿ ಮೂಡಿವೆ ಒಂದು ಇಂಗ್ಲೀಷ್ ಗಾದೆಯಂತೆ ''Eat for you dress for others'' ಎಂಬಂತೆ ನಮ್ಮ ಜನರು ತಮ್ಮ ಮನಸ್ಸಿಗೆ ಹಿಡಿಸದಿದ್ದರೂ ಬೇರೆಯವರು ತನ್ನನ್ನು ನೋಡಲು ತಾನು ಅಂದವಾಗಿ ಕಾಣಬೇಕೆಂದು ಜನರ ಇಚ್ಛೆಯಾಗಿದೆ. ಇಂದು ಈ ಅಲಂಕಾರಿಕ ಕಲೆ ಮಾನವನ ಸಹಜ ಪ್ರಕ್ರಿಯೆಯಲ್ಲಿ ಒಂದಾಗಿದೆ.

ಇಲ್ಲಿ ಮುಖ್ಯವಾಗಿ ಮಾನವನಿಗೆ ಗಾಳಿ, ನೀರು, ಆಹಾರ ಅವಶ್ಯಕವಾಗಿದ್ದಂತೆ ಉಡುಗೆಯೂ ಕೂಡ ಅಷ್ಟೇ ಅವಶ್ಯಕ. ಒಬ್ಬ ಮನುಷ್ಯನ ಗುಣ-ನಡತೆಗಳನ್ನು ಅವನು ಧರಿಸಿದ ಉಡುಗೆಗಳಿಂದ ಗುರುತಿಸಬಹುದು. ಉಡುಗೆಗಳು ಅವನ ಸಾಮಾಜಿಕ, ಆರ್ಥಿಕ ಸ್ಥಿತಿಯನ್ನು ಪ್ರತಿನಿಧಿಸುತ್ತವೆ. ಈ ಉಡುಗೆಗಳು ಪ್ರಾದೇಶಿಕವಾಗಿ ವೈವಿಧ್ಯತೆಯನ್ನು ಪಡೆದುಕೊಂಡಿದೆ. ಯಾವುದೇ ಒಬ್ಬ ವ್ಯಕ್ತಿಯು ತೊಡುವ ಬಟ್ಟೆ, ಮಾಡಿಕೊಳ್ಳುವ ಅಲಂಕಾರ, ಹಾಕಿಕೊಳ್ಳುವ ಒಡವೆಗಳು ಅವರ ಸೌಂದರ್ಯ ಪ್ರಜ್ಞೆಯ ಅಭಿವ್ಯಕ್ತಿಗಳಾಗಿವೆ. ಉಡುಗೆಗಳು ಅವರ ಮಾನಸಿಕ ಸಂತೋಷ ಮತ್ತು ಸುಖವನ್ನು ಹೆಚ್ಚಿಸುತ್ತವೆ. ಆದರೂ ''ಸಾಮಾಜಿಕ, ರಾಜಕೀಯ, ಧಾರ್ಮಿಕ ಮೌಲ್ಯಗಳು ಬದಲಾದಂತೆಲ್ಲಾ ಜನರು ಸಾಮಾಜಿಕ ಪರಿವರ್ತನೆಗೆ ಒಳಪಟ್ಟಂತೆಲ್ಲಾ ಪ್ರತಿಯೊಂದು ಸಮೂಹ ತನ್ನ ನೀತಿ ನಿಯಮಗಳಲ್ಲಿ ಬದಲಾಗುತ್ತದೆ,''[೬] ಇದು ಉಡುಗೆಗಳಿಗೂ ಅನ್ವಹಿಸುತ್ತದೆ. ವಿಶೇಷವಾಗಿ ಆಯಾಯ ಜನಾಂಗಗಳು ನಡೆಸುವ ಅವರದೇ ಆದ ಹಬ್ಬ, ಜಾತ್ರೆ, ಹರಕೆ, ವಿವಾಹ ಮೊದಲಾದವುಗಳಲ್ಲಿ ತೊಡುವ ಉಡುಗೆಗಳಲ್ಲಿ ಮಾತ್ರ ವ್ಯತ್ಯಾಸಗಳನ್ನು ಕಾಣಬಹುದಾಗಿದೆ. ಆದರೆ, ಒಂದೇ ಭೌಗೋಳಿಕ ಪರಿಸರದಲ್ಲಿ ನೆಲೆಸಿದ ಜನರು ಆ ಪ್ರದೇಶಕ್ಕೆ ಹೊಂದಿಕೊಳ್ಳುವ ಉಡುಗೆ-ತೊಡುಗೆಗಳನ್ನು ಧರಿಸುತ್ತಾರೆ. ಅದರಂತೆ ನೀಲಗಾರರು ಕೂಡ ದಿನನಿತ್ಯ ಇತರ ಉಡುಗೆ - ತೊಡುಗೆಗಳಿದ್ದು ವಿಶೇಷ ಸಂದರ್ಭದಲ್ಲಿ ಅಂದರೆ ಹಬ್ಬ, ಜಾತ್ರೆ ಸಂದರ್ಭದಲ್ಲಿ ತಮ್ಮದೇ ಆದ ಸಾಂಸ್ಕೃತಿಕ ಅಗತ್ಯಗಳಿಗನುಗುಣವಾಗಿ ಈ ಸ್ಥಳೀಯ ಉಡುಗೆಗಳನ್ನು ತೊಡುತ್ತಾರೆ.

ನೀಲಗಾರರು ಧಾರ್ಮಿಕ ಸಮುದಾಯದ ಚೌಕಟ್ಟಿನಲ್ಲಿ ಸೇರುವುದರಿಂದ ಅವರು ಧಾರ್ಮಿಕ ಆಚರಣೆ ಸಂದರ್ಭದಲ್ಲಿ ಹಾಗೆಯೇ ಭಿಕ್ಷಾಟನೆಗೆ ಹೊರಡುವ ಸಂದರ್ಭದಲ್ಲಿ ಇವರ ಉಡುಗೆ -ತೊಡುಗೆ ವಿಭಿನ್ನವಾಗಿರುತ್ತದೆ. ಇವರು ಮುಖ್ಯವಾಗಿ ಪಶುಪಾಲಕರಾಗಿದ್ದು ಕೃಷಿಯನ್ನೇ ಹೆಚ್ಚು ಅವಲಂಬಿಸಿ ಅವರ ಸಾಂಸ್ಕೃತಿಕ ನಾಯಕ ಮಂಟೇಸ್ವಾಮಿ, ಸಿದ್ದಪ್ಪಾಜಿ ಮುಂತಾದವರ ಕತೆಗಳನ್ನು ಹಾಡುವ ಮೂಲಕ ಜೀವನ ನಡೆಸುತ್ತಿದ್ದರು. ಆದ್ದರಿಂದ ಇವರ ಉಡುಗೆ-ತೊಡುಗೆಗಳಲ್ಲಿ ಬೇರೆ ರೀತಿಯ

ಬದಲಾವಣೆಯನ್ನು ಕಾಣುತ್ತಿದ್ದು ಅವರು ಇವತ್ತಿನ, ಆಧುನಿಕತೆಯ ಪ್ರಭಾವಕ್ಕೆ ಒಳಗಾಗಿದ್ದರೂ ಅವರ ವೇಷಭೂಷಣಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲದೆ, ಮೂಲ ಸ್ವರೂಪವನ್ನೇ ಉಳಿಸಿಕೊಂಡು ಇಂದಿಗೂ ಬಂದಿರುವುದನ್ನು ಕಾಣಬಹುದು.

ಮಂಟೇಸ್ವಾಮಿ ಒಕ್ಕಲಿನ ನೀಲಗಾರರು ಮುಖ್ಯವಾಗಿ ತಲೆಮೇಲೆ ಕೆಂಪು ಪೇಟ, ಮೈಮೇಲೆ ಬಿಳಿ ನಿಲುವಂಗಿ, ಶುಭ್ರವಾದ ಕಚ್ಚೆಪಂಚೆ, ನಿಲುವಂಗಿ ಮೇಲೆ ಕರಿಕೋಟು, ಇಳಿಬಿಟ್ಟ ಶಲ್ಯ, ನಡುವಿಗೆ ವಸ್ತ್ರ, ಕತ್ತಿಗೆ ರುದ್ರಾಕ್ಷಿಸರ, ಕಾವಿ ಜೋಳಿಗೆ ಮುಂತಾದವುಗಳನ್ನು ಧರಿಸಿಕೊಂಡು ಜಾತ್ರೆ ಸಂದರ್ಭದಲ್ಲಿ ಅಥವಾ ವಿಶೇಷ ದಿನಗಳಲ್ಲಿ ಮಂಟೇಸ್ವಾಮಿ ಕಥಾ ಪ್ರಸಂಗವನ್ನು ಹಾಡುತ್ತಾರೆ. ಕಥೆ ಹಾಡುವವರು ಮೂರ ರುದ್ರಾಕ್ಷಿ ಮಣಿಗಳನ್ನು ಹಾಡದ ನೀಲಾಗಾರರು ಒಂಟಿ ರುದ್ರಾಕ್ಷಿಯನ್ನೂ ಧರಿಸುತ್ತಾರೆ. ಅದೇ ರೀತಿ, ಮಾದೇಶ್ವರ ನೀಲಗಾರರು ಬಿಳಿ ಪಂಚೆ, ಬಿಳಿ ಷರಟು, ಕತ್ತಿಗೆ ರುದ್ರಾಕ್ಷಿ, ಹಣೆಯಲ್ಲಿ ಭಸ್ಮ ಧರಿಸಿ ಕಂಕುಳಲ್ಲಿ ಜೋಳಿಗೆ, ಕಾವಿಜೋಳಿಗೆ ನಾಗಬೆತ್ತ, ಕಂಸಾಳೆ ಬಟ್ಟಲು ಇವರ ಉಡುಗೆ-ತೊಡುಗೆಗಳಾಗಿದ್ದು ಸ್ವಲ್ಪ ವ್ಯತ್ಯಾಸದೊಂದಿಗೆ ಮಾದೇಶ್ವರ ಮಂಟೇಸ್ವಾಮಿ ನೀಲಗಾರರು ಒಂದೇ ಬಗೆಯ ವಸ್ತ್ರಗಳನ್ನು ಧರಿಸುತ್ತಾರೆ. ಮುಖ್ಯವಾಗಿ ಇಲ್ಲಿ ಒಂಟಿ ಮಣಿಯನ್ನು ಕತ್ತಿಗೆ ನೆಟ್ಟಗೆ ಹಾಕಿಕೊಂಡರೆ ಮಂಟೇಸ್ವಾಮಿ ನೀಲಗಾರರೆಂತಲೂ ಅದೇ ರೀತಿ ಒಂಟಿ ಮಣಿಯನ್ನು ಕತ್ತಿಗೆ ಅಡ್ಡಡ್ಡ ಹಾಕಿಕೊಂಡರೆ ಮಾದೇಶ್ವರ ನೀಲಗಾರರೆಂದು ಜನರು ಗುರ್ತಿಸುತ್ತಾರೆ.

ಇಲ್ಲಿ ಮಂಟೇಸ್ವಾಮಿ ಗುಡ್ಡಗಳು ಕತ್ತಿಗೆ ಒಂದೇ ಮಣಿಹಾಕಲು ಕಾರಣ, ಮಂಟೇಸ್ವಾಮಿ ಏಕಾಂಗಿ. ಒಬ್ಬನೇ ವ್ಯಕ್ತಿ ಅದೇ ರೀತಿ ಮಾದಪ್ಪ ಏಕಾಂಗಿ ಅವನಿಗೂ ಒಂಟಿ ಮಣಿ. ಅವನೂ ಒಬ್ಬನೇ ವ್ಯಕ್ತಿ ಆದ್ದರಿಂದ ಇವರಿಬ್ಬರ ಸಂಪ್ರದಾಯದವರು ಒಂಟಿ ಮಣಿಯನ್ನು ಬಳಸುತ್ತಾರೆ. ಅದೇ ರೀತಿ, ಕತ್ತಿಗೆ ಮೂರು ಮಣಿಗಳನ್ನು ಹಾಕಿಕೊಂಡರೆ ಶಿವನ ಸ್ವರೂಪನಾದ ಮುಡುಕುತೊರೆ ಮಲ್ಲಪ್ಪನ 'ಪಾರ್ವತಿ ಗುಡ್ಡಗಳು' ಎಂದು ಲೋಕದ ಜನರು ಗುರ್ತಿಸುತ್ತಾರೆ.

ನೀಲಗಾರರು ತಮ್ಮ ತಮ್ಮ ಮನೆಯಲ್ಲಿದ್ದಾಗ ಬಿಡುವಿನ ಸಾಮಾನ್ಯ ಉಡುಪುಗಳನ್ನು ಧರಿಸುತ್ತಾರೆ. ಹಾಗೆಯೇ ಹೆಂಗಸರು ಸಹ ಸಾಮಾನ್ಯವಾದ ಸೀರೆಗಳನ್ನು ಧರಿಸುತ್ತಾರೆ.

ಹೀಗೆ ಮಂಟೇಸ್ವಾಮಿ, ಸಿದ್ದಪ್ಪಾಜಿ ನೀಲಗಾರರು ಧಾರ್ಮಿಕ ಆಚರಣೆಗಳಲ್ಲಿ ಮಾತ್ರ ವಿಶೇಷವಾದ ಉಡುಗೆ-ತೊಡುಗೆಗಳನ್ನು ಧರಿಸುತ್ತಿದ್ದು ಉಳಿದಂತೆ ಇತರ ಜನಾಂಗದವರು ಧರಿಸುವ ಸಾಮಾನ್ಯ ಉಡುಗೆ-ತೊಡುಗೆಗಳನ್ನು ಧರಿಸುತ್ತಾರೆ. ಹಾಗೆಯೇ ಈ ಸಮುದಾಯದ ಹೆಂಗಸರೂ ಕೂಡ ಬಹಳ ಸರಳವಾದ ಸೀರೆ, ಕುಪ್ಪಸವನ್ನು ಬಳಸುತ್ತಿದ್ದು ಇವತ್ತಿನ ಜಾಗತೀಕರಣ ಸಂದರ್ಭದಲ್ಲಿ ಆಧುನಿಕತೆಯ ಬದಲಾವಣೆಯ ಪ್ರಭಾವವು ಇವರ ಮೇಲೆ ಕಿಂಚಿತ್ತೂ ಬೀಳದೆ ಹಿಂದಿನ ಸರಳ ಉಡುಗೆ-ತೊಡುಗೆಗಳನ್ನೇ ಇಂದಿಗೂ ಬಳಸುತ್ತಿರುವುದನ್ನು ಕಾಣಬಹುದಾಗಿದೆ.

೩ : ೨.೬ ನೀಲಗಾರರ ವೈದ್ಯ ಪದ್ಧತಿ

ಮಾನವ ಇತರೇ ಪ್ರಾಣಿಗಳಿಗಿಂತ ತುಂಬಾ ಮುಂದುವರೆದವನಾಗಿದ್ದಾನೆ. ಅವನ ಯೋಚನಾಕ್ರಮ ಇತರ ಪ್ರಾಣಿಗಳಿಗಿಂತ ಸಾವಿರ ಪಾಲು ಹೆಚ್ಚಿನದು. ಇವನ ನಿರಂತರ ಹುಡುಕಾಟ ಜೀವನದ ಕುರಿತು ಇವನಿಗಿರುವ ಕಾಳಜಿ. ''ಜನಪದವೈದ್ಯ ಜನಪದ

ಸಂಸ್ಕೃತಿಯ ಒಂದು ಭಾಗ ಅದು ದೇಶೀಯವಾದುದು, ಸಾಂಪ್ರದಾಯಿಕವಾದುದು ಮುಖ್ಯವಾಗಿ ಪ್ರಾದೇಶಿಕವಾದುದು ಆಗಿದೆ. ಈಗ ಜಗತ್ತಿನಾದ್ಯಂತ ಬಳಕೆಯಲ್ಲಿರುವ ಅಲೋಪತಿ, ಆಯುರ್ವೇದ, ಯುನಾನಿ, ಹೋಮಿಯೋಪತಿ ಈ ಎಲ್ಲಾ ವೈದ್ಯ ಪದ್ಧತಿಗಳಿಗೂ ಜನಪದ ವೈದ್ಯಪದ್ಧತಿಯೇ ಮೂಲ''[೮]

ಮನುಷ್ಯನಿಗೆ ಕಾಡುವ ರೋಗಗಳಿಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನದಲ್ಲಿ ಅವನು ಮೊದಲು ಪ್ರಾಕೃತಿಕ ಪರಿಸರಕ್ಕೆ ಪ್ರತಿಕ್ರಿಯೆಸಿದ. ''ಪಶ್ಚಿಮದವರು ನಮ್ಮ ದೇಶಕ್ಕೆ ಕಾಲಿಡುವುದಕ್ಕೆ ಮುನ್ನ ಜನಪದ ವೈದ್ಯವೇ ಶಾರೀರಕ ರಕ್ಷಣೆಯಾಗಿತ್ತು. ಆದಿಮಾನವನ ಕಾಲದಲ್ಲಿ ಅಥವಾ ನಮ್ಮ ಪೂರ್ವಿಕರ ಕಾಲದಲ್ಲಿ ಅವರ ಬದುಕು ಪೂರ್ಣವಾಗಿ ನೈಸರ್ಗಿಕವಾಗಿದುದ್ದರಿಂದ ಅವರ ಸಂಶೋಧನೆಗಳೆಲ್ಲಾ ಪ್ರಾಕೃತಿಕ ಜನ್ಯವಾದವುಗಳು. ತಮ್ಮ ರೋಗಗಳಿಗೆ ಸಸ್ಯ, ಪ್ರಾಣಿ, ಖನಿಜ ರೂಪದ ವಸ್ತುಗಳಲ್ಲಿ ಪರಿಹಾರ ಕಂಡುಕೊಂಡರು. ಹೀಗಾಗಿ ಪ್ರಕೃತಿಯೇ ಅವರ ಪಾಲಿಗೆ ಸಂಜೀವಿನಿ ಆಯಿತು.''[೯]

ಶಿಷ್ಟ- ಪ್ರೌಢ ಆಧುನಿಕ, ವೈಜ್ಞಾನಿಕ ಎಂದೆಲ್ಲಾ ಕರೆಯಲಾಗುವ ಬಹಳಷ್ಟು ವಿಷಯ ವಸ್ತುಗಳಿಗೆ ಜಾನಪದವೇ ಮೂಲವಾಗಿರುವಂತೆ ಈ ಎಲ್ಲಾ ವೈದ್ಯಪದ್ಧತಿಗಳಿಗೂ ಸಹ ಹಳ್ಳಿಯ ವೈದ್ಯ, ನಾಟಿವೈದ್ಯ, ನಾಡವೈದ್ಯ, ಮನೆಮದ್ದು, ಕೈಔಷಧಿ, ಹಸಿರು ಔಷಧಿ ಮುಂತಾಗಿ ಕರೆಯುವ ಜನಪದ ವೈದ್ಯವೇ ಮಾತೃಸ್ಥಾನದಲ್ಲಿದೆ. ಜನಪದವೈದ್ಯ ಆಯಾ ಪ್ರದೇಶದಲ್ಲಿ ದೊರಕುವ ಸಸ್ಯ, ಪ್ರಾಣಿ, ಖನಿಜ ಮುಂತಾದವುಗಳನ್ನು ಅವಲಂಬಿಸಿರುತ್ತದೆ. ಶಿಷ್ಟ ವೈದ್ಯರ ಪ್ರಭಾವದಿಂದಾಗಿ ಜನಪದ ವೈದ್ಯ ತನ್ನ ಅಸ್ತಿತ್ವವನ್ನು ಕಳೆದುಕೊಂಡಿದ್ದರೂ ಇಂದಿಗೂ ಹಳ್ಳಿಗಾಡಿನಲ್ಲಿ ಜನಪದ ವೈದ್ಯವೇ ಇವತ್ತಿಗೂ ಪ್ರಚಲಿತದಲ್ಲಿದೆ.

ಹಾಗಾಗಿ ಪ್ರಪಂಚದ ಇಂದಿನ ವೈದ್ಯಪದ್ಧತಿಗಳಿಗೆ ಜನಪದ ವೈದ್ಯವೇ ತಾಯಿಬೇರಾಗಿದೆ. ಈ ಜನಪದ ವೈದ್ಯವು ಆಯಾ ಪರಿಸರ, ಗುಂಪು, ಬುಡಕಟ್ಟು, ಸಮುದಾಯಗಳಲ್ಲಿ ಭಿನ್ನ ಭಿನ್ನವಾದ ರೀತಿಯಲ್ಲಿಯೇ ಬಳಕೆಗೊಳ್ಳುತ್ತವೆ. ಈ ಎಲ್ಲಾ ಸಮುದಾಯ ಗುಂಪುಗಳ ವೈದ್ಯ ಪದ್ಧತಿಯ ಮೂಲ ಉದ್ದೇಶ ಮಾತ್ರ ಅದರೊಳಗಿನ ರೋಗ ರುಜಿನಗಳನ್ನು ಹೊಡೆದೋಡಿಸುವುದಾಗಿದೆ. ಮೊದಲೇ ತಿಳಿಸಿದಂತೆ ಜನಪದವೈದ್ಯದಲ್ಲಿ ಮೂರು ಗುಂಪುಗಳನ್ನು ಸ್ಥೂಲವಾಗಿ ಗುರುತಿಸಬಹುದು. ಸಸ್ಯ ಜನಪದ ವೈದ್ಯ, ಖನಿಜ ಜನಪದವೈದ್ಯ ಮತ್ತು ಮಂತ್ರಗಾರಿಕೆ. ಜನಪದವೈದ್ಯದಲ್ಲಿ ಮನುಷ್ಯ ವೈದ್ಯ ಮತ್ತು ಪಶುವೈದ್ಯ ಜನಪದ ವೈದ್ಯವೆಂದೂ ವಿಂಗಡಿಸಬಹುದು. ರ್‍ಯಾಡ್‌ಕ್ಲಿಪ್, ಬ್ರೌನ್, ಡರ್‌ಕ್ಹಿಮ್, ರೂತ್ ಬೆನಡಿಕ್ಟ್, ಲೆವಿಸ್ಟ್ರಾಸ್ ಅಭಿಪ್ರಾಯಗಳ ಆಧಾರದ ಮೇಲೆ ಆರ್.ಎಸ್.ಬಾಗ್ಸ್‌ರವರು ಜನಪದ ವೈದ್ಯಕೀಯ ಕ್ಷೇತ್ರದಲ್ಲಿ ಅಧ್ಯಯನಗಳು ಸಾಧ್ಯವೆಂಬುದನ್ನು ಅವರು ನೀಡಿರುವ ಜಾನಪದ ಕ್ಷೇತ್ರದ ವೈಜ್ಞಾನಿಕ ವರ್ಗೀಕರಣವೇ ಸಾಕ್ಷಿ.

ಪ್ರಸ್ತುತ ಇಲ್ಲಿ ನೀಲಗಾರರ ವೈದ್ಯ ಪದ್ಧತಿ ಕುರಿತು ಗಮನಹರಿಸುವ ಒಂದು ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಇತರ ಜನಾಂಗಗಳಂತೆಯೇ ನೀಲಗಾರರು ಕೂಡ ಕಾಯಿಲೆ ಬಂದಾಗ ಹರಕೆ ಸಲ್ಲಿಸುವುದು, ದೇವರಿಗೆ ಗುಡ್ಡನನ್ನು ಬಿಡುವುದು ಕಂಡು ಬರುತ್ತದೆ. ಕೆಲವು ರೋಗಗಳಿಗೆ ತಮ್ಮ ಸುತ್ತಮುತ್ತಲಿನ ಸಸ್ಯ, ಪ್ರಾಣಿ, ಖನಿಜಗಳಿಂದ ಮದ್ದನ್ನು ತಯಾರಿಸುವ ಪರಿಣಿತ ಜನಪದ ವೈದ್ಯನಿಂದ ಔಷಧಿ ಪಡೆದುಕೊಳ್ಳುತ್ತಾರೆ. ಇವರ ವೈದ್ಯವಿಧಾನವನ್ನು ''ಮಾನವ ವೈದ್ಯ'' ಮತ್ತು ''ಪಶು

ವೈದ್ಯ''ವೆಂದು ಎರಡು ಗುಂಪುಗಳಾಗಿ ವಿಂಗಡಿಸಿಕೊಳ್ಳಬಹುದು. ಇವುಗಳನ್ನು ನೈಸರ್ಗಿಕ ಚಿಕಿತ್ಸಾ ವಿಧಾನದಿಂದಲೂ ನಂಬಿಕೆ-ಮಾಟ-ಮಂತ್ರದ ಮೂಲಕ ಮದ್ದು, ಭಸ್ಮಗಳನ್ನು ಬಳಕೆಗೆ ತಂದಿದ್ದಾರೆ. ಮನುಷ್ಯರಿಗೆ ಕೊಡುವ ವೈದ್ಯದಲ್ಲಿ ಬಾಣಂತಿಯರಿಗೆ ಮಕ್ಕಳಿಗೆ ವಿಶೇಷವಾದ ಮದ್ದುಗಳನ್ನು ಕೊಡುತ್ತಾರೆ. ತೀರ ಗುಣಪಡಿಸಲಾಗದ ರೋಗ ರುಜಿನಗಳಿಗೆ ಕೊನೆಗೆ ಆಸ್ಪತ್ರೆಯನ್ನೇ (ಶಿಷ್ಟವೈದ್ಯ) ಅವಲಂಬಿಸುತ್ತಾರೆ.

ರೋಗಗಳು ಕಾಲಕ್ರಮೇಣ ಹವಾಮಾನಕ್ಕನುಗುಣವಾಗಿ ರೂಪಾಂತರಗಳನ್ನು ಹೊಂದಿ ವಿವಿಧ ರೂಪ ಮತ್ತು ಲಕ್ಷಣಗಳನ್ನು ಹೊಂದುತ್ತಾ ಪ್ರಾದೇಶಿಕವಾಗಿ ವೈವಿದ್ಯತೆ ಮತ್ತು ವೈಚಿತ್ರತೆಯನ್ನುಂಟು ಮಾಡುವುದು ಸೋಜಿಗದ ಸಂಗತಿಯಾಗಿರುವುದು. ಈಜಿಪ್ಟ್ ಮತ್ತು ಇತರ ಸಂಸ್ಕೃತಿಯಲ್ಲಿ ಕಂಡು ಬಂದ ಪ್ರಾಚೀನ ಅವಶೇಷಗಳು ಪ್ರಾಣಿವರ್ಗ ಮತ್ತು ಮಾನವ ವರ್ಗಗಳನ್ನು ತಿಳಿಸುವುದಲ್ಲದೆ ಇತ್ತೀಚೆಗೆ ಭಯಂಕರ ಮಾರಿಹುಣ್ಣುಯೆಂದೇ ಪ್ರಸಿದ್ಧವಾಗಿರುವ ಕ್ಯಾನ್ಸರ್ ಮತ್ತು ಇತರ ಮಾರಕ ರೋಗಗಳು ಅಂದು ಪ್ರಾಚೀನ ಮಾನವನನ್ನು ಕಾಡಿರಲಿಕ್ಕೆ ಸಾಕು ಎಂದು ತಿಳಿಸುತ್ತದೆ.

ನೀಲಗಾರರಲ್ಲಿ ಕೆಲವು ರೋಗಗಳು ಪ್ರಕೃತಿಯಲ್ಲಿ ಸಹಜವಾಗಿ ಬರುವ ರೋಗಗಳಾಗಿ ಕಂಡುಬಂದರೆ, ಇನ್ನೂ ಕೆಲವು ರೋಗಗಳು ತಮ್ಮ ಸಮುದಾಯದ ದೈವಗಳ ಸಾಮೂಹಿಕ ತಪ್ಪಿನಿಂದ ಬಂದ ಪಿಡುಗೆಂದೇ ನೀಲಗಾರರು ಭಾವಿಸಲಾಗುತ್ತದೆ.

ಇಲ್ಲಿ ಮುಖ್ಯವಾಗಿ ಆ ವ್ಯಕ್ತಿಗೆ ಬಂದ ರೋಗ ಯಾವುದು? ಆ ರೋಗಕ್ಕೆ ಯಾವುದು ತಕ್ಕ ಔಷಧಿ ಮಾಡಲು ಬರುವ ಸಸ್ಯ ಎಂದು ಗುರುತಿಸುವುದಷ್ಟೇ ಮನುಷ್ಯನ ಕೆಲಸ. ಮನುಷ್ಯನು ಎಲ್ಲಿಯವರೆಗೆ ಪರಿಶುದ್ಧನು ಆತ್ಮಶುದ್ಧಿಯುಳ್ಳವನಾಗಿರುತ್ತಾನೋ ಅಲ್ಲಿಯವರೆಗೂ ಆ ಸಸ್ಯಗಳ ಗುಣಧರ್ಮಗಳನ್ನು ತಿಳಿದುಕೊಳ್ಳುವ ಔಷಧಿ ಮಾಡುವ ಶಕ್ತಿಯನ್ನು ಗಳಿಸಿಕೊಂಡಿರುತ್ತಾನೆ. ಪ್ರಾಮಾಣೀಕತೆಗೆ ಅವನು ಎಂದು ಭಿನ್ನವಾಗಿ ನಡೆದುಕೊಳ್ಳುತ್ತಾನೋ ಅಂದಿಗೆ ಅವನ ಔಷಧಿಗೆ ಗುಣಪಡಿಸುವ ಶಕ್ತಿಯು ನಾಶಗೊಳ್ಳುತ್ತದೆ. ಹಣ ಅಂತಸ್ತು ಇವು ಯಾವುಗಳಿಗೂ ತನ್ನನ್ನು ಒಡ್ಡಿಕೊಳ್ಳದೆ ಇರವಂಥವನಿಗೆ ಮಾತ್ರ ಔಷಧಿ ಕೊಡುವ ಗುಣಪಡಿಸುವ ಸಾಮರ್ಥ್ಯ ಇರುತ್ತದೆ ಎಂಬುದು ನಂಬಿಕೆ.

ನೀಲಗಾರರಲ್ಲಿ ಸಣ್ಣ ಪುಟ್ಟ ರೋಗಗಳಿಗೆ ಔಷಧಿ ಮಾಡುವ ಸಾಮಾನ್ಯವಾದ ಗಿಡ ಸಸ್ಯಗಳ ಪರಿಚಯ ಸಹಜವಾಗಿ ಎಲ್ಲಾ ನೀಲಗಾರರಿಗೂ ತಿಳಿದಿರುತ್ತದೆ. ಆದರೆ ಒಂದೇ ರೋಗಕ್ಕೆ ಒಬ್ಬ ನೀಲಗಾರನು ಒಂದು ಸಸ್ಯದಲ್ಲಿ ಔಷಧಿ ತಯಾರಿಸಿಕೊಟ್ಟರೆ, ಇನ್ನೊಬ್ಬ ನೀಲಗಾರ ಅದೇ ರೋಗಕ್ಕೆ ಪರ್ಯಾಯವಾದ ಇನ್ನೊಂದು ಸಸ್ಯದ ಔಷಧಿಯನ್ನು ಮಾಡಿಕೊಡಬಹುದು. ದುಷ್ಟ ಶಕ್ತಿಗಳಿಂದವುಂಟಾಗುವ ರೋಗಗಳಿಗೆ ವೈದ್ಯ ಮಾಡುವ ಕಾರ್ಯ ಕೆಲವೇ ಕೆಲವು ಹಿರಿಯ ನೀಲಗಾರರ ಬಳುವಳಿಯಾಗಿರುತ್ತದೆ.

ನೀಲಗಾರರಲ್ಲಿ ರೋಗ ಲಕ್ಷಣಗಳನ್ನು ತಿಳಿಯಲು ದೈಹಿಕ ಲಕ್ಷಣಗಳನ್ನು ಅವಲೋಕಿಸುವುದುಂಟು. ಕೆಲವರು ನಾಡಿ ಮಿಡಿತವನ್ನು ನೋಡುವುದುಂಟು. ಹಳದಿ ಬಣ್ಣದ ಮೂತ್ರ ಬಂದರೆ ಕಣ್ಣುಗಳು ಹಳದಿ ಬಣ್ಣಕ್ಕೆ ತಿರುಗಿದ್ದಲ್ಲಿ ಅಂಥವರಿಗೆ ಕಾಮಲೆರೋಗ ಅಥವಾ ಹಸಿರು ರೋಗವೆಂದು ಗುರುತಿಸಲಾಗುತ್ತದೆ. ಅದೇ ರೀತಿ ಈ ರೋಗವನ್ನು ಪತ್ತೆ ಹಚ್ಚಲು ಒಕ್ಕಲಿಗ

ಜನಾಂಗದ ನೀಲಗಾರರು ಒಂದು ವಿಧಾನವನ್ನು ಅನುಸರಿಸುತ್ತಾರೆ. ಅಂದರೆ ಮುಂಜಾನೆ ಎದ್ದ ತಕ್ಷಣ ಯಾವುದೇ ಊಟ, ತಿಂಡಿ, ನೀರು ಸೇವಿಸದೆ ನುಗ್ಗೆಸೊಪ್ಪಿನ ರಸವನ್ನು ಬಲಗೈ ಅಂಗೈಗೆ ಆ ರಸವನ್ನು ಹಾಕಿಕೊಂಡು ತಕ್ಷಣ ಆ ರಸ ಹೆಪ್ಪುಗಟ್ಟಿದರೆ ಈ ಕಾಯಿಲೆ ಇದೆ ಎಂದು ಹೆಪ್ಪುಗಟ್ಟದಿದ್ದರೆ ಇಲ್ಲವೆಂದು ಪರೀಕ್ಷಿಸುವುದು ಇವತ್ತಿಗೂ ಇವರಲ್ಲಿ ರೂಢಿಗತವಾಗಿದೆ.

ಮನುಷ್ಯನು ಒಂದು ಕಾಲಕ್ಕೆ ಕಾಡಿನಲ್ಲಿಯೇ ಜೀವಿಸುತ್ತಿದ್ದು, ಇಂದು ಕಾಡಿನಿಂದ ದೂರವಾದರೂ ಕಾಡಿನಲ್ಲಿ ಬೆಳೆಯುವ ಸಸ್ಯಗಳ ಕುರಿತು ಆಳವಾದ ತಿಳುವಳಿಕೆಯುಳ್ಳವನಾಗಿದ್ದಾನೆ. ಹಾಗಾಗಿ ಸಸ್ಯಗಳ ಮೂಲಕ ವೈದ್ಯಪದ್ಧತಿಯನ್ನು ಇವರು ರೂಢಿಸಿಕೊಂಡಿದ್ದಾರೆ. ನಂತರ ನೀಲಗಾರರಲ್ಲಿ ಯಾರಾದರೂ ಹೆದರಿದರೆ ಬೆಚ್ಚಿದರೆ ಈ ಕಾಯಿಲೆಗೆ ಹಿರಿಯ ನೀಲಗಾರನಿಂದ ನಿಂಬೆಹಣ್ಣು ಮಂತ್ರಿಸಿ ಕಪ್ಪುದೂಳ್ತ ಕೊಡುತ್ತಾರೆ. ಇದರಿಂದ ಈ ರೋಗ ಪರಿಹಾರವಾಗುತ್ತದೆಂಬುದು ಇವರ ನಂಬಿಕೆ. ಇಲ್ಲಿ ಮುಖ್ಯವಾಗಿ ನೀಲಗಾರರು ಒಂದು ಧಾರ್ಮಿಕ ಸಮುದಾಯಕ್ಕೆ ಸೇರುವ ಹಿನ್ನೆಲೆಯಲ್ಲಿ ಇವರು ಹೆಚ್ಚು ತಮ್ಮ ಒಕ್ಕಲಿನ ದೈವಗಳನ್ನು ಹೆಚ್ಚಾಗಿ ನಂಬುತ್ತಾರೆ. ಯಾರಿಗಾದರೂ ಯಾವುದೇ ಕಷ್ಟಬರಲಿ ಅಥವಾ ರೋಗ ರುಜಿನಗಳು ಬರಲಿ ಮೊದಲು ಮೊರೆ ಹೋಗುವುದೇ ಮಂಟೇಸ್ವಾಮಿ, ಸಿದ್ದಪ್ಪಾಜಿ, ರಾಚಪ್ಪಾಜಿ ಮುಂತಾದ ದೈವಗಳಿಗೆ ಹರಕೆ ಕಟ್ಟುತ್ತಾರೆ ಅಥವಾ ಆ ದೈವಗಳ ಮಟ್ಟಿಕಪ್ಪು ದೂಳ್ತವನ್ನು ತುಂಬಾ ಶುಚಿತ್ವದಿಂದ ವಾಮ ನಿಯಮವಾಗಿ ಇಟ್ಟು ಯಾವುದೇ ಕಾಯಿಲೆ ಬಂದಾಗ ಅದನ್ನು ಹಚ್ಚುತ್ತಾರೆ. ನಂತರ ಆ ಕಾಯಿಲೆ ನಿಯಂತ್ರಣಕ್ಕೆ ಬರುತ್ತದೆ ಎಂಬುದು ಇವರ ನಂಬಿಕೆ. ಇದನ್ನು ಇವತ್ತಿಗೂ ನೀಲಗಾರ ಸಮುದಾಯದಲ್ಲಿ ಕಾಣಬಹುದು.

ಮಕ್ಕಳು ಹೆಚ್ಚು ಹಟ ಮಾಡುತ್ತಿದ್ದರೆ ಒಣ ಮೆಣಸಿನಕಾಯಿ ಉಪ್ಪು ನೀವಾಳಿಸಿ ಅದನ್ನು ಸುಡುವ ವಾಡಿಕೆಯುಂಟು. ಸುಟ್ಟಾಗ ಹೆಚ್ಚು ಘಾಟಾದರೆ ಉಪ್ಪು ಹೆಚ್ಚು ಚಟಪಟ ಎಂದರೆ ಮಗುವಿಗೆ ಆದ ದೃಷ್ಟಿ ನಿವಾರಣೆಯಾಯಿತೆಂದು ಭಾವಿಸಲಾಗುತ್ತದೆ. ಈ ವೈದ್ಯರ ನಂಬಿಕೆ ಆಚರಣೆಗಳು ಬೇರೆ ಸಮುದಾಯಗಳಿಗಿಂತ ತುಂಬಾ ವಿಶಿಷ್ಟವಾಗಿದ್ದು ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ತಿಳಿಸಲಾಗಿದೆ. ಈ ವೈದ್ಯರ ನಂಬಿಕೆ ಆಚರಣೆಗಳು ಹೊಸ ವೈದ್ಯಕೀಯ ಜಗತ್ತಿಗೆ ಅಪಚರಿತವಾಗಿ ಕಂಡರೂ ಅವುಗಳು ಆ ಸಮುದಾಯದ ಸಾಂಸ್ಕೃತಿಕ ತುಣುಕುಗಳಾಗಿ ಇವತ್ತಿಗೂ ಉಳಿದಿವೆ. ಹಾಗೆಯೇ ಮಕ್ಕಳಿಗೆ ಶೀತ, ಕೆಮ್ಮು, ವಾಂತಿ, ಹೊಟ್ಟೆಉಬ್ಬಸ, ಜ್ವರ, ಅಜೀರ್ಣ ಮುಂತಾದವಗಳಿಗೆ ವೀಳ್ಯೆದೆಲೆಯ ಜೊತೆ ಜೇನುತುಪ್ಪ ಮತ್ತು ಶುಂಠಿ ರಸವನ್ನು ಕೊಡುತ್ತಾರೆ. ತುಳಸೀ ರಸದೊಂದಿಗೆ ಶುಂಠಿಯನ್ನು ಸೇರಿಸಿದ ಔಷಧಿ ಹೊಟ್ಟೆನೋವಿಗೆ ಬಳಸುತ್ತಾರೆ. ಅಜೀರ್ಣ ಹೋಗಲಾಡಿಸಲು ಶುಂಠಿ, ಕಾಳುಮೆಣಸಿನ ಕಷಾಯ, ಈರುಳ್ಳಿ, ಬೆಳ್ಳುಳ್ಳಿ ಹಸಿಯಾಗಿ ತಿನ್ನುವುದರ ಮೂಲಕ ಗುಣಪಡಿಸಿಕೊಳ್ಳುತ್ತಾರೆ. ಜ್ವರ ತಡೆಗಟ್ಟಲು ಶುಂಠಿ ಚಕ್ಕೆ ಒಂದು ಜಾತಿಯ ಬೇರು ಗುದ್ದಿ ಚೆನ್ನಾಗಿ ಪುಡಿಮಾಡಿ ನೀರಿಗೆ ಹಾಕಿ ಚೆನ್ನಾಗಿ ಕುದಿಸಿ ಕುಡಿಸುತ್ತಾರೆ.

ನೀಲಗಾರರ ಸಸ್ಯ ಔಷಧಿಗಳಲ್ಲಿ ಕೆಲವಂತೂ ಹೊಸ ವೈದ್ಯಕೀಯ ಪದ್ಧತಿಗೆ ಸವಾಲೆನ್ನುವಂತೆ ನಿರ್ವಹಿಸುವುದು ಕಂಡು ಬರುತ್ತದೆ. ಮುಳ್ಳು ನೆಟ್ಟಗಾಯಕ್ಕೆ ಉತ್ತರಾಣಿ ಸೊಪ್ಪನ್ನು ಹಚ್ಚಿದಲ್ಲಿ ಬೆಳಗಾಗುವುದರೊಳಗೆ ರೋಗಿಯ ಗಾಯ

ವಾಸಿಯಾಗುತ್ತದೆ. ಒಳಗೆ ಒಸರು (ಕೀವು) ಇದ್ದ ಪಕ್ಷದಲ್ಲಿ ಎರಡು ದಿನದೊಳಗೆ ಆ ಒಸರು ಹೊರಗೆ ಬಂದು ಗಾಯ ಮಾಯವಾಗುತ್ತದೆ. ಇದೇ ರೀತಿ ಇನ್ನೂ ಹಲವಾರು ಸಸ್ಯ ಔಷಧಿಗಳಿಂದ ರೋಗ ರುಜಿನಗಳನ್ನು ಇವರು ಗುಣಪಡಿಸಿಕೊಳ್ಳುವುದನ್ನು ಕಾಣಬಹುದು.

ಪ್ರಾಣಿ ವೈದ್ಯ

ಮನುಷ್ಯ ತನ್ನೊಳಗಿನ ರೋಗರುಜಿನಗಳನ್ನು ಪತ್ತೆ ಹಚ್ಚಿ ಅವುಗಳಿಗೆ ನಿವಾರಣೆಗಳನ್ನು ಕಂಡುಕೊಂಡಂತೆ ತನ್ನೊಂದಿಗೆ ಸಹ ಜೀವನ ನಡೆಸುವ, ತನ್ನ ಬದುಕಿಗೆ ಒಂದು ರೀತಿಯಲ್ಲಿ ಸಹಾಯಕ ಆಧಾರ ಸ್ತಂಭಗಳಂತಿರುವ ತನ್ನ ಸಾಕುಪ್ರಾಣಿಗಳನ್ನು ಕುರಿತು ಮಾನವನಿಗೆ ಕಾಳಜಿ ಹೆಚ್ಚು. ಮನುಷ್ಯನಿಗೆ ಮಾತನಾಡುವ ಶಕ್ತಿ ಇದೆ. ತನ್ನ ದೇಹದೊಳಗೆ ನಡೆಯುವ ವ್ಯತ್ಯಾಸಗಳನ್ನು (ರೋಗಗಳನ್ನು) ಕುರಿತು ಬಾಯಿಬಿಟ್ಟು ಹೇಳಬಲ್ಲ ಆದರೆ ಆತನ ಒಡನಾಡಿ ಸಾಕು ಪ್ರಾಣಿಗಳಿಗೆ ಮಾತನಾಡಲು ಬಾಯಿಯಿಲ್ಲ. ಅವುಗಳಿಗೆ ಬರುವ ರೋಗಗಳನ್ನು ವೈದ್ಯರು ಪ್ರಾಣಿಗಳ ಬಾಹ್ಯಚರ್ಯೆಯನ್ನು ಗಮನಿಸಿ ಅದಕ್ಕೆ ಬಂದ ರೋಗ ಎಂತಹುದು ಎಂದು ಗುರುತಿಸಬೇಕಾಗುತ್ತದೆ. ಹೀಗಾಗಿ ಮನುಷ್ಯ ವೈದ್ಯಕ್ಕಿಂತ ಪ್ರಾಣಿ ವೈದ್ಯ ಹೆಚ್ಚು ಸೂಕ್ಷ್ಮವೂ, ಸಂವೇದನಶೀಲವೂ ಆಗಿರುತ್ತದೆ. ಪ್ರಾಣಿವೈದ್ಯ ನೆನ್ನೆ ಮೊನ್ನೆಯದಲ್ಲ ಅದಕ್ಕೆ ಅವರದೇ ಆದ ಸುದೀರ್ಘ ಇತಿಹಾಸ ಮತ್ತು ಪರಂಪರೆ ಇದೆ. ಅಲ್ಲದೆ ಇತರ ಜಾನಪದ ರೂಪಗಳಂತೆ ಪ್ರಾಣಿವೈದ್ಯರ ಉಗಮ ವಿಕಾಸಗಳು-ಸ್ವರೂಪ ಲಕ್ಷಣಗಳು ಮತ್ತು ತಂತ್ರವಿಧಾನಗಳು ಪ್ರಪಂಚದಾದ್ಯಂತ ಒಂದೇ ಬಗೆಯಾಗಿವೆ.

ಮುಖ್ಯವಾಗಿ ಯಾವುದೇ ಮನುಷ್ಯನಿಗಾಗಲಿ ಅಥವಾ ಪ್ರಾಣಿಗಳಿಗಾಗಲಿ ಆಹಾರ ಮೊದಲು ಬೇಕೆ ಬೇಕು. ಇದರ ಹಸಿವು ಎಂಬ ರೋಗ ನಿವಾರಿಸಿಕೊಳ್ಳಲು ಪ್ರಾಣಿಗಳು ತಮಗೆ ತಿಳಿದ ನೂರಾರು ಬಗೆಯ ಸೊಪ್ಪು, ಸೆದೆ, ಹಣ್ಣು, ಹಂಪಲು, ಗೆಡ್ಡೆ, ಗೆಣಸು ಮಾಂಸ ಮಡ್ಡಿಗಳನ್ನು ತಿಂದಿರಬೇಕು. ಪ್ರಾಣಿಗಳ ಜೀವನ ವಿಧಾನ ಅವುಗಳ ಆಹಾರದ ಆಯ್ಕೆ ಮುಂತಾದವುಗಳನ್ನು ಗಮನಿಸುತ್ತಾ ಬಂದ ಮಾನವನು ಅವುಗಳಿಗೆ ಬರುವ ರೋಗ, ರೋಗಕ್ಕೆ ಕೊಡುವ ಚಿಕಿತ್ಸೆಗಳ ಕುರಿತು ನಿಸರ್ಗದಲ್ಲಿ ತನಗೆ ದೊರೆತ ಅನುಭವದ ಮೂಲಕ ಗುರುತಿಸಿಕೊಂಡಿರಬೇಕೇನೋ?

ಉದಾ : ನಾಯಿ ಬೆಕ್ಕುಗಳು ತಮಗೆ ತಿಂದ ಆಹಾರ ಜೀರ್ಣವಾಗದಿದ್ದಾಗ ಇಬ್ಬನಿಯಿಂದ ಕೂಡಿದ ಗರಿಕೆ ಹುಲ್ಲನ್ನು ತಿಂದು ವಾಂತಿ ಮಾಡಿಕೊಳ್ಳುತ್ತವೆ. ಅದೇ ರೀತಿ ದನಕ್ಕೆ ಗಾಯವಾದರೆ ನಾಲಿಗೆಯಿಂದ ನೆಕ್ಕಿ ಗಾಯವನ್ನು ಗುಣಪಡಿಸಿಕೊಳ್ಳುತ್ತವೆ. ಯಾವುದಾದರೂ ಹಕ್ಕಿಯೊಂದಕ್ಕೆ ಕಾಲು ಮುರಿದರೆ ಅದು ತನ್ನ ಮುರಿದ ಕಾಲಿಗೆ ಒಂದು ರೀತಿಯ ಮಣ್ಣು ಲೇಪಿಸಿಕೊಂಡು ಕಾಲಿಗೆ ಕಟ್ಟನ್ನು ಹಾಕಿಕೊಳ್ಳುತ್ತದೆ. ಇವೇ ಮುಂತಾದ ಪ್ರಾಣಿಗಳು ತಮಗೆ ತಾವೇ ಸ್ವಯಂ ವೈದ್ಯ ಮಾಡಿಕೊಳ್ಳುವ ಕ್ರಮವನ್ನು ಗಮನಿಸಿದರೆ ಪ್ರಾಣಿಗಳ ವೈದ್ಯ ಪರಂಪರೆ ಮತ್ತು ಪ್ರಾಚೀನತೆಯ ಅರಿವು ನಮಗೆ ದೊರೆಯುತ್ತದೆ.

ಪ್ರಕೃತಿಯ ಸಹಜ ಪ್ರೇರಣೆಯಿಂದ ಅನಿವಾರ್ಯವಾಗಿ ಪ್ರಾಣಿವೈದ್ಯ ರೂಪುಗೊಂಡದ್ದಾಗಿದೆ. ''ಮಾನವ ತನ್ನನ್ನು ರಕ್ಷಿಸಿ. ಪೋಷಿಸಿಕೊಳ್ಳುವ ಜೊತೆಗೆ ತನ್ನ ಪರಿಸರವನ್ನು ಸಂರಕ್ಷಿಸಿಕೊಳ್ಳುವ ಪ್ರವೃತ್ತಿಯನ್ನು ಹೊಂದಿದ ಪರಿಣಾಮವಿದು. ತನ್ನ

ಯೋಗಕ್ಷೇಮದೊಡನೆ ಸಾಕು ಪ್ರಾಣಿಗಳ ಆರೋಗ್ಯ ಮುಖ್ಯವೆಂದು ಕೃಷಿಕ ಗಮನದಲ್ಲಿಟ್ಟುಕೊಂಡಿದ್ದರಿಂದ ಪ್ರಾಣಿವೈದ್ಯ ಹೆಚ್ಚು ಪ್ರಾಮುಖ್ಯತೆ ಪಡೆದಿದೆ.''[೧೦] ಇಂದು ಪಶುಗಳನ್ನು ಪೋಷಿಸಲೆಂದೇ ಪಶುವೈದ್ಯ ಚಿಕಿತ್ಸಾಲಯಗಳಿದ್ದರೂ ಜನಪದ ವೈದ್ಯವೇ ಹೆಚ್ಚು ಬಳಕೆಯಲ್ಲಿದೆ. ಪ್ರಾಣಿವೈದ್ಯದಲ್ಲಿ ಮೊದಲ ಹಂತವಾಗಿ ಪ್ರಾಣಿಗಳಿಗೆ ಬಂದ ರೋಗಗಳನ್ನು ಯಾವುದೆಂದು ಗುರುತಿಸದೇ ಹೋದ ಪಕ್ಷದಲ್ಲಿ ಅದಕ್ಕೆ ನೀಡುವ ಚಿಕಿತ್ಸೆಯು ವ್ಯರ್ಥವಾಗುವ ಸಾಧ್ಯತೆ ಹೆಚ್ಚು. ಇವೆಲ್ಲವೂ ಪ್ರಾಣಿ ವೈದ್ಯರಿಗೆ ಅನುಭವದ ಮೂಲಕ ದೊರೆಯುತ್ತದೆ. ಪ್ರಾಣಿಗಳು ತಿನ್ನುವ ಹುಲ್ಲಿನ ಮೂಲಕ ಹಲವು ಬ್ಯಾಕ್ಟೀರಿಯಾ ವೈರಸ್‌ಗಳು ಅದರ ದೇಹವನ್ನು ಪ್ರವೇಶಿಸುವ ಸಾಧ್ಯತೆ ಹೆಚ್ಚು. ಇದರ ಪರಿಣಾಮವಾಗಿ ಬರುವ ದನಗಳ ಕಾಲುಬಾವು ಮತ್ತು ಬಾಯಿಹುಣ್ಣು ರೋಗವು ಹುಲ್ಲಿನ ಮೂಲಕ ಬಂದ ರೋಗವಾಗಿರುತ್ತದೆಂದು ತಿಳಿಸುತ್ತಾರೆ. ಈ ರೋಗ ಬಂದ ಸಂದರ್ಭದಲ್ಲಿ ಹುಲ್ಲು ತಿನ್ನದೆ ನಡೆಯಲಾಗದೆ ಬವಣೆ ಪಡುವ ದನ ಕರುಗಳನ್ನು ಗಮನಿಸಿ ಅದಕ್ಕೆ ತಕ್ಕದಾದ ಔಷಧಿಯನ್ನು ವೈದ್ಯನು ಕೊಡುವನು.

ನೀಲಗಾರ ಸಮುದಾಯದವರು ಬೇಟೆ ಸಂಸ್ಕೃತಿಯಿಂದ ಪ್ರಭಾವಿತರಾಗಿ ನಂತರ ಪಶು ಸಂಗೋಪನೆ, ಕೃಷಿ ಹಂತಕ್ಕೆ ತಲುಪಿರುವುದನ್ನು ಕಾಣಬಹುದು. ಮುಖ್ಯವಾಗಿ ಇವರು ಕೃಷಿ ವ್ಯವಸ್ಥೆಯನ್ನು ಅವಲಂಬಿಸಿರುವ ಹಲವಾರು ನೀಲಗಾರ ಒಕ್ಕಲುಗಳು. ಪ್ರಾಣಿಗಳ ಅವಶ್ಯಕತೆಗಳನ್ನು ಹೊಂದಿದ್ದು ಅವುಗಳಿಂದ ಹಲವಾರು ಕೆಲಸಗಳನ್ನು ಮಾಡಿಸುವುದರ ಮೂಲಕ ಸಹಾಯ ಪಡೆಯುತ್ತಾರೆ. ಉದಾ : ಮಡಿವಾಳರು ಕತ್ತೆಗಳನ್ನು ಸಾಕಿ ಅವುಗಳಿಂದ ಸಹಾಯ ಪಡೆಯುತ್ತಾರೆ. ಹೆಚ್ಚು ನೀಲಗಾರರು ವ್ಯವಸಾಯವನ್ನು ಪ್ರಧಾನವಾಗಿ ಅವಲಂಬಿಸಿರುವುದರಿಂದ ಪ್ರಾಣಿಗಳ ಅವಶ್ಯಕತೆ ಬೇಕೇ ಬೇಕು. ಸಾಮಾನ್ಯವಾಗಿ ನೀಲಗಾರ ಸಮುದಾಯದ ಬಹುಪಾಲು ಕುಟುಂಬಗಳು ಪ್ರಾಣಿಗಳನ್ನು ಸಾಕುತ್ತಿವೆ. ಆದರೆ ನಾನಾ ಉದ್ದೇಶಗಳಿಗಾಗಿ ಬಳಕೆಗೊಳ್ಳುವ ಪ್ರಾಣಿಗಳಿಗೆ ಬರುವ ರೋಗಗಳು ಮತ್ತು ಆ ರೋಗಕ್ಕೆ ನೀಡಬೇಕಾದ ಚಿಕಿತ್ಸೆಯ ಕುರಿತು ಸಮುದಾಯದೊಳಗಿನ ಕೆಲವೇ ಕೆಲವು ವ್ಯಕ್ತಿಗಳಿಗೆ ತಿಳಿದಿರುತ್ತದೆ. ಪ್ರಾಯಶಃ ಮಾನವ ವೈದ್ಯ ಪದ್ಧತಿಯಲ್ಲಿ ಜರುಗಿದಂತೆ ಇಲ್ಲಿಯೂ ರೋಗ ನಿವಾರಕ ಔಷಧಿಗಳ ತಿಳುವಳಿಕೆಯು ಪರಂಪರೆಯಾಗಿಯೋ, ಅನುವಂಶಿಕವಾಗಿಯೋ ಅತ್ಯಂತ ರಹಸ್ಯವಾದ ಕ್ರಮದಲ್ಲಿ ಸಾಗುವುದನ್ನು ಕಾಣಬಹುದಾಗಿದೆ. ಔಷಧಿಗಳಿಗೆ ಅವಶ್ಯಕವಾಗಿ ಬಳಸುವ ನಾರು ಬೇರುಗಳ ಕುರಿತು ಇತರರಿಗೆ ತಿಳಿಸಿದಲ್ಲಿ ತಮಗೆ ಇರುವ ರೋಗ ಗುಣಪಡಿಸುವ ಶಕ್ತಿಯು ಮಾಯವಾಗಿಬಿಡುತ್ತದೆನ್ನುವ ಗಾಢವಾದ ನಂಬಿಕೆ ಇವರಲ್ಲೂ ಉಂಟು. ಹೀಗಾಗಿ ತಮ್ಮ ಕೊನೆಗಾಲದವರೆಗೂ ತಮ್ಮ ವಂಶದ ಕುಡಿಗೂ ಔಷಧಿಗಳ ಗುಟ್ಟನ್ನು ವೈದ್ಯರು ಬಿಟ್ಟುಕೊಡುವುದಿಲ್ಲ.

ಹಸು ಎತ್ತುಗಳಿಗೆ ನಾಲಿಗೆ ಹುಣ್ಣು ಬಂದು ಹುಲ್ಲನ್ನು ತಿನ್ನದೇ ಇದ್ದ ಪಕ್ಷದಲ್ಲಿ ನಾಲಿಗೆಯಲ್ಲಿರುವ ಕೆಟ್ಟ ರಕ್ತದ ದಾರಗಳನ್ನು ಸೂಜಿಗಳಿಂದ ಚುಚ್ಚಿ ಹೊರ ತೆಗೆದು ನಂತರ ನಾಲಿಗೆಗೆ ಉಪ್ಪು ಹುಣಸೇಹಣ್ಣನ್ನು ಒಣ ಹುಲ್ಲಿನೊಳಗೆ ಸೇರಿಸಿ ಬಾಯಿಗೆ ಕಟ್ಟುವ ಕ್ರಮ ಇವರಲ್ಲೂ ಉಂಟು. ದನಗಳ ಹೊಟ್ಟೆ ಉಬ್ಬರಣೆಯಾದರೆ ಕೊಟ್ಟದ ಮೂಲಕ ಒಳ್ಳೆಣ್ಣೆಯನ್ನು ಕುಡಿಸುವ ಪದ್ಧತಿಯುಂಟು. ಹೀಗೆ ಮಾಡಿದಲ್ಲಿ ದನಗಳ ಹೊಟ್ಟೆ ಉಬ್ಬರಿಕೆ ಕಡಿಮೆ ಆಗುವುದು. ಸಾಮಾನ್ಯವಾಗಿ ಎಲ್ಲಾ ನೀಲಗಾರರು ಇಂತಹ ಚಿಕಿತ್ಸೆಯನ್ನು ಅರಿತುಕೊಂಡವರಾಗಿದ್ದಾರೆ.

ಪ್ರಾಣಿಗಳ ವೈದ್ಯಪದ್ಧತಿಯಲ್ಲಿಯೂ ನೀಲಗಾರರು ಮನುಷ್ಯ ವೈದ್ಯ ಪದ್ಧತಿಯಂತೆಯೇ ಯಂತ್ರ ಮಂತ್ರಗಳಿಗೆ ಪ್ರಾಮುಖ್ಯತೆ ಕೊಡುವುದು ಕಂಡುಬರುತ್ತದೆ. ಇವರಲ್ಲಿ ದೈವಗಳ ಬಗ್ಗೆ ನಿಕಟ ಸಂಪರ್ಕವಿದೆ. ''ಪ್ರಾಣಿಗಳ ರೋಗ ರುಜಿನಗಳಿಗೆ ಅಲೌಕಿಕ ಶಕ್ತಿಗಳೇ ಕಾರಣ ಎಂಬ ನಂಬಿಕೆ ಬಲವಾಗಿ ಬೇರೂರಿರುವುದು ಇದಕ್ಕೆ ಮೂಲ''[೨೫] ಪ್ರಾಣಿಗಳಲ್ಲಿ ಕೆಲವೊಮ್ಮೆ ಹವಾಮಾನದ ವ್ಯತ್ಯಾಸದಿಂದಾಗಿ ರೋಗಗಳು ಬರುವುದುಂಟು. ಈ ರೀತಿ ಬಂದ ರೋಗಗಳಿಗೆ ತಮ್ಮ ನಾಟಿ ವೈದ್ಯೋಪಚಾರ ಮಾಡುವುದರೊಂದಿಗೆ ದೇವರಲ್ಲಿ ಮೊರೆ ಹೋಗಿ ಹರಕೆಕಟ್ಟಿ ಅದರಿಂದ ಆರೋಗ್ಯ ತರಲು ಪ್ರಯತ್ನಿಸುವುದುಂಟು.

ಇವರಲ್ಲಿ ಎಮ್ಮೆ ಈದಾಗ ಅದಕ್ಕೆ ದೃಷ್ಟಿ ತಾಗಬಾರದೆಂದು ಕುತ್ತಿಗೆಗೆ ಚಿಪ್ಪು, ನಿಂಬೆಹಣ್ಣು, ಕೆಂಪು ಮೆಣಸಿನಕಾಯಿ, ಕವಡೆಗಳನ್ನು ಕಂಬಳಿಯ ಕರಿದಾರದಲ್ಲಿ ಪೋಣಿಸಿ ಕಟ್ಟುತ್ತಾರೆ. ಹಸುವಿನ ಹೊಟ್ಟೆ ಉಬ್ಬರಿಸಿಕೊಂಡಾಗ ಸಣ್ಣ ಮಕ್ಕಳನ್ನು ಬೆತ್ತಲೆಗೊಳಿಸಿ ಹಸುವಿನ ಹೊಟ್ಟೆಯ ಕೆಳಭಾಗದಿಂದ ಹಸುವನ್ನು ಮೂರು ಬಾರಿ ಸುತ್ತಿಸುತ್ತಾರೆ. ಆ ಮಗು ಸುತ್ತಿದರೆ ಹೊಟ್ಟೆ ಉಬ್ಬರ ಕೊನೆಗೊಳ್ಳುತ್ತದೆಂದು ನಂಬಲಾಗುತ್ತದೆ. ಇದರೊಂದಿಗೆ ಹೊಟ್ಟೆ ಉಬ್ಬರಿಸಿದ ಹಸುವಿಗೆ ಒಳ್ಳೆಣ್ಣೆಯನ್ನು ಕೊಟ್ಟದಲ್ಲಿ ಹಾಕಿ ಕುಡಿಸುವುದುಂಟು. ಇದರಿಂದ ಹೊಟ್ಟೆ ಉಬ್ಬರ ಉಪಶಮನವಾಗುತ್ತದೆ. ಈ ರೀತಿಯಾಗಿ ಪ್ರಾಣಿ ವೈದ್ಯವನ್ನು ಇನ್ನೂ ಹಲವಾರು ರೋಗಗಳಿಗೆ ವೈದ್ಯಗಳನ್ನು ಕೊಡುತ್ತಾರೆ. ಇವರಲ್ಲಿ ಯಾವುದೇ ರೋಗಗಳು ಪ್ರಾಣಿ ಅಥವಾ ಮನುಷ್ಯರಿಗೆ ಬರಲಿ ಮೊದಲು ಅವರ ಮನೆ ದೈವಕ್ಕೆ ಹರಕೆ ಕಟ್ಟಿಕೊಂಡರೆ ರೋಗ ನಿವಾರಣೆಯಾಗುತ್ತದೆಂದು ನಂಬುತ್ತಾರೆ.

ಈ ರೀತಿ ಮಾನವನು ತನ್ನ ಆರೋಗ್ಯದ ಕಡಗೆ ಗಮನವಹಿಸಿಕೊಳ್ಳುವುದರ ಜೊತೆಗೆ ತನಗೆ ಉಪಯುಕ್ತವಾದ ಸಹಾಯ ಮಾಡುವ ಸಾಕು ಪ್ರಾಣಿಗಳ ಆರೋಗ್ಯದ ಕಡೆಗೂ ಗಮನವಹಿಸುವುದನ್ನು ಇಲ್ಲಿ ಗುರುತಿಸಲಾಗಿದೆ. ಅಷ್ಟೇ ಅಲ್ಲದೆ ಮನುಷ್ಯ ತನ್ನ ಆರೋಗ್ಯ ರಕ್ಷಣೆಗಾಗಿ ಪ್ರಾಣಿ ಜನ್ಯ ವಸ್ತುಗಳನ್ನು ಬಳಸುವುದೂ ಉಂಟು. ಅತಿ ಪವಿತ್ರವೆಂದು ಭಾವಿಸಲಾಗುವ ಪ್ರಾಣಿ ಗೋವು. ಈ ಪವಿತ್ರ ಪ್ರಾಣಿಯ ಮೂತ್ರ ಸೇವಿಸಿದಲ್ಲಿ ಕೆಮ್ಮು, ಕಸಾಲೆಗಳು ಕಡಿಮೆಯಾಗುತ್ತವೆ ಎನ್ನುವ ನಂಬಿಕೆ ಉಂಟು. ಮೇಕೆ ಹಾಲು ಇಕ್ಕೆಗಳನ್ನು ಔಷಧಕ್ಕಾಗಿ ಬಳಸುತ್ತಾರೆ. ಹಾಗೆಯೇ ಕುದುರೆ ಬಾಲದ ಕೂದಲು, ಮೀನಿನ ಕಣ್ಣು, ಹುಲಿಯ ಎಲುಬು ಹೀಗೆ ಪ್ರಾಣಿಗಳಿಂದ ದೊರೆಯುವ ಪದಾರ್ಥಗಳನ್ನು ಉಪಯೋಗಿಸಿಕೊಂಡು ನೀಲಗಾರರು ಔಷಧಿಗಳನ್ನು ತಯಾರಿಸುವ ಉದಾಹರಣೆಗಳು ಹಲವಾರು ಇವೆ.

ಹೀಗಾಗಿ ಮನುಷ್ಯ ತನಗೆ ಗೊತ್ತಿದ್ದೊ ಗೊತ್ತಿಲ್ಲದೆಯೋ ಹತ್ತು ಹಲವು ಔಷಧಿಗಳನ್ನು ಮಾಡುವ ನೈಪುಣ್ಯತೆ ಪಡೆದಿದ್ದಾನೆ. ಈ ಮನುಷ್ಯನಿಗೆ ಆಹಾರ ಎಷ್ಟು ಮುಖ್ಯವೋ ಅಷ್ಟೇ ಆರೋಗ್ಯ ಮುಖ್ಯ ಎಂಬುದನ್ನು ಇದು ಸೂಚಿಸುತ್ತದೆ. ನೀಲಗಾರರು ಉಪಯೋಗಿಸುವ ಔಷಧಿಗಳಾಗಲಿ ರೋಗವನ್ನು ನಿವಾರಿಸಲು ನಡೆಸುವ ತಾಂತ್ರಿಕ ಸ್ವರೂಪಗಳಾಗಿ ವೈಜ್ಞಾನಿಕತೆಯಿಂದ ಕೂಡಿದೆ ಎಂದು ಹೇಳುವುದು ಕಷ್ಟವಾದರೂ ಇವು ನಿರುಪಯುಕ್ತ ಔಷಧಿಗಳೆಂದು ವಾದಿಸುವುದು ತುಂಬಾ ಕಷ್ಟಕರ. ಈ ನಾಡ ಔಷಧಿ ತಲ ತಲಾಂತರಗಳಿಂದ ಉಳಿದು ಬಂದಿರುವುದರಿಂದ ಇವರಲ್ಲಿ ಇವತ್ತಿಗೂ ಜೀವಂತವಾಗಿರುವುದನ್ನು ಕಾಣಬಹುದು. ಒಟ್ಟಿನಲ್ಲಿ ಇವತ್ತಿನ ಆಧುನಿಕ ಯುಗದಲ್ಲಿಯೂ ನೀಲಗಾರ ಸಮುದಾಯ ಆಧುನಿಕತೆ ಹೊಂದಿಕೊಳ್ಳದೇ ತಮ್ಮ ಹಳೆಯ ಪದ್ಧತಿಯನ್ನೇ ಅಂದರೆ ಮಟ್ಟಿಕಪ್ಪು ದೂಳತ್ತ ಮಂತ್ರಿಸುವುದು ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ. ಆಧುನಿಕ ವೈದ್ಯಕೀಯದ ಎಲ್ಲಾ ಸವಲತ್ತುಗಳು

ಇರುವ ಈ ಕಾಲದಲ್ಲೂ ಹಳ್ಳಿಯ ವೈದ್ಯ ತನ್ನ ಅಸ್ಥಿತ್ವವನ್ನು ಕಾಪಾಡಿಕೊಂಡಿರುವುದು ಜಾನಪದದ ಜೀವಂತಿಕೆಗೆ ಮುಖ್ಯ ಸಾಕ್ಷಿಯಾಗಿದೆ ಎಂದರೆ ಬಹುಶಃ ತಪ್ಪಾಗಲಾರದು.

೩: ೨.೭ ಜಾತಿ ಬಹಿಷ್ಕಾರ ಮತ್ತು ಜಾತಿಗೆ ಸೇರಿಸಿಕೊಳ್ಳುವ ಪ್ರಕ್ರಿಯೆ

ಬಹಿಷ್ಕಾರವೆಂದರೆ ಸಮಾಜದಿಂದ ಉಚ್ಚಾಟಿಸುವ ಪ್ರಕ್ರಿಯೆ ಎಂದರ್ಥ. ಈ ಪದ್ಧತಿ ಬಹುಹಿಂದಿನಿಂದಲೂ ನಮ್ಮಲ್ಲಿ ಇದೆ. ಹಿಂದಿನ ಕಾಲದಲ್ಲಿ ಈ ಪದ್ಧತಿ ತುಂಬಾ ಕ್ರೂರವಾಗಿತ್ತು. ಆದರೆ ಇಂದು ಆಧುನಿಕತೆಯ ಪ್ರಭಾವದಿಂದ ಅಂತಹ ಪದ್ಧತಿ ಮಾಯವಾಗಿದೆ.

ಇಂದಿನ ಬುಡಕಟ್ಟು ವ್ಯವಸ್ಥೆಯಲ್ಲಿ ತಮ್ಮ ಸಮುದಾಯದ ಶುಚಿತ್ವಕ್ಕೆ ಮತ್ತು ಶುದ್ಧತ್ವಕ್ಕೆ ಹೆಚ್ಚಿನ ಮಹತ್ವವನ್ನು ಕೊಡುತ್ತಾರೆ.

ನೀಲಗಾರ ಸಮುದಾಯವು ಇದಕ್ಕೆ ಹೊರತಾಗಿಲ್ಲ. ಈ ಸಮುದಾಯಗಳು ಮೂಲತಃ ಬುಡಕಟ್ಟು ಸಂಸ್ಕೃತಿಗೆ ತೀರ ಹತ್ತಿರದಲ್ಲಿ ನಿಲ್ಲುವ ಸಮುದಾಯವಾಗಿರುವುದರಿಂದ ಇವರಲ್ಲಿ ಜಾತಿ ಬಹಿಷ್ಕಾರದ ಸ್ವರೂಪ ತುಂಬಾ ಕಠಿಣವಾಗಿ ಕಂಡುಬರುತ್ತದೆ. ಸಮುದಾಯದೊಳಗಿನ ವ್ಯಕ್ತಿಯೊಬ್ಬನಿಗೆ ಜಾತಿ ಬಹಿಷ್ಕಾರ ಹಾಕಲು ಅವು ತಾವೇ ರೂಪಿಸಿಕೊಂಡ ನಿಯಮಗಳು, ಕಟ್ಟುಪಾಡುಗಳು ಕಾರಣವಾಗಿರುತ್ತವೆ.

ನೀಲಗಾರರಲ್ಲಿ ಪ್ರಚಲಿತವಿರುವ ಅಂತಹ ಕಾರಣಗಳು ಈ ರೀತಿಯಾಗಿದೆ.

೧. ಚಪ್ಪಲಿಯಿಂದ ಹೊಡೆಸಿಕೊಳ್ಳುವ ಮತ್ತು ಮೈಯಿಗೆ ಸೋಕಿಸುವುದರಿಂದ

೨. ಅನ್ಯಜಾತಿ ವ್ಯಕ್ತಿಯಿಂದ ಅವಾಚ್ಯ ಶಬ್ದಗಳಿಂದ ಬೈಯಿಸಿಕೊಳ್ಳುವುದರಿಂದ

೩. ಸಮುದಾಯದ ಒಳಗೆ ನಡೆಯುವ ಯಾವುದೇ ಶುಭ ಮತ್ತು ಅಶುಭ ಕಾರ್ಯಗಳಿಗೆ ಗೈರು ಹಾಜರಿಯಾಗುವುದರಿಂದ

೪. ಅನೈತಿಕ ಸಂಬಂಧ

೫. ಆ ಸಮುದಾಯದವರು ಮಾಡಿದ ನಿಯಮ ಕಟ್ಟುಪಾಡುಗಳನ್ನು ಮೀರುವುದರಿಂದ

೬.ಅಂತರ ಜಾತಿ ವೈವಾಹಿಕ ಸಂಬಂಧಗಳು

ನೀಲಗಾರ ಸಮುದಾಯದೊಳಗಿನ ಯಾವುದೇ ವ್ಯಕ್ತಿ ತನ್ನ ಸಮುದಾಯಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡಲ್ಲಿ ಅಂತಹ ವ್ಯಕ್ತಿಯನ್ನು ಸಮುದಾಯದಿಂದ ದೂರವಿಟ್ಟು ಬಹಿಷ್ಕರಿಸಲಾಗುತ್ತದೆ. ಅಲ್ಲಿ ಬಹಿಷ್ಕೃತ ವ್ಯಕ್ತಿಯನ್ನು ಆತನ ರಕ್ತ ಸಂಬಂಧಿಗಳು ದೂರವಿಟ್ಟಲ್ಲಿ ಕೆಲವು ಸಂದರ್ಭಗಳಲ್ಲಿ ಸಮುದಾಯದೊಳಗೇ ಇರಬಹುದಾದರೂ ಬಹಿಷ್ಕಾರಗೊಂಡ ವ್ಯಕ್ತಿಯೊಂದಿಗೆ ಯಾವುದೇ ನೇರ ಸಂಬಂಧಗಳನ್ನು ಇಟ್ಟುಕೊಂಡಿದ್ದಲ್ಲಿ ಅಂಥವರೂ ಕೂಡ ಸಮುದಾಯದಿಂದ ಬಹಿಷ್ಕೃತರಾಗುತ್ತಾರೆ. ಇವರನ್ನು

ಬಹಿಷ್ಕರಿಸುವ ಹಕ್ಕು ಆಯಾಯ ಒಕ್ಕಲಿನ ನೀಲಗಾರರ ಯಜಮಾನ ಪುರುಸೇಕಾರಿಗೆ ಇರುತ್ತದೆ.

ಅಂತರ ಜಾತಿ ವಿವಾಹದಿಂದಾದ ಬಹಿಷ್ಕಾರ ನಿಯಮ

ನೀಲಗಾರ ಸಮುದಾಯದೊಳಗಿನ ಯಾವುದೇ ಹೆಣ್ಣು ಅಥವಾ ಗಂಡು ಇನ್ನೊಂದು ಜಾತಿಯ ವ್ಯಕ್ತಿಯೊಂದಿಗೆ ವೈವಾಹಿಕ ಸಂಬಂಧಗಳನ್ನು ಬೆಳೆಸಿದಲ್ಲಿ ಅಂತಹ ವ್ಯಕ್ತಿಯನ್ನು ಸಮುದಾಯದಿಂದ ಬಹಿಷ್ಕರಿಸಲಾಗುತ್ತದೆ. ನೀಲಗಾರ ಸಮುದಾಯದ ಗಂಡಸಾದರೆ ಅನ್ಯಜಾತಿ ಸಮುದಾಯದ ಹೆಣ್ಣನ್ನು ಮದುವೆಯಾಗುವಂತಿಲ್ಲ. ಒಂದು ವೇಳೆ ಮದುವೆಯಾದ ಪಕ್ಷದಲ್ಲಿ ಅಂತಹ ವ್ಯಕ್ತಿಯು (ನೀಲಗಾರ) ತನ್ನ ಸಮುದಾಯದೊಳಗೆ ಮರು ಪ್ರವೇಶ ಮಾಡಬೇಕಾಗಿದ್ದಲ್ಲಿ ತಾನು ಮದುವೆಯಾದ ಪರಜಾತಿಯ ಹೆಣ್ಣನ್ನು ನಿರಾಕರಿಸಬೇಕು. ನೀಲಗಾರ ಗಂಡನ್ನು ವಿವಾಹವಾದ ಅನ್ಯಜಾತಿಯ ಹೆಣ್ಣಿಗೆ ಯಾವುದೇ ಕಾರಣಕ್ಕೂ ನೀಲಗಾರ ಸಮುದಾಯದೊಳಕ್ಕೆ ಪ್ರವೇಶವಿರುವುದಿಲ್ಲ. ವಿವಾಹವಾದ ಹೆಣ್ಣನ್ನು ಬಿಟ್ಟು ಮರಳಿ ಸಮುದಾಯದೊಳಗೆ ಪ್ರವೇಶ ಬಯಸುವ ಗಂಡು ನೀಲಗಾರ ಗುರುಗಳಿಂದ ಭಸ್ಮ ಹಾಕಿಸಿಕೊಂಡು ತಪ್ಪಿಗೆ ದಂಡ ಕಟ್ಟಿ ನಂತರ ನೀಲಗಾರ ಯಜಮಾನ ಆತನನ್ನು ಶುದ್ದಿಗೊಳಿಸಿ ಮರಳಿ ತನ್ನ ಸಮುದಾಯಕ್ಕೆ ಸೇರಿಸಿಕೊಳ್ಳುತ್ತಾನೆ. ಆದರೆ ಅನ್ಯಜಾತಿಯ ಗಂಡನ್ನು ವಿವಾಹವಾದ ನೀಲಗಾರ ಹೆಣ್ಣಿಗೆ ಈ ಅವಕಾಶ ಇರುವುದಿಲ್ಲ. ಮುಖ್ಯವಾಗಿ ನೀಲಗಾರರು ದೈವದ ಸಂಕೇತದವರು ದೈವತ್ವಕ್ಕೇರಿದವರು ಆದರೆ ನೀಲಗಾರರನ್ನು ದೈವದ ಭಾವನೆಯಿಂದ ಬೇರೆ ಸಮುದಾಯದವರು ಗುರುತಿಸುತ್ತಾರೆ.

ಅನೈತಿಕ ಸಂಬಂಧ

ನೀಲಗಾರ ಸಮುದಾಯದ ಹೆಣ್ಣಿಗೆ ಮಾತ್ರ ಅನ್ವಯವಾಗುವ ವಿಚಾರವಾಗಿದ್ದು ಆ ಸಮುದಾಯಕ್ಕೆ ಸೇರಿದ ಹೆಣ್ಣು ಪರಜಾತಿ/ಪರ ಪುರುಷನೊಂದಿಗೆ ಅನೈತಿಕವಾದ ದೈಹಿಕ ಸಂಪರ್ಕ ಇಟ್ಟುಕೊಂಡಿದ್ದ ಪಕ್ಷದಲ್ಲಿ ಅಂತಹ ಹೆಣ್ಣನ್ನು ಜಾತಿಯಿಂದ ಬಹಿಷ್ಕರಿಸುವುದರೊಂದಿಗೆ ಹಲವು ಬಗೆಯ ಶಿಕ್ಷೆಗೆ ಗುರಿ ಮಾಡುವ ಉದಾಹರಣೆಗಳುಂಟು. ಪೂರ್ವದಲ್ಲಿ ಈ ರೀತಿಯ ಬಹಿಷ್ಕಾರ ಕ್ರಮ ಆ ಸಮುದಾಯದ ಪುರುಷ ವರ್ಗಕ್ಕೂ ಅನ್ವಯಿಸುತ್ತಿದ್ದಿತೆಂದು ತಿಳಿಸುತ್ತಾರೆ. ಆದರೆ ಇಂದು ಈ ರೀತಿಯ ಅಕ್ರಮ ಸಂಬಂಧಕ್ಕಾಗಿಯೇ ಬಹಿಷ್ಕರಿಸುವುದು ಮಹಿಳೆಯರಿಗೆ ಮಾತ್ರ ಸೀಮಿತವಾಗಿ ಬಿಟ್ಟಿರುವುದನ್ನು ಕಾಣಬಹುದಾಗಿದೆ. ಆದರೆ ನೀಲಗಾರ ಸಮುದಾಯದೊಳಗಿನ ಬಿಗಿ ಕ್ರಮದಿಂದಾಗಿ ಇಂತಹ ಪ್ರಕರಣಗಳು ತೀರ ಕಡಿಮೆ ಎಂದೇ ಹೇಳಬಹುದು. ತನ್ನರಿವಿಗೆ ಬಾರದಂತೆ ಅನೈತಿಕ ಸಂಬಂಧಗಳನ್ನಿಟ್ಟುಕೊಂಡ ಹೆಣ್ಣು ಬಹುಬೇಗನೆ ತಿಳುವಳಿಕೆಯಿಂದಾಗಿ ಅಂತಹ ಸಂಬಂಧಗಳಿಂದ ದೂರವಾದ ಪಕ್ಷದಲ್ಲಿ ಮಾನವೀಯ ದೃಷ್ಟಿಯಿಂದ ನೀಲಗಾರ ಯಜಮಾನರು (ಗುರುಗಳು) ತಮ್ಮ ಸಮುದಾಯಕ್ಕೆ ಸೇರಿದ ಗಂಡೊಂದನ್ನು ಮದುವೆಯಾಗಲು ಒಪ್ಪಿಗೆ ಕೊಟ್ಟ ಉದಾಹರಣೆಗಳಿವೆ. ಅನೈತಿಕ ಸಂಬಂಧಗಳನ್ನೇರ್ಪಡಿಸಿಕೊಂಡ ಹೆಣ್ಣನ್ನು ಸಮುದಾಯದಿಂದ ಬಹಿಷ್ಕರಿಸುವ ಪೂರ್ಣ ಹಕ್ಕನ್ನು ಕಟ್ಟೆಮನೆ ಯಜಮಾನ ಪುರುಸೇಕಾರಿ ಹೊಂದಿರುತ್ತಾರೆ.

ಚಪ್ಪಲಿಯಿಂದ ಹೊಡೆಸಿಕೊಳ್ಳುವುದರಿಂದ ಮತ್ತು ಅವಾಚ್ಯ ಶಬ್ದಗಳಿಂದ ಬೈಯ್ಯಿಸಿಕೊಳ್ಳುವುದರಿಂದ ಬಹಿಷ್ಕಾರ

ಯಾವುದೇ ಅನ್ಯಜಾತಿ/ಧರ್ಮದ ವ್ಯಕ್ತಿಗಳಿಂದಾಗಲೀ ಇಲ್ಲವೇ ಸಮುದಾಯದೊಳಗೆ ತಮ್ಮ ತಮ್ಮೊಳಗೆ ಅವಾಚ್ಯ

ಶಬ್ದಗಳನ್ನು ಬೈಯಿಸಿಕೊಳ್ಳುವುದಾಗಲಿ ಅಥವಾ ಚಪ್ಪಲಿಯಿಂದ ಹೊಡೆದಾಡಿಕೊಳ್ಳುವುದು ನೀಲಗಾರ ಸಮುದಾಯದಲ್ಲಿ ಬಹಿಷ್ಕಾರ ಯೋಗ್ಯವಾದ ಕ್ರಿಯೆ ಎಂದು ಭಾವಿಸಲಾಗುತ್ತದೆ. ಅಂತಹ ವ್ಯಕ್ತಿಗಳನ್ನು ನೀಲಗಾರ ಸಮುದಾಯವು ಬಹಿಷ್ಕರಿಸಿ ಆ ಸಮುದಾಯದಿಂದ ಹೊರಗೆ ಹಾಕುತ್ತಾರೆ. ಈ ರೀತಿಯಾಗಿ ಬಹಿಷ್ಕಾರಕ್ಕೆ ಒಳಗಾದ ಆ ವ್ಯಕ್ತಿಯನ್ನು ಮತ್ತೆ ಮರಳಿ ಸಮುದಾಯದೊಳಗೆ ಸೇರಿಸಿಕೊಳ್ಳಲು ನೀಲಗಾರರ ಒಕ್ಕಲುಗಳಲ್ಲಿ ಹಲವು ಆಚರಣೆಗಳುಂಟು.

ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿರುವ ನೀಲಗಾರ ಸಮುದಾಯಗಳಲ್ಲಿ ಮೇಲಿನ ರೀತಿಯಲ್ಲಿ ಬಹಿಷ್ಕರಿಸಲ್ಪಟ್ಟ ವ್ಯಕ್ತಿಯನ್ನು ಮರಳಿ ಆ ಸಮುದಾಯಕ್ಕೆ ಸೇರಿಸಿಕೊಳ್ಳುವ ಪದ್ಧತಿ ಎಲ್ಲಾ ಜನವರ್ಗಗಳಲ್ಲಿ ಇರುವಂತೆ ಇವರಲ್ಲಿಯೂ ರೂಢಿಗತವಾಗಿ ಬಂದಿದೆ.

ಚಪ್ಪಲಿಯಿಂದ ಹೊಡೆಸಿಕೊಂಡ, ಬಯ್ಯಿಸಿಕೊಂಡ ಮತ್ತು ಸೋಕಿಸಿಕೊಂಡ ವ್ಯಕ್ತಿಯನ್ನು ಆ ಕ್ಷಣದಿಂದಲೇ ಬಹಿಷ್ಕರಿಸಲಾಗುತ್ತದೆ. ಈ ರೀತಿ ಬಹಿಷ್ಕಾರಕ್ಕೆ ಒಳಪಟ್ಟ ವ್ಯಕ್ತಿಗೆ ತನ್ನ ಸ್ವಂತ ಮನೆಯೊಳಗೆ ಹೋಗುವ ಹಕ್ಕು ಸಹ ಇರುವುದಿಲ್ಲ. ಹಾಗೆ ಆ ಸಮುದಾಯದವರಾಗಲೀ ಆತನ ರಕ್ತ ಸಂಬಂಧಿಗಳಾಗಲಿ ಬಹಿಷ್ಕೃತ ವ್ಯಕ್ತಿಯನ್ನು ಮುಟ್ಟಿಸಿಕೊಳ್ಳುವಂತಿಲ್ಲ ಮತ್ತು ನೀಲಗಾರರು ಆಚರಿಸುವ ಧಾರ್ಮಿಕ ಆಚರಣೆಗೆ ಹೋಗುವಂತಿಲ್ಲ.

ಹೀಗೆ ಬಹಿಷ್ಕರಿಸಲ್ಪಟ್ಟ ವ್ಯಕ್ತಿಯನ್ನು ಮತ್ತೆ ಮರಳಿ ಸಮುದಾಯದೊಳಗೆ ಸೇರಿಸಿಕೊಳ್ಳಬೇಕಾದರೆ ಬಹಿಷ್ಕೃತ ಗೊಂಡ ವ್ಯಕ್ತಿ ಹಿಂದೆ ಹೇಗೆ ದೀಕ್ಷೆಯನ್ನು ನೀಡುವ ಸಂದರ್ಭದಲ್ಲಿ ಏನೆಲ್ಲಾ ಆಚರಣೆ ನಿಯಮಗಳನ್ನು ಆಚರಿಸಿದ್ದನೋ ಆ ಎಲ್ಲಾ ಆಚರಣೆಗಳನ್ನು ಆ ವ್ಯಕ್ತಿಗೆ ಮಾಡಿಸಿ ಅಂದರೆ ಗುರುಗಳಿಂದ ಹೊಸದಾಗಿ ದೀಕ್ಷೆ ಪಡೆದು ಗುರುಗಳ ಮೂಲಕ ಪ್ರಮಾಣ ಮಾಡಲಾಗುತ್ತದೆ. ನಂತರ ಆ ಸಮುದಾಯದ ಯಜಮಾನನಿಗೆ ತಮ್ಮ ದೈವದ ಹರಕೆಯಾಗಿ ತಪ್ಪು ದಂಡ ಹನ್ನೊಂದು ರೂಪಾಯಿಯನ್ನು ಆ ವ್ಯಕ್ತಿಯಿಂದ ಕಟ್ಟಿಸುತ್ತಾರೆ. ಈ ರೀತಿಯಾಗಿ ಆ ಸಮುದಾಯದ ಯಾವುದೇ ವ್ಯಕ್ತಿಯಾಗಲಿ ನೀಲಗಾರ ಗುರುಗಳ ಮೂಲಕ ಶುದ್ಧಿಕರಣಶಾಸ್ತ್ರವನ್ನು ಪಡೆದು ಆ ಸಮುದಾಯಕ್ಕೆ ಸೇರಿಕೊಳ್ಳಬೇಕೆಂಬುದು ನೀಲಗಾರ ಸಮುದಾಯದ ನಿಯಮ.

ಶುಭ ಅಶುಭ ಕಾರ್ಯಗಳಿಗೆ ಹೋಗದಿದ್ದ ಪಕ್ಷದಲ್ಲಿ

ನೀಲಗಾರ ಸಮುದಾಯದ ಪ್ರತಿಯೊಂದು ನೀಲಗಾರ ಕೇಂದ್ರದ ವ್ಯಾಪ್ತಿಯಲ್ಲಿ ನಡೆಯುವ ಮದುವೆ, ಹುಟ್ಟು, ಸಾವುಗಳಂತಹ ಇಡೀ ಆ ದೈವಕ್ಕೆ ಸಂಬಂಧಿಸಿದಂತೆ ಆ ವ್ಯಾಪ್ತಿಯಲ್ಲಿ ನೆಲೆಸಿರುವ ಎಲ್ಲಾ ನೀಲಗಾರ ಸಮುದಾಯದವರು ಕಡ್ಡಾಯವಾಗಿ ಹಾಜರಾಗಬೇಕೆಂಬ ನಿಯಮ ಇವರಲ್ಲಿದೆ. ಆಕಸ್ಮಿಕವಾಗಿ ಮನೆಯ ಹಿರಿಯ ಹಾಜರಾಗಲು ತೊಂದರೆ ಇದ್ದಲ್ಲಿ ಮನೆಯ ಸದಸ್ಯನೊಬ್ಬನು ಹಾಜರಾಗಬೇಕು ತಾನೂ ಬಾರದೆ ತನ್ನ ಕುಟುಂಬದ ಪ್ರತಿನಿಧಿಯನ್ನು ಕಳಿಸದೆ ಧಾರ್ಮಿಕ ಕಾರ್ಯಗಳಿಗೆ ಗೈರು ಹಾಜರಾದ ಪಕ್ಷದಲ್ಲಿ ಅಂತಹ ಕುಟುಂಬದ ಸದಸ್ಯನನ್ನು ಕುಲದಿಂದ ಬಹಿಷ್ಕರಿಸುವ ಹಕ್ಕನ್ನು ದೈವವು ಹೊಂದಿರುತ್ತದೆ. ದೈವದ ಪರವಾಗಿ ಕಟ್ಟೆಮನೆ ಯಜಮಾನನು ಇಂಥ ವ್ಯಕ್ತಿಗಳನ್ನು ಕುಲದಿಂದ ಬಹಿಷ್ಕರಿಸುತ್ತಾನೆ. ಅಕಸ್ಮಾತ್ ಯಜಮಾನನು

ಅಂತಹ ವ್ಯಕ್ತಿಯನ್ನು ಬಹಿಷ್ಕರಿಸದೆ ನಿರ್ಲಕ್ಷ್ಯ ತೋರಿದಲ್ಲಿ ಇಡೀ ಆ ಸಮುದಾಯದವರೇ ಯಜಮಾನನನ್ನು ತರಾಟೆಗೆ ತೆಗೆದುಕೊಳ್ಳುತ್ತದೆ.

ಈ ರೀತಿಯಾಗಿ ಬಹಿಷ್ಕಾರಕ್ಕೆ ಒಳಗಾದ ವ್ಯಕ್ತಿಯು ನಂತರ ದೈವದವರ, ಗುರುಗಳ ಸಮ್ಮುಖದಲ್ಲಿ ತಪ್ಪೊಪ್ಪಿಕೊಂಡು ಇನ್ನೊಮ್ಮೆ ಅಂತಹ ಅವಘಡಗಳು ನಡೆಯದಂತೆ ಎಚ್ಚರವಹಿಸುತ್ತೇನೆಂದು ತಿಳಿಸಿದ ಬಳಿಕ ಆ ವ್ಯಕ್ತಿಗೆ ತಪ್ಪು ದಂಡ ಹಾಕಿ ಶುದ್ಧೀಕರಣವನ್ನು ಮಾಡುವ ಪ್ರಕ್ರಿಯೆಗೆ ತೊಡಗಿಸಿ ಮರಳಿ ಕುಲಕ್ಕೆ ಸೇರಿಸಿ ಕೊಳ್ಳಲಾಗುವುದು. ನಂತರ ಆತನ ಇಡೀ ಕುಟುಂಬ ಆ ಕುಲದೊಳಗೆ ಸೇರುತ್ತದೆ. ಹೀಗೆ ನೀಲಗಾರ ಸಮುದಾಯದಲ್ಲಿ ಬಹಿಷ್ಕರಿಸುವ ಮತ್ತು ಮರಳಿ ಸೇರಿಸಿಕೊಳ್ಳುವ ಎರಡೂ ಪ್ರಕ್ರಿಯೆಗಳನ್ನು ನೀಲಗಾರ ಸಮುದಾಯದಲ್ಲಿ ಕಾಣಬಹುದಾಗಿದೆ.

೩ : ೩ ವಿಧಿ-ನಿಷೇಧಗಳು

ವಿಧಿ ಎಂದರೆ ಮಾಡಲೇಬೇಕಾದ ಅಥವಾ ಅನುಸರಿಸಲೇಬೇಕಾದ ಆಜ್ಞೆ. ಅದೇ ರೀತಿ ಇಂಥದನ್ನು ಮಾಡಕೂಡದು, ಮಾಡಲೇ ಕೊಡದು ಎನ್ನುವುದು ನಿಷೇಧ. ಯಾವುದೇ ಜನಪದ ವೃಂದದ ಕಡ್ಡಾಯ ಆಚರಣೆಗಳು ವಿಧಿಗಳೆನಿಸುತ್ತವೆ. ಒಂದು ಅರ್ಥದಲ್ಲಿ ಇವು ಆಯಾ ವೃಂದಗಳು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬಂದ ಮಾನಸಿಕ ಭಾವನೆಗಳಾಗಿವೆ. ಈ ಕಾರಣದಿಂದಾಗಿ ಪ್ರತಿಯೊಂದು ಜನಪದ ಸಮುದಾಯದ ವಿಧಿ-ನಿಷೇಧಗಳು ಅವರವರ ವ್ರತ ನಂಬಿಕೆಗಳಿಗೆ ಆಧಾರ ಮತ್ತು ಆಕರವಾಗಿರುತ್ತವೆ.

ಹುಟ್ಟಿನಿಂದ ಮರಣದವರೆಗೂ ಬಹು ಬಗೆಯ ಕಟ್ಟುನಿಟ್ಟಾದ ವಿಧಿ ನಿಷೇಧಗಳು ನೀಲಗಾರರಲ್ಲಿ ಪ್ರಚಲಿತವಾಗಿವೆ. ಇವರು ಮೊದಲಿನಿಂದಲೂ ಸಂಪ್ರದಾಯ ನಿಷ್ಠರು. ತಮ್ಮ ಪ್ರತಿಯೊಂದು ಆಚರಣೆಗಳಿಗೂ ವಿಧಿ-ನಿಷೇಧಗಳ ಸಂಬಂಧ ಕಲ್ಪಿಸುತ್ತಾರೆ. ಇವು ಅವರ ದೈನಂದಿನ ಬದುಕಿನ ಸಮಸ್ಯೆಗಳನ್ನು ನಿವಾರಿಸಲು ಕೂಡ ಬಳಸುವ ಒಂದು ಬಗೆಯ ವಿಧಾನಗಳಾಗಿಯೇ ಮುಂದುವರೆದಿವೆ. ವಿವಿಧ ನೀಲಗಾರ ಗುಂಪುಗಳಲ್ಲಿರುವ ಈ ಬಗೆಯ ನಂಬಿಕೆ ಮತ್ತು ಆಚರಣೆಗಳನ್ನು ಗುರುತಿಸುವುದು ಮೇಲುನೋಟಕ್ಕೆ ಕಾಣುವಷ್ಟು ಸುಲಭವಲ್ಲ. ಈಗಾಗಲೇ ಅನೇಕ ವಿಧಿ-ನಿಷೇಧಗಳು ಕಣ್ಮರೆಯಾಗಿವೆ ಅಥವಾ ಕಲಸುಮೇಲೋಗರವಾಗಿದೆ. ಅನೇಕ ಸಲ ಶ್ರೇಣೀಕೃತ ಸಮಾಜದ ವಿಶೇಷತಃ ಮೇಲುವರ್ಗದ ಸಮುದಾಯದ ಆಚರಣೆಗಳ ಅಂಧಾನುಕರಣೆಯೂ ಇದಕ್ಕೆ ಕಾರಣವಾಗಿರಬಹುದು. ಸದ್ಯದ ನೀಲಗಾರರಲ್ಲಿ ಕಾಣುವ ಕೆಲವು ನಂಬಿಕೆ ಆಚರಣೆಗಳನ್ನು ಈ ಕೆಳಗಿನಂತೆ ಗುರುತಿಸಲಾಗಿದೆ.

ನೀಲಗಾರ ಸಮುದಾಯದವರು ತಮ್ಮ ಹತ್ತಿರ ಇರುವ ಮಣ್ಣಿನ ಊಟದ ಬಟ್ಟಲನ್ನು ಬೇರೆಯವರಿಗೆ ಕೊಡುವಂತಿಲ್ಲ ಮತ್ತು ಎಂಜಲು ಮಾಡುವಂತಿಲ್ಲ ಹಾಗೇನಾದರೂ ಕೊಟ್ಟರೆ ಅಥವಾ ಎಂಜಲಾದರೆ ಮತ್ತೆ ಅವರಿಗೆ ಹೊಸದಾಗಿ ದೀಕ್ಷೆ ಕೊಡಬೇಕು ಎಂಬುದು ಇವರ ನಂಬಿಕೆ. ಆದ್ದರಿಂದ ನೀಲಗಾರರು ಆ ಬಟ್ಟಲನ್ನು ಬಹಳ ಜಾಗರೂಕತೆಯಿಂದ

ನೋಡಿಕೊಳ್ಳುತ್ತಾರೆ. ಈ ಬಟ್ಟಲನ್ನು ಕಡ್ಡಾಯವಾಗಿ ನೀಲಗಾರರು ನಂತರ ಅವರ ಮಕ್ಕಳು ಹೀಗೆ ವಂಶಪಾರಂಪರ್ಯವಾಗಿ ಬಳಸಲೇಬೇಕು.

ಇವರಲ್ಲಿ ಯಾವುದೇ ತೊಂದರೆ ಅಥವಾ ಅಶುದ್ಧ ಕೆಡಕು ಉಂಟಾದರೆ ಅದನ್ನು ನ್ಯಾಯ ಕಟ್ಟೆಯ ಮೂಲಕ ಬಗೆಹರಿಸಿಕೊಳ್ಳಬೇಕು. ಅಂದರೆ ಹತ್ತು ಹನ್ನೆರಡು ಹಳ್ಳಿಗಳಿಗೆ ಒಬ್ಬ ಪುರುಸೇಕಾರಿ ಇರುತ್ತಾನೆ. ಅವನು ಗುರುವೂ ಆಗಿರುತ್ತಾನೆ. ಇವನ ಮೂಲಕವೇ ನ್ಯಾಯ ತೀರ್ಮಾನವಾಗಬೇಕು. ಈ ನ್ಯಾಯಮೂರ್ತಿಯೇ ದೇವರಿಗೆ ಅರಿಕೆ ಕೊಟ್ಟ ಹಣ ಮತ್ತು ಮದುವೆ ಸಂದರ್ಭದಲ್ಲಿ ಹಾಕಿದ ಹಣ ಎಲ್ಲವನ್ನು ಅವರ ದೇವರಿಗೆ ಒಪ್ಪಿಸುವ ಜವಾಬ್ದಾರಿ ಇವರಿಗಿರುತ್ತದೆ.

ನೀಲಗಾರರಲ್ಲಿ ಕುಲಗೋತ್ರ (ಬೆಡಗು)ಗಳು ಪ್ರಾಣಿ, ಪಶುಪಕ್ಷಿ ಗಿಡ, ಮರ, ಹೂಬಳ್ಳಿ ಮುಂತಾದವುಗಳ ಹೆಸರು ಹೊಂದಿವೆ. ಇದು ಕಲುಸಂಕೇತಾರಾಧನೆಯ ಪಳೆಯುಳಿಕೆ ಎಂದು ಹೇಳಬಹುದು. ಒಂದೊಂದು ಪ್ರಾಣಿ ಅಥವಾ ವಸ್ತುವಿನಿಂದ ತಮ್ಮ ಕುಲ ಗುರುತಿಸಿಕೊಳ್ಳಲು ರೂಢಿಸಿಕೊಂಡ ಸಂಕೇತವೇ ಕುಲಸಂಕೇತ. ಆ ಸಂಕೇತದ ಆರಾಧನೆಯೇ ಕುಲಸಂಕೇತದ ಆರಾಧನೆ.

ಉದಾ : ತಾವರೆ ಕುಲ, ಭೂಮಿ ಕುಲ, ಬೆಳ್ಳಿಕುಲ, ಕಣ್ಣುಕುಲ, ಆನೆಕುಲ ಇತ್ಯಾದಿ ಹೀಗೆ ನೀಲಗಾರರು ಈ ರೀತಿ ತಮ್ಮ ಬೆಡಗಿನ ಸಂಕೇತಗಳ ಬಗ್ಗೆ ಪೂಜ್ಯ ಭಾವನೆ ಇಟ್ಟುಕೊಂಡಿದ್ದು ಈ ಬೆಡಗು ಮೂಲದಿಂದ ತಾವು ಬಂದವರೆಂದು ಹೇಳಿಕೊಳ್ಳುತ್ತಾರೆ.

ಅದೇ ರೀತಿ ಗಂಗಡಿಕಾರರ ಒಕ್ಕಲಿನ ನೀಲಗಾರರಲ್ಲಿ ಸಹ ಪೆಟ್ಟಿಕುಲ, ಪಲ್ಲಿಕುಲ ಈ ರೀತಿ ಪ್ರಾಣಿ ಪಕ್ಷಿಗಳ ಹೆಸರುಗಳನ್ನು ಸಂಕೇತಿಸುವ ಗುರುತು ಇದಾಗಿರುತ್ತದೆ.

ನೀಲಗಾರ ಸಮುದಾಯದಲ್ಲಿ ಎಲ್ಲಾ ಜನವರ್ಗಗಳಲ್ಲಿರುವಂತೆ ಇವರೂ ಸಹ ಒಂದೇ ಕುಲದಲ್ಲಿ ಹೆಣ್ಣನ್ನು ತರುವ ಮತ್ತು ಕೊಡುವ ಪ್ರಕ್ರಿಯೆ ನಡೆಯುವುದಿಲ್ಲ. ಹಾಗೆಯೇ ಮಾದೇಶ್ವರ ಒಕ್ಕಲಿನ ನೀಲಗಾರರು ಮಂಟೇಸ್ವಾಮಿ ಒಕ್ಕಲಿನಲ್ಲಿ ಮದುವೆ ಆಗುವಂತಿಲ್ಲ ಮತ್ತೆ ಕೊಡುವಂತಿಲ್ಲ, ಮತ್ತೆ ದಾಸಪ್ಪಗಳ ಮನೆಯಲ್ಲಿ ಮಾದೇಶ್ವರ ಗುಡ್ಡರು ಹೆಣ್ಣು ತರುವಂತಿಲ್ಲ ಎಂಬುದು ಇವರ ನಿಷಿದ್ಧ. ಇನ್ನು ಉಳಿದಂತೆ ಪಾರ್ವತಿ ಗುಡ್ಡರಲ್ಲಿ ಮಾದೇಶ್ವರ ಒಕ್ಕಲಿನವರು ಹೆಣ್ಣು ಕೊಡುವ ಮತ್ತು ತರುವ ಪ್ರಕ್ರಿಯೆ ನಡೆಸಬಹುದು. ಹಾಗೆಯೇ ಮಂಟೇಸ್ವಾಮಿ, ಸಿದ್ಧಪ್ಪಾಜಿ ಒಕ್ಕಲಿನವರು ಪಾರ್ವತಿ ಗುಡ್ಡರ ಜೊತೆ ಸಂಬಂಧ ಬೆಳೆಸುವುದಿಲ್ಲ. ಇವೆಲ್ಲವೂ ನೀಲಗಾರರಲ್ಲಿ ನಿಷೇಧಿಸಲಾಗಿದೆ.

ಇವರಲ್ಲಿ ವಿಧವೆಯು ಬಳೆ, ಕುಂಕುಮ, ಮೂಗುಬಟ್ಟುಗಳನ್ನು ಧರಿಸುವುದಿಲ್ಲ. ವಿಧವೆಯು ಮತ್ತೊಬ್ಬ ಪುರುಷನ ಜೊತೆಗೆ ಮದುವೆ ಆಗಲು ಬರುವುದಿಲ್ಲ. ''ಆದರೆ ಹೆಳವರಲ್ಲಿ ಈ ಪದ್ಧತಿ ರೂಢಿಯಲ್ಲಿದೆ.''[೨]

ನೀಲಗಾರರಲ್ಲಿ ದೀಕ್ಷೆ ಕೊಡುವ ಪದ್ಧತಿ ಹಿಂದಿನಿಂದಲೂ ರೂಢಿಗತವಾಗಿ ಬೆಳೆದು ಬಂದಿದೆ. ಇವರಿಗೆ ದೀಕ್ಷೆ ಕೊಡುವ ಹಿಂದಿನ ದಿವಸ ಅವರ ನೆಂಟರಿಷ್ಟರನ್ನೆಲ್ಲಾ ಕರೆಯಿಸಿ, ಆ ದಿನ ದೀಕ್ಷೆ ಪಡೆಯುವ ವ್ಯಕ್ತಿಯ ಜೊತೆ ಒಂದೊಂದು ತುತ್ತನ್ನು

ತಿನ್ನುತ್ತಾರೆ. ಈ ಪದ್ಧತಿಯನ್ನು ಇವರು ತುತ್ಪಡಿಸುವುದು ಎನ್ನುತ್ತಾರೆ. ಇನ್ನು ಈ ದೀಕ್ಷಾ ವ್ಯಕ್ತಿ ಬದುಕಿರುವವರೆಗೂ ಯಾರ ಎಂಜಲನ್ನು ಮುಟ್ಟುವಂತಿಲ್ಲ ಯಾರ ಜೊತೆಯಲ್ಲಿಯೂ ಊಟ ಮಾಡುವಂತಿಲ್ಲ ಇದು ನೀಲಗಾರರ ನಿಯಮವಾಗಿದೆ.

ಇವರಲ್ಲಿ ಕುಟುಂಬದ ಹಿರಿಯ ಮಗನಿಗೇ ದೀಕ್ಷೆ ಕೊಡಬೇಕು ಎಂಬ ನಿಯಮವಿದೆ. ದೀಕ್ಷೆ ಕೊಡಿಸಿಕೊಳ್ಳುವ ವ್ಯಕ್ತಿಗೆ ಹದಿನೆಂಟು ವರ್ಷ ಕಡ್ಡಾಯವಾಗಿ ತುಂಬಿರಲೇಬೇಕು. ಈ ದೀಕ್ಷೆ ಪಡೆದ ವರ್ಷವೇ ಮದುವೆ ಮಾಡಿಕೊಳ್ಳಬೇಕು. ಹಾಗಿಲ್ಲದಿದ್ದರೆ ದೀಕ್ಷೆ ಪಡೆದ ಮೂರು ವರ್ಷದ ನಂತರ ಮದುವೆಯಾಗಬೇಕೆಂಬುದು ಇವರ ಪದ್ಧತಿ. ಮದುವೆ ಸಂದರ್ಭದಲ್ಲಿ ಬೇರೆ ಬೇರೆ ಒಕ್ಕಲಿನವರಿಗೆ ಒಂದೇ ಕಂಕಣವಾದರೆ ನೀಲಗಾರ ಸಮುದಾಯದವರಿಗೆ ಎರಡು ಕಂಕಣ ಕಡ್ಡಾಯ. ಮೊದಲ ಕಂಕಣ ದೀಕ್ಷಾ ಕಂಕಣ ತದನಂತರ ಮದುವೆ ಕಂಕಣವಾಗಿರುತ್ತದೆ.

ನೀಲಗಾರರಲ್ಲಿ ಮಗುವಿನ ನಾಮಕರಣ ಸಂದರ್ಭದಲ್ಲಿ ಅವರ ಗುರುಗಳೆನಿಕೊಂಡವರೇ ಬಂದು ಆ ಮಗುವಿಗೆ ಆಶೀರ್ವದಿಸಿ ಸಿದ್ದಪ್ಪಾಜಿ, ಮಂಟೇಸ್ವಾಮಿ, ಮಂಟೇದಯ್ಯ, ರಾಚಪ್ಪಾಜಿ ಮುಂತಾದ ಹೆಸರುಗಳಿಂದ ಮಾತ್ರ ನಾಮಕರಣ ಮಾಡಬೇಕು. ಹಾಗೆಯೇ ಇವರಲ್ಲಿ ಹೆಣ್ಣು ಋತುಮತಿಯಾದ ನಂತರ ಒಂದು ತಿಂಗಳು ಹೊರಗಡೆ ಹೋಗುವಂತಿಲ್ಲ ಮನೆಯಲ್ಲಿಯೇ ಪ್ರತ್ಯೇಕ ಕೋಣೆ (ಗುಳ್ಳು)ಯಲ್ಲಿಯೇ ೪೫ ದಿವಸ ಕಡ್ಡಾಯವಾಗಿ ಇರಲೇಬೇಕು.

ನೀಲಗಾರ ಸಮುದಾಯದಲ್ಲಿಯೂ ಸಹ ಮದುವೆ ಮುಂಚಿನ ದಿವಸಗಳಲ್ಲಿ ಅರಿಶಿಣ ನೀರು ಸ್ನಾನ ಮಾಡಿಸಿದ ಮೇಲೆ ಎಲ್ಲೂ ಹೊರಗಡೆ ಹೋಗುವಂತಿಲ್ಲ. ಒಂಟಿಯಾಗಿ ತಿರುಗಾಡುವಂತಿಲ್ಲ ಮತ್ತು ಒಬ್ಬನೇ ಮಲಗುವಂತಿಲ್ಲ. ಕಾರಣ ಅರಿಶಿನ ಮೈ ಇರುವಂತವರಿಗೆ ಸೋಂಕು ಪೀಡೆ ತಗಲುವುದು ಎಂಬುದು ಇವರ ನಂಬಿಕೆಯಾಗಿದೆ. ಹಾಗೆಯೇ ಇವರಲ್ಲಿ ಹೆಣ್ಣು ಮಗಳು ಋತುಮತಿಯಾಗದೆ ಮದುವೆಯಾದರೆ ತಾಳಿ ಮಾತ್ರ ಕಟ್ಟುತ್ತಾರೆ. ನಂತರ ಉಳಿದ ಕಾರ್ಯವನ್ನು ಮಾಡದೆ ಋತುಮತಿಯಾಗುವವರೆಗೆ ಅತ್ತೆ ಮಾವನ ಮನೆಯಲ್ಲಿಯೇ ಇರಬೇಕು. ನಂತರ ಋತುಮತಿಯಾದ ಮೇಲೆ ಮಾಮೂಲಿನಂತೆ ಮದುವೆ ಸಂಪ್ರದಾಯದಂತೆಯೇ ಮಾಡಬೇಕೆಂಬುದು ಇವರ ವಾದ. ಅದೇ ರೀತಿ ಇವರಲ್ಲಿ ಎರಡು ಮಕ್ಕಳಾದ ನಂತರ ಸೋದರ ಮಾವ ಸೊಲ್ಲು ಕೇಳಬಾರದೆಂಬುದು ಇವರಲ್ಲಿಯೂ, ವಿಧಿಸಿದೆ. ಅಂದರೆ ಆ ಮಗುವಿನ ಸೊಲ್ಲು ಕೇಳಬೇಕಾದರೆ ಏನಾದರೂ ಚಿನ್ನದ ಆಭರಣವನ್ನು ಕೊಟ್ಟು ನೋಡಬೇಕೆಂಬುದನ್ನು ಇವರಲ್ಲಿಯೂ ಕಾಣಬಹುದು.

ನೀಲಗಾರರಲ್ಲಿ ಯಾರಾದರೂ ಸಾವನ್ನಪ್ಪಿದರೆ ನೀಲಗಾರ ಪಂಗಡದವರೇ ನಿಂತು ಎಲ್ಲಾ ಕಾರ್ಯವನ್ನು ಮಾಡಬೇಕು ಎಂಬುದು ಇವರ ಪದ್ಧತಿ. ಸತ್ತ ನೀಲಗಾರನಲ್ಲಿರುವ ಎಲ್ಲಾ ಆಭರಣಗಳನ್ನು ಕಳಚಿ ನಂತರ ಹೂಳುತ್ತಾರೆ.

ಸತ್ತವರನ್ನು ಹುಗಿಯುವ ಮತ್ತು ಸುಡುವ ಎರಡೂ ಪದ್ಧತಿ ರೂಢಿಯಲ್ಲಿದೆ. ಮದುವೆ ಆಗಿ ಸತ್ತವರನ್ನು ಸುಡುತ್ತಾರೆ. ಮದುವೆ ಆಗದೆ ಸತ್ತವರನ್ನು ಹುಗಿಯುತ್ತಾರೆ ಮತ್ತು ಮದುವೆ ಆಗದೆ ಸತ್ತ ವ್ಯಕ್ತಿ ಜೊತೆಗೆ ಮರದ ಗೊಂಬೆ ಮಾಡಿ ಹುಗಿಯುತ್ತಾರೆ. ಅದೇ ರೀತಿ ಬಸುರಿ ಹೆಂಗಸು, ತೊನ್ನು ಇರುವ ವ್ಯಕ್ತಿಗಳನ್ನು ಸುಡುತ್ತಾರೆ, ಹುಗಿಯುವುದಿಲ್ಲ ಕಾರಣ ಮಳೆ

ಬೆಳೆ ಚೆನ್ನಾಗಿ ಆಗುವುದಿಲ್ಲವೆಂಬುದು ಇವರ ನಂಬಿಕೆ. ಸತ್ತ ದಿವಸ ಇವರಲ್ಲಿ ಮಾಂಸದ ಊಟ ಹಾಕಿಸಲೇಬೇಕು. ಸತ್ತವರನ್ನು ಬಿದಿರಿನ ಚಟ್ಟದ ಮೇಲೆ ಹೊತ್ತು ಸ್ಮಶಾನಕ್ಕೆ ಒಯ್ಯುತ್ತಾರೆ.

ಶುಭಕಾರ್ಯಕ್ಕೆ ಹೊರಟಾಗ ಮೂವರು ಕೂಡಿ ಹೋಗುವುದಿಲ್ಲ, ಬೆಕ್ಕು, ಕಾಗೆ ಅಡ್ಡ ಬಂದರೆ ಅಶುಭ ಖಾಲಿ ಕೊಡ, ನಾವಾಲಿಗ, ವಿಧವೆ ಎದುರಾದರೆ ಅಶುಭ, ಹೆಣ ಮುತ್ತೈದೆಯರು ಎದುರಾದರೆ ಶುಭ ಎಂದು ನಂಬುತ್ತಾರೆ. ಇವರಲ್ಲಿಯೂ ಅಮವಾಸ್ಯೆ ದಿವಸ ಸಾವನ್ನಪ್ಪಿದರೆ ಮನೆ ಬಿಡಬೇಕು, ಹಾಗೆಯೇ ತಿಥಿಯ ಸಂದರ್ಭದಲ್ಲಿ ಮಡಿಕೆ ಒಡೆಯುವ ಸಂಪ್ರದಾಯ ಇವರಲ್ಲಿ ನಿಷೇಧ.

ನೀಲಗಾರ ಸಮುದಾಯದವರೇ ಆದ ಮಾದಿಗ ಜನಾಂಗದ ನೀಲಗಾರರನ್ನು ದೀಕ್ಷೆಗೆ ಬಿಡುವಂತಿಲ್ಲ. ಹಾಗೆ ಇವರ ದೈವಗಳಾದ ಮಂಟೇಸ್ವಾಮಿ, ಸಿದ್ದಪ್ಪಾಜಿ, ರಾಚಪ್ಪಾಜಿಗಳಿಗೆ ಹಣ್ಣು ಕಾಯಿ ಒಡೆಯುವಂತಿಲ್ಲ ಇದು ಇವರಲ್ಲಿ ನಿಷೇಧ. ಇವರಲ್ಲಿ ಸೋಮುವಾರ, ಶುಕ್ರುವಾರ ಭಿಕ್ಷಾಟನೆಗೆ ಹೋಗಲೇಬೇಕು. ಈ ಎರಡೂ ದಿವಸಗಳಲ್ಲಿ ಮಾಂಸ ಮಡ್ಡಿ ತಿನ್ನುವಂತಿಲ್ಲ, ಹಾಗೆಯೇ ನೀಲಗಾರ ಸಮುದಾಯದವರೆಲ್ಲರೂ ಹಂದಿಮಾಂಸವನ್ನು ನಿಷೇಧಿಸಿದ್ದಾರೆ.

ಕೆಲವು ನಂಬಿಕೆಗಳು ಧಾರ್ಮಿಕ ಸ್ವರೂಪದವು ಆಗಿದ್ದರೂ ಆ ನಂಬಿಕೆಗಳಲ್ಲಿನ ಕ್ರಿಯೆ ಲೌಕಿಕವಾಗಿರುತ್ತದೆ. ಮೂಲತಃ ಲೌಕಿಕವಾದ ಒಂದು ಕ್ರಿಯೆಯನ್ನು ಸಮರ್ಪಕವಾಗಿ ಮಾಡಿಸುವುದಕ್ಕಾಗಿ ಅಥವಾ ನಿಷೇಧಿಸುವುದಕ್ಕಾಗಿ ಇಂತಹ ನಂಬಿಕೆಗಳು ಹುಟ್ಟಿಕೊಂಡಿರಬಹುದು.

ಉದಾ : ಕಾಲನ್ನು ತೊಳೆಯುವಾಗ ಹಿಮ್ಮಡಿ ಪೂರ್ತಿ ನೆನೆಯಬೇಕು, ಇಲ್ಲದಿದ್ದರೆ ಶನಿ ಹಿಡಿದುಕೊಳ್ಳುತ್ತದೆ.

ಇಲ್ಲಿ ಮುಖ್ಯವಾಗಿ ಕಾಲನ್ನು ಹಿಮ್ಮಡಿ ಸಹಿತ ಸರಿಯಾಗಿ ತೊಳೆದುಕೊಳ್ಳಬೇಕೆಂಬುದು ಶುಚಿತ್ವದ ಸಂಗತಿ ಆದರೆ ಬುದ್ಧಿ ಮಾತನ್ನು ಕೇಳದ ಜನರನ್ನು ಸರಿಯಾಗಿ ಕೇಳಲು ಈ ಹೆದರಿಕೆಗಳನ್ನು ಉಂಟು ಮಾಡಿರಬೇಕು. ''ಈ ದೃಷ್ಟಿಯಿಂದ ಜನಪದ ನಂಬಿಕೆಗಳು ಅನೇಕ ಬಾರಿ ನಿಷಿದ್ಧಗಳು ಆಗಿರುವುದನ್ನು ಗಮನಿಸಬಹುದು.''[೧೩]

ಇಲ್ಲಿ ಮುಖ್ಯವಾಗಿ ನೀಲಗಾರ ದೈವ ಮಂಟೇಸ್ವಾಮಿಗಳು ನಿರಾಕಾರ ವಸ್ತುಗಳ ಸಾಕಾರಮೂರ್ತಿ. ಇಲ್ಲಿ ಶುದ್ಧ - ಅಶುದ್ಧ ಅಥವಾ ಶಿಷ್ಟ-ಪರಿಶಿಷ್ಟ ಪರಿಕಲ್ಪನೆ ಹಿನ್ನೆಲೆಯಲ್ಲಿ ಪ್ರಧಾನ ಸಂಸ್ಕೃತಿಗಳ ಆಯ್ಕೆ ಶ್ರೇಷ್ಠ ವಸ್ತುಗಳ ಕಡೆ ವಾಲುತ್ತದೆ. ಆದರೆ ಮಂಟೇಸ್ವಾಮಿ ಇಡೀ ಕಾವ್ಯದಲ್ಲಿ ಯಾವ ಸಂಸ್ಕೃತಿ ತುಚ್ಛವೆಂದು ತಿರಸ್ಕಾರ ಮಾಡಿತ್ತೋ ಆ ವಸ್ತುಗಳ ಮೂಲಕವೇ ಒಂದು ಸಂಸ್ಕೃತಿಯನ್ನು ಕಟ್ಟಲು ಪ್ರಯತ್ನ ಮಾಡುತ್ತಾನೆ. ಅಂದರೆ ನಾವು ಯಾವುದನ್ನು ಪ್ರಧಾನ ಸಂಸ್ಕೃತಿ ಒತ್ತಡದ ಹಿನ್ನೆಲೆಯಲ್ಲಿ ಹೀನ-ತುಚ್ಛವೆಂದು ಕಡೆಗಣಿಸಿದ್ದೆವೊ ಅವುಗಳೇ ಈ ಪರಂಪರೆಯ ಲಾಂಛನವಾಗುವುದು. ಇದಕ್ಕೆ ಉದಾಹರಣೆಯಾಗಿ ಕಾವ್ಯವನ್ನಿಟ್ಟುಕೊಂಡು ನೋಡಬಹುದು. ಕಾವ್ಯದ ಮೊದಲ ಭಾಗ ಭೂಮಿಯ ಉಗಮ ಇತ್ಯಾದಿಗಳಿಗೆ ಸಂಬಂಧಿಸಿದ್ದು ಇಲ್ಲಿ ಆದಿಜಾಂಬವ ದೇವಮಾನವರಿಗಿಂತ ಹಿರಿಯವನಾಗುತ್ತಾನೆ, ಜಲಜಾಂಬವಂತ ಧರೆಗೆ ದೊಡ್ಡವರಿಂದ ಸಂಹರಣಗೊಳ್ಳುತ್ತಾನೆ. ಇಡೀ ಭೂಮಿ ಇವನ ಕೊಂದ ಶರೀರದಿಂದ ಹುಟ್ಟುತ್ತದೆ. ''ಕಂದಾ ನಿನ್ನ ರಕ್ತ ಜಿದ್ದ ಜಾಗಲೆಲ್ಲಾ

ಕೆಂಪು ಮಣ್ಣಾಗಲಿ, ಈಲಿ ಬಿದ್ದಿ ಜಾಗವೆಲ್ಲ ಕಪ್ಪು ಮಣ್ಣಾಗಲಿ, ತೊಳ್ಳ ಬಿದ್ದ ಜಾಗ ಕರುಳು ಮಣ್ಣಾಗಲಿ''[೧೪] (ರಾಚಶೆಟ್ಟಿ) ಎಂದು ಧರೆಗೆ ದೊಡ್ಡವರು ಜಲಜಾಂಬವಂತನಿಗೆ ಆಶೀರ್ವದಿಸುತ್ತಾರೆ. ನಂತರ ಅವನೇ ಆದಿ ಪರಾಶಕ್ತಿ ಎಂದು ನಾಮಕರಣವಾಗುತ್ತಾನೆ.

ಹೀಗಾಗಿ ಇವತ್ತಿಗೂ ಬೊಪ್ಪೇಗೌಡನ ಪುರದ ಕುರಿ ಕೊಟ್ಟಗ ಉರಿಗದ್ದುಗೆಯಾಗಿ, ಮಡಿವಾಳ ಮಾಚೀದೇವರು ಕತ್ತ ಕೊಟ್ಟಿಗೆಯಾಗಿ ಉಬ್ಬೆ ಒಲೆ ಚಂದ್ರಶಾಲೆಯಾಗಿ ಈಗಲೂ ಪೂಜೆಗೊಳ್ಳುತ್ತಿವೆ. ಅದೇ ರೀತಿ ನೀಲಗಾರರು ಹಣೆಗೆ ಧರಿಸುವ ಪವಿತ್ರವೆಂದು ಭಾವಿಸಿದ ಹಾಗೂ ನೀಲಗಾರರೆಂದು ಗುರುತಿಸುವ ಮಟ್ಟಿಕಪ್ಪು ಇವರ ತಿಲಕವಾಗಿದೆ. ಇಲ್ಲಿ ಬಸವಣ್ಣನವರು ಜಂಗಮ ದಾಸೋಹವನ್ನು ನಡೆಸಿ ಆ ಎಂಜಲು ಎಲೆಗಳನ್ನು ರಾಶಿ ರಾಶಿ ಹಾಕಿದ್ದರಂತೆ ಅವುಗಳೆಲ್ಲ ಕೊಳೆತು ಕಪ್ಪಾಗಿ ಹೋಗಿತ್ತಂತೆ. ಈ ಕೊಳೆತ ಕಪ್ಪೆ ನನ್ನ ಸಿಸುಮಕ್ಕಳಿಗೆ ಕಲಿಯುಗದಲ್ಲಿ ತಿಲಕವಾಗಲಿ ಎಂದು ಸ್ವೀಕರಿಸಿದರಂತೆ. ಆದ್ದರಿಂದ ಎಲ್ಲಾ ಪಂಗಡದ ನೀಲಗಾರರು ಇವತ್ತಿನ ಜಾಗತಿಕ ಸಂದರ್ಭದಲ್ಲಿಯೂ ಕಪ್ಪನ್ನು ಹಣೆಗೆ ಧರಿಸುವರು. ಈ ಕಪ್ಪನ್ನು ತಮ್ಮ ದೈವಕೊಟ್ಟ ಸಂಕೇತ, ಪ್ರಸಾದವೆಂದು ತಿಳಿದಿದ್ದಾರೆ. ಅದೇ ರೀತಿ ನೀಲಗಾರರು ತಮ್ಮ ಆಚರಣೆ ಸಂದರ್ಭದಲ್ಲಿ ತಪ್ಪದೇ ಈ ಕಪ್ಪು ಬಳಸುತ್ತಾರೆ. ಪೀಡೆ, ಗಾಳಿ ಇತ್ಯಾದಿಗಳನ್ನು ಬಿಡಿಸುವಾಗ ಅವರಿಗೆ ಕಪ್ಪು ಹಚ್ಚಿ ನಾಗಬೆತ್ತದಲ್ಲಿ ಹೊಡೆಯುವ ಪದ್ಧತಿ ಇಂದಿಗೂ ಇವರಲ್ಲಿ ಉಳಿದುಬಂದಿದೆ.

ಅಡಿಟಿಪ್ಪಣಿಗಳು

೧. ವೆಂಕಟೇಶ ಇಂದ್ವಾಡಿ ರಾ., ಮಂಟೇಸ್ವಾಮಿ ಪರಂಪರೆ, ೧೯೯೯, ಪು. ೨೨-೨೩.

೨. ಮ.ಸು.ಕೃಷ್ಣಮೂರ್ತಿ, ಸಿದ್ದ ಸಾಹಿತ್ಯ, ೧೯೮೯, ಪು. ೧೫೦.

೩. ಜೀ.ಶಂ. ಪರಮಶಿವಯ್ಯ, ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು, ೧೯೭೯, ಪು. ೧೩೨.

೪. ವೆಂಕಟೇಶ ಇಂದ್ವಾಡಿ ರಾ, ಮಂಟೇಸ್ವಾಮಿ ಪರಂಪರೆ, ೧೯೯೯, ಪು. ೮೨.

೫. ಬಾ.ರಾ. ಗೋಪಾಲ, ೧೯೯೩. ಪು. ೬.

೬. ಪದ್ಮಾಶೇಖರ್, ೧೯೮೯, ಪು. ೨೬೦.

೭. ಗೊ.ರು. ಚೆನ್ನಬಸಪ್ಪ ಸಂ: ಗ್ರಾಮಜ್ಯೋತಿ, ೧೯೭೯, ಪು. ೭೩.

೮. ಅಂಬಳಿಕೆ ಹಿರಿಯಣ್ಣ, ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ, ೧೯೯೯, ಪು. ೧೧೫

೯. ಚಂದ್ರಶೇಖರ ಕಂಬಾರ, (ಸಂ.) ಕನ್ನಡ ಜಾನಪದ ವಿಶ್ವಕೋಶ ಸಂ.೧, ೧೯೮೫. ಪು. ೮೨೭.

೧೦. ಹಿರಿಯಣ್ಣ ಅಂಬಳಿಕೆ, ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ, ೧೯೯೯, ಪು. ೧೧೮.

೧೧. ಅದೇ, ಪು. ೧೨೨.

೧೨. ಹರಿಲಾಲ್ ಕೆ. ಪವಾರ, ಕರ್ನಾಟಕದ ಹೆಳವರು ಒಂದು ಅಧ್ಯಯನ, ೧೯೯೫, ಪು. ೧೫೦.

೧೩. ವಿವೇಕರೈ.ಬಿ.ಎ., ೧೯೮೧, ಪು. ೧೭೩.

೧೪. ವೆಂಕಟೇಶ ಇಂದ್ವಾಡಿ ರಾ., ಮಂಟೇಸ್ವಾಮಿ ಪರಂಪರೆ, ೧೯೯೯.

ಅಧ್ಯಾಯ ೪

ಸಂಸ್ಕೃತಿ

೪ : ೧ ಆಚರಣೆಗಳು

ಮನುಷ್ಯ ಅಗೋಚರವಾದ ದೈವಶಕ್ತಿಗಳ ಪ್ರೀತ್ಯರ್ಥವಾಗಿ ನಡೆಸುವ ಮತಾಚಾರಗಳು ಮತ್ತು ಕರ್ಮ ವಿಧಿಗಳನ್ನು ಆಚರಣೆಗಳೆಂದು ಕರೆಯಲಾಗಿದೆ. ಇವು ವ್ಯಕ್ತಿಯ ಬಾಳಿನ ಅವಿಭಾಜ್ಯ ಸಂಗತಿಗಳಾಗಿ ಅವನ ಜೀವನವನ್ನು ರೂಪಿಸಿ, ಸಂಸ್ಕೃತಿಯನ್ನು ಪೋಷಿಸಿ, ನಾಗರೀಕತೆಯನ್ನು ಬೆಳೆಸುವಲ್ಲಿ ಆಚರಣೆಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ''ಮನುಕುಲದ ಶ್ರೇಯಸ್ಸಿಗಾಗಿ ಅತ್ಯವಶ್ಯವೆಂದು ಎಣಿಕೆಗೊಂಡಿರುವ ನಂಬಿಕೆಗಳೇ ಸಂಪ್ರದಾಯಗಳಾಗಿ ವಿಧಿ ನಿಷೇಧಗಳಾಗಿ ಉಪಾಸನೆಗಳಾಗಿ ಸಾಕಾರತೆ ಪಡೆಯುತ್ತವೆ.''[೧] ಇಂಥ ಆಚರಣೆಗಳಿಂದಲೇ ಸಂಪ್ರದಾಯಗಳು ಉಳಿದುಕೊಂಡು ಬಂದಿವೆ. ಭೌಗೋಳಿಕ ಹಾಗೂ ಸಾಂಸ್ಕೃತಿಕ ಪರಿಸರಗಳ ಹಿನ್ನೆಲೆಯಲ್ಲಿ ಆಯಾ ಜನರ ಮನೋಧರ್ಮವನ್ನವಲಂಬಿಸಿ ಸಂಪ್ರದಾಯಗಳು ಉಗಮಿಸಿ ಆಚರಣಾ ವಿಧಿಗಳಿಂದ ಅವು ಉಳಿದುಕೊಂಡಿವೆ. ಮಾನವನ ಬೌದ್ಧಿಕ, ಮಾನಸಿಕ ಹಾಗೂ ಶಾರೀರಕ ಗುಣಲಕ್ಷಣ ಕ್ರಿಯೆಗಳು ಸಾರ್ವತ್ರಿಕವಾಗಿ ಏಕರೂಪವಾದ್ದರಿಂದ ಒಂದೇ ಬಗೆಯ ಸಂಪ್ರದಾಯ ಆಚರಣೆಗಳು ಭಿನ್ನ ಭಿನ್ನ ಪ್ರದೇಶಗಳಲ್ಲಿ ಸ್ವತಂತ್ರವಾಗಿ ರೂಪುಗೊಳ್ಳಲು ಅವಕಾಶವುಂಟು. ಈ ಕಾರಣದಿಂದಲೇ ಬೇರೆ ಬೇರೆ ಪ್ರದೇಶದಲ್ಲಿ ಚಾಲ್ತಿಯಲ್ಲಿರುವ ಕೃಷಿ, ವಿವಾಹ ಸಂಬಂಧವಾದ ಹಾಗೂ ಮರಣೋತ್ತರ ಸಂಪ್ರದಾಯಾಚರಣೆಗಳಲ್ಲಿ ಸಾದೃಷ್ಯ ಮತ್ತು ವೈದೃಶ್ಯಗಳಿವೆ. ಮೌಲ್ಯಗಳು ಬದಲಾದಂತೆ ಸಂಪ್ರದಾಯ ಮತ್ತು ಆಚರಣೆಗಳು ವ್ಯತ್ಯಾಸವಾದರೂ ಅವು ಸಂಪೂರ್ಣ ಇಲ್ಲವಾಗುವುದಿಲ್ಲ. ಕೆಲವು ಆಚರಣೆಗಳು ಆಧುನಿಕತೆಯ ಜೀವನದ ಅತಿಗಳನ್ನು ಲೆಕ್ಕಿಸದೇ ಇನ್ನೂ ಜೀವಂತವಾಗಿವೆ. ಬೇರೆ ಜನವರ್ಗಗಳಿಗಿಂತ ಭಿನ್ನವಾದ ನೀಲಗಾರರ ಆಚರಣೆಗಳು ಕೂಡ ಇಂದಿಗೂ ಹೆಚ್ಚು ವ್ಯತ್ಯಾಸಗಳಿಲ್ಲದೆ ಉಳಿದಿವೆ.

ನೀಲಗಾರರ ಆಚರಣೆಗಳಲ್ಲಿ ಎರಡು ವಿಧಗಳನ್ನು ಗುರುತಿಸಲಾಗಿದೆ.

೧. ಜೀವನಾವರ್ತನ ಆಚರಣೆಗಳು

೨. ವಾರ್ಷಿಕಾಚರಣೆಗಳು

೪: ೧.೧ ಜೀವನಾವರ್ತನ ಆಚರಣೆಗಳು

ಮನುಷ್ಯ ಬದುಕಿನ ವಿವಿಧ ಘಟ್ಟಗಳನ್ನು ಅವಲಂಬಿಸಿ ಹುಟ್ಟಿಕೊಳ್ಳುವ ಆಚರಣೆಗಳು ಜೀವನಾವರ್ತನದ ಆಚರಣೆಗಳು. ಜನನ, ಋತುಮತಿ, ದೀಕ್ಷೆ, ಮದುವೆ, ಬಯಕೆಶಾಸ್ತ್ರ, ಸಾವು, ತಿಥಿ ಇತ್ಯಾದಿ ಸಂದರ್ಭಗಳಲ್ಲಿ ಅನುಸರಿಸಲಾಗುವ ಆಚರಣೆಗಳನ್ನು ಜೀವನಾವರ್ತನದ ಆಚರಣೆಗಳು ಎನ್ನುತ್ತಾರೆ. ಒಂದು ಗುಂಪಿನ ಜನ ಆಚರಿಸುವ ಈ ವಿಧಾನಗಳು ಒಂದೇ ತೆರನಾಗಿರುತ್ತವೆ.

ಕೆಲವು ವೇಳೆ ತಮ್ಮ ಸುತ್ತಲಿನ ಬಹು ಸಂಖ್ಯಾತ ಜನವರ್ಗದಿಂದ ಪ್ರಭಾವ ಪಡೆದು ಅಲ್ಪಸ್ವಲ್ಪ ವ್ಯತ್ಯಾಸ ಕಂಡುಬಂದರೂ ಅವುಗಳು ತಮ್ಮ ಮೂಲವನ್ನು ಹಾಗೆಯೇ ಉಳಿಸಿಕೊಂಡಿರುತ್ತವೆ. ನೀಲಗಾರರ ಜೀವನಾವರ್ತನ ಆಚರಣೆಗಳನ್ನು ವಿವರಿಸುವ ಮೊದಲು ಮೂಲಭೂತವಾದ ಅಂಶವೊಂದನ್ನು ಸ್ಪಷ್ಟಪಡಿಸಬೇಕಾದ ಅಗತ್ಯವಿದೆ.

ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರು ಜಾತ್ಯಾತೀತ ಸಮಾಜದ ನಿರ್ಮಾಣಕ್ಕೆ ತೊಡಗಿದಾಗ ಇದರಿಂದ ಪ್ರಭಾವಿತರಾದ ಶೂದ್ರಾತಿಶೂದ್ರರೆಲ್ಲರೂ ಲಿಂಗವಂತರಾಗಿ ಪರಿಣಮಿಸಿದ್ದರು. ವೀರಶೈವರೆನಿಸಿಕೊಂಡವರೆಲ್ಲರನ್ನೂ ಅನುಭವ ಮಂಟಪದ ಆವರಣದಲ್ಲಿ ಸಮಾನರಾಗಿ ನಡೆಸಿಕೊಂಡರೂ ಸಹ ಬಂಧುತ್ವ ಕೊಳು ಕೊಡೆಗಳ ವಿಚಾರದಲ್ಲಿ ಮಾತ್ರ ಪ್ರತಿಯೊಬ್ಬರೂ ತಂತಮ್ಮ ಮೂಲ ಕುಲದ ಆಚರಣೆಗಳನ್ನೇ ಮುಂದುವರಿಸಿಕೊಂಡು ಬಂದರು. ಈ ಬೆಳವಣಿಗೆಯು ಬಸವಣ್ಣನವರ ಜಾತ್ಯಾತೀತ ಸಮಾಜದ ರಚನೆಯ ಮೂಲ ಉದ್ದೇಶಕ್ಕೆ ಕೊಡಲಿಪೆಟ್ಟು ನೀಡಿತು. ಇದೇ ಪರಿಣಾಮ ನೀಲಗಾರ ಸಂಸ್ಕೃತಿಯಲ್ಲಿಯೂ ಕಂಡುಬರುತ್ತದೆ. ಮೂಲತಃ ಸಮಾಜದ ಹತ್ತು ಹಲವು ಜನಾಂಗಗಳು ಒಂದಾಗಿರುವ ನೀಲಗಾರ ಸಂಸ್ಕೃತಿಯಲ್ಲಿ ಪ್ರತಿಯೊಂದು ಜನವರ್ಗದವರು ತಮ್ಮದೇ ಆದ ಜೀವನಾವರ್ತನದ ಆಚರಣೆಗಳನ್ನು ಪ್ರತ್ಯೇಕವಾಗಿಯೇ ಅನುಸರಿಸಿಕೊಂಡು ಬರುತ್ತಿದ್ದಾರೆ. ಹರಿಜನರು, ಕುರುಬರು, ವಿಶ್ವಕರ್ಮರು, ಮಡಿವಾಳರು, ಉಪ್ಪಲಿಗ ಶೆಟ್ಟರು, ಕುಂಬಾರರು, ಗಾಣಿಗರು, ಗಂಗಡಿ ಕಾರ ಒಕ್ಕಲಿಗರು, ಲಿಂಗಾಯಿತರು, ಅರಸರು ಹೀಗೆ ನೀಲಗಾರ ಸಂಸ್ಕೃತಿಯಲ್ಲಿ ಬೆರೆತಿರುವ ಎಲ್ಲಾ ಜನಾಂಗಗಳೂ ತಮ್ಮ ಜಾತಿಗೆ ಸೇರಿದ ಧಾರ್ಮಿಕ ಆಚರಣೆಗಳನ್ನು ಹಾಗೇ ಉಳಿಸಿ ಬೆಳೆಸಿಕೊಂಡು ಬಂದಿರುವ ಕಾರಣ ನೀಲಗಾರರ ಜೀವನಾವರ್ತನ ಆಚರಣೆಗಳಲ್ಲಿ ಏಕತೆ ಗೋಚರಿಸುವುದಿಲ್ಲ. ಆದಾಗ್ಯೂ ಸಂಸ್ಕೃತಿಯ ಎಳೆಯೊಂದು ಸಮಾನವಾಗಿ ಈ ಎಲ್ಲಾ ಜನವರ್ಗಗಳನ್ನು ಒಂದೇ ಸೂತ್ರದಲ್ಲಿ ಪೋಣಿಸುವ ಕಾರಣದಿಂದಾಗಿ ಸಾಧಾರಣವಾಗಿ ಅನುಸರಿಸಲಾಗುವ ಕೆಲವಾರು ಅಂಶಗಳನ್ನು ಗುರುತಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

೧. ಜನನ

ಸಂತಾನೋತ್ಪತ್ತಿ ವಿವಾಹದ ಮೂಲ ಉದ್ದೇಶವಾಗಿದೆ. ಜನರ ಬದುಕಿನಲ್ಲಿ ಇದಕ್ಕೆ ಅತ್ಯಂತ ಮಹತ್ವವಿದೆ. ಪ್ರತಿಯೊಬ್ಬರೂ ತಮ್ಮ ಸಂತಾನ ಅನುವಂಶಿಕ ರೋಗಗಳಿಲ್ಲದೇ ಆರೋಗ್ಯವಾಗಿರಬೇಕೆಂದು ಆಸೆಪಡುವುದು ಸಹಜವಾಗಿದೆ. ಒಬ್ಬರನ್ನೊಬ್ಬರು ಅರಿತು ಬಾಳುವ ಬದುಕಿನ ಫಲವೇ ಸಂತಾನದ ಉಗಮಕ್ಕೆ ಕಾರಣವಾಗಿದೆ. ಹೆಣ್ಣು ಗರ್ಭಧರಿಸುತ್ತಾಳೆ ದಿನದಿಂದ ದಿನಕ್ಕೆ ಅವಳ ಶರೀರ ಬದಲಾಗುತ್ತಾ ಹೋಗುತ್ತದೆ. ಈ ಸಂದರ್ಭದಲ್ಲಿ ಅನೇಕ ಸಂಪ್ರದಾಯಗಳು, ನಿಷೇಧಗಳು, ಆಚರಣೆಗಳು ಜರುಗುತ್ತವೆ. ಇವುಗಳು ಜನಾಂಗದಿಂದ ಜನಾಂಗಕ್ಕೆ ಭಿನ್ನವಾಗಿರುತ್ತವೆ. ಜೀವನದ ಮುಖ್ಯ ಘಟ್ಟವಾದ ಜನನ ವೇಳೆಯಲ್ಲಿ ತನಗೆ ತೀರ ಹತ್ತಿರದವರು ಜೊತೆಗೆ ಸೇರಿ ಹಿಂದಿನಿಂದ ನಡೆದು ಬಂದ ಪದ್ಧತಿಯಂತೆ ನಡೆಸಲು ಇಷ್ಟಪಡುತ್ತಾರೆ. ನೀಲಗಾರ ಸಮುದಾಯದವರು ಈ ಸಂದರ್ಭದಲ್ಲಿ ಅನೇಕ ಬಗೆಯ ಆಚರಣೆ ಸಂಪ್ರದಾಯಗಳನ್ನು ಇಟ್ಟುಕೊಂಡಿರುವುದನ್ನು ಕಾಣಬಹುದು.

ನೀಲಗಾರ ಸಮುದಾಯದಲ್ಲಿ ಗಂಡು ಮಗು ಜನಿಸಿದರೆ ಅವರು ಸಂತೋಷಪಡುತ್ತಾರೆ. ಮಗು ಹುಟ್ಟಿದ ಐದು ದಿನಗಳವರೆಗೆ (ತೂಮೆ) ಮೀಸಲು ಎಂದು ಆಚರಿಸುತ್ತಾರೆ. ''ಈ ಕ್ರಮ ಕೊರಗರಲ್ಲಿಯೂ ಇರುವುದು ಕಂಡುಬಂದಿದೆ. ಕೊರಗರಲ್ಲಿ ಮಗು ಹುಟ್ಟಿದ ಏಳು ದಿನಗಳವರೆಗೆ ಅಮೆ ಎಂದು ಕರೆಯುತ್ತಾರೆ.''[5] ನೀಲಗಾರರಲ್ಲಿ ಮತ್ತೆ ಐದು ದಿನಕ್ಕೆ ಬಳಕೆ ಎಂದು ತೆಗೆಯುತ್ತಾರೆ. ಅಂದರೆ ಅಂಗಳ ಶುದ್ದಿ ಮಾಡಿ ಬಟ್ಟೆ ಬರೆ ಒಗೆದು ಐದು ಅಥವಾ ಒಂಬತ್ತು ದಿವಸಕ್ಕೆ ನೀಲಗಾರರನ್ನು ಕರೆಯಿಸಿ ಅವರಿಗೆ ಅಂದು ಸಿಹಿ ಊಟ, ಬಗೆ ಬಗೆ ತಿಂಡಿ ಮಾಡಿ ಎಲೆ ಮೇಲೆ ಊಟ ಬಡಿಸಿ ಅವರು ಊಟ ಮಾಡುತ್ತಾರೆ. ಮಗು ಹುಟ್ಟಿದ ಐದು ದಿನದ ನಂತರ ಎಲ್ಲಾ ಪಂಗಡದವರು ಆ ದಿನದ ಸಮಾರಂಭಕ್ಕೆ ಬರುತ್ತಾರೆ. ನಂತರ ಮಗುವಿಗೆ ನಾಮಕರಣ ಮಾಡುತ್ತಾರೆ. ಇವರಲ್ಲಿ ಸೂಲಗಿತ್ತಿಯು ಮಗು ಹೆರಿಗೆಯ ಸಂದರ್ಭದಲ್ಲಿ ಪ್ರಮುಖ ಪಾತ್ರ ವಹಿಸುತ್ತಾಳೆ.

ನಾಮಕರಣಶಾಸ್ತ್ರ

ಮಗುವಿಗೆ ನಾಮಕರಣವನ್ನು ಮಾಡುವ ಸಂದರ್ಭದಲ್ಲಿ ಪಂಗಡದವರೆಲ್ಲರೂ ಸೇರಬೇಕು. ''ಹೆಳವ ಜನಾಂಗಗಳಲ್ಲಿ ನಾಮಕರಣ ಶಾಸ್ತ್ರವನ್ನು ಸೋದರ ಅತ್ತೆಯಿಂದಲೋ ಅಥವಾ ಸೋದರ ಮಾವನಿಂದ ಮಾಡಿಸುವ ಪದ್ಧತಿ ರೂಢಿಯಲ್ಲಿದೆ.''[6] ಆದರೆ ನೀಲಗಾರರಲ್ಲಿ ಆ ರೀತಿಯ ವ್ಯವಸ್ಥೆ ಕಂಡುಬರುವುದಿಲ್ಲ. ಅಂದು ಎಲ್ಲಾ ಪಂಗಡದ ನೀಲಗಾರರು ಸೇರಿ ಅಂದರೆ ಚುಂಚನಗಿರಿ ಬೈರವೇಶ್ವರ ಜೋಗಿಗಳು, ತಿರುಪತಿ ವೆಂಕಟರಮಣನ ದಾಸಪ್ಪನ ಒಕ್ಕಲಿನವರು, ಪಾರ್ವತಿ ಗುಡ್ಡರು, ಮಂಟೇಸ್ವಾಮಿ ಗುಡ್ಡಗಳು ಎಲ್ಲಾ ಪಂಗಡದವರು ಆದಿನ ಮಗುವಿಗೆ ಮತ್ತು ತಾಯಿಗೆ ಭಸ್ಮ ಧರಿಸುತ್ತಾರೆ. ನಂತರ ನೀಲಗಾರ ಪಂಗಡದವರು ಮಾದೇಶ್ವರ ಒಕ್ಕಲಾದರೆ ಮಾದೇವು, ಪುಟ್ಟಮಾದು, ಮರಮಾದು, ಮಾದೇಸ್ವಾಮಿ, ಮಾದೇವ ಶಿವಮಾದು ಎಂದು ಹೆಸರಿಟ್ಟು ಜೋ ಜೋ ಮಾದೇಸ್ವಾಮಿ ಎಂದು ಮೂರು ಬಾರಿ ಹೇಳಿ ಆ ಮಗುವಿನ ಕೈಹಿಡಿದು ಆಶೀರ್ವಾದ ಮಾಡುತ್ತಾರೆ. ಮಂಟೇಸ್ವಾಮಿ ಒಕ್ಕಲಾದರೆ ಸಿದ್ದಪ್ಪಾಜಿ, ರಾಚಪ್ಪಾಜಿ, ಮಂಟೇಸ್ವಾಮಿ ಎಂದು ನಾಮಾಂಕಿತವನ್ನು ಇಡುತ್ತಾರೆ. ಅದೇ ರೀತಿ ಹೆಣ್ಣು ಮಕ್ಕಳಿಗೆ ದೊಡ್ಡಮ್ಮತಾಯಿ, ಚೆನ್ನಾಜಮ್ಮ ಎಂದು ನಾಮಕರಣ ಮಾಡುತ್ತಾರೆ. ಈ ತರಹದ ನಾಮಕರಣವನ್ನು ಇಟ್ಟು ಹನ್ನೆರಡು, ಹದಿಮೂರು, ಹದಿನಾಲ್ಕು ವರ್ಷ ವಯಸ್ಸಿನವರೆಗೆ ಅವರು ಮನೆಯಲ್ಲಿ ಸಾಕುತ್ತಾರೆ. ನಂತರ ಮಗುವಿಗೆ ಲಿಂಗಧಾರಣೆ ಮಾಡುತ್ತಾರೆ. ಏಕೆಂದರೆ ಸಣ್ಣ ವಯಸ್ಸಿನಲ್ಲಿ ಲಿಂಗಧಾರಣೆ ಮಾಡಿಬಿಟ್ಟರೆ ಆ ಮಗುವಿಗೆ ಗೊತ್ತಿಲ್ಲದೆ ಬುದ್ಧಿವಿವೇಕ ಇಲ್ಲದೆ ಬೇರೆಯವರ ಎಂಜಲು ತಿನ್ನುತ್ತಾನೆ. ಲಿಂಗಧಾರಣೆ ಆದ ಮೇಲೆ ಆ ವ್ಯಕ್ತಿ ಕುಲ ಹೊತ್ತಿಕೊಂಡಂತಹ ವ್ಯಕ್ತಿ, ದೇವರಿಗೆ ಮೀಸಲಾದಂತಹ ವ್ಯಕ್ತಿ, ಮೈಲಿಗೆಯಾಗಲಿ ಎಂಜಲಾಗಲಿ ಸೋಕುವಂತಿಲ್ಲ. ಆದ್ದರಿಂದ ಹದಿನಾಲ್ಕು ವರ್ಷ ತುಂಬಿದ ನಂತರವೇ ಆ ವ್ಯಕ್ತಿಗೆ ಲಿಂಗಧಾರಣೆ ಮಾಡುತ್ತಾರೆ. ನಂತರ ಆ ವ್ಯಕ್ತಿ ಪ್ರತ್ಯೇಕ ಊಟ ಮಾಡಬೇಕು. ಈ ರೀತಿಯ ಆಚರಣೆ ಸಂಪ್ರದಾಯಗಳು ಕುಟುಂಬದ ಮೊದಲನೆಯ ಮಗನಿಗೆ ಮಾತ್ರ ಅನ್ವಯಿಸುತ್ತವೆ. ನಂತರ ಐದು ಜನ ಗಂಡು ಮಕ್ಕಳು ಹುಟ್ಟಲಿ ಅಥವಾ ಹತ್ತು ಜನ ಮಕ್ಕಳು ಹುಟ್ಟಲಿ ಈ ತರಹದ ಯಾವುದೇ ಆಚರಣೆ ಮಾಡುವಂತಿಲ್ಲ. ನಂತರ ಹೆಣ್ಣು ಮಗು ಜನಿಸಿದರೆ ನೀಲಗಾರರಲ್ಲಿ ಲಿಂಗಧಾರಣೆ ಮಾಡುವ ಪದ್ಧತಿ ಇಲ್ಲ. ''ಆದರೆ ಗೊರವರಲ್ಲಿ ವಿಶೇಷವಾಗಿ ಹೆಣ್ಣು ಮಕ್ಕಳಿಗೆ ಲಿಂಗಧಾರಣೆ ಮಾಡಿ ಗೊರವಿಯರಾಗಿ ಮಾಡುತ್ತಾರೆ.''[7] ಬಹುಶಃ ಈ ಒಂದು ಜನವರ್ಗದಲ್ಲಿ ಮಾತ್ರ ಈ ಪದ್ಧತಿ ಇರುವುದನ್ನು ಕಾಣಬಹುದು.

೨. ಋತುಮತಿ

ಹೆಣ್ಣು ಯೌವನಾವಸ್ಥೆಗೆ ಕಾಲಿಡುವ ಪೂರ್ವದಲ್ಲಿ ಋತುಮತಿ ಆಗುವುದು ನಿಸರ್ಗದ ನಿಯಮ. ಹೆಣ್ಣು ಮೈನೆರೆಯುವುದನ್ನು ಋತುವಾಗುವುದು, ದೊಡ್ಡವಳಾಗುವುದು, ವಯಸ್ಸಿಗೆ ಬರುವುದು ಎಂದೆಲ್ಲಾ ಕರೆಯಲಾಗುತ್ತದೆ.

ನೀಲಗಾರರಲ್ಲಿ ಹೆಣ್ಣು ಮಗಳು ಋತುಮತಿಯಾದಾಗ ಅವಳನ್ನು ಒಂದು ಪ್ರತ್ಯೇಕ ಕೋಣೆಯಲ್ಲಿರಿಸುತ್ತಾರೆ. ಇದನ್ನು ಗುಡ್ಲು ಕೂಡುವುದು ಎಂದೂ ಸಹ ಕರೆಯುತ್ತಾರೆ. ದೊಡ್ಡವಳಾದ ಹೆಣ್ಣು ಮಗಳು ಒಂದು ತಿಂಗಳವರೆಗೆ ಎಲ್ಲಿಯೂ ಹೊರಗಡೆ ಹೋಗುವಂತಿಲ್ಲ. ಆ ಪ್ರತ್ಯೇಕ ಗುಡ್ಲಿನಲ್ಲಿಯೇ ಇದ್ದು ಪ್ರತ್ಯೇಕ ತಟ್ಟೆಯಲ್ಲಿಯೇ ಊಟ ತಿಂಡಿ ತಿನ್ನಬೇಕು. ''ಮ್ಯಾಸನಾಯಕರಲ್ಲಿ ಋತುಮತಿಯಾದ ಹೆಣ್ಣು ಒಂಬತ್ತರಿಂದ ಹದಿನಾಲ್ಕು ದಿವಸಗಳವರೆಗೆ ಹೊರಗಡೆ ಹೋಗುವಂತಿಲ್ಲ. ಅವಳು ಕಲ್ಲುಬಂಡೆ ಮೇಲೆ ಊಟ ತಿನ್ನಲೇಬೇಕು''* ಬೇರೆ ಜನಾಂಗಗಳಲ್ಲಿ ಕೊಡುವಂತಹ ಆಹಾರವನ್ನೇ ಇವರೂ ಕೂಡ ಋತುಮತಿಯಾದ ಹೆಣ್ಣಿಗೆ ನೀಡುತ್ತಾರೆ. ಹಿಂದೆ ಈ ರೀತಿ ಆದ ಹೆಣ್ಣು ಮಗಳಿಗೆ ರಾಗಿಮುದ್ದೆ, ರಾಗಿಹಿಟ್ಟು, ಹುರುಳಿಕಾಳು ಸಾರು ಕೊಡುತ್ತಿದ್ದರು. ಈ ಸಮುದಾಯದಲ್ಲಿ ವಿಶೇಷವಾಗಿ ಹೆಣ್ಣು ಋತುಮತಿಯಾದದ್ದು ಕಂಡ ತಕ್ಷಣ ಹಾಲು ಕುಡಿಸುತ್ತಾರೆ, ಮೊಸರನ್ನ ಕೊಡುತ್ತಾರೆ. ಹಾಗೆಯೇ ಹಾಲು ಅನ್ನ ಕೊಡುತ್ತಾರೆ. ಹೀಗೆ ಗುಡ್ಲಿನಲ್ಲಿ ಐದು ದಿವಸ ಇರಲೇಬೇಕು. ನಂತರ ಅಲ್ಲಿಂದ ಸ್ನಾನ ಮಡಿ ಮಾಡಿಸಿಕೊಂಡು ಪ್ರತ್ಯೇಕವಾದ ಕೋಣೆಯಲ್ಲಿ ಇರಿಸುತ್ತಾರೆ. ಹೆಣ್ಣಿನ ಸೋದರಮಾವ ಈ ಗುಡ್ಲುಗೆ ಸೊಪ್ಪನ್ನು ತಂದು ಹಾಕುತ್ತಾನೆ. ಇದೇ ರೀತಿ ಬೇರೆ ಬೇರೆ ಜನವರ್ಗಗಳಲ್ಲಿಯೂ ಈ ತರಹದ ಆಚರಣೆ ಜಾರಿಯಲ್ಲಿದೆ. ಗುಡ್ಲು ಕೂಡುವ ಹೊತ್ತಿಗೆ ಆ ಹೆಣ್ಣಿಗೆ ಹದಿನೆಂಟು ವರ್ಷ ತುಂಬಿರಲೇಬೇಕು. ನಂತರ ಹನ್ನೆರಡು ದಿವಸಕ್ಕೆ ಸೋಗಲು ತೆಗೆದುಕೊಂಡು ಬರುತ್ತಾರೆ. ಮತ್ತೆ ಹನ್ನೆರಡು ದಿವಸಕ್ಕೆ ಮುಟ್ಟಿನಿಂದ ಹೊರತೆಗೆದು ಸೂತಕವನ್ನು ಕಳೆದುಕೊಳ್ಳುತ್ತಾರೆ.

ಹೀಗೆ ನೀಲಗಾರರಲ್ಲಿ ಹಿಂದಿನಿಂದಲೂ ಕಟ್ಟುನಿಟ್ಟಾಗಿ ಈ ಪದ್ಧತಿ ಬೆಳೆದು ಬಂದಿದೆ. ಅದೇ ರೀತಿ ಗೊರವರಲ್ಲಿ ಕೂಡ. ಈ ರೀತಿಯ ಪದ್ಧತಿಯನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ.

ನೀಲಗಾರರಲ್ಲಿ ಮದುವೆ ಪೂರ್ವ ಋತುಮತಿ ಆದರೆ ಒಂದು ಪದ್ಧತಿ. ಮದುವೆ ಆದ ನಂತರ ಋತುಮತಿಯಾದರೆ ಮತ್ತೊಂದು ಪದ್ಧತಿ ಜಾರಿಯಲ್ಲಿದೆ.

ಅ. ಮದುವೆಯ ಪೂರ್ವದಲ್ಲಿಯೇ ಹೆಣ್ಣು ಮಗಳು ಋತುಮತಿಯಾದರೆ ನೀಲಗಾರರು ಮದುವೆಗೆ ಮೂರ್‍ನಾಲ್ಕು ದಿವಸಗಳ ಮುಂಚಿತವಾಗಿಯೇ ತಮ್ಮ ಮನೆಯಲ್ಲಿ ಒಂದು ವಿಶಿಷ್ಟ ಕಾರ್ಯಕ್ರಮ ಇಟ್ಟುಕೊಳ್ಳುತ್ತಾರೆ.

ಋತುಮತಿ ಆದವಳಿಗೆ ಮುತ್ತೈದೆಯರು ಸ್ನಾನ ಮಡಿ ಮಾಡಿಸಿ ಹಸಿರು ಬಳೆ ಹಸಿರು ಸೀರೆಯನ್ನು ತೊಡಿಸಿ ಮಣೆಯ ಮೇಲೆ ಕುಳ್ಳಿರಿಸುತ್ತಾರೆ. ಉಡಿ ಅಕ್ಕಿಯನ್ನು ಹಾಕಿ ಮುಖಕ್ಕೆ ಅರಿಶಿಣ ಕುಂಕುಮ ಹಚ್ಚಿ ಆರತಿ ಬೆಳಗುತ್ತಾರೆ. ಅಂದು ಹೆಣ್ಣಿನವರ ಮನೆಯಲ್ಲಿ ಸಿಹಿ ಅಡಿಗೆಯನ್ನು ಮಾಡಿ ಬಂಧು ಬಳಗದವರಿಗೆ ಊಟಕ್ಕೆ ಹಾಕುತ್ತಾರೆ. ಹೆಣ್ಣಿಗೂ ಸಿಹಿ ಊಟವನ್ನು ಕೊಡುತ್ತಾರೆ.

ಮದುವೆಯಾಗಿ ಕರೆದುಕೊಂಡು ಹೋದ ಮೇಲೆ ಮೂರು ತಿಂಗಳವರೆಗೆ ಗಂಡ ಹೆಂಡತಿಯರನ್ನು ದೂರವಾಗಿಯೇ ಇಡುತ್ತಾರೆ. ಮೂರು ತಿಂಗಳು ಮುಗಿದ ಬಳಿಕ ಗಂಡ ಹೆಂಡಿರನ್ನು ಒಟ್ಟಿಗೆ ಕೂಡಿಸುವ ಶುಭಕಾರ್ಯ ಮಾಡುತ್ತಾರೆ.

ಆ. ಬಾಲ್ಯವಿವಾಹ ಪದ್ಧತಿ ಈ ಸಮುದಾಯದಲ್ಲಿಯೂ ಪ್ರಚಲಿತದಲ್ಲಿ ಇತ್ತು. ಮದುವೆ ಆದ ಮೇಲೆ ಹೆಣ್ಣು ಋತುಮತಿಯಾದರೆ ಅಗಸನು ಗಂಡಿನವರ ಮನೆಗೆ ಸುದ್ದಿ ಮುಟ್ಟಿಸುವನು. ನಾಲ್ಕು ದಿವಸಗಳವರೆಗೆ ಋತುವಾದವಳ ಮನೆಯಲ್ಲಿ ಸೋಬಾನೆ ಕಾರ್ಯಗಳು ನಡೆಯುತ್ತವೆ. ಮದುವೆಯಲ್ಲಿ ನಡೆಸಿದ ಆಚರಣೆಯಂತೆಯೇ ನಡೆಸಬೇಕು.

ಐದನೇ ದಿವಸ ಅವಳನ್ನು ಮನೆಯೊಳಗೆ ಕರೆದುಕೊಳ್ಳುತ್ತಾರೆ. ಅಂದು ಆಕೆಯ ಹಳೆಯ ಬಟ್ಟೆ ಮತ್ತು ಚಪ್ಪರದ ಸೊಪ್ಪುಗಳನ್ನು ಸೋದರಮಾವನು ದೂರ ಒಯ್ದು ಸುಡುವನು. ''ಇದೇ ರೀತಿಯ ಆಚರಣೆ ಪದ್ಧತಿಯನ್ನು ಮ್ಯಾಸನಾಯಕರಲ್ಲಿಯೂ ಕಾಣಬಹುದು.''[೬] ಮೈ ನೆರೆದ ಹೆಣ್ಣನ್ನು ಅಂಗಳದಲ್ಲಿ ಚಾಪೆಯ ಮೇಲೆ ಕುಳ್ಳಿರಿಸಿ ಮುತ್ತೈದೆಯರು ಸೋಬಾನೆ ಪದಗಳನ್ನು ಹೇಳುತ್ತಾ ಅವಳ ಮುಖಕ್ಕೆ ಅರಿಶಿಣ ಕುಂಕುಮ ಹಚ್ಚುವರು. ಆಮೇಲೆ ಹೆಣ್ಣಿಗೆ ಸ್ನಾನ ಮಾಡಿಸುತ್ತಾರೆ. ಅಲ್ಲಿಂದ ಕರೆದುಕೊಂಡು ಬಂದು ಆ ಹೆಣ್ಣಿಗೆ ಹೊಸಬಟ್ಟೆ ಒಡವೆಗಳಿಂದ ಅಲಂಕರಿಸುತ್ತಾರೆ. ಆ ಬಳಿಕ ಹೊರಗಡೆ ಕರೆತಂದು ಮಣೆಯ ಮೇಲೆ ಕುಳ್ಳಿರಿಸುತ್ತಾರೆ. ಮನೆಗೆ ಬಂದಿರುವ ಗಂಡಿನವರು ಹೆಣ್ಣಿಗೆ ಹೊಸಬಟ್ಟೆಗಳನ್ನು ಕೊಡುತ್ತಾರೆ. ಬಂಧು ಬಳಗದವರು ತಂದ ಉಡುಗೊರೆಯನ್ನು ಹೆಣ್ಣಿಗೆ ಕೊಡುತ್ತಾರೆ. ಮೈನೆರೆದ ಸುದ್ದಿಯನ್ನು ತಂದ ಮಡಿವಾಳನಿಗೆ ಗಂಡಿನವರು ಹೊಸಬಟ್ಟೆ ಕೊಡುತ್ತಾರೆ. ಋತುಮತಿ ಆದ ಸುದ್ದಿ ಮುಟ್ಟಿಸಿದ್ದಕ್ಕೆ ಆ ಊರಿನ ಬೇರೆಯವರು ಅವನಿಗೆ ಒಂದೊಂದು ಸೇರು ಅಕ್ಕಿ ಕೊಡುತ್ತಾರೆ. ಈ ಕೊಡು ಕೊಳು ಮುಗಿದ ನಂತರ ಅಲ್ಲಿಗೆ ಬಂದ ಬಂಧು ಬಳಗದವರೆಲ್ಲರೂ ಊಟ ಮಾಡುತ್ತಾರೆ.

೩. ದೀಕ್ಷೆ

ಮಂಟೇಸ್ವಾಮಿ ಗುಡ್ಡ ಎನಿಸಿಕೊಳ್ಳಬೇಕಾದರೆ ಪ್ರಥಮತಃ ದೀಕ್ಷೆಗೆ ಒಳಪಡಲೇಬೇಕು. ದೀಕ್ಷೆಯಾಗದವರು ಈ ಸಂಸ್ಕೃತಿಯ ಕಕ್ಷೆಯಲ್ಲಿ ಸೇರುವಂತಿಲ್ಲ. ಸಾಮಾನ್ಯವಾಗಿ ಕುಟುಂಬದ ಹಿರಿಯ ಮಗ ದೀಕ್ಷೆಗೆ ಅರ್ಹನಾಗಿರುತ್ತಾನೆ. ದೀಕ್ಷೆಗೆ ಒಳಗಾಗಬೇಕಾದರೆ ಕಡ್ಡಾಯವಾಗಿ ಹದಿನೆಂಟು ವರ್ಷ ಆಗಿರಲೇಬೇಕು. ಪುರುಸಾನಿ ಎಂದು ಕರೆಯುವ ಹಿರಿಯ ಗುಡ್ಡ ಈ ಆಚರಣೆಯನ್ನು ನೆರವೇರಿಸುತ್ತಾನೆ. ಅಂದರೆ ಏಳು ಅಥವಾ ಹತ್ತು ಹಳ್ಳಿಗಳಿಗೆ ಒಬ್ಬರಂತೆ ಯಜಮಾನರನ್ನಾಗಿ (ಪುರುಸಾನಿ) ನೇಮಿಸಿರುತ್ತಾರೆ. ಹಿರಿಯ ಮಗನಿಲ್ಲದಿದ್ದರೆ ಕಿರಿಯ ಮಗನಿಗಾದರೂ ದೀಕ್ಷೆಗೆ ಒಳಪಡಿಸಬಹುದು. ಮೊದಲು ಗುರುವಿಗೆ ಅರಿಕೆ ಮಾಡಿಕೊಳ್ಳಬೇಕು. ಅವರು ದೀಕ್ಷೆ ನೀಡಲು ಪ್ರಶಸ್ತವಾದ ಮುಹೂರ್ತವನ್ನು ನಿಗಧಿಪಡಿಸುತ್ತಾರೆ. ದೀಕ್ಷೆಗೆಂದು ಗೊತ್ತಾದ ದಿನ ಮನೆ ಮಠ ಗುಡಿಸಿ ಸಾರಿಸಿ ಮಿಂದು ಮಡಿ ಉಟ್ಟು ಸಾತ್ವಿಕ ಆಹಾರವನ್ನು ಸೇವಿಸಬೇಕು. ನೀಲಗಾರರು ಮಾಂಸಹಾರಿಗಳಾದರೂ ಸಹ ದೀಕ್ಷೆ ಪಡೆಯುವ ದಿನದಂದು ಮನೆಯವರೆಲ್ಲರೂ ಸಸ್ಯಹಾರವನ್ನು ಮಾತ್ರವೇ ಸೇವಿಸಬೇಕು ನಂತರ ಮುಂದಿನ ದಿವಸ 'ಮರೂಟ' ಎಂದು ಮಾಡುತ್ತಾರೆ. ಆ ದಿನ ಮಾಂಸದ ಊಟ ಮಾಡಲೇಬೇಕು.

ದೀಕ್ಷೆ ಬಿಡುವವನಿಗೆ ಮೊದಲು ಮಂಡೆ ಚವರ ಮಾಡಿಸುತ್ತಾರೆ. ನಂತರ ಸ್ನಾನ ಮಾಡಿಸಿ ಮಟ್ಟಿಕಪ್ಪು ಮತ್ತು ದೂಳ್ತವನ್ನು ಮೈಗೆಲ್ಲಾ ಲೇಪಿಸಿ ವಿಕಾರಗೊಳಿಸುತ್ತಾರೆ. ನಂತರ ಗುರು ಕಂಕಣ ಕಟ್ಟುತ್ತಾರೆ. ಕೈಗೆ ನಾಗಬೆತ್ತ ಜಾಗಟೆಯನ್ನು ಕೊಟ್ಟು ಭಿಕ್ಷೆ ಮಾಡಲು ಕಳುಹಿಸುತ್ತಾರೆ. ಅವರು ಎಷ್ಟೇ ಶ್ರೀಮಂತರಾದರೂ ದೀಕ್ಷೆ ಪಡೆದ ಮೇಲೆ ಅದೇ ವಿಕಾರರೂಪ ಹೊತ್ತು ಭಿಕ್ಷೆ ಮಾಡಲೇಬೇಕು. ಇದು ದೀಕ್ಷೆಯ ದಿನ ಮಾತ್ರವಷ್ಟೇ ಅಲ್ಲ ಹಬ್ಬ- ಹರಿದಿನಗಳಲ್ಲೂ ಅವರು ಅವರವರ ಊರುಗಳಲ್ಲಿ ಭಿಕ್ಷೆ ಮಾಡಬೇಕು. ಈ ಭಿಕ್ಷೆಯಿಂದ ತಂದ ಧಾನ್ಯವನ್ನು ಅಡುಗೆ ಮಾಡಿ ಸಂಬಂಧಿಕರು ನೆಂಟರಿಷ್ಟರಿಗೆ ಬಡಿಸುತ್ತಾರೆ. ಈ ಅಡುಗೆಗೆ ಭಂಗಿ ಸೊಪ್ಪನ್ನು ಬೆರಸಿ ''ಭಂಗಿಮಾಂಸ'' ಮಾಡಿ ದೀಕ್ಷಿತನಾದ ಸಿಸುಮಗನಿಗೆ ತಿನ್ನಿಸುವ ಕ್ರಮ ಜಾತ್ರೆಗಳಲ್ಲಿ ಅಲ್ಲಲ್ಲಿ ನಡೆಯುತ್ತದೆ.

ದೀಕ್ಷಾ ಆಚರಣೆಗಳು ಸಾಮಾನ್ಯವಾಗಿ ಚಿಕ್ಕಲೂರು-ಕಪ್ಪಡಿಗಳಲ್ಲಿ ನಡೆಯುತ್ತವೆ. ಕೆಲವರು ಮನೆಯಲ್ಲಿಯೂ ಈ ಆಚರಣೆಗಳನ್ನು ಮಾಡಿಸುತ್ತಾರೆ. ಹೀಗೆ ದೀಕ್ಷಿತನಾದವನು ತನ್ನ ಸಂಸಾರದಿಂದ ಪ್ರತ್ಯೇಕಗೊಂಡು ದೈವಕ್ಕೂ ಮನೆಯವರಿಗೂ ನಡುವಿನ ಕೊಂಡಿಯಾಗಿ ಮನೆಯ ಆಚರಣೆಗಳನ್ನು ನಡೆಸಿಕೊಡುತ್ತಾನೆ. ಪ್ರತಿ ಸೋಮುವಾರ ಶುಕ್ರವಾರ ಮನೆಯಲ್ಲಿ ಗದ್ದುಗೆ ಪೂಜೆ ಮಾಡುವ ಹಕ್ಕು ಇವನಿಗೆ ಇರತ್ತದೆ. ಮನೆಯವರು ಈ ಗುಡ್ಡನಿಗೆ ಪ್ರತ್ಯೇಕ ಮಣ್ಣಿನ ಬಟ್ಟಲನ್ನಿಟ್ಟು, ಎಂಜಲು ಸೋಕದ ಹಾಗೆ ನೋಡಿಕೊಳ್ಳುತ್ತಾರೆ. ಗುಡ್ಡನು ಸತ್ತಾಗ ಸಾವಿನ ಆಚರಣೆಯನ್ನು ಹಿರಿಯ ಗುಡ್ಡರು ನೆರವೇರಿಸುತ್ತಾರೆಯೇ ಹೊರತು ಮನೆಯವರ ಪಾತ್ರ ದೀಕ್ಷೆ ಕೊಟ್ಟ ನಂತರ ಗೌಣವಾಗುತ್ತದೆ. ನೀಲಗಾರ ದೀಕ್ಷೆ ಪಡೆಯುವವರಿಗೆ ಜಾತಿ ಕುಲ ಮುಖ್ಯವಾಗಿರುವುದಿಲ್ಲ. ಹರಿಜನರು, ಕುರುಬರು, ವಿಶ್ವಕರ್ಮರು, ಮಡಿವಾಳರು, ಉಪ್ಪಲಿಗಶೆಟ್ಟರು, ಕುಂಬಾರರು, ಗಾಣಿಗರು, ಗಂಗಡಕಾರ ಒಕ್ಕಲಿಗರು, ಲಿಂಗಾಯಿತರು, ಅರಸರು, ಇವಿಷ್ಟು ಜನವರ್ಗ ಇಂದು ನೀಲಗಾರ ದೀಕ್ಷೆಯನ್ನು ಪಡೆದು ಮಂಟೇಸ್ವಾಮಿ ಒಕ್ಕಲಿನವರಾಗಿದ್ದಾರೆ. ನೀಲಗಾರ ದೀಕ್ಷೆ ಪಡೆದವರು ಕತ್ತಿನಲ್ಲಿ ಒಂದು ಗುರು ಮಣಿ ಕಟ್ಟಿರುತ್ತಾರೆ. ಮಾದೇಶ್ವರನಿಗೆ ನಡೆದುಕೊಳ್ಳುವ ದೇವರ ಗುಡ್ಡರು ನೆಟ್ಟಗೆ ಮಣಿ ಹಾಕಿಕೊಂಡರೆ, ಮಾದಪ್ಪನ ಗುಡ್ಡಗಳು ಅದೇ ರೀತಿ ಅಡ್ಡಡ್ಡ ಹಾಕಿಕೊಂಡರೆ ಮಂಟೇಸ್ವಾಮಿ ನೀಲಗಾರರು ಎಂಬುದು ತಿಳಿಯುತ್ತದೆ. ಇಂದಿಗೂ ಇದೇ ರೀತಿಯ ಸಂಪ್ರದಾಯ ಅವರಲ್ಲಿ ಕಂಡುಬರುತ್ತದೆ. ದೀಕ್ಷೆ ಪಡೆದವರು ಮದುವೆಯಾಗಿ ಸಂಸಾರವನ್ನು ನಡೆಸಬಹುದು.

''ನೀಲಗಾರರ ಆಚರಣೆಯಲ್ಲಿ ಗಂಡು ಮಕ್ಕಳಿಗೆ ದೀಕ್ಷೆ ಕೊಟ್ಟರೆ ಗೊರವರ ದೀಕ್ಷೆ ಸಂದರ್ಭದಲ್ಲಿ ಹೆಣ್ಣು ಮಗಳಿಗೆ ದೀಕ್ಷೆ ಕೊಡುವ ಪದ್ಧತಿ ಬಹುಶಃ ಈ ಜನಾಂಗದಲ್ಲಿ ಮಾತ್ರ ಇರಬಹುದು.''[4] ಸಿದ್ದಪ್ಪಾಜಿಯವರಿಗೆ ಕಾವ್ಯದಲ್ಲಿ ಯಾವ ರೀತಿ ದೀಕ್ಷೆಯಾಗುವ ಸಂದರ್ಭದಲ್ಲಿ ಕೆಲವು ಉಪದೇಶಗಳನ್ನು ಮಾಡುತ್ತಾರೆ, ಅದೇ ರೀತಿ ನೀಲಗಾರರಲ್ಲಿಯೂ ಈ ರೀತಿ ಉಪದೇಶ ಮಾಡುವರು.

''ಓಂ ನಮೋ ಹರಹರ

ಸಕಲ ಕಂಟಕ ನಿವಾರ್ಯ

ಪರಂಜ್ಯೋತಿ ಪ್ರಕಾಶ
ಜಗಳ ಆಡೋತಾಕೆ ಹೋಗಬೇಡ
ಕೆಟ್ಟ ಬೋಗಳ ಬೈಬೇಡ
ನೀನು ಭಿಕ್ಷೆ ಮಾಡಿದ್ದರಲ್ಲಿ
ಒಬ್ಬನಿಗೆ ಅನ್ನಹಾಕು''[೮]

ಹೀಗೆ ಹೇಳಿ ಮುಂಗೈಗೆ ಜೋಳಿಗೆ, ಕಂಕುಳಿಗೆ ಬೆತ್ತಕೊಟ್ಟು ಆಗಲೇ ನಾಲ್ಕು ಮನೆ ಭಿಕ್ಷೆ ಮಾಡಿಸುತ್ತಾರೆ. ಗುರುಗಳು ಕಂಕಣ ಬಿಚ್ಚಿ ಹೋಗಪ್ಪ ಮನೆಗೆ ಎನ್ನುವಾಗ ಒಂದು ಪ್ರಶ್ನೆ ಕೇಳುತ್ತಾರೆ.

''ಇವನು ಯಾರ ಮಗ?''

''ಇದುವರೆಗೆ ನಮ್ಮ ಮಗ ಇನ್ನು ಮೇಲೆ ಸ್ವಾಮಿಯ ಮಗ'' ಎಂದು ಅದಕ್ಕೆ ಉತ್ತರವಾಗಿ ಹೇಳಿ ವಟುವಿನ ತಂದೆ ತಾಯಿಗಳು ಕರೆ ತರುವರು. ಊರಿಗೆ ಮರಳಿದ ಮೇಲೆ ''ರಾಚಪ್ಪಯ್ಯನ ಭಿಕ್ಷವೋ'' ಎಂದು ನಾಲ್ಕು ಜನ ನೀಲಗಾರರು ಕೂಡಿ ಭಿಕ್ಷೆ ಮಾಡಿಸುವರು.

ಇವರ ಸಮುದಾಯದಲ್ಲಿ ದೀಕ್ಷೆ ನಡೆದ ವರ್ಷವೇ ಮದುವೆ ನೆರವೇರಿಸಬೇಕು. ಇಲ್ಲವಾದರೆ ಈ ಆಚರಣೆ ನಡೆದ ಮೂರು ವರ್ಷದ ನಂತರ ಮದುವೆ ಆಗಬೇಕು ಎಂಬ ನಿಯಮ ಇವರಲ್ಲಿ ಇಂದಿಗೂ ರೂಢಿಯಲ್ಲಿದೆ.

೪. ಮದುವೆ

ಮದುವೆ ಮಾನವ ಸಮಾಜದ ಬಹುಮುಖ್ಯ ಘಟನೆ. ಬದುಕಿನ ಮಹತ್ವದ ಘಟ್ಟ. ವ್ಯಕ್ತಿಯ ಬದುಕಿನಲ್ಲಿ ಒಮ್ಮೆ ಮಾತ್ರ ನಡೆಯುವ ಮಹತ್ವದ ಸಮಾರಂಭ. ಬದುಕಿಗೆ ಒಂದು ಭದ್ರತೆಯನ್ನು, ಜವಾಬ್ದಾರಿಯನ್ನು ತಂದು ಜೀವನೋಪಾಯವನ್ನು ಇದು ತುಂಬುತ್ತದೆ. ಸಂತಾನೋತ್ಪತ್ತಿಯೇ ಮೂಲ ಉದ್ದೇಶವಾಗಿರುವ ಈ ಕಾರ್ಯದಲ್ಲಿ ಗಂಡು ಹೆಣ್ಣುಗಳನ್ನು ಒಂದುಗೂಡಿಸಿ ಸಾಮಾಜಿಕ ಒಪ್ಪಿಗೆ ನೀಡಲಾಗುವುದು. ಬಹುತೇಕ ಎಲ್ಲಾ ಸಂಸ್ಕೃತಿಯಲ್ಲಿಯೂ ಮದುವೆಯ ಉದ್ದೇಶ ಒಂದೇ ಆಗಿದ್ದರೂ ಅದಕ್ಕೆ ಸಂಬಂಧಿಸಿದ ಆಚರಣೆ ಮಾತ್ರ ವಿಭಿನ್ನ ಸ್ವರೂಪಗಳಿಂದ ಕೂಡಿರುತ್ತದೆ. ನಿರ್ದಿಷ್ಟ ಸಂಸ್ಕೃತಿಯೊಂದರಲ್ಲಿ ಜರುಗುವ ಮದುವೆ ಆಚರಣೆಯ ಅಧ್ಯಯನವೆಂದರೆ ಆ ಸಂಸ್ಕೃತಿಯ ಅಧ್ಯಯನವೇ ಆಗಿರುತ್ತದೆ. ಏಕೆಂದರೆ ಮದುವೆ ಆಯಾಯ ಜನಾಂಗದ ಸಾಂಸ್ಕೃತಿಕ ಕ್ರಿಯೆಯಾಗಿದ್ದು ಇಡೀ ಸಮುದಾಯವೇ ಆ ಕ್ರಿಯೆಯಲ್ಲಿ ಸಂಪೂರ್ಣವಾಗಿ ತನ್ನನ್ನು ತೊಡಗಿಸಿಕೊಳ್ಳುತ್ತವೆ.

ಮದುವೆಯ ಬಗೆಗೆ ಈಗಾಗಲೇ ಅನೇಕ ತಜ್ಞರು ವಿವರಣೆಗಳನ್ನು ಕೊಟ್ಟಿದ್ದಾರೆ. ''ಎಲ್ಲಾ ಮಾನವ ಸಮಾಜಗಳಲ್ಲೂ ಮದುವೆಯ ಉದ್ದೇಶ ಒಂದೇ ಆಗಿದ್ದರೂ ಅದನ್ನು ನಡೆಸುವ ರೀತಿ ಮಾತ್ರ ಒಂದೇ ತೆರನಾಗಿಲ್ಲ. ಸಮಾಜ ನೆಲೆಗೊಂಡ ಪರಿಸರ, ಬದುಕಿನ ಸ್ಥಿತಿಗತಿ, ಧರ್ಮ, ನಂಬಿಕೆ ಇವೇ ಮುಂತಾದ ಅಂಶಗಳಿಗನುಗುಣವಾಗಿ ಮದುವೆ ಪದ್ಧತಿ ರೂಪು ಪಡೆದಿದೆ.

ಕಾಲದ ಮಹಿಮೆಯಿಂದಾಗಿ ಬದುಕಿನ ಇನ್ನಿತರ ಮಹತ್ವದ ಘಟ್ಟಗಳ ಅನುಸರಣೆಯಲ್ಲಿ ಅನೇಕ ಬದಲಾವಣೆಗಳು ಉಂಟಾದಂತೆ ಮದುವೆ ಪದ್ಧತಿಯ ಹಲವು ಬದಲಾವಣೆಗಳು ಸಾಧಿತವಾಗಿವೆ. ನಿರ್ದಿಷ್ಟ ಸಮಾಜವೊಂದರಲ್ಲಿ ಜರುಗುವ ಮದುವೆ ಆಚರಣೆಯೆ ಅಧ್ಯಯನವೆಂದರೆ ಆ ಸಮಾಜದ ಸಂಸ್ಕೃತಿಯ ಅಧ್ಯಯನವೇ ಸರಿ. ಕಾರಣ ಮದುವೆ ಕೂಡ ಆ ಸಮಾಜದ ಒಂದು ಸಾಂಸ್ಕೃತಿಕ ಕ್ರಿಯೆ. ಇಡೀ ಸಮಾಜ ಅಥವಾ ಆ ಸಮಾಜದ ಬಹುಪಾಲು ಸಮೂಹ ಆ ಕ್ರಿಯೆಯಲ್ಲಿ ಬಾಗಿಯಾಗುವುದನ್ನು ಕಾಣಬಹುದು.''

ಬಹಳಷ್ಟು ಜನಾಂಗಗಳಲ್ಲಿರುವಂತೆ ನೀಲಗಾರರಲ್ಲಿ ಮದುವೆ ಸಂಪ್ರದಾಯಕ್ಕೆ ವಿಶೇಷ ಮಹತ್ವವಿದೆ. ಇದೊಂದು ದೇವತಾಕಾರ್ಯ ಎಂಬ ಕಲ್ಪನೆಯನ್ನು ಕೂಡ ಹೊಂದಿದ್ದಾರೆ. ಈ ಕಾರಣದಿಂದ ಇವರ ಮದುವೆಗಳಲ್ಲಿ ಅನೇಕ ವಿಧಿಶಾಸ್ತ್ರ ವಿಧಾನಗಳು ಹೇರಳವಾಗಿ ಆಚರಣೆಯಲ್ಲಿವೆ. ವಿವಾಹಿತ ವ್ಯಕ್ತಿಗೆ ಬಹಳ ಗೌರವ, ಮರ್ಯಾದೆ ಇರುತ್ತದೆ.

ಋತುಮತಿಯಾಗುವ ಮುನ್ನ ಮದುವೆಯಾಗುವುದು ನಿಷಿದ್ಧವಲ್ಲ. ಆದರೆ ಇತ್ತೀಚೆಗೆ ಮೇಲ್ವರ್ಗದ ಜನರ ರೀತಿಯನ್ನು ಅನುಸರಿಸಿ ಈಗ ಋತುಪೂರ್ವ ಮದುವೆ ನಡೆಯುವುದಿಲ್ಲ. ಋತಮತಿ ಆದ ನಂತರ ನಡೆಯುವ ಮದುವೆಯಲ್ಲಿ ಎಲ್ಲಾ ಆಚರಣೆಗಳು ಚಾಚು ತಪ್ಪದೆ ಇವರಲ್ಲಿ ನಡೆಯುತ್ತವೆ. ಈಗ ಕೆಲವು ಆಚರಣೆಗಳು ಮೈಸೂರು, ಮಂಡ್ಯ ಭಾಗಗಳ ಕೆಲವು ಭಾಗಗಳಲ್ಲಿ ಹಲವು ಆಚರಣಾ ಪದ್ಧತಿಗಳು ಕೈ ಬಿಟ್ಟು ಹೋಗಿವೆ. ಈಗ ಎಷ್ಟು ಸರಳವಾಗಿದೆ ಎಂದರೆ ಮಾಲೆ ಹಾಕುವುದರ ಮೂಲಕ ಮದುವೆ ಮುಗಿದೇ ಹೋಗುತ್ತದೆ. ಇಂತಹ ವಿವಾಹಗಳನ್ನು ಸಮಾಜ ಒಪ್ಪಿಕೊಂಡಿದೆ. ಮಹಿಳೆಯೊಬ್ಬಳು ಇಷ್ಟಪಟ್ಟಲ್ಲಿ ಕೊನೆಯವರೆಗೂ ಅವಿವಾಹಿತೆಯಾಗಿಯೇ ಉಳಿಯಬಹುದು.

ನೀಲಗಾರರ ಅನೇಕ ಆಚರಣೆ ಪದ್ಧತಿಗಳು ಹಿಂದೂ ಸಮಾಜದ ಪದ್ಧತಿಗಳಿಂದ ಪ್ರಭಾವಿತಗೊಂಡಿರುವುದು ಎದ್ದು ಕಾಣುತ್ತದೆ. ತಾವು ಹಿಂದೂ ಧರ್ಮಾವಲಂಬಿಗಳೆಂದು ಹೇಳಿಕೊಂಡರೂ ತಮ್ಮ ವಿಧಿ ನಿಷೇಧ ರೂಢಿ ಪದ್ಧತಿ ಹಾಗೂ ಸಂಪ್ರದಾಯಗಳನ್ನು ಸ್ವಲ್ಪ ಭಿನ್ನವಾಗಿ ಆಚರಿಸುವುದು ಕಂಡುಬರುತ್ತದೆ. ವಿವಾಹಕ್ಕೆ ಸಂಬಂಧಪಟ್ಟ ವಿಧಿ ವಿಧಾನಗಳು ಬೇರೆ ಬೇರೆ ಸಮಾಜಗಳಲ್ಲಿ ಬೇರೆ ಬೇರೆ ತೆರನಾಗಿವೆ. ನೀಲಗಾರರು ತಮ್ಮ ರೂಢಿ ಪದ್ಧತಿ ಸಂಪ್ರದಾಯ ಮೊದಲಾದವುಗಳನ್ನು ಪೂರ್ವದಿಂದಲೂ ಬಹುಮಟ್ಟಿಗೆ ಪ್ರತ್ಯೇಕವಾಗಿಯೇ ಉಳಿಸಿಕೊಂಡು ಬಂದರೂ ಅಲ್ಲಲ್ಲಿ ಸ್ವಲ್ಪ ವ್ಯತ್ಯಾಸವನ್ನು ಕಾಣಬಹುದಾಗಿದೆ.

ನೀಲಗಾರರಲ್ಲಿ ಅನೇಕ ಜಾತಿಯ ಒಕ್ಕಲುಗಳಿವೆ. ತಾತ್ವಿಕವಾಗಿ ಎಲ್ಲಾ ಒಕ್ಕಲುಗಳು ಒಂದೇ ಬಗೆಯಾಗಿದ್ದರೂ ಅವು ವೃತ್ತಿ ವೈವಿಧ್ಯಗಳಿಂದ ಆರ್ಥಿಕ ಮತ್ತು ಸಾಮಾಜಿಕವಾಗಿ ಭಿನ್ನವಾಗಿ ಬೆಳೆದು ಬಂದವುಗಳಾಗಿವೆ. ಆದರೆ ಈ ಒಕ್ಕಲುಗಳಲ್ಲಿ ಪ್ರಚಲಿತವಿರುವ ಪ್ರತಿಯೊಂದು ವಿಧಿ ವಿಧಾನಗಳು ಹೆಚ್ಚು ಕಡಿಮೆ ಒಂದೇ ಬಗೆಯಾಗಿವೆ. ಬಹುಪಾಲು ಜನವರ್ಗಗಳಲ್ಲಿ ಕಂಡುಬರುವ ಹಿಂದಿನ ಭಿನ್ನ ಭಿನ್ನ ಮದುವೆ ಪದ್ಧತಿಗಳು ಇವರಲ್ಲಿಯೂ ಸ್ವಲ್ಪ ವ್ಯತ್ಯಾಸದಿಂದ ಕಂಡುಬರುತ್ತದೆ. ಈಗಲೂ ಅಪರೂಪಕ್ಕೆಂಬಂತೆ ಆಚರಣೆಯಲ್ಲಿವೆ. ಅಳಿಯ ಸಂತಾನ, ಬಾಲ್ಯವಿವಾಹ, ಏಕಪತ್ನಿತ್ವ ಇವುಗಳಲ್ಲಿ ಏಕಪತ್ನಿತ್ವ ಹೆಚ್ಚು ಪ್ರಚಲಿತವಿದ್ದು, ಈಗ ಹೆಚ್ಚು ಪ್ರಚಲಿತದಲ್ಲಿರುವ ಶಾಸ್ತ್ರೋಕ್ತ ಮದುವೆ ಸಂಪ್ರದಾಯದಂತೆ ನಡೆಯುತ್ತವೆ. ಇವರಲ್ಲಿ ಕೂಡಾವಳಿ ವಿನಿಮಯ ವಿವಾಹ ನಾದಿನಿ ವಿವಾಹ ಗೌಣವಾಗಿರುವುದನ್ನು ಗಮನಿಸಬಹುದು.

ಅಳಿಯ ಸಂತಾನ

ಗಂಡು ಸಂತಾನವಿಲ್ಲದ ವ್ಯಕ್ತಿಗಳು ತಮ್ಮ ಹೆಣ್ಣು ಮಕ್ಕಳಿಗೆ ಯೋಗ್ಯ ವರನನ್ನು ಹುಡುಕಿ ಆತನನ್ನು ಅಳಿಯ ಸಂತಾನವೆಂದು ಕರೆಯುತ್ತಾರೆ. ಕೆಲವು ವೇಳೆ ಒಬ್ಬಳಿಗಿಂತ ಹೆಚ್ಚು ಹೆಣ್ಣು ಮಕ್ಕಳಿದ್ದರೆ ಆಗ ಒಬ್ಬಳಿಗೆ ಮಾತ್ರ ತನ್ನ ಮನೆಯಲ್ಲಿಟ್ಟುಕೊಂಡು ಉಳಿದ ಹೆಣ್ಣು ಮಕ್ಕಳನ್ನು ಬೇರೆಡೆಗೆ ಮದುವೆ ಮಾಡಿ ಕೊಡುತ್ತಾರೆ. ತನ್ನ ತಂದೆಯ ನಂತರ ಆಸ್ತಿಯ ಹಕ್ಕು ಆ ಅಳಿಯನಿಗೆ ಬರುತ್ತದೆ. ಅನಂತರ ಅವರ ಮಕ್ಕಳಿಗೆ ಬರುತ್ತದೆ. ಹೀಗೆ ಮಾಡುವುದರಿಂದ ಆಸ್ತಿ ಬೇರೆಯವರ ಕೈವಶವಾಗದೇ ತನ್ನ ರಕ್ತ ಸಂಬಂಧಿಕರಲ್ಲಿಯೇ ಉಳಿಯಲು ಸಾಧ್ಯವಾಯಿತು. ಈಗಲೂ ಈ ರೀತಿಯ ಮದುವೆಗಳು ಇನ್ನೂ ಅನೇಕ ಸಮುದಾಯಗಳಲ್ಲಿ ಪ್ರಚಲಿತದಲ್ಲಿವೆ. ಮದುವೆಯ ಎಲ್ಲಾ ಸಂಪ್ರದಾಯಗಳು ಶಾಸ್ತ್ರೋಕ್ತ ಮದುವೆಯಲ್ಲಿ ನಡೆಯುವಂತೆ ನಡೆಯುತ್ತದೆ. ಇಲ್ಲಿ ಗಂಡು, ಹೆಣ್ಣಿನ ಮನೆಯಲ್ಲಿಯೇ ಉಳಿಯಬೇಕಾಗುತ್ತದೆ. ಈ ಮದುವೆ ಹಿರಿಯ ಅಥವಾ ಕಿರಿಯ ಮಕ್ಕಳಿಗೆ ಮಾಡುತ್ತಿರುವುದು ಹೆಚ್ಚು ರೂಢಿಯಲ್ಲಿದೆ. ಮದ್ಯದಲ್ಲಿರುವವರನ್ನು ಹೊರಗೆ ಕೊಡುವುದೇ ಹೆಚ್ಚು. ವರನು ಸೋದರಿಕೆ ಸಂಬಂಧ ಇಲ್ಲವೇ ದೂರದ ಸಂಬಂಧಿಯಾಗುತ್ತಾನೆ. ಕಂಡು ಕೇಳಿ ಬಳಕೆಯಿದ್ದ ವ್ಯಕ್ತಿಗಳನ್ನು ಮಾತ್ರ ಮನೆ ಅಳಿಯನ ಸ್ಥಾನಕ್ಕೆ ಆರಿಸುತ್ತಾರೆ. ಹೀಗೆ ಗೊತ್ತಿದ್ದ ವ್ಯಕ್ತಿಯಾದರೆ ಆ ಮನೆ ಯಶಸ್ಸು ಹೊಂದುತ್ತದೆ ಎನ್ನುವ ನಂಬಿಕೆಯೇ ಇದಕ್ಕೆ ಕಾರಣವಾಗಿದೆ.

ಬಾಲ್ಯ ವಿವಾಹ ಪದ್ಧತಿ

ಈ ವಿವಾಹ ಪದ್ಧತಿಯು ನೀಲಗಾರರಲ್ಲಿ ಹಿಂದೆ ಇತ್ತು. ಸಾಮಾನ್ಯವಾಗಿ ಕೆಲವು ಜನಾಂಗಗಳಲ್ಲಿ ಈ ಒಂದು ಪದ್ಧತಿ ಈಗಲೂ ಇರುವುದನ್ನು ಕಾಣಬಹುದು. ಅಕ್ಷರಸ್ಥರಲ್ಲದ ಬಡವರ್ಗದಲ್ಲಿ ಮಾತ್ರ ನಡೆಯುವುದು ಎಂಬ ಅಂಶ ಕ್ಷೇತ್ರಕಾರ್ಯದಿಂದ ತಿಳಿದು ಬಂದಿದೆ. ಇದಕ್ಕೆ ಅವರ ಅಜ್ಞಾನ ಬಡತನಗಳೇ ಕಾರಣವಾಗಿವೆ. ತಂದೆ ತಾಯಿಗಳು ತಮ್ಮ ಮಕ್ಕಳ ಮದುವೆಯನ್ನು ತಮ್ಮ ಜೀವನ ಅವಧಿಯಲ್ಲೇ ನೋಡಬೇಕು ಎನ್ನುವ ಹಂಬಲದಿಂದ ಈ ಮದುವೆಗಳು ನಡೆಯಲು ಕಾರಣವಾಗಿವೆ. ಹೆಣ್ಣು ದೊಡ್ಡವಳಾಗುವುದಕ್ಕೆ ಮೊದಲೇ ಮದುವೆ ಮಾಡಿದರೆ ತಂದೆ ತಾಯಿಯವರಿಗೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆಯೂ ಇದಕ್ಕೆ ಕಾರಣವಾಗಿದೆ. ಆರೇಳು ವರ್ಷಗಳ ಒಳಗೆ ಮದುವೆ ಮಾಡುತ್ತಾರೆ. ಮದುವೆ ಸಂಪ್ರದಾಯದಲ್ಲಿ ಯಾವ ಬದಲಾವಣೆಗಳೂ ಇರುವುದಿಲ್ಲ. ಹೆಣ್ಣು ವಯಸ್ಸಿಗೆ ಬರುವವರೆಗೂ ತನ್ನ ತಂದೆಯ ಮನೆಯಲ್ಲಿಯೇ ಇರುತ್ತಾಳೆ. ಮೈನೆರೆದ ನಂತರ ಅವಳ ಗಂಡನ ಮನೆಗೆ ಕಳುಹಿಸಿಕೊಡುತ್ತಾರೆ. ಮಂಗಳವಾರ ಮತ್ತು ಶುಕ್ರವಾರ ಬಹುತೇಕ ಜನಾಂಗಗಳಲ್ಲಿ ಹೆಣ್ಣುಮಕ್ಕಳನ್ನು ಗಂಡನ ಮನೆಗೆ ಕಳುಹಿಸುವುದಿಲ್ಲ.

ಕೂಡಾವಳಿ (ವಿಧವಾ ವಿವಾಹ)

ಗಂಡನನ್ನು ಕಳೆದುಕೊಂಡವರು, ಹೆಂಡತಿಯನ್ನು ಕಳೆದುಕೊಂಡವರು ವಿವಾಹವಾಗುವ ಪದ್ಧತಿಯಿದು. ಕೆಲವು ವೇಳೆ ಹೆಂಡತಿ ಇದ್ದವರೂ ಕೂಡಿಕೆ ಮಾಡಿಕೊಳ್ಳುತ್ತಾರೆ. ಮದುವೆ ಆಗುವ ಹೆಣ್ಣಿಗೆ ಮೊದಲ ಗಂಡನಿಂದ ಹುಟ್ಟಿದ ಮಕ್ಕಳುಗಳನ್ನು ಅವನಿಗೆ ಅಥವಾ ಅದೇ ಊರಿನಲ್ಲಿ ಬಿಟ್ಟು ಬರುತ್ತಿದ್ದರು. ಇಂಥ ಮಕ್ಕಳನ್ನು ಕೂಡಿಕೆಯಾಗುವವನು ಸ್ವೀಕರಿಸುವುದಿಲ್ಲ.

ಅಂಥ ಮಕ್ಕಳಿಗೆ ಆಸ್ತಿಯ ಹಕ್ಕು ಇರುವುದಿಲ್ಲ. ಕೂಡಿಕೆಯನ್ನು ಇಷ್ಟಪಟ್ಟವರು ಮಾತ್ರ ಮಾಡಿಕೊಳ್ಳುತ್ತಿದ್ದರು. ಆದರೆ ಇವರಲ್ಲಿ ಒಂದು ಬಾರಿ ವಿವಾಹವಾದ ನಂತರ ಹೆಣ್ಣು ಯಾವುದೇ ಕಾರಣಕ್ಕೂ ಬೇರೆ ಮದುವೆ ಆಗುವಂತಿಲ್ಲ. ಇದು ಇವರಲ್ಲಿರುವ ನಿಯಮವಾಗಿದೆ. ವಿಧವೆಯಾದ ಹೆಣ್ಣಿಗೆ ಮಕ್ಕಳಿದ್ದರೆ ಮಾವನ ಮನೆಯಲ್ಲಿಯೇ ವಾಸವಾಗಿರಬೇಕು. ಇಲ್ಲದಿದ್ದರೆ ತೌರು ಮನೆಗೆ ಹೋಗಬಹುದು. ಅದೇ ಗಂಡು ಬೇರೆ ಹೆಣ್ಣನ್ನು ಮದುವೆಯಾಗುವ ಸ್ವಾತಂತ್ರ್ಯ ಇದೆ. ಇದಕ್ಕೆ ವಿರುದ್ಧವಾಗಿ ''ಹೆಳವರಲ್ಲಿ ವಿಧವೆ ಹೆಣ್ಣು ತನ್ನ ಗಂಡನ ಬೆಡಗನ್ನು ಬಿಟ್ಟು ಬೇರೆ ಬೆಡಗಿನ ಗಂಡನ್ನು ಮದುವೆ ಆಗುವ ಪದ್ಧತಿ ಇದೆ.''[೧೯] ಅದೇ ರೀತಿ ಮೇಲುಷಿಕಾರರಲ್ಲಿಯೂ ಈ ಪದ್ಧತಿ ಜಾರಿಯಲ್ಲಿದೆ. ಇವರಲ್ಲಿ ಅಣ್ಣನ ಹೆಂಡತಿಯನ್ನು ತಮ್ಮನಾದವನು ವರಿಸಬಹುದು.[೨೦] ಆದರೆ ಮಡಿವಾಳ ಒಕ್ಕಲಿನ ನೀಲಗಾರರಲ್ಲಿ ಈ ಕೂಡಾವಳಿ ಪದ್ಧತಿ ಹೆಚ್ಚಾಗಿ ಇರುವುದೆಂದು ಕ್ಷೇತ್ರಕಾರ್ಯದಿಂದ ತಿಳಿದು ಬರುತ್ತದೆ. ಇದು ಶಾಸ್ತ್ರೋಕ್ತ ಮದುವೆಯ ರೀತಿ ನಡೆಯುವುದಿಲ್ಲ. ಎರಡು ಕಡೆಯ ಹಿರಿಯರು ಒಟ್ಟು ಸೇರಿ ವಧುವಿನ ಕೈಯನ್ನು ವರನ ಕೈಗೆ ತಾಗಿಸಿ ಬಿಟ್ಟು ಬಿಡುವರು, ಇದೇ ಕೂಡಾವಳಿ. ''ಜೋಗಿಗಳಲ್ಲಿ ಗಂಡ ಸತ್ತರೆ ಅವನ ಅಣ್ಣನನ್ನು ಮಾತ್ರ ಮದುವೆ ಮಾಡಿಕೊಳ್ಳಬಹುದು. ತಮ್ಮನನ್ನು ಮದುವೆ ಮಾಡಿಕೊಳ್ಳಕೂಡದು.''[೨೧]

ವಿನಿಮಯ ವಿವಾಹ

ಹೆಣ್ಣು ಕೊಟ್ಟು ಹೆಣ್ಣು ತರುವ ಪದ್ಧತಿ ಇದಾಗಿದೆ. ಇದು ಈಗಲೂ ನೀಲಗಾರರಲ್ಲಿ ಪ್ರಚಲಿತದಲ್ಲಿದೆ. ಒಂದೇ ಮನೆಯ ಅಣ್ಣ ತಂಗಿಯರಿಗೆ ಇನ್ನೊಂದು ಕುಟುಂಬದ ಅಣ್ಣ ತಂಗಿಯರ ಜೊತೆ ಮದುವೆ ಮಾಡಿಕೊಳ್ಳುವುದು ಅಲ್ಲಲ್ಲಿ ರೂಢಿಯಲ್ಲಿದೆ. ಪೂರ್ವದಲ್ಲಿ ಹೆಣ್ಣಿಗೆ ತೆರ ಕೊಡಲು ಸಾಧ್ಯವಿಲ್ಲದ ಸಂದರ್ಭದಲ್ಲಿ ಅನಿವಾರ್ಯವಾಗಿ ಈ ಮದುವೆಗೆ ಒಪ್ಪಲೇಬೇಕಾಗುತ್ತಿತ್ತು. ಇಂದು ವರದಕ್ಷಿಣೆ ಕೊಡಲು ಆಗದಿದ್ದರಿಂದ ಅಣ್ಣ ತನ್ನ ತಂಗಿಯ ಮದುವೆ ಮಾಡಲು ಅವಳ ಗಂಡನ ತಂಗಿಯನ್ನು ತನ್ನ ಹೆಂಡತಿಯಾಗಿ ಸ್ವೀಕರಿಸುತ್ತಾನೆ. ಹಾಗಾಗಿ ಈ ಪದ್ಧತಿ ಈಗಲೂ ಜೀವಂತವಾಗಿದೆ. ಮದುವೆ ಆಚರಣೆಗಳಲ್ಲಿ ಯಾವುದೇ ಬದಲಾವಣೆ ಕಂಡು ಬರುವುದಿಲ್ಲ.

ಹೀಗೆ ಇವರಲ್ಲಿ ಹಲವು ಮದುವೆಗಳು ನಡೆಯುತ್ತವಾದರೂ ಏಕಪತ್ನಿತ್ವಕ್ಕೆ ಹೆಚ್ಚು ಗೌರವವಿದ್ದು ಹೆಚ್ಚು ಜನಪ್ರಿಯವಾಗಿದೆ. ಮೊದಮೊದಲು ಒಳ ಬಾಂಧವ್ಯ ವಿವಾಹ ಪದ್ಧತಿಗಳು ಹೆಚ್ಚಾಗಿ ನಡೆಯುತ್ತಿದ್ದವು. ಈಗ ನಾಗರೀಕತೆಯ ಪ್ರಭಾವದಿಂದಾಗಿ ಹೊರ ಬಾಂಧವ್ಯದ ವಿವಾಹ ಪದ್ಧತಿಗಳು ಹೆಚ್ಚಾಗಿ ರೂಢಿಯಲ್ಲಿವೆ. ಕಷ್ಟ ಸುಖಗಳಿಗೆ ಹೆಚ್ಚು ಜನರ ಸಲಹೆ ಸಹಕಾರದ ಅವಶ್ಯಕತೆ ಇದ್ದುದರಿಂದ ಹೊರ ಬಾಂಧವ್ಯದ ಸಂಬಂಧಗಳು ಇವರಿಗೆ ಇಷ್ಟವಾಗಿ ಮನ್ನಣೆ ಪಡೆದವೆಂದು ತೋರುತ್ತದೆ. ದೊಡ್ಡವರು ನೋಡಿ ಬಂದವರನ್ನು ಒಪ್ಪಿ ಮದುವೆಯಾಗಬೇಕಾದ ಸ್ಥಿತಿ ಈಗ ಹೆಸರಿಗೆ ಮಾತ್ರ ಉಳಿದುಕೊಂಡಿದೆ. ಆದರೆ ಮುಖ್ಯವಾಗಿ ಹುಡುಗ ಹುಡುಗಿ ಒಪ್ಪಿಕೊಳ್ಳುವುದು ಮುಖ್ಯ.

ವಿವಾಹ ಪದ್ಧತಿ

ನೀಲಗಾರರ ವಿವಾಹ ಪದ್ಧತಿಯಲ್ಲಿ ಪರಂಪರೆಯಿಂದ ಬಂದ ಸಂಪ್ರದಾಯ ನಡಾವಳಿಗಳು ಇಂದು ಇನ್ನೂ ಜೀವಂತವಾಗಿ

ಆಚರಣೆಯಲ್ಲಿ ಇವೆ. ಇವು ನೀಲಗಾರ ಸಂಸ್ಕೃತಿಯ ಸೆಲೆಯನ್ನು ಬಿಚ್ಚಿ ತೋರಿಸುತ್ತವೆ. ಹೆಣ್ಣು ಗಂಡುಗಳ ಆಯ್ಕೆ ಅವರವರ ಬೆಡಗುಗಳ ಮೇಲೆ ನಿರ್ಧಾರವಾಗುತ್ತವೆ. ಕುಲಗಳೇ ಇಲ್ಲಿ ಪರ್ಯಾಯವಾಗಿ ಬೆಡಗುಗಳೆಂದು ಕರೆಯಿಸಿಕೊಂಡಿವೆ.

ಬೆಡಗುಗಳ ಆಯ್ಕೆ

ಮದುವೆಯ ಮೊದಲ ಹಂತವೇ ಬೆಡಗಿನ (ಕುಲ) ಆಯ್ಕೆಯಾಗಿದೆ. ಬೆಡಗುಗಳನ್ನು ಗಿಡ, ಪ್ರಾಣಿ ಮತ್ತಿತರ ವಸ್ತುಗಳನ್ನು ಸಂಕೇತಿಸುತ್ತಾರೆ. ಆಯಾ ವೃಕ್ಷ, ಪ್ರಾಣಿ ಅಥವಾ ವಸ್ತುಗಳ ಜೊತೆಗಿನ ಅವರ ಬದುಕಿನ ಸಂಪರ್ಕವೇ ಇದಕ್ಕೆ ಮುಖ್ಯ ಕಾರಣವಾಗಿದೆ. ಪ್ರತಿಯೊಂದು ಜನವರ್ಗಗಳಲ್ಲಿ ಸಾಮಾನ್ಯವಾಗಿ ಒಂದು ಕುಲದಲ್ಲಿ ಹೆಣ್ಣು ತರುವಂತಿಲ್ಲ. ಅದೇ ರೀತಿ ಇವರಲ್ಲಿಯೂ ಕೂಡ ಇದು ನಿಷಿದ್ಧವಾಗಿದೆ. ಹಾಗೇನಾದರೂ ಈ ಕಟ್ಟುಪಾಡನ್ನು ಮೀರಿದರೆ ಅಂಥವರನ್ನು ಆ ಪಂಗಡದಿಂದ ಹೊರ ಹಾಕುತ್ತಾರೆ.

ಸಂಮಿಶ್ರ ಸಂಸ್ಕೃತಿಯ ನೀಲಗಾರರಲ್ಲಿ ಮದುವೆ ಆಯಾಯ ಕುಲದ ಆಚರಣೆಗಳಿಗನುಗುಣವಾಗಿ ನಡೆಯುತ್ತದಾದರೂ ಎಲ್ಲಾ ಕುಲಕ್ಕೂ ಸಾಮಾನ್ಯವಾದ ಕೆಲವು ಅಂಶಗಳನ್ನಿಲ್ಲಿ ಪ್ರಸ್ತಾಪಿಸಲಾಗಿದೆ.

ಇವರಲ್ಲಿ ಹದಿನೆಂಟು ವರ್ಷಕ್ಕೆ ದೀಕ್ಷೆ ಆದ ಮೇಲೆ ಆ ವರ್ಷವೇ ಮದುವೆಯಾಗಬೇಕು. ಇಲ್ಲದಿದ್ದರೆ ಮೂರು ವರ್ಷ ಕಳೆದ ನಂತರ ಮದುವೆ ಕಾರ್ಯ ಪ್ರಾರಂಭಿಸಬಹುದು ಎಂಬುದು ಇವರ ಪದ್ಧತಿ. ಮದುವೆ ಸಂದರ್ಭದಲ್ಲಿ ಎಲ್ಲಾ ಜನಾಂಗದವರೂ ಒಂದೇ ಕಂಕಣ ಕಟ್ಟಿದರೆ ನೀಲಗಾರರಲ್ಲಿ ಎರಡು. ದೀಕ್ಷೆ ಕೊಡುವಾಗ ಗುರು ಕಂಕಣ ಮತ್ತು ಮದುವೆ ಆಗುವಾಗ ನರ ಕಂಕಣ.

ಇವರಲ್ಲಿ ಹೆಣ್ಣು ತರುವುದಕ್ಕೆ ಕೆಲವು ನಿಷೇಧಗಳನ್ನು ಕಾಣಬಹುದಾಗಿದೆ. ಮೊದಲಿಗೆ ಹೆಣ್ಣು ನೋಡುವುದಕ್ಕೆ ಹೋಗುತ್ತಾರೆ. ಹೆಣ್ಣಿನ ಮನೆಯಲ್ಲಿ ಗಂಡಿನ ಕುಲ ಹೆಣ್ಣಿನ ಕುಲ ನೋಡುತ್ತಾರೆ. ಎರಡೂ ಕುಲಗಳು ಒಂದೇ ಆಗಿರಬಾರದು. ಇವರಲ್ಲಿ ಈ ಪದ್ಧತಿಯನ್ನು ಇಂದಿಗೂ ಅನುಸರಿಸುತ್ತಿದ್ದಾರೆ. ಮಾದೇಶ್ವರ ಗುಡ್ಡರು ಮಂಟೇಸ್ವಾಮಿ ಒಕ್ಕಲಿನವರ ಜೊತೆ ವಿವಾಹಕ್ಕೆ ಸಂಬಂಧಪಟ್ಟ ಯಾವ ಆಚರಣೆಗಳನ್ನು ಮಾಡುವಂತಿಲ್ಲ. ಹೆಣ್ಣನ್ನು ಕೊಡುವುದಾಗಲಿ, ತರುವುದಾಗಲಿ ಇರುವುದಿಲ್ಲ. ಅದೇ ರೀತಿ ಮಾದೇಶ್ವರ ಒಕ್ಕಲಿನವರು ಪಾರ್ವತಿ ಗುಡ್ಡರ ಒಕ್ಕಲಿನಲ್ಲಿ ಹೆಣ್ಣು ತರುವ ಪದ್ಧತಿ ಇದೆ. ಮತ್ತೆ ಪಾರ್ವತಿ ಗುಡ್ಡರ ಒಕ್ಕಲಿನವರು ಮಂಟೇಸ್ವಾಮಿ ಒಕ್ಕಲಿನವರ ಜೊತೆ ವಿವಾಹ ಸಂಬಂಧಗಳು ಏರ್ಪಡುವುದಿಲ್ಲ. ಇಂದಿಗೂ ನೀಲಗಾರರಲ್ಲಿ ಹಲವಾರು ಕುಲಗಳನ್ನು ಕಾಣಬಹುದು. ಗಾಣಿಗರ ಕುಲ, ಭೂಮಿಕುಲ, ಕಣ್ಣಿರ ಕುಲ, ಹಾಲಕುಲ, ಕರೂರಕುಲ, ಬೆಳ್ಳಿಕುಲ, ತಾವರೆಕುಲ, ಹೂ ಕುಲ ಹೀಗೆ ಹಲವಾರು ಕುಲಗಳು ಒಳಗೊಂಡಿದ್ದು ಮದುವೆ ಸಂದರ್ಭದಲ್ಲಿ ಒಂದೇ ಕುಲದಲ್ಲಿ ಇವರು ಹೆಣ್ಣು ತರುವಂತಿಲ್ಲ ಮತ್ತೆ ಕೊಡುವಂತಿಲ್ಲ. ಇನ್ನು ಉಳಿದಂತೆ ಹಿಂದೂ ಜನಾಂಗದಲ್ಲಿ ಹೇಗೆ ಮದುವೆ ಆಚರಣೆ ನಡೆಯುತ್ತದೆಯೋ ಅದೇ ರೀತಿ ಇವರಲ್ಲಿ ಹೆಚ್ಚು ವ್ಯತ್ಯಾಸಗಳಿಲ್ಲದೆ ಮದುವೆ ನಡೆಯುತ್ತದೆ. ಇನ್ನು ಇಲ್ಲಿ ಯಾವುದೇ ಕುಲ ಶ್ರೇಷ್ಠ ಅನ್ನುವುದಾಗಲಿ ಇಲ್ಲ. ಅವರವರ ಕುಲ ಅವರಿಗೆ ಶ್ರೇಷ್ಠ. ಆದರೆ ''ಉಪ್ಪಾರ ಜನಾಂಗದಲ್ಲಿ ಮೇಲು ಸಕ್ಕರೆ ಕುಲದವರು ಶ್ರೇಷ್ಠವೆಂದು ತಿಳಿಯುತ್ತಾರೆ.''[೨೩]

ವಧುವಿನ ಆಯ್ಕೆ

ಹೆಣ್ಣು ಗಂಡು ಪ್ರೌಢಾವಸ್ಥೆಗೆ ಬಂದಾಗ ಸರಿಯಾದ ಬಾಳ ಸಂಗಾತಿಯನ್ನು ಆಯ್ಕೆ ಮಾಡುವುದು ಹಿರಿಯರ ಆದ್ಯ ಕರ್ತವ್ಯ. ಯಾವುದೇ ಮನೆಯ ಕನ್ಯೆ ತಮ್ಮ ಮನೆಯ ವರನಿಗೆ ತೆಗೆದುಕೊಳ್ಳಬೇಕೆನಿಸಿದಾಗ ಹೆಣ್ಣನ್ನು ಅರಿಸುತ್ತಾ ಮೊದಲು ಗಂಡಿನ ಕಡೆಯವರೇ ಹೋಗುತ್ತಾರೆ. ಹೆಣ್ಣು ಇರುವ ಮನೆಗೆ ನೇರವಾಗಿ ಹೋಗುವುದಿಲ್ಲ. ಅಕ್ಕಪಕ್ಕದ ಪರಿಚಿತರಿಂದ ತಿಳಿದು ವಿಚಾರಿಸಿಕೊಂಡು ಆ ಹುಡುಗಿ ತಮ್ಮ ವರನಿಗೆ ಆಗಬಹುದೆಂದು ಅನ್ನಿಸಿದಾಗ ಮುಂದುವರಿಯುತ್ತಾರೆ. ಪ್ರಾಚೀನ ಭಾರತದ ಆದಿವಾಸಿ ಸಮುದಾಯಗಳಲ್ಲಿ ವಧುವಿನ ಆಯ್ಕೆ ಮಾಡಿಕೊಳ್ಳಬೇಕಾದರೆ ಹಲವಾರು ವಿಧಾನಗಳನ್ನು ಬಳಸಿಕೊಳ್ಳುತ್ತಿದ್ದರು. ಆದರೆ ಅಂತಹ ಕಠಿಣ ಪರಿಸ್ಥಿತಿ ನೀಲಗಾರರಲ್ಲಿ ಮತ್ತು ಇತರ ಜನಪದ ವೃಂದಗಳಲ್ಲಿ ಎಲ್ಲಿಯೂ ಕಾಣಸಿಗುವುದಿಲ್ಲ. ಇಂದು ಎಲ್ಲಾ ಜನಾಂಗಗಳಲ್ಲಿ ವಧುವಿನ ಆಯ್ಕೆ ಮಾಡಿಕೊಳ್ಳುವುದು ತೀರ ಸುಲಭವಾಗಿದೆ.

ಹುಡುಗಿಯನ್ನು ಗಂಡಿನ ಕಡೆಯವರು ಮದುವೆಯಲ್ಲೊ, ಜಾತ್ರೆಯಲ್ಲೊ ಮೊದಲೇ ನೋಡಿರುತ್ತಾರೆ. ತಮಗೆ ಸಂಬಂಧ ಆಗಬಹುದು ಎಂಬುದು ಮನಸ್ಸಿಗೆ ಬಂದ ಮೇಲೆ ಒಂದು ಶುಭದಿನ ಮೂರು ಜನ ಅಥವಾ ಐದು ಜನಸೇರಿಕೊಂಡು ದಾರಿ ಶಕುನ ನೋಡುತ್ತಾರೆ. ಹೀಗೆ ಹೊರಡುವ ಮೊದಲೇ ಹುಡುಗಿಯ ಮನೆಯವರಿಗೆ ತಿಳಿಸಿರುತ್ತಾರೆ. ಇವರ ಬರುವಿಕೆಯನ್ನು ಅವರು ಎದುರು ನೋಡುತ್ತಿರುತ್ತಾರೆ. ಹೆಣ್ಣು ನೋಡಲು ಬಂದ ವ್ಯಕ್ತಿಗಳಿಗೆ ಕಾಲು ತೊಳೆಯಲು ನೀರು ಕೊಟ್ಟು ನಂತರ ಒಳಗೆ ಬರಮಾಡಿಕೊಂಡು ಕುಡಿಯಲು ನೀರು ಕೊಟ್ಟು ಸತ್ಕರಿಸುತ್ತಾರೆ. ಅನಂತರ ಹುಡುಗಿಯನ್ನು ಅಲಂಕರಿಸಿ ಅವಳಿಂದಲೇ ಕಾಫಿ, ತಿಂಡಿ, ಊಟ ಕೊಡಿಸುತ್ತಾರೆ. ಬಂದವರು ಸತ್ಕಾರಗಳನ್ನು ಸ್ವೀಕರಿಸಿ ಹುಡುಗಿ ಒಪ್ಪಿಗೆಯಾದರೆ ಹೆಣ್ಣಿನ ಮನೆಯವರನ್ನು ತಮ್ಮ ಮನೆಗೆ ಬರುವುದಕ್ಕೆ ಹೇಳಿ ತಮ್ಮ ಊರಿಗೆ ಹೊರಡುತ್ತಾರೆ. ಹುಡುಗಿ ಇಷ್ಟ ಆಗದೇ ಇದ್ದರೆ ಅದನ್ನು ನೇರವಾಗಿ ತಿಳಿಸದೇ ಊರಿಗೆ ಹೋದ ನಂತರ ಹೇಳಿಕಳುಹಿಸುತ್ತೇವೆ ಎನ್ನುತ್ತಾರೆ.

ಹೆಣ್ಣನ್ನು ಪರೀಕ್ಷೆ ಮಾಡಿ ನೋಡಿದಂತೆ ಗಂಡನ್ನು ಪರೀಕ್ಷೆ ಮಾಡುವುದಿಲ್ಲ. ಗಂಡಿನ ಮನೆ, ತಂದೆ, ತಾಯಿ, ಆಸ್ತಿ, ಕೆಲಸ ಇವುಗಳನ್ನಷ್ಟೇ ಕೇಳಿ ತಿಳಿದುಕೊಳ್ಳುತ್ತಾರೆ. ನಂತರ ಇಬ್ಬರು ಒಪ್ಪಿಕೊಂಡರೆ ಅವರ ಹೆಸರಿಗೆ ಸಾಲಾವಳಿ ಬರುತ್ತದೆಯೇ ಎಂದು ತಿಳಿದುಕೊಳ್ಳಲು ಊರಿನ ಪುರೋಹಿತರ ಬಳಿಗೆ ಗಂಡಿನ ಕಡೆಯವರು ಮತ್ತು ಹೆಣ್ಣಿನವರು ಇಬ್ಬರೂ ಕೂಡಿ ಹೋಗುತ್ತಾರೆ. ನಂತರ ಹೆಣ್ಣು ಗಂಡಿನ ಸಾಲಾವಳಿ ನೋಡಿ ಮದುವೆ ಕಾರ್ಯ ಏರ್ಪಡಿಸುತ್ತಾರೆ.

ನಿಶ್ಚಿತಾರ್ಥ : ವಿವಾಹದ ನಿರ್ದಿಷ್ಟ ನಿಶ್ಚಿತಾರ್ಥದಿಂದ ಪ್ರಾರಂಭವಾಗುತ್ತದೆ. ನೀಲಗಾರರಲ್ಲಿ ಇದನ್ನು ಎರಡು ಬಗೆಯಲ್ಲಿ ಮಾಡುತ್ತಾರೆ. ಮೊದಲು ಚಿಕ್ಕ ಇಳ್ಯಾ ನಡೆಯುತ್ತದೆ, ಅನಂತರ ದೊಡ್ಡ ಇಳ್ಯಾ ನಡೆಯುತ್ತದೆ. ಚಿಕ್ಕ ಇಳ್ಯಾವನ್ನು ಹೆಣ್ಣಿನ ಮನೆಯಲ್ಲಿ ನಡೆಸುತ್ತಾರೆ. ಗಂಡಿನ ಮನೆಯಿಂದ ಮುತ್ತೈದೆಯರು ಹೂ, ಹಣ್ಣು, ಕಾಯಿ, ಅರಿಶಿಣ ಕುಂಕುಮ, ಎಲೆ, ಅಡಿಕೆ, ಸೀರೆ, ಕುಪ್ಪಸಗಳನ್ನು ತೆಗೆದುಕೊಂಡು ಹೋಗಿ ಹೆಣ್ಣಿಗೆ ಅಲಂಕರಿಸಿ ಮಡಿಲು ತುಂಬುತ್ತಾರೆ. ಮುಂದೆ ನಡೆಯುವ ದೊಡ್ಡ ಇಳ್ಯಾ ದಿನವನ್ನು ಹೇಳಿ ಅಂದು ತಮಗೆ ಬರಬೇಕಾದ ದಕ್ಷಿಣೆಗಳ ಬಗ್ಗೆ ಮಾತನಾಡಿ ಬರುತ್ತಾರೆ. ಚಿಕ್ಕ ಇಳ್ಯಾದ ಮೊದಲನೆ

ದಿವಸವನ್ನು **ಒಪ್ಪಿಳ್ಳಿವು** ಎಂದೂ ಕೂಡ ಕರೆಯುತ್ತಾರೆ. ಇವರಲ್ಲಿ ಹಿಂದೆ ಹೆಣ್ಣಿಗೆ ವರದಕ್ಷಿಣೆ ಕೊಟ್ಟು ಮದುವೆ ಮಾಡಿಕೊಳ್ಳುವ ಪದ್ಧತಿ ಇತ್ತು. ಹೆಣ್ಣಿಗೆ ಒಂದು ಗಾಡಿ ಸೌದೆ, ಎರಡು ಖಂಡುಗ ಭತ್ತ ಮತ್ತು ಎರಡು ಖಂಡುಗ ರಾಗಿ ಕೊಟ್ಟು ಹೆಣ್ಣನ್ನು ಮದುವೆಯಾಗಬೇಕಿತ್ತು. ಇಷ್ಟೆಲ್ಲಾ ಕೊಟ್ಟ ಮೇಲೂ ವಂಕಿಡಾಬು, ಕಾಲುಂಗರ, ಕಾಲುಕಡಗ, ಕೈ ಕಡಗ ಇವೆಲ್ಲವನ್ನು ಕೊಟ್ಟು ಈ ಸಮಾರಂಭವನ್ನು ನೆರವೇರಿಸುತ್ತಿದ್ದರು. ಆದರೆ ಇವತ್ತಿನ ಆಧುನಿಕ ಯುಗದಲ್ಲಿ ಈ ತರಹದ ಯಾವುದೇ ಕಟ್ಟಳೆ ಇಲ್ಲ. ಅವರ ಸಾಮರ್ಥ್ಯಕ್ಕೆ ತಕ್ಕಂತೆ ಕೊಟ್ಟು ಮದುವೆ ಮಾಡಿಕೊಳ್ಳುತ್ತಾರೆ. ಈ ಸಮಾರಂಭಕ್ಕೆ ಸಂಬಂಧಿಕರು, ರಕ್ತಸಂಬಂಧಿಗಳೂ ಸೇರಿರುತ್ತಾರೆ. ಈ ಸಂತೋಷದ ಸಮಾರಂಭದಲ್ಲಿ ಎಲ್ಲರಿಗೂ ಊಟವಿರುತ್ತದೆ.

ದೊಡ್ಡ ಇಳ್ಯಾ : ಎರಡು ಕಡೆಯ ಕುಲ ಬಾಂಧವರು ಈ ಸಮಾರಂಭದಲ್ಲಿ ಸೇರುತ್ತಾರೆ. ಸಣ್ಣ ಇಳ್ಯಾದಲ್ಲಿ ಕೊಡುವ ತೆಗೆದುಕೊಳ್ಳುವ ಮಾತುಕತೆ ನಡೆದರೆ, ಇಲ್ಲಿ ತಮಗೆ ಬೇಕಾದ್ದನ್ನು ತೆಗೆದುಕೊಂಡು ಕೊಡಬೇಕಾದ್ದನ್ನು ಕೊಡುತ್ತಾರೆ. ಮದುವೆ ಮೂರು ನಾಲ್ಕು ದಿವಸ ಅಥವಾ ಅದರ ಹಿಂದಿನ ದಿನ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಾರೆ. ಚಿಕ್ಕ ಇಳ್ಯಾದಲ್ಲಿ ಗೊತ್ತುಮಾಡಿದ ದಿನಾಂಕದಂದು ಐದು ಜನ ಮುತ್ತೈದೆಯರು ಸೇರಿ ಗಂಡಿನ ಕಡೆಯವರು ಹೆಣ್ಣಿನ ಮನೆಗೆ ಲಗ್ನ ಕಟ್ಟಿಸುವುದಕ್ಕೆ ಹೋಗುತ್ತಾರೆ. ಅಲ್ಲಿ ಹೆಣ್ಣು ಮಗಳಿಗೆ ಮಡಿಲು ತುಂಬಿಸುವ ವಸ್ತುಗಳನ್ನು ತಂದು ಒಂಬತ್ತು ತಟ್ಟೆ ತುಂಬಿಸಿ ಹೆಣ್ಣಿಗೆ ಹೊಸ ಸೀರೆ ಉಡಿಸಿ ಕಳಸಪೂಜೆ ಮಾಡಿಸಿ ಹೆಣ್ಣಿಗೆ ಹನ್ನೆರಡು ರೂಪಾಯಿಯ ಬೆಳ್ಳಿ ನಾಣ್ಯಗಳನ್ನು ಕಟ್ಟಬೇಕು ಎನ್ನುವ ನಿಯಮ ಇಂದಿಗೂ ಚಾಲ್ತಿಯಲ್ಲಿದೆ. ಏಕೆಂದರೆ ಇವರಲ್ಲಿ ಹನ್ನೆರಡು ಬಣಗಳು ಇವೆ. ಆದ್ದರಿಂದ ಹನ್ನೆರಡು ರೂಪಾಯಿಯನ್ನೇ ಕಟ್ಟಬೇಕು. ಆ ದಿನ ಹುಡುಗ ತಂದ ಬಂಗಾರದ ಉಂಗುರವನ್ನು ಹುಡುಗಿಗೆ ಹಾಕುತ್ತಾನೆ. ಪರಸ್ಪರ ಹೂ ಮಾಲೆಗಳನ್ನು ಹಾಕಿಕೊಳ್ಳುತ್ತಾರೆ. ಇವೆಲ್ಲವೂ ಕಳಸದ ಎದುರೇ ನಡೆಯುತ್ತವೆ. ಹುಡುಗಿಯು ತನ್ನ ಗಂಡನಾಗುವವನಿಗೆ ಉಂಗುರವನ್ನೊ, ಸರವನ್ನೊ ಹಾಕುತ್ತಾಳೆ. ಇದು ಒಂದು ರೀತಿಯಲ್ಲಿ ಸಣ್ಣ ಮರಿ ಮದುವೆಯಾಗಿಯೇ ನಡೆಯುತ್ತದೆ. ದೊಡ್ಡ ಇಳ್ಯಾದ ನಂತರ ಸಂಬಂಧವನ್ನು ಮುರಿಯುವಂತಿಲ್ಲ. ಹೆಣ್ಣಿನ ಮನೆಗೆ ಬಂದ ಗಂಡಿನ ಕಡೆಯ ಹೆಣ್ಣು ಮಕ್ಕಳು ಹೆಣ್ಣನ್ನು ಕರೆದು ಅವಳಿಗೆ ವಿವಿಧ ಆಭರಣ ಮಾಡಿಸಲು ಅಳತೆ ತೆಗೆದುಕೊಳ್ಳುತ್ತಾರೆ.

ಗಂಡಿನವರಿಗೆ ಕೊಡಬೇಕಾದುದನ್ನು ವೀಳ್ಯದೆಲೆ ಅಡಿಕೆ ಜೊತೆ ಇಟ್ಟು ನೆರೆದಿರುವ ಸಮಸ್ತರ ಎದುರು ಕೊಡುತ್ತಾರೆ. ಇಲ್ಲಿಗೆ ಈ ಕಾರ್ಯ ಮುಗಿಯುತ್ತದೆ. ಈ ಸಂತೋಷದ ಸಮಾರಂಭಕ್ಕಾಗಿ ಅಲ್ಲಿ ನೆರೆದಿರುವವರಿಗೆಲ್ಲ ಆ ದಿನ ಸಿಹಿ ಊಟ ಇರುತ್ತದೆ.

ಲಗ್ನ ಪತ್ರಿಕೆ : ಈ ದಿನವನ್ನು ಲಕ್ಷ್ಮಿ ಮಾಡುವುದು ಎಂದು ಕರೆಯುತ್ತಾರೆ. ಇದು ಮದುವೆಗೆ ಐದು ದಿನ ಅಥವಾ ಎಂಟು ದಿನಗಳ ಮೊದಲು ಜರುಗುತ್ತದೆ. ಹೆಣ್ಣು ಮತ್ತು ಗಂಡಿನ ಕಡೆಯ ಹಿರಿಯರು ಹೆಣ್ಣಿನ ಮನೆಯಲ್ಲಿ ಸೇರಿ ಪುರೋಹಿತರಿಂದ ಲಗ್ನ ಪತ್ರಿಕೆ ಬರೆಸುತ್ತಾರೆ. ಪುರೋಹಿತರು ಶುಭ ಮುಹೂರ್ತದಲ್ಲಿ ಮದುವೆ ಪತ್ರಿಕೆ ಬರೆದುಕೊಡುತ್ತಾರೆ. ಹಾಗೆ ಮಾಡುವ ಮೊದಲು ಆ ಲಗ್ನ ಪತ್ರಿಕೆಯ ನಾಲ್ಕು ಮೂಲೆಗಳಿಗೆ ಅರಿಶಿಣ ಕುಂಕುಮ ಹಚ್ಚಿ ಮಂತ್ರ ಹೇಳುತ್ತಾರೆ. ಒಮ್ಮೆ ಲಗ್ನಪತ್ರಿಕೆ

ಬರೆಯಿಸಿದ ನಂತರ ಗಂಡಿನವರಾಗಲಿ ಹೆಣ್ಣಿನವರಾಗಲಿ ಆ ಸಂಬಂಧವನ್ನು ಬಿಡುವಂತಿಲ್ಲ. ನಂತರ ಪುರೋಹಿತರಿಂದ ಪಡೆದ ಹಸ್ತಪತ್ರಿಕೆಯನ್ನು ಮುದ್ರಣ ಮಾಡಿಸುತ್ತಾರೆ.

ಮದುವೆ ಕರೆ : ಅಚ್ಚಾದ ಲಗ್ನ ಪತ್ರಿಕೆಗಳನ್ನು ಮನೆಗೆ ತಂದು ದೇವರ ಎದುರು ಇಟ್ಟು ಪೂಜಿಸುತ್ತಾರೆ. ಅನಂತರ ಪ್ರತಿಯೊಂದಕ್ಕೂ ಅರಿಶಿಣ ಕುಂಕುಮವನ್ನು ಹಚ್ಚುತ್ತಾರೆ. ಈ ರೀತಿ ಸಿದ್ಧವಾದ ಕರೆಯೋಲೆಗಳನ್ನು ಸಂಬಂಧಿಕರಿಗೆ ಕಳುಹಿಸಿಕೊಡುತ್ತಾರೆ. ಅನಂತರ ಹತ್ತಿರದ ಬಂಧುಗಳನ್ನು ತಂದೆ ತಾಯಿಗಳೇ ಮನೆ ಮನೆಗೆ ಹೋಗಿ ಕೈ ಜೋಡಿಸಿ ನಿಂತು ಮದುವೆಗೆ ಬನ್ನಿ ಎಂದು ಹೇಳಿ ಈ ಕರೆಯೋಲೆಯನ್ನು ಕೊಡುತ್ತಾರೆ. ಊರಿನವರಿಗೆ ಎಣ್ಣೆ ಬೀರುವ ಮೂಲಕ ಇನ್ನೂ ಆತ್ಮೀಯವಾಗಿ ಕರೆಯುತ್ತಾರೆ. ಇದು ಚಪ್ಪರದ ದಿನ ನಡೆಯುತ್ತದೆ.

ಹಂದರ ಹಾಕುವ ಶಾಸ್ತ್ರ : ಮನೆಯ ಮುಂದೆ ಶಾಸ್ತ್ರೋಕ್ತವಾಗಿ ಹಾಕುವ ಚಪ್ಪರಕ್ಕೆ ಹಂದರ ಎಂದು ಕರೆಯುತ್ತಾರೆ. ಊರಿನವರ ಸಹಾಯದಿಂದ ಈ ಕಾರ್ಯ ಮಾಡುತ್ತಾರೆ. ಮದುವೆ ಧಾರೆ ಎಲ್ಲಿ ನಡೆಯುವುದೋ ಅಲ್ಲಿ ಮಾತ್ರ ಚಪ್ಪರ ಹಾಕುತ್ತಾರೆ. ಹೆಚ್ಚಾಗಿ ಧಾರೆ ಗಂಡಿನ ಮನೆಯ ಮುಂದೆ ನಡೆಯುತ್ತದೆ. ಹೆಣ್ಣಿನ ಮನೆಯ ಮುಂದೆಯು ಚಪ್ಪರ ಹಾಕುವ ಸಂಪ್ರದಾಯವಿದೆ. ಹಂದರಕ್ಕೆ ಬೇಕಾಗುವ ಸಾಮಾನುಗಳನ್ನು ಮದುವೆ ಮಾಡುವ ಮನೆಯವರೇ ತರಬೇಕು. ಚಪ್ಪರದ ಕಂಬ ಕಂಬಗಳಿಗೂ ಮಾವಿನ ತಳಿರು ತೋರಣಗಳಿಂದ ಅಲಂಕರಿಸಿ ಚಪ್ಪರಕ್ಕೆ ಮಾವಿನ ಸೊಪ್ಪನ್ನು ತೂಗಿ ಬಿಡುತ್ತಾರೆ. ಮನೆಯ ಬಾಗಿಲುಗಳಿಗೆ ತೆಂಗಿನಗರಿಯನ್ನು ಕಟ್ಟಿ ಅಲಂಕರಿಸುತ್ತಾರೆ. ಅಂಗಳ ಮತ್ತು ಮನೆಯ ಸುತ್ತಲೂ ಸಗಣಿಯಿಂದ ಸಾರಿಸುತ್ತಾರೆ. ಅಂಗಳದ ಮಧ್ಯಭಾಗದಲ್ಲಿ ನಾಲ್ಕ ಕಂಬ ನೆಟ್ಟು ಮಂಟಪ ನಿರ್ಮಿಸಿ ಅಲಂಕಾರ ಮಾಡುತ್ತಾರೆ. ಕೆಲವು ಕಡೆ ಈ ಮಂಟಪ ಕಂಡುಬರುವುದಿಲ್ಲ. ಒಟ್ಟಿನಲ್ಲಿ ಮದುವೆಯ ಎಲ್ಲಾ ಕಾರ್ಯಕ್ರಮಗಳೂ ಚಪ್ಪರದ ಅಡಿಯಲ್ಲಿಯೇ ನಡೆಯುತ್ತದೆ. ದಿನನಿತ್ಯ ಬಳಸುತ್ತಿದ್ದ ಆ ಸ್ಥಳವನ್ನು ದೈವತ್ವವನ್ನಾಗಿ ಪರಿವರ್ತಿಸುತ್ತಾರೆ. ಮದುಮಗ, ಮತ್ತು ಮದುಮಗಳು ಹಾಲು ಬರುವ ನಾಲ್ಕು ಕಂಬಗಳನ್ನು ಹಂದರದ ಅಡಿಯಲ್ಲಿ ನಿಲ್ಲಿಸುತ್ತಾರೆ. ಹೀಗೆ ಮಾಡುವಾಗ ಕುಣಿಯಲ್ಲಿ ಲೋಹ, ಹಾಲು ಅರಿಶಿಣ ಕುಂಕುಮ ಹಾಕುವ ಸಂಪ್ರದಾಯವಿದೆ. ಹೀಗೆ ಮದುಮಗ ನೆಡುವ ಕಂಬಕ್ಕೆ **ಹಾಲುಗಂಬಶಾಸ್ತ್ರ** ಎಂದು ಕರೆಯುತ್ತಾರೆ. ಸಂಜೆ ಮದುಮಗ ಮಗಳಿಗೆ ಅರಿಶಿಣವನ್ನು ಹಚ್ಚಿ ಸ್ನಾನ ಮಾಡಿಸುವ ಸ್ನಾನದ ಶಾಸ್ತ್ರಗಳು ನಡೆಯುತ್ತವೆ.

ಹೀಗೆ ಮದುವೆ ಹಿಂದಿನ ದಿವಸ ನಡೆಯುವ ಎಲ್ಲ ಶಾಸ್ತ್ರಗಳನ್ನು ಚಪ್ಪರದ ಶಾಸ್ತ್ರ ಎಂದು ಕರೆಯುತ್ತಾರೆ. ಆ ದಿನ ಈ ಸಮಾರಂಭಕ್ಕೆ ಎಲ್ಲರೂ ಬಂದಿರುತ್ತಾರೆ. ಬಂದ ನೆಂಟರು, ಬಂಧುಗಳಿಗೆ ಊಟ ವ್ಯವಸ್ಥೆ ಇರುತ್ತದೆ. ನಂತರ ಇವರಲ್ಲಿ ಮದುವೆ ನಂತರ ಹೆಣ್ಣು ಗಂಡು ಚಪ್ಪರವನ್ನು ನೋಡುವಂತಿಲ್ಲ ಎಂಬುದು ನಿಷಿದ್ಧವಾಗಿದೆ. ಆ ಮೇಲೆ ಎಲ್ಲಾ ಕಾರ್ಯಕ್ರಮ ಮುಗಿದ ಮೇಲೆ ಮೊದಲು ಹೆಣ್ಣಿನ ಸೋದರಮಾವನಿಂದ ಈಶಾನ್ಯ ಮೂಲೆಯಲ್ಲಿ ಚಪ್ಪರವನ್ನು ಕೀಳಿಸುತ್ತಾರೆ. ಈ ರೀತಿ ಚಪ್ಪರಶಾಸ್ತ್ರ ನಡೆಯುತ್ತದೆ.

ಹಸೆಕಟ್ಟೆ : ಇದನ್ನು ಹಸೆಗೋಡೆ ಎಂತಲೂ ಕರೆಯುತ್ತಾರೆ. ಮದುವೆ ಕಾರ್ಯ ಮಾಡುವವರ ಮನೆಯಲ್ಲಿ ಈ ಹಸೆಯನ್ನು ಬರೆಯಿಸುವ ಪದ್ಧತಿ ಹಿಂದಿನಿಂದಲೂ ಬಂದಿದೆ. ಮನೆಯ ಮಧ್ಯದ ಗೋಡೆಯಲ್ಲಿ ಬರೆಯುವ ಚಿತ್ರವನ್ನು ಸಿಪ್ಪೂಣ ಚಿತ್ರ

ಬರೆಯುವವನಿಂದ ಬರೆಸುತ್ತಾರೆ. ಹಾಗೆ ಬರೆಯಬೇಕಾದರೆ ಮದುಮಗನಿಂದ ಒಂದು ನೀರನ್ನು ಹಾಕಿಸುತ್ತಾರೆ. ಇದನ್ನು ಹೆಣ್ಣಿನ ಮನೆಯಲ್ಲಿಯೇ ಮಾಡುತ್ತಾರೆ. ಗೋಡೆಯಲ್ಲಿ ಎರಡು ಪ್ರತ್ಯೇಕವಾದ ಚಿತ್ರಗಳನ್ನು ಬರೆಯಲಾಗುವುದು. ಸೂರ್ಯ, ಚಂದ್ರ, ಕಳಸ, ಗಂಡು ಹೆಣ್ಣಿನ ಬಾಸಿಂಗ ಚಿತ್ರಗಳಿರುತ್ತವೆ. ಮದುವೆಯ ನಂತರ ಇಬ್ಬರನ್ನು ಆ ಚಿತ್ರದ ಕೆಳಗೆ ಕೂರಿಸಿ ಅಕ್ಷತೆ ಹಾಕುತ್ತಾರೆ. ಚಿತ್ರವನ್ನು ಬರೆದವನಿಗೆ ಕಾಯಿ, ಎಲೆ, ಅಡಿಕೆ ಕೊಟ್ಟು ಅವರ ಶ್ರೀಮಂತಿಕೆಗೆ ತಕ್ಕಂತೆ ಅವನಿಗೆ ದಕ್ಷಿಣೆ ಕೊಡುತ್ತಾರೆ. ಇವರು ಬರೆಯುವ ಚಿತ್ರಗಳಲ್ಲಿ ಹೆಣ್ಣು ಗಂಡು ಸಂಕೇತಿಸುವ ಸೂರ್ಯ ಮತ್ತು ಚಂದ್ರನ ಚಿತ್ರಗಳು ಇರುತ್ತವೆ.

ಗಂಡು ಕುಳಿತುಕೊಳ್ಳುವ ಸ್ಥಳದಲ್ಲಿ ಸೂರ್ಯ, ಲಿಂಗ, ಬಸವ, ಬಾಸಿಂಗ, ನಕ್ಷತ್ರದ ಚಿತ್ರಗಳು ಇದ್ದರೆ, ಹೆಣ್ಣಿನ ಕಡೆಯ ಚಿತ್ರದಲ್ಲಿ ಚಂದ್ರ. ಅರ್ಧ ಬಾಸಿಂಗ, ಕಳಸ ಹೊತ್ತ ಮಹಿಳೆ, ಹಂಸಪಕ್ಷಿಗಳು ಕಂಡುಬರುತ್ತವೆ.

ಧಾರೆಯ ದಿನವನ್ನೇ ಇವರು ಮದುವೆ ಎಂದು ಕರೆಯುತ್ತಾರೆ. ಈ ಹಿಂದೆ ನಡೆದ ಎಲ್ಲಾ ಕಾರ್ಯಕ್ರಮಗಳು ಮದುವೆಯ ಹಿಂದಿನ ದಿನ ನಡೆಯುತ್ತವೆ. ಇವುಗಳೆಲ್ಲಾ ಹೆಚ್ಚಾಗಿ ಗಂಡಿನ ಮನೆಯಲ್ಲಿ ನಡೆಯುತ್ತವೆ. ಹೆಚ್ಚಿನ ಶಾಸ್ತ್ರಗಳು ಧಾರೆಯ ದಿನವೇ ನಡೆಯುತ್ತವೆ. ಮುಂಜಾನೆಯಿಂದಲೇ ಊರಿನ ಜನರೆಲ್ಲ ಮದುವೆಯ ಕಾರ್ಯಗಳಲ್ಲಿ ನೆರವು ನೀಡಲು ಸೇರುತ್ತಾರೆ. ಆ ದಿನ ಹಾಡುಗಳ ಸುಮಧುರ ಗಾನ ಮೇಳೈಸುತ್ತಿರುತ್ತದೆ. ಮದುವೆಗೆ ಬೇಕಾದ ಹೂ, ಹಣ್ಣು, ಕಾಯಿ, ವೀಳ್ಯದೆಲೆ, ಅಡಿಕೆ, ಬಾಳೆ ಎಲೆಯಲ್ಲೆಲ್ಲಾ ಅಲ್ಲಲ್ಲಿ ತುಂಬಕೊಂಡಿರುತ್ತಾರೆ. ನಸುಕಿನಲ್ಲಿಯೇ ಕುಂಬಾರ ಕುಂಭಗಳನ್ನು, ಹಡಪದ ಹಂಪಣ್ಣ ಬಾಸಿಂಗವನ್ನು, ಚಮ್ಮಾರ ಚಪ್ಪಲಿಯನ್ನು ತರಬೇಕು. ಇವರಲ್ಲಿ ಬಾಸಿಂಗವನ್ನು ತರುವುದಕ್ಕೆ ಹಡಪದ ಹಂಪಣ್ಣನೇ ಆಗಬೇಕು. ಇವುಗಳನ್ನೆಲ್ಲಾ ಶಾಸ್ತ್ರದಂತೆ ಐದು ಜನ ಮುತ್ತೈದೆಯರು ಅವರಿಗೆ ಕೊಡಬೇಕಾದ ಕಾಣಿಕೆ ಸಲ್ಲಿಸಿ ತರುತ್ತಾರೆ. ನಂತರ ಇವರು ನಡೆಸುವ ಶಾಸ್ತ್ರಗಳು ಕ್ರಮವಾಗಿ ಮುಂದುವರಿಯುತ್ತವೆ.

ಐರಾಣಿಶಾಸ್ತ್ರ : ಕುಂಬಾರನಿಂದ ಹೊಸ ಮಡಿಕೆಗಳನ್ನು ಶಾಸ್ತ್ರದಂತೆ ಪಡೆಯುವ ಆಚರಣೆಗೆ ಐರಣಿಶಾಸ್ತ್ರ ಎಂದು ಕರೆಯಲಾಗಿದೆ. ಮೊದಲೇ ತೀರ್ಮಾನಿಸಿದಂತೆ ಕುಂಬಾರ ಆ ಊರಿನ ದೇವರ ಗುಡಿ ಹತ್ತಿರ ತನ್ನ ಮಡಿಕೆಗಳ ಜೊತೆ ಕಾದಿರುತ್ತಾನೆ. ಊರಿನ ಹಿರಿಯರು, ಬಂಧುಗಳು, ಮುತ್ತೈದೆಯರು, ಓಲಗದವರೊಡನೆ ಅಲ್ಲಿಗೆ ಹೋಗಿ ಅವನು ಇರಿಸಿದ್ದ ಮಡಿಕೆಗಳನ್ನು ಪೂಜಿಸಿ ನಂತರ ಅವನಿಗೆ ಕೊಡಬೇಕಾದ ಅಕ್ಕಿ, ಭತ್ತ, ರಾಗಿ, ಎಲೆ, ಅಡಿಕೆ, ದಕ್ಷಿಣೆ ಕೊಟ್ಟು ಮಡಿಕೆಗಳನ್ನು ತರುತ್ತಾರೆ. ಕುಂಬಾರನಿಂದ ಐರಣಿ ತರುವಂತೆ ಹಡಪದ ಹಂಪಣ್ಣನಿಂದ ಬಾಸಿಂಗವನ್ನು ಚಮ್ಮಾರನಿಂದ ಚಪ್ಪಲಿಯನ್ನು ತರುತ್ತಾರೆ. ಈ ಶಾಸ್ತ್ರದಲ್ಲಿ ಕಡ್ಡಾಯವಾಗಿ ಐದು ಜನ ಸಾಲಾವಳಿ ತಂದ ಮುತ್ತೈದೆಯರು ಇರಲೇಬೇಕು. ಮದುವೆಯ ಎಲ್ಲಾ ಶಾಸ್ತ್ರಗಳು ಮುತ್ತೈದೆಯರ ಮೂಲಕವೇ ನಡೆಯಬೇಕು.

ಗಂಗೆಪೂಜೆ : ಮದುವೆ ದಿನ ಮುಂಜಾನೆ ಐದು ಜನ ಮುತ್ತೈದೆಯರು ಕುಂಬಾರನಿಂದ ಮಡಿಕೆಗಳನ್ನು ತೆಗೆದುಕೊಂಡು ಬಾವಿಗೆ ಬರುತ್ತಾರೆ. ಇವರೊಂದಿಗೆ ಓಲಗದವರು ಓಲಗ ನುಡಿಸುತ್ತಾರೆ. ಮೆರವಣಿಗೆಯಲ್ಲಿ ಊರಿನವರು, ಬಂಧುಗಳು, ಹೆಂಗಸರು, ಮಕ್ಕಳು ಇರುತ್ತಾರೆ. ಮೊದಲು ಬಾವಿಗೆ ಹಣ್ಣು, ಹೂವು, ಗಂಧಗಳಿಂದ ಪೂಜಿಸುತ್ತಾರೆ. ಒಂದು ಬಾಳೆ ಎಲೆ ಮೇಲೆ ಬಾಳೆಹಣ್ಣು, ಎಲೆ ಅಡಿಕೆ ಇಟ್ಟು ಆ ಐದು ಜನ ಮುತ್ತೈದೆಯರು ಕೈಯಲ್ಲಿ ಹಿಡಿದು ಬಾವಿಗೆ ಹಾಕುತ್ತಾರೆ. ಅಥವಾ

ನದಿಗೆ ಹಾಕುತ್ತಾರೆ. ನಂತರ ನೀರನ್ನು ತೆಗೆದುಕೊಳ್ಳುತ್ತಾರೆ. ಕುಂಬಾರನಿಂದ ಪಡೆದ ಐದು ಕೊಡಗಳಿಗೆ ನೀರು ತುಂಬಿಸಿ ಪೂಜಿಸುತ್ತಾರೆ. ನೀರಿನಿಂದ ತುಂಬಿದ ಮಡಿಕೆಗಳನ್ನು ತಲೆಯ ಮೇಲೆ ಹೊತ್ತು ಮೆರವಣಿಗೆಯಲ್ಲಿ ಬರುತ್ತಾರೆ. ಮೆರವಣಿಗೆಯಲ್ಲಿ ಬರುವಾಗ ಬೇರೆ ಜನಾಂಗಗಳಲ್ಲಿರುವಂತೆ ಇವರಲ್ಲಿಯೂ ಮಡಿವಾಳ ಮಾಚಪ್ಪನೇ ಮಡಿ ಬಿಡಬೇಕು. ನಂತರ ಮಡಿ ಮೂಲಕ ಮನೆಗೆ ಬರುತ್ತಾರೆ. ಮಂಡ್ಯ ಜಿಲ್ಲೆ ಗಂಗಡಿಕಾರ ಗೌಡರಲ್ಲಿ ಗಂಗೆ ತರುವಾಗ ದೇವಸ್ಥಾನದ ಪೂಜಾರಿ ಕ್ರೂರ ವೇಷ ಧರಿಸಿ ಕುಣಿಯುವ ಪದ್ಧತಿಯು ಇದೆ. ಇದನ್ನು ದೇವರು ತರುವುದು ಎಂದೂ ಕೂಡ ಕರೆಯುವ ಪದ್ಧತಿ ಈಗಲೂ ಕಾಣಬಹುದು.

ಸುರುಗಿ ಸುತ್ತುವುದು : ಐದು ಜನ ಮುತ್ತೈದೆಯರು ಗಂಗೆಯನ್ನು ಪೂಜೆ ಮಾಡಿ ಕೊಡಗಳನ್ನು ತುಂಬಿಸಿಕೊಂಡು ಮೆರವಣಿಗೆಯಲ್ಲಿ ಬರುತ್ತಾರೆ. ಹೀಗೆ ನೀರು ತುಂಬಿದ ಕೊಡಗಳನ್ನು ಮನೆ ಮುಂದೆ ಆಗಲೇ ನಿರ್ಮಿಸಿದ ಹಂದರದ ಕೆಳಗೆ ಕ್ರಮವಾಗಿ ಇಡುತ್ತಾರೆ. ಅವುಗಳನ್ನು ಒಂದು ವೃತ್ತಾಕಾರದಲ್ಲಿ ಇಟ್ಟು ಆ ಕೊಡಗಳ ತುದಿಗೆ ಅರಿಶಿಣ ಲೇಪನದ ದಾರಗಳನ್ನು ಈ ಮುತ್ತೈದೆಯರು ಐದು ಸುತ್ತು ಸುತ್ತುತ್ತಾರೆ. ಸಾಮಾನ್ಯವಾದ ಸ್ಥಳವೊಂದನ್ನು ಪ್ರತ್ಯೇಕಗೊಳಿಸಿ ಪವಿತ್ರಗೊಳಿಸುತ್ತಾರೆ. ಸಾಮಾನ್ಯವಾಗಿ ಮದುವೆ ದಿನ ನಡೆಯುವ ಎಲ್ಲಾ ಆಚರಣೆಗಳೂ ಇಲ್ಲಿಯೇ ನಡೆಯುತ್ತವೆ. ಅರಿಶಿಣ ತಿಕ್ಕುವ ಸ್ನಾನ ಮಾಡಿಸುವ ಅಲಂಕಾರ ಮಾಡುವ ಹೀಗೆ ಅನೇಕ ಶಾಸ್ತ್ರಗಳು ಇಲ್ಲಿ ನಡೆಯುತ್ತವೆ. ಹೀಗೆ ಅಲಂಕಾರಗೊಂಡ ಮದುಮಗ ಮತ್ತು ಮದುಮಗಳು ಆ ಸ್ಥಳವನ್ನು ಬಿಟ್ಟು ಧಾರೆ ಮುಹೂರ್ತ ಪ್ರಾರಂಭಿಸುವವರೆಗೆ ಹೊರಬರುವಹಾಗಿಲ್ಲ. ಅರಿಶಿಣ ಮೈಗೆ ತಿಕ್ಕಿದ ಮೇಲೆ ಅವರು ಹಸಿ ಮೈ ವ್ಯಕ್ತಿಗಳಾಗಿರುತ್ತಾರೆ ಇವರಿಗೆ ಸೋಂಕು ಜಾಸ್ತಿ. ಇವರು ಹೊರಗಡೆ ಹೋಗುವುದಾಗಲಿ, ಒಂಟಿ ಇರುವುದಾಗಲಿ ನಿಷಿದ್ಧ. ಅವರುಗಳನ್ನು ಅಂದು ಸಾಮಾನ್ಯ ಜೀವನ ಕ್ರಮದಿಂದ ಪ್ರತ್ಯೇಕಗೊಳಿಸಿ ದೈವತ್ವಕ್ಕೇರಿಸಿ ಗೌರವಿಸುತ್ತಾರೆ. ಆದ್ದರಿಂದ ಇವರಿಗೆ ಅರಿಶಿಣ ತಿಕ್ಕುವುದು, ಸ್ನಾನ ಮಾಡಿಸುವುದು, ಛತ್ರಿ ಹಿಡಿಯುವುದು ಧಾರೆ ಮುಹೂರ್ತ ಬಂದಾಗ ಹೆಣ್ಣನ್ನು ಬಿಡದಿ ಮನೆಯೊಳಗೆ ಕಳುಹಿಸಿ ಗಂಡನ್ನು ಧಾರೆ ಇರುವ ಜಾಗಕ್ಕೆ ಮೆರವಣಿಗೆ ಮೂಲಕ ಕರೆತರುವುದು ವಾಡಿಕೆ.

ಚಪ್ಪರದ ಕಳಗೆ ನಿರ್ಮಾಣಗೊಂಡಿರುವ ಮಂಟಪದಲ್ಲಿ ಬೇರೆ ಜನ ವರ್ಗಗಳಲ್ಲಿ ಇರುವಂತೆ ಇವರಲ್ಲಿಯೂ ಪುರೋಹಿತರು ಅಥವಾ ಐನೋರು ಇರುತ್ತಾರೆ. ಅಕ್ಕಿಯ ರಾಶಿಯನ್ನು ಚೌಕಾಕಾರದ ವೇದಿಕೆ ಹಾಕಿ ಅದರ ಮೇಲೆ ಕಂಚಿನ ಅಥವಾ ಹಿತ್ತಾಳೆಯ ಐದು ಸಣ್ಣ ಕಳಸಗಳನ್ನು ಇಟ್ಟು ಅವುಗಳಿಗೆ ನೀರು ತುಂಬಿಸಿ ಕಳಸದ ಬಾಯಿಗೆ ವೀಳ್ಯದೆಲೆಯನ್ನು ಸುರುಳಿ ಮಾಡಿ ಇಡುತ್ತಾರೆ. ಕಳಸದಲ್ಲಿ ಎಳವಾರ ಕಂಬ ಇಟ್ಟು ಇದಕ್ಕೆ ಅರಿಶಿಣ ಲೇಪಿತ ದಾರವನ್ನು ಐದೈದು ಸುತ್ತು ಸುತ್ತುತ್ತಾರೆ. ಇದರ ಪಕ್ಕದಲ್ಲೇ ಧಾರೆ ನಡೆಯುವ ಸ್ಥಳವೂ ಆಗಿರುತ್ತದೆ. ಪುರೋಹಿತರು ಮಾಡುವ ಈ ಕಾರ್ಯಕ್ಕೆ ಸುರುಗಿ ಸುತ್ತುವುದು ಎಂದು ಕರೆಯುತ್ತಾರೆ. ಹೀಗೆ ಸ್ಥಳ, ವ್ಯಕ್ತಿ ಮತ್ತು ಸಮಯವನ್ನು ಪ್ರತ್ಯೇಕಿಸಿದ ಮುಹೂರ್ತಗಳು ಪವಿತ್ರವೆನಿಸುತ್ತವೆ. ಇದರಲ್ಲಿ ವ್ಯಕ್ತಿ ಒಂದು ಉದ್ದೇಶದ ಬದ್ಧತೆಯಲ್ಲಿ ಸಮಾನವಾದ ಮಹತ್ವವನ್ನು ಪಡೆದು ಪಾವಿತ್ರ್ಯತೆಯನ್ನು ಪಡೆದಿರುತ್ತಾನೆ.

ಧಾರೆಗೆ ಹೊರಡುವ ಮುನ್ನ : ಸಾಮಾನ್ಯವಾಗಿ ರೂಢಿಯಲ್ಲಿರುವಂತೆ ಇವರಲ್ಲಿಯೂ ಧಾರೆಗೆ ಮುನ್ನ ಮದುವೆ ಗಂಡಿಗೆ ಅಲಂಕಾರವನ್ನು ಮಾಡುತ್ತಾರೆ. ಆ ಹುಡುಗನಿಗೆ ವಸ್ತ್ರ, ಆಭರಣಗಳನ್ನು ತೊಡಿಸಲಾಗುವುದು. ಅಂಗಳದಲ್ಲಿ ಹಾಸಿದ ಚಾಪೆಯ ಮೇಲೆ ನಿಲ್ಲಿಸಿ ಕಚ್ಚೆ ಪಂಚೆ, ತುಂಬು ತೋಳಿನ ಅಂಗಿ, ಅಂಗಿಯ ಮೇಲೆ ಕರಿಯ ಕೋಟು. ಕೋಟಿನ ಮೇಲೆ ವಸ್ತ್ರ, ತಲೆಗೆ

ಜರಿ ಪೇಟ ಸುತ್ತಿ ಬಾಸಿಂಗಕಟ್ಟಿ ವೀಳ್ಯದೆಲೆಯ ಪಟ್ಟಿಕಟ್ಟಿ ಆ ಮೇಲೆ ಕಾಲಿಗೆ, ಕೈಗೆ ಬೆಳ್ಳಿಯ ಹಾಗೂ ಚಿತ್ತಾರ ಉಂಗುರ ಹಾಕಿ ಕೊರಳಿಗೆ ಸರವನ್ನು, ಹಣೆಗೆ ಕುಂಕುಮದ ಬೊಟ್ಟನ್ನು ಇಡಲಾಗುವುದು. ಹೀಗೆ ಅಲಂಕಾರಗೊಂಡ ಮದುಮಗನನ್ನು ಶೃಂಗಾರ ಮಾಡಿದ ಬಸವನ ಮೇಲೆ ಕೂರಿಸಿಕೊಂಡು ಊರ ದೇವರ ಗುಡಿಗೆ ಮೆರವಣಿಗೆ ಹೊರಡುತ್ತಾರೆ. ದೇವರ ಗುಡಿಯಲ್ಲಿ ದೇವರಿಗೆ ಅರಿಶಿಣ, ಕುಕುಮ ಸಿಂಗರಿಸಿ ಹಣ್ಣು ಕಾಯಿಗಳನ್ನು ಇಟ್ಟು ಪೂಜಿಸಿ ಆಶೀರ್ವಾದ ಪಡೆದು ಮೆರವಣಿಗೆಯ ಮೂಲಕ ಮದುವೆ ಚಪ್ಪರಕ್ಕೆ ಬರುತ್ತಾರೆ. ನಂತರ ಮದುವೆ ಧಾರೆ ಏರ್ಪಡುತ್ತದೆ.

ಧಾರೆ : ಮದುವೆಯ ಮುಖ್ಯ ಘಟಕವೇ ಧಾರೆ. ಹೆಚ್ಚಾಗಿ ಗಂಡಿನ ಮನೆ ಮುಂದೆ ಅಥವಾ ದೇವಸ್ಥಾನಗಳಲ್ಲಿ ಇದು ನಡೆಯುತ್ತದೆ. ಅಪರೂಪಕ್ಕೆ ಹೆಣ್ಣಿನ ಮನೆಯಲ್ಲೂ ನಡೆಯುತ್ತದೆ. ಇವರಲ್ಲಿ ಹಿಂದೆ ಹೆಣ್ಣನ್ನು ಕರೆ ತಂದು ಧಾರೆ ಎರೆದುಕೊಳ್ಳುವ ಪದ್ಧತಿ ಇತ್ತು. ಆದರೆ ಈಗ ಆ ತರಹದ ಕಟ್ಟು ನಿಟ್ಟು ಇಲ್ಲ. ಎಲ್ಲಿ ಬೇಕಾದರೂ ಮದುವೆ ಮಾಡಬಹುದು. ಹೆಣ್ಣಿನವರಿಗಾಗಿ ಬಿಟ್ಟು ಕೊಟ್ಟ ಬಿಡದಿ ಮನೆಯಲ್ಲಿ ಹೆಣ್ಣಿಗೆ ಅಲಂಕಾರ ಮಾಡಿ ಅನಂತರ ಮಡಿಲು ತುಂಬಲಾಗುವುದು. ಹೀಗೆ ಮಡಿಲು ತುಂಬಿದ ಹೆಣ್ಣನ್ನು ಅಲ್ಲಿಂದ ಧಾರೆ ಮಂಟಪಕ್ಕೆ ಕರೆತರುತ್ತಾರೆ. ಕೆಲಸವನ್ನು ಹೆಣ್ಣಿನ ಸೋದರಮಾವನೇ ಮಾಡುತ್ತಾನೆ. ಹೆಣ್ಣು ಮನೆಯ ಒಳಗಿನಿಂದ ಧಾರೆಯ ಮಂಟಪಕ್ಕೆ ಬಂದರೆ ಗಂಡು ಹೊರಗಿನಿಂದ ಧಾರೆ ಮಂಟಪವನ್ನು ಪ್ರವೇಶ ಮಾಡುತ್ತಾನೆ. ಮೆರವಣಿಗೆಯಿಂದ ನೇರವಾಗಿ ಬಂದ ಗಂಡನ್ನು ಮಂಟಪದಲ್ಲಿ ಹಾಕಿದ ಅಕ್ಕಿ ಮೇಲೆ ನಿಲ್ಲಿಸಿ ಮುಂದೆ ಮರೆಯನ್ನು ಮಾಡುತ್ತಾರೆ. ಅನಂತರ ಹೆಣ್ಣನ್ನು ಗಂಡಿನ ಎದುರು ನಿಲ್ಲಿಸುತ್ತಾರೆ. ''ಕೆಲವು ಜನಾಂಗಗಳಲ್ಲಿ ಕೂರಿಸಿ ಧಾರೆ ಎರೆಯುವ ಪದ್ಧತಿಯು ಇದೆ.''[೨೪] ಪುರೋಹಿತ ಅಥವಾ ಐಯ್ಯನವರು ಮಂತ್ರ ಜಪಿಸುತ್ತಾರೆ. ಹೆಣ್ಣಿನ ತಂದೆ ತಾಯಿ ಧಾರೆ ಎರೆದು ಕೊಡಲು ಸಿದ್ಧರಾಗಿರುತ್ತಾರೆ. ಗಂಡಿನ ಎರಡು ಹಸ್ತಗಳ ಮೇಲೆ ಹೆಣ್ಣಿನ ಹಸ್ತವನ್ನು ಅದರ ಮೇಲೆ ವೀಳ್ಯದೆಲೆ, ತೆಂಗಿನಕಾಯಿ ಇಟ್ಟು, ಪುರೋಹಿತರು ಹೆಣ್ಣಿನ ತಂದೆ ತಾಯಿಯಿಂದ ಹಾಲು ನೀರು ಬಿಡಲು ಹೇಳುತ್ತಾರೆ. ನಿಗಧಿತ ವೇಳೆ ಬರುವಾಗ ತಾಳಿಯಿರುವ ತಟ್ಟೆಯನ್ನು (ತಾಳಿ ಬೆಲ್ಲದ ಅಚ್ಚು ಎಲೆ ಅಡಿಕೆ, ಕಾಯಿ) ಹಿರಿಯರು ಹಾಗೂ ಮುತ್ತೈದೆಯರೊಂದಿಗೆ ಮುಟ್ಟಿಸಿ ತಾಳಿಯನ್ನು ಗಂಡಿನಿಂದ ಹೆಣ್ಣಿನ ಕೊರಳಿಗೆ ಕಟ್ಟಿಸುತ್ತಾರೆ. ಅದುವರೆಗೂ ''ಸುಲಗ್ನಾ ಸಾವಧಾನ ಸುಮುಹೂರ್ತ ಸಾವಧಾನ'' ಎಂದು ಹೇಳುತ್ತಿರುವಾಗ ಜೋರಾಗಿ ಓಲಗ ಮಾಡುವಂತೆ ಹೇಳಿ ಮಾಂಗಲ್ಯಮಂ ತಂತುನಾನೇನ ನವ ಜೀವನ ಹೇತುನಾ ಕಂಠೆಭದ್ರೆ ಸುಭಗ ಸಂಜೀವ....

ಹೀಗೆ ಮಂತ್ರ ಹೇಳುವಾಗ ಹರ ವಧುವಿನ ಕೊರಳಿಗೆ ತಾಳಿ ಕಟ್ಟುತ್ತಾನೆ. ಅಲ್ಲಿ ನೆರೆದವರೆಲ್ಲ ಅಕ್ಕಿಯನ್ನು ಎರಚುತ್ತಾರೆ. ಇಲ್ಲಿ ಮದುವೆಯ ಬಹುಮುಖ್ಯ ಉಡುಗೆಗೆ (ಸೀರೆ) ಗಂಟು ಹಾಕಿ ಅವರನ್ನು ಒಂದು ಮಾಡುತ್ತಾರೆ. ಇಲ್ಲಿ ಎಲ್ಲರೂ ಗಂಡು ಹೆಣ್ಣಿನ ಮೇಲೆ ಅರಿಶಿಣದ ಅಕ್ಕಿಯನ್ನು ತಲೆಯ ಮೇಲೆ ಹಾಕಿ ಮಾತನಾಡಿಸಿಕೊಂಡು ಹೋಗುತ್ತಾರೆ. ಅನಂತರ ಪುರೋಹಿತರು ವಧೂವರರಿಗೆ ಸೂರ್ಯ ನಮಸ್ಕಾರ ಮಾಡಿಸಲು ಮಂಟಪದಿಂದ ಹೊರಗೆ ಕರೆತರುತ್ತಾರೆ. ಸೂರ್ಯ ನಮಸ್ಕಾರ ಮಾಡುವಾಗ ಪುರೋಹಿತರು ಸೂರ್ಯನ ನೋಡಮ್ಮ ಚಂದ್ರನ ನೋಡಮ್ಮ ಸೂರ್ಯ ಚಂದ್ರನಂತೆ ಗಂಡನ ಕಂಡೆ, ಬೆಳ್ಳಿಯಂತೆ ಗಂಡನ ಕಂಡೆ ಅಂತ ಹೇಳಿ ಬೆಳ್ಳಿ ಕಂಡೆನಾ ಸೂರ್ಯನ ಕಂಡೆನಾ ಎಂದು ಹೇಳಿ ಮದುವೆ ಮಂಟಪದಲ್ಲಿ ಎರಡು ಕುರ್ಚಿಗಳ ಮೇಲೆ

ಗಂಡು ಹೆಣ್ಣನ್ನು ಕೂರಿಸುತ್ತಾರೆ. ಮದುವೆಗೆ ಬಂದ ನೆಂಟರಿಷ್ಟರು ಮತ್ತು ಆಪ್ತರು ತಮ್ಮ ಕೈಲಾದಷ್ಟು ಹಣ ಅಥವಾ ಉಡುಗೊರೆ ಕೊಡುತ್ತಾರೆ. ಇದನ್ನು "ಮುಯ್ಯಿ" ಮಾಡುವುದು ಎಂದು ಹೇಳುತ್ತಾರೆ. ಹೀಗೆ ಮುಯ್ಯಿ ಪಟ್ಟಿಯನ್ನು ಆ ಮಂಟಪದಲ್ಲಿಯೇ ಎರಡು ಕಡೆಯವರಿಂದ ಅವರ ಹೆಸರು ಊರುಗಳನ್ನು ಬರೆದುಕೊಳ್ಳುತ್ತಾರೆ. ಇದಾದ ನಂತರ ಗಂಡು ಹೆಣ್ಣನ್ನು ಮಂಟಪದಿಂದ ಹೊರಗೆ ಕರೆತರಲಾಗುವುದು. ಮದುವೆಗೆ ಬಂದವರ ಜೊತೆ ಪಂಕ್ತಿಯಲ್ಲಿ ಕುಳಿತು ಊಟ ಮಾಡುವ ದೃಶ್ಯ ತುಂಬಾ ಅರ್ಥಗರ್ಭಿತವಾಗಿರುತ್ತದೆ.

ಧಾರೆ ಸಂಜೆ ಮದುಮಕ್ಕಳನ್ನು ಊರಿನ ಪ್ರಮುಖ ಬೀದಿಗಳಲ್ಲಿ ಎತ್ತಿನ ಗಾಡಿಯಲ್ಲಿಯೋ ಅಥವಾ ಕಾರಿನಲ್ಲಿಯೋ ಕಡ್ಡಾಯವಾಗಿ ಮೆರವಣಿಗೆ ಮಾಡುತ್ತಾರೆ. ಮೆರವಣಿಗೆಯಲ್ಲಿ ಊರಿನ ಹಿರಿಯರು, ಬಂಧುಗಳು ಮತ್ತು ಆಪ್ತರು ಸೇರಿರುತ್ತಾರೆ. ನಂತರ ಪಾದಪೂಜೆಯ ಕಾರ್ಯಕ್ರಮ ಪ್ರಾರಂಭವಾಗುತ್ತದೆ. ನಂತರ ಗಂಡ ಹೆಂಡತಿ ಇಬ್ಬರೂ ಅವರ ಊರಿನ ದೇವರ ಗುಡಿಗೆ ಹೋಗಿ ನಮಸ್ಕರಿಸಿ ಬರುತ್ತಾರೆ.

ಧಾರೆ ಮುಗಿದ ನಂತರ ಗಂಡು ಹೆಣ್ಣು ಇಬ್ಬರು ಕೈ ಕೈ ಹಿಡಿದುಕೊಳ್ಳುವಾಗ ಸಮಾನವಾಗಿ ಎರಡು ಹಕ್ಕಿಗಳನ್ನು ನೀರಿನಲ್ಲಿ ಬಿಡುತ್ತಾರೆ. ಆಗ ಹೆಣ್ಣು ಗಂಡು ಎನ್ನುವಂತವರು ತುಂಬಾ ಪ್ರೀತಿ ಇದ್ದರೆ ಆ ಹಕ್ಕಿಯನ್ನು ಬಿಟ್ಟ ತಕ್ಷಣ ಎರಡು ಒಂದುಗೂಡಿಕೊಳ್ಳುತ್ತವೆ. ಒಂದು ವೇಳೆ ಪ್ರೀತಿ ಇಲ್ಲದಿದ್ದರೆ ಆ ಹಕ್ಕಿಗಳು ಒಂದುಗೂಡುವುದಿಲ್ಲ ಎಂಬುದು ಇವರಲ್ಲಿ ಇಂದಿಗೂ ಆಚರಣೆಯಲ್ಲಿರುವುದನ್ನು ಕಾಣಬಹುದು.

ಈ ಆಚರಣೆ ಮುಗಿದ ಮೇಲೆ ಮಾರನೇ ದಿನ ಹೆಣ್ಣು ಗಂಡು ಇಬ್ಬರಿಗೂ ಹಾಲು ಅನ್ನ ಊಟ ಮಾಡಿಸುತ್ತಾರೆ. ಅವರ ಜೊತೆ ಸಣ್ಣ ಮಕ್ಕಳನ್ನು ಕುಳ್ಳಿರಿಸಿ ಇಬ್ಬರ ಜೊತೆಯಲ್ಲಿಯೂ ಊಟ ಮಾಡಿಸುತ್ತಾರೆ. ಆಗ ಯಾರು ಬೇಗ ಊಟ ಮಾಡಿ ಮುಗಿಸುತ್ತಾರೆ ಎಂಬ ಜೂಜಾಟವನ್ನು ಆಡುತ್ತಾರೆ. ನಂತರ ಇವರಲ್ಲಿ ಮದುವೆ ಬೀಗರ ಊಟಕ್ಕೆ ಮರಿಊಟ ಹಾಕಲೇಬೇಕು ಎನ್ನುವ ಪದ್ಧತಿ ಇದೆ. ಬೀಗರ ಊಟಕ್ಕೆ ಇಲ್ಲದಿದ್ದರೆ ದೀಕ್ಷೆ ಸಂದರ್ಭದಲ್ಲಿ ಕೊಡಬೇಕು ಅದೂ ಇಲ್ಲದಿದ್ದರೆ ಸತ್ತಾಗ ಮಾತ್ರ ಖಂಡಿತವಾಗಿ ಊಟ ಕೊಡಲೇಬೇಕು ಎನ್ನುವ ಪದ್ಧತಿ ಇಂದಿಗೂ ಆಚರಣೆಯಲ್ಲಿ ಇದೆ. ಈ ಮೂರು ಸಂದರ್ಭದಲ್ಲಿಯೂ ಆ ವ್ಯಕ್ತಿ ಊಟವನ್ನು ಕೊಡದಿದ್ದರೆ ನೀಲಗಾರ ಪಂಥದಲ್ಲಿ ಬೇರೆ ಮಾಡುತ್ತಾರೆ ಎಂಬ ಕಟ್ಟುನಿಟ್ಟಿನ ಕ್ರಮವನ್ನು ನೀಲಗಾರರಲ್ಲಿ ಕಾಣಬಹುದಾಗಿದೆ.

ಪಾದಪೂಜೆ : ಧಾರೆ ಮುಗಿದ ಮೇಲೆ ವಧೂವರರ ಕೈ ಹಿಡಿಸಿ ಹುಡುಗನ ಶಲ್ಯಕ್ಕೂ ಹುಡುಗಿಯ ಸೆರಗಿಗೂ ಗಂಟು (ಬ್ರಹ್ಮಗಂಟು) ಹಾಕುತ್ತಾರೆ. ಅನಂತರ ಮನೆಯ ಹೊಸ್ತಿಲು ದಾಟಬೇಕಾದರೆ ಮೊದಲು ವಧುವರರ ಪಾದ ತೊಳೆದು ಪೂಜೆ ಮಾಡುವ ಶಾಸ್ತ್ರ ನಡೆಯುತ್ತದೆ. ಈ ಕಾರ್ಯವನ್ನು ಗಂಡಿನ ತಂಗಿ ಅಥವಾ ಅಕ್ಕ ನೆರವೇರಿಸುತ್ತಾಳೆ. ವಧೂವರರ ಪಾದಗಳನ್ನು ನೀರಿನಿಂದ ತೊಳೆದು ಕುಂಕುಮ ಅರಿಶಿನ ಹಚ್ಚಿ ಹೂವುಗಳಿಂದ ಸಿಂಗರಿಸಿ ಹಣ್ಣು ಕಾಯಿಗಳಿಂದ ಪೂಜಿಸಿ ಕಾಲನ್ನು ಮುಟ್ಟಿ ನಮಸ್ಕರಿಸುತ್ತಾಳೆ. ಹೀಗೆ ಮಾಡುವಾಗ ಅವನ ಪಾದವನ್ನು ಹಿಡಿಯುವಾಗ ತಂಗಿಯ ಮನಸ್ಸಿನಲ್ಲಿ ನಿನ್ನ ಮಗಳನ್ನು ನನ್ನ

ಮಗನಿಗೆ ಕೊಡುವ ಸೂಚನೆ ಕಂಡುಬರುತ್ತದೆ. ನಂತರ ತನ್ನ ತವರಿನ ಸಂಬಂಧವನ್ನು ಉಳಿಸಿಕೊಳ್ಳುವ ಮಹತ್ವದ ಉದ್ದೇಶವಾಗಿದ್ದು ಇದರ ಸಂಕೇತವಾಗಿದೆ.

ಗೃಹ ಪ್ರವೇಶ : ಮದುವೆ ಧಾರೆ ಮುಗಿದ ನಂತರ ವಧುವನ್ನು ವರನು ತನ್ನ ಮನೆಗೆ ಕರೆದುಕೊಂಡು ಬರುವ ಪದ್ಧತಿ ಇತರೆ ಸಮುದಾಯಗಳಲ್ಲಿ ಉಂಟು. ಆದರೆ ಇವರಲ್ಲಿ ಆ ಪದ್ಧತಿ ಇಲ್ಲ. ಮದುವೆ ಆದ ರಾತ್ರಿ ಹೆಣ್ಣಿನ ಮನೆಯಲ್ಲಿ ಉಳಿದುಕೊಳ್ಳುವ ನಿಯಮ ಇವರಲ್ಲಿ ಇಂದಿಗೂ ಇದೆ. ಮದುವೆಯಾದ ನಂತರದ ದಿನಗಳಲ್ಲಿ ಅವರು ಗಂಡನ ಮನೆಗೆ ಹೋಗುವರು. ಕೆಲವರು ಆರು ಅಥವಾ ಹತ್ತನೆಯ ದಿವಸ ಹೋಗುವರು. ಧಾರೆಯ ನಂತರವೇ ಮದುಮಗ ತನ್ನ ಹೆಂಡತಿಯನ್ನು ತನ್ನ ಮನೆಗೆ ತುಂಬಿಸಿಕೊಳ್ಳುವ ಸಂಪ್ರದಾಯ ನಡು ಮನೆಯಲ್ಲಿ ದೀಪ ಬೆಳಗಿಸಿದ ಅನಂತರ ಪ್ರಧಾನ ಬಾಗಿಲ ಮಧ್ಯದಲ್ಲಿ ಒಂದು ಸೇರಿನಲ್ಲಿ ಅಕ್ಕಿಯನ್ನು ಅದರಲ್ಲಿ ತುಂಬಿಸಿ ಅದರ ಮೇಲೆ ಬೆಲ್ಲದ ಅಚ್ಚನ್ನು ಇಟ್ಟು ಹೊಸ್ತಿಲ ಮೇಲೆ ಎರಡೂ ಕಡೆ ಎಲೆ ಅಡಿಕೆಯನ್ನಿಡುತ್ತಾರೆ. ಆ ಸೇರನ್ನು ಹೆಣ್ಣು ತನ್ನ ಬಲಗಾಲಿನಿಂದ ಒಳಕ್ಕೆ ದೂಡಿ ಮನೆಯೊಳಗೆ ಪ್ರವೇಶಿಸುತ್ತಾಳೆ. ಸೇರಿನಲ್ಲಿ ತುಂಬಿರುವ ಅಕ್ಕಿಯು ಮನೆಯೊಳಗೆ ಹರಡಿದರೆ ಹಾಲು ಉಕ್ಕಿದಂತೆ ಮನೆಯು ಉಕ್ಕುತ್ತದೆ ಎಂಬ ನಂಬಿಕೆ. ನಂತರ ಗಂಡು ಹೆಣ್ಣು ಬೇರೆ ಮಾಡುವುದಕ್ಕೆ ಹಸೆ ಬರೆದಿರುವ ಕಡೆ ಕುಳಿತುಕೊಳ್ಳುತ್ತಾರೆ. ಆಮೇಲೆ ಗಂಡು ಹೆಣ್ಣುಗಳು ಹಸೆಗೋಡೆಯ ಅವರವರ ಸ್ಥಳದಲ್ಲಿ ಕುಳಿತುಕೊಳ್ಳುತ್ತಾರೆ. ಅಲ್ಲಿ ನೆರೆದ ಊರಿನವರು ದಂಪತಿಗಳಿಗೆ ಅಕ್ಷತೆ (ಅಕ್ಕಿ) ಹಾಕಿ ಶುಭ ಕೋರುತ್ತಾರೆ.

ಕಾರ್ಯ : ಧಾರೆ ಮುಗಿದ ಮರುದಿನ ಅಥವಾ ಮೂರು ದಿವಸ ಅನ್ನುವಾಗ ಮೊದಲ ರಾತ್ರಿ ಕಾರ್ಯವನ್ನು ಮಾಡುತ್ತಾರೆ. ಇವರಲ್ಲಿ ಹೆಣ್ಣು ದೊಡ್ಡವಳಾಗಿದ್ದರೆ ಆವಾಗಲೇ ಅಂದರೆ ತಾಳಿ ಕಟ್ಟುವ ಮೊದಲೇ ಅವಳ ಮಡಿಲಿಗೆ ಕಾಯಿಬೆಲ್ಲ ಹಾಕಿಸುತ್ತಾರೆ, ಅಲ್ಲಿಗೆ ಈ ಕಾರ್ಯ ಮುಗಿಯುತ್ತದೆ. ಹೆಣ್ಣು ಋತುಮತಿ ಆಗದೇ ಇದ್ದರೆ ಮಾಂಗಲ್ಯ ಮಾತ್ರ ಕಟ್ಟುವುದು ಅಷ್ಟೇ. ಆ ಮೇಲೆ ಋತುಮತಿ ಆಗುವವರೆಗೆ ಅತ್ತೆ ಮಾವನ ಮನೆಯಲ್ಲಿ ಇರುತ್ತಾಳೆ. ಮತ್ತೆ ಪುನಃ ಋತುಮತಿಯಾದಾಗ ಮದುವೆ ಖರ್ಚಿನಂತೆ ಮಾಂಸದ ಊಟ ಹಾಕಿಸಿ ಕುದುರೆ ಮೇಲೆ ಕರೆ ತಂದು ಸೋಬನ ಕಾರ್ಯವನ್ನು ನೆರವೇರಿಸುತ್ತಾರೆ. ಆದಿನ ಬೆಳಿಗ್ಗೆ ಗಂಡು ಹೆಣ್ಣುಗಳು ಸ್ನಾನ ಮುಗಿಸಿ ಊರಿನ ದೇವರ ಗುಡಿಗೆ ಹೋಗಿ ಪೂಜೆ ಸಲ್ಲಿಸುತ್ತಾರೆ. ಅದೇ ದಿನ ಸಂಜೆ ಹುಡುಗಿಯ ಪಕ್ಕದ ಕೋಣೆಯಲ್ಲಿ ಹಾಸಿಗೆ ಸಿದ್ಧಪಡಿಸಿ ಬರುತ್ತಾರೆ. ಅಲ್ಲಿ ಕುಡಿಯಲು ನೀರು ಇಟ್ಟಿರುತ್ತಾರೆ. ಊಟವಾದ ಬಳಿಕ ಗಂಡು ಕೋಣೆಗೆ ಹೋಗಿ ಮಲಗಿಕೊಳ್ಳುತ್ತಾನೆ. ಇದಾದ ನಂತರ ಹುಡುಗಿಯನ್ನು ಜೊತೆಗಿದ್ದವರು ಕೋಣೆಗೆ ಹೋಗುವಂತೆ ಸೂಚಿಸುತ್ತಾರೆ. ಅವಳ ಕೈ ಹಿಡಿದು ಗಂಡು ಇರುವ ಕೋಣೆಗೆ ತಳ್ಳಿ ಬಾಗಿಲು ಹಾಕಿಕೊಳ್ಳುತ್ತಾರೆ. ಈ ಕಾರ್ಯ ಹೆಣ್ಣಿನ ಮನೆಯಲ್ಲಿಯೇ ನಡೆಯಬೇಕು ಎನ್ನುವ ನಿರ್ಬಂಧವಿದೆ. ನಂತರ ಆ ದಿನ ಗಂಡನ ಬಳಿಗೆ ಹೆಣ್ಣು ಒಂದು ಲೋಟ ಹಾಲನ್ನು ತೆಗೆದುಕೊಂಡು ಹೋಗುತ್ತಾಳೆ. ಅಂದಿನಿಂದ ಒಬ್ಬರನ್ನೊಬ್ಬರು ಅರಿತುಕೊಂಡು ಜೀವನ ಸಾಗಿಸುತ್ತಾರೆ.

ಗಂಡು ಕೆಲವು ದಿನಗಳು ಹೆಣ್ಣಿನ ಮನೆಯಲ್ಲಿಯೇ ಇದ್ದು ತನ್ನ ಮನೆಗೆ ಹೆಂಡತಿಯನ್ನು ಕರೆದುಕೊಂಡು ಬರುತ್ತಾನೆ. ಮದುವೆಯ ಕಾರ್ಯಗಳೆಲ್ಲವೂ ಅಂಗಳದಲ್ಲಿ ನೆಟ್ಟ ಹಾಲು ಕಂಬಕ್ಕೆ ಒಂದು ತಿಂಗಳ ನಂತರ ಹಾಲು ಎರೆಯುವುದರ ಮೂಲಕ ಕಳೆದುಹೋಗುತ್ತವೆ. ಅದುವರೆಗೆ ಸಾಮಾನ್ಯ ವ್ಯಕ್ತಿಗಳಿಂದ ಪ್ರತ್ಯೇಕಿಸಿದ್ದ ಗಂಡು ಹೆಣ್ಣುಗಳು ಮತ್ತೆ ಸಾಮಾನ್ಯ ವ್ಯಕ್ತಿಗಳಾಗಿ ಪರಿವರ್ತಿತವಾಗುತ್ತಾರೆ.

ಶಕುನಗಳು

ನೀಲಗಾರರು ಹಿಂದೆ ತಮ್ಮ ನಿತ್ಯ ಜೀವನದಲ್ಲಿ ಹೆಜ್ಜೆ ಹೆಜ್ಜೆಗೂ ಶಕುನ ನೋಡಿ ಕೆಲಸ ಮಾಡುತ್ತಿದ್ದರೆಂಬುದು ಕ್ಷೇತ್ರಕಾರ್ಯದಿಂದ ತಿಳಿದು ಬಂದಿದೆ. ಇತ್ತೀಚೆಗೆ ಶಕುನ ನೋಡುವುದನ್ನು ಮಂಗಳ ಕಾರ್ಯಕ್ಕೆ ಮಾತ್ರ ಸೀಮಿತಗೊಳಿಸಿಕೊಂಡಿದ್ದಾರೆ. ಮಂಗಳ ಕಾರ್ಯಕ್ಕೆ ಸಂಬಂಧಿಸಿದ ಶಕುನಗಳನ್ನು ನೋಡಿದರೆ ಬಹುಪಾಲು ಶಕುನಗಳು ಮದುವೆ ಸಂದರ್ಭಕ್ಕೆ ಮೀಸಲಿದ್ದಂತಿವೆ. ಇವರು ಹೆಣ್ಣು ನೋಡುವ ಸಂದರ್ಭದಿಂದ ಹಿಡಿದು ಮದುವೆ ಮುಗಿದು ಗಂಡು ಹೆಣ್ಣು ಹಳಬರಾಗುವವರೆಗೆ ಶಕುನಗಳನ್ನು ಗಮನಿಸುತ್ತಾರೆ. ಇಲ್ಲಿ ಕೆಲವು ಶಕುನಗಳನ್ನು ಪಟ್ಟಿ ಮಾಡಲಾಗಿದೆ.

ಶುಭ ಶಕುನಗಳು

೧. ಮುತ್ತೈದೆಯರು ತುಂಬಿದ ಕೊಡ ಹೊತ್ತು ಎದುರು ಬಂದರೆ, ಹೆಣ ಎದುರಾದರೆ ಶುಭ

೨. ನರಿ ಮುಂಗುಸಿ ಮುಖ ತೋರಿಸಿದರೆ ಒಳ್ಳೆಯದು

೩. ಎಲೆ ಮಾರುವವಳು ಅಡ್ಡ ಬಂದರೆ ಶುಭ ಸಂಕೇತ

೪. ಹಣ್ಣು, ಹೂ ಅಡ್ಡ ಬಂದರೆ ಒಳ್ಳೆಯದು

೫. ಸೂಳೆಯರು ಅಡ್ಡ ಬಂದರೆ ಒಳ್ಳೆಯದು

೬. ಕೆಳಜಾತಿಯವನು ಅಡ್ಡ ಬಂದರೆ ಶುಭ

ಅಶುಭ ಶಕುನಗಳು

೧. ನಾಗರಹಾವು, ಬೆಕ್ಕು ಅಡ್ಡ ಬಂದರೆ ಅಪಶಕುನ

೨. ವಿಧವೆ, ಒಂಟಿ ಬ್ರಾಹ್ಮಣ ಬಂದರೆ ಕೆಟ್ಟದ್ದಾಗುತ್ತದೆ

೩. ಹೆಣ್ಣಿನ ಮನೆಗೆ ಹೋದಾಗ ಹೆಣ್ಣು ಕಸಬರಿಕೆ ಹಿಡಿದಿರಬಾರದು

೪. ಹೆಣ್ಣು ಕೆದರಿದ ತಲೆ ಬಿಚ್ಚಿಕೊಂಡು ಬಾಗಿಲಲ್ಲಿ ನಿಂತಿರಬಾರದು

೫. ಹೆಣ್ಣಿನ ಮನೆಗೆ ಹೋಗಬೇಕು ಎನ್ನುವಾಗ ಹಲ್ಲಿ ಲೊಚಗುಟ್ಟಿದರೆ ಅಶುಭ

೬. ಹಂದಿ ಅಡ್ಡ ಬಂದರೆ ಅಶುಭ

೭. ಹೊರಡುವಾಗ ಎಲ್ಲಿಗೆ ಅಂದರೆ ಅಶುಭ

೮. ಹೊಸ ಮಡಿಕೆ ನೋಡಿದರೆ ಅಶುಭ

೯. ನಾಯಿಗಳು ಕೂಗಿದರೆ ಅಪಶಕುನ

೧೦ ಕಾಗೆಗಳು ತಲೆಯ ಮೇಲೆ ಬಡಿದರೆ ಅಪಶಕುನ

ಮೇಲಿನ ಪಟ್ಟಿಯನ್ನು ಗಮನಿಸಿದರೆ ಮುಖ್ಯವಾಗಿ ಇಲ್ಲಿ ಪ್ರಾಣಿ, ಮನುಷ್ಯ, ಸಸ್ಯ ಮತ್ತು ಇತರ ವಸ್ತುಗಳು ಶಕುನ ಸೂಚಕಗಳಾಗಿರುವುದು ಕಂಡುಬರುತ್ತವೆ. ಮೃಗ ಪಕ್ಷಿ ಜಂತುಗಳಾದಿಗಳ ದೈಹಿಕ ಕ್ರಿಯೆ ಪ್ರತಿಕ್ರಿಯೆಗಳಲ್ಲಿ ಶಕುನ ಫಲ ಕಂಡುಕೊಳ್ಳುವುದು ವಿಲಕ್ಷಣವಾಗಿ ತೋರುತ್ತದೆ. ಹಕ್ಕಿಗಳು ಹಾರುವುದು, ಹಲ್ಲಿ ಲೊಚಗುಟ್ಟುವುದು, ಬೆಕ್ಕು, ನರಿ, ಹಾವು ಇತ್ಯಾದಿಗಳು ದಾರಿಯನ್ನು ಆಚೆ ಈಚೆ ದಾಟುವುದು ಆಯಾಯ ಪ್ರಾಣಿಗಳ ಸ್ವಭಾವ ಸಿದ್ದವಾದ ನಡಾವಳಿಗಳಾಗಿವೆ. ಈ ಪ್ರಾಣಿ ಪಕ್ಷಿ ಸ್ವಭಾವವನ್ನೇ ಶುಭ, ಅಶುಭ ಎಂದು ತೀರ್ಮಾನಿಸುವುದು ತೀರ ವಿಚಿತ್ರವಾಗಿ ಕಾಣುತ್ತದೆ. ಇನ್ನೊಂದು ಗಮನಿಸಬೇಕಾದ ಅಂಶ ಎಂದರೆ ವಾಸ್ತವಿಕ ಬದುಕಿನಲ್ಲಿ ಯಾವ ವಸ್ತು ಮತ್ತು ವ್ಯಕ್ತಿಗಳನ್ನು ಗೌರವ ಭಾವನೆಯಿಂದ ಕಾಣುವುದಿಲ್ಲವೋ ಅವು ಇಲ್ಲಿ ಶುಭ ಶಕುನಗಳಾಗಿ ಕಾಣುತ್ತವೆ. ಉದಾ : ಕೆಳಜಾತಿಯವನು, ತುಂಬಿದ ಕೊಡ, ದೇವದಾಸಿ ಇವರಲ್ಲಿ ಶುಭ ಸಂಕೇತವನ್ನು ಕಾಣುತ್ತಾರೆ. ಏಕೆಂದರೆ ಕೆಳಜಾತಿಯವನು ಹುಟ್ಟಿನಿಂದ ಹಿಡಿದು ಸಾಯುವವರೆಗೆ ಪ್ರತಿಯೊಂದು ಆಚರಣೆ ಸಂದರ್ಭದಲ್ಲಿ ಭಾಗಿಯಾಗುವನು. ಅದೇ ರೀತಿ ದೇವದಾಸಿ ಎನ್ನುವವಳು ದೈವದ ಸ್ವರೂಪದವಳಾಗಿ ಕಾಣುತ್ತಾಳೆ. ಮತ್ತೆ ತುಂಬಿದ ಕೊಡಕ್ಕೆ ನಮ್ಮ ಜನಪದರಲ್ಲಿ ಅನೇಕ ಒಳ ಅರ್ಥಗಳಿವೆ. ಅದನ್ನು ಹಗುರದಿಂದ ಕಾಣುವುದಿಲ್ಲ. ಅದರ ಒಳ ಅರ್ಥ ಸದಾ ದವಸ, ಧಾನ್ಯ, ಹಣ, ಸಂಪತ್ತಿನಿಂದ ಮನೆ, ಮನ ತುಂಬಿರಲಿ ಎನ್ನುವುದೇ ಆಗಿರುತ್ತದೆ. ಇದು ನಿಜಕ್ಕೂ ಮಹತ್ವಪೂರ್ಣವಾಗಿ ಕಂಡುಬರುತ್ತದೆ.

ಆಚರಣೆಯಲ್ಲಿರುವ ನಂಬಿಕೆಗಳು

೧. ಮೈ ನೆರೆಯುವುದಕ್ಕೆ ಮುಂಚೆ ಮದುವೆ ಮಾಡಿಕೊಟ್ಟರೆ ಹುಡುಗಿಯ ತಾಯಿ ತಂದೆಯರಿಗೆ ಶ್ರೇಯಸ್ಸು.

೨. ಹೆಣ್ಣು ನೋಡಲು ಹೊರಟಾಗ ದಾರಿಯುದ್ದಕ್ಕೂ ಶುಭ ಸೂಚನೆಗಳೇ ಕಂಡುಬಂದರೆ ಆ ಸಂಬಂಧದಿಂದ ಒಳ್ಳೆಯದಾಗುತ್ತದೆ.

೩. ಹುಡುಗನಿಗೆ ತಲೆಯಲ್ಲಿ ಎರಡು ಸುಳಿ ಇದ್ದರೆ ಎರಡು ಮಂದಿ ಹೆಂಡಂದಿರು ಆಗುತ್ತಾರೆ.

೪. ಮಾಲುಗಣ್ಣಿನ ಹುಡುಗಿಯರು ಅದೃಷ್ಟವಂತರು.

೫. ಹೆಣ್ಣಿನ ಮುಂದಲೆಯಲ್ಲಿ ಸುಳಿ ಇದ್ದರೆ ಅವಳು ಅದೃಷ್ಟವಂತೆ.

೬. ಹೆಣ್ಣು ನೋಡಲು ಹೋದಾಗ ಹೆಣ್ಣಿನ ಮನೆಯ ಬಾಗಿಲು ಹಾಕಿರಬಾರದು.

೭. ಮದುವೆ ನಿಶ್ಚಯವಾದ ಮೇಲೆ ಗಂಡಿನ ಮನೆಯಲ್ಲಿ ಯಾರಾದರೂ ತೀರಿಕೊಂಡರೆ ಮದುವೆ ನಡೆಸಬಾರದು.

೮. ಮದುವೆಯಾಗದೆ ಸತ್ತ ತರುಣ ಅಥವಾ ತರುಣಿ ದೆವ್ವ ಅಥವಾ ಮೋಹಿನಿಯರಾಗಿ ಉಳಿದವರನ್ನು ಕಾಡುತ್ತಾರೆ.

೯. ಮದುವೆಯಾದ ವರ್ಷ ಮನೆ ಕಟ್ಟಬಾರದು

೧೦. ಮದುವೆ ಚಪ್ಪರದಲ್ಲಿ ತೂಗಿ ಹಾಕಿದ ತಳಿರು-ತೋರಣಗಳು ಅವಿವಾಹಿತರ ತಲೆಗೆ ತಾಗಿದರೆ ಅವರಿಗೂ ಬೇಗನೆ ಮದುವೆ ಯೋಗ ಕೂಡಿ ಬರುತ್ತದೆ.

ಮೇಲಿನ ನಂಬಿಕೆಗಳಲ್ಲದೆ ಇನ್ನೂ ಹಲವಾರು ನಂಬಿಕೆಗಳನ್ನು ನೀಗಾರರು ತಮ್ಮ ಜೀವನದಲ್ಲಿ ಅನುಸರಿಸಿಕೊಂಡು ಬರುತ್ತಿದ್ದಾರೆ.

೫. ಮರಣ ಸಂಪ್ರದಾಯ

ಹುಟ್ಟು ಸಾವು ಮಾನವ ಜೀವನದ ಎರಡು ಮಹತ್ವದ ಘಟ್ಟಗಳು. ಹುಟ್ಟಿದವನು ಸಾಯಲೇಬೇಕು ಇದು ನಿಸರ್ಗದ ನಿಯಮ. ಜನನ ಕಾಲದಿಂದ ಮೊದಲುಗೊಂಡು ಬದುಕಿನ ಬೇರೆ ಬೇರೆ ಸಂದರ್ಭಗಳನ್ನೊಡಗೂಡಿ ಮರಣ ಕಾಲದವರೆಗೆ ಕೆಲವು ವಿಧಿ ವಿಧಾನಗಳನ್ನು ಆಚರಿಸುವ ಪರಂಪರೆ ಎಲ್ಲಾ ಕುಲ ಸಮುದಾಯಗಳಲ್ಲಿಯೂ ಕಂಡುಬರುತ್ತದೆ.

''ಒಂದು ಸಂಸ್ಕೃತಿಯ ಶಿಷ್ಟ ಮತ್ತು ಪರಿಶಿಷ್ಟಗಳು ಆ ಸಂಸ್ಕೃತಿಯು ಎದುರಿಸುತ್ತಿರುವ ಬಿಕ್ಕಟ್ಟುಗಳ ಮೂಲಕ ಹೆಚ್ಚು ಹೆಚ್ಚು ಸ್ಪಷ್ಟವಾಗುತ್ತಾ ಹೋಗುತ್ತದೆ. ಬಿಕ್ಕಟ್ಟುಗಳು ಸಾಮಾನ್ಯವಾಗಿ ಅನ್ಯ ಸಂಸ್ಕೃತಿಯ ಪ್ರಭಾವದಿಂದ ಕಾಣಿಸಿಕೊಳ್ಳುತ್ತದೆ ಅಥವಾ ಅದರ ಒಳಗಿನ ಜನರ ಭಿನ್ನ ನಡಾವಳಿಗಳ ಮೂಲಕ ಪ್ರಕಟವಾಗುತ್ತದೆ.''[೧೫] ಇಂಥ ಬಿಕ್ಕಟ್ಟುಗಳನ್ನು ಬಗೆಹರಿಸಿಕೊಳ್ಳಲೆಂದೇ ಸಾವು ಮತ್ತು ಇತರ ಜೀವನಾವರ್ತನ ಆಚರಣೆಗಳನ್ನು ಹೆಚ್ಚು ಹೆಚ್ಚು ಬಿಗುವಿನ ಬಂಧದಿಂದ ಕೂಡುವಂತೆ ಆ ಸಮುದಾಯಗಳು ಪ್ರಯತ್ನಿಸುತ್ತವೆ. ಅಲ್ಲಿ ಪ್ರಾದೇಶಿಕ ಒತ್ತಡಗಳ ಸೆಳಕು ಎಷ್ಟೇ ಇದ್ದರೂ ಅದರ ಅಂತರಾಳದಲ್ಲಿ ಒಂದು ಏಕಮುಖತೆ ಇದ್ದೇ ಇರುತ್ತದೆ.

ಜನನದಂತೆ ಸಾವೂ ಕೂಡ ಮನುಷ್ಯನಿಗೆ ಅನಿವಾರ್ಯ. ಹುಟ್ಟು ಸಾವಿನ ಮಧ್ಯದ ಜೀವನವನ್ನು ನಿಯಂತ್ರಿಸುವ ಶಕ್ತಿ ಮನುಷ್ಯನಿಗಿದ್ದರೂ ಹುಟ್ಟು ಸಾವುಗಳನ್ನು ಆತ ನಿಯತ್ರಿಸಲಾರ. ಆಧುನಿಕ ಜಗತ್ತಿನಲ್ಲಿ ಹುಟ್ಟನ್ನು ನಿಯಂತ್ರಿಸುವ ಅಲ್ಪ ಮಟ್ಟದ ಸಾಮರ್ಥ್ಯಕ್ಕೆ ಮನುಷ್ಯ ಒಳಗಾಗಿದ್ದರೂ, ಸಾವನ್ನು ಆತ ನಿಯಂತ್ರಿಸುವ ಹಂತಕ್ಕಿನ್ನೂ ತಲುಪಿಲ್ಲ.

ನೀಲಗಾರರ ಜನನ ವಿವಾಹಗಳಂತಹ ಆಚರಣೆಗಳಲ್ಲಿ ಕೆಲವೊಂದು ಸಂದರ್ಭಗಳಲ್ಲಿ ಪರೋಕ್ಷವಾಗಿ ಪ್ರಾದೇಶಿಕ ಪ್ರಭಾವಗಳು ಆಗುವುದುಂಟು. ಅದರಂತೆಯೇ ಸಾವಿನ ಸಂದರ್ಭದಲ್ಲಿಯೂ ಇಂತಹ ಪ್ರಭಾವಗಳು ಆಗಿರುವುದನ್ನು

ಗುರುತಿಸಬಹುದಾಗಿದೆ. ಸಾವು ಮನುಷ್ಯ ಸಂಬಂಧಗಳ ಗಾಢತೆಯನ್ನು ನೆನಪಿಸುವ, ಆ ಸಂಬಂಧಗಳನ್ನು ಸೇರಿಸುವ ಕ್ರಿಯೆಯಾದಂತೆಯೇ ಸಂಬಂಧಗಳನ್ನು ಬೇರ್ಪಡಿಸುವ ಕ್ರಿಯಾವಿಧಿಯಾಗಿ ರೂಪುಗೊಂಡಿರುವುದನ್ನು ನಾವು ಕಾಣಬಹುದಾಗಿದೆ. ನೀಲಗಾರರು ಸತ್ತ ಸಂದರ್ಭದಲ್ಲಿ ಇವರಿಗೆ ದೀಕ್ಷೆ ನೀಡುವಾಗ ಏನೆಲ್ಲಾ ವಿಧಿ ವಿಧಾನಗಳನ್ನು ಅನುಸರಿಸುತ್ತಾರೋ ಅದೇ ವಿಧಿಗಳನ್ನೇ ಪುನರಾವರ್ತಿಸುತ್ತಾರೆ. ಮೊದಲು ನೀಲಗಾರ ಸತ್ತ ಸುದ್ದಿ ತಿಳಿಯುತ್ತಿದ್ದಂತೆಯೇ ನೀಲಗಾರರೆಲ್ಲ ಅಲ್ಲಿಗೆ ಬರುತ್ತಾರೆ. ಹಾಗೆಯೇ ಅವರ ನೆಂಟರಿಷ್ಟರೂ ಬರುತ್ತಾರೆ. ನೀಲಗಾರರು ಸತ್ತಾಗ ಅವರೇ ಆ ಶವವನ್ನು ಮುಟ್ಟಬೇಕು. ಬೇರೆ ಯಾರೂ ಆ ಶವವನ್ನು ಮುಟ್ಟುವಂತಿಲ್ಲ. ಇವರಲ್ಲಿ ಯಾವ ಜನಾಂಗದ ನೀಲಗಾರರೇ ಸತ್ತರೂ ಎಲ್ಲರೂ ಒಟ್ಟಿಗೆ ಸೇರುತ್ತಾರೆ. ಸತ್ತಾಗ ದೀಕ್ಷೆ ನೀಡಿದ ಗುರುಗಳು ಮತ್ತು ನೀಲಗಾರರು ಸೇರಿ ಆ ಶವವನ್ನು ಸೀಗೆಕಾಯಿ ಸೋಪು ಹಾಕಿ ತೊಳೆದು ಸ್ನಾನ ಮಾಡಿಸಿ ಬಿದಿರು ತೆಂಗಿನ ಸೋಗಿನಿಂದ ಸಿದ್ಧಪಡಿಸಿದ ಚಟ್ಟಕ್ಕೆ ಕುಳ್ಳಿರಿಸಿ ನಾಲ್ಕು ಮೂಲೆಯಲ್ಲಿ ತುಳಸಿಗಿಡ ನೆಟ್ಟು ವಿಭೂತಿಗಟ್ಟಿ ಇಕ್ಕಿ ತೀರ್ಥ ಗೋಮೂತ್ರ ಇಟ್ಟು ಶೃಂಗಾರ ಮಾಡಿ ಜಾಗಟೆ, ಬೆತ್ತ, ಜೋಳಿಗೆ ಇವೆಲ್ಲವನ್ನು ಶವದ ಎಡಗಡೆ ಇಟ್ಟು ಪೂಜಿಸಿ ನಂತರ ಶವದ ಕುರ್ಚಿಗೆ ಕುಳ್ಳಿರಿಸುತ್ತಾರೆ. ಆ ಎಲ್ಲಾ ಹೊಣೆಯನ್ನು ನೀಲಗಾರರೇ ಮಾಡಬೇಕು. ಆದರೆ ಸಂಬಂಧಿಕರು ಯಾರೂ ಮುಟ್ಟುವಂತಿಲ್ಲ. ಅದು ಅವರ ನಿಷೇಧವಾಗಿದೆ. ಮತ್ತೆ ಶವವನ್ನು ಹೊರುವವರೂ ಕೂಡ ನೀಲಗಾರರೇ ಆಗಬೇಕು. ಸತ್ತ ಹೆಣವನ್ನು ಯಾವುದಾದರೂ ಕಾಡಿನ ಜಾಗಕ್ಕೆ ತಂದು ನೀಲಗಾರರೇ ಗುಂಡಿ ತೆಗೆದು ಗುಂಡಿಯೊಳಗೆ ಹಸುಳೆ ಎಲೆ ಜೋಡಿಸಿ ಮೈಮೇಲಿದ್ದ ಎಲ್ಲಾ ವಸ್ತುಗಳನ್ನು ತೆಗೆದು ಉತ್ತರಕ್ಕೆ ಪಾದ ಇಟ್ಟು ದಕ್ಷಿಣಕ್ಕೆ ಮಂಡೆಹಾಕಿ ಮಣ್ಣಿನಲ್ಲಿ ಹೂಳುತ್ತಾರೆ. ''ಇದೇ ರೀತಿ ಜೋಗಿಗಳಲ್ಲಿಯೂ ಶವದ ಮೈಮೇಲಿದ್ದ ಎಲ್ಲಾ ವಸ್ತು ತೆಗೆಯುತ್ತಾರೆ.''[೨೬] ಇಲ್ಲಿ ಮುಖ್ಯವಾಗಿ ನೀಲಗಾರರನ್ನು ಮಾತ್ರ ಸುಡುವುದಿಲ್ಲ. ಹೂಳಲೇಬೇಕು. ಆದರೆ ಬೇರೆ ಬೇರೆ ಜನಾಂಗಗಳಲ್ಲಿ ಶವವನ್ನು ಸುಡುವ ಪದ್ಧತಿ ಇದೆ. ಇವರಲ್ಲಿ ಗರ್ಭಿಣಿ ಹೆಣ್ಣಿನ ಸಾವು ಸಂಭವಿಸಿದರೆ ಮೊದಲು ಮಗುವನ್ನು ಹೊರಗೆ ತೆಗೆದು ಮಗ್ಗುಲಲ್ಲಿ ಇಟ್ಟು ಸುಡುತ್ತಾರೆ. ತೊನ್ನು ಇದ್ದ ವ್ಯಕ್ತಿಗಳನ್ನು ಮಾತ್ರ ಸುಡುವ ಕ್ರಮ ಇವರಲ್ಲಿದೆ. ನಂತರ ಶವವನ್ನು ಹೂಳಿ ವಾಪಸ್ಸು ಬರುವಾಗ ದಾರಿಯಲ್ಲಿ ಯಾವುದಾದರೂ ಹಳ್ಳಕ್ಕೊ, ಕೊಳಕ್ಕೊ ಹೋಗಿ ತಲೆಯ ಮೇಲೆ ನೀರು ಹಾಕಿಕೊಳ್ಳುತ್ತಾರೆ. ನಂತರ ಮನೆಗೆ ಬಂದು ಸ್ನಾನ ಮಾಡುತ್ತಾರೆ. ಸತ್ತವರ ಮನೆಯಲ್ಲಿ ಆ ದಿನ ಅಡುಗೆ ಮಾಡುವಂತಿಲ್ಲ. ಆದ್ದರಿಂದ ಬೇರೆ ಮನೆಯವರು ಕರೆದು ಊಟ ಹಾಕುತ್ತಾರೆ. ನಂತರ ತಿಥಿ ಕಾರ್ಯಕ್ಕೆ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಾರೆ.

ನೀಲಗಾರರಲ್ಲಿ ಮದುವೆ ಆಗದೆ ಸಾವನ್ನಪ್ಪಿದರೆ, ಎಲ್ಲಾ ರೀತಿಯ ಆಚರಣೆಗಳನ್ನು ಮಾಡಿ, ಚಟ್ಟ ಮಾತ್ರ ಒಂಟಿ ಕೊಂಬೆ ಇರಬೇಕು. ಒಂಟಿ ಕೊಂಬೆ ಮಾಡಿ ಶವವನ್ನು ಒಯ್ಯುತ್ತಾರೆ. ನಂತರ ಶವದ ಪಕ್ಕದಲ್ಲಿ ಹೆಣ್ಣು ಗೊಂಬೆ ಇಟ್ಟು ಅದನ್ನು ಮಣ್ಣಿಗೆ ಹೂಳುತ್ತಾರೆ.

ಕಟ್ಲೆ

ಇವರಲ್ಲಿ ತಿಥಿಯನ್ನು ಕಟ್ಲೆ ಎಂದು ಕರೆಯಲಾಗುತ್ತದೆ. ನೀಲಗಾರರಲ್ಲಿ ಹನ್ನೊಂದನೆ ದಿನ ನಡೆಯುವ ಆಚರಣೆಗೆ

ಸಮಾರಾಧನೆಯೆಂದೂ ಅಥವಾ ಶಿವಗಣಾರಾಧನೆಯೆಂದೂ ಅಥವಾ ವೈಕುಂಠ ಸಮಾರಾಧನೆಯೆಂದೂ ಕರೆಯುತ್ತಾರೆ. ಈ ಕಾರ್ಯವನ್ನು ಹನ್ನೊಂದನೆಯ ದಿನಕ್ಕೆ ಇಲ್ಲವೆ ಸತ್ತ ತಿಂಗಳೊಳಗಾಗಿ ಮಾಡುತ್ತಾರೆ. ಆದಿನ ಮನೆಯನ್ನೆಲ್ಲ ಸ್ವಚ್ಛಗೊಳಿಸಿ ಸುಣ್ಣ, ಬಣ್ಣ ಬಳಿಯುತ್ತಾರೆ. ಮನೆ ಮಂದಿಯ ಬಟ್ಟೆಗಳನ್ನೆಲ್ಲಾ ಮಡಿ ಮಾಡುತ್ತಾರೆ. ಮನೆಯ ಒಳಗೂ ಮತ್ತು ಹೊರಗೂ ಗೋಮೂತ್ರ ಹಾಕಿ ಸತ್ತ ಸೂತಕ ತೆಗೆದುಕೊಳ್ಳುತ್ತಾರೆ. ಆ ದಿವಸ ಇವರಲ್ಲಿ ಮರಿ ಊಟವನ್ನು ವಿಶೇಷವಾಗಿ ಮಾಡುತ್ತಾರೆ. ಅಂದು ನೀಲಗಾರ ಪಂಗಡದವರನ್ನೆಲ್ಲ ಕರೆತರಿಸಿ ಮರಿಯನ್ನು ಕೊಯ್ದು ಇವರ ಮೂಲಕ ನೆನೆವಾರ್ತೆಯನ್ನು ಮಾಡಿಸುತ್ತಾರೆ. ನಂತರ ಬಟ್ಟಲು ಒಡೆಸಿ ಹೋಮ ನಿಯಮವಾಗಿ ನೀಲಗಾರರೆಲ್ಲ ಮೊದಲು ಪಂಕ್ತಿ ಊಟ ಆದ ಮೇಲೆ ಎಲ್ಲಾ ಪ್ರಜೆಗಳನ್ನು ಕರೆದು ಊಟ ಬಡಿಸಿ ಆವಾಗ ತಿಥಿ ಮುಗಿಸುತ್ತಾರೆ. ಬೇರೆ ಬೇರೆ ಜನಾಂಗದವರು ಸಾವನ್ನಪ್ಪಿದಾಗ ಮಾಡುವ ಆಚರಣೆಯನ್ನು ನೀಲಗಾರರು ಮಾಡುತ್ತಾರೆ.

ವ್ಯಕ್ತಿ ಸತ್ತ ಹನ್ನೊಂದನೆಯ ದಿವಸ ತಿಥಿ ಕಾರ್ಯವನ್ನು ಏರ್ಪಡಿಸಿದಾಗ ಆ ದಿನ ಆತ ತಿನ್ನುತ್ತಿದ್ದ ಎಲ್ಲಾ ತಿಂಡಿ ತಿನಿಸುಗಳನ್ನು ಮಾಡಿ ಅದನ್ನು ಎಡೆಗೆ ಇಟ್ಟು ಹೊಸಬಟ್ಟೆ, ಹಾಗೂ ಅವರು ತಿನ್ನುತ್ತಿದ್ದ ಎಲ್ಲಾ ಪದಾರ್ಥಗಳನ್ನು ಇಟ್ಟು ಅವರು ಉಪಯೋಗಿಸುತ್ತಿದ್ದ ಎಲ್ಲಾ ವಸ್ತುಗಳನ್ನು ಎಡೆಗೆ ಇಡುತ್ತಾರೆ. ನಂತರ ವೈಕುಂಠ ಸಮಾರಾಧನೆ ಆಚರಣೆಯನ್ನು ಮಾಡುತ್ತಾರೆ. ಮಡಿಕೆ ಒಡೆಯುವ ಪದ್ಧತಿ ಇವರಲ್ಲಿಲ್ಲ. ಆದರೆ ಮಂಡ್ಯ ಸುತ್ತಲಿನ ಒಕ್ಕಲಿಗ ಜನಾಂಗದಲ್ಲಿ ಮಡಿಕೆ ಒಡೆಯುವ ಪದ್ಧತಿ ರೂಢಿಯಲ್ಲಿದೆ. ಆ ದಿನ ನೀಲಗಾರ ಪಂಗಡದವರೆಲ್ಲ ಸೇರಿ ತಿಥಿ ಆಚರಿಸುತ್ತಾರೆ. ಯಾವುದೇ ಜಾತಿಗೆ ಸೇರಿದ್ದರೂ ಎಲ್ಲಾ ನೀಲಗಾರರಿಗೂ ಒಂದೇ ಆಚರಣಾ ಪದ್ಧತಿ ರೂಢಿಯಲ್ಲಿದೆ.

ನೀಲಗಾರ ಒಂದು ವೇಳೆ ಯುಗಾದಿ ಹೊಸವರ್ಷ ತೀರಿಕೊಂಡರೆ ತೀರಿಕೊಂಡ ದಿನದಿಂದ ಯುಗಾದಿ ಮೂರು ದಿವಸ ಅಂತ ಮಣ್ಣು ಮಾಡುತ್ತಾರೆ. ಇವರ ಸಂಪ್ರದಾಯದಲ್ಲಿ ತೀರಿಕೊಂಡಾಗ ಜ್ಯೋತಿಷ್ಯರ ಹತ್ತಿರ ಒಳ್ಳೆಯ ಗಳಿಗೆ ಕೆಟ್ಟ ಗಳಿಗೆ ಕೇಳಿ ಅವರ ಸಲಹೆ ಪ್ರಕಾರ ಕಾರ್ಯ ನೆರವೇರಿಸುತ್ತಾರೆ. ಸತ್ತ ದಿವಸ ಒಳ್ಳೆ ಗಳಿಗೆ ಇದ್ದರೆ ಸತ್ತವನಿಗೆ ಹೆಚ್ಚು ಪ್ರೀತಿ ಯಾರಲ್ಲಿ ಇರುವುದೋ ಅವನಿಗೆ ಮಂಡೆ ಬೋಳಿಸುತ್ತಾರೆ. ಒಂದು ವೇಳೆ ಗಂಡು ಮಕ್ಕಳಿಲ್ಲದಿದ್ದರೆ ಇವರಲ್ಲಿ ಪಂಚಮುಡಿ ಕೊಟ್ಟು ಹೆಣ್ಣು ಕೊಳ್ಳಿ ಇಡುತ್ತಾಳೆ. ಇವರಲ್ಲಿ ಮದುವೆ ಆಗದೆ ಇರುವವರಿಗೂ ಇದೇ ನಿಯಮವಿದೆ.

ಹೀಗೆ ಜನನ, ಪ್ರೌಢ ಸಂಸ್ಕಾರ, ಮದುವೆ ಮುಂತಾದವುಗಳ ಸಂಬಂಧವಾಗಿ ಈ ಜನರಲ್ಲಿ ಬಹು ಹಿಂದಿನಿಂದಲೂ ಪ್ರಚಲಿತವಿದ್ದ ಅನೇಕ ಕಟ್ಟಳೆಗಳು ಇಂದು ಕಣ್ಮರೆಯಾಗಿದ್ದು ಕೆಲವು ಭಾಗಶಃ ಆಚರಣೆಯಲ್ಲಿರುವುದನ್ನು ನೋಡುತ್ತೇವೆ. ಆದರೆ ಸಾವಿನ ಸಂಬಂಧವಾದ ವಿಧಿಗಳು, ಆಚರಣೆಗಳು ಇಂದಿಗೂ ರೂಢಿಯಲ್ಲಿದ್ದು ಅವುಗಳಲ್ಲಿ ಹೆಚ್ಚಿನ ಬದಲಾವಣೆಗಳು ಕಂಡುಬರುವುದಿಲ್ಲ. ಇದು ಈ ಜನರು ಸಾವಿಗೆ ಕೊಡುವ ಮಹತ್ವವನ್ನು ಸೂಚಿಸುತ್ತದೆ.

ತಿಂಗಳ ತಿಥಿ, ವರ್ಷದ ತಿಥಿ ಈ ಎಲ್ಲವನ್ನು ಬೇರೆ ಜನಾಂಗದವರು ಆಚರಿಸುವ ರೀತಿಯಲ್ಲಿಯೇ ಇವರೂ ಆಚರಿಸುತ್ತಾರೆ.

೪ : ೧.೨ ವಾರ್ಷಿಕಾವರ್ತನ ಆಚರಣೆಗಳು

ಮಾನವನು ಅಗೋಚರವಾದ ದೈವಶಕ್ತಿಗಳ ಪ್ರತೀಕವಾಗಿ ನಡೆಯುವ ಮತಾಚರಣೆಗಳು ಮತ್ತು ಕರ್ಮ ವಿಧಿಗಳನ್ನು ಆಚರಣೆಗಳೆಂದು ಕರೆಯಲಾಗಿದೆ. ಆಚರಣೆಗಳನ್ನು ಪರಂಪರಾಗತವಾಗಿ ಮುಂದುವರಿಸಿಕೊಂಡು ಬರುವುದರಿಂದ ಇವುಗಳ ಹಿನ್ನೆಲೆಯಲ್ಲಿ ಬಲವಾದ ನಂಬಿಕೆಗಳು ಇರುತ್ತವೆ. ಆಚರಣೆಗಳು ಧಾರ್ಮಿಕ ವಲಯದಲ್ಲಿರುವುದೇ ಹೆಚ್ಚು. ಮರ, ಗಾಳಿ, ನೀರು ಮುಂತಾದ ನಿಸರ್ಗದ ವಸ್ತುಗಳು ಕೂಡ ಈ ಆಚರಣಾ ವಲಯದಲ್ಲಿ ಬರುತ್ತವೆ. ಧಾರ್ಮಿಕ ವ್ಯಕ್ತಿಗಳು ಇಲ್ಲವೇ ಅಸಾಮಾನ್ಯ ವ್ಯಕ್ತಿಗಳೂ ನಿರ್ದಿಷ್ಟ ಆಚರಣೆಗೊಳಗಾಗುತ್ತಾರೆ. ಆಚರಣೆಗಳ ಸಂದರ್ಭದಲ್ಲಿ ಕತ್ತಿ, ಭಲ್ಲೆ, ತ್ರಿಶೂಲ, ನೇಗಿಲು, ನೊಗ, ಸಲಿಕೆ ಇತ್ಯಾದಿ ಸಾಧನ ಸಲಕರಣೆಗಳನ್ನು ಒಂದೆಡೆ ಇಟ್ಟು ಪೂಜಿಸುವ ಪದ್ಧತಿಯೂ ಇದೆ. ಈ ರೀತಿಯ ಆಚರಣೆಗಳನ್ನು ಸಾಮಾನ್ಯವಾಗಿ ಮನುಷ್ಯರು ತಮ್ಮ ವಾರ್ಷಿಕ ಜೀವನದ ನಿರ್ದಿಷ್ಟ ಕಾಲಘಟ್ಟಗಳಲ್ಲಿ ಕೈಗೊಳ್ಳುತ್ತಾರೆ. ಇವುಗಳು ಪ್ರತಿ ವರ್ಷವೂ ಪುನರಾವರ್ತನೆಗೊಳ್ಳುತ್ತಿರುತ್ತವೆ. ಇವಗಳನ್ನೇ ವಾರ್ಷಿಕಾವರ್ತದ ಆಚರಣೆಗಳೆಂದು ಕರೆಯಲಾಗಿದೆ.

ಆಚರಣೆಗಳಲ್ಲಿ ವೈಯುಕ್ತಿಕ ಮತ್ತು ಸಾಮಾಜಿಕ ಎಂದು ಸ್ಥೂಲವಾಗಿ ಎರಡು ಭಾಗ ಮಾಡಬಹುದಾದರೂ ಧಾರ್ಮಿಕ ಮುಖಂಡರು, ಪೂಜಾರಿ, ಪುರೋಹಿತರುಗಳು ಭಾಗವಹಿಸಿ ನೆರವೇರಿಸಿ ಕೊಡುವ ಆಚರಣೆಗಳನ್ನು ಇನ್ನೊಂದು ವಿಭಾಗ ಮಾಡಬಹುದು. ಪಾವಿತ್ರ್ಯತೆ ಅಗೋಚರ ಶಕ್ತಿಗಳ ಬಗೆಗಿರುವ ಭಯದ ಕಾರಣವಾಗಿ ಆಚರಣೆಗಳನ್ನು ಭಕ್ತಿ ಶ್ರದ್ಧೆಗಳಿಂದ ನಡೆಸಲಾಗುವುದು. ಉಪವಾಸ, ಮೀಸಲು ಎಡೆ, ನೇಮ, ವ್ರತ ಇತ್ಯಾದಿಗಳನ್ನು ಗಮನಿಸಿದರೆ ಆಚರಣೆಗಳ ಹಿನ್ನೆಲೆಯಲ್ಲಿರುವ ಶ್ರದ್ಧೆ ಗಮನಕ್ಕೆ ಬರುತ್ತದೆ. ವೈಯುಕ್ತಿಕವಾಗಿ ನಡೆಸುವ ಆಚರಣೆಗಳಂತೆ ಒಂದು ದೇವರ ಪ್ರತಿನಿಧಿಯಾಗಿ ಅಥವಾ ಗುಡ್ಡನಾಗಿ ವೈಶಿಷ್ಟ್ಯಪೂರ್ಣವಾದ ಆಚರಣೆಗಳಲ್ಲಿ ಭಾಗವಹಿಸುತ್ತಾನೆ.

ನೀಲಗಾರರು, ಗೊಂದಲಿಗರು, ಕಂಸಾಳೆಯವರು, ಗೊರವರು, ದಾಸಯ್ಯಗಳು, ಜೋಗಿಗಳು ಮುಂತಾದವರನ್ನು ಇಲ್ಲಿ ಹೆಸರಿಸಬಹುದು. ಅವರೆಲ್ಲರೂ ತಮ್ಮ ತಮ್ಮ ದೇವರಿಗೆ ಸಂಬಂಧಪಟ್ಟ ವಾದ್ಯ ಅಥವಾ ಮತ್ತಾವುದಾದರೂ ಸಾಧನ ಸಲಕರಣೆಗಳೊಡನೆ ಆಚರಣೆಗಳನ್ನು ಪೂರ್ಣಗೊಳಿಸುತ್ತಾರೆ. ಮಣೇವು ಹಾಕುವುದು, ಗೊಂದಲ ಹಾಕುವುದು, ಕೋಲು ಪೂಜಿಸುವುದು, ಖಂಡಾಯ ಪೂಜಿಸುವುದು ಇತ್ಯಾದಿ ಆಚರಣೆಗಳನ್ನು ಇಲ್ಲಿ ಗಮನಿಸಬಹುದು.

ಈ ಆಚರಣೆಗಳು ಮಳೆ ಮತ್ತು ಬೆಳೆಯನ್ನು ಅವಲಂಬಿಸಿದ್ದು ಬಹಳಷ್ಟು ಮಟ್ಟಿಗೆ ಕಾಲ ಪರಿವರ್ತನೆಯಲ್ಲಿ ನಿರ್ಧರಿತವಾಗಿರುತ್ತದೆ. ಸುಗ್ಗಿಯ ಕಾಲ ಎಲ್ಲ ಕೆಲಸಗಳಿಗೆ ಒಳ್ಳೆಯದೆಂದೂ ಉಳಿದ ದಿನಗಳು ಅಷ್ಟು ಯೋಗ್ಯವಲ್ಲವೆಂದೂ ತಿಳಿಯುತ್ತಾರೆ. ಸುಗ್ಗಿ, ಜಾತ್ರೆ, ಹಬ್ಬ, ಮದುವೆ, ಸಮಾರಂಭಗಳಿಗೆ ಸೂಕ್ತವೆಂದೂ, ಹೆಣ್ಣು ದೊಡ್ಡವಳಾಗುವುದು ಕೂಡ ಒಳ್ಳೆಯದೆಂದು ನಂಬುತ್ತಾರೆ. ಆಷಾಢದಲ್ಲಿ ಹೆಣ್ಣು ಪ್ರೌಢಾವಸ್ಥೆಗೆ ಬಂದರೆ ಮನೆಗೆ ಅನಿಷ್ಟವೆಂದೂ ನಂಬಿಕೆ ಇದೆ. ಇಲ್ಲಿ ಮುಖ್ಯವಾಗಿ ಬಹಳಷ್ಟು ನೀಲಗಾರರು ಕೃಷಿಯನ್ನೇ ಅವಲಂಬಿಸಿದ್ದರಿಂದ ಇವರಲ್ಲಿ ಸುಗ್ಗಿ ಹಾಗೂ ಜಾತ್ರೆಗಳಲ್ಲಿ ನಡೆಯುವ ಆಚರಣೆಗಳೇ ಹೆಚ್ಚು ಮಹತ್ವವನ್ನು ಪಡೆದಿವೆ. ಈ ಕಾಲಗಣನೆಯು ಸೂರ್ಯ ಚಂದ್ರರನ್ನು ಅವಲಂಬಿಸಿದ್ದು ಅವುಗಳ ಚಲನೆಯು

ಪ್ರಕೃತಿಯಲ್ಲಿ ಉಂಟುಮಾಡಿದ ಬದಲಾವಣೆ ಮೇರೆಗೆ ನಿರ್ಧರಿತವಾಗುತ್ತದೆ. ಇಷ್ಟಲ್ಲದೆ ಅವರಿಗಿರುವ ಉತ್ಪಾದನೆ ಮತ್ತು ಅವರ ಉತ್ಪಾದನಾ ವಿಧಾನಗಳು ಕಾಲಗಣನೆಯಲ್ಲಿ ಮುಖ್ಯ ಪಾತ್ರವಹಿಸುತ್ತದೆ.

ತಾನು ನಂಬಿ ಬದುಕುವ ಸಾಂಸಾರಿಕ ವ್ಯವಸ್ಥೆಯ ಸುರಕ್ಷತೆಗಾಗಿ ಜೀವನಾವರ್ತನ ಆಚರಣೆಗಳನ್ನು ಕಾಯ್ದುಕೊಂಡಿದ್ದರೆ ತನ್ನ ಇಡೀ ಸಮುದಾಯವನ್ನೇ ಕಾಯುವ ದೈವಗಳ ಸಂತೃಪ್ತಿಗಾಗಿ ವಾರ್ಷಿಕಾವರ್ತನ ಆಚರಣೆಗಳನ್ನು ಉಳಿಸಿಕೊಂಡಿದ್ದಾರೆ. ತಾನು ದಣಿದ ಮನ ತಣಿಸುವ ಹಬ್ಬ ಹರಿದಿನಗಳನ್ನು ನೀಲಗಾರರು ಆಚರಿಸುವುದನ್ನು ಇಲ್ಲಿ ಕಾಣಬಹುದಾಗಿದೆ.

೧. ಹಬ್ಬಗಳು

ನಂಬಿಕೆ ಮತ್ತು ಸಂಪ್ರದಾಯಗಳ ಕ್ರಿಯಾ ರೂಪಗಳೇ ಹಬ್ಬಗಳು. ಇವು ಕೃಷಿ ಸಂಸ್ಕೃತಿಯಲ್ಲಿ ಸ್ಪಷ್ಟರೂಪವನ್ನು ಪಡೆದು ಕಾಲಾಂತರದಲ್ಲಿ ವಿಕಸನಗೊಳ್ಳುತ್ತಾ ಜಟಿಲವಾದದ್ದುಂಟು. ಪ್ರತಿಯೊಂದು ಯುಗದ ಜನರೂ ಆಯಾ ಕಾಲದ ಅಭಿರುಚಿ ಮನೋಧರ್ಮಗಳಿಗನುಗುಣವಾಗಿ ತಂತಮ್ಮ ಕಲ್ಪನೆಗಳಿಗನುಗುಣವಾಗಿ ಅವುಗಳ ರೂಪ ಸ್ವರೂಪಗಳಲ್ಲಿ ಮಾರ್ಪಾಡುಗಳನ್ನು ಮಾಡಿಕೊಂಡದ್ದುಂಟು. ಹೊಸ ಹೊಸ ವಿಧಿ ನಿಷೇಧಗಳನ್ನು ಉಪಾಸನಾ ವಿಧಾನಗಳನ್ನು ಸೇರಿಸಿದ್ದುಂಟು. ಅವುಗಳ ಸಂಕೀರ್ಣ ವಾಡಿಕೆಗಳಿಗೆ ಮತ ಸಂಘಟಕರು ಮತ್ತು ಪುರೋಹಿತರು ನಾನಾ ರೀತಿಯಲ್ಲಿ ಕಾಣಿಕೆಗಳನ್ನು ನೀಡಿದ್ದಾರೆ. ನಿಸರ್ಗವನ್ನು ನಿಯಂತ್ರಿಸುವ ಮತ್ತು ದೇವರನ್ನೊಲಿಸಿಕೊಳ್ಳುವ ಸತತ ಪ್ರಯತ್ನಗಳ ಫಲವಾಗಿ ಹಬ್ಬಗಳು ಹುಟ್ಟು ಪಡೆದವು. ಹೀಗಾಗಿ ಹಲವು ಸಂಪ್ರದಾಯಗಳ ಮೊತ್ತ ಈ ಹಬ್ಬವಾಗಿದೆ.

ವಿದ್ವಾಂಸರಾದ ಬಾಗ್ಸ್ ಹೇಳುವಂತೆ ''ಸಾಮಾನ್ಯವಾಗಿ ಪ್ರತಿವರ್ಷ ಸಾಮಾಜಿಕ ಕ್ಷೇಮಕ್ಕಾಗಿ ವಿಶೇಷ ಸಂದರ್ಭದಲ್ಲಿ ಆಚರಿಸುವ ಜಾನಪದ ಸಂಗತಿಗಳ ಮತ್ತು ಸಂಪ್ರದಾಯಗಳ ಸಂಮಿಶ್ರ ಜಟಲ ಘಟಕವೇ ಹಬ್ಬ.''[೧೭]

ಮಾನವನಿಗೆ ದೈವದ ಕಲ್ಪನೆ ಬಂದಾಗಿನಿಂದ ಅದಕ್ಕೆ ಸಂಬಂಧಪಟ್ಟ ಅನೇಕ ಆಚರಣೆಗಳನ್ನು ರೂಢಿಸಿಕೊಂಡಿದ್ದಾನೆ. ತನ್ನ ಬದುಕಿನ ಸೂತ್ರ ಚಾಲಕ ದೇವರು ಎಂದು ನಂಬಿರುವುದರಿಂದ ಅದನ್ನು ನಾನಾ ಹೆಸರಿನಿಂದ ಪೂಜಿಸುವುದಲ್ಲದೆ ಬಂಧು ಬಾಂಧವರೊಡಗೂಡಿ ಅನೇಕ ದೇವರುಗಳ ಪ್ರಾಧಾನ್ಯತೆಯ ಹಿನ್ನೆಲೆಯಲ್ಲಿ ಹಬ್ಬ ಹರಿದಿನಗಳನ್ನು ಆಚರಿಸತೊಡಗಿದ ಯಾವ ಜಾತಿಯವರಲ್ಲೂ ದೇವರನ್ನು ಬಿಟ್ಟು ಮಾಡುವ ಹಳ್ಳಿಗಳಿಲ್ಲ. ಹೀಗೆ ದೇವರ ಹೆಸರಿನಲ್ಲಿ ನಿಗಧಿಯಾದ ದಿನ ಆಚರಿಸುವ ಸಾಂಸ್ಕೃತಿಕ ಸಾಮೂಹಿಕ ಕಾರ್ಯಗಳೇ ಹಬ್ಬಗಳು ಎನಿಸಿದವು. ಇದು ಪರಂಪರಾಗತ ಮೌಲ್ಯವಾದ್ದರಿಂದ ಯಾವ ಜಾತಿಯವನೇ ಆಗಲಿ ಅತ್ಯಂತ ಬಡವನೇ ಆಗಲಿ ಹಬ್ಬಗಳು ಸಮಾಜ ಒಪ್ಪಿಕೊಂಡ ಧಾರ್ಮಿಕ ಅಗತ್ಯಗಳಾದ್ದರಿಂದ ಅದನ್ನು ಎಲ್ಲರೂ ಯಾರ ಒತ್ತಾಯವೂ ಇಲ್ಲದೆ ನಡೆಸಿಕೊಂಡು ಬರುತ್ತಿದ್ದಾರೆ.

ನೀಲಗಾರ ಸಮುದಾಯವು ಇತರ ಸಮುದಾಯಗಳು ಆಚರಿಸುವಂತೆ ತಮ್ಮದೇ ಆದ ಕೆಲವು ವೈಶಿಷ್ಟ್ಯಪೂರ್ಣ ಹಬ್ಬಗಳನ್ನು ಆಚರಿಸುತ್ತಾರೆ. ಇವರು ಮೊದಲಿನಿಂದಲೂ ಹಿಂದೂ ಸಂಪ್ರದಾಯಕ್ಕೆ ಅಂಟಿಕೊಂಡು ತಮ್ಮದೇ ಆದ ವಿಶಿಷ್ಟತೆಯಿಂದ ಹಬ್ಬ ಹರಿದಿನಗಳನ್ನು ಆಚರಿಸುತ್ತಾ ಬಂದಿದ್ದಾರೆ. ನೀಲಗಾರರು ಹಿಂದೂ ಸಂಪ್ರದಾಯದ ಜೊತೆ ಜೊತೆಗೆ ತಮ್ಮದೇ ಆದ ವಿಶಿಷ್ಟವಾದ ಸಂಸ್ಕೃತಿಯನ್ನು, ಹಬ್ಬ ಹರಿದಿನಗಳನ್ನು ಉಳಿಸಿಕೊಂಡು ಬಂದಿರುವುದನ್ನು ಗಮನಿಸಬಹುದು.

ಜನಪದರ ಜೀವನ ಪ್ರಮುಖವಾಗಿ ದೈವಭಕ್ತಿ ಪ್ರಧಾನವಾಗಿದ್ದು ಅವರಿಗೆ ನೂರೆಂಟು ದೇವರ ಕೃಪೆ ಬೇಕು. ಸಾಮಾನ್ಯವಾಗಿ ತಮ್ಮ ಮನೆದೇವರು, ಕುಲದೇವರು, ಊರುದೇವರು, ಪೂರ್ವಜರು, ಪಿತೃದೇವತೆಗಳು, ನಾಡ ದೇವತೆ, ಕಾಡು ದೇವತೆ ಹೀಗೆ ಹೆಜ್ಜೆಗೊಂದು ದೈವ ದೇವರು ಇವರಿಗೆ ಬೇಕೇ ಬೇಕು. ಒಂದೊಂದು ರೋಗಕ್ಕೆ, ಕಾಯಿಲೆಗೆ, ಕಾಟಕ್ಕೆ, ನೋಟಕ್ಕೆ ಸುಖ ಸಂಮೃದ್ಧಿಗೆ ಒಬ್ಬೊಬ್ಬ ವಿಶಿಷ್ಟ ದೇವರು ದೇವತೆಗಳು ಬೇಕು. ಹೀಗೆ ನಮ್ಮ ಜನಪದರು ನಾನಾ ಕಾರಣಗಳಿಗಾಗಿ ಅನೇಕ ದೇವರುಗಳನ್ನು ಪೂಜಿಸುತ್ತಾ ಬಂದಿದ್ದಾರೆ. ಈ ಹಿನ್ನೆಲೆಯಲ್ಲಿ ದೈವಭಕ್ತಿಯಿಂದ ಅನೇಕ ಹಬ್ಬ ಹರಿದಿನಗಳನ್ನು ಸೃಷ್ಟಿಸಿಕೊಂಡಿದ್ದಾರೆ. ಅವುಗಳನ್ನು ವಿಶಿಷ್ಟ ಬಗೆಗಳಿಂದ ಆಚರಿಸುತ್ತಾ ಮುನ್ನಡೆದಿದ್ದಾರೆ. ಭಕ್ತಿ ಶ್ರದ್ಧೆಗಳಿಂದ ಆಯಾ ಜನಪದರು ತಮ್ಮ ಸಂಸ್ಕೃತಿಯನ್ನು ಪೋಷಿಸಿಕೊಂಡು ಬಂದಿದ್ದಾರೆ.

ನೀಲಗಾರರು ಸಾಮಾನ್ಯವಾಗಿ ಪ್ರಮುಖವಾದ ಎಲ್ಲಾ ಭಾರತೀಯ ಹಬ್ಬಗಳನ್ನು ತಮ್ಮದೇ ಆದ ರೀತಿಯಲ್ಲಿ ಆಚರಿಸುತ್ತಾರೆ. ಅವರು ಆಚರಿಸುವ ಹಬ್ಬಗಳನ್ನು ಇಲ್ಲಿ ಸ್ಥೂಲವಾಗಿ ವಿವೇಚಿಸುವುದು ಅಗತ್ಯ. ಅವುಗಳಿಂದ ಅವರ ಧಾರ್ಮಿಕ ಮನೋಭಾವವನ್ನು ಅರಿತುಕೊಳ್ಳಬಹುದು. ನೀಲಗಾರರು ಪ್ರಮುಖವಾಗಿ ದೀಪಾವಳಿ, ಯುಗಾದಿ, ಗೌರಿಹಬ್ಬ ಅಲ್ಲದೆ ಹಿಂದೂಗಳು ಆಚರಿಸುವ ಇನ್ನುಳಿದ ಸಂಕ್ರಾಂತಿ, ನಾಗಪಂಚಮಿ ಮುಂತಾದವುಗಳನ್ನು ತಮ್ಮ ಹಬ್ಬಗಳೆಂದೇ ಆಚರಿಸುತ್ತಾರೆ. ಇವರು ಆಚರಿಸುವ ಹಬ್ಬಗಳನ್ನು ಸ್ಥೂಲವಾಗಿ ಈ ಕೆಳಕಂಡಂತೆ ವಿವರಿಸಬಹುದು.

ಇವರ ಹಬ್ಬಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಿಕೊಳ್ಳಬಹುದು.

ಹಬ್ಬಗಳು

- ಸಾರ್ವತ್ರಿಕ
  - ನಿರ್ದಿಷ್ಟ ಕಾಲದಲ್ಲಿ ಆಚರಿಸುವ ಹಬ್ಬಗಳು
    - ನಿರ್ದಿಷ್ಟ ದಿನಗಳಲ್ಲಿ ನಡೆಯುವಂತವು
      - ೧. ಯುಗಾದಿ
      - ೨. ಗೌರಹಬ್ಬ
      - ೩. ದೀಪಾವಳಿ
      - ೪. ಶಿವರಾತ್ರಿ
  - ಅನಿರ್ದಿಷ್ಟವಾಗಿ ಆಚರಿಸುವ ಹಬ್ಬಗಳು
    - ಅನಿರ್ದಿಷ್ಟ ದಿನಗಳಲ್ಲಿ ನಡೆಯುವಂತವು
      - ೧. ಮಹಾಲಯ ಅಮವಾಸ್ಯೆ
- ಸಾಂಘಿಕ
  - ನಿರ್ದಿಷ್ಟ ಕಾಲದಲ್ಲಿ
  - ಅನಿರ್ದಿಷ್ಟವಾಗಿ
    - ಅನಿರ್ದಿಷ್ಟ ದಿವಸಗಳಲ್ಲಿ
      - ೧. ಮಾರಿಹಬ್ಬ
      - ೨. ಮಕೆ ಹಬ್ಬ

ಯುಗಾದಿ : ಈ ಹಬ್ಬವು ನೀಲಗಾರರಿಗೆ ಬಹುದೊಡ್ಡ ಹಬ್ಬವಾಗಿದೆ. ಇದು ವರ್ಷದ ಮೊದಲನೆಯ ಹಬ್ಬವಾಗಿದ್ದು ಮಂಟೇಸ್ವಾಮಿಗೆ ಪ್ರಿಯವಾದ ಹಬ್ಬವಾಗಿದೆ.

ದಕ್ಷಿಣ ಭಾರತದಾದ್ಯಂತ ವರ್ಷದ ಮೊದಲನೆ ದಿನವನ್ನು ಉತ್ಸಾಹದಿಂದ ಆಚರಿಸುವ ಪದ್ಧತಿ ಇದೆ. ದಾಕ್ಷಿಣಾತ್ಯರು ಚೈತ್ರ ಶುದ್ಧ ಪಾಡ್ಯಮಿ ದಿನವನ್ನು ವರ್ಷದ ಮೊದಲನೆ ದಿನವೆಂದು ಹುರುಪಿನಿಂದ ಆಚರಿಸುತ್ತಾರೆ. ಆ ಹಬ್ಬವನ್ನೇ ಯುಗಾದಿ ಎಂದು ಹೇಳುತ್ತಾರೆ. ಇದರ ಅರ್ಥ ಯುಗ ಅಂದರೆ ವರ್ಷದ ಆದಿ. ಎಂದರೆ ಮೊದಲ ದಿನ ಎಂದು. ಈ ಸಾಂಪ್ರದಾಯವು ಮಹಮದೀಯರಲ್ಲಿಯೂ ಕ್ರೈಸ್ತರಲ್ಲಿಯೂ ಉಂಟೆಂಬುದನ್ನು ನಾವು ಪ್ರತ್ಯಕ್ಷವಾಗಿ ನೋಡುತ್ತಿದ್ದೇವೆ. ನಮ್ಮ ಕರ್ನಾಟಕದಲ್ಲಿ ನಾಲ್ಕೂವರೆ ಕೋಟಿ ಕನ್ನಡ ಜನರು ಈ ಯುಗಾದಿಯ ಹಬ್ಬವನ್ನು ವೈಭವದಿಂದ ಆಚರಿಸುತ್ತಾರೆ. ಇದನ್ನು ಜನಸಾಮಾನ್ಯರು ಉಗಾದಿಯೆಂದೂ ಕೂಡ ಕರೆಯುತ್ತಾರೆ. ಈ ಹಬ್ಬವು ನೀಲಗಾರರಿಗೆ ವರ್ಷದ ಮೊದಲ ಹಬ್ಬವಾಗಿದೆ.

ಈ ಹಬ್ಬವು ನಿರ್ದಿಷ್ಟ ಕಾಲದಲ್ಲಿ ಜರುಗುತ್ತದೆ. ಈ ದಿನ ಜನರು ಬೆಳಿಗ್ಗೆ ಎದ್ದು ಅಭ್ಯಂಜನ ಸ್ನಾನವನ್ನು ಮಾಡಿ ಹೊಸಬಟ್ಟೆ ತೊಡಲೇಬೇಕು ಇದು ವಂಶಪಾರಂಪರ್ಯವಾಗಿ ಬೆಳೆದು ಬಂದಿದೆ. ಹಬ್ಬಕ್ಕೆ ಮಂಚಿತವಾಗಿ ಮನೆಯನ್ನು ಗುಡಿಸಿ, ಸಾರಿಸಿ, ಗೋಡೆಗಳಿಗೆ ಸುಣ್ಣ, ಬಣ್ಣ ಬಳಿದು ಮನೆಯನ್ನು ಹೊಸದನ್ನಾಗಿ ಮಾಡುತ್ತಾರೆ. ಆ ದಿನ ಮನೆಯ ಬಾಗಿಲುಗಳಿಗೆ ಹಸಿರು ತೋರಣ ಕಟ್ಟಿ ಶೃಂಗರಿಸುತ್ತಾರೆ. ಬೇವು ಬೆಲ್ಲವನ್ನು ಜನರು ಯುಗಾದಿಯ ಪ್ರಸಾದವೆಂದು ಶ್ರದ್ಧೆಯಿಂದ ಸೇವಿಸುತ್ತಾರೆ. ಈ ಆಚರಣೆಯಲ್ಲಿ ಜೀವನದಲ್ಲಿ ಬರುವ ಸುಖ ದುಃಖಗಳನ್ನು ಜನರು ಬೇವು ಬೆಲ್ಲದಂತೆ ಸಮನಾಗಿ ಸ್ವೀಕರಿಸಬೇಕೆನ್ನುವ ಒಂದು ಒಳ್ಳೆಯ ತತ್ವಾರ್ಥವಿದೆಯೆಂದು ನಾವು ತಿಳಿಯಬಹುದು.

ನೀಲಗಾರರಿಗೆ ಈ ಹಬ್ಬವು ತುಂಬಾ ಪ್ರಿಯವಾದ ಹಬ್ಬವಾಗಿದ್ದು ಇದು ತಿಂಗಳಿರುವಾಗ ಪ್ರಾರಂಭವಾಗುವುದು. ನೀಲಗಾರರ ಕ್ಷೇತ್ರವಾದ ಕಪ್ಪಡಿ ಜಾತ್ರೆಗೆ ಎಲ್ಲರೂ ಹೋಗುತ್ತಾರೆ. ಅಲ್ಲಿ ಎಲ್ಲಾ ಪೂಜೆ ಮುಗಿಸಿ ಕಪ್ಪಡಿಯಲ್ಲೇ ಜಾತ್ರೆ ಮಾಡುತ್ತಾರೆ. ಈ ಜಾತ್ರೆಯ ಸಂದರ್ಭದಲ್ಲಿ ಸಾವಿರಾರು ಜನರು ಸೇರಿ ಅಲ್ಲಿ **ಮಾದಲಿ ಸೇವೆ** ಎಂದು ವೈಭವದಿಂದ ಆಚರಿಸುತ್ತಾರೆ. ನಂತರ ಜಾತ್ರೆ ಮುಗಿಸಿ ತಮ್ಮ ತಮ್ಮ ಊರುಗಳಿಗೆ ಮರಳುತ್ತಾರೆ. ಹೀಗೆ ಕಪ್ಪಡಿಯಿಂದ ಯುಗಾದಿ ಹಬ್ಬದ ದಿವಸ ಬಂದು ತಮ್ಮ ತಮ್ಮ ಊರಿನ ಸುತ್ತ ಕಂಡಾಯ ಮೆರವಣಿಗೆಯನ್ನು ಮಾಡಿಕೊಂಡು ಬರುತ್ತಾರೆ. ಈ ಮೆರವಣಿಗೆ ಮುಗಿಯುವವರೆಗೆ ಆ ಊರಿನಲ್ಲಿ ಯಾರು ಊಟಮಾಡುವುದಿಲ್ಲವೆಂದು ನೀಲಗಾರರು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಸಿದರು. ನಂತರ ಮೆರವಣಿಗೆ ಮುಗಿದ ಮೇಲೆ ಮನೆಗೆ ಬಂದು ಮಂಟೇಸ್ವಾಮಿ ದೇವರಿಗೆ ಎಡೆ ಇಟ್ಟು ಪೂಜೆ ಮಾಡಿ ನಂತರ ಎಲ್ಲರೂ ಊಟ ಮಾಡುತ್ತಾರೆ. ಇದು ನೀಲಗಾರರಲ್ಲಿರುವ ಈ ಹಬ್ಬದ ವಿಶೇಷ. ಆ ದಿನ ಎಲ್ಲಾ ಸಮುದಾಯದ ನೀಲಗಾರರು ಸೇರಿ ಊರೊಟ್ಟಿಗೆ ಆಚರಿಸುತ್ತಾರೆ.

ಹೀಗೆ ನೀಲಗಾರರಿಗೆ ಈ ಹಬ್ಬವು ಅತ್ಯಂತ ಮುಖ್ಯವಾಗಿದ್ದು ತುಂಬಾ ವಿಜೃಂಭಣೆಯಿಂದ ನಡೆಯುತ್ತದೆ.

ಗೌರಿಹಬ್ಬ : ಈ ಹಬ್ಬವನ್ನು ಕೂಡ ನೀಲಗಾರರು ಭಕ್ತಿಯಿಂದ ಆಚರಿಸುತ್ತಾರೆ. ಇದನ್ನು ಗೌರಿ ಗಣೇಶನ ಹಬ್ಬವೆಂದು ಕರೆಯುತ್ತಾರೆ. ಈ ಹಬ್ಬದ ದಿನ ಹೊಸದಾಗಿ ಮದುವೆಯಾದ ಅಳಿಯ ಮಗಳನ್ನು ಕರೆ ತಂದು ಉಪಚರಿಸುತ್ತಾರೆ. ಎಲ್ಲಾ

ಜನಾಂಗಗಳು ಆಚರಿಸುವಂತೆ ನೀಲಗಾರ ಸಮುದಾಯ ಸಹ ಈ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಊರಿನವರೆಲ್ಲ ಸೇರಿ ಗಣಪತಿ ಕೂರಿಸಿದ ನಂತರ ಪ್ರತಿದಿನ ಒಬ್ಬರಂತೆ ಪೂಜೆಯನ್ನು ವಹಿಸಿಕೊಳ್ಳುತ್ತಾರೆ. ಇದು ಒಂದು ನಿರ್ದಿಷ್ಟ ಎಂದರೆ ಭಾದ್ರಪದ ಶುದ್ಧ ತೃತೀಯ ಮತ್ತು ಚತುರ್ಥಿಯಂದು ಜರುಗುವ ಹಬ್ಬವಾಗಿದೆ. ಪೂಜೆ ಮುಗಿದ ನಂತರ ನೈವೇದ್ಯ. ಆದ ಮೇಲೆ ಮನೆ ಮಂದಿಯೆಲ್ಲಾ ಒಟ್ಟಿಗೆ ಕುಳಿತು ಊಟ ಮಾಡುತ್ತಾರೆ.

ಮಹಾಲಯ ಅಮವಾಸ್ಯೆ : ಇದನ್ನು ಪಿತೃಪಕ್ಷ ಎಂದೂ ಸಹ ಕರೆಯುತ್ತಾರೆ. ಇದು ಸಾಮಾನ್ಯವಾಗಿ ನವರಾತ್ರಿಯ ದಿನಗಳಲ್ಲಿ ಯಾವುದಾದರೂ ಒಂದು ದಿನ ಜರುಗುತ್ತದೆ. ಇದು ಹಿರಿಯರನ್ನು ಆರಾಧಿಸುವ ಹಬ್ಬವಾಗಿರುತ್ತದೆ. ಸತ್ತ ವ್ಯಕ್ತಿಗಳ ಆತ್ಮಗಳನ್ನು ಸಂತೃಪ್ತಿಪಡಿಸದಿದ್ದರೆ ಅವುಗಳಿಂದ ತೊಂದರೆ ಉಂಟಾಗಬಹುದೆಂದು ಹಿರೇರ ಹಬ್ಬವನ್ನು ಬೇರೆ ಜನವರ್ಗ ಕೂಡ ಆಚರಿಸುವಂತೆ ನೀಲಗಾರರು ಸಹ ಆಚರಿಸುತ್ತಾರೆ. ಈ ಹಬ್ಬದಂದು ಸತ್ತು ಹೋದ ಹಿರಿಯ ತಲೆಮಾರಿನ ಜನರು ಬಂದು ಊಟ ಮಾಡಿ ಹೋಗುತ್ತಾರೆ ಎಂದು ನೀಲಗಾರರು ನಂಬುತ್ತಾರೆ. ಈ ನಂಬಿಕೆಯನ್ನು ಪ್ರಸಿದ್ಧ ಮಾನವಶಾಸ್ತ್ರಜ್ಞ ಟೇಲರ್ ಆತ್ಮತತ್ವ ಎಂದು ಕರೆಯುತ್ತಾನೆ. ಸತ್ತ ವ್ಯಕ್ತಿಗೆ ತನ್ನದೇ ಆದ ಆತ್ಮವಿರುತ್ತದೆ. ವ್ಯಕ್ತಿ ಸತ್ತ ಮೇಲೂ ಆತನ ಆತ್ಮ ನಾಶವಾಗುವುದಿಲ್ಲ. ಇದು ಶಿಕ್ಷಾ ರಕ್ಷಾ ಸಾಮರ್ಥ್ಯ ಹೊಂದಿರುತ್ತದೆ. ಈ ಕಾರಣದಿಂದಲೇ ವ್ಯಕ್ತಿ ಸತ್ತ ಸ್ಥಳದಲ್ಲಿ ಒಂದು ದಿನವಾದರೂ ದೀಪ ಉರಿಸುವುದು. ಮೂರು ಒಂಬತ್ತು ಅಥವಾ ಹನ್ನೊಂದನೆಯ ದಿನ ಆ ವ್ಯಕ್ತಿಗೆ ಪ್ರಿಯವಾದ ಭಕ್ಷ್ಯ ಭೋಜನಗಳನ್ನು ಎಡೆ ಮಾಡಿ ಒಳಗೆ ಕರೆದುಕೊಳ್ಳುತ್ತಾರೆ.

ಹಬ್ಬದ ದಿನ ಮನೆಯ ಒಳಗೆ ಮತ್ತು ಹೊರಗೆ ಶುಚಿಯಾಗಿರುವಂತೆ ನೋಡಿಕೊಳ್ಳುತ್ತಾರೆ. ಕಾರಣ ಪಿತೃಗಳ ಋಣ ತೀರಿಸುವಾಗ ಅಶುದ್ಧವಾಗಿದ್ದರೆ ಎಡೆ ಸ್ವೀಕರಿಸುವುದಿಲ್ಲ ಎಂಬ ನಂಬಿಕೆಯಿಂದ ಹಾಗೆ ಮಾಡುತ್ತಾರೆ. ಈ ಹಬ್ಬವನ್ನು ಶನಿವಾರ ಮತ್ತು ಸೋಮವಾರ ಮಾಡುವುದಿಲ್ಲ. ಮಂಗಳವಾರವೇ ಮಾಡಬೇಕು ಅಂದಿನ ಹಬ್ಬದ ದಿನ ವಿಶೇಷ ಮಾಂಸದ ಅಡುಗೆಯನ್ನು ಮಾಡುತ್ತಾರೆ.

ಮೃತರು ಬದುಕಿದ್ದಾಗ ಏನೇನು ತಿನ್ನುತ್ತಿದ್ದರೋ ಆ ಅಡುಗೆಯನ್ನು ತಯಾರಿಸಿ, ಅವರು ಬಳಸುತ್ತಿದ್ದ ವಸ್ತುಗಳನ್ನು ಎಡೆಗೆ ಇಡುತ್ತಾರೆ. ತಮ್ಮ ಸಂಪ್ರದಾಯದಂತೆ ಕಳಸವನ್ನು ಇಡುತ್ತಾರೆ. ಪಕ್ಕದಲ್ಲಿ ಹೆಣ್ಣು ಗಂಡಿಗೆ ಸಂಬಂಧಿಸಿದ ಬಟ್ಟೆಗಳನ್ನು ಎರಡು ಕಡೆ ಇಡುತ್ತಾರೆ. ನಂತರ ಅವರವರಿಗೆ ಸಬಂಧಿಸಿದ ವಸ್ತುಗಳನ್ನು ಎರಡೂ ಕಡೆ ಇಟ್ಟು ಪೂಜಿಸುತ್ತಾರೆ. ಇದು ಅನಿರ್ದಿಷ್ಟ ಕಾಲದಲ್ಲಿ ಬರುವ ಹಬ್ಬವಾದ್ದರಿಂದ ಹತ್ತಿರದ ಬಂಧುಗಳು ಸೇರುತ್ತಾರೆ. ಎಲ್ಲರೂ ಎಡೆಗಳಿಗೆ ಕೈಮುಗಿದು ನಂತರ ಒಂದು ಎಡೆಯನ್ನು ಹೊರಗೆ ಇಡುವ ಪದ್ಧತಿಯುಂಟು. ಈ ಎಡೆಯನ್ನು ಮನೆಯ ಯಜಮಾನರು ಊಟ ಮಾಡಿದ ಮೇಲೆ ಉಳಿದ ನೆಂಟರಿಷ್ಟರಿಗೆ ಬೋಜನ ನಡೆಯುತ್ತದೆ.

ಹೀಗೆ ನೀಲಗಾರರು ಮಾರ್ನಮಿ ಹಬ್ಬವನ್ನು ಬೇರೆಯ ಜನಾಂಗದವರಂತೆ ವಿಶಿಷ್ಟವಾಗಿ ಆಚರಿಸುತ್ತಾರೆ.

ದೀಪಾವಳಿ : ನೀಲಗಾರರು ಆಚರಿಸುವ ಹಬ್ಬದಲ್ಲಿ ದೀಪಾವಳಿಯು ಒಂದು. ಈ ಹಬ್ಬವನ್ನು ಬೇರೆ ಬೇರೆ ಜನಾಂಗದಲ್ಲಿ ಆಚರಿಸುವಂತೆ ಇವರೂ ಕೂಡ ಆಚರಿಸುತ್ತಾರೆ. ಹಬ್ಬಗಳ ರಾಜ ಎಂದೇ ಹೆಸರಾಗಿರುವ ದೀಪಾವಳಿ ನಮ್ಮ ರಾಷ್ಟ್ರೀಯ ಹಬ್ಬಗಳಲ್ಲಿ ಪ್ರಮುಖವಾದುದು. ದೇಶದಾದ್ಯಂತ ಆಚರಣೆಯಲ್ಲಿರುವುದು ಈ ಹಬ್ಬದ ವಿಶೇಷ. ದೀಪಾವಳಿ, ದಿವಾಲಿ, ದೀಪಾಲಿಕಾ ಈ ಹೆಸರುಗಳನ್ನು ಹೊಂದಿರುವ ಈ ಹಬ್ಬ ಪೌರಾಣಿಕ ಹಾಗೂ ಸಾಂಸ್ಕೃತಿಕ ದೃಷ್ಟಿಯಿಂದ ತುಂಬಾ ಮಹತ್ವದ್ದು. ಇದು ಮುಖ್ಯವಾಗಿ ಬೆಳಕಿನ ಹಬ್ಬ. ಕತ್ತಲೆಯನ್ನು ಹೋಗಲಾಡಿಸಿ ಬೆಳಕನ್ನು ತಂದುಕೊಡುತ್ತದೆ ಎಂದು ನಂಬುತ್ತಾರೆ. ಈ ಹಬ್ಬವನ್ನು ಕೆಲವರು ಒಂದು ತಿಂಗಳು ಬಹಳ ವಿಜೃಂಭಣೆಯಿಂದ ಮಾಡುತ್ತಾರೆ. ಕೆಲವು ಕಡೆಗಳಲ್ಲಿ ನಾಲ್ಕು, ಐದು ದಿನ ಮಾತ್ರ ನಡೆಯುತ್ತದೆ.

ಅಶ್ವಿನಿ ಮಾಸದ ಕೊನೆ ಹಾಗೂ ಕಾರ್ತಿಕ ಮಾಸದ ಪ್ರಾರಂಭದ ಭಾಗಗಳಲ್ಲಿ ಈ ದೀಪಾವಳಿ ಹಬ್ಬ ಆಚರಿಸುತ್ತಾರೆ. ಮಲೆನಾಡು ಭಾಗದಲ್ಲಿ ಮನೆ ಮಂದಿಯೆಲ್ಲ ಎಣ್ಣೆ ಹಚ್ಚಿಕೊಂಡು ಸ್ನಾನ ಮಾಡುತ್ತಾರೆ. ಆದರೆ ನೀಲಗಾರರಲ್ಲಿ ಎಣ್ಣೆ ಸ್ನಾನ ಉಗಾದಿಯಲ್ಲಿ ಮಾತ್ರ. ಶ್ರೀ ಕೃಷ್ಣನು ನರಕಾಸುರನನ್ನು ಕೊಂದ ಸ್ಮರಣೆಗಾಗಿ ಆಚರಿಸುವ ಹಬ್ಬ ಇದಾಗಿದೆ. ಅಪಮೃತ್ಯುವಿನ ನಿವಾರಣಾರ್ತವಾಗಿ ದೇವರ ಮನೆಯಲ್ಲಿ ದೀಪ ಹತ್ತಿಸಿ ಇಡುವುದು ರೂಢಿ. ಕೆಲವೆಡೆ ಅಂಗಳದಲ್ಲಿ ದೀಪವನ್ನು ಹೊತ್ತಿಸಿಡುವ ಪದ್ಧತಿ ಉಂಟು. ಹೆಂಗಸರು ಸ್ನಾನದ ನಂತರ ಶುಚಿಯಾಗಿ ಅಂದಿನ ಹಬ್ಬಕ್ಕೆ ಬೇಕಾದ ಸಿಹಿ ಅಡುಗೆ ತಯಾರಿಸುತ್ತಾರೆ. ಈ ಹಬ್ಬದಂದು ಎಲ್ಲರೂ ಕಡ್ಡಾಯವಾಗಿ ಹೊಸ ಬಟ್ಟೆಗಳನ್ನು ಧರಿಸುತ್ತಾರೆ. ನಂತರ ಎಲ್ಲರೀ ಒಟ್ಟಿಗೆ ಕುಳಿತು ಊಟ ಮಾಡುತ್ತಾರೆ.

ಮಾರಿ ಹಬ್ಬ

ಈ ಹಬ್ಬವನ್ನು ಇವರು ಗ್ರಾಮದೇವತೆ ಹಬ್ಬವನ್ನಾಗಿ ಆಚರಿಸುತ್ತಾರೆ. ಶಿವರಾತ್ರಿ ಆದ ಹದಿನೈದು ದಿನಕ್ಕೆ ಗ್ರಾಮದಲ್ಲಿ ಈ ಹಬ್ಬವನ್ನು ಆಚರಿಸುತ್ತಾರೆ. ಆದಿನ ಮನೆಗಳಿಗೆಲ್ಲ ಸುಣ್ಣ ಬಣ್ಣ ಬಳಿದು ಸುಂದರಗೊಳಿಸುತ್ತಾರೆ. ನಂತರ ಮನೆಯವರೆಲ್ಲರೂ ಸ್ನಾನ ಮಾಡಿ ಸಂತೋಷದಿಂದ ಇರುತ್ತಾರೆ. ಮುಖ್ಯವಾಗಿ ಈ ಹಬ್ಬವನ್ನು ಮಂಗಳವಾರವೇ ಆಚರಿಸಬೇಕು ಎಂಬುದು ನೀಲಗಾರರ ನಿಯಮ. ಆದಿನ ತಂಬಿಟ್ಟು ಮಾಡಿಕೊಂಡು ಆರತಿ ಮಾಡಿಕೊಂಡು ಹೆಂಗಸರು ಬರುತ್ತಾರೆ. ಅಂದು ಮಾರಮ್ಮನಿಗೆ ತಂಪು ಮಾಡಿ ಹರಕೆ ಹೊತ್ತಿರುವವರು ಬಾಯಿಬೀಗ ಹಾಕಿಸಿಕೊಳ್ಳುತ್ತಾರೆ. ನಂತರ ತಂಪು ಉಕ್ಕಿಸಿ, ಪೂಜೆಮಾಡಿ ಅರಮನೆಯಲ್ಲಿರುವ ಮರಿಯನ್ನು ದೇವರ ಮಠಕ್ಕೆ ಸೇರಿದ ನಂತರ ಆ ಊರಿನ ಉಳಿದ ಜನರು ತಮ್ಮ ತಮ್ಮ ಮನೆಯಲ್ಲಿ ಮರಿ ಕಡಿದು ಎಡೆಯನ್ನು ಮಾರಿಗೆ ಕೊಡುತ್ತಾರೆ. ನಂತರ ಎಲ್ಲರೂ ಊಟ ಮಾಡುತ್ತಾರೆ. ಈ ಹಬ್ಬವನ್ನು ಆಯಾಯ ಕೋಮಿನ ಜನರು ಮಾತ್ರ ಆಚರಿಸತ್ತಾರೆ. ಆದರೆ ಒಟ್ಟಿಗೆ ಆಚರಿಸುವುದಿಲ್ಲ.

ಮಾರಿ ಹಬ್ಬವನ್ನು ಇವರು ಮುಖ್ಯವಾಗಿ ಆಚರಿಸಲು ಕಾರಣ ಆ ಊರಿನ ಜನಗಳಿಗೆ ಯಾವುದೇ ರೋಗ ರುಜಿನ ಬರದ ಹಾಗೆ ಕಾಪಾಡಿಕೊಳ್ಳಲು. ಅದೇ ರೀತಿ ಜಾನುವಾರಗಳಿಗೂ ಯಾವುದೇ ಹಾನಿ ಉಂಟಾಗದೆ ಇರಲಿ ಎಂಬ ಉದ್ದೇಶದಿಂದ ಈ ಹಬ್ಬವನ್ನು ಆಚರಿಸುತ್ತಾರೆ. ಇಲ್ಲಿ ಪ್ರಾದೇಶಿಕವಾಗಿ ಈ ಹಬ್ಬಗಳ ಬದಲಾವಣೆ ಉಂಟಾಗಿದ್ದು ಒಂದೊಂದು ಪ್ರದೇಶದಲ್ಲಿ ಒಂದೊಂದು ರೀತಿ ಆಚರಿಸುತ್ತಾರೆ.

ಹೀಗೆ ನೀಲಗಾರರು ಮಾರಿಹಬ್ಬವನ್ನು ಗ್ರಾಮದೇವತೆ ಹಬ್ಬವಾಗಿ ಆಚರಿಸುತ್ತಾರೆ.

ಮಕೆ ಹಬ್ಬ

ಈ ಹಬ್ಬವನ್ನು ನೀಲಗಾರ ಸಮುದಾಯದ ಹಾಲುಮತದವರು ಮಾತ್ರ ಆಚರಿಸುತ್ತಾರೆ. ಈ ಹಬ್ಬದ ದಿವಸ ಮನೆಯವರೆಲ್ಲರೂ ಸ್ನಾನ ಮಡಿ ಮಾಡಿ ಮನೆಯನ್ನೆಲ್ಲಾ ಸ್ವಚ್ಛಗೊಳಿಸುತ್ತಾರೆ. ನಂತರ ಗೋಡೆಗಳಿಗೆ ಸುಣ್ಣ ಬಣ್ಣ ಬಳಿದು ಶುಚಿಗೊಳಿಸುತ್ತಾರೆ. ನಂತರ ಅಕ್ಕಿ ಬೇಳೆ ಬೆರೆಸಿ ಮಾಂಸದ ಅಡುಗೆ ಮಾಡಿಸುತ್ತಾರೆ. ಈ ಹಬ್ಬದ ದಿವಸ ಸತ್ತವರ ಸಮಾಧಿಗೆ ಹೋಗಿ ಇವರು ಪೂಜೆ ಸಲ್ಲಿಸಿ ನಂತರ ಮನೆಗೆ ಬಂದು ಎಡೆ ಇಟ್ಟು ನಂತರ ಊಟ ಮಾಡುತ್ತಾರೆ. ಹೀಗೆ ಮಕೆ ಹಬ್ಬವನ್ನು ನೀಲಗಾರರ ಒಂದು ಕೋಮಿನ ಜನರು ಮಾತ್ರ ಆಚರಿಸುತ್ತಾರೆ.

೨. ಜಾತ್ರೆಗಳು

ಪ್ರತಿ ನಿತ್ಯವೂ ಬೇಸಾಯದಲ್ಲಿ ತೊಡಗಿ ನಿರಂತರವಾಗಿ ಶ್ರಮವಹಿಸಿ ದುಡಿಯುವ, ಕೂಲಿ ಮಾಡುವ ಇವರು ಆ ಬದುಕಿನಿಂದ ಸ್ವಲ್ಪ ವಿರಾಮ ಪಡೆದು ನೆಮ್ಮದಿಯಿಂದ ಇರಲು ಹಬ್ಬ, ತೇರು, ಉತ್ಸವ, ಜಾತ್ರೆ ಮೊದಲಾದ ಸಾಮೂಹಿಕ ಆಚರಣೆಗಳಲ್ಲಿ ತೊಡಗಿಕೊಳ್ಳುತ್ತಾರೆ. ಈ ಆಚರಣೆಗಳಲ್ಲೆಲ್ಲಾ ಸಂತೋಷದ ಜೀವನವನ್ನು ಕಾಣಬಹುದು. ಇವರ ಅನೇಕ ಕೆಲಸಗಳಿಗೆ ಜಾತ್ರೆಯು ಒಂದು ಬಿಡುವು. ಈ ಸಂದರ್ಭದಲ್ಲಿ ಹೊಸಬಟ್ಟೆಯನ್ನು ಖರೀದಿ ಮಾಡುವುದು, ಮನೆಗಳಿಗೆ ಬೇಕಾದ ವಿವಿಧ ವಸ್ತುಗಳ ಸಂಗ್ರಹ ಇನ್ನೂ ಮುಂತಾದ ಕೆಲಸಗಳನ್ನು ಸಂಭ್ರಮದಿಂದ ನಡೆಸುತ್ತಾರೆ.

ಹಬ್ಬ ಹರಿದಿನ ಹಾಗೂ ಜಾತ್ರೆ ಉತ್ಸವಗಳು ಸಾಮಾಜಿಕವಾಗಿ ಭಿನ್ನ ಭಿನ್ನವಾದರೂ ಜನಪದರು ಸಾಮಾನ್ಯವಾಗಿ ಇವುಗಳಲ್ಲಿ ಯಾವ ವ್ಯತ್ಯಾಸಗಳನ್ನು ಕಾಣುವುದಿಲ್ಲ. ಕಾರಣ ಜನಪದರು ಯಾವುದೇ ಹಬ್ಬವನ್ನು ಆಚರಿಸುವಾಗ ಅದನ್ನು ವೈಯಕ್ತಿಕವಾಗಿಟ್ಟುಕೊಳ್ಳದೇ ಸಾಮೂಹಿಕವಾಗಿ ಆಚರಿಸುವುದರ ಮೂಲಕ ಆ ಹಬ್ಬವನ್ನು ಜಾತ್ರೆ ಅಥವಾ ಯಾತ್ರೆಯನ್ನಾಗಿ ಪರಿವರ್ತಿಸುತ್ತಾರೆ. ಜಾತ್ರೆ ಎನ್ನುವುದು ಒಂದು ಸಾಮೂಹಿಕ ಕ್ರಿಯೆ. ಇದು ಕೇವಲ ಆ ಹಳ್ಳಿಗೆ ಮಾತ್ರ ಸೀಮಿತವಾಗಿರದೆ ಸುತ್ತಲಿನ ಬಹುದೂರದ ಹಳ್ಳಿಗಳಿಂದಲೂ ಜನರು ಬಂದು ಸೇರುತ್ತಾರೆ. ಇಲ್ಲಿ ಮುಖ್ಯವಾಗಿ ನೀಲಗಾರ ಸಮುದಾಯದ ವಿವಿಧ ಒಕ್ಕಲುಗಳೆಲ್ಲರೂ ಜಾತ್ರೆಗಳಲ್ಲಿ ಭಾಗವಹಿಸುತ್ತಾರೆ. ವಿಶೇಷ ಸಂದರ್ಭಗಳಲ್ಲಿ ಮಾತ್ರ ಆಚರಿಸಬಹುದಾದ ಈ ಜಾತ್ರೆಗಳು ಜನಪದರ ಜೀವನದಲ್ಲಿ ಒಂದು ಬಗೆಯ ಧಾರ್ಮಿಕ ಬದಲಾವಣೆಯನ್ನು ಉಂಟುಮಾಡುತ್ತವೆ. ವರ್ಷಕ್ಕೊಂದು ಸಲ ಬರುವ ಈ ಜಾತ್ರೆಗಳು ವರ್ಷವಿಡೀ ದುಡಿದು ಬೇಸತ್ತ ಜನಪದರಿಗೆ ಸಂತೋಷಪಡುವ ಸದಾವಕಾಶವನ್ನು ಒದಗಿಸುತ್ತವೆ.

ಜಾತ್ರೆ ಸಾಮೂಹಿಕವಾಗಿ ಆಚರಣೆಗೊಳ್ಳುವುದರಿಂದ ಇದರ ಕಟ್ಟಳೆಗಳನ್ನು ಯಾರೂ ಮೀರುವಂತಿಲ್ಲ. ಒಂದು ವೇಳೆ ಮೀರಿದರೆ ಅವರು ದೇವರ ಕೋಪಕ್ಕೀಡಾಗಿ ನಾನಾ ತೊಂದರೆಗಳಿಗೆ ಸಿಲುಕಿಕೊಳ್ಳುತ್ತಾರೆ ಎಂದು ನಂಬುತ್ತಾರೆ. ''ಸಮೂಹದ ಕ್ಷೇಮಕ್ಕಾಗಿ ಆಚರಿಸುವ ಈ ಜಾತ್ರೆಗಳು ಅನೇಕ ಸಂಪ್ರದಾಯಗಳ ಕಟ್ಟಾಗಿದೆ'' ಎಂದು ಬಾಗ್ಸ್‌ರವರು ಹೇಳುತ್ತಾರೆ. ಸಾಮಾನ್ಯವಾಗಿ ಜಾತ್ರೆ ನಡೆದಾಗಲೆಲ್ಲ ಮನೆ ಮನೆಯಲ್ಲೂ ಹಬ್ಬವಿರುತ್ತದೆ ಆದರೆ ಹಬ್ಬದ ಸಂದರ್ಭದಲ್ಲಿ ಜಾತ್ರೆ ಇರಬೇಕೆಂದು

ನಿಯಮವಿಲ್ಲ. ಹಬ್ಬ ಒಂದು ಕುಟುಂಬಕ್ಕೆ ಸಂಬಂಧಿಸಿದೆ ಆದರೆ ಜಾತ್ರೆ ಇಡೀ ಊರಿಗೆ, ಇಡೀ ಸಮುದಾಯಕ್ಕೆ ಸಂಬಂಧಿಸಿರುತ್ತದೆ. ಜಾತ್ರೆಯಲ್ಲಿ ನಡೆಯುವ ಆಚರಣೆಗಳೆಲ್ಲ ಸಾಮೂಹಿಕ ಕಾಳಜಿ ಇರುತ್ತದೆ. ಹೀಗಾಗಿ ''ಸಮಾಜದ ಹಿತರಕ್ಷಣೆಯೇ ಇವುಗಳ ಮುಖ್ಯ ಉದ್ದೇಶವಾಯಿತು. ಇಂಥ ಉದ್ದೇಶವನ್ನು ಅಬಿವ್ಯಕ್ತಿಸುವ ಹಲವು ಆಚರಣೆಗಳಲ್ಲಿ ಜಾತ್ರೆಗಳು ತುಂಬಾ ಪ್ರಮುಖ ಪಾತ್ರ ವಹಿಸುತ್ತವೆ.''[೧೮]

ನೀಲಗಾರ ಸಮುದಾಯದಲ್ಲಿ ಎಲ್ಲಾ ಪಂಗಡದವರು ಒಟ್ಟಿಗೆ ಸೇರಿ ಜಾತ್ರೆಯನ್ನು ನಡೆಸುತ್ತಾರೆ. ಆ ದಿನ ಅಲ್ಲಿಗೆ ಹೋಗದ ನೀಲಗಾರರೇ ಇಲ್ಲ. ಮಂಟೇಸ್ವಾಮಿಗಳ ಮೂಲ ಗದ್ದುಗೆಯಿರುವ ಬೊಪ್ಪೇಗೌಡನ ಪುರದಲ್ಲಿ ಯಾವ ಜಾತ್ರೆಗಳೂ ಜರುಗುವುದಿಲ್ಲ. ಅವರ ಶಿಷ್ಯರಾದ ರಾಚಪ್ಪಾಜಿ, ದೊಡ್ಡಮ್ಮ ತಾಯಿ, ಸಿದ್ದಪ್ಪಾಜಿ ಗದ್ದುಗೆಗಳು ಇರುವ ಕಪ್ಪಡಿ-ಮುಟ್ಟನಹಳ್ಳಿ ಚಿಕ್ಕಲೂರುಗಳಲ್ಲಿ ಬಹು ದೊಡ್ಡ ಜಾತ್ರೆಗಳು ನಡೆಯುತ್ತದೆ. ಈ ಮೂರು ಸ್ಥಳಗಳಲ್ಲೂ ಜಾತ್ರೆಯ ಸಂದರ್ಭಗಳಲ್ಲಷ್ಟೇ ಜನ ಸೇರುತ್ತಾರೆ. ಉಳಿದ ದಿನಗಳಲ್ಲಿ ಇವು ಕಗ್ಗಾಡುಗಳು ಹಾಗೂ ತೋಪಿನ ಬೀಡುಗಳು. ರಾಚಪ್ಪಾಜಿ ಮತ್ತು ಸಿದ್ದಪ್ಪಾಜಿ ಗದ್ದುಗೆಗಳೆರಡು ಕಾವೇರಿ ನದಿಗೆ ಸಮೀಪದಲ್ಲಿವೆ ಮತ್ತು ಸಮೃದ್ಧ ತೋಪುಗಳಿವೆ. ಜಾತ್ರೆಯ ದಿನಗಳಲ್ಲಿ ಈ ತೋಪಿನಲ್ಲಿ ಬೀಡುಬಿಟ್ಟು ಜಾತ್ರೆಗಳನ್ನು ಮಾಡಿಕೊಂಡು ಮನೆ ಸೇರುತ್ತಾರೆ.

ಕಪ್ಪಡಿ-ಮುಟ್ಟನಹಳ್ಳಿ ಜಾತ್ರೆಗಳು

ಕಾವೇರಿ ನದಿ ದಡದಲ್ಲಿರುವ ಕಪ್ಪಡಿ ಜಾತ್ರೆ ಶಿವರಾತ್ರಿಯಿಂದ ಪ್ರಾರಂಭವಾಗುತ್ತದೆ. ಯುಗಾದಿ ಅಮವಾಸ್ಯೆಯ ದಿನ ಮುಟ್ಟನಹಳ್ಳಿಯಲ್ಲಿ **ಎದುರು ಸೇವೆ** ಆದ ಮೇಲೆ ಜಾತ್ರೆ ಮುಗಿಯುತ್ತದೆ. ಯುಗಾದಿ ಹಬ್ಬದ ಅಮವಾಸ್ಯೆ ದಿನ ಬೊಪ್ಪೇಗೌಡನ ಪುರದಲ್ಲಿ ನಡೆಯುವ ಒಂದು ದಿನದ ಜಾತ್ರೆಗೆ ಎದುರು ಸೇವೆ ಎನ್ನುತ್ತಾರೆ. ಜಾತ್ರೆ ಮುಗಿಸಿ ಬಂದ ಸ್ವಾಮಿಗಳನ್ನು ಪರಿವಾರದವರನ್ನು ಮಠದಲ್ಲಿರುವ ಸ್ವಾಮಿಗಳು ಎದುರುಗೊಂಡು ಮಠಕ್ಕೆ ಬರಮಾಡಿ ಕೊಳ್ಳುವುದಕ್ಕೆ ಎದುರು ಸೇವೆ ಎನ್ನುತ್ತಾರೆ. ಹೀಗೆ ೨೫ ದಿನಗಳ ಕಾಲ ನಡೆಯುವ ಈ ಪರಂಪರೆಯ ವೈಭವದ ಜಾತ್ರೆ ಕಪ್ಪಡಿಜಾತ್ರೆ ಮಾದಲಿ ಸೇವೆ (ರಾಚಪ್ಪಾಜಿಯವರಿಗೆ ನಡೆಯುವ ಸೇವೆ) ಈ ದಿನ ಸುಮಾರು ೫೦ ಸಾವಿರ ಜನರು ನೆರೆಯುತ್ತಾರೆ. ಈ ಜಾತ್ರೆ ಮಳವಳ್ಳಿ ಮಠದ ಸ್ವಾಮಿಗಳು ಒಂದು ವರ್ಷದ ಬಾಬುದಾರಿಕೆ ಹಾಗೂ ಬೊಪ್ಪೇಗೌಡನಪುರದವರಿಗೆ ಒಂದು ವರ್ಷದ ಬಾಬುದಾರಿಕೆಯಲ್ಲಿ ನಡೆಯುತ್ತದೆ. ಗುರುಮಠದಿಂದ ಈಗಲೂ ಅವರದೇ ಸಾಂಸ್ಕೃತಿಕ ದಾರಿಗಳಲ್ಲಿ ನಡೆದುಕೊಂಡು ಹೋಗಿ ಕಪ್ಪಡಿ ಸೇರುತ್ತಾರೆ.

ರಾಚಪ್ಪಾಜಿಯವರು ಬೊಪ್ಪೇಗೌಡನಪುರದಿಂದ ಬರುವಾಗ ಮೂರು ಕಿ.ಮೀ. ದೂರದಲ್ಲಿ ಮುಟ್ಟನಹಳ್ಳಿಯಲ್ಲಿ ದೊಡ್ಡಮ್ಮ ತಾಯಿ ಮುಟ್ಟಾದಳಂತೆ ಅವಳಿಗೆ ಅಲ್ಲೇ ಗದ್ದುಗೆ ಮಾಡಿ (ಮುಟ್ಟು ಪೂಜೆ ಕೊಟ್ಟು) ಕಪ್ಪಡಿಗೆ ಪ್ರಯಾಣ ಬೆಳೆಸಿದರು. ಅವರ ಪ್ರಯಾಣ ಮಾಡಿದ ದಾರಿಯಲ್ಲೇ ಮಠದವರು ಬರುತ್ತಾರೆ. ನಗಾರಿ-ನೌಭತ್ತು-ಪರಿವಾರ ರಾಜ ಉಡುಪುಗಳನ್ನು ಧರಿಸಿ ಕಾಲಜ್ಞಾನದ ಕಟ್ಟುಗಳೊಡನೆ ಹೊರಟು ಕಪ್ಪಡಿಯನ್ನು ಸೇರಿ ೨೫ ದಿನಗಳ ಕಾಲವಿದ್ದು ಜಾತ್ರೆ ಮಾಡುತ್ತಾರೆ. ಒಬ್ಬೊಬ್ಬ ಈ ಪರಂಪರೆಯ ಸಂತತಿಗೆ ಒಂದೊಂದು ದಿನ ಸೇವೆ ಮಾಡಿ ಜಾತ್ರೆ ನೆರವೇರಿಸುತ್ತಾರೆ. ಅದರಲ್ಲಿ ಮಾದಲಿ ಸೇವೆ ರಾಚಪ್ಪಾಜಿಯವರಿಗೆ ಸಲ್ಲಿಸುತ್ತಾರೆ.

ಈ ಮಾದಲಿ ಪ್ರಸಾದವನ್ನು ತಮ್ಮ ತಮ್ಮ ಮನೆಗಳಿಗೆ ತೆಗೆದುಕೊಂಡು ಹೋಗಿ ಪ್ರಸಾದವನ್ನು ಹೆಚ್ಚಿಸಿಕೊಳ್ಳುತ್ತಾರೆ. ಕೊನೆಯ ದಿನ ಗದ್ದುಗೆ ತೊಳೆದು ಆ ಪೂಜಾ ಸಾಮಾನುಗಳನ್ನು ಕಟ್ಟಿಕೊಂಡು ಬರುತ್ತಾರೆ. ಈ ಗದ್ದುಗೆಯನ್ನು ತೊಳೆಯುವುದೇ ಒಂದು ಆಚರಣೆ. ಹಾಲು-ಎಳೆನೀರು-ನಿಂಬೆಹಣ್ಣು ಇತ್ಯಾದಿಗಳಿಂದ ಗದ್ದುಗೆ ತೊಳೆದು ಗ್ರಂಥಗಳನ್ನು ಕಟ್ಟಿಕೊಂಡು ಹಿಂತಿರುಗಿ ಮುಟ್ಟನಹಳ್ಳಿಗೆ ಬರುತ್ತಾರೆ. ೨೫ ದಿನಗಳ ಕಪ್ಪಡಿ ಜಾತ್ರೆಗೆ ಹೋಗಿದ್ದು ಬಂದ ಪರುಸೆಯನ್ನು ಆಯಾಯ ಊರಿನವರು ಮುಟ್ಟನಹಳ್ಳಿಯಲ್ಲಿ ಎದುರುಗೊಳ್ಳುತ್ತಾರೆ. ಮಳವಳ್ಳಿಯವರು ಜಾತ್ರೆಗೆ ಹೋಗಿದ್ದರೆ ಬೊಪ್ಪೇಗೌಡನ ಪುರದವರು ತಮ್ಮ ಬಸವನೊಡನೆ ಎದುರುಗೊಳ್ಳುತ್ತಾರೆ. ಬೊಪ್ಪೇಗೌಡನ ಪುರದವರು ಹೋಗಿದ್ದರೆ ಮಠದವರು ತಮ್ಮ ಬಸವನೊಡನೆ ಎದುರುಗೊಳ್ಳುತ್ತಾರೆ. ಈ ಬಸವಗಳ ಮುಖಾಮುಖಿ ಮುಟ್ಟನಹಳ್ಳಿಯಲ್ಲಿ ನಡೆಯುವುದರಿಂದ ಅದಕ್ಕೆ ''ಎದುರು ಸೇವೆ'' ಎಂದು ಕರೆಯುತ್ತಾರೆ

ಹೀಗೆ ಕಪ್ಪಡಿಯಲ್ಲಿ ಪ್ರಾರಂಭವಾದ ಜಾತ್ರೆ ಮುಟ್ಟನಹಳ್ಳಿಯ ಎದುರು ಸೇವೆಯಲ್ಲಿ ಕೊನೆಗೊಳ್ಳುತ್ತದೆ. ನಂತರ ಅಮವಾಸ್ಯೆ ದಿನ ಗುರುಗಳು ಮಠ ನುಗ್ಗುತ್ತಾರೆ. ಹಾಗಾಗಿ ಈ ರೀತಿ ಕಪ್ಪಡಿ ಜಾತ್ರೆ ಮುಕ್ತಾಯಗೊಳ್ಳುತ್ತದೆ.

ಚಿಕ್ಕಲ್ಲೂರು ಜಾತ್ರೆ

ಈ ಜಾತ್ರೆಯು ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಕಾವೇರಿ ನದಿಗೆ ಐದು ಕಿ.ಮೀ. ದೂರದಲ್ಲಿ ''ಚಿಕ್ಕಲ್ಲೂರು'' ಇದೆ. ಇದು ನದಿ, ಬೆಟ್ಟ, ಗುಡ್ಡಗಳಿಂದ ಆವರಿಸಿದ ಇಂದಿಗೂ ರಸ್ತೆ ಸೌಲಭ್ಯಗಳು ಅಚ್ಚುಕಟ್ಟಾಗಿ ಇಲ್ಲದ ದುರ್ಗಮ ಸ್ಥಳ. ಇಲ್ಲಿ ಸಿದ್ದಪ್ಪಾಜಿ ಗದ್ದುಗೆಯಿದ್ದು, ಐದು ದಿನಗಳ ಜಾತ್ರೆ ನಡೆಯುತ್ತಿದ್ದು, ಆ ಸಂದರ್ಭದಲ್ಲಿ ವಿವಿಧ ಆಚರಣೆಗಳನ್ನು ಈ ಜಾತ್ರೆಯಲ್ಲಿ ಕಾಣಬಹುದು. ಈ ಜಾತ್ರೆಗೆ ಪ್ರಸ್ತುತದಲ್ಲಿ ೫೦ ಸಾವಿರ ಜನ ಸೇರುತ್ತಾರೆ. ಹಿಂದು ಪರುಸೆ ಇಷ್ಟು ಇರಲಿಲ್ಲ. ಈ ಜಾತ್ರೆ ಧನುರ್ಮಾಸದಲ್ಲಿ ನಡೆಯುತ್ತದೆ.

ಚಂದ್ರಮಂಡಲ : ಜಾತ್ರೆ ಮೊದಲು ಪ್ರಾರಂಭವಾಗುವುದೇ ಈ ಆಚರಣೆಯಿಂದ. ಸುಂಡ್ರಳ್ಳಿ, ಶಾಗ್ಯ, ತೆಳ್ಳನೂರು, ಇಕ್ಕಡಳ್ಳಿ ಹರಿಜನರಿಗೆ ಈ ಚಂದ್ರಮಂಡಲವನ್ನು ಕಟ್ಟುವ ಅದಕ್ಕೆ ಬೇಕಾದ ಸಾಮಾನುಗಳನ್ನು ತರುವ ಬಾಬುದಾರಿಕೆಯಿದೆ. ಬೊಪ್ಪೇಗೌಡನ ಪುರದ ಗುರುಮಠದಿಂದ ಸ್ವಾಮಿಗಳು ತಮ್ಮ ಪರಿವಾರ ಕಂಡಾಯ, ಬಸವ ಮುಂತಾದವುಗಳನ್ನು ಮುಂದೆ ಬಿಟ್ಟುಕೊಂಡು ಒಂದು ವಾರದ ಜಾತ್ರೆ ನಡೆಸಿಕೊಡುವುದಕ್ಕೆ ಬರುತ್ತಾರೆ. ಹೀಗೆ ಇವರು ಬಂದು ಗದ್ದುಗೆ (ಸಿದ್ದಪ್ಪಾಜಿ) ನುಗ್ಗಿದ ಮೇಲೆ ಸುಂಡ್ರಳ್ಳಿ ಹರಿಜನರು ಚಂದ್ರಮಂಡಲ ಕಟ್ಟಲು ಹಸಿ ಬಿದುರನ್ನು ತರಲು ಕಾಡಿಗೆ ಹೋಗುತ್ತಾರೆ. ಆಗ ತಾನೆ ತಂದ ಹಸಿ ಬಿದಿರು ಪಂಜು, ಹೂವು ಪತ್ರಗಳಿಂದ ಇದನ್ನು ಕಡೆದು ನಿಲ್ಲಿಸುತ್ತಾರೆ. ಹೀಗೆ ಕಟ್ಟಿ ನಿಲ್ಲಿಸಿದ ಚಂದ್ರಮಂಡಲಕ್ಕೆ ಜಾತ್ರೆಗೆ ಬಂದ ಒಕ್ಕಲಿನವರು ಎಣ್ಣೆ-ತುಪ್ಪ ತಂದು ಒಪ್ಪಿಸುತ್ತಾರೆ. ರಾತ್ರಿ ಹತ್ತು-ಹನ್ನೊಂದು ಗಂಟೆಗೆ ಚಂದ್ರಮಂಡಲ ಹಚ್ಚುವ ಆಚರಣೆ ಪ್ರಾರಂಭವಾಗುತ್ತದೆ. ಮಠದ ಬುದ್ದಿಯವರು ಕಂಡಾಯ ಬಸವಗಳನ್ನು ಮುಂದೆ ಬಿಟ್ಟುಕೊಂಡು ಮೆರವಣಿಗೆಯಲ್ಲಿ ಬಂದು ಈ ಮಂಡಲಕ್ಕೆ ಪೂಜೆ ಮಾಡಿ ''ಉರಿ'' ಕೊಡುತ್ತಾರೆ. ಚಂದ್ರಮಂಡಲಕ್ಕೆ ಉರಿ ಕೊಟ್ಟ ತಕ್ಷಣ ಇಡೀ ಜಾತ್ರೆಯಲ್ಲಿರುವ ಜನವೆಲ್ಲ ಪಂಜುಗಳನ್ನು ಹೊತ್ತಿಸುತ್ತಾರೆ.

ಹೀಗೆ ಚಂದ್ರಮಂಡಲದ ಉರಿ ಹೆಚ್ಚಾಗುತ್ತಿದ್ದಂತೆ ನೆರೆದ ಭಕ್ತರೆಲ್ಲಾ ಎಣ್ಣೆ-ತುಪ್ಪಗಳನ್ನೂ ದವಸ-ಧಾನ್ಯಗಳನ್ನು ಎರಚುತ್ತಾರೆ. ಅದ್ಭುತವಾಗಿ ಕಡೆದು ನಿಂತಿದ್ದ ಚಂದ್ರಮಂಡಲ ಕ್ಷಣಾರ್ಧದಲ್ಲಿ ಉರಿದು ಕಪ್ಪಾಗಿ ಸುರಿಯುತ್ತದೆ. (ಯಾವ ದಿಕ್ಕಿಗೆ ಉರಿ ಹೆಚ್ಚಾಗಿರುತ್ತದೆ ಆ ಕಡೆ ಮಳೆ ಬೆಳೆ ಸಂಮೃದ್ಧಿಯೆಂದು ಜನ ನಂಬುತ್ತಾರೆ) ಈ ರೀತಿ ಉರಿದ ಕಟ್ಟಿಗೆಯ ಕಪ್ಪನ್ನು ಭಕ್ತರೆಲ್ಲಾ ಬಾಚಿ ತೆಗೆದುಕೊಂಡು ವರ್ಷಪೂರ್ತಿ ''ಮಟ್ಟಿಕಪ್ಪು'' ಮಾಡಿಕೊಂಡು ಬಳಸುತ್ತಾರೆ. ಅಲ್ಲೊಂದು ಆಚರಣೆ ನಡೆದಿದೆ ಎನ್ನುವ ಯಾವ ಕುರುವುಗಳು ಇಲ್ಲದಷ್ಟು ನಿಶೇಷವಾಗಿ ಅಲ್ಲಿ ಉರಿದು ಬಿದ್ದ ಒಂದೊಂದು ವಸ್ತುಗಳನ್ನು ಭಕ್ತರು ಕೊಂಡೊಯ್ಯುತ್ತಾರೆ. ಇದು ಜಾತ್ರೆಯ ಮೊದಲ ದಿನ ನಡೆಯುವ ಪರಂಜ್ಯೋತಿ ಸೇವೆ, ಮಂಟೇಸ್ವಾಮಿಗಳಿಗೆ ಈ ಸಮುದಾಯಗಳಿಗೆ ''ಜ್ಯೋತಿ''ಯೇ ಆರಾಧ್ಯ ದೇವತೆಯಾಗಿದೆ.

ಹೀಗೆ ಜಾತ್ರೆಯನ್ನು ಆರಂಭಿಸಿದ ಜನವೆಲ್ಲಾ ಚಂದ್ರಮಂಡಲ ಉರಿಸಿದ ನಂತರ ತೋಪಿನಲ್ಲಿರುವ ತಮ್ಮ ತಮ್ಮ ಪ್ರತ್ಯೇಕವಾದ ಬಿಡದಿಗಳಿಗೆ ಹೋಗುತ್ತಾರೆ. ಆ ದಿನ ರಾತ್ರಿ ಮೀಸಲು ಬುತ್ತಿಗೆಗಳನ್ನು ಊಟ ಮಾಡುತ್ತಾರೆ. ಬಿಡದಿಗಳು ಇದ್ದ ಕಡೆ ತಮ್ಮ ತಮ್ಮ ಊರುಗಳಿಂದ ತಂದಿದ್ದ ಕಂಡಾಯಗಳಿಗೆ ತಳಮಾಡಿ ನೆಡುತ್ತಾರೆ. ಅದರ ಸುತ್ತಾ ಬೆಂಕಿ ಹಾಕಿಕೊಂಡು ಕೂರುತ್ತಾರೆ. ನೀಲಗಾರರುಗಳು ಅಲ್ಲಲ್ಲಿ ಕತೆಗಳನ್ನು ಹಾಡಲು ಕೆಲವು ತಂಡಗಳು ಸೇರಿಕೊಳ್ಳುತ್ತವೆ. ಅಷ್ಟು ಹೊತ್ತಿಗೆ ಹುಣ್ಣಿಮೆ ಚಂದ್ರ ನೆತ್ತಿಗೇರಿ ಪ್ರಖರವಾಗುತ್ತಾನೆ. ಹೀಗಾಗಿ ಜಾತ್ರೆಯ ಮೊದಲ ದಿನ ಚಂದ್ರಮಂಡಲ ಆಚರಣೆ ವೈಭವಯುತವಾಗಿ ನಡೆಯುತ್ತದೆ.

ದೊಡ್ಡಮ್ಮ ತಾಯಿ ಸೇವೆ : ಈ ಆಚರಣೆಯು ಜಾತ್ರೆಯ ಎರಡನೆಯ ದಿನವಾಗಿರುತ್ತದೆ. ಇದು ಹರಕೆಗಳನ್ನು ತೀರಿಸುವ ದಿನವೂ ಆಗಿರುತ್ತದೆ. ಈ ದಿನ ಉರುಳುಸೇವೆ, ಹುಲಿವಾಹನ ಸೇವೆ, ದೀಡು ನಮಸ್ಕಾರ ಮುಂತಾದ ಹರಕೆಗಳು ನಡೆಯುತ್ತದೆ. ಈ ಹರಕೆಗಳಲ್ಲಿ ಒಕ್ಕಲಿನ ಮಹಿಳೆಯರ ಪಾತ್ರ ಹಿರಿದು. ಅವರು ದೊಡ್ಡಮ್ಮ ತಾಯಿ ಹೆಸರೇಳಿ ಹರಕೆಗಳನ್ನು ಒಪ್ಪಿಸುತ್ತಾರೆ ಮತ್ತು ದೊಡ್ಡಮ್ಮ ತಾಯಿಯನ್ನು ಕುರಿತು ಹಾಡುತ್ತಾರೆ.

ಮುಡಿ ಸೇವೆ : ನೀಲಗಾರ ದೀಕ್ಷೆಯು ಈ ದಿನ ಪ್ರಾರಂಭವಾಗುತ್ತದೆ, ಇದು ಜಾತ್ರೆಯ ಮೂರನೆಯ ದಿನ ಮಠದ ಸ್ವಾಮಿಗಳು ವಿದ್ಯುಕ್ತವಾಗಿ ಮೊದಲು ಮುಡಿ ಮಾಡಿಸಿಕೊಂಡು ನಂತರ ನೀಲಗಾರ ಮುಡಿ ಪ್ರಾರಂಭವಾಗುತ್ತದೆ. ಒಕ್ಕಲಿನವರು ತಮ್ಮ ಕುಟುಂಬದ ಮೊದಲ ಮಗನಿಗೆ ಮುಡಿಕೊಟ್ಟು ಗುರು ಕಂಕಣಕಟ್ಟಿಸಿ ನೀಲಗಾರನಾಗಿ ಬಿಡುತ್ತಾರೆ. ಮುಡಿ ಮಾಡುವುದು ಹಣೆ ಮೈಗೆಲ್ಲಾ ಮಟ್ಟಿಕಪ್ಪು ವಿಭೂತಿಯನ್ನು ಕೈಗೆ ನಾಗಬೆತ್ತ ಜಾಗಟೆಗಳನ್ನು ಕಂಕುಳಿಗೆ ಜೋಳಿಗೆ ಸಿಕ್ಕಿಸಿ ಭಿಕ್ಷೆ ಮಾಡಲು ಕಳುಹಿಸುತ್ತಾರೆ.ಇದನ್ನು '**ಕಂತೆ ಬಿಕ್ಷೆ**'ಯೆಂದು ಕರೆಯುತ್ತಾರೆ. ಒಕ್ಕಲಿನವರು ಮೊದಲು ಮಗನನ್ನು ಗುರುವಿಗೆ ಧಾರೆಯೆರೆದು ಕೊಡುತ್ತಾರೆ. ಗುಡ್ಡನಾದವನು ತಂದೆ-ತಾಯಿಗಳ ಸಮ್ಮುಖದಲ್ಲಿ ನಾನು ಇದುವರೆಗೂ ನಿಮ್ಮ ಮಗನಾಗಿದ್ದು ಇನ್ನು ಮುಂದೆ 'ಗುರುವಿನ ಮಗ' ಎಂದು ಹೇಳುತ್ತಾನೆ. ನಂತರ ಈ ದಿನ ಕಜ್ಜಾಯ ತುಪ್ಪ ಊಟ ಮಾಡುತ್ತಾರೆ. ನೀಲಗಾರರ ಕತೆ ಎರಡನೆಯ ದಿನಕ್ಕೆ ಹರಿದಿರುತ್ತದೆ. ಹೀಗೆ ಜಾತ್ರೆಯ ಮೂರನೆಯ ದಿನ ಈ ಆಚರಣೆಯನ್ನು ಆಚರಿಸುತ್ತಾರೆ.

ಸಿದ್ದರ ಸೇವೆ (ಪಂತಿ ಸೇವೆ)

ಈ ಆಚರಣೆಯು ಜಾತ್ರೆಯ ನಾಲ್ಕನೆಯ ದಿನ ನಡೆಯುತ್ತದೆ. ಬಿಡದಿಗಳಲ್ಲಿ ತಂಗಿದ್ದವರು ಅದರಲ್ಲೂ ತಮ್ಮ ಮಗನನ್ನು ನೀಲಗಾರನಾಗಿ ಬಿಡಿಸಿದವರು ತಮ್ಮ ತಮ್ಮ ಬಿಡದಿಗಳಲ್ಲಿ ಈ ದಿನ ಮಾಂಸದಡಿಗೆ ಮಾಡಿ ದೀಕ್ಷೆ ಕೊಟ್ಟು, ಹಿರಿಯ ನೀಲಗಾರನಿಗೆ ಊಟಹಾಕಿ ಅವನಿಂದ ನೆನೆವಾರ್ತೆಗಳನ್ನು ಹೇಳಿಸಿ ನಂತರ ಬಂದ ಪರುಸೆಗೆಲ್ಲಾ ಊಟ ಹಾಕುತ್ತಾರೆ. ಈ ಪಂಕ್ತಿಗಳಲ್ಲಿ ಬಾಡು-ಹೆಂಡ-ಭಂಗಿ ಮಾಂಸದ ಊಟಗಳಾಗಿರುತ್ತವೆ. ಈ ಸೇವೆಗಾಗಿ ಒಕ್ಕಲಿನವರು ಒಂದು ಕುರಿಯನ್ನು ಸಾಕಿಕೊಂಡು ಆ ದಿನ ಕಡಿದು ಅಡಿಗೆ ಮಾಡಿ ಬಂದ ಪರುಸೆಗೆಲ್ಲಾ ಬಡಿಸುತ್ತಾರೆ. ಇದು ಸಿದ್ದಪ್ಪಾಜಿಯವರ ಸೇವೆಯಾಗುವುದರೊಟ್ಟಿಗೆ ಮಂಟೇಸ್ವಾಮಿಗಳು ಮಾರಿಯರಿಗೆಲ್ಲಾ ರಕ್ತಶಾಂತಿ ಮಾಡುವ ಆಚರಣೆಯೂ ಆಗಿದೆ ಎಂದು ನೀಲಗಾರರು ಕತೆಯಲ್ಲಿ ಹಾಡುತ್ತಾರೆ. ಚಿಕ್ಕಲ್ಲೂರು ಜಾತ್ರೆಯಲ್ಲಿ ಈ ದಿನ ಬಹಳ ಜನ ಭಕ್ತರು ನೆರೆಯುತ್ತಾರೆ, ಹೀಗೆ ಈ ಆಚರಣೆ ನಡೆಯುತ್ತದೆ.

ಮುತ್ತತ್ತಿರಾಯನ ಸೇವೆ

ಮಂಟೇಸ್ವಾಮಿ ಕಾವ್ಯ ಕತೆಯಲ್ಲಿ ಮುತ್ತತ್ತಿರಾಯನ ಪ್ರಸಂಗ ಬರುತ್ತದೆ. ಸಿದ್ದಪ್ಪಾಜಿ ಹಲಗೂರಿಗೆ ಹೋಗುವ ಮೊದಲು ಅಲ್ಲಿದ್ದ ಮಾರಿಯರ ವಿರುದ್ಧ ಹೋರಾಡಬೇಕಾಗುತ್ತದೆ. ಆಗ ಮುತ್ತತ್ತಿರಾಯ ನೆರವಾದನೆಂದು ಕತೆ ಹೇಳುತ್ತದೆ. ಅದ ಕಾರಣ ಚಿಕ್ಕಲೂರು ಜಾತ್ರೆಯಲ್ಲಿ ಆತನಿಗೊಂದು ಸೇವೆ ಇರುತ್ತದೆ. ಆ ದಿನ ನೀಲಗಾರರೆಲ್ಲಾ 'ಮಟ್ಟಿಕಪ್ಪು' ಧರಿಸದೇ ಮೂರು ನಾಮ ಹಾಕಿಕೊಂಡು ಅಪರಾ-ಗೋಪರ ಹಾಕಿ ಕಜ್ಜಾಯ ಮಣೆ ಸೇವೆ ಮಾಡುತ್ತಾರೆ. ಕೊನೆಗೆ ಮತ್ತೆ ಜ್ಯೋತಿ ಹಚ್ಚಿ ಜಾತ್ರೆ ಮುಗಿಸುತ್ತಾರೆ.

ಹೀಗೆ ಚಿಕ್ಕಲೂರಿನಲ್ಲಿ ಸಿದ್ದಪ್ಪಾಜಿಯ ಜಾತ್ರೆಯು ವಿಜೃಂಭಣೆಯಿಂದ ತುಂಬಾ ಸಂಭ್ರಮವಾಗಿ ಐದು ದಿನಗಳ ಕಾಲ ವಿವಿಧ ಆಚರಣೆಗಳ ಮೂಲಕ ಮುಗಿಯುತ್ತದೆ.

೩. ಗದ್ದುಗೆಗಳು (ಗದ್ದುಗೆ ಸಿಂಗಾರವೋ)

ಈ ಪರಂಪರೆಗೆ ಸೇರಿದವರಾಗಿದ್ದು ಸತ್ತ ನಂತರ ಆ ಶರಣರ ಸಮಾಧಿಗಳನ್ನು 'ಗದ್ದುಗೆಗಳು' ಎಂದು ಕರೆಯುತ್ತಾರೆ. ಇವುಗಳಲ್ಲಿ **ಮೂಲಗದ್ದುಗೆ, ತೋರುಗದ್ದುಗೆ**ಗಳೆಂದು ಎರಡು ತರದ ಗದ್ದುಗೆಗಳನ್ನು ಕಾಣುತ್ತೇವೆ. ಮೂಲ ಗದ್ದುಗೆಗಳು ಅವರ ನಿಜಸಮಾಧಿಗಳು. ತೋರುಗದ್ದುಗೆಗಳಲ್ಲಿ ಆಯಾ ಊರುಗಳಲ್ಲಿ ನಿರ್ಮಾಣ ಮಾಡಿಕೊಂಡು ಅದೊಂದು ಪವಿತ್ರ ಸ್ಥಳವಾಗಿ ದೇವಾಲಯವಾಗಿ ಆ ಒಕ್ಕಲಿನವರು ತಮ್ಮ ಧಾರ್ಮಿಕ ಆಚರಣೆಗಳ ಕೇಂದ್ರವಾಗಿ ಮಾಡಿಕೊಂಡಿರುತ್ತಾರೆ. ಸ್ತ್ರೀ ಮತ್ತು ಪುರುಷ ದೇವರುಗಳಿಬ್ಬರಿಗೂ ಸಮಾನವಾದ ಭಕ್ತಿಯನ್ನು- ಆರಾಧನೆಯನ್ನು ಕಾಣುತ್ತೇವೆ.

೧. ಮಂಟೇಸ್ವಾಮಿ ಗದ್ದುಗೆ

ಇದು ಮಳವಳ್ಳಿ ತಾಲ್ಲೂಕು ಬೊಪ್ಪೇಗೌಡನ ಪುರದಲ್ಲಿದೆ. ಮಂಟೇಸ್ವಾಮಿ ಪಾತಾಳಬಾವಿಯನ್ನು ತೋಡಿಕೊಂಡು ಬಾರಿಗುಂಡನ್ನು ತಲೆಗೆ ಚಾಚಿಕೊಂಡು ಜೀವಂತ ಸಮಾಧಿಯಾದರು ಎಂದು ಕಾವ್ಯ ಹೇಳುತ್ತದೆ. ಈ ನಂಬಿಕೆಗೆ ಅನುಗುಣವಾಗಿ ಇಲ್ಲೇ ವಾಸವಾಗಿರುವ ಆ ಪರಂಪರೆಯನ್ನು ನಡೆಸಿಕೊಂಡು ಬರುತ್ತಿರುವ ಅರಸು ಮನೆತನದ ಗುರುಮನೆ ಇಲ್ಲೇ ಇದೆ. ಅವರಲ್ಲಿ ಪಟ್ಟದ ಗುರುಗಳು ಮಾತ್ರ ಈ ಗದ್ದುಗೆಯನ್ನು ನಿತ್ಯ ಪೂಜೆ ಮಾಡುತ್ತಾರೆ. ಈ ಸಮಾಧಿಗೆ ಸಾರ್ವಜನಿಕ ದರ್ಶನವಿಲ್ಲ. ಯಾವಾಗಲೂ ಬಾಗಿಲು ಮುಚ್ಚಿರುತ್ತದೆ. ಗುರುಗಳು ಒಬ್ಬರೇ ಹೋಗಿ ಪೂಜೆ ಮಾಡಿ ಬಾಗಿಲು ಹಾಕಿಕೊಂಡು ಬರುತ್ತಾರೆ.

ಈ ಗದ್ದುಗೆ ಇಡೀ ಪರಂಪರೆಯಲ್ಲೇ ಹಿರಿಯನಾದ ಹಾಗೂ ಪರಂಪರೆಯನ್ನು ಕಟ್ಟಿ ಬೆಳೆಸಿದ ಸಾಂಸ್ಕೃತಿಕ ನಾಯಕ ಮಂಟೇಸ್ವಾಮಿಯಾದದ್ದರಿಂದ ಇದರ ಬಗ್ಗೆ ಅಪಾರ ಭಕ್ತಿ -ಗೌರವ ಭಯಗಳು ಜನಮನದಲ್ಲಿ ತುಂಬಿವೆ. ಇಲ್ಲಿ ಜಾತ್ರೆ ನಡೆಯುವುದಿಲ್ಲ, ಆದರೆ ಶಿವರಾತ್ರಿಗೆ ಕಪ್ಪಡಿಗೆ ಹೋಗಿದ್ದ ಪರಸೆ ಯುಗಾದಿಗೆ ಹಿಂದಿರುಗುವಾಗ ಯುಗಾದಿ ದಿನ ಪಕ್ಕದ ಮುಟ್ಟನಹಳ್ಳಿಯಲ್ಲಿ ಮಳವಳ್ಳಿ ಸ್ವಾಮಿಗಳು ಬೊಪ್ಪೇಗೌಡನ ಸ್ವಾಮಿಗಳನ್ನು ಎದುರುಗೊಂಡು ಆಹ್ವಾನಿಸುತ್ತಾರೆ ಇದಕ್ಕೆ **'ಎದುರುಸೇವೆ'** ಎಂದು ಕರೆಯುತ್ತಾರೆ. ನಂತರ ಪರಸೆ ಮುಟ್ಟನಹಳ್ಳಿಯಲ್ಲಿ ಜಾತ್ರೆ ಮುಗಿಸಿಕೊಂಡು ಮಠಮನೆ ಬೊಪ್ಪೇಗೌಡನ ಪುರಕ್ಕೆ ಹೋಗಿ ಹಣ್ಣು-ಕಾಯಿ ಒಡೆದು ಪೂಜೆ ಮಾಡಿಸಿಕೊಂಡು ಅವರವರ ಊರುಗಳಿಗೆ ಹಿಂದಿರುಗುತ್ತಾರೆ. ಇಷ್ಟು ಬಿಟ್ಟರೆ ಜಾತ್ರೆ ಇಲ್ಲಿ ನಡೆಯುವುದಿಲ್ಲ.

ಈ ಗದ್ದುಗೆಯಲ್ಲಿ ಮಂಟೇಸ್ವಾಮಿಗಳು ಈಗಲೂ ನಿಜ ನಿದ್ರೆಯಲ್ಲಿ (ಜಾಮುನಿದ್ರೆ) ಇದ್ದಾರೆ ಎನ್ನುವ ನಂಬಿಕೆ ಇರುವುದರಿಂದ ಪರುಸೆಗೆ ಬಾಗಿಲನ್ನು ತೆರೆಯುವುದಿಲ್ಲ. ಸಮಾಧಿಯ ಮೇಲೆ ಕ್ಷೇತ್ರಕಾರ್ಯ ಸಂದರ್ಭದಲ್ಲಿ ನಾನು ಕಂಡಂತೆ ಒಂದು ಬಿಳಿ ಕೆಂಪುವಸ್ತ್ರವನ್ನು ಹಾಸಿದ್ದರು, ಆದರ ತಲೆಯ ಭಾಗದಲ್ಲಿ ಮಂಟೇಸ್ವಾಮಿಗಳ ಕಾಲಜ್ಞಾನದ ಕಟ್ಟುಗಳ ಹೊತ್ತಿಗೆಯೊಂದು ಇತ್ತು. ಈ ಹೊತ್ತಿಗೆಯನ್ನು ಪೂಜೆ ಮಾಡುತ್ತಾರೆ, ತೆಗೆದು ಓದುವ ಪರಿಪಾಠವಿಲ್ಲ (ಕೊಡೇಕಲ್ಲಿನಂತೆ) ಓದಬಾರದು ಎಂಬ ನಂಬಿಕೆಯೂ ಸೇರಿಕೊಂಡಿರುವುದರಿಂದ ಇದುವರೆಗೂ ಈ ಕಟ್ಟುಗಳಲ್ಲಿ ಏನು ಇದೆ ಎಂಬುದು ಅಜ್ಞಾತವಾಗಿಯೇ ಉಳಿದಿದೆ. ಇದಲ್ಲದೆ ಮಂಟೇಸ್ವಾಮಿಗಳು ಕಾಲಜ್ಞಾನವನ್ನು ಹಾಡಲು ಬಳಸುತ್ತಿದ್ದ ತಂಬೂರಿಯೂ ಸಹ ಈ ಗದ್ದುಗೆ ಪಕ್ಕದಲ್ಲಿದೆ.

ಇದು ಪಟ್ಟದ ಮಠವಾದ್ದರಿಂದ ಮಠದ ನೇತೃತ್ವ ನೋಡಿಕೊಳ್ಳುವ ಬುದ್ದಿಯವರು ಇಲ್ಲೇ ವಾಸವಾಗಿದ್ದಾರೆ. ಉರಿಗದ್ದುಗೆ ಸ್ಥಳದಲ್ಲಿ ಚಂದ್ರಶಾಲೆ, ಪಾತಾಳಬಾವಿ ಇತ್ಯಾದಿಗಳೆಲ್ಲಾ ಇದೆ. ಇವೆಲ್ಲಾ ಪೂರ್ವದಲ್ಲಿ ಬೊಪ್ಪೇಗೌಡನ ಕುರಿದೊಡ್ಡಿ ಮಾಚಯ್ಯನ ಕತ್ತೆ ಕೊಟ್ಟಿಗೆಗಳಾಗಿದ್ದವು ಎಂಬುದನ್ನು ಕಾವ್ಯದಲ್ಲಿ ನೋಡಬಹುದು. ಮಠಮನೆ ಗದ್ದುಗೆಗಳೆರಡು ಒಂದೇ ಕಡೆ ಇರುವುದು ಈ ಗದ್ದುಗೆ ವಿಶಿಷ್ಟತೆಗಳಾಗಿವೆ. ಮುಟ್ಟುಗದ್ದುಗೆಗೆ ನಿತ್ಯಪೂಜೆ ಅಷ್ಟೆ, ಹಣ್ಣು, ಕಾಯಿ ಪೂಜೆ ಇಲ್ಲ ಮತ್ತು ಮೂಲ ಮಠ ಮನೆ ಇಲ್ಲೇ ಇದೆ. ಸಬಿರಾಯಪಟ್ಟಣದ ರಾಜನ ಇಬ್ಬರು ಸತ್ತ ಮಕ್ಕಳನ್ನು ತಂದು ಹಿರಿಬುದ್ಧಿ, ಕಿರಿಬುದ್ಧಿ ಎಂದು ಪಟ್ಟ ಕಟ್ಟಿದ ವಿವರಣೆ ಕಾವ್ಯದಲ್ಲಿ ಬರುತ್ತದೆ. ಆ ವಂಶದವರೇ ಇಲ್ಲಿ ಈಗಲೂ ಪಟ್ಟದ ಬುದ್ಧಿಗಳಾಗಿ ಮಠ ನಡೆಸುತ್ತಿದ್ದಾರೆ.

೨. ಸಿದ್ದಪ್ಪಾಜಿ ಗದ್ದುಗೆ

ಇದು ಕೊಳ್ಳೇಗಾಲ ತಾಲ್ಲೂಕು ಚಿಕ್ಕಲೂರಿನಲ್ಲಿ ಈ ಗದ್ದುಗೆಯಿದೆ. ಇದು ಸಿದ್ದಪ್ಪಾಜಿಯವರು ಬಂದು ನೆಲೆಗೊಂಡ ಸ್ಥಳವಾದ್ದರಿಂದ ಅವರ ಗದ್ದುಗೆಯಾಗಿದೆ. ಈ ಗದ್ದುಗೆಗೆ ಜನವರಿ ತಿಂಗಳಲ್ಲಿ ಜಾತ್ರೆಯಾದಾಗ ಗದ್ದುಗೆ ತೊಳೆದು ಒಂದು ವಾರ ಕಾಲ ನಡೆಯುವ ಜಾತ್ರೆಯಲ್ಲಿ ಭಕ್ತಾದಿಗಳ ದರ್ಶನಕ್ಕೆ ಎಡೆಮಾಡಿಕೊಡುತ್ತಾರೆ. ಈ ಗದ್ದುಗೆಯಲ್ಲಿ ಸಿದ್ದಪ್ಪಾಜಿಯವರ ಕಂಡಾಯಗಳಿವೆ. ಈ ಗದ್ದುಗೆಯ ಹಿಂಭಾಗದಲ್ಲಿ ಒಂದು ಹುಣಸೇಮರವಿದೆ. ಇದು ಗಾಯಕರು ಕಟ್ಟುವ ಕಥೆಯಲ್ಲಿ ಸೇರಿಕೊಂಡು ಇದು 'ಉಳಿ ಮುಟ್ಟದ ಮರ' ಅಂದರೆ ಫಲ ಕೊಡದ ಗೊಡ್ಡು ಮರವಾಗಿದೆ. ಮಂಟೇಸ್ವಾಮಿ ಪಾತಾಳ ಬಾವಿಗೆ ಹೋಗುವಾಗ ಶಿಷ್ಯನಾದ ಸಿದ್ದಪ್ಪಾಜಿಗೆ ನೀನು ಚಿಕ್ಕಲೂರಿನಲ್ಲಿ ನೆಲೆಯಾಗು ನಿನಗೆ ಐದು ದಿನ ನಡೆಯುವ ಜಾತ್ರೆ ಮಾಡುತ್ತೇನೆ ಎಂದು ಹೇಳಿದ ಸಂಗತಿಗಳಿವೆ.

ಈ ಗದ್ದುಗೆಗಳು ಸಾಮಾನ್ಯವಾಗಿ ವರುಷಕ್ಕೆ ಒಂದು ಸಾರಿ ತೆರೆದು ಪೂಜೆಗೊಳ್ಳುವ ಗದ್ದುಗೆಗಳು. ಪಟ್ಟದವರು ಬೊಪ್ಪೇಗೌಡನ ಪುರದ ಗುರುಗಳು 'ಸರಿಗೆ' ಪೂಜಾ ಸಾಮಾನುಗಳನ್ನು ವರ್ಷಕ್ಕೆ ಒಂದು ಸಾರಿ ತಂದು ಅದನ್ನು ಬಿಚ್ಚಿ ಗದ್ದುಗೆ ತೊಳೆದು ಸರಿಗೆ ಸಾಮಾನುಗಳಿಂದ ಅಲಂಕಾರಗೊಳಿಸಿ ಒಂದು ವಾರ ಕಾಲ ಚಿಕ್ಕಲೂರಿನಲ್ಲಿರುವ ಮಠ ಮನೆಯಲ್ಲೇ ತಂಗಿದ್ದು ಈ ಜಾತ್ರೆಯನ್ನು ನಡೆಸಿ ಕೊಡುವ ಸಂಪ್ರದಾಯವಿದೆ. ಸಿದ್ದಪ್ಪಾಜಿ ಗದ್ದುಗೆಯಲ್ಲಿ ಕಾಲಜ್ಞಾನದ ಕಟ್ಟು ಇಲ್ಲ. ಇಲ್ಲಿ ಕಾಲಜ್ಞಾನದ ಕಟ್ಟಿನಷ್ಟೇ ಮಹತ್ವವಿರುವುದು ಕಂಡಾಯದ ಪೂಜೆಗೆ.

೩. ದೊಡ್ಡಮ್ಮ ತಾಯಿ ಗದ್ದುಗೆ (ದುಡವುಳ್ಳ ದೊಡ್ಡಮ್ಮ ತಾಯಿ)

ಇವರ ಮೂಲ ಗದ್ದುಗೆ ಮುಟ್ಟನಹಳ್ಳಿ ಎಂದು ಕೆಲವರು ಹೇಳಿದರೆ ಕಪ್ಪಡಿ 'ಮೂಲಗದ್ದುಗೆ' ಎಂದು ಕೆಲವರು ಹೇಳುತ್ತಾರೆ. ಇಷ್ಟೇ ಅಲ್ಲದೆ ಚಿಕ್ಕಲೂರಿನಲ್ಲೂ ಮಳವಳ್ಳಿ ಮಠಗಳಲ್ಲೂ ದೊಡ್ಡಮ್ಮ ತಾಯಿಯವರ ಗದ್ದುಗೆಗಳು ಇವೆ. ಈ ಗದ್ದುಗೆಯನ್ನು ಹಸಿರು ಸೀರೆಯಿಂದ ಅಲಂಕರಿಸುತ್ತಾರೆ. ತಲೆಯ ಭಾಗಕ್ಕೆ ಹೂವಿನಿಂದ ಅಲಂಕರಿಸುತ್ತಾರೆ. ದೊಡ್ಡಮ್ಮ ತಾಯಿಯನ್ನು ಕುರಿತು ಹೆಣ್ಣುಮಕ್ಕಳು ಕೆಲವು ಹಾಡುಗಳನ್ನು ಹಾಡುತ್ತಾರೆ. ಒಕ್ಕಲಿನ ಸ್ತ್ರೀಯರುಗಳು ಸಮಾನವಾಗಿ ಆಚರಣೆಗಳಲ್ಲಿ ಭಾಗವಹಿಸಲು ಇಲ್ಲಿನ ಸ್ತ್ರೀ-ಪುರುಷ ದೇವತೆಗಳ ಸಹಭಾಗಿತ್ವ ಪೂರಕವಾಗಿದೆ.

೪. ಕಿರಿಯ ಚೆನ್ನಾಜಮ್ಮನ ಗದ್ದುಗೆ

ಇವರ ಗದ್ದುಗೆ ಕಪ್ಪಡಿಯಲ್ಲಿದೆ. ಹಾಗೂ ಬೊಪ್ಪೇಗೌಡನಪುರದ ಪಟ್ಟದ ಗುರುಗಳ ಸಮಾಧಿಗಳು ಇರುವಲ್ಲಿ ಒಂದು 'ತೋರುಗದ್ದುಗೆ' ಇದೆ. ಈ ಗದ್ದುಗೆಯನ್ನು ಸಹ ಹಸಿರು ಕೆಂಪು ಸೀರೆಗಳಿಂದ ಅಲಂಕಾರಗೊಳಿಸಿ ಪೂಜಿಸುತ್ತಾರೆ. ವಿಜಯನಗರದ ಗಾರುಡಿಗರ ಮಗಳು ಇವಳು. ರಾಚಪ್ಪಾಜಿ ಮಂಟೇಸ್ವಾಮಿಗಳು ಪವಾಡಗಳನ್ನು ಮಾಡಿ ಇವಳನ್ನು 'ಸಿಸುಮಗಳಾಗಿ' ಪಡೆದಿರುತ್ತಾರೆ.

೫. ನಿಂಗಯ್ಯ - ಚೆನ್ನಯ್ಯರ ಗದ್ದುಗೆಗಳು

ಇವರ ಗದ್ದುಗೆಗಳು ಕುರುಬನಕಟ್ಟೆಯಲ್ಲಿವೆ. ಇವು ಕೊಳ್ಳೇಗಾಲ ತಾಲ್ಲೂಕಿನಲ್ಲಿದೆ. ಕೊಳ್ಳೇಗಾಲದಿಂದ ೩ ಕಿ.ಮೀ. ದೂರದಲ್ಲಿದೆ. ಇಲ್ಲಿಯ ಕಂಡಾಯಗಳು 'ಮೆರೆವ ಕಂಡಾಯ'ಗಳೆಂದು ಹೆಸರು ಪಡೆದಿದೆ. ಇವರಿಬ್ಬರೂ ದಲಿತರು ಎಂಬುದನ್ನು ಹಾಗೂ ಚರ್ಮಗಾರಿಕೆ ಕೆಲಸಗಳನ್ನು ಮಾಡುತ್ತಿದ್ದರು ಎಂದು ಪುರಾಣ ಹೇಳುತ್ತದೆ. ಇದಕ್ಕೆ ಸಂಕೇತವಾಗಿ ಈ ಕಂಡಾಯಗಳಿಗೆ 'ಚರ್ಮದ ಬಾರ್'ಗಳನ್ನು ಕಟ್ಟಿದ್ದಾರೆ. ಹಬ್ಬ-ಹರಿದಿನಗಳಲ್ಲಿ ಈ ಗದ್ದುಗೆಗಳನ್ನು ತೆಗೆದು ಪೂಜೆ ಮಾಡುತ್ತಾರೆ. ಇತ್ತೀಚೆಗೆ ಪ್ರತಿ ಸೋಮವಾರ, ಶುಕ್ರವಾರ ಪೂಜೆ ನಡೆಯುತ್ತದೆ. ಇಲ್ಲಿ ಕಟ್ಟು ಕಟ್ಟುವುದು, ಗಾಳಿ ದೈವ ಇತ್ಯಾದಿಗಳನ್ನು ಬಿಡಿಸುವ ಆಚರಣೆಗಳು ಇವೆ. ಮಠ ಬಿಟ್ಟರೆ ವರ್ಷದ ಹೆಚ್ಚು ಕಾಲದಲ್ಲಿ ಪೂಜೆ ಈ ಗದ್ದುಗೆಗೆ ನಡೆಯುತ್ತದೆ.

೬. ಫಲಹಾರದಯ್ಯ

ಇವರ ಗದ್ದುಗೆ ಬೊಪ್ಪೇಗೌಡನಮಠ ಮನೆಯಲ್ಲಿದೆ ಹಾಗೂ ತೋರುಗದ್ದುಗೆ ಮುಟ್ಟನಹಳ್ಳಿಯಲ್ಲಿದೆ. ಫಲಹಾರದಯ್ಯ ಮತ್ತು ಮಡಿವಾಳ ಮಾಚಯ್ಯ ಇಬ್ಬರೂ ಒಂದೇ ಎನ್ನುವ ಗಾಯಕರು ಇದ್ದಾರೆ, ಬೇರೆ ಬೇರೆ ಎನ್ನುವ ಗಾಯಕರೂ ಇದ್ದಾರೆ. ಇವರ ಗದ್ದುಗೆಗಳಲ್ಲಿ ತೋರುಗದ್ದುಗೆಗಳು ಕಡಿಮೆ. ಗದ್ದುಗೆಯ ಮೇಲೆ ಬಿಳಿ ಬಟ್ಟೆಯಿಂದ ಸಿಂಗರಿಸುತ್ತಾರೆ. ವೈಭವವಾದ ಅಲಂಕಾರಗಳು ಸಾಮಾನ್ಯವಾಗಿ ಈ ಗದ್ದುಗೆಗೆ ಮಾಡುವುದಿಲ್ಲ.

ಇವಿಷ್ಟು ಶರಣರ ಗದ್ದುಗೆಗಳು ಮಾತ್ರ ಆ ಪ್ರದೇಶಗಳಲ್ಲಿ ಕಂಡುಬರುತ್ತವೆ. ಅಂದರೆ ಒಂದು ನಿರ್ದಿಷ್ಟ ಕಾಲದಲ್ಲಿ ಈ ಚಳುವಳಿಯನ್ನು ಹುಟ್ಟು ಹಾಕಿ ಆ ಪರಂಪರೆಯನ್ನು ಕಟ್ಟಿದರು ಎಂಬ ಕಾರಣ ಇವರನ್ನು ತಮ್ಮ ಸಂಪ್ರದಾಯದ ದೇವರುಗಳು ಎಂದು ಒಪ್ಪಿಕೊಂಡಿದ್ದಾರೆ. ಇಷ್ಟೇ ವ್ಯಕ್ತಿಗಳು ಇಲ್ಲಿ ಕಂಡು ಬರುವುದರಿಂದ ಒಂದು ಕಾಲಘಟ್ಟದಲ್ಲಿ ಈ ಸಂಪ್ರದಾಯ ನಿರ್ದಿಷ್ಟವಾಗಿ ಹುಟ್ಟಿತು ಎಂಬುದು ಕಂಡು ಬರುತ್ತದೆ. ಅನಂತರ ಈ ಒಕ್ಕಲಾದವರು ಈ ಪರಂಪರೆಯನ್ನು ಬೆಳೆಸಿಕೊಂಡು ಬಂದಿದ್ದಾರೆ. ಸಖರಾಯನ ಪಟ್ಟಣದ ರಾಜನ ವಂಶದವರು ಈಗ ಹಿರಿಬುದ್ಧಿ, ಕಿರಿಬುದ್ಧಿಯಾಗಿದ್ದಾರೆ ಎನ್ನುವ ನಂಬಿಕೆ ಇದೆ. ಇವರು ಈಗಲೂ ಆಚರಣೆಗಳಲ್ಲಿ ಪ್ರಧಾನ ಪಾತ್ರ ವಹಿಸುತ್ತಾರೆ.

೭. ರಾಚಪ್ಪಾಜಿ ಗದ್ದುಗೆ

ಇಡೀ ಪರಂಪರೆಯಲ್ಲೇ ಅತ್ಯಂತ ವೈಭವದ ಗದ್ದುಗೆ ಇದಾಗಿದೆ. ರಾಚಪ್ಪಾಜಿ ಚಿಕ್ಕಪ್ಪಡಿ ಎಂದು ಕರೆಸಿಕೊಳ್ಳುವ ಸ್ಥಳದಲ್ಲಿ ಬಂದು ಇದು ನನಗೆ ಸರಿಯಾದ ಜಾಗ ಎಂದುಕೊಂಡು ಕುಂತನಂತೆ ಆದರೆ ಆತನ ಧ್ಯಾನಕ್ಕೆ ಭಂಗತರುವ ಹಕ್ಕಿಪಕ್ಕಿ ನರಮನುಷ್ಯರ ಸದ್ದು ಅಲ್ಲಾಯಿತಂತೆ, ಆದ್ದರಿಂದ ಆ ಸ್ಥಳ ಬಿಟ್ಟು ಕಾವೇರಿ ದಡಕ್ಕೆ ಬಂದ. ಇಲ್ಲಿ ಕಾವೇರಿ ಸದ್ದು ಮಾಡಿಕೊಂಡು ಹರಿಯುತ್ತಿದ್ದಳಂತೆ ರಾಚಪ್ಪಾಜಿ 'ಎಯ್' ಎಂದು ಗದರಿದನಂತೆ ಅವಳು ಪಿಳಿ ಪಿಳಿ ಹರಿಯುತ್ತಿರುವುದಕ್ಕೆ ಸುರು ಮಾಡಿದಳು

ಈಗಲೂ ಇಲ್ಲಿ ನದಿ ಪ್ರಶಾಂತವಾಗಿ ಹರಿಯುತ್ತದೆ. ಅದನ್ನು ನೋಡಿ ಕಲ್ಪನೆಯ ಈ ಕತೆ ಹೇಳುತ್ತಾರೆ. ನಂತರ ರಾಚಪ್ಪಾಜಿ ಅಲ್ಲಿ ಧ್ಯಾನರೂಢನಾಗಿ ಐಕ್ಯರಾದರು ಎಂದು ಹೇಳುತ್ತಾರೆ.

ಈ ಗದ್ದುಗೆ ಶಿವರಾತ್ರಿಯಿಂದ ಯುಗಾದಿತನಕ ಮಾತ್ರ ತೆರೆದು ಪೂಜೆಗೊಳ್ಳುತ್ತದೆ. ಅಷ್ಟು ದಿನಗಳು ಪಟ್ಟದ ಬುದ್ದಿಯವರು ಇಲ್ಲಿದ್ದು ಪೂಜೆ ಮಾಡುತ್ತಾರೆ. ೨೫ ದಿನಗಳು ಜಾತ್ರೆ ನಡೆಯುತ್ತದೆ. (ಜಾತ್ರೆ ಭಾಗದಲ್ಲಿ ಗಮನಿಸಿ) ಇಲ್ಲಿ ಬೊಪ್ಪೇಗೌಡನ ಪುರದಿಂದ ಬಂದ ಪಟ್ಟದ ಬುದ್ದಿ (ಒಂದು ವರ್ಷ ಮಳವಳ್ಳಿ ಒಂದು ವರ್ಷ ಬೊಪ್ಪೇಗೌಡನ ಪುರದವರಿಗೆ ಈ ಹಕ್ಕು ಇದೆ) ಬಂದ ದಿನವೇ ಮೊದಲು ಗದ್ದುಗೆ ತೊಳೆಯುವ ಆಚರಣೆ ಇರುತ್ತದೆ. ಹಾಲಿನಿಂದ ಮೊದಲು ತೊಳೆದು ನಂತರ ತುಪ್ಪ, ಸೀಗೆಕಾಯಿ, ನಿಂಬೆಹಣ್ಣಿನಿಂದ, ಎಳನೀರಿನಿಂದ ಗದ್ದುಗೆ ತೊಳೆಯುತ್ತಾರೆ. ನಂತರ ಮಠದಿಂದ ತಂದ 'ಸರಿಗೆ' ಬಿಚ್ಚಿ ಗದ್ದುಗೆಯನ್ನು ಅಲಂಕರಿಸುತ್ತಾರೆ. ಗದ್ದುಗೆಗೆ ಹಸಿರು ರೇಷ್ಮೆ- ಲೈಲಾನ್ ಬಟ್ಟೆಗಳನ್ನು ಹೊದಿಸುತ್ತಾರೆ. ತಲೆದೆಸೆಯಲ್ಲಿ 'ಕಾಲಜ್ಞಾನಕಟ್ಟು' ಇಟ್ಟು ಪೂಜೆಮಾಡುತ್ತಾರೆ ಹಾಗೂ ಸಮಾಧಿಯ ಮೇಲೆ ದಂಡ ಒಂದನ್ನು ಇಡುತ್ತಾರೆ. ಈ ದಂಡ ಅವರು ದಳವಾಯಿ ಆಗಿದ್ದರ ಸಂಕೇತವೆಂದು ಹೇಳುತ್ತಾರೆ. ಈ ಗದ್ದುಗೆ ಪರಂಪರೆಯಲ್ಲಿ ಅತ್ಯಂತ ಹೆಚ್ಚಿನ ಅಲಂಕಾರ ವೈಭವದಿಂದ ಮೆರೆಯುವ ಗದ್ದುಗೆಯಾಗಿದೆ. ಶಿವರಾತ್ರಿಯಿಂದ ಯುಗಾದಿಯವರೆಗೆ ನಡೆಯುವ ವಿವಿಧ ಪೂಜೆಗಳಲ್ಲಿ ಒಳಗೆ ಹಚ್ಚಿಟ್ಟ ನಂದಾ ದೀಪ ಕೆಡಬಾರದೆಂಬ ನಂಬಿಕೆಯಿದೆ. ಈ ದಿನಗಳಲ್ಲಿ ಸಾರ್ವಜನಿಕ ಪ್ರದರ್ಶನಕ್ಕೆ ಈ ಗದ್ದುಗೆಯನ್ನು ಬಿಡುವುದಿಲ್ಲ. ಪಟ್ಟದವರು ಮಾತ್ರ ಒಳಹೋಗಿ ಪೂಜೆ ಮಾಡಿಕೊಂಡು ಬರುತ್ತಾರೆ.

ಮೊದಲ ಸೇವೆಯಾದ ನಂತರ ಕೊನೆಯ ದಿನ ಗದ್ದುಗೆ ತೊಳೆಯುವ ಆಚರಣೆ ಮತ್ತೆ ಇರುತ್ತದೆ. ಅಲ್ಲಿ ತೊಳೆದು ಸರಿಗೆಯನ್ನು ತುಂಬಿಕೊಂಡು ಹೋದರೆ ಮತ್ತೆ ಹಿಂತಿರುಗಿ ಬರುವುದು ಒಂದು ವರ್ಷದ ನಂತರ. ಆದ್ದರಿಂದ ಈ ಗದ್ದುಗೆ ವರ್ಷಕ್ಕೆ ಒಂದು ಸಾರಿ ಮಾತ್ರ ಪೂಜೆಗೊಳ್ಳುವ ಗದ್ದುಗೆಯಾಗಿದೆ.

೮. ತೋರುಗದ್ದುಗೆ (ಉಪಗದ್ದುಗೆ)

ಈ ಒಕ್ಕಲಿನವರಿರುವ ಪ್ರತಿಯೊಂದು ಹಳ್ಳಿಯಲ್ಲೂ ಈ ಪರಂಪರೆಯ ಒಬ್ಬವ್ಯಕ್ತಿಯ ಗದ್ದುಗೆಯನ್ನು ಮಾಡಿಕೊಂಡಿದ್ದಾರೆ. ಇಲ್ಲಿ ಗಮನಾರ್ಹವಾದ ಸಂಗತಿಯೆಂದರೆ ''ಸಿದ್ದಪ್ಪಾಜಿ ಗದ್ದುಗೆಗಳು ಇರುವಷ್ಟು ಮಂಟೇಸ್ವಾಮಿ ಗದ್ದುಗೆಗಳು ಇಲ್ಲ. ಇದಕ್ಕೆ ಒಕ್ಕಲಿನವರ ನಂಬಿಕೆ ಎಂದರೆ ಧರೆಗೆ ದೊಡ್ಡವರು ಬಹಳ ಕಟ್ಟುನಿಟ್ಟಿನ ದೇವರು ಅವರ ಗದ್ದುಗೆಯನ್ನು ಮಾಡಿದ ಮೇಲೆ ನಿರ್ವಹಿಸುವುದು ಕಷ್ಟ'' ಎನ್ನುತ್ತಾರೆ. ಮಂಟೇಸ್ವಾಮಿಯನ್ನೇ ಅಮೂರ್ತ ಕಲ್ಪನೆಯಲ್ಲಿ ಸ್ವೀಕರಿಸುವ ಕಾರಣವೂ ಇರಬಹುದು. ಈ ಕಾರಣ ಇವನು ಮೂರ್ತಗೊಳಿಸುವ ಭೌತಿಕ ವಸ್ತುಗಳು ಇಲ್ಲ ಎನ್ನುವ ನಂಬಿಕೆಯಿದೆ. ಹಾಗೆ ಸಿದ್ದಪ್ಪಾಜಿಯೇ ಈ ಒಟ್ಟು ಪರಂಪರೆಯ ವಾಸ್ತವರೂಪಿ ಆದ್ದರಿಂದ ಅವನ ನೆಲೆಯಿಂದಲೇ ಕಾವ್ಯ ಬಿಚ್ಚಿಕೊಂಡು ಅಲೌಕಿಕವಾದುದನ್ನು ಕಟ್ಟಿಕೊಡುತ್ತಾರೆ.

೯. ಉರಿಗದ್ದುಗೆ

ಈ ಗದ್ದುಗೆಯನ್ನು ಜಾತ್ರೆಗಳಲ್ಲಿ, ಮಠಗಳಲ್ಲಿ ಮಠದವರು ನಿರ್ಮಾಣಮಾಡುತ್ತಾರೆ. ಆದರೆ ಕಪ್ಪಡಿಯಲ್ಲಿ ಉರಿಗದ್ದುಗೆ ಏರುವುದು ಒಂದು ಆಚರಣೆಯೋಪಾದಿಯಲ್ಲಿ ನಡೆಯುತ್ತದೆ. ಪಟ್ಟದ ಬುದ್ಧಿ ಈ ಗದ್ದುಗೆಯನ್ನು ಏರುತ್ತಾರೆ. ಹುಲಿಯ ಚರ್ಮ ಹಾಸಿರುತ್ತಾರೆ. ಈ ಗದ್ದುಗೆಯನ್ನು ಏರುವ ಮೊದಲು ಬುದ್ಧಿ ರಾಚಪ್ಪಾಜಿ ಗದ್ದುಗೆಗೆ ಪೂಜೆ ಸಲ್ಲಿಸಿ ನಂತರ ಪ್ರದಕ್ಷಿಣೆ ಹಾಕಿ ಗದ್ದುಗೆಗೆ ಬಂದು ನಿಂತು ನಮಸ್ಕರಿಸಿ ಮೊದಲು ಭತ್ತ, ಎಳ್ಳು, ರಾಗಿಗಳನ್ನು ಎರಚುತ್ತಾರೆ. ಅವು ಗದ್ದುಗೆಯ ಕಾವಿಗೆ ಚಟಪಟ ಎಂದು ಸಿಡಿಯುತ್ತವೆ ಎನ್ನುವ ನಂಬಿಕೆಯಿಂದ ಬುದ್ಧಿಯವರು ಗದ್ದುಗೆಯೇರಿ ಐದು ನಿಮಿಷ ಜಪಮಣಿ ಹಿಡಿದು ಧ್ಯಾನ ಮಾಡುತ್ತಾರೆ ನಂತರ ಎದ್ದು ಬಿಡುತ್ತಾರೆ. ಜಾತ್ರೆ ಸಂದರ್ಭದಲ್ಲಿ ಗದ್ದುಗೆಯೇರುವುದನ್ನು ಅಪಾರ ಜನಸ್ತೋಮ ನಿಂತು ನೋಡುತ್ತದೆ. ಇದು ಸತ್ಯದ ಗದ್ದುಗೆ, ನಿಜಭಕ್ತಿ ಇಲ್ಲಿದೆ, ಇಲ್ಲದಿದ್ದರೆ ಅಲ್ಲಿ ಉರಿದು ಬೂದಿಯಾಗುತ್ತಾರೆ ಎಂಬ ನಂಬಿಕೆ ಸಾವಿರಾರು ದಿನಗಳಿಂದ ನಡೆದುಕೊಂಡು ಬಂದಿದೆ.

ಈ ರೀತಿಯಾಗಿ ಮೇಲ್ಕಂಡ ಎಲ್ಲಾ ಗದ್ದುಗೆಗಳಿದ್ದು ಅವುಗಳನ್ನು ಈ ಪರಂಪರೆಯ ನೀಲಗಾರರು ಅತ್ಯಂತ ಭಕ್ತಿಯಿಂದ ಜಾತ್ರೆ ಸಂದರ್ಭದಲ್ಲಿ ಪೂಜಿಸುತ್ತಾರೆ.

೪.ಕಂಡಾಯಗಳು

ನೀಲಗಾರ ಸಮುದಾಯದಲ್ಲಿ ಕಂಡಾಯಗಳು ತುಂಬಾ ಮಹತ್ವದ ಸ್ಥಾನ ಪಡೆದಿವೆ. ನೀಲಗಾರ ಪರಂಪರೆಯ ಸಾಂಸ್ಕೃತಿಕ ನಾಯಕರಾದ ಮಂಟೇಸ್ವಾಮಿ, ಸಿದ್ದಪ್ಪಾಜಿ, ನಿಂಗಯ್ಯ, ಚೆನ್ನಯ್ಯರ ಸಂಕೇತವಾಗಿ ಒಂದೊಂದು ಕಂಡಾಯಗಳಿವೆ. ಇದರಲ್ಲಿ ರಾಚಪ್ಪಾಜಿ, ದೊಡ್ಡಮ್ಮತಾಯಿ, ಚೆನ್ನಾಜಮ್ಮ ಇವರುಗಳ ಹೆಸರಲ್ಲಿ ಕಂಡಾಯಗಳಿಲ್ಲ. ನಿಂಗಯ್ಯ ಚನ್ನಯ್ಯರ ಕಂಡಾಯಗಳು ಬಹುಮುಖ್ಯವಾದ ಕಂಡಾಯಗಳು. ಎಲ್ಲಾ ಉತ್ಸವ ಜಾತ್ರೆಗಳಲ್ಲಿ ಒಕ್ಕಲಿನವರು ಮಾಡುವ ಆಚರಣೆಗಳಲ್ಲಿ ಇವೆರಡು ಕಂಡಾಯಗಳು ಇದ್ದೇ ಇರುತ್ತವೆ. ಇವುಗಳಿಗೆ **'ಮೆರವ ಕಂಡಾಯ'**ಗಳೆಂದು ಕರೆಯುತ್ತಾರೆ. ಸಿದ್ದಪ್ಪಾಜಿ ಕಂಡಾಯ ಧರೆಗೆ ದೊಡ್ಡವರ ಕಂಡಾಯಗಳು ಅವರವರ ಗದ್ದುಗೆ ಮೇಲಷ್ಟೆ ಇರುತ್ತವೆ.

ಮಂಟೇಸ್ವಾಮಿ ಕತೆಯಲ್ಲಿ ಉತ್ತರ ದೇಶದ 'ಉರಿ ಕಂಡಾಯ'ವನ್ನು ಮಂಟೇಸ್ವಾಮಿಗಳು ಹೊತ್ತುಕೊಂಡು ಬಂದು ಬೊಪ್ಪೇಗೌಡನ ಹಟ್ಟಿಯಲ್ಲಿಟ್ಟು ನೆಲಗೊಂಡರು ಎಂದು ತಿಳಿಸುತ್ತದೆ. ಮುಂದೆ ಕಾವ್ಯದಲ್ಲಿ ಕಂಡಾಯದ ಪ್ರಸ್ತಾಪ ಬರುವುದು ನಿಂಗಯ್ಯ-ಚೆನ್ನಯ್ಯರ ಸಂದರ್ಭದಲ್ಲಿ. ದಲಿತರಾದ ಇವರಿಗೆ ದೀಕ್ಷೆ ಕೊಟ್ಟು ಮಂಟೇಸ್ವಾಮಿ ''ನಾನು ಮರೆಯ ದೇವರಾದರೆ ನೀವು ಮೆರೆಯ ದೇವರಾಗು'' ಎಂದು ವರ ಕೊಡುತ್ತಾರೆ.

''ಕಂಡಾಯವೆಂದರೆ 'ಕತ್ತಿ' ಎನ್ನುವುದು ಪದಕೋಶದ ಅರ್ಥ. ಆದರೆ ನೀಲಗಾರರಲ್ಲಿ 'ಕಂಡಾಯ' ಪದದ ವ್ಯಾಪ್ತಿ ವಿಶಾಲವಾದದ್ದು. ಉತ್ತರದೇಸದಿಂದ ಬಂದ ಈ ಶರಣರು ತಮ್ಮ ಸಂಕೇತವಾಗಿ ಜೊತೆಯಲ್ಲಿ ಇದನ್ನು ಇರಿಸಿಕೊಂಡು ಅನೇಕ ಕ್ಷುದ್ರದೇವತೆಗಳನ್ನು ಗೆದ್ದಿದ್ದಾರೆ. ಆ ಗೆಲುವಿನ ಸಂಕೇತವಾಗಿ ಪಡೆದ ಬಿರುದುಗಳನ್ನು ಸಾಂಸ್ಕೃತಿಕ ನೆನಪುಗಳಾಗಿ

ಕಂಡಾಯಕ್ಕೆ ಏರಿಸಿಕೊಂಡು ಮುಂದೆ ಸಾಗಿದ್ದಾರೆ. ಆದ್ದರಿಂದ ಅದು ನೀಲಗಾರರ ಸಾಂಸ್ಕೃತಿಕ ನಾಯಕರ ಇತಿಹಾಸದ ಕುರುವಾಗಿರುವ ಪವಿತ್ರ ಸಂಕೇತ. ನೀಲಗಾರರು ಕಂಡಾಯವನ್ನು ಮಂಟೇಸ್ವಾಮಿಗೆ ಸಮೀಕರಿಸಿದ್ದಾರೆ. ''ಕಂಡಾಯಂದ್ರೆ ಉಂಟು ಕಂಡ್ವರ್‍ಯಾರು ಇಲ್ಲಾ'' ಕಂಡಾಯಗಳು ಕತ್ತಿಯಷ್ಟೇ ಅಲ್ಲ ಶಕ್ತಿ ತನ್ನ ಚರಿತ್ರೆಯ ಅನೇಕ ಏಳು-ಬೀಳುಗಳನ್ನು ಇದು ಗರ್ಭೀಕರಿಸಿಕೊಂಡು ಅಗೋಚರ-ಅಗಮ್ಯಗಳನ್ನೆಲ್ಲಾ ತನ್ನೊಳಗೆ ಅಡಗಿಸಿಕೊಂಡಿವೆ ಎಂದು ಅವರ ನಂಬಿಕೆ. ಇದು ಮೂರ್ತತೆ ನಿರಾಕರಿಸುವ ಆತ್ಮದ ಸಂಕೇತ.''[೧೯]

ಕಂಡಾಯಗಳು ಮೊಹರಂಗಳಲ್ಲಿ ಮೆರೆವ ಪಂಜಾಗಳಂತೆ ಕುರುಬ ಕೂಟದಲ್ಲಿ ಕುಣಿಯುವ ನಂದಿ ಕಂಬಗಳಂತೆ ಇದ್ದು ಇಲ್ಲದಾಗೆ ಇರುವ ಸಿದ್ದರಂತೆ ಸಿದ್ದ- ಸೂಫಿ ಶರಣರ ತತ್ವಗಳ ಸಮಾಗಮದ ಸಂಕೇತದಂತೆ ಇವೆ. ಒಕ್ಕಲಿನವರು ಇವುಗಳನ್ನು ತಮ್ಮ ನಾಯಕರೆಂದೇ ನಂಬಿ-ನೆನೆದು ಹೊತ್ತು ಮೆರೆದು ಮನೆ ತುಂಬಿಸಿಕೊಳ್ಳುತ್ತಾರೆ.

ಹೀಗೆ ಜಾತ್ರೆಗಳ ಸಂದರ್ಭದಲ್ಲಿ ವಿವಿಧ ಸೇವೆಗಳ ಆಚರಣೆಗಳನ್ನು ಮಾಡುವುದರ ಮೂಲಕ ನೀಲಗಾರ ಸಮುದಾಯದವರು ತಮ್ಮ ಭಾವನೆಗಳನ್ನು ಹಂಚಿಕೊಳ್ಳುತ್ತಾರೆ.

೫. ಮಠಗಳು

''ಅರಮನೆ ಬರಿದಾದರೂ ಗುರುಮನೆ ಬರಿದಾಗೊಲ್ಲ ಲಕ್ಷಕ್ಕೆ ಕಣಜ ಬರಿದಾದರು ಭಿಕ್ಷುಕನ ಜೋಳಿಗೆ ಬರಿದಾಗೊಲ್ಲಾ'' ಮಠಮನೆ ಗುರುಮನೆಗಳ ಬಗ್ಗೆ ಇಂಥ ಪವಿತ್ರವಾದ ನಂಬಿಕೆಗಳು ಇವರಲ್ಲಿವೆ.

ಬೊಪ್ಪೇಗೌಡನಪುರದ ಮಠ

ಇದು ಈ ಪರಂಪರೆಯ ಕೇಂದ್ರ ಬಿಂದುವಾಗಿದೆ. ಇಲ್ಲಿ ಮಂಟೇಸ್ವಾಮಿ ಗದ್ದುಗೆಯಿದೆ. ಮಳವಳ್ಳಿ ತಾಲ್ಲೂಕಿನಲ್ಲಿದೆ ಸಖಿರಾಯನ ಪಟ್ಟಣದ ರಾಜನ ವಂಶದವರು ಇಲ್ಲಿ ಇದ್ದಾರೆ ಎಂಬ ನಂಬಿಕೆಯಿಂದ ಭಕ್ತಿ ಗೌರವವಾಗಿ ನಡೆದುಕೊಳ್ಳುತ್ತಾರೆ. ಬೆಡಗಿನ ಚಂದ್ರಶಾಲೆ, ಉಳಿಗರ ಮನೆ, ಪಾತಾಳಬಾವಿ ಇತ್ಯಾದಿಗಳೆಲ್ಲಾ ಇಲ್ಲಿ ಇವೆ. ಇಲ್ಲಿರುವ ಬುದ್ಧಿಯವರು ಅರಸು ಮನೆತನದವರು ಎಂದು ಹೇಳಿಕೊಳ್ಳುತ್ತಾರೆ ಹಾಗೆ ಮೈಸೂರು ಅರಮನೆಯಿಂದ ಮಳವಳ್ಳಿ ಸ್ವಾಮಿಗಳಿಗೆ ಹೆಣ್ಣನ್ನು ತಂದಿದ್ದಾರೆ ಎಂದೂ ಹೇಳುತ್ತಾರೆ.

ಆದರೆ ಸಖಿರಾಯನ ಪಟ್ಟಣದ ರಾಜರಿಗೂ-ಮೈಸೂರು ಅರಸುಗಳಿಗೂ ಎಲ್ಲಿಂದ ಎಲ್ಲಿಯ ಸಂಬಂಧ ಎಂಬುದು ಗೊತ್ತಾಗುವುದಿಲ್ಲ. ಹಾಗೆ ಕಪ್ಪಡಿಯಲ್ಲಿ ಇವರು ನಡೆಸುವ ಆಚರಣೆಗಳು ರಾಜದರ್ಬಾರಿನಂತೆ ಇವೆ. ರಾಚಪ್ಪಾಜಿಗೂ ಮೈಸೂರು ಒಡೆಯರಿಗೂ ಇರುವ ಸಂಬಂಧವೇನು ಎಂಬುದು ಚಾರಿತ್ರಿಕವಾಗಿ ತಿಳಿದು ಬಂದಿಲ್ಲಾ. ಕಾವ್ಯವನ್ನೇ ಆಧಾರವಾಗಿಟ್ಟುಕೊಂಡು ನೀಲಗಾರ ಹೇಳುವುದು ಹೀಗೆ ''ಮಾರಾಜ ನಾನು ಭಿಕ್ಷುಕನಾದ್ರು ನಿನ್ನ ಮಕ್ಕಳ ಖಂಡಿತವಾಗಿ ಕಾಡ ಮಾಡಲ್ಲ. ಓಲಗರಿತಕ್ಕೆ ನವಿಲಗರಿ ಬೆಂಡತಕ್ಕ ತಾಮ್ರ ತಗಡಿನೊಳಗೆ ಚಪ್ಪೋಡು ಬರ್ದು ಬಿಡು ಯಾವ ರೀತಿ ಠಿರಿಯಮಗ್ನನಾದ ಠಿರಾಪ್ಪಾಜಿಗೆ ಹೀರ್

(ವೀರ್) ಪಟ್ಟ ಬೊಪ್ಪಣಪುರದ ಬುದ್ಧಿಯವರು ಅಂತಾ ನಾಮಾಂಕಿತ ಮಾಡ್ತಿನಿ, ಬೊಪ್ಪಣಪುರದ ತಾಲ್ಲೂಕಿನಲ್ಲಿ ಬರೋ ವರಮಾನ ತೆಂಕ್ಲ ರಾಜ್ಯದಲ್ಲಿ ಉಳಮೆ ಮೂಲ ಒಳ್ಗ ಕುರುಬಕಟ್ಟೆ ಮಠಾಂತ ಮಾಡ್ತೀನಿ, ಅಲ್ಲಿ ಬರೋ ವರಮಾನ ಹಿರೀಮಗ್ನಗಾಗ್ಲಿ , ಕಿರಿಮಗ್ನಾದ ಚೆನ್ನಪ್ಪಾಜಿ ಮಾರಳ್ಳಿ ಹಾಳ್ ಮಾಡಿ ಮಳವಳ್ಳಿ ಉದ್ಧಾರ ಮಾಡಿ ಮಾಳವಳ್ಳಿ ಸ್ವಾಮಿಗಳು ಅಂತಾ ನಾಮಾಂಕಿತ ಮಾಡ್ತೀನಿ, ಮಳವಳ್ಳಿ ತಾಲ್ಲೂಕಿನಲ್ಲಿ ಬರೋ ವರಮಾನ ಹೊನ್ನಾಯಕನಹಳ್ಳಿ ವರಮಾನ ಕಿರಿಮಗನಿಗಾಗಿ ಬರ್ಕಾ ಕಪ್ಪಡಿ ಕೈಲಾಸದಿಂದ ಬರೋ ವರಮಾನ ಹಿರಿಯವ್ನಗೆ ಒಂದರ್ಷ ಕಿರಿಯವ್ನಗೊಂದವರ್ಷ ನಾಳಾ ನನಕಂದಾ ತೆಳ್ನೂರು, ಕೂತ್ನೂರು, ಕಿರುಗ್ಸಾವಲು, ಬಾಣೂರು, ಬಾಳಗುಣ್ಸ, ಸುಂಡ್ರಳ್ಳಿ ಗ್ರಾಮದ ಪಕ್ಕ ಚಿಕ್ಕಳ್ಳಿಗ್ರಾಮ (ಚಿಕ್ಕಲೂರು) ಆದ್ದರಿಂದ ಬರೋ ವರಮಾನ ಹಿರಿಮಗ ಹಿರಾಪ್ಪಾಜೀ ಬೊಪ್ಪಣಪುರದ ಸ್ವಾಮಿಗೆ ಹೊರ್ತು ಮಳವಳ್ಳಿ ಸ್ವಾಮಿಗಳ್ಗ ಹಕ್ಕಿಲ್ಲಾ'' ಅಂತೇಳಿ ತಾಮ್ರದ ಚೊಪ್ಪೋಡು ಬರೆಸಿದ್ದಾರೆ.

ಈ ರೀತಿ ಗಾಯಕರು ಹೇಳುವ ಈ ಕ್ರಮ ಇತ್ತೀಚಿನ ಅಕ್ಷರ ಪರಂಪರೆಯ ಉಯಿಲನ್ನು ನೆನಪಿಸುತ್ತದೆ. ಮಠದ ಆಸ್ತಿ ವರಮಾನಗಳ ಬಗ್ಗೆ ಉಂಟಾಗುವ ತಕರಾರುಗಳು ಇವರಿಗೆ ಈ ರೀತಿಯಾದ ಕಲ್ಪನೆ ತಂದು ಕೊಟ್ಟಿರಬಹುದು. ಇವುಗಳು ಏನೇ ಇದ್ದರೂ ಈಗ ಬೊಪ್ಪೇಗೌಡನ ಪುರದ ಮಠದವರಿಗೆ ಈ ಪರಂಪರೆಯ ವರಮಾನದಲ್ಲಿ ಹೆಚ್ಚಿನ ಪಾಲು ಸಿಕ್ಕಿದೆ. ಮಠದವರಾದ ಶ್ರೀ ಪ್ರಭುದೇವ ಅರಸುಗಳು ತಮ್ಮ ವಂಶಿಕರ ಬಗ್ಗೆ ಈ ವಿವರ ಕೊಟ್ಟಿದ್ದಾರೆ. ಈ ಮಠಕ್ಕೆ ೬೦೦ ವರ್ಷಗಳ ಇತಿಹಾಸವಿದೆ. ಇವರು ತಿಳಿದು ಹಾಗೆ ಪಟ್ಟದ ಬುದ್ಧಿಯಾದವರು ತಲೆಮಾರಿನಂತೆ ಈ ಕೆಳಕಂಡಂತೆ ಇದ್ದಾರೆ.

೧. ಚೆನ್ನರಾಜೇಅರಸು

೨. ರಾಜೇಅರಸು

೩. ಬಿ.ಆರ್. ರಾಜೇಅರಸು

೪. ಬಿ.ಆರ್ ಸಿದ್ದಲಿಂಗರಾಜುಅರಸು

೫. ಜ್ಞಾನನಂದಾ ಜ್ಞಾನೇಶ್ವರಅರಸು (ಈಗಿನ ಪಟ್ಟದ ಬುದ್ಧಿಯವರು)

ಇದು ಸಂಸಾರಿ ಮಠವಾಗಿರುತ್ತದೆ. ಬೊಪ್ಪೇಗೌಡನಪುರದ ಮಠವನ್ನು ಒಪ್ಪಿಕೊಂಡಪುರ ಎಂದು ಅರ್ಥೈಸುತ್ತಾರೆ. ಇಷ್ಟೇ ಅಲ್ಲದೆ ಗದ್ದುಗೆಗಳು ಇರುವಲ್ಲಿ ಅಂದರೆ ಚಿಕ್ಕಲೂರು, ಕಪ್ಪಡಿ, ಕುರುಬನಕಟ್ಟೆ, ಆದಿ ಹೊನ್ನಯಕಹಳ್ಳಿಗಳಲ್ಲಿ ಮಠಗಳು ಈಗಲೂ ಇವೆ. ಇವುಗಳನ್ನು ಜಾತ್ರೆ ಸಂದರ್ಭದಲ್ಲಿ ಮಾತ್ರ ಬಳಸಿ ನಂತರ ಮೂಲ ಮಠಕ್ಕೆ ಬಂದು ಬಿಡುತ್ತಾರೆ.

ಮಳವಳ್ಳಿ ಮಠ

ಇಲ್ಲಿ ಮಳವಳ್ಳಿ ಸ್ವಾಮಿಗಳು ಇರುತ್ತಾರೆ. ಬೊಪ್ಪೇಗೌಡನಪುರದ ಮಠ ಬಿಟ್ಟರೆ ಎರಡನೆಯ ಮುಖ್ಯ ಮಠ ಇದಾಗಿದೆ ಇಲ್ಲಿಯೂ ಸಿದ್ದಪ್ಪಾಜಿ, ದೊಡ್ಡಮ್ಮ ತಾಯಿ, ರಾಚಪ್ಪಾಜಿ ತೋರುಗದ್ದುಗೆಗಳು ಇವೆ. ಕಾಲಜ್ಞಾನದ ಕಟ್ಟುಗಳು

ಪೂಜೆಗೊಳ್ಳುತ್ತವೆ. ಕಪ್ಪಡಿಗೆ ಹೋಗುವಾಗ ತೆಗೆದುಕೊಂಡು ಹೋಗಿ ನಂತರ ಇಲ್ಲಿ ತಂದು ಇಡುತ್ತಾರೆ. ಹೀಗೆ ಮಠಗಳ ವಿಚಾರವನ್ನು ವಿವರಿಸಲಾಗಿದೆ.

೪ :೨ ದೈವಗಳು

ಯಾವುದೇ ಒಂದು ಸಮುದಾಯಕ್ಕೆ ತನ್ನದೇ ಆದ ದೈವಗಳ ಆಚರಣೆ ಇರುತ್ತದೆ. ಅಂತಹ ದೈವಗಳನ್ನು ಅವರು ತಮ್ಮದೇ ಆದ ಕ್ರಮದಲ್ಲಿ ಪೂಜಿಸುವುದು, ಸ್ಥಾಪಿಸುವುದು ಅವುಗಳ ಕುರಿತು ನಂಬುಗೆಯನ್ನು ಇಟ್ಟುಕೊಳ್ಳುವುದು ಮತ್ತು ಆ ಬಗೆಗಿನ ವಿಧಿ ನಿಷೆಧಗಳು ಇದ್ದೇ ಇರುತ್ತವೆ.

ಪ್ರಕೃತಿಯಲ್ಲಿ ಕಾಲದಿಂದ ಕಾಲಕ್ಕೆ ಬದಲಾಗುವ ಬದಲಾವಣೆಗಳು ಮಳೆ-ಗಾಳಿ-ಗುಡುಗು-ಮಿಂಚು-ಸಿಡಿಲು ಇವೇ ಮೊದಲಾದವುಗಳಲ್ಲಿ ಆದಿಮಾನವನು ಯಾವುದೋ ಒಂದು ಅವ್ಯಕ್ತ ಅಗಾಧಶಕ್ತಿ ಇದೆ ಎಂದು ಆದಿಮಾನವನಿಗೆ ಭಯ ಆಶ್ಚರ್ಯ ಉಂಟಾಗಿರಬೇಕು. ಅಂತಹ ಭಯಾನಕ ಘಟನೆಗಳಿಂದ ರಕ್ಷಿಸಿಕೊಳ್ಳಲು ಅವುಗಳನ್ನು ಪೂಜಿಸಿ ಸಂತುಷ್ಟಪಡಿಸಲು ಮುಂದಾದನು. ಈ ರೀತಿಯಾಗಿ ಉದ್ಭವಿಸಿದ ಅವನ ಭಯ, ಭೀತಿ, ನಂಬಿಕೆಗಳು ಪ್ರಕೃತಿಯ ಎಲ್ಲಾ ವಿದ್ಯಮಾನಗಳಲ್ಲೂ ವಿಶೇಷ ಗುಣಗಳನ್ನು ಕಾಣಲು ಪ್ರಯತ್ನಿಸಿತು. ಜಗತ್ತಿನ ಸಕಲ ಜೀವಿಗಳು ಹಾಗೂ ವಸ್ತುಗಳಲ್ಲಿ ಆ ಶಕ್ತಿ ಅಡಕವಾಗಿದೆ ಎಂದು ನಂಬಿದ್ದ. ಪೂಜೆ, ನೈವೇದ್ಯಗಳಿಂದ ಸಂತೃಪ್ತಿಪಡಿಸಲು ಪ್ರಯತ್ನಿಸಿದ ಕೆಲವು ಸಲ ದೈವೀ ಶಕ್ತಿಯನ್ನು ಉಪಾಸನೆಯಿಂದ ಮೈಗೂಡಿಸಿಕೊಳ್ಳಲು ಹಾತೊರೆದ ಒಟ್ಟಿನಲ್ಲಿ ದೇವರ ದೈವಶಕ್ತಿ ಪ್ರೇರಣೆ ಮನುಷ್ಯ ಮಾಡುವ ಎಲ್ಲಾ ಕೆಲಸ ಕಾರ್ಯಗಳಿಗೆ ನಾಂದಿಯಾಯಿತು.

ಮಾನವ ತನ್ನ ಸುತ್ತುವರಿದ ಪ್ರಕೃತಿಯೊಂದಿಗೆ ವಿಶಿಷ್ಟ ಸಂಬಂಧಗಳನ್ನು ಕಲ್ಪಿಸಿಕೊಡುವುದರಲ್ಲಿ ಧರ್ಮ ದೇವರುಗಳನ್ನು ಸೃಷ್ಟಿಸಿದ್ದಾನೆ. ಹಾಗೂ ಪ್ರಕೃತಿಯ ಪ್ರತಿಯೊಂದು ಅಂಗಗಳಲ್ಲಿ ಈ ದೈವದ ಅಂಶವನ್ನು ಕಂಡು ಆರಾಧಿಸುತ್ತಾ ಬಂದನು. ಮೊದ ಮೊದಲು ಗಿಡ-ಮರ-ಕಾಡು-ಮೇಡು-ಪ್ರಾಣಿ-ಪಕ್ಷಿ- ಜಲ ಮುಂತಾದವುಗಳನ್ನು ಪೂಜಿಸುತ್ತಾ ಅನಂತರ ಬೇರೆ ಬೇರೆ ದೇವರುಗಳನ್ನು ಸೃಷ್ಟಿಸಿಕೊಂಡಿರಬೇಕು ಈಗಲೂ ಕೆಲವೆಡೆ ಗಿಡಮರಗಳೇ ದೇವರುಗಳಾಗಿವೆ.

ಯಾವುದೇ ದೇವತೆಯ ಸೃಷ್ಟಿಗೆ ಯಾವುದಾದರೊಂದು ಕಾರಣ ಇದ್ದೇ ಇರುತ್ತದೆ. ಆದಿಮಾನವ ಅಜ್ಞಾನ ಯುಗದಲ್ಲಿ ಎದುರಿಸಬೇಕಾಗಿ ಬಂದ ಅಸಂಖ್ಯಾತ ಸಮಸ್ಯೆಗಳಿಗೆ ಕಂಡು ಕೊಂಡ ಉತ್ತರಗಳಲ್ಲಿ ಈ ದೇವತೆಗಳ ಆರಾಧನೆಯು ಒಂದು. ಅವನ ವೈಚಾರಿಕತೆ ವಿಸ್ತೃತಗೊಂಡಿಲ್ಲದಿದ್ದಾಗ ಬುದ್ಧಿಶಕ್ತಿ ಬೆಳವಣಿಗೆ ಆಗದಿದ್ದಾಗ ಚಿಂತನಶೀಲತೆ ವಿಕಾಸಗೊಳ್ಳದೇ ಇದ್ದಾಗ ಅವನ ಹಠತ್ತಾದ ಎಲ್ಲಾ ಪ್ರವೃತ್ತಿಗಳಿಗೂ ಬಿಗಿಯಿಲ್ಲದಂತಾಗಿದ್ದು ಅಂತಹ ಸಂದರ್ಭಗಳಲ್ಲಿ ಅವನ ಕಲ್ಪನೆ ಗರಿಬಿಚ್ಚಿಕೊಂಡು ಇಚ್ಛಾನುಸಾರ ಕುಣಿಯಿತೆಂದು ಹೇಳಬಹುದಾಗಿದೆ.

ಆದಿಮಾನವ ಸೃಷ್ಟಿಯ ಚರಾಚರ ವಸ್ತುಗಳಿಗೆಲ್ಲ ಚೇತನವನ್ನು ಆರೋಪಿಸಿ ಎಲ್ಲಾ ಜೀವಿಗಳಲ್ಲೂ ಅಗೋಚರ ಶಕ್ತಿಯೊಂದು ಮನೆ ಮಾಡಿದೆ ಎಂದು ಭಾವಿಸಿದನಲ್ಲದೆ ಆ ಶಕ್ತಿ ಏಕಕಾಲದಲ್ಲಿ ಒಳಿತು ಕೆಡಕುಗಳನ್ನುಂಟು ಮಾಡಬಹುದು ಎಂದು ಎಣಿಸಿದ ಆ ಶಕ್ತಿಗೂ ಮಾನವನಂತೆ ಹಲವು ಆಸೆ ಆಕಾಂಕ್ಷೆಗಳಿವೆ, ರಾಗದ್ವೇಷಗಳಿವೆ ಎಂದು ತಿಳಿದು ಆ ಶಕ್ತಿ ಒಲಿದರೆ ಒಳಿತೆಂದು ಭಾವಿಸಿ ಅದರ ಕೋಪತಾಪಗಳನ್ನು ತಣಿಸಬೇಕು ಎಂದು ಆ ಯತ್ನದಲ್ಲಿ ತೊಡಗಿದ. ಹರಿಯುವ ನೀರಿನಲ್ಲಿ ಬೃಹದಾಕಾರವಾಗಿ ಬೆಳೆದುನಿಂತ ಮರಗಿಡಗಳಲ್ಲಿ ಎತ್ತರಕ್ಕೆ ನಿಂತ ಬೆಟ್ಟಗುಡ್ಡಗಳಲ್ಲಿ ಸರ್ವಾಂತರ್ಯಾಮಿಯನ್ನು ಕಂಡ ಅದಕ್ಕೆ ಅನುಕೂಲವಾಗಿ ನಡೆದುಕೊಂಡರೆ ತನ್ನ ಅಪೇಕ್ಷೆಗಳು ಈಡೇರುತ್ತವೆ, ಸಂಭವನೀಯ ಅಘಾತಗಳು ದೂರವಾಗುತ್ತವೆ, ಜೀವನ ಸುಖಕರವಾಗಿರುತ್ತವೆ ಎಂದು ತಿಳಿದು ಅದನ್ನು ಒಲಿಸಿಕೊಳ್ಳಲು ನಾನಾ ಮಾರ್ಗೋಪಾಯಗಳನ್ನು ಅನುಸರಿಸಿದ. ಈ ಹಿನ್ನಲೆಯಲ್ಲಿ ಆರಾಧನಾ ವಿಧಿ ಆಚರಣೆಗಳು ಸಿದ್ಧಗೊಂಡವು. ಮರಗಳ ಆರಾಧನೆ, ಶಿಲಾರಾಧನೆ, ಶಕ್ತಿಯಾರಾಧನೆ, ಸತಿ ಆರಾಧನೆ, ನಾಗಾರಾಧನೆ, ದೇವತಾರಾಧನೆ, ದೆವ್ವ ಮತ್ತು ಭೂತಾರಾಧನೆ, ಪಿತೃಪೂಜೆ ಮೊದಲಾದ ಆರಾಧನೆಗಳು ಹುಟ್ಟಿಕೊಂಡವು.

ಇನ್ನೊಂದು ಅಭಿಪ್ರಾಯದಂತೆ ದೇವತೆಗಳು ಹೀಗೆ ಹುಟ್ಟಿರಬಹುದು ಎನ್ನುತ್ತಾರೆ. ಡಾ. ಸಿದ್ಧಲಿಂಗಯ್ಯನವರು ''ಮನುಷ್ಯನ ಆರ್ಥಿಕ ಚಟುವಟಿಕೆ ಆತನ ಸಂಸ್ಕೃತಿ ನಿರ್ಮಾಣದಲ್ಲಿ ಅಪೂರ್ವವಾದ ಪಾತ್ರವಹಿಸುತ್ತದೆ. ಹುಟ್ಟಿನಿಂದ ಇಲ್ಲಿಯವರೆಗೆ ಈ ಮಾನವಜೀವಿ ಹಲವು ಬಗೆಯ ಆರ್ಥಿಕ ಚಟುವಟಿಕೆ ಹಂತಗಳನ್ನು ದಾಟಿ ಬಂದಿದ್ದಾನೆ. ಈ ಎಲ್ಲಾ ಹಂತಗಳಲ್ಲಿ ಅವನು ಉಳಿವಿಗಾಗಿ ಹೋರಾಡಿದ, ಆಹಾರ ಗಳಿಕೆಯೇ ಅವನ ಮುಖ್ಯ ಕಾಳಜಿಯಾಗಿತ್ತು. ಇದಕ್ಕಾಗಿ ಮನುಷ್ಯ ಅನುಸರಿಸಿದ ತಂತ್ರ, ಬಳಸಿದ ಉಪಕರಣಗಳ ಚರಿತ್ರೆ ಕುತೂಹಲಕಾರಿಯಾದದ್ದು, ಈ ಚಟುವಟಿಕೆಯೇ ಅವನ ಆಲೋಚನೆಯನ್ನು ರೂಪಿಸಿತು. ಮನುಷ್ಯನ ವರ್ತನಾ ವಿನ್ಯಾಸದ ಮೂಲವೇ ಇದು ಎಂದರೆ ತಪ್ಪಾಗಲಾರದು. ಐದು ಬಗೆಯ ಆರ್ಥಿಕ ಚಟುವಟಿಕೆಗಳಲ್ಲಿ ಮಾನವ ತನ್ನನ್ನು ತೊಡಗಿಸಿಕೊಂಡಿದ್ದಾನೆ. ಅವು ಆಹಾರ ಸಂಗ್ರಹಣೆ, ಬೇಟೆ, ಪಶುಪಾಲನೆ ಮತ್ತು ಕೈಗಾರಿಕೆ. ಕೊನೆಯ ಹಂತದಲ್ಲಿ ಇರುವ ಮನುಷ್ಯ ಮೊದಲ ನಾಲ್ಕು ಘಟ್ಟಗಳನ್ನು ದಾಟಿ ಬಂದಿರಲೇಬೇಕು. ಇಂದು ಪ್ರಪಂಚದ ನಾನಾ ಕಡೆ ಆಹಾರ ಸಂಗ್ರಹಣೆಯ ಹಂತದಲ್ಲೇ ನಿಂತುಹೋಗಿರುವ ಜನರನ್ನು ಕಾಣಲು ಸಾಧ್ಯವಿದೆ. ಕೆಲವರು ಬೇಟೆಯ ಹಂತವನ್ನು ಇನ್ನೂ ದಾಟದಿರುವುದು ಕಂಡು ಬಂದರೆ ನೀಲಗಿರಿಯ ಕೋಡರು ಪಶುಪಾಲನೆಯನ್ನೇ ಮಾಡುತ್ತಾ ಕೃಷಿಗೆ ಕಾಲಿಡದಿರುವ ಜನಾಂಗವಾಗಿದ್ದಾರೆ. ದೇವತೆಗಳು, ಆಚರಣೆಗಳು ಹುಟ್ಟಿದ್ದು ಈ ಚಟುವಟಿಕೆಗಳ ಹಿನ್ನೆಲೆಯಲ್ಲೇ. ಆಹಾರ ಸಂಗ್ರಹಣೆಯ ಹಂತದ ಅನೇಕ ಆಚರಣೆಗಳು ಇನ್ನೂ ವಿಚಿತ್ರ ರೂಪದಲ್ಲಿ ನಮ್ಮ ನಡುವೆ ಸಿಗುತ್ತವೆ. ಇಂದಿಗೂ ಇರುವ ಬಿಲ್ಲು ಬಾಣ ಹಿಡಿದು ಕಾಡು ಪ್ರಾಣಿಗಳ ಮೇಲೆ ಸವಾರಿ ಮಾಡುವ ದೇವತೆಗಳು ಹುಟ್ಟಿದ್ದು ಬೇಟೆಯ ಕಾಲದಲ್ಲಿ. ಪಶುಪಾಲನೆಯ ಹಂತದ ದೇವತೆಗಳು ದನಕಾಯುವ ವೃತ್ತಿಯನ್ನು ಪ್ರಧಾನವಾಗಿ ಆರಿಸಿಕೊಂಡಿವೆ. ಮನುಷ್ಯ ಈ ಬೆಟ್ಟದಲ್ಲಿ ಇದ್ದಾಗಲೇ ಆಕಾಶದೇವತೆಗಳು ವಾಯುಮಂಡಲ ದೇವತೆಗಳು ಹುಟ್ಟಿದ್ದು''[೨೦]

ಒಟ್ಟಿನಲ್ಲಿ ಮೂಲದಲ್ಲಿ ಪ್ರಕೃತಿಯ ವಿವಿಧ ಶಕ್ತಿಗಳೇ ಕಾಲಕ್ರಮೇಣ ವಿಶಿಷ್ಟ ಶಕ್ತಿಗಳಾಗಿ ಆದಿಶಕ್ತಿಯಾಗಿ ಹಲವಾರು ನಾಮಾವಳಿಗಳನ್ನು ಧರಿಸಿ ನೂರಾರು ದೇವತೆಗಳು ಸೃಷ್ಟಿಗೊಂಡವು. ಹೀಗಾಗಿ ದೇಸಿ ಪಂಥಗಳನ್ನು ಮುನ್ನಡೆಸಿದ ಮಲೆಮಾದೇಶ್ವರ

ಮಂಟೇಸ್ವಾಮಿ ಜುಂಜಪ್ಪ ಬೈರವ ಹಾಗೂ ತಿರುಪತಿ ವೆಂಕಟರಮಣರು ಹೆಚ್ಚು ಪ್ರಿಯರಾಗುತ್ತಾರೆ. ತಿರುಪತಿ ದಾಸಯ್ಯಗಳು, ಚುಂಚನಗಿರಿ ಜೋಗಪ್ಪಗಳು, ಮಾದಪ್ಪನ ಗುಡ್ಡರು ಹಾಗೂ ಮಂಟೇಸ್ವಾಮಿ, ಸಿದ್ದಪ್ಪಾಜಿ, ರಾಚಪ್ಪಾಜಿ, ನೀಲಗಾರರು ದೇಶಿ ಪುರೋಹಿತರಾಗಿ ಈ ಸಾಂಸ್ಕೃತಿಕ ನಾಯಕರ ಭಕ್ತರಾದರು.

ನೀಲಗಾರರ ಪ್ರತಿಯೊಂದು ಹಳ್ಳಿಯೂ ಅಸಂಖ್ಯ ದೈವಗಳ ತವರು. ಈ ದೈವಗಳನ್ನು ಅವುಗಳ ಆರಾಧನಾ ಕ್ರಮ ಮತ್ತು ಅವುಗಳ ವಿಷಯದಲ್ಲಿ ಪ್ರಚಲಿತ ನಂಬಿಕೆ ನಡವಳಿಕೆಗಳಿಗನುಗುಣವಾಗಿ ಮತ್ತು ನೀಲಗಾರ ಪರಂಪರೆಯಲ್ಲಿ ದೈವವಾಗಿ ಆರಾಧಿಸುತ್ತಿರುವ ಹಿನ್ನೆಲೆಯಲ್ಲಿ ಮುಖ್ಯವಾಗಿ ಈ ಕೆಳಗಿನಂತೆ ವಿಭಾಗಿಸಿಕೊಳ್ಳಬಹುದು.

೧. ನೀಲಗಾರ ಪರಂಪರೆಯಲ್ಲಿ ಆರಾಧಿಸುವ ದೈವಗಳು

ನೀಲಗಾರ ಪರಂಪರೆಯಲ್ಲಿ ಆರಾಧಿಸುವ ದೈವಗಳನ್ನು ಈ ರೀತಿ ಪಟ್ಟಿ ಮಾಡಬಹುದು.

ಮಂಟೇಸ್ವಾಮಿ : ಈ ಪರಂಪರೆಯಲ್ಲಿ ಮುಖ್ಯವಾಗಿ ಮಂಟೇಸ್ವಾಮಿಗಳನ್ನು ಆರಾಧಿಸುತ್ತಾರೆ. ಮಂಟೇಸ್ವಾಮಿ ದೈವವನ್ನು ಒಂಬತ್ತು ಜನವರ್ಗದ ಕಾಯಕ ಜೀವಿಗಳು ಆರಾಧಿಸುತ್ತಾರೆ. ಎಲ್ಲಾ ಪರಂಪರೆಗಳಲ್ಲಿ ಇರುವಂತೆ ಇವರಲ್ಲಿಯೂ ಈ ಪರಂಪರೆಗೆ ಒಂದು ಚರಿತ್ರೆ ಇರುವುದನ್ನು ಕಾವ್ಯದ ಮೂಲಕ ನೀಲಗಾರರು ಕಟ್ಟಿಕೊಟ್ಟಿದ್ದಾರೆ. ನೀಲಗಾರರ ಪರಂಪರೆ ಮತ್ತು ತತ್ವ ಪ್ರತಿಪಾದನೆಯಲ್ಲಿ ಹಾಗೂ ವಿಶಿಷ್ಟ ಆಚರಣೆಗಳಲ್ಲಿ ವಚನ ಚಳುವಳಿಯ ಆಶಯಗಳನ್ನು ಪ್ರತಿನಿಧಿಸಲಾಗಿದೆ. ಮಂಟೇಸ್ವಾಮಿಗಳು ನೀಲಗಾರ ಸಮುದಾಯದ ಸಾಂಸ್ಕೃತಿಕ ನಾಯಕರಾಗಿದ್ದಾರೆ. ಇವರು ಶಿಷ್ಟ ಸಂಸ್ಕೃತಿ ಯಾವುದನ್ನು ತುಚ್ಛವೆಂದು ನಿರಾಕರಿಸಿತ್ತೊ ಅಂತಹ ವಸ್ತುಗಳನ್ನೇ ತನ್ನ ಪರಂಪರೆಯ ಧಾರ್ಮಿಕ ಸಂಕೇತಗಳಾಗಿ ಮಾರ್ಪಡಿಸಿಕೊಳ್ಳುತ್ತಾರೆ. ಕೃಷ್ಣಾನದಿಯಿಂದ ಕಾವೇರಿಯವರೆಗಿನ ಈ ಸಾಂಸ್ಕೃತಿಕ ನಾಯಕರ ಚಲನೆ ಹಾಗೂ ಉತ್ತರ ಕರ್ನಾಟಕದ ಅವರ ಬದುಕಿನ ವಿವರ ಅಥವಾ ಇತಿಹಾಸವನ್ನು ಈ ನೀಲಗಾರರು ಪುರಾಣಿಸಿಕೊಂಡಿದ್ದಾರೆ. ಉತ್ತರ ಕರ್ನಾಟಕದಲ್ಲಿ ನೀಲಗಾರರಿಲ್ಲ ಆದರೆ ಮಂಟೇಸ್ವಾಮಿಗೆ ನಡೆದುಕೊಳ್ಳುವ ಭಕ್ತರು, ತೋರುಗದ್ದುಗೆಗಳು ಇವೆ. ಆದ್ದರಿಂದ ಮಂಟೇಸ್ವಾಮಿಯವರ ಚರಿತ್ರೆ ಉತ್ತರ-ದಕ್ಷಿಣದಲ್ಲಿ ಹರಡಿಕೊಂಡಿವೆ.

ಉತ್ತರ ಕರ್ನಾಟಕದ ಕೊಡೇಕಲ್ಲು, ಕೆಲೂರು, ಕೂಡಲಸಂಗಮ, ಕುರುವತ್ತಿಗಳಲ್ಲಿ ಮಂಟೇಸ್ವಾಮಿ ತೋರುಗದ್ದುಗೆಗಳಿದ್ದು ಆ ಗದ್ದುಗೆಗಳಿಗೆ ನಡೆದುಕೊಳ್ಳುವ ಭಕ್ತರು ಇದ್ದರೂ ದಕ್ಷಿಣದ ನೀಲಗಾರರ ಹಾಗೆ ಒಂದು ಪರಂಪರೆಯನ್ನು ಕಟ್ಟಿಕೊಂಡು ತಮ್ಮದೇ ಆದ ಧಾರ್ಮಿಕ ಕಾವ್ಯ ಸೃಷ್ಟಿಸಿಕೊಂಡಿಲ್ಲ. ಮಂಟೇಸ್ವಾಮಿಗೆ ನಡೆದುಕೊಳ್ಳುವವರಲ್ಲಿ ವೀರಶೈವ ಧರ್ಮದ ಪ್ರಭಾವವನ್ನು ಕಾಣುತ್ತೇವೆ. ಆದರೆ ವೀರಶೈವರ ಮೂಲತತ್ವಗಳಿಗೆ ವಿರೋಧವು ಇದೆ. ಮಂಟೇಸ್ವಾಮಿ ಗದ್ದುಗೆಗಳು ಬೊಪ್ಪೇಗೌಡನ ಪುರದಲ್ಲಿ ಇವೆ. ಈ ಗದ್ದುಗೆಗಳಿಗೆ ನೀಲಗಾರರು ಜಾತ್ರೆಯ ಸಂದರ್ಭದಲ್ಲಿ ಪೂಜಿಸುತ್ತಾರೆ. ಈ ಮಂಟೇಸ್ವಾಮಿ ಗದ್ದುಗೆಯಿರುವ ಬೊಪ್ಪೇಗೌಡನ ಪುರದಲ್ಲಿ ಈಗಲೂ ಪೂಜೆಗೊಳ್ಳುವ ಕಾಲಜ್ಞಾನ ವಚನಗಳಿವೆ. ಕೊಡೇಕಲ್ಲಿನಲ್ಲಿರುವ ಕಾಲಜ್ಞಾನದ ಕಟ್ಟನ್ನು ಬಿಚ್ಚಿ ಓದುವ ಸಂಪ್ರದಾಯವಿದೆ. ಆದರೆ ಕಪ್ಪಡಿ ಜಾತ್ರೆಯ ಸಂದರ್ಭದಲ್ಲಿ ಈ ವಚನಗಳ ಕಟ್ಟನ್ನು

ಪೂಜೆ ಮಾಡಿ ಬೊಪ್ಪೇಗೌಡನ ಪುರದಿಂದ ಕಪ್ಪಡಿಗೆ ಕೊಂಡೊಯ್ದು ಅಲ್ಲಿ ರಾಚಪ್ಪಾಜಿ ಗದ್ದುಗೆಯ ಮೇಲಿಟ್ಟು ಒಂದು ತಿಂಗಳು ನಡೆಯುವ ಜಾತ್ರೆಯಲ್ಲಿ ಪ್ರತಿದಿನ ಪೂಜಿಸುತ್ತಾರೆ.

ನೀಲಗಾರರು ಮಂಟೇಸ್ವಾಮಿಗಳು ಸಿದ್ಧರಾಗಿ ಈ ಪಥ ಆರಂಭಿಸಿದ ಕಾಲದಿಂದ ತಮ್ಮ ಕತೆಯನ್ನು ಆರಂಭಿಸುತ್ತಾರೆ. ಈ ಕಾರಣ ಮಂಟೇಸ್ವಾಮಿಗಳ ಬಾಲ್ಯದ ವಿವರಗಳಾಗಲಿ ಅವರ ತಾಯಿ-ತಂದೆಯಿಂದ ಜನ್ಮ ಪಡೆದ ವಿವರಗಳಾಗಲೀ ನೀಲಗಾರ ಕತೆಯಲ್ಲಿ ಸಿಗುವುದಿಲ್ಲ. ಮೂಲತಃ ನೀಲಗಾರರು ಮಂಟೇಸ್ವಾಮಿ ಒಂದು ಶಕ್ತಿ ಎಂದು ಪರಿಭಾವಿಸಿದ್ದಾರೆ. ಅಲ್ಲಮ ಮತ್ತು ಮಂಟೇಸ್ವಾಮಿಗಳು ಇವರ ಪ್ರಕಾರ ಅಭಿನ್ನರು ಮತ್ತು ಅತಿಮಾನುಷ ವ್ಯಕ್ತಿತ್ವ ಉಳ್ಳವರು.

ಮಂಟೇಸ್ವಾಮಿಗಳು ತಾವರ ಕುಲದಲ್ಲಿ ದುಂಬಿಯಾಗಿ ಹುಟ್ಟಿ ನರಮಾನವರಿಗೆ ಭಿತ್ತಿ ಬೆಳೆಯುವುದಕ್ಕೆ ಜಲಜಾಂಬವಂತನನ್ನು ಸಂಹರಿಸಿ ಭೂಮಿ ಪಡೆದು ತಮ್ಮ ಬೆವರಿನ ಮೂಲಕ ಎಣ್ಣೆಯಾಗಿಸಿ ಅದರಲ್ಲಿ ಜ್ಯೋತಿ ಪಡೆದು ಜ್ಯೋತಿಲಿಂಗಯ್ಯನಾಗಿ ಕಲ್ಯಾಣದಲ್ಲಿ ಅಲ್ಲಮನಾಗಿ ಅವತಾರ ತಾಳುತ್ತಾರೆ. ನಂತರ ಕಾವಿ ಕಲ್ಯಾಣ ಬರಿದುಮಾಡಿ ದಕ್ಷಿಣದ ಕಡೆ ಹೊರಟು ಬಿಡುತ್ತಾರೆ. ಇಲ್ಲಿ ಸಿಸುಮಕ್ಕಳನ್ನು ಪಡೆಯುವುದು, ಒಕ್ಕಲು ಪಡೆಯುವುದು ಇವೆರಡು ಅವರ ಪ್ರಧಾನ ಕ್ರಿಯೆಗಳಾಗಿವೆ. ಒಟ್ಟಿನಲ್ಲಿ ಮಂಟೇಸ್ವಾಮಿಗೆ ಮುಚ್ಚು ಪೂಜೆಯಾಗಿದೆ.

ಮಂಟೇಸ್ವಾಮಿಗಳಿಗೆ ನೀಲಗಾರರು 'ಉತ್ತರ ದೇಶದ ಸಿದ್ಧ' ಎಂದು ಕರೆಯುತ್ತಾರೆ. ಸಿದ್ಧ ಎನ್ನುವ ಪದ ಬಂದ ತಕ್ಷಣ ಇದರ ಹಿಂದೆ ಒಂದು ದೊಡ್ಡ ಪರಂಪರೆಯೇ ಇದೆ. ಉತ್ತರ ದಕ್ಷಿಣದಲ್ಲಿರುವ ಅವರ ಸಿಸುಮಕ್ಕಳೆಲ್ಲಾ ದಲಿತರು, ಕೆಳವರ್ಗದವರೇ ಆಗಿದ್ದಾರೆ. ಹಾಗಾಗಿ ಮಂಟೇಸ್ವಾಮಿಯ ಲೀಲೆಗಳನ್ನು ಹಾಡುವವರು ಹೆಚ್ಚು ದಲಿತರೇ ಆಗಿರುವುದನ್ನು ಕಾಣಬಹುದು. ಮಂಟೇಸ್ವಾಮಿ ನೀಲಗಾರರು ಇವತ್ತಿನ ಆಧುನಿಕತೆ ಸಂದರ್ಭದಲ್ಲಿಯೂ ಅವರ ಲೀಲೆಗಳನ್ನು ಹಾಡುತ್ತಾ ಉಳಿಸಿಕೊಂಡು ಬಂದಿರುವುದನ್ನು ನೋಡುವಾಗ ಆ ಪಂಥದ ಗಾಢ ಪ್ರಭಾವ ಎಷ್ಟಿದೆ ಎಂದು ಊಹಿಸಬಹುದಾಗಿದೆ.

ಬೊಪ್ಪೇಗೌಡನ ಪುರ ಕೆಲೂರು ಮತ್ತು ಆದಿ ಹೊನ್ನಾಯ್ಯನಹಳ್ಳಿಯಲ್ಲಿ ಮಂಟೇಸ್ವಾಮಿ ಗದ್ದುಗೆ ಇರುವುದನ್ನು ಗಮನಿಸಲಾಗಿದೆ. ಇಲ್ಲಿ ಪ್ರತಿವರ್ಷ ದೀಪಾವಳಿ ಸಂದರ್ಭದಲ್ಲಿ ಮಂಟೇಸ್ವಾಮಿ ಆರಾಧ್ಯರಾದ ನೀಲಗಾರರು ಜಾತ್ರೆಯನ್ನು ಏರ್ಪಡಿಸುವುದು ಮುಖ್ಯ ಸಂಗತಿಯಾಗಿದೆ. ಮಳವಳ್ಳಿ ತಾಲ್ಲೂಕಿನ ಆದಿಹೊನ್ನಾಯ್ಯನಹಳ್ಳಿ ಗ್ರಾಮದಲ್ಲಿ ಹೆಚ್ಚು ಕುರುಬ ನೀಲಗಾರರು ಇದ್ದು ಈ ಜಾತ್ರೆಯನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸುವುದನ್ನು ಕಾಣಬಹುದು. ಯಾವುದೇ ತೊಂದರೆ ಬಂದರೂ ಮಂಟೇಸ್ವಾಮಿಯನ್ನು ನೆನಪಿಸಿಕೊಂಡು ಆ ಸ್ವಾಮಿಗೆ ದೀಕ್ಷೆ ಪಡೆಯುತ್ತಾರೆ, ಆ ಮೂಲಕ ಒಕ್ಕಲಾಗುತ್ತಾರೆ.

ಹೀಗೆ ಮಂಟೇಸ್ವಾಮಿಗಳು ವಚನ ಚಳುವಳಿ ಸಂದರ್ಭದಲ್ಲಿ ಉದ್ಭವಿಸಿ ಕೆಳವರ್ಗದ ಜನರನ್ನು ತಮ್ಮ ಆರಾಧಕರಾಗಿ ಮಾಡಿಕೊಂಡು ತಮ್ಮ ದೈವಕ್ಕೆ ನಡೆದುಕೊಳ್ಳುವಂತೆ ದೀಕ್ಷೆ ಕೊಡಿಸಿ ನಂತರ ಒಕ್ಕಲು ಹೆಚ್ಚು ಮಾಡಿಕೊಳ್ಳುವುದನ್ನು ಕಾಣಬಹುದು.

ಇಂದಿಗೂ ಇವೆಲ್ಲಕ್ಕಿಂತ ಮುಖ್ಯವಾಗಿ ಕಲ್ಯಾಣದಲ್ಲಿ ಇದ್ದ ಆತ್ಮಲಿಂಗ ಸಾಕಾರವೆಂಬ ಪರ್ಯಾಯ ಚಿಂತನೆಯ ಒಂದು ಕವಲನ್ನು ಅಲ್ಲಮನ ನಂತರ ಬಲಪಡಿಸಿ, ನಿರ್ಲಕ್ಷ್ಯಗೊಂಡಿದ್ದ ಶೂದ್ರಾತಿಶೂದ್ರರನ್ನು ಒಟ್ಟುಗೂಡಿಸಿ ಒಂದು ಅರ್ಥಪೂರ್ಣ ಪಂಥ ಸ್ಥಾಪಿಸಿದ ಕೀರ್ತಿ ಇವರದು.

ಸಿದ್ದಪ್ಪಾಜಿ

ಮಂಟೇಸ್ವಾಮಿ ಪರಂಪರೆಯಲ್ಲಿ ಸಿದ್ದಪ್ಪಾಜಿ ಮೊದಲ ಶಿಷ್ಯನಾಗಿದ್ದು, ಮೊದಲ ನೀಲಗಾರನಾಗಿದ್ದಾನೆ. ಈ ಪರಂಪರೆಯಲ್ಲಿ ತುಂಬಾ ಪ್ರಸಿದ್ಧ ವ್ಯಕ್ತಿ. ಈತ ಈ ಪರಂಪರೆಯಲ್ಲಿ ಹಲವಾರು ಪವಾಡಗಳನ್ನು ಗೆದ್ದು ತಮ್ಮ ಒಕ್ಕಲುಗಳನ್ನು ಪಡೆದುಕೊಂಡಿದ್ದಾನೆ. ಸಿದ್ದಪ್ಪಾಜಿಯನ್ನು ಆರಾಧಿಸುವರು ಹೆಚ್ಚು ಕೊಳ್ಳೇಗಾಲದ ಸುತ್ತಮುತ್ತ ವಾಸವಾಗಿದ್ದಾರೆ. ಸಿದ್ದಪ್ಪಾಜಿ ದೈವಕ್ಕೆ ನಡೆದುಕೊಳ್ಳುವವರು ಮುಖ್ಯವಾಗಿ ಹರಿಜನರು, ಕುರುಬರು, ಮಡಿವಾಳ ಆಚಾರಿಗಳಾಗಿದ್ದಾರೆ. ಇವರು ಸಿದ್ದಪ್ಪಾಜಿಯವರನ್ನು ಅತ್ಯಂತ ಪೂಜ್ಯಭಾವದಿಂದ ಕಾಣುವುದನ್ನು ನೋಡಬಹುದಾಗಿದೆ.

ಸಿದ್ದಪ್ಪಾಜಿ ಗದ್ದುಗೆಯು ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಕಾವೇರಿ ನದಿ ಹರಿಯುವ ಮುತ್ತತ್ತಿಯ ಪಕ್ಕದಲ್ಲಿ ಚಿಕ್ಕಲೂರು ಎಂಬ ಗ್ರಾಮದಲ್ಲಿದೆ. ಇಲ್ಲಿ ಪ್ರತಿವರ್ಷಕ್ಕೊಮ್ಮೆ ಜನವರಿ ತಿಂಗಳಿನಲ್ಲಿ ಜಾತ್ರೆ ನಡೆಯುತ್ತದೆ. ಈ ಜಾತ್ರೆ ಪ್ರಾರಂಭವಾಗುವುದೇ ಈ ಆಚರಣೆಯಿಂದ. ಚಿಕ್ಕಲೂರಿಗೆ ಹೊಂದಿಕೊಂಡಂತೆ ಪಕ್ಕದಲ್ಲಿರುವ ಸುಂಡ್ರಳ್ಳಿ, ಸಾಗ್ಯ, ತೆಳ್ಳನೂರು, ಇಕ್ಕಡಳ್ಳಿ ಹರಿಜನರಿಗೆ ಚಂದ್ರಮಂಡಲ ಕಟ್ಟುವ ಅದಕ್ಕೆ ಬೇಕಾದ ಸಾಮಾನುಗಳನ್ನು ತರುವ ಜಾಬುದಾರಿಕೆಯಿದೆ. ಬೊಪ್ಪೇಗೌಡನ ಪುರದ ಗುರುಮಠದಿಂದ ಸ್ವಾಮಿಗಳು ತಮ್ಮ ಪರಿವಾರ, ಕಂಡಾಯ, ಬಸವ ಮುಂತಾದವುಗಳನ್ನು ಮುಂದೆ ಬಿಟ್ಟುಕೊಂಡು ಒಂದು ವಾರದ ಜಾತ್ರೆ ನಡೆಸಿಕೊಡುವುದಕ್ಕೆ ಬರುತ್ತಾರೆ. ಹೀಗೆ ಇವರು ಬಂದು ಗದ್ದುಗೆ ಸುಗ್ಗಿದ ಮೇಲೆ ಸುಂಡ್ರಳ್ಳಿಯ ಹರಿಜನರು ಈ ಚಂದ್ರಮಂಡಲ ಕಟ್ಟಲು ಹಸಿ ಬಿದಿರನ್ನು ತರಲು ಕಾಡಿಗೆ ಹೋಗುತ್ತಾರೆ. ಆಗ ತಾನೆ ತಂದ ಹಸಿ ಬಿದಿರು ಪಂಜು, ಹೂವು, ಪತ್ರೆಗಳಿಂದ ಕಡೆದು ನಿಲ್ಲಿಸುತ್ತಾರೆ. ಹೀಗೆ ಕಟ್ಟಿ ನಿಲ್ಲಿಸಿದ ಈ ಚಂದ್ರಮಂಡಲಕ್ಕೆ ಜಾತ್ರೆಗೆ ಬಂದ ಒಕ್ಕಲಿನವರು ಎಣ್ಣೆ-ತುಪ್ಪ ತಂದು ಒಪ್ಪಿಸುತ್ತಾರೆ. ಈ ರೀತಿ ಆದ ನಂತರ ರಾತ್ರಿ ಹತ್ತು ಹನ್ನೊಂದು ಗಂಟೆಗೆ ಚಂದ್ರಮಂಡಲ ಹಚ್ಚುವ ಆಚರಣೆ ಮೂಲಕ ಪೂಜೆ ಪ್ರಾರಂಭವಾಗುತ್ತದೆ. ಈ ರೀತಿ ಹಚ್ಚಿಸಿ ಉರಿಯುವಾಗ ಹೆಚ್ಚು ಉರಿ ಯಾವ ಕಡೆಗೆ ಇರುತ್ತದೆಯೋ ಆ ಕಡೆ ಸಂವೃದ್ಧಿಯೆಂದು ಒಕ್ಕಲಿನವರು ನಂಬುತ್ತಾರೆ.

ನೀಲಗಾರ ಪರಂಪರೆಯಲ್ಲಿ ಸಿದ್ದಪ್ಪಾಜಿಯೇ ಪ್ರಥಮರಾಗಿದ್ದಾರೆ. ಮೂಲತಃ ಈ ಒಕ್ಕಲುಗಳ ನಿರ್ಮಾಣ ಮಾಡಿದವನು ಸಿದ್ದಪ್ಪಾಜಿ ಎಂಬ ವಾದವಿದೆ. ಏಕೆಂದರೆ ಸಿದ್ದಪ್ಪಾಜಿಯೇ ಮೊದಲ ಶಿಷ್ಯನಾಗಿದ್ದಾನೆ.

ಸಿದ್ದ ಸಿದ್ದರಿಗೆಲ್ಲ ಅತಿಮುದ್ದು ಘನ ನೀಲಿ

ಸಿದ್ದಯ್ಯ ಸ್ವಾಮಿ ಬನ್ನಿ

ಪವಾಡ ಗೆದ್ದಯ್ಯ ನೀವೆ ಬನ್ನಿ

ಬಾರದ ಪವಾಡಕೆಲ್ಲ ಬಂದು ಒದಗೋ ಘನನೀಲಿ

ಸಿದ್ದಯ್ಯ ಶಿವನೇ ಬನ್ನಿ

ಈ ಮೇಲಿನ ಪಲ್ಲವಿಯನ್ನು ನೀಲಗಾರರು ಮಂಟೇಸ್ವಾಮಿ ಕಥೆಯಲ್ಲಿ ನಿರಂತರವಾಗಿ ಹಾಡುತ್ತಾರೆ. ಈ ಪಲ್ಲವಿ ಸಿದ್ದಪ್ಪಾಜಿಯೇ ಪ್ರಥಮ ನೀಲಗಾರ ಎನ್ನುವುದನ್ನು ಸ್ಪಷ್ಟೀಕರಿಸುತ್ತದೆ. ಈ ಪರಂಪರೆಯ ಆಚರಣಾ ಸಂಬಂಧ ಕ್ರಿಯೆಗಳೆಲ್ಲಾ ಸಿದ್ದಪ್ಪಾಜಿಯವರ ಕಥೆಯಲ್ಲಿ ಬರುತ್ತದೆ. ಸಿದ್ದಪ್ಪಾಜಿಗೆ ಮೊದಲ ನೀಲಗಾರ ದೀಕ್ಷೆ ಮಾಡುವಾಗ ಯಾವ ಕ್ರಮವಿತ್ತೊ ಅದೇ ಕ್ರಮ ಈ ಒಕ್ಕಲುಗಳಲ್ಲಿ ಈಗಲೂ ಕಂಡುಬರುತ್ತದೆ ಎಂದು ಗಾಯಕರು ಹೇಳುತ್ತಾರೆ. ಆದ್ದರಿಂದ ಗುರು-ಶಿಷ್ಯ ಪರಂಪರೆಯಲ್ಲಿ ಇವರಿಬ್ಬರ ಸಂಬಂಧ ಅನನ್ಯವಾದ್ದರಿಂದ ಮಹಾಕಾವ್ಯದಲ್ಲಿ ಸಿದ್ದಪ್ಪಾಜಿಯ ಕಥಾಭಾಗ ಕಾವ್ಯದ ಹೃದಯವಿದ್ದಂತೆ ಈಗಲೂ ಈ ಒಕ್ಕಲಿನವರು ಹೆಚ್ಚು ಹಾಡಿಸುವ ಭಾಗ ಸಿದ್ದಪ್ಪಾಜಿ ಪವಾಡದ ಕತೆಯೇ ಆಗಿದೆ. ಸಿದ್ದಪ್ಪಾಜಿಗೆ ಮಂಟೇಸ್ವಾಮಿ ಧರ್ಮಗುರು, ಸಿದ್ದಪ್ಪಾಜಿ ಮಂಟೇಸ್ವಾಮಿಯಂತೆಯೇ ವಿರಕ್ತ ಹಾಗೂ ಮಂಟೇಸ್ವಾಮಿಯ ಲೀಲೆಗಳನ್ನು ಜಗತ್ತಿಗೆ ಸಾರಿದ ಮೊದಲ ನೀಲಗಾರ ಧರ್ಮ ಗುರುವಾದ್ದರಿಂದ ಇಲ್ಲಿ ಅಲೌಕಿಕ ಆಧ್ಯಾತ್ಮಿಕವಾದ ವಿಚಾರಗಳು ಹೆಚ್ಚು ಪ್ರಸ್ತಾಪಿಸಲ್ಪಟ್ಟಿವೆ.

''ಕೆಂಪಾಚಾರಿ ಎಂಬ ಆಚಾರಿ ಹುಡುಗ ಸಿದ್ದಪ್ಪಾಜಿಯೆಂಬ ಸಿದ್ದನಾಗಿ ಪರಿವರ್ತಿತವಾಗುವ ಕತೆ ಮಂಟೇಸ್ವಾಮಿ ಕಾವ್ಯದಲ್ಲಿ ಅತ್ಯಂತ ಪ್ರಮುಖವಾದುದು, ''ಕೆಂಪಾಚಾರಿಯಾಗಿದ್ದವನು ಸಿದ್ದಪ್ಪಾಜಿಯಾಗಿ ಪರಿವರ್ತಿತವಾಗುವ ಅವಧಿ ಕಾವ್ಯ ದೃಷ್ಟಿಯಿಂದ ಸಾಂಸ್ಕೃತಿಕವಾದ ಕಾಲಘಟ್ಟಗಳ ದೃಷ್ಟಿಯಿಂದ ಅತ್ಯಂತ ಮುಖ್ಯವಾಗುತ್ತವೆ. ಪಾಂಚಾಳ ಜನವರ್ಗವನ್ನು ತನ್ನ ಪರಿಧಿಗೆ ಸೇರಿಸಿಕೊಳ್ಳುವ ಮೂಲಕ ಕಬ್ಬಿಣ ಉತ್ಪಾದಿಸುವ ವರ್ಗವೊಂದನ್ನು ಒಲಿಸಿಕೊಳ್ಳುವುದು ಮಂಟೇಸ್ವಾಮಿಯ ಅಪೇಕ್ಷೆ ಇದ್ದಂತೆ ಕಾಣುತ್ತದೆ. ಅವನು ಕೇಳುವ ಕಬ್ಬಿಣದ ಭಿಕ್ಷೆ ತೀರ ಸಾಂಕೇತಿಕವಾಗಿದೆ. ಕಾಡು ನಾಡಾಗಿ ಪರಿವರ್ತಿತವಾಗುತ್ತಿರುವ ಆಹಾರ ಸಂಗ್ರಾಹಕರು ಮತ್ತು ಪಶುಸಂಗೋಪಕರು ಕೃಷಿಯ ಕಡೆಗೆ ವಾಲುವ ಮತ್ತು ಈಗಾಗಲೇ ಕೃಷಿಕರಾಗಿದ್ದವರು ತಮ್ಮ ವ್ಯವಸಾಯಕ್ಕೆ ಕಬ್ಬಿಣದ ಉಪಯೋಗ ಮಾಡಿಕೊಳ್ಳುವ ಸಂಕ್ರಮಣ ಕಾಲದಲ್ಲಿ ಕಬ್ಬಿಣಕ್ಕೆ ಇದ್ದ ಬೇಡಿಕೆಯನ್ನು ಹಾಗೂ ಕಬ್ಬಿಣ ಉತ್ಪಾದಿಸುವವರಿಗೆ ಇದ್ದ ಹೆಚ್ಚುಗಾರಿಕೆಯನ್ನು ನಾವು ಗಮನಿಸಬೇಕಾಗುತ್ತದೆ. ಹೀಗಾಗಿಯೆ ಪಾಂಚಾಳರು ದೊರೆಗಳಾಗಿ ಮೆರೆಯುತ್ತಿರುತ್ತಾರೆ. ಇಂಥವರಿಂದ ಕಬ್ಬಿಣದ ಭಿಕ್ಷೆ ಪಡೆಯುವುದೆಂದರೆ ಅವರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವುದೆಂದೇ ಅರ್ಥ. ಒಂದು ರೀತಿಯಲ್ಲಿ ಇದು ಕಬ್ಬಿಣವನ್ನು ಕಂಡು ಹಿಡಿದು ಅದನ್ನು ಉತ್ಪಾದಿಸುವ ಜನವರ್ಗಕ್ಕೆ ಇರುವ ವ್ಯವಹಾರದ ಕಥೆ, ಕೆಂಪಾಚಾರಿಯ ಕುಲುಮೆಯ ವರ್ಣನೆ, ಅಲ್ಲಿನ ಅವನ ದರ್ಪ, ಅಹಂಕಾರ ಖಂಡಿತವಾಗಿಯೇ ಉತ್ಪಾದನಾ ವರ್ಗವೊಂದರ ಧೋರಣೆಯಾಗಿಯೇ ಕಂಡುಬರುತ್ತವೆ. ಆದರೆ ಅಂಥ ಕೆಂಪಾಚಾರಿ ಎಂಬ ಬಿಸಿರಕ್ತದ ಹುಡುಗನನ್ನು ಪಳಗಿಸಿ ತನ್ನಂಥ ಬೈರಾಗಿಯನ್ನಾಗಿ ಮಾಡುವುದು ಸುಲಭವೇ? ಮಂಟೇಸ್ವಾಮಿಯನ್ನು ಹಾಡುವ ಕಲಾವಿದರಿಗೆ ಈ ಕುಲುಮೆ ಕೇವಲ ಕುಲುಮೆಯಲ್ಲಿ ಕೆಂಪಾಚಾರಿ ಎಂಬ ಅಹಂಕಾರಿಯೊಬ್ಬ ತನ್ನ ದರ್ಪ ಕಳೆದುಕೊಂಡು ತನ್ನದೆಂಬ ಸರ್ವಸ್ವವನ್ನು ನಿರಾಕರಿಸಬಲ್ಲ

ತ್ಯಾಗಮೂರ್ತಿಯನ್ನಾಗಿ ಎರಕಗೊಳಿಸುವ ಕುಲುಮೆ ಅದು. ಹಾಗೆಯೇ ಕೆಂಪಾಚಾರಿ ಎಂಬ ಪಾಂಚಾಳ ಹುಡುಗ ಹನ್ನೆರಡು ವರ್ಷ ಕಾಳಿಂಗನ ಗುಹೆಯಲ್ಲಿದ್ದು ಸಿದ್ದಪ್ಪಾಜಿಯಾಗಿ ಪರಿವರ್ತಿತನಾಗಿ ಹೊರಬರುವ ದೃಶ್ಯ ಒಂದು ರಸಘಳಿಗೆ, ಚಾಮರಸನ ಪ್ರಭುಲಿಂಗಲೀಲೆಯ ಅಲ್ಲಮ ಗುಹೆಯಲ್ಲಿ ಜ್ಞಾನೋದಯ ಪಡೆಯುವ ಕ್ರಿಯೆಗೂ, ಇಲ್ಲಿ ಸಿದ್ದಪ್ಪಾಜಿಯ ಜ್ಞಾನೋದಯ ಕ್ರಿಯೆಗೂ ಸಾಮ್ಯತೆಗಳಿವೆ. ಗುಹಾವಾಸದ ವರ್ಣನೆ ಅಲ್ಲಿನ ಹಾವು ಚೇಳುಗಳನ್ನೇ ಆಹಾರವನ್ನಾಗಿ ಸೇವಿಸುವ ರೀತಿಗಳು ಅನಾದಿ ಕಾಲದ ಜೀವವೊಂದರ ಪಳೆಯುಳಿಕೆಗಳಂತೆ ಕಾಣುತ್ತವೆ. ಹಾಗೆಯೇ ಹಲಗೂರು ಪವಾಡದ ಸಂದರ್ಭದಲ್ಲಿ ನಿರ್ಮಿಸಲಾಗುವ ನಾನಾ ಬಗೆಯ ಉಕ್ಕಿನ ವಸ್ತುಗಳು ಅಂದಿನ ಕಬ್ಬಿಣ ತಯಾರಿಕೆಯ ವಿವಿಧ ಹಂತಗಳನ್ನು ಸಾಂಕೇತಿಕವಾಗಿ ಚಿತ್ರಿಸುತ್ತವೆ.''[೫]

ಒಟ್ಟಿನಲ್ಲಿ ಯಾವುದೇ ಮಹಾಕಾವ್ಯಗಳಲ್ಲಿ ಚಿತ್ರಿತವಾಗುವ ವೀರ ಪುರುಷನಂತೆ ಆರಂಭದಲ್ಲಿಯೂ ಸಿದ್ದಪುರುಷನಂತೆ ನಂತರದಲ್ಲಿಯೂ ಕಾಣಿಸಿಕೊಳ್ಳುವ ಸಿದ್ದಪ್ಪಾಜಿಯ ಲೌಕಿಕ ಬದುಕು ಮತ್ತು ಆಧ್ಯಾತ್ಮಿಕ ಉನ್ನತಿ ಕನ್ನಡ ಪರಂಪರೆಯಲ್ಲಿ ಬರುವ ಅಪರೂಪದ ಸಂಗತಿಯಾಗಿ ಕಾಣಿಸಿಕೊಳ್ಳುತ್ತದೆ.

ರಾಚಪ್ಪಾಜಿ

ಮಂಟೇಸ್ವಾಮಿ ಶಿಷ್ಯ ಪರಂಪರೆಯಲ್ಲಿ ರಾಚಪ್ಪಾಜಿ ಒಬ್ಬ. ತೋಪಿನ ಕಪ್ಪಡಿಯಲ್ಲಿ ಇವರ ಗದ್ದುಗೆಯಿದೆ. ಕಾವ್ಯದ ಪ್ರಕಾರ ರಾಚಪ್ಪಾಜಿಯವರನ್ನು ಮಂಟೇಸ್ವಾಮಿಯವರನ್ನು ಕಲ್ಯಾಣದಲ್ಲಿ ಶಿಶುಮಗನನ್ನಾಗಿ ಪಡೆದರು ಎಂದು ಹೇಳಲಾಗಿದೆ. ಬಸವಣ್ಣ ತನ್ನ ಕಾಯಕ ಸತ್ಯದಿಂದ ಕೈಲಾಸಕ್ಕೆ ನೇರಹೋಗುವಾಗ ರಾಚಪ್ಪ ಒಟ್ಟಿಗೆ ಇರುತ್ತಾನೆ. ಈ ಸಂದರ್ಭದಲ್ಲಿ ಮಂಟೇಸ್ವಾಮಿ ಬಸವಣ್ಣನ ಮೂಲಕವೇ ರಾಚಪ್ಪಾಜಿಗೆ ತಾಮ್ರದ ಚಪ್ಪೋಡು ಬರೆಸುತ್ತಾನೆ. ಅದೇನೆಂದರೆ ಬಸವಣ್ಣ ಒಬ್ಬನೇ ಕೈಲಾಸ ಹೋಗಿಬಿಡುತ್ತಾನೆ. ತನ್ನನ್ನು ಬಿಟ್ಟು ಹೋದ ಕಾರಣಕ್ಕಾಗಿ ಬಸವಣ್ಣನಿಗೆ ರಾಚಪ್ಪಾಜಿ ಶಾಪಕೊಡುತ್ತಾನೆ. ''ನೀನು ಮೂಕ ಬಸವನಾಗಿ ಧರೆಗೆ ಹುಟ್ಟು ಬಾ ಮಾದಿಗರು ಕೊಯ್ದುಕೊಂಡು ತಿನ್ನಲಿ ನಿನ್ನ ಹಗಲೆಲ್ಲಾ ಏರ್ ಕಟ್ಕಂಡು ಗೇಯ್ಮು ತಿನ್ಲಿ'' ಎಂದು ಶಾಪಕೊಡುತ್ತಾನೆ. ಈ ಕಾರಣದಿಂದಾಗಿಯೇ ಇವತ್ತಿಗೂ ಬಸವಣ್ಣನನ್ನು ಏರ್ ಕಟ್ಕಂಡು ಊಳುತ್ತಾರೆ. ಆದ್ದರಿಂದ ಈ ಶಾಪಕ್ಕೂ ಇದಕ್ಕೂ ಸಂಬಂಧವಿರಬಹುದು ಎಂದು ಭಕ್ತರು ನಂಬುತ್ತಾರೆ.

ನಂತರ ಮಂಟೇಸ್ವಾಮಿ ಕಪ್ಪಡಿಯನ್ನೇ ಕೈಲಾಸ ಮಾಡಿ ರಾಚಪ್ಪಾಜಿಗೆ ಒಪ್ಪಿಸುತ್ತಾನೆ. ನಂತರ ದೊಡ್ಡಮ್ಮತಾಯಿ ಮದುವೆ ಆಗುತ್ತಾನೆ. ಇದು ಕಾವ್ಯದಲ್ಲಿ ಕಾಣುವ ತುಣುಕು, ಆದರೆ ಚಾರಿತ್ರಿಕವಾಗಿ ಈತ ಕೊಡೇಕಲ್ಲು ಬಸವಣ್ಣನ ಮಗ ಎಂಬ ಮಾತೂ ಇದೆ. (ಸಾಂಸ್ಕೃತಿಕ ನಾಯಕರು ಎಂಬ ಭಾಗ ನೋಡಿ) ನೀಲಗಾರ ಸಮುದಾಯದಲ್ಲಿ ರಾಚಪ್ಪಾಜಿಯು ದೈವಸಂಕೇತವಾಗಿ ಆ ಸಮುದಾಯದ ಕುಟುಂಬದ ಹಿರಿಯ ವ್ಯಕ್ತಿಯ ಮೇಲೆ ಕಾಣಿಸಿಕೊಳ್ಳುವುದನ್ನು ಕಾಣಬಹುದು.

ಇಲ್ಲಿ ಮುಖ್ಯವಾಗಿ ರಾಚಪ್ಪಾಜಿಯನ್ನು ಕುರುಬರು, ಹರಿಜನರು ಈ ಒಕ್ಕಲಿನಲ್ಲಿ ಬಂದವರಾಗಿದ್ದಾರೆ. ಇವರು ಇಂದಿಗೂ ರಾಚಪ್ಪಾಜಿ ಗದ್ದುಗೆಯಿರುವ ಕಪ್ಪಡಿ ಜಾತ್ರೆಯ ಸಂದರ್ಭದಲ್ಲಿ ಕೆಲವು ಧಾರ್ಮಿಕ ಆಚರಣೆಗಳನ್ನು ಕಾಣಬಹುದು. ಅದರಲ್ಲಿ

ಮಾದಲಿಸೇವೆ, ಎದುರು ಸೇವೆ ಇನ್ನು ಮುಂತಾದ ಆಚರಣೆಗಳನ್ನು ನೀಲಗಾರ ಸಮುದಾಯದವರು ಅತ್ಯಂತ ಭಕ್ತಿಯಿಂದ ಆಚರಿಸುವುದನ್ನು ಗಮನಿಸಲಾಗಿದೆ.

ಈ 'ಪ್ರಭುದೇವರು' ಕಲ್ಯಾಣ ಪಟ್ಟಣದಿಂದ ಕೊಡೆಕಲ್ಲಿಗೆ ಬಂದರು. ಬೇಸಿಗೆ ಬಿಸಿಲು. ಆ ಕಲ್ಲಿನ ಬಳಿ ಅವರು ನಿಂತಾಗ ಸ್ವಾಮಿಯವರನ್ನು ನೋಡಿ ಕಲ್ಲೇ ಕೊಡೆಯಾಗಿ ಬಾಗಿತ್ತು. ಆಗ ಹುಲಿ ಚರ್ಮ ಹಾಸಿಕೊಂಡು, ಹುಲಿಯ ಚರ್ಮ ಹೊದ್ದುಕೊಂಡು ಬಲಮಗ್ಗುವಾಗಿ ಅವರು ಮಲಗಿದರು. ಫಲಾಹಾರದಯ್ಯನವರು ಚೆನ್ನಾಜಮ್ಮನವರೂ ಅವರ ಪಾದವಲ್ಲಿ ಪವಡಿಸಿದರು. ಆದರೆ ಕಿಡಿಗಣ್ಣ ರಾಜಪ್ಪಾಜಿಗೆ ನಿದ್ರೆ ಬರಲಿಲ್ಲ. ''ಇದೊಂದು ವಿದಿಯ ನಗರ ಇರ್ತದೆ. ಗಾಡಿಗರ ಮಕ್ಕಳೊಂದಿಗೆ ಗೋಲಿಗಜ್ಜುಗ ಆಡಿಕೊಂಡು ಬರಬೇಕು'' ಎಂದು ಅತ್ತ ಬಂದರು. ವಿಜಯನಗರದಲ್ಲಿ ಏಳುನೂರು ಗಾರುಡಿಗರ ಮಕ್ಕಳು ಅನ್ನ ಊಟಮಾಡಿ ದನಕುರಿಯ ಬಿಟ್ಟು ಕಂಡು ಒಳಗೆರೆಯಲ್ಲಿ 'ಇರಳೆಗೋಲಿ' ಆಡುತ್ತಿದ್ದರು. ಅವರ ಜೊತೆ ಆಟಕ್ಕೆ ಸೇರಿಕೊಂಡ ರಾಚಪ್ಪಾಜಿ ಅವರ 'ಇರಳೆಗೋಲಿ'ಗಳನ್ನೆಲ್ಲ ಗೆದ್ದುಕೊಂಡರು. ಆ ಮಕ್ಕಳು ತಮ್ಮ 'ಹೆತ್ತಯ್ಯ ಮುತ್ತಯ್ಯ'ರಿಗೆ ದೂರನ್ನು ಕೊಟ್ಟರು. ಏಳು ಸುತ್ತಿನ ಕೋಟೆಯನ್ನು ಹೊಕ್ಕು ನಮ್ಮ ಮಕ್ಕಳ 'ಇರಳೆಗೋಲಿ'ಗಳನ್ನು ಗೆದ್ದುಕೊಂಡಿರುವ ಈ ಪರದೇಶಿಗೆ ಒಂದು 'ಘನಮೋಡಿ' ಹಾಕಬೇಕು ಎಂದು ಏಳುನೂರು ಗಾರುಡಿಗರೂ ಊರ ಅಂಕಕ್ಕೆ ಬಂದರು. ಮೋಡಿಗೆ ರಾಚಪ್ಪಾಜಿಯವರೂ ಒಪ್ಪಿದರು.

''ಊರ ಅಂಕದೊಳಗೆ ಸೀತಾಳೆ ಚಪ್ಪರ ಹಾಕುತ್ತಾರೆ. ಸೀತಾಳೆ ಚಪ್ಪರದ ಮುಂದುಗಡೆ ಒಂದೊಂದು ಆಳುದ್ದ ಬಾವಿ ತೆಗಿಸ್ತಾರೆ. ಕಳ್ಳಿಹಾಲ ಎಕ್ಕದ ಹಾಲ ಬಾನಿಗೆ ತುಂಬಿಸ್ತಾರೆ. ನಡುಚಪ್ಪರದೊಳಗೆ ಕ್ವಾಣನೀಗ ಕುಡಿಯುತ್ತಾರೆ. ಕ್ವಾಣನ ತಲೆಯ ಮ್ಯಾಲೆ ರಾಗದೀವಿಗೆ ದಂಡೆಯೊಳಗೆ ಬಂಗಾರ ಮಡಗುತ್ತಾರೆ. ಈಗ ನಾವು ಹಾಕುವಂಥ ಮೋಡಿಯನ್ನು ಎತ್ತುಗೊಳ್ಳೊ ಪರದೇಶಿ'' ಎಂದರು. ''ಅಕ್ಕಿ ಮಂತ್ರಿಸಿ, ಇಡುವವರೆ ಬೇರೆ; ಏಳುನೂರು ಗಾಡಿಗರೂ 'ಪಂಪು' ವಿದ್ಯೆ ನಡೆಸುವರೆ, 'ಅಟ್ಟಸ್ಥಳ' ನಡಿಸ್ಯವರೆ, 'ಜಲಸ್ಥಳ' ನಡಿಸ್ಯವರೆ''[12] ಹೀಗೆ ಮೋಡಿಯನ್ನು ಹಾಕಿ ರಾಚಪ್ಪಾಜಿಯವರಿಗೆ ಸವಾಲು ಹಾಕಿದರು. ಈ ಈ ಮೋಡಿಯನ್ನು ಎತ್ತಿದರೆ ತಮ್ಮ ಬಳಿ ಇದ್ದ ಬಿರುದು ಭಿಕ್ಷವನ್ನೆಲ್ಲ ಕೊಟ್ಟು ಬಿಡುವುದಾಗಿ ಅವರು ಹೇಳಿದರು. ತಾವು ಸೋತರೆ ತಮ್ಮ ಬಳಿ ಇದ್ದ 'ಬಿರುದು ಭಿಕ್ಷ'ವನ್ನೆಲ್ಲ ಕೊಡುವುದಾಗಿ ಹೇಳುತ್ತಾರೆ. ರಾಚರಾಯರು ಆಗ ಮೋಡಿಯನ್ನು ಎತ್ತಲು ಅನುವಾದರು ಅವರು

''ಕಾಲಿಗೆ ಹುರಿಗೆ ಗೆಜ್ಜೆ ಕಟ್ಟಿ ಕುಣಿಯುತ್ತಾರೆ ರಾಚರಾಯ್ರು
ನಮ್ಮ ತಾಯಿ ಸುರಮ್ಮನವರೇ ನಿಮ್ಮ ಪಾದವೇ ಗತಿ
ನಮ್ಮ ತಂದೆ ಕೂಡಲ ಸಂಗಮದೇವರೆ ನಿಮ್ಮ ಪಾದವೇ ಗತಿ
ನಮ್ಮ ಸಾಕಿದರಲ್ಲಿ ನೀಲಮ್ಮನವರೇ
ಬಸವಣ್ಣನವರೇ ನಿಮ್ಮ ಪಾದವೇ ಗತಿ

ನನ್ನ ಮರ್ತ್ಯ ಲೋಕಕ್ಕೆ ಕರ್ಕಂಬಂದ್ರಲ್ಲ ಪ್ರಭುದೇವ

ನಿಮ್ಮ ಪಾದವೇ ಗತಿ''[39]

ಎಂದು ಎಲ್ಲರನ್ನು ನೆನೆಯುತ್ತ ತಮ್ಮ ರಂಗದಿಂದ ಅವರ ರಂಗಕ್ಕೆ ಗುಡುಗುಡನೆ ಓಡಿಹೋಗಿ, ಒಂದಾಳುದ್ದ ಬಾವಿಯಲ್ಲಿದ್ದ ಕಳ್ಳಿಹಾಲು ಎಕ್ಕದ ಹಾಲು ಎಲ್ಲವನ್ನು ಸೇವಿಸಿ ಆ ಬಾವಿಯಿಂದ ಮೇಲಕ್ಕೆ ಹಾರಿ, ಕೋಣನ ತಲೆಯ ಮೇಲಿದ್ದ 'ರಾಗದೀವಿಗೆ'ಯನ್ನು ಪಾದದಲ್ಲಿ ಒದೆದು ಅಲ್ಲಿಂದ ಬಂಗಾರವನ್ನು ಎತ್ತಿಕೊಂಡು ತಮ್ಮ ರಂಗಕ್ಕೆ ಬಂದು ಉನ್ಮತರಾಗಿ ಕುಣಿಯುತ್ತ ನಿಂತರು ರಾಚಪ್ಪನವರು.

ಮುಂದೆ ಗಾರುಡಿಗರಿಗೆ ರಾಚಪ್ಪನವರು ತಮ್ಮ ಶಕ್ತಿಯನ್ನು ತೋರಿದರು. ಗುರುಕೊಟ್ಟ ಜೋಳಿಗೆ ಅದರೊಳಗಿನ ಕಮಂಡಲವನ್ನು ತಮ್ಮ ರಂಗದಲ್ಲಿ ಇರಿಸಿ ಮೂರು ಬೆತ್ತದಲ್ಲಿ ಮಂಡಲವನ್ನು ಬರೆದರು. ಏಳುನೂರು ಗಾರುಡಿಗರು ಅಕ್ಕಿಯನ್ನು ಮಂತ್ರಿಸಿಸುತ್ತ ಬೂದಿಯನ್ನು ಮಂತ್ರಿಸುತ್ತ 'ಪಂತ ಪೌರುಷ'ದಿಂದ ಮೋಡಿ ಎತ್ತಲು ಬಂದರು. ರಕ್ತವನ್ನು ಕಕ್ಕಿ ಪ್ರಾಣವನ್ನು ಬಿಟ್ಟು ಎಲ್ಲರೂ ನೆಲದಲ್ಲಿ ಒರಗಿದರು.

ಗಾರುಡಿಗರ ಹೆಂಡತಿ ಮಕ್ಕಳ 'ಬಹಳ ದುಃಖ' ಕೋಟೆಕಲ್ಲಿನ ಬಳಿ ಮಲಗಿದ್ದ ಗುರುಪಾದಕ್ಕೆ ಬೇಗ ಅರಿವಾಯಿತು. ನಿದ್ರೆ ತಿಳಿದು ಮೇಲೆದ್ದ ಧರೆಗೆ ದೊಡ್ಡವರು 'ಏಳುವರ್ಷದ ಕಿಡಿಗಣ್ಣ ರಾಚರಾಯರು' ಏನಾದರೋ ಎಂದು ಹುಡುಕುತ್ತಾ 'ವಿಜಯನಗರ'ದ ಕಡೆ ಬಂದರು. ರಂಗದಲ್ಲಿ ರಾಚರಾಯರು ಗಾರುಡಿಗರ ಬಿರುದು ಭಿಕ್ಷೆಗಳನ್ನೆಲ್ಲ ಕಿತ್ತುಕೊಂಡು, ಕಣ್ಣಲ್ಲಿ ಕಿಡಿಕಾರುತ್ತ ಕುಣಿಯುತ್ತಿದ್ದಾರೆ.

ಧರೆಗೆ ದೊಡ್ಡವರನ್ನು ಕಂಡಕೂಡಲೆ ಗಾರುಡಿಗರ ಮಡದಿ ಮಕ್ಕಳು ಅವರ ಪಾದ ಹಿಡಿದರು. 'ನಾಕು ಪಾದ ಜೋಳಿಗೆ'ಯಿಂದ ಕಪ್ಪುಧೊಳ್ತ ತೆಗೆದು ಗಾರುಡಿಗರ ಮೇಲೆ ಚೆಲ್ಲಿದೊಡನೆ ಅವರೆಲ್ಲ ಎದ್ದು ಶರಣರಾದರು. ಅವರ ಸಮಸ್ತವನ್ನೂ ಗುರುಪಾದಕ್ಕೆ ಒಪ್ಪಿಸಿ ಸೋಲನ್ನು ಒಪ್ಪಿಕೊಂಡರು. ಆಗ ಧರಿಗೆ ದೊಡ್ಡವರು ಅವರ 'ಬಿರುದು ಬಾವಲಿ'ಗಳನ್ನೆಲ್ಲ ಅವರಿಗೆ ಹಿಂದಿರುಗಿಸಿ, ಏಳುನೂರು ಗಾರುಡಿಗರನ್ನೂ ಒಕ್ಕಲು ಪಡೆದು, ಅವರಲ್ಲಿದ್ದ 'ಮಾಯದ ಕಪ್ಪು ಮರೆಯಾಳದ ಬೂದಿ'ಯನ್ನು ಮಾತ್ರ ಅವರಲ್ಲಿ ಬಿಟ್ಟರೆ ರಾಜರನ್ನೆಲ್ಲ ಸುಟ್ಟು ಹಾಕುವರೆಂದು ನಾಲ್ಕು ಪಾದದ ಜೋಳಿಗೆಯಲ್ಲಿ ಮಡಗಿಕೊಂಡರು.

ಮಂಟೇಸ್ವಾಮಿಯಂತೆಯೇ ರಾಚಪ್ಪಾಜಿಗೂ ಮುಚ್ಚುಪೂಜೆ ಇದಕ್ಕೆ ದೇವಾಲಯವಿಲ್ಲ. ಹಾಗಾಗಿ ಇವರು ಮಂಟೇಸ್ವಾಮಿ ಶಿಷ್ಯ ಪರಂಪರೆಯಲ್ಲಿ ಅಗ್ರಗಣ್ಯರಾದವರು. ಇವರ ಬಗ್ಗೆ ಕಾವ್ಯದಲ್ಲಿ ಗಾಯಕರು ಅರ್ಥೈಸುವುದನ್ನು ಕಾಣಬಹುದು. ನೀಲಗಾರರು ಇವತ್ತಿಗೂ ರಾಚಪ್ಪಾಜಿಯವರನ್ನು ಒಂದು ದೈವತ್ವಕ್ಕೇರಿಸಿದವರು ಆಗಿದ್ದಾರೆ.

ದೊಡ್ಡಮ್ಮ ತಾಯಿ (ದುಡವುಳ್ಳ ದೊಡ್ಡಮ್ಮ)

ಈ ಪರಂಪರೆಯ ಸ್ತ್ರೀ ನೇತಾರರಲ್ಲಿ ದೊಡ್ಡಮ್ಮ ತಾಯಿ ಅಗ್ರಗಣ್ಯಳು. ಇವಳ ಗದ್ದುಗೆ ಮುಟ್ಟನಹಳ್ಳಿಯಲ್ಲಿದೆ. ಇವಳನ್ನು

ಮಂಟೇಸ್ವಾಮಿ ಮೈಸೂರು ಮನೆತನದಿಂದ ಪಡೆದರು ಎಂದು ಒಂದು ಪಠ್ಯ ಹೇಳಿದರೆ ಮತ್ತೊಂದು ಪಠ್ಯ ಕಾಗಿನೆಲೆಗೆ ಇವಳ ಹುಟ್ಟಿನ ಕತೆಯನ್ನು ನೀಲಗಾರ ತಂಡದವರು ಅತ್ಯಂತ ಹೃದಯಂಗಮವಾಗಿ ಚಿತ್ರಿಸುವುದನ್ನು ಕಾಣಬಹುದು. ಕಾವ್ಯದಲ್ಲಿ ದಳವಾಯಿ ರಾಚಪ್ಪಾಜಿಯವರಿಗೆ ಮಂಟೇಸ್ವಾಮಿ ದೊಡ್ಡಮ್ಮನನ್ನು ಮದುವೆ ಮಾಡಿಸುತ್ತಾರೆ. ಒಟ್ಟು ಪರಂಪರೆಯಲ್ಲಿ ಸಾಂಸ್ಕೃತಿಕ ನಾಯಕಿಯರು ಇದ್ದಾರೆ ಎಂಬುದು ಇಲ್ಲಿನ ಗಮನಾರ್ಹ ಸಂಗತಿಯಾಗಿದೆ.

ಮಂಟೇಸ್ವಾಮಿ ಕಾವ್ಯದಲ್ಲಿ ದೊಡ್ಡಮ್ಮ ಸಿದ್ದಪ್ಪಾಜಿಗೆ ಹಲಗೂರಿನಲ್ಲಿ ಕಬ್ಬಿಣದ ಭಿಕ್ಷೆ ತರುವಾಗ ನೈತಿಕ ಸ್ಥೈರ್ಯ ತುಂಬಿ ಅಂದರೆ ಕಾವ್ಯ ಅವನ್ನು ಸಿದ್ದಪ್ಪಾಜಿಯ ತಾಯಿ ಎನ್ನುವ ರೀತಿಯಲ್ಲಿ ಚಿತ್ರಿಸಿ ತಾಯ್ತನ ತುಂಬುವಂತೆ ಮಾಡುತ್ತದೆ. ಇವಳು ಮುಟ್ಟಾದ ಜಾಗ ಮುಟ್ಟನಹಳ್ಳಿ ಆಗುತ್ತದೆ. ಸ್ತ್ರೀ ಸಹಜವಾದ ಪ್ರಕ್ರಿಯೆಗಳಿಗೆ ಸಾಂಸ್ಕೃತಿಕ ವಿವರಗಳು ಹೇಗೆ ಸೇರಿಕೊಳ್ಳುತ್ತವೆ ಎನ್ನುವುದಕ್ಕೆ ಈ ಭಾಗ ಅತ್ಯುತ್ತಮ ನಿದರ್ಶನವಾಗಿದೆ. ಈ ನಾಯಕಿ ಅಲ್ಲಮನೊಡನೆ ಚರ್ಚಿಸುವುದಿಲ್ಲ. ತನ್ನ ಬೌದ್ಧಿಕ ಸಾಮರ್ಥ್ಯದಿಂದ ತನ್ನ ದೃಢ ನಿರ್ಧಾರದಿಂದ ದುಡವುಳ್ಳ ದೊಡ್ಡಮ್ಮ ತಾಯಿ ಆಗುತ್ತಾಳೆ. ಇಡೀ ಪರಂಪರೆಯಲ್ಲಿ ಸ್ತ್ರೀ ಪರವಾದ ಆಚರಣೆಗಳಲ್ಲಿ ಇವಳ ಪಾತ್ರ ಗಮನಾರ್ಹವಾಗಿ ಬೆಳೆಯುತ್ತದೆ. ಈ ಗಾಯಕ ಸಮೂಹ (ಜನಸಮೂಹ) ಅವಳ ತಾಯ್ತನದ ಅಗತ್ಯವನ್ನು ಎತ್ತಿ ಹಿಡಿಯುವ ಜೊತೆಯಲ್ಲೇ ಅವಳ ಪ್ರಕೃತಿ ಸಹಜವಾದ ಕ್ರಿಯೆಯಾಗಿ ಈ ಕತೆಗಳು ಸೇರಿಕೊಳ್ಳುತ್ತವೆ. ಒಬ್ಬ ಶಿಷ್ಟವರ್ಗ ಚಿತ್ರಿಸುವ ನಾಯಕಿಗೂ ಜನಪದ ಪರಂಪರೆಯ ನಾಯಕಿಯಾಗಿ ದೊಡ್ಡಮ್ಮನನ್ನು ಸೃಷ್ಟಿಸುವ ಬಗೆಗೂ ಇರುವ ಅಂತರಗಳನ್ನು ಈ ಪಾತ್ರದ ಮೂಲಕ ಕಾಣಬಹುದು.

ಹೀಗಾಗಿ ಗಾಯಕರು ದೊಡ್ಡಮ್ಮ ತಾಯಿಯನ್ನು ದುಡವುಳ್ಳ ದೇವತೆಯೆಂದು ಪರಿಗಣಿಸುತ್ತಾರೆ. ನೀಲಗಾರ ಸಮುದಾಯದ ಒಕ್ಕಲುಗಳಲ್ಲಿ ನಡೆಯುವ ಧಾರ್ಮಿಕ ಆಚರಣೆಗಳ ಸಂದರ್ಭದಲ್ಲಿ ದೊಡ್ಡಮ್ಮ ತಾಯಿ ಮನುಷ್ಯನ ಮೈಮೇಲೆ ಬರುವುದನ್ನು (ಗಣಬರುವುದು) ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಲಾಗಿದೆ. ಹಾಗಾಗಿ ಇವತ್ತಿಗೂ ನೀಲಗಾರರು ದೊಡ್ಡಮ್ಮ ತಾಯಿಯನ್ನು ಜಾತ್ರೆ ಸಂದರ್ಭದಲ್ಲಿ ಪೂಜಿಸುವುದನ್ನು ಕಾಣಬಹುದು.

ಫಲಹಾರದಯ್ಯ

ನೀಲಗಾರ ಪರಂಪರೆಯಲ್ಲಿ ಫಲಹಾರದಯ್ಯನು ಒಬ್ಬ. ಶಿಷ್ಯನಾಗಿದ್ದಾನೆ. ನೀಲಗಾರರು ಇವನ ಗದ್ದುಗೆಗಳನ್ನು ಪೂಜಿಸುತ್ತಾರೆ. ಇವರ ಗದ್ದುಗೆ ಬೊಪ್ಪೇಗೌಡನಪುರದಲ್ಲಿದೆ. ಮಂಟೇಸ್ವಾಮಿ ಕತೆಯಲ್ಲಿ ಮಡಿವಾಳ ಮಾಚಯ್ಯನ ಪ್ರಸಂಗವೇ ಈ ಫಲಹಾರದಯ್ಯ ಎನ್ನುವುದು ಸ್ಪಷ್ಟವಾಗುತ್ತದೆ. ಇವನು ಮಂಟೇಸ್ವಾಮಿಗೆ ವಾಗ್ದಾನ ಮಾಡಿದಂತೆ ಮಗನನ್ನು ಕತ್ತರಿಸಿ ಊಟಬಡಿಸುತ್ತಾರೆ. ಆಗ ಮಂಟೇಸ್ವಾಮಿ ಇವನ ಭಕ್ತಿ ಮೆಚ್ಚಿ ಮಗನನ್ನು ಬದುಕಿಸಿ ಅವನ ಕತ್ತೆ ಕೊಟ್ಟಿಗೆಯನ್ನು ಚಂದ್ರಶಾಲೆಯಾಗಿ ಪಡೆಯುತ್ತಾನೆ. ನೀಲಗಾರರು ಜಾತ್ರೆಯ ಸಂದರ್ಭದಲ್ಲಿ ಫಲಹಾರ ಸೇವೆಯನ್ನು ಮಾಡುವುದನ್ನು ಕಾಣಬಹುದಾಗಿದೆ.

ಕಾವ್ಯದಲ್ಲಿ ಮಂಟೇಸ್ವಾಮಿ ಕಾವಿ ಮಡಿ ಮಾಡುವ ಪ್ರಸಂಗ ಬರುತ್ತದೆ. ಮಾಚಯ್ಯ ತನ್ನ ಹೆಂಡತಿ ಮಲ್ಲಿಗೆ ಮಾದೇವಿಯ

ಶರೀರವನ್ನೇ ಮಡಿ ಸಾಧನವಾಗಿ ಮಾಡಿಕೊಂಡು ಮಂಟೇಸ್ವಾಮಿಗೆ ಕಾವಿ ಮಡಿ ಕೊಡುತ್ತಾನೆ. ಇದರ ಪ್ರತಿಫಲವಾಗಿ ಮಂಟೇಸ್ವಾಮಿಗಳು ಆತನಿಗೆ ಫಲಹಾರದಯ್ಯ ಎಂಬ ನಾಮಕರಣ ಮಾಡಿರುವುದನ್ನು ಗಮನಿಸಬಹುದು.

ಬಹುಶಃ ಈ ಪ್ರಸಂಗವು ನಂತರದ ಹಂತದಲ್ಲಿ ಸೇರಿಕೊಂಡಿರಬಹುದು. ಮದ್ಯ, ಮಾಂಸ ಮತ್ತು ಭಂಗಿಯನ್ನು ಯತೇಚ್ಛವಾಗಿ ಬಳಸುತ್ತಿದ್ದ ಈ ಪರಂಪರೆ ಮೇಲ್ವರ್ಗದವರ ದೃಷ್ಟಿಯಲ್ಲಿ ಕೀಳಾದುದು ಆಗಿತ್ತು. ಆ ಮೂಲಕ ಬಾಲಕನನ್ನು ಕೊಯ್ದು ಮಾಂಸಾಹಾರ ಅಡುಗೆ ಮಾಡುವ ವೈಪರಿತ್ಯಕ್ಕೆ ಕೊಂಡೊಯ್ದು ಅದನ್ನು ಮತ್ತೆ ಸಸ್ಯ ಆಹಾರವನ್ನಾಗಿ ಪರಿವರ್ತಿಸುವ ಕ್ರಿಯೆ ಇಲ್ಲಿ ನಡೆಯುತ್ತದೆ. ಸಸ್ಯ ಆಹಾರವನ್ನು ಇಷ್ಟಪಡುವ ಒಂದು ವರ್ಗ ಈ ಪ್ರಸಂಗವನ್ನು ಸೃಷ್ಟಿಸಿದಂತೆ ಕಾಣುತ್ತದೆ. ಇಷ್ಟಲ್ಲದೆ ಈ ಪ್ರಸಂಗವು ಹರಿಹರನ ಭಕ್ತ ಸಿರಿಯಾಳ ರಗಳೆಯನ್ನು ಅನುಕರಿಸಿದಂತೆಯೂ ಕಾಣುತ್ತದೆ. ಆದ್ದರಿಂದ ಇಂದಿಗೂ ನೀಲಗಾರ ಸಮುದಾಯದವರು ಫಲಹಾರದಯ್ಯನನ್ನು ಆರಾಧಿಸುತ್ತಾರೆ.

ನಿಂಗಯ್ಯ - ಚೆನ್ನಯ್ಯ

ಇವರು ಮುಖ್ಯವಾಗಿ ದಕ್ಷಿಣದಲ್ಲಿದ್ದ ದಲಿತ ಶರಣರು. ಈ ಶರಣರೂ ಕೂಡ ಮಂಟೇಸ್ವಾಮಿ ಪರಂಪರೆಗೆ ಸೇರಿದವರಾಗಿದ್ದಾರೆ. ಈ ದೈವಕ್ಕೆ ಹೆಚ್ಚು ಹರಿಜನರು ನಡೆದುಕೊಳ್ಳುತ್ತಾರೆ. ಇವರ ಗದ್ದುಗೆಗಳು ಕೊಳ್ಳೇಗಾಲ ತಾಲ್ಲೂಕಿನ ಕುರುಬನ ಕಟ್ಟೆಯಲ್ಲಿವೆ. ಮಂಟೇಸ್ವಾಮಿ ಶಿಷ್ಯ ಪರಂಪರೆಯಲ್ಲಿ ಇವರೂ ಕೂಡ ಒಬ್ಬರಾಗಿದ್ದಾರೆ. ನೀಲಗಾರರ ಪರಂಪರೆಯಲ್ಲಿ ನಡೆಯುವ ಎಲ್ಲಾ ಧಾರ್ಮಿಕ ಆಚರಣೆಗಳಲ್ಲಿ ಕಡ್ಡಾಯವಾಗಿ ಇವರ ಕಂಡಾಯಗಳು ಮಾತ್ರ ಇರಲೇಬೇಕು. ಮಂಟೇಸ್ವಾಮಿಗಳು ಇವರಿಗೆ ''ನಾನು ಮರೆಯ ದೇವ್ರ ಆಗ್ತೀನಿ ನೀವು ಮೆರೆಯ ದೇವ್ರಾಗಿ'' ಎಂದು ವರ ಕೊಡುತ್ತಾರೆ. ಇಂದಿಗೂ ನೀಲಗಾರರು ಮಂಟೇಸ್ವಾಮಿಯವರ ಶಿಷ್ಯ ಸಂಕೇತವಾಗಿ ಇವೆರಡು ಕಂಡಾಯಗಳನ್ನು ಹೊಸಮನೆಗೆ ಹೋಗುವಾಗ, ಶುಭ ಕಾರ್ಯಗಳಿಗೆ ಕಂಡಾಯಗಳನ್ನು ಕರೆಸಿ ಮನೆ ತುಂಬಿಸಿಕೊಳ್ಳುವುದನ್ನು ಇಂದಿಗೂ ಕಾಣಬಹುದು. ಚಿಕ್ಕಲೂರು, ಕಪ್ಪಡಿ, ಬೊಪ್ಪೇಗೌಡನಪುರ ಈ ಮೂರು ಕ್ಷೇತ್ರಗಳಲ್ಲಿ ಜಾತ್ರೆಗಳು ನಡೆಯುವಂತೆ ಇಲ್ಲಿ ಯಾವುದೇ ಜಾತ್ರೆ ನಡೆಯುವುದಿಲ್ಲ. ಆದರೆ ಪ್ರತಿ ಸೋಮುವಾರ ಶುಕ್ರುವಾರ ಈ ಒಕ್ಕಲಿನವರು ಪೂಜೆ ಮಾಡಿಸಿಕೊಂಡು ಹೋಗುವುದನ್ನು ಕಾಣಬಹುದಾಗಿದೆ.

ಚೆನ್ನಾಜಮ್ಮ

ನೀಲಗಾರ ಪರಂಪರೆಯ ಸ್ತ್ರೀ ನೇತಾರರಲ್ಲಿ ಚೆನ್ನಾಜಮ್ಮ ಅಗ್ರಗಣ್ಯಳು. ಇವರ ಗದ್ದುಗೆ ಕಪ್ಪಡಿಯಲ್ಲಿದೆ. ನೀಲಗಾರರು ಹಾಡುವ ಮಂಟೇಸ್ವಾಮಿ ಕಾವ್ಯದಲ್ಲಿ ರಾಚಪ್ಪಾಜಿ ಉತ್ತರದೇಶದಲ್ಲಿ ವಿಜಯನಗರದ ಗಾರುಡಿಗರನ್ನು ಗೆದ್ದು ಚೆನ್ನಾಜಮ್ಮನನ್ನು ಪಡೆಯುತ್ತಾರೆ. ವಿಜಯನಗರದ ರಣಗಾರುಡಿಗರು ಹಾಕುವ ರಣ ಮೋಡಿಯ ವರ್ಣನೆ ಚೆನ್ನಾಜಮ್ಮನನ್ನು ಪಡೆಯುವ ಭಾಗದಲ್ಲಿ ಅತ್ಯಂತ ಹೃದಯಂಗಮವಾಗಿ ಚಿತ್ರಿಸಿದ್ದಾರೆ. ದೊಡ್ಡಮ್ಮ ತಾಯಿಯವರು ಮುಟ್ಟನಹಳ್ಳಿಯಲ್ಲೇ ಕಾಲವಾದಾಗ ಚೆನ್ನಾಜಮ್ಮ ರಾಚಪ್ಪಾಜಿಯವರೊಡನೆ ಕಪ್ಪಡಿ ಹತ್ತಿರ ಹೋಗಿ ಗುರಿ ಮುಟ್ಟಿ ಗದ್ದುಗೆಯಾಗುತ್ತಾಳೆ ಎಂದು ನೀಲಗಾರರು ಹೇಳುವುದನ್ನು ಕಾಣಬಹುದಾಗಿದೆ.

ನೀಲಗಾರ ಪರಂಪರೆಯಲ್ಲಿ ಧರೆಗೆ ದೊಡ್ಡವರ ಕತೆಯನ್ನು ಬಿಟ್ಟರೆ ಉಳಿದ ಯಾವ ಕತೆಯಲ್ಲಿಯೂ ಚೆನ್ನಾಜಮ್ಮನ ಇತಿಹಾಸ ಸಿಗುವುದಿಲ್ಲ.

ಹೀಗಾಗಿ ನೀಲಗಾರ ಸಮುದಾಯದವರು ಚೆನ್ನಾಜಮ್ಮನನ್ನು ಆರಾಧಿಸುವುದನ್ನು ಕಾಣಬಹುದು. ಒಟ್ಟಿನಲ್ಲಿ ಮಂಟೇಸ್ವಾಮಿ ಪರಂಪರೆಯಲ್ಲಿ ಬರುವ ಯಾವ ದೈವಗಳಿಗೂ ಸಹ ದೇವಾಲಯ ಎನ್ನುವ ಪರಿಕಲ್ಪನೆ ಇರುವುದಿಲ್ಲ, ಮತ್ತೆ ಪ್ರತಿದಿವಸ ಯಾವುದೇ ಪೂಜೆ ಸಲ್ಲಿಸಲಾಗುವುದಿಲ್ಲ. ಅಂದರೆ ಮಂಟೇಸ್ವಾಮಿ ಪರಂಪರೆಯವರಿಗೆ ಮುಚ್ಚು ಪೂಜೆ ಮಾತ್ರ ಕಾಣಬಹುದಾಗಿದೆ. ಧಾರ್ಮಿಕ ಆಚರಣೆ ಸಂದರ್ಭದಲ್ಲಿ ಮಾತ್ರ ಈ ದೈವಗಳಿಗೆ ಹಣ್ಣು, ಕಾಯಿ ಇಟ್ಟು ಪೂಜಿಸುತ್ತಾರೆ. ಉಳಿದಂತೆ ಎಂದಿಗೂ ಪೂಜೆ ಇರುವುದಿಲ್ಲ. ಅದೆಲ್ಲಾ ಒಂದು ರೀತಿ ಕಾಡಿನಿಂದ ಆವೃತವಾಗಿ ಬಿಕೋ ಎನ್ನುತ್ತಿರುತ್ತದೆ.

ನೀಲಗಾರ ಪರಂಪರೆಯ ದೈವಗಳನ್ನು ಹೊರತುಪಡಿಸಿ ಇತರ ದೈವಗಳು

ದಕ್ಷಿಣ ಕರ್ನಾಟಕದ ಪ್ರತಿಯೊಂದು ಭಾಗದಲ್ಲಿಯೂ ಒಂದೊಂದು ಗ್ರಾಮದೇವತೆಗಳು ಇವೆ. ಅವುಗಳಲ್ಲಿ ಮುಖ್ಯವಾಗಿ ನೀಲಗಾರ ಮನೆತನದ ದೈವವೆಂದು ಪ್ರತಿಯೊಬ್ಬರ ಮನೆಯಲ್ಲಿ ಒಂದೊಂದು ಗ್ರಾಮದೇವತೆಯೂ ಇದ್ದೇ ಇದೆ. ನೀಲಗಾರರು ತಮ್ಮ ಮನೆದೈವವೆಂದು ಹಲವಾರು ಹೆಣ್ಣು ದೇವತೆಗಳನ್ನು ಆರಾಧಿಸುತ್ತಾರೆ.

ಜನಪದರಲ್ಲಿ ರೂಢಿಯಲ್ಲಿರುವ ಐತಿಹ್ಯಗಳಿಗನುಗುಣವಾಗಿ ಆದಿಮಾನವನಿಗೆ ತಾನು ಕಂಡ ಜಗತ್ತಿನ ಬಗೆಗೆ ಉಂಟಾದ ವಿಸ್ಮಯ ಭಯಗಳ ಹಿನ್ನೆಲೆಯಲ್ಲಿ ಅವನನ್ನು ಸೃಷ್ಟಿಸಿದ ದೈವವೊಂದಿರಬೇಕೆಂಬ ಭಾವನೆ ಬೆಳೆದು ಗ್ರಾಮದೇವತೆಗಳ ಕಲ್ಪನೆ ಬಂದಿರಬಹುದೆಂದು ಊಹಿಸಬಹುದು. ''ಪ್ರಪಂಚಕ್ಕೆಲ್ಲಾ ಹೊಣೆಗಾರನಾದ ದೇವರಿಗೆ ಕೈತುಂಬಾ ಕೆಲಸವಿರುವ ಕಾರಣ ಅವನ ಪ್ರತಿನಿಧಿಯಾಗಿ ಸಣ್ಣ ದೇವರೊಂದನ್ನು ಸ್ಥಾಪಿಸಿಕೊಳ್ಳುವ ಮಾನವ ಪ್ರಯತ್ನದಿಂದಾಗಿಯೂ ಗ್ರಾಮದೇವತೆಗಳು ಹುಟ್ಟಿಕೊಂಡಿರಬಹುದು. ಬಹುದೇವತಾರಾಧನೆಯ ಮೂಲವೂ ಬಹುಶಃ ಇದೇ ಆಗಿರಬೇಕೇನೊ''?[೬೪]

ನೀಲಗಾರ ಸಮುದಾಯದಲ್ಲಿ ತಮ್ಮ ಮನೆತನದ ದೈವ ಅಂದರೆ ಹೆಣ್ಣಿನ ತವರು ಮನೆಯ ದೇವತೆಗಳ ಹೆಸರುಗಳನ್ನು ಮಾತ್ರ ಕಾಣಬಹುದಾಗಿದೆ. ಇವುಗಳನ್ನು ಅವರು ಪೂಜಿಸುವುದಾಗಲಿ ಅಥವಾ ದೇವಸ್ಥಾನಕ್ಕೆ ಹೋಗುವುದಾಗಲಿ ಇಲ್ಲವೆನಿಸುತ್ತದೆ.

ಹೀಗೆ ನೀಲಗಾರ ಪರಂಪರೆಯಲ್ಲಿ ಕಂಡು ಬರುವ ದೈವಗಳನ್ನು ಮಾತ್ರ ಪ್ರಮುಖವಾಗಿ ಆರಾಧಿಸುತ್ತಾರೆ. ಆದರೂ ಇನ್ನುಳಿದಂತೆ ನೀಲಗಾರರ ಪ್ರತಿಯೊಂದು ಮನೆತನದಲ್ಲಿ ಮಾತೃದೇವತೆಗಳಿರುವುದನ್ನು ಕಾಣಬಹುದಾಗಿದೆ. ನೀಲಗಾರ ಪರಂಪರೆಯಲ್ಲಿ ಧಾರ್ಮಿಕ ಪರಂಪರೆಯಲ್ಲಿ ಇಲ್ಲದ ಹಲವಾರು ದೈವಗಳು ನೀಲಗಾರ ಮನೆತನದಲ್ಲಿ ಇರುವುದನ್ನು ಕಾಣಬಹುದಾಗಿದೆ. ಇವರು ಈ ದೈವವನ್ನು ಮನೆದೈವವೆಂದು ಕರೆದುಕೊಳ್ಳುತತಾರೆ. ಪ್ರತಿಯೊಂದು ಸಮುದಾಯದಲ್ಲಿ ಆಯಾಯ ಮನೆತನಗಳಿಗೆ ಒಂದೊಂದು ದೈವ ಇರಲೇಬೇಕು. ಹಾಗೆಯೇ ಇವರಲ್ಲಿ ಕೂಡ ಅನೇಕ ದೈವಗಳು ಕಂಡುಬರುತ್ತವೆ. ಹರಿಜನರು ಹೆಚ್ಚಿನ ಸಂಖ್ಯೆಯಲ್ಲಿರುವ ನೀಲಗಾರರ ಚೌಡಮ್ಮ, ರಾಕಸಮ್ಮ ಮನೆ ಮದ್ದೂರಮ್ಮ, ಕೋಣನಪೊರಿ ಮದ್ದೂರಮ್ಮ, ದಂಡಿನ ಮಾರಮ್ಮ ಮುಂತಾದ ಹೆಣ್ಣು ದೈವಗಳ ಹೆಸರುಗಳನ್ನು ಇಲ್ಲಿ ಕಾಣಬಹುದು.

ಮುಖ್ಯವಾಗಿ ನೀಲಗಾರ ಪರಂಪರೆಯಲ್ಲಿ ಹೆಣ್ಣು ದೈವವನ್ನು ಆರಾಧಿಸದಿದ್ದರೂ ಕೂಡ ಈ ದೈವಗಳ ಹುಟ್ಟಿಗೆ ಹಲವಾರು ಕಾರಣಗಳಿವೆ ಎಂಬುದನ್ನು ನೀಲಗಾರರು ಮಂಟೇಸ್ವಾಮಿ ಕತೆ ಹಾಡುವ ಸಂದರ್ಭದಲ್ಲಿ ಚಿತ್ರಿಸಿರುತ್ತಾರೆ. ಕಾವ್ಯದಲ್ಲಿ ಮಂಟೇಸ್ವಾಮಿಗಳು ಮಾರಿಯರನ್ನು ಗೆದ್ದು ತಮ್ಮವರಾಗಿಸಿಕೊಳ್ಳುತ್ತಾರೆ. ನಂತರ ಇವರನ್ನು ಪಾಂಚಾಳರ ವಿರುದ್ಧ ಬಳಸಿಕೊಳ್ಳುತ್ತಾರೆ. ಮಾರಿಯರು ಸ್ಫೋಟಗೊಂಡರೆ ಅವರೆಲ್ಲಾ ಒಂದೊಂದು ರೋಗವಾಗಿ ಕಾಡುವ ಶಕ್ತಿಯುಳ್ಳವರು, ಕಾಲರಾ, ಪ್ಲೇಗು, ವಾಂತಿ, ಭೇದಿ, ಹೊಟ್ಟೆಕಳ್ತ, ಹೆಗ್ಗಜ್ಜಿ, ಕಿರುಗಜ್ಜಿ ಧಡಾರ, ಅಮ್ಮ ಬೊಗಳಸನ್ನಿ, ಮೊಲ್ಲಾಗರ, ದೊಡ್ಡರೋಗ ಇತ್ಯಾದಿಗಳಿಂದ ದೈವಗಳು ಹುಟ್ಟಿರಬೇಕೆಂದು ಹೇಳುತ್ತಾರೆ. ಮಂಟೇಸ್ವಾಮಿಗಳು ಮಾರಿಯರನ್ನು ಕೂಗುವುದು ಈ ಹೆಸರಿನಿಂದಲೇ. ಆದ್ದರಿಂದ ಈ ಪರಂಪರೆಯಲ್ಲಿ ಹೆಣ್ಣು ದೈವಗಳು ಮನೆತನದ ದೈವಗಳಾಗಿದ್ದು ಅವುಗಳು ಕುಟುಂಬದ ಕಷ್ಟ ನಷ್ಟಗಳನ್ನು ಸುಧಾರಿಸುತ್ತವೆಂಬ ನಂಬಿಕೆ ನೀಲಗಾರ ಸಮುದಾಯದಲ್ಲಿದೆ.

ಇನ್ನು ಕೊನೆಯದಾಗಿ ನೀಲಗಾರ ಪರಂಪರೆಯ ದೈವಗಳನ್ನು ಬಿಟ್ಟು ನಂಜುಂಡಸ್ವಾಮಿ, ನಾರಾಯಣಸ್ವಾಮಿ, ಬೀರೇಶ್ವರ, ಮುಡುಕುತೊರೆ ಮಲ್ಲಯ್ಯ ಮುಂತಾದ ದೈವಗಳಿಗೆ ನಡೆದುಕೊಳ್ಳುವವರೂ ಇದ್ದಾರೆ. ಹಾಗೆಯೇ ಬಸವೇಶ್ವರ ದೈವಕ್ಕೆ ಹೆಚ್ಚು ನಡೆದುಕೊಳ್ಳುತ್ತಾರೆ. ಬಸವೇಶ್ವರನ ಸನ್ನಿಧಿಯಲ್ಲಿ ಸುಳ್ಳು ಹೇಳಬಾರದು ಕಳ್ಳತನ ಮಾಡಬಾರದು ಇನ್ನು ಮುಂತಾದ ಕೆಟ್ಟ ಕೆಲಸಗಳನ್ನು ಮಾಡಬಾರದು ಎಂದು ನೀಲಗಾರ ಸಮುದಾಯದವರು ಹೇಳುತ್ತಾರೆ.

೪ :೩ ಕುಲಪದ್ಧತಿ

ಒಂದು ಜನಾಂಗದಲ್ಲಿರುವ ವಿಶಿಷ್ಟ ಉಪ ಘಟಕಗಳಿಗೆ ಕುಲಗಳೆನ್ನುತ್ತಾರೆ. ಈ ಕುಲಗಳ ಹುಟ್ಟಿಗೆ ನಿರ್ದಿಷ್ಟ ಕಾರಣ ಹೇಳಲು ಸಾಧ್ಯವಿಲ್ಲ. ಒಂದೇ ಜನಾಂಗಕ್ಕೆ ಸೇರಿದ ಜನ-ಸಮುದಾಯವು ಸಾಂಸ್ಕೃತಿಕ-ಭೌಗೋಳಿಕ ಪರಿಸ್ಥಿತಿಯಿಂದಾಗಿ ಬೇರೆ ಬೇರೆ ಕಡೆ ವಾಸಿಸಲು ಪ್ರಾರಂಭಿಸಿದಾಗ ಅಂಥ ಒಂದೊಂದು ಗುಂಪು ಒಂದೊಂದು ಕುಲಗಳು ಆಗಿರಬೇಕು.

ಕುಲ ಎನ್ನುವುದು ಜನಪದ ಬದುಕಿನ ಒಂದು ವಿಶಿಷ್ಟ ಸಂಗತಿ. ಪ್ರಾದಿಮ ಕಾಲ ಕಳೆದು ಶಿಲಾಪೂರ್ವ ನವಶಿಲಾಯುಗಗಳು ಮೊದಲುಗೊಂಡು ಮಾನವ ಗುಂಪುಗಳು ವಿವಿಧ ಭೂ ಭೌಗೋಳಿಕ ಪ್ರದೇಶಗಳಿಗೆ ಚದುರಿ ವಿಭಿನ್ನ ವೃತ್ತಿ ಕೈಗೊಂಡಾಗ ತಮ್ಮ ತಮ್ಮ ಗುಂಪನ್ನು ಒಂದೊಂದು ಸಂಕೇತದ ಮೂಲಕ ಗುರುತಿಸಿಕೊಳ್ಳುತ್ತಾ ಬಂದರು. ಆಗ ಒಂದು ಮರ, ಒಂದುಪಕ್ಷಿ, ಒಂದು ಬಂಡೆ, ಒಂದು ಪಶುಪ್ರಾಣಿ ಅವರವರ ಗುಂಪಿನ ವಿಶಿಷ್ಟ ಗುರುತು-ಸಂಕೇತ. ಆ ಸಂಕೇತ ಅವರ ರಕ್ಷಣೆ ಪೋಷಣೆಗೆ ಆಧಾರವಾಗಿ ಕಾಲಾನಂತರ ಅದು ಅವರ ಕುಲಸಂಕೇತವಾಗಿ ರೂಪುಗೊಂಡಿತು. ಕುಲಸಂಕೇತ ಅವರ ಕೇವಲ ಗುರುತಿನ ಕುರುಹಾಗಿ ಉಳಿಯದೆ ಅದೊಂದು ಅವರ ಪಾಲಿಗೆ ಪವಿತ್ರ ವಸ್ತು ಎನ್ನುವ ನಂಬಿಕೆ ಬೆಳೆದು ಅದನ್ನೇ ಜನಪದ ವೃಂದ ಆರಾಧಿಸಲು ತೊಡಗಿತು. ಇದು ಜಾನಪದ ದೃಷ್ಟಿಯಿಂದ ತುಂಬಾ ವಿಶಿಷ್ಟ ಪ್ರಕ್ರಿಯೆಯಾಗಿದ್ದು ಅದನ್ನೇ ಕುಲಸಂಕೇತಾರಾಧನೆ ಎಂದು ಗುರುತಿಸಬಹುದಾಗಿದೆ.

ನೀಲಗಾರ ಸಮುದಾಯದವರು ಗೋತ್ರ ಬೆಡಗುಗಳನ್ನು ಕುಲಗಳೆಂದು ಕರೆಯುತ್ತಾರೆ ಮತ್ತು ಕುಲಗಳ ಮೂಲಕ ಗುರುತಿಸುತ್ತಾರೆ. ಮದುವೆ ಮುಂತಾದ ವಿಶೇಷ ಸಲುಗೆ-ಸಂಬಂಧ ಕಾರಣ ಕಟ್ಟುಗಳನ್ನು ಕುಲಗಳ ಆಧಾರದ ಮೇಲೆಯೇ ಮಾಡಿಕೊಳ್ಳುತ್ತಾರೆ.

ನೀಲಗಾರರಲ್ಲಿ ಪ್ರಚಲಿತವಿರುವ ಹಲವಾರು ಕುಲಗಳನ್ನು ಕ್ಷೇತ್ರಕಾರ್ಯದಿಂದ ತಿಳಿದುಕೊಳ್ಳಲಾಯಿತು. ಅವುಗಳನ್ನು ಈ ಕೆಳಕಂಡಂತೆ ಗುರ್ತಿಸಲಾಗಿದೆ.

ಭೂಮಿ ಕುಲ	ಹೂವು ಕುಲ
ತಾವರೆ ಕುಲ	ನಾರಾಯಣ ಸ್ವಾಮಿ ಕುಲ
ಗಾಣಿಗ ಕುಲ	ಓದು ಕುಲ
ಕರೂರ ಕುಲ	ಕುರುಬರ ಕುಲ
ಬೆಳ್ಳಿ ಕುಲ	ಶೆಟ್ಟರ ಕುಲ
ಕಣ್ಣು ಕುಲ	ಸೂರ್ಯ ಕುಲ
ಆನೆ ಕುಲ	ಈಳ್ಯೇದ ಕುಲ
ಚಿಲುಕರ ಕುಲ	ಮಣೇರ ಕುಲ
ಹಾಲು ಕುಲ	ನಾಗರ ಕುಲ
ಬಸವ ಕುಲ	ಕಡೇರ ಕುಲ
ಎಣ್ಣೆ ಕುಲ	ಪೆಟ್ಟಿಗೆ ಕುಲ
ಸಾಮ ಕುಲ	ಒಳ್ಳೇರು ಕುಲ
ಬಳಗಾರ ಕುಲ	ಮಾಲ ಕುಲ
ಕಣ್ಣಂತರ ಕುಲ	ಕೆಂಬಾರ ಕುಲ

ನೀಲಗಾರ ಸಮುದಾಯದಲ್ಲಿ ಕುರುಬ, ಉಪ್ಪಲಿಗ, ಮಡಿವಾಳ, ಹರಿಜನ, ಗಿರಿಜನ, ಗೌಡ, ಲಿಂಗಾಯಿತ ಜನಾಂಗದವರು ನೀಲಗಾರರಾಗಿದ್ದು ಈ ಮೇಲ್ಕಂಡ ಕುಲಗಳಲ್ಲಿ ಯಾವುದಾದರೂ ಒಂದು ಕುಲ ಇವರಿಗೆ ಇರಲೇಬೇಕು. ಇವರು ಕುಲಗಳನ್ನು ಚೆನ್ನಾಗಿ ರೂಢಿಗತವಾಗಿ ಹಿಂದಿನಿಂದಲೂ ಬೆಳೆಸಿಕೊಂಡು ಬಂದಿದ್ದಾರೆ.

ಈ ಪಟ್ಟಿಯ ಪ್ರಕಾರ ನೀಲಗಾರ ಸಮುದಾಯದಲ್ಲಿ ಒಟ್ಟು ೨೮ ಕುಲಗಳು ಇವೆ. ಅಪೂರ್ಣವಾಗಿದ್ದು ಇನ್ನೂ ಹಲವಾರು ಕುಲಗಳು ಇರಬಹುದು ಎಂಬ ಅಭಿಪ್ರಾಯವಿದೆ. ಅವುಗಳನ್ನು ಇನ್ನೂ ಗುರುತಿಸಬೇಕಾಗಿದೆ.

ಒಂದೇ ಕುಲದ ನೀಲಗಾರರು ಪರಸ್ಪರರಲ್ಲಿ ಮದುವೆ ಆಗಲು ಬರುವುದಿಲ್ಲ.

ಉದಾ : ಗಾಣಿಗರ ಕುಲದವರು ಗಾಣಿಗರ ಕುಲದ ಜೊತೆಗೆ ಮದುವೆ ಆಗುವುದು ನಿಷಿದ್ಧ. ಆದರೆ ಅವರ ದೇವರು ಒಂದೇ ಆಗಬಹುದು. ಈ ಕುಲಗಳಲ್ಲಿ ಶ್ರೇಷ್ಟ ಮತ್ತು ಕನಿಷ್ಠ ಎಂಬುದು ಇರುವುದಿಲ್ಲ ಅವರವರ ಕುಲಗಳು ಅವರಿಗೇ ಶ್ರೇಷ್ಟವಾಗಿರುತ್ತವೆ.

ನೀಲಗಾರರಲ್ಲಿ ಬೇರೆ ಬೇರೆ ನೀಲಗಾರ ಒಕ್ಕಲುಗಳಿಂದಲೂ ಮದುವೆ ಸಂಬಂಧ ಬೆಳೆಸುವುದಿಲ್ಲ. ಮಾದೇಶ್ವರ ನೀಲಗಾರರು ಮಂಟೇಸ್ವಾಮಿ ಒಕ್ಕಲುಗಳಲ್ಲಿ ಹೆಣ್ಣು ತರುವ ಹಾಗಿಲ್ಲ ಮತ್ತು ಕೊಡುವಂತಿಲ್ಲ ಅಥವಾ ಕುಲ ಬೇರೆ ಇದ್ದರೂ ಮದುವೆ ಆಗುವಂತಿಲ್ಲ. ಅದೇ ರೀತಿ ದಾಸಪ್ಪಗಳ ಒಕ್ಕಲುಗಳಲ್ಲಿ ಮಾದೇಶ್ವರ ಒಕ್ಕಲಿನವರು ಹೆಣ್ಣು ತರುವಂತಿಲ್ಲ ಹಾಗೆಯೇ ಮಂಟೇಸ್ವಾಮಿ ಒಕ್ಕಲಿನವರು ಇವರ ಒಕ್ಕಲುಗಳಲ್ಲಿ ಹೆಣ್ಣು ಕೊಡುವಂತಿಲ್ಲ ಮತ್ತೆ ತರುವಂತಿಲ್ಲ. ಇನ್ನು ಮುಡುಕು ತೊರೆ ಮಲ್ಲಯ್ಯ ಪಾರ್ವತಿ ಒಕ್ಕಲಿನವರು ಮಾದೇಶ್ವರರ ಒಕ್ಕಲಿನವರಲ್ಲಿ ಹೆಣ್ಣು ತರುತ್ತಾರೆ, ಕೊಡುತ್ತಾರೆ. ಮತ್ತೆ ಪಾರ್ವತಿ ಒಕ್ಕಲಿನವರು ಮಂಟೇಸ್ವಾಮಿ, ಸಿದ್ದಪ್ಪಾಜಿ ಒಕ್ಕಲುಗಳಲ್ಲಿ ಹೆಣ್ಣು ಕೊಡುವ ಮತ್ತು ತರುವ ಪ್ರಕ್ರಿಯೆ ಇರುವುದಿಲ್ಲ. ಒಟ್ಟಿನಲ್ಲಿ ಒಂದೇ ಕುಲದಲ್ಲಿ ಸಂಬಂಧ ಬೆಳಸದೆ ಬೇರೆ ಬೇರೆ ಕುಲದಲ್ಲಿ ಹೆಣ್ಣನ್ನು ತರಬಹುದು. ಇವರಲ್ಲಿ ಸಗೋತ್ರ ವಿವಾಹ ಪದ್ಧತಿ ರೂಢಿಯಲ್ಲಿರುವುದಿಲ್ಲ.

ನೀಲಗಾರರಲ್ಲಿ ಪ್ರಚಲಿತವಿರುವ ಕುಲಗೋತ್ರಗಳಿಗೆ ಒಂದೊಂದು ಪ್ರಾಣಿ, ಪಶುಪಕ್ಷಿ, ಗಿಡಮರ, ಹೂ ಬಳ್ಳಿ, ವ್ಯಕ್ತಿ ದೇವರು, ನಿರ್ಜಿವ ವಸ್ತು ಮುಂತಾದವುಗಳ ಹೆಸರಿರುವುದು ಕಂಡುಬರುತ್ತದೆ. ''ಕೆಲವು ಆದಿವಾಸಿಗಳು ಪಶು ಪಕ್ಷಿ ಗಿಡ ಬಳ್ಳಿ ಪ್ರಾಣಿ ಸೂರ್ಯ ಚಂದ್ರಾದಿಗಳು ಇತರ ಭೌತವಸ್ತುಗಳೂ ತಮ್ಮ ಮೂಲ ಪುರುಷರೆಂದು ತಿಳಿದು ಕುಲದೇವತೆಗಳೆಂದು ಪರಿಗಣಿಸಿ ವಿಶೇಷ ಗೌರವ ಸೂಚಿಸಿ ಪೂಜ್ಯ ಭಾವದಿಂದ ಅವುಗಳಿಗೆ ಆಗಾಗ್ಗೆ ಪೂಜೆ ಸಲ್ಲಿಸುವುದುಂಟು. ಅಷ್ಟೇ ಅಲ್ಲದೆ ವಿಶೇಷ ಸಂದರ್ಭಗಳಲ್ಲಿ ಹೊರತು ಆ ಪ್ರಾಣಿಗಳ ಮಾಂಸವನ್ನೇ ಆಗಲಿ ಆ ತರಕಾರಿಗಳನ್ನೇ ಆಗಲಿ ಸೇವಿಸುವುದಿಲ್ಲ ಈ ವಿಶೇಷ ಭಾವನೆ ಅನೇಕ ರೀತಿಗಳಲ್ಲಿ ವ್ಯಕ್ತವಾಗುತ್ತದೆ. ತಮ್ಮ ವಂಶಾವಳಿಯನ್ನು ಒಂದು ಪ್ರಾಣಿ, ಸಸ್ಯ ಅಥವಾ ಕಲ್ಲಿನಿಂದ ಸೂಚಿಸಿ ತಾವು ಆ ಮೂಲದಿಂದ ಅಥವಾ ಸಂತತಿಯಿಂದ ಬಂದವರೆಂದು ಹೇಳಿಕೊಳ್ಳುತ್ತಾರೆ. ಆ ಪ್ರಾಣಿ ಅಥವಾ ಸಸ್ಯವನ್ನು ಕುಲದೇವತೆಯ ಚಿಹ್ನೆ ಎಂದು ಕರೆಯುತ್ತಾರೆ. ಅವರಲ್ಲಿ ಆ ಜಾತಿಗೆ ಸೇರಿದ ಪ್ರಾಣಿ ಮತ್ತು ಸಸ್ಯಗಳನ್ನು ಕೊಲ್ಲಬಾರದು, ನಾಶಮಾಡಬಾರದು ಕೊಂದು ತಿನ್ನಬಾರದು ಎಂಬ ನಂಬಿಕೆ ಇರುತ್ತದೆ. ಆದರೆ ಕೆಲವು ವಿಶೇಷ ಸಂದರ್ಭಗಳಲ್ಲಿ ತಿಂದಲ್ಲಿ ಬಾಧಕವಿಲ್ಲ ಅವರು ಆ ಪ್ರಾಣಿಯ ಸಾವಿಗಾಗಿ ದುಃಖಪಡುವುದೂ ಶೋಕ ಸೂಚಿಸುವುದೂ ಉಂಟು.''[೨೫]

ಆ ಪ್ರಾಣಿ ವಸ್ತು, ಸಸ್ಯವನ್ನು ಕುಲದೈವ ಎಂದೂ ಅವುಗಳಲ್ಲಿ ನಂಬಿಕೆಯಿಟ್ಟಿರುವ ಜನರನ್ನು ಕುಲ ದೈವಾರಾಧಕರು ಎಂದೂ ಕರೆಯುತ್ತಾರೆ. ಕುಲ ದೈವಕ್ಕೂ ಮತ್ತು ಆ ಜನರಿಗೂ ಕೆಲವು ಸಾಮಾನ್ಯ ದೈಹಿಕ ಹಾಗೂ ಮಾನಸಿಕ ಗುಣಗಳು

ಇರುತ್ತವೆಯೆಂಬ ನಂಬಿಕೆ ಈ ಜನರಿಗಿದೆ. ಕುಲದೈವವನ್ನು ರಕ್ಷಕದೇವತೆಯೆಂದು ಕರೆಯುತ್ತಾರೆ. ಈ ಕಾರಣದಿಂದ ಕುಲದೈವದ ಗುರುತುಗಳನ್ನು ಜನರು ತಮ್ಮ ದೇಹದಲ್ಲಿ ತಾಯಿತಿಗಳ ರೂಪದಲ್ಲಿ ಧರಿಸುವುದೂ, ಹಚ್ಚೆ ಹಾಕಿಸಿಕೊಳ್ಳುವುದೂ ಉಂಟು. ಕುಲದೈವಗಳ ಸಂತತಿಯು ಬೆಳೆಯಲೆಂದು ಅನೇಕ ಸಂಸ್ಕಾರಗಳನ್ನು ಮಾಡುವುದೂ ಉಂಟು.

ಪೂರ್ವದಲ್ಲಿ ನೀಲಗಾರರು ಆಯಾ ಕುಲದವರೆಂದು ಗುರ್ತಿಸಿಕೊಳ್ಳಲಿಕ್ಕೆ ಪ್ರಾಣಿ ಪಕ್ಷಿಗಳನ್ನು ಸಾಕುವುದು ಅಥವಾ ಗಿಡ ಮರಗಳನ್ನು ತಮ್ಮ ಮನೆಯ ಮುಂದೆ ನೆಡುವುದು ಹೀಗೆ ಕೆಲವು ಸಂಪ್ರದಾಯ ನಂಬಿಕೆಗಳನ್ನು ಇಟ್ಟುಕೊಂಡಿದ್ದಾರೆ.

ಉದಾ : ಬಸವನ ಕುಲದವರು ಬಸವನನ್ನು (ಹಸು) ಸಾಕುವುದು, ತಾವರೆ ಕುಲದವರು ತಾವರೆ ಗಿಡವನ್ನು ಮನೆ ಮುಂದೆ ಬೆಳೆಸುವುದು, ಗಾಣಿಗರ ಕುಲದವರು ಎಣ್ಣೆ ತಯಾರಿಸುವುದು, ಹೂವಿನ ಕುಲದವರು ಹೂವುಗಿಡಗಳನ್ನು ನೆಡುವುದು ಹೀಗೆ ಸಂಪ್ರದಾಯ ನಂಬಿಕೆಗಳನ್ನು ಆಚರಿಸಿಕೊಂಡು ಬಂದಿದ್ದರು. ಇವುಗಳಿಂದ ಅವರ ಕುಲಗೋತ್ರಗಳನ್ನು ತಿಳಿದುಕೊಳ್ಳಲಿಕ್ಕೆ ಸುಲಭವಾಗುವುದೆಂದು ಅರಿತುಕೊಂಡಿರಬೇಕು. ಆದಿವಾಸಿಗಳಲ್ಲಿಯೂ ಈ ಪದ್ಧತಿ ರೂಢಿಯಲ್ಲಿತ್ತು ಎಂಬುದು ತಿಳಿದುಬರುತ್ತದೆ.

ನೀಲಗಾರರಲ್ಲಿ ಈ ಮೇಲಿನ ರೂಢಿ ಪದ್ಧತಿಯೂ ಇತ್ತೀಚೆಗೆ ಎಲ್ಲಿಯೂ ಕಾಣಸಿಗುವುದಿಲ್ಲ. ''ಭಾರತದ ಎಲ್ಲಾ ಕುಲ ದೈವಾರಾಧಕ ಗುಂಪುಗಳೂ ಕುಲದ ವ್ಯವಸ್ಥೆಯನ್ನು ಅನುಸರಿಸಿ ಹೊರ ಬಾಂದವ್ಯವನ್ನು ಹೊಂದಿರುತ್ತದೆ. ಕುಲ ಅಕಸ್ಮಾತ್ ವಿಶಾಲವಾಗಿ ಅಭಿವೃದ್ಧಿ ಹೊಂದಿದಾಗ ಅದು ಅನೇಕ ಪಂಗಡಗಳಾಗಿ ಒಡೆಯುತ್ತದೆ ಮೊದಲಿನ ಕುಲವನ್ನು ಹುಲಿ ಎಂದು ಕರೆದಿದ್ದರೆ ಒಡೆದು ಸಣ್ಣ ಪಂಗಡಗಳಾಗಿರುವ ಕುಲಗಳನ್ನು ಹುಲಿಯ ಬಾಲ, ಹುಲಿಯ ತಲೆ, ಹುಲಿಯ ಉಗುರು, ಹುಲಿಯ ಹಲ್ಲು ಮುಂತಾಗಿ ಕರೆಯಬಹುದು. ಕೆಲವು ವೇಳೆ ಒಬ್ಬ ವ್ಯಕ್ತಿಗೆ ಒಂದು ಪ್ರಾಣಿ ಅಥವಾ ಮರವು ರಕ್ಷಣೆ ನೀಡಿರಬಹುದು. ಉದಾಹರಣೆಗೆ ಕ್ರೂರ ಮೃಗಗಳು ಅಟ್ಟಿಸಿಕೊಂಡು ಬಂದಾಗ ವ್ಯಕ್ತಿಯು ಮರವನ್ನು ಹತ್ತುತ್ತಾನೆ, ಮಳೆ ಬಂದಾಗ ಮರದಡಿಯಲ್ಲಿ ನಿಲ್ಲುತ್ತಾನೆ. ಮರದಿಂದ ಆತ ರಕ್ಷಣೆ ಪಡೆದಿದ್ದರಿಂದ ಆ ಜಾತಿಯ ಮರದ ಬಗೆಗೆ ಅವನಿಗೆ ಪೂಜ್ಯ ಭಾವನೆ ಬರುತ್ತದೆ. ಹಾಗೆಯೇ ಹಸುವಿನಿಂದ ತನ್ನ ದಿನನಿತ್ಯದ ಅವಶ್ಯಕತೆಗಳನ್ನು ಪೂರೈಸಿ ಕೊಳ್ಳುತ್ತಾನೆ ಹೀಗೆ ರಕ್ಷಣೆಯನ್ನು ಪಡೆದಾಗ ಸ್ನೇಹಭಾವನೆ ಮೂಡಿ ಅನಂತರ ಪೂಜ್ಯ ಭಾವನೆಯುಂಟಾಗುತ್ತದೆ. ಬಹಳ ದಿನಗಳ ಅನಂತರ ಆ ಪ್ರಾಣಿ ಇಲ್ಲವೆ ಆ ಮರ ಕುಲದೈವವಾಗಬಹುದು.''[೨೬]

ಈ ರೀತಿ ಕೆಲವು ತಿನ್ನಬಹುದಾದ ಸಸ್ಯ ಹಾಗೂ ಪ್ರಾಣಿಗಳನ್ನು ಜನರು ಸಹಕಾರದ ಆಧಾರದ ಮೇಲೆ ಹಂಚಿಕೊಂಡಿದ್ದಾರೆ ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ''ಫ್ರೇಜರ್‌ನು ಇದರ ಬಗ್ಗೆ ಈ ರೀತಿ ಅಭಿಪ್ರಾಯಪಟ್ಟಿದ್ದಾನೆ. ಆಸ್ಟ್ರೇಲಿಯಾದ ಆದಿವಾಸಿಗಳಲ್ಲಿ ಸ್ತ್ರೀಯು ಗರ್ಭಿಣಿಯಾದಾಗ ಅದರ ಬಗ್ಗೆ ಅವಳಿಗೆ ತಿಳುವಳಿಕೆಯಿಲ್ಲದುದರಿಂದ ಎಷ್ಟೋ ದಿನಗಳಾದ ಮೇಲೆ ಆಕೆಗೆ ತಾನು ಗರ್ಭಿಣಿಯಾಗಿದ್ದೇನೆ ಎನ್ನುವುದು ತಿಳಿಯುತ್ತಿತ್ತು, ಹಾಗೆ ತಿಳಿದಾಗ ತನಗೆ ಅತಿ ಹತ್ತಿರವಿದ್ದ ಪ್ರಾಣಿ ಇಲ್ಲವೇ ಸಸ್ಯವೇ ಇದಕ್ಕೆ ಕಾರಣವೆಂದು ತಿಳಿಯುತ್ತಿದ್ದಳು.''[೨೭]

ಈ ಯಾವುದೇ ಆಕರಗಳನ್ನು ಬಳಸದೇ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ದೊರೆತ ೨೮ ಕುಲಗಳನ್ನು ಮಾತ್ರ ವಿವರಿಸಲಾಗಿದ್ದು ಇನ್ನೂ ಕೆಲವು ಕುಲಗಳು ಇರಬಹುದು ಆದರೆ ತಿಳಿದಿರುವುದು ಇಷ್ಟು ಮಾತ್ರವಾಗಿದೆ. ಪ್ರತಿಯೊಂದು ಕುಲಗಳಿಗೆ ಈ ಕೆಳಗಿನಂತೆ ತಮ್ಮದೇ ಆರಾಧ್ಯ ಮನೆ ದೈವಗಳಿವೆ.

ಬೆಡಗು	ದೇವರು
ಭೂಮಿ ಕುಲ	ರಾಕಸಮ್ಮ
ಜೆಳ್ಳಿ ಕುಲ	ಮದ್ದೂರಮ್ಮ
ಆನೆ ಕುಲ	ಬೀರೇಶ್ವರ
ತಾವರೆ ಕುಲ	ದಂಡಿನ ಮಾರಿ
ಗಾಣಿಗ ಕುಲ	ಠಾವಳೇಶ್ವರ
ಕಣ್ಣೀರ ಕುಲ	ಹುಚ್ಚಲಮ್ಮ
ಸಾಮಕುಲ	ಕುಂಟೀ ಬೋರಯ್ಯ
ಕೆಂಬಾರ ಕುಲ	ಸಿದ್ದಪ್ಪಾಜಿ
ಹೂವು ಕುಲ	ಚೌಡಮ್ಮ
ನಾರಾಯಣ ಕುಲ	ನಂಜುಂಡಸ್ವಾಮಿ
ಶೆಟ್ಟರು ಕುಲ	ರಾಚಪ್ಪಯ್ಯ
ಸೂರ್ಯ ಕುಲ	ಮಂಟೇಸ್ವಾಮಿ
ಮಣೇರ ಕುಲ	ಈಶ್ವರ ಪಾರ್ವತಿ
ಕಣ್ಣಂತರ ಕುಲ	ಮನೆಮದ್ದೂರಮ್ಮ

ಪ್ರತಿಯೊಂದು ಜನಾಂಗಗಳಲ್ಲಿಯೂ ಕುಲಗಳು ಇರಲೇಬೇಕು, ಕುಲಗಳಿಲ್ಲದ ಜಾತಿಗಳು ಸಿಗುವುದು ತುಂಬಾಕಷ್ಟ. ಹಾಗೆಯೇ ಆಯಾ ಕುಲಗಳಿಗೆ ಯಾವುದಾದರೂ ಮನೆದೇವರು ಇರಲೇಬೇಕು ಅದೇ ರೀತಿ ನೀಲಗಾರ ಸಮುದಾಯದವರಿಗೆ ಆಯಾ ಕುಲದ ಸೂಚಿತ ದೇವರುಗಳಿಗೆ ಆಯಾ ಬೆಡಗಿನವರು ವಿಶೇಷವಾಗಿ ನಡೆದುಕೊಳ್ಳುತ್ತಾರೆ.

ನೀಲಗಾರರಲ್ಲಿ ಪ್ರಾದೇಶಿಕ ವ್ಯತ್ಯಾಸಗಳ ಕಾರಣದಿಂದ ಬೆಡಗುಗಳು ಆಗಿರುವುದುಂಟು. ಹಾಗೆಯೇ ಒಂದೊಂದು

ಪ್ರದೇಶದಲ್ಲಿ ಹೆಚ್ಚು ಜನರು ಒಂದೇ ಒಂದೇ ಕುಲದವರು ಇರುವುದು ಕಂಡುಬರುತ್ತದೆ. ಹೀಗೆ ಕುಲಸಂಕೇತಗಳು ಅವುಗಳ ಆರಾಧನೆಯ ವಿಧಿಗಳಿಂದ ಈ ಸಂಸ್ಕೃತಿಯು ಮಹತ್ವದ್ದಾಗಿದೆ. ಹಾಗೂ ನೀಲಗಾರರು ಪೂಜಿಸುವ ಕುಲಸಂಕೇತಗಳು ಈಗಲೂ ಉಳಿದುಬಂದಿವೆ ಮತ್ತು ನಮ್ಮನ್ನು ಆದಿಮ ಸಂಸ್ಕೃತಿಯತ್ತ ಕೊಂಡೊಯ್ಯುತ್ತವೆ.

ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ನೀಲಗಾರ ಸಮುದಾಯದವರು ಕಳೆದ ಐದಾರು ಶತಮಾನಗಳ ಈಚೆಗೆ ಮೇಲೆ ನಾವು ಚರ್ಚಿಸಿದ ಸಾಂಸ್ಕೃತಿಕನಾಯಕ-ನಾಯಕಿಯರನ್ನು ದೈವಗಳೆಂದು ಆರಾಧಿಸುತ್ತಾರಾದರೂ ಅದಕ್ಕಿಂತ ಮೂಲದಲ್ಲಿ ಇವರು ಮಾತೃದೇವೋಪಾಸಕರಾಗಿದ್ದರು ಎಂಬುದನ್ನು ಇವತ್ತಿಗೂ ಪ್ರಚಲಿತವಿರುವ ಹೆಣ್ಣು ದೇವತೆಗಳ ಆರಾಧನೆಯಿಂದ ಖಚಿತಪಡಿಸಬಹುದು. ಇದರ ಜೊತೆಗೆ ಜನಪ್ರಿಯ ದೈವಗಳೆನಿಸಿದ ನಂಜುಂಡೇಶ್ವರ, ಮಲ್ಲಿಕಾರ್ಜುನ ಬಿಳಿಗಿರಿರಂಗ, ಹನುಮಂತ ಮತ್ತು ತಿರುಪತಿ ವೆಂಕಟರಮಣನನ್ನು ಕಾಲಾನಂತರದಲ್ಲಿ ಪೂಜಿಸಿದಂತೆ ಕಾಣುತ್ತದೆ.

ಅಡಿಟಿಪ್ಪಣಿಗಳು

೧. ಜವರೇಗೌಡ ದೇ, ಜಾನಪದ ಅಧ್ಯಯನ ೧೯೭೬, ಪು. ೩೨೧

೨. ಪುರುಷೋತ್ತಮ ಬಿಳಿಮಲೆ, ಕೊರಗರ ಸಂಸ್ಕೃತಿ, ೧೯೯೩, ಪು.೪೦

೩. ಹರಿಲಾಲ್ ಕೆ. ಪವಾರ್, ಕರ್ನಾಟಕದ ಹೆಳವರು ಒಂದು ಅಧ್ಯಯನ, ೧೯೯೫, ಪು.೧೧೪

೪. ಚಕ್ಕೆರೆ ಶಿವಶಂಕರ, ಗೊರವರ ಸಂಸ್ಕೃತಿ, ೧೯೯೩, ಪು.೨೩

೫. ಕರಿಶೆಟ್ಟಿ ರುದ್ರಪ್ಪ, ಮ್ಯಾಸನಾಯಕರು ಒಂದು ಜನಾಂಗಿಕ ಅಧ್ಯಯನ, ೧೯೯೫, ಪು.೪೭

೬. ಅದೇ, ಪು. ೪೭

೭. ಚಕ್ಕೆರೆ ಶಿವಶಂಕರ, ೧೯೯೩, ಪು.೨೩

೮. ಚೆನ್ನಬಸಪ್ಪ ಗೊ.ರು. ಗ್ರಾಮಜ್ಯೋತಿ, ೧೯೭೮, ಪು.೩೭೯

೯. ಹರಿಲಾಲ್ ಕೆ. ಪವಾರ್, ಕರ್ನಾಟಕದ ಹೆಳವರು ಒಂದು ಅಧ್ಯಯನ, ೧೯೯೫, ಪು.೧೧೮

೧೦. ಬೆನಕನಹಳ್ಳಿ ಜಿ. ನಾಯಕ್, ಕಿಳ್ಳೆಕ್ಯಾತರು, ೧೯೮೪, ಪು.೩೫

೧೧. ಪುರುಷೋತ್ತಮ ಬಿಳಿಮಲೆ, ಕರಾವಳಿ ಜಾನಪದ, ೧೯೯೦, ಪು. ೧೨೫

೧೨. ಸ.ಚಿ. ರಮೇಶ್, ದಕ್ಷಿಣ ಕರ್ನಾಟಕದ ಉಪ್ಪಾರರ ಜಾನಪದ ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ (ಅಪ್ರಕಟಿತ) ೧೯೯೬, ಪು. ೭೩

೧೩. ತೀ.ನಂ. ಶಂಕರನಾರಾಯಣ, ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ೧೯೮೨, ಪು.೧೫೫

೧೪. ಪುರುಷೋತ್ತಮ ಬಿಳಿಮಲೆ, ೧೯೯೦, ಪು. ೨೩

೧೫. ಅದೇ, ಪು.೧೩೦

೧೬. ಜವರೇಗೌಡ ದೇ, ೧೯೩೯, ಪು.೩೩೮

೧೭. ನಾಗರಾಜಯ್ಯ ಹಂ.ಪ, ಕರ್ನಾಟಕದ ಜಾತ್ರೆಗಳು, ೧೯೮೫, ಪು.೯

೧೮. ವೆಂಕಟೇಶ ಇಂದ್ವಾಡಿ, ಮಂಟೇಸ್ವಾಮಿ ಪರಂಪರೆ, ೧೯೯೯

೧೯. ಸಿದ್ದಲಿಂಗಯ್ಯ, ಜಾನಪದ, ಪು. ೫೨

೨೦. ಬೋರಲಿಂಗಯ್ಯ ಹೀ.ಚಿ. ಮಂಟೇಸ್ವಾಮಿ, ೧೯೯೭, ಪು. XVII

೨೧. ಜೀ.ಶಂ. ಪರಮಶಿವಯ್ಯ, ೧೯೭೯, ಪು. ೧೩೫

೨೨. ಅದೇ, ಪು. ೧೩೫

೨೩. ಬೈರಮಂಗಲ ರಾಮೇಗೌಡ, ೧೯೭೮, ಪು.೨೮೯

೨೪. ಎಂ.ನಂಜಮ್ಮಣ್ಣಿ, ಸಾಮಾಜಿಕ ಮಾನವಶಾಸ್ತ್ರ, ೧೯೭೧, ಪು.೫೨

೨೫. ಅದೇ, ಪು. ೫೫

೨೬. ಅದೇ, ಪು. ೫೫

ಅಧ್ಯಾಯ ೫

ಪರಂಪರೆ

೫.೧ ಮೌಖಿಕ ಮಹಾಕಾವ್ಯಗಳು

೫.೨ ಸಮಕಾಲೀನ ಪರಂಪರೆಗಳು

೫ :೧ ಮೌಖಿಕ ಮಹಾಕಾವ್ಯಗಳು

ಮೌಖಿಕ ಮಹಾಕಾವ್ಯ ಜಾನಪದದ ಸಾಹಿತ್ಯಿಕ ಬಗೆ (Literary type)ಗಳಲ್ಲಿ ಒಂದಾಗಿದೆ. ಅತ್ಯಂತ ಗಂಭೀರವೂ, ವಿಸ್ತಾರವೂ ಆದ ಮೌಖಿಕ ಮಹಾಕಾವ್ಯ ಕೇಳುಗ ಸಹೃದಯರನ್ನು ಆಕರ್ಷಿಸಬಲ್ಲಂಥ ಪ್ರಕಾರವಾಗಿದೆ. ಮಾನಸಿಕವಾಗಿ ಉಲ್ಲಾಸವನ್ನು ಜೀವನದ ಬಗ್ಗೆ ಅರಿವನ್ನು ಹೆಚ್ಚು ಮಾಡುವ ಮೌಖಿಕ ಮಹಾಕಾವ್ಯಗಳು ಜಗತ್ತಿನ ಎಲ್ಲಾ ಕಡೆ ಚಾಲ್ತಿಯಲ್ಲಿರುವುದನ್ನು ಗಮನಿಸಬಹುದು. ಪಾಶ್ಚಿಮಾತ್ಯ ಜನಪದ ವಿದ್ವಾಂಸರು ಮೌಖಿಕ ಮಹಾಕಾವ್ಯದ ಬಗ್ಗೆ ವಿಸ್ತಾರವಾಗಿ ಚರ್ಚಿಸಿದ್ದಾರೆ. ಆದರೆ ಭಾರತದಲ್ಲಿ ಈ ವಿಷಯ ಕುರಿತು ಅಷ್ಟಾಗಿ ಚರ್ಚೆ ನಡೆದಿಲ್ಲ, ಮೌಖಿಕ ಮಹಾಕಾವ್ಯದ ಬಗ್ಗೆ ಮೊದಲ ಚರ್ಚೆ ಕಂಡುಬರುವುದು ಫಿನ್ಲೆಂಡಿನ ಜಾನಪದ ವಿದ್ವಾಂಸರಿಂದ. ಪಾಶ್ಚಿಮಾತ್ಯರು ಮೌಖಿಕ ಮಹಾಕಾವ್ಯಗಳನ್ನು Oral Epic ಅಥವಾ Folk Epic ಎಂದು ಕರೆಯುತ್ತಾರೆ.

ಮೌಖಿಕ ಮಹಾಕಾವ್ಯಗಳನ್ನು ಸಮಗ್ರವಾಗಿ ಹಾಡಲು ಗಾಯಕರು ಎಂಟು ಒಂಬತ್ತು ರಾತ್ರಿಗಳೇ ಬೇಕಾಗಬಹುದು. ಅಂದರೆ ಮೌಖಿಕ ಮಹಾಕಾವ್ಯಗಳ ಗಾತ್ರ ವಿಸ್ತಾರವಾದುದಾಗಿರುತ್ತದೆ. ಸಾಂಸ್ಕೃತಿಕ ವೀರನೊಬ್ಬನನ್ನು ಕಥಾನಾಯಕನನ್ನಾಗಿ ಮಾಡಿಕೊಂಡಿರುತ್ತವೆ. ಕಥಾನಾಯಕರುಗಳು ಬಹಳ ಹಿಂದೆ ಜನ ಸಾಮಾನ್ಯರೊಂದಿಗೆ ಬಾಳಿ ಬದುಕಿದವರಾಗಿರುತ್ತಾರೆ. ತಮ್ಮ ಜನರ ಏಳ್ಗೆಗಾಗಿ ಮುಂದಾಳತ್ವ ವಹಿಸಿಕೊಂಡು ಶತೃಗಳ ನಾಶ ಮಾಡಿರುತ್ತಾರೆ. ನಂತರ ಅವರು ತೀರಿಕೊಂಡಾಗ ಅವರುಗಳು ಮಾಡಿದ ಸಹಾಯ ನಡೆಸಿದ ಹೋರಾಟ ಇವುಗಳ ಬಗ್ಗೆ ಕರುಣಿಸಿದ ಜನಗಳು ಭಾವತುಂಬಿ ಮಾತನಾಡಿಕೊಳ್ಳುತ್ತಾರೆ. ಆ ಸಾಂಸ್ಕೃತಿಕ ನಾಯಕರ ಚಟುವಟಿಕೆಗಳೆಲ್ಲವೂ ಒಂದೊಂದು ಘಟನೆಗಳಾಗಿ ಜನರ ಮನಸ್ಸಿನಲ್ಲಿ ನಿಂತು ಅದೇ ಮಹಾಕಾವ್ಯವಾಗಿ ಬೆಳೆಯುತ್ತಾ ಹೋಗುತ್ತದೆ. ಸಾಮಾನ್ಯವಾಗಿ ಈ ಮೌಖಿಕ ಮಹಾಕಾವ್ಯದ ನಾಯಕರುಗಳನ್ನು ಸಹೃದಯರು ಇಂದಿಗೂ ಪೂಜಿಸಿಕೊಂಡು ಬಂದಿರುತ್ತಾರೆ. ಅವರನ್ನು ದೇವರ ಪ್ರತಿರೂಪವೆಂದು ಭಾವಿಸಿರುತ್ತಾರೆ. ಅಂಥ ವ್ಯಕ್ತಿಗಳು ಹುಟ್ಟಿ ಬೆಳೆದ ಅಥವಾ ನೆಲೆನಿಂತ ಸ್ಥಳಗಳು ಪುಣ್ಯಕ್ಷೇತ್ರಗಳಾಗಿ ಮಾರ್ಪಾಟಾಗಿರುತ್ತವೆ.

ಯಾವುದೇ ಸಾಂಸ್ಕೃತಿಕ ನಾಯಕರು ನೆಲೆನಿಂತ ಸ್ಥಳಗಳಲ್ಲಿ ಹಬ್ಬ, ಜಾತ್ರೆಗಳು ನಡೆಯುವುದುಂಟು. ಇಂಥ ಸಂದರ್ಭದಲ್ಲಿ ಜನರು ಭಕ್ತಿಯಿಂದ ಜಾತ್ರೆಗಳನ್ನು ನಡೆಸಿಕೊಂಡು ಹೋಗುತ್ತಾರೆ. ಜಾತ್ರೆಗಳಂಥ ಸಂದರ್ಭಗಳಲ್ಲಿ ಇಂಥ ಮಹಾಕಾವ್ಯಗಳನ್ನು ಹಾಡಿ ನಾಯಕನ ಗುಣಗಾನ ಮಾಡುವುದನ್ನು ಇಂದಿಗೂ ಕಾಣಬಹುದು. ಮೌಖಿಕ ಕಾವ್ಯದ ಎಲ್ಲಾ ಭಾಗಗಳೂ ಎಲ್ಲಾ ಸಂದರ್ಭಗಳಲ್ಲೂ ಹಾಡಲ್ಪಡುವುದಿಲ್ಲ. ಜನರಿಗೆ ಆಸಕ್ತಿ ಉಂಟುಮಾಡುವ ಕಥೆಗಳು ಮಾತ್ರ ಹೆಚ್ಚು ಜನಪ್ರಿಯವಾಗಿರುತ್ತವೆ.

ಜಾನಪದ ಸಂಗ್ರಾಹಕ ಈ ಕಥನಗಳನ್ನು ಬಲ್ಲ ಜನರಿಂದ ಹಾಡಿಸಿ ಅದನ್ನು ಲಿಪ್ಯಂತರಿಸಿ ಸಂಗ್ರಹಿಸಿದಾಗ ಮಾತ್ರ ಅದರ ಸಮಗ್ರ ರೂಪ ಪರಿಚಯವಾಗುತ್ತದೆ. ಮೌಖಿಕ ಮಹಾಕಾವ್ಯಗಳನ್ನು ಹಾಡುವ ಗಾಯಕರು ಎಲ್ಲಿಯೂ ಕೂಡ ತಾವು ಮೌಖಿಕ ಮಹಾಕಾವ್ಯವನ್ನು ಹಾಡುತ್ತೇವೆ ಎಂದು ಹೇಳಿಕೊಳ್ಳುವುದಿಲ್ಲ. ಸಾಮಾನ್ಯವಾಗಿ ಅವರೆಲ್ಲ ''ಕಥೆ ಮಾಡುವುದು'' ಪದ ಹೇಳುವುದು ಎಂದು ಕರೆಯುತ್ತಾರೆ. ಆ ಗಾಯಕರು ಹಾಡಿದ ಸುದೀರ್ಘ ಹಾಡು ಅಥವಾ ಕಥೆಯನ್ನು ಮೌಖಿಕ ಮಹಾಕಾವ್ಯ ಎಂದು ಕರೆದವರು ಅವುಗಳನ್ನು ಅಧ್ಯಯನ ಮಾಡಿದ ವಿದ್ವಾಂಸರು ಒಂದು ನಿರ್ದಿಷ್ಟ ಪ್ರಕಾರವಾಗಿ ಇದನ್ನು ಗುರುತಿಸಿರುವುದರಿಂದ ಇವುಗಳನ್ನು ಕುರಿತ ಅಧ್ಯಯನ ಒಂದು ವ್ಯವಸ್ಥೆಯಲ್ಲಿ ರೂಪುಗೊಳ್ಳಲು ಸಾಧ್ಯವಾಗುತ್ತದೆ.

ಮೌಖಿಕ ಮಹಾಕಾವ್ಯಗಳು ಹೇಗೆ ರೂಪುಗೊಂಡವು ಎನ್ನುವ ಬಗ್ಗೆ ಎರಡು ವಾದಗಳಿವೆ. ಒಂದು ಚದುರಿಟ್ಟ ಜನಪದ ಕಥನಗಳನ್ನು ಒಟ್ಟುಗೂಡಿಸಿದ ಪರಿಣಾಮವಾಗಿ ರೂಪುಗೊಂಡಂತವು. ಉದಾ : ೧೮೩೫ರಲ್ಲಿ ಎಲಿಯಾಸ್ ಲೋನ್‌ರಾಟ್ ಎನ್ನುವ ವಿದ್ವಾಂಸ ಫಿನ್ಲೆಂಡಿನ ವೀರರಿಗೆ ಸಂಬಂಧಿಸಿದ ಕಥನಗೀತೆಗಳನ್ನು ವ್ಯವಸ್ಥಿತವಾಗಿ ಜೋಡಿಸಿ ಅದಕ್ಕೆ ಮಹಾಕಾವ್ಯದ ರೂಪ ಕಲ್ಪಿಸಿದ್ದಾನೆ. ಇನ್ನೊಂದು ವಾದವೇನೆಂದರೆ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಂಚರಿಸುವ ಚಾರಣರಿಂದ ಮೂಲದಲ್ಲಿ ಚಿಕ್ಕದಾಗಿದ್ದು ಕಾಲಾನಂತರ ದೊಡ್ಡದಾಗಿ ಬೆಳೆಯುತ್ತಾ ಹೋಯಿತು. ಈ ಚಾರಣರ ಅನೇಕ ಪೀಳಿಗೆಗಳು ಇಂಥ ಕಾವ್ಯಗಳ ಹುಟ್ಟಿಗೆ ಕಾರಣ ಎನ್ನುತ್ತಾರೆ. 'ಹೋಮರ್' ಎನ್ನುವುದು ಒಬ್ಬ ಕವಿಯ ಹೆಸರಲ್ಲಿ ಇದೆ. ಅದು ಕುರುಡರ ಪರಂಪರೆಗೆ ಇದ್ದ ಹೆಸರು. ಈ ಕುರುಡರು ಸಂಚರಿಸುತ್ತಾ ಒಡೆಸ್ಸಿ ಮತ್ತು ಇಲಿಯಡ್ ಮಹಾಕಾವ್ಯಗಳನ್ನು ರೂಪಿಸಿದರು ಎನ್ನುವ ಅಭಿಪ್ರಾಯವಿದೆ. ಹಾಗಾಗಿ ಸಂಚಾರಿ ಗಾಯಕರ ದಂಡೇಯಿದ್ದ ಬಗ್ಗೆ ಪುರಾವೆಗಳಿವೆ.

ಮೌಖಿಕ ಮಹಾಕಾವ್ಯದ ಹುಟ್ಟು ಅನಾದಿ ಕಾಲದಲ್ಲಿಯೇ ಆಗಿರುವಂಥದ್ದು ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ''ಗಿಲ್ಗಮಿಷ್'' ಅನ್ನುವವ ಮೌಖಿಕ ಮಹಾಕಾವ್ಯ ಪ್ರಾಚೀನ ಕಾಲದಲ್ಲಿ ರಚನೆಯಾಗಿರುವಂಥದ್ದೂ ಎನ್ನುವ ಅಭಿಪ್ರಾಯವಿದೆ. ಮೌಖಿಕ ಮಹಾಕಾವ್ಯಗಳು ಹೇಗೆ ಹುಟ್ಟಿ ಬೆಳೆಯುತ್ತವೆ ಎನ್ನುವ ಬಗ್ಗೆ ಮೊದಲು ಅದು ಉಚ್ಚವರ್ಗಗಳಲ್ಲಿ ಹುಟ್ಟಿ ಅನಂತರ ಅದು ಕೆಲವು ವೃತ್ತಿಗಾಯಕರ ವಶವಾಗಿ ಬೆಳೆಯುತ್ತಾ ಹೋಗುತ್ತದೆ ಎನ್ನುವ ಅಭಿಪ್ರಾಯವಿತ್ತು. ಆದರೆ ಈ ಸಿದ್ಧಾಂತ ಈಗ ಸಂಪೂರ್ಣ ಬದಲಾಗಿದೆ. ಮೌಖಿಕ ಮಹಾಕಾವ್ಯದ ಹುಟ್ಟಿಗೆ ಕಾರಣ ಸಾಮಾನ್ಯ ಜನ - ರೈತಾಪಿ ಜನ ಕಾರ್ಮಿಕ ಜನ ಎಂದು ಗುರುತಿಸಲಾಗಿದೆ. ಮೌಖಿಕ ಮಹಾಕಾವ್ಯದ ಇನ್ನೊಂದು ಪ್ರಮುಖ ಲಕ್ಷಣವೆಂದರೆ ರಾಷ್ಟ್ರೀಯ ಮನೋಭಾವ (Nationalism) ಎಂದು ಫೆಲಿಕ್ಸ್ ಜೆ. ಬಿಯನಾಸ್ ಗುರುತಿಸಿದ್ದಾರೆ. ಫಿನ್ಲೆಂಡಿನ ಮೌಖಿಕ ಮಹಾಕಾವ್ಯವಾದ ''ಕಲೇವಾಲ'' ಇದಕ್ಕೆ ಉತ್ತಮ ಉದಾಹರಣೆಯಾಗಿದೆ. ಮೌಖಿಕ ಮಹಾಕಾವ್ಯ ಎಷ್ಟು ಗಾತ್ರವನ್ನು ಹೊಂದಿರಬೇಕೆನ್ನುವ ಬಗ್ಗೆ ಯಾವ ನಿಯಮವೂ ಇಲ್ಲ. ಆದರೆ ಒಂದು ಕಾವ್ಯವನ್ನು ಮಹಾಕಾವ್ಯ ಎಂದು ಗುರುತಿಸುವಲ್ಲಿ ಅದರ ಗಾತ್ರದ ಪಾತ್ರವೂ ಇರುತ್ತದೆ. ಘಟನೆಗಳು ವಿವರವಾಗಿ ನಿರೂಪಿಸಲ್ಪಟ್ಟ ಹಿರಿದಾದ ವ್ಯಾಪ್ತಿಯನ್ನು ಅದು ಹೊಂದಿರಲೇಬೇಕಾಗುತ್ತದೆ.

ಸಾಮಾನ್ಯವಾಗಿ ಮೌಖಿಕ ಮಹಾಕಾವ್ಯಗಳು ಆಚರಣೆಗಳೊಂದಿಗೆ ಸಹಚರ್ಯವನ್ನು ಪಡೆದಿರುತ್ತದೆ. ಕಾವ್ಯದ ಕಥಾನಾಯಕನಿಗೆ ಭಕ್ತಿಯಿಂದ ನಮಿಸುವುದು, ಹಲವು ಬಗೆಯ ಹರಕೆಗಳನ್ನು ಹೊರುವುದು, ಹೊನ್ನೆಸುಳು ಮಾಡಿಕಟ್ಟುವುದು, ಪೂಜೆ, ಮಂಗಳಾರತಿ, ಅಭಿಷೇಕ ಮಾಡುವುದು, ಕಡ್ಡಿ-ಕರ್ಪೂರ ಹಚ್ಚಿ ಕಾಯೊಡೆದು ಕಥಾನಾಯಕನಿಗೆ ಶರಣಾಗುವುದು, ಪೂಜೆ ನಂತರ ಕಥಾನಾಯಕನಿಗೆ ಎಡೆಪಡಿಸಿದ ಆಹಾರ ಪದಾರ್ಥಗಳನ್ನೇ ಪ್ರಸಾದವಾಗಿ ಹಂಚುವುದು, ಮುಡಿ ಬಿಡುವುದು, ದೀಕ್ಷೆ ತೆಗೆದುಕೊಳ್ಳುವುದು, ಜಾತ್ರೆ -ಉತ್ಸವಗಳನ್ನು ಮಾಡುವುದು ಈ ಮೊದಲಾದ ಆಚರಣೆಗಳನ್ನು ಕನ್ನಡ ಮೌಖಿಕ ಮಹಾಕಾವ್ಯಗಳ ಹಿನ್ನೆಲೆಯಲ್ಲಿ ನಡೆದುಬಂದಿರುವುದನ್ನು ಗಮನಿಸಬಹುದು.

ಮೌಖಿಕ ಮಹಾಕಾವ್ಯಗಳನ್ನು ಹಾಡುವ ಗಾಯಕ ವರ್ಗ ಕಾವ್ಯದ ಪೂರ್ಣಪಾಠವನ್ನು ನಿರಂತರವಾಗಿ ಹಾಡುವುದು ಹೇಗೆ? ಎನ್ನುವ ಪ್ರಶ್ನೆ ಸಾಮಾನ್ಯವಾಗಿ ಎಲ್ಲರಿಗೂ ಕಾಡುತ್ತದೆ. ಗಾಯಕರು ಕಾವ್ಯದ ಪೂರ್ಣ ಪಾಠವನ್ನು ಬಾಯಿಪಾಠ ಮಾಡಲು ಹೋಗುವುದಿಲ್ಲ. ಕಾವ್ಯದಲ್ಲಿ ಬರುವ ಘಟನೆಗಳನ್ನು ಒಂದಾದ ಮೇಲೊಂದರಂತೆ ಕ್ರಮಬದ್ಧವಾಗಿ ಮನಸ್ಸಿನಲ್ಲಿಯೇ ನೆನೆಸಿಕೊಂಡು ಆಯಾ ಸನ್ನಿವೇಶಕ್ಕೆ ತಕ್ಕ ಮಾತುಗಳನ್ನು ಜೋಡಿಸುತ್ತಾ ಹೋಗುವ ತಂತ್ರವನ್ನು ಬಳಸಿ ಗಾಯಕರು ಇಡೀ ಕಾವ್ಯವನ್ನು ಅತ್ಯಂತ ಸುಶ್ರಾವ್ಯವಾಗಿ ನಿರಂತರವಾಗಿ ಹಾಡುತ್ತಾರೆ.

ಪ್ರತಿಯೊಂದು ಮೌಖಿಕ ಮಹಾಕಾವ್ಯವು ತನ್ನದೇ ಆದ ಒಂದು ನಿರ್ದಿಷ್ಟ ವಾದ್ಯ ಸಲಕರಣೆಯನ್ನು ಹೊಂದಿರುತ್ತದೆ. ಮಂಟೇಸ್ವಾಮಿ ಕಾವ್ಯವನ್ನು ಹಾಡುವ ನೀಲಗಾರರು ನಾಡ ತಂಬೂರಿ-ಗಗ್ಗರಗಳನ್ನು ಬಳಸುತ್ತಾರೆ. ಮಾದೇಶ್ವರನ ಕಾವ್ಯವನ್ನು ಹಾಡುವ ದೇವರಗುಡ್ಡ ಗಾಯಕರು ಕಂಸಾಳೆ ಎಂದು ಕರೆಯಲ್ಪಡುವ ಕಂಚಿನ ಬಟ್ಟಲು ಮತ್ತು ಕಂಚಿನ ಮುಸುಕನ್ನು ಒಂದಕ್ಕೊಂದು ಬಡಿದು ಕಾವ್ಯಕ್ಕೆ ಹಿನ್ನೆಲೆ ವಾದ್ಯವಾಗಿ ಬಳಸುತ್ತಾರೆ. ಇದರೊಂದಿಗೆ ಚರ್ಮದಿಂದ ಮಾಡಿದ ಕಂಜರವನ್ನು ಬಳಸುತ್ತಾರೆ. ಜುಂಜಪ್ಪ ಕಾವ್ಯ ಹಾಡುವ ಗಣೆಯವರು ಗಣೆಯನ್ನು ಬಳಸುತ್ತಾರೆ. ಸವದತ್ತಿ ಎಲ್ಲಮ್ಮನ ಕಾವ್ಯ ಹಾಡುವ ಚೌಡಿಕೆಯವರು ಚೌಡಿಕೆ ಎನ್ನುವ ಕೊಳಗಾಕಾರದ ತಂತಿವಾದ್ಯವನ್ನು ಬಳಸುತ್ತಾರೆ. ಮೈಲಾರಲಿಂಗ ಕಾವ್ಯವನ್ನು ಹಾಡುವಂಥ ಗೊರವರು ಡಮರುಗ ಮತ್ತು ಕೊಳಲನ್ನು ಹಿನ್ನೆಲೆ ವಾದ್ಯವಾಗಿ ಬಳಸುತ್ತಾರೆ.

ಮೌಖಿಕ ಮಹಾಕಾವ್ಯಗಳ ಗಾಯನ ಸಂದರ್ಭದಲ್ಲಿ ಸ್ತ್ರೀ ಮತ್ತು ಪುರುಷ ಇಬ್ಬರೂ ಭಾಗವಹಿಸಬಹುದು. ಇದು ಬರೀ ಹೆಂಗಸರಿಗಾಗಲೀ ಅಥವಾ ಗಂಡಸರಿಗಾಗಲೀ ಮೀಸಲಾದುದಲ್ಲ ಸಾಮಾನ್ಯವಾಗಿ ಕುಮಾರರಾಮ ಮತ್ತು ಸೌದತ್ತಿ ಎಲ್ಲಮ್ಮ ಕಾವ್ಯಗಳನ್ನು ಹೆಂಗಸರೇ ಹೆಚ್ಚಾಗಿ ಹಾಡುತ್ತಾರೆ. ಜುಂಜಪ್ಪ ಕಾವ್ಯವನ್ನು ಸಹ ಸ್ತ್ರೀಯರು ಕೊಳಲು ಬಳಸದೆ ಸೋಬಾನೆ ಪದಗಳ ರೀತಿಯಲ್ಲಿ ಸುಶ್ರಾವ್ಯವಾಗಿ ಹಾಡುವುದುಂಟು.

ಪ್ರತಿಯೊಂದು ಮೌಖಿಕ ಮಹಾಕಾವ್ಯಗಳು ಒಂದೊಂದು ನಿರ್ದಿಷ್ಟ ಪುಣ್ಯಕ್ಷೇತ್ರವನ್ನು ಹೊಂದಿರುತ್ತದೆ. ಕಾವ್ಯನಾಯಕ ಬದುಕಿದ್ದಾಗ ಓಡಾಡಿದ ಜಾಗದಲ್ಲಿ ಅಥವಾ ಸೆಣಸಿ ಸತ್ತ ಸ್ಥಳಗಳಲ್ಲಿ ಮುಂದೆ ಪುಣ್ಯಕ್ಷೇತ್ರಗಳು ರೂಪುಗೊಳ್ಳುತ್ತವೆ.

ಆಯಾ ಕ್ಷೇತ್ರಗಳಲ್ಲಿ ದೇವಸ್ಥಾನ-ಗುಡಿ ಕಟ್ಟಿಸಿ ಸಾಂಸ್ಕೃತಿಕ ನಾಯಕನನ್ನು ಪೂಜಿಸುವುದುಂಟು. ವರ್ಷವಿಡೀ ಪೂಜೆ, ಜಾತ್ರೆ, ಉತ್ಸವ ಹಾಗೂ ಮೇಳಗಳು ನಡೆದು ಜನರು ಭಕ್ತಿಯಿಂದ ಭಜಿಸುವುದುಂಟು. ಕೆಲವೊಮ್ಮೆ ಮೌಖಿಕ ಕಾವ್ಯದ ನಾಯಕರುಗಳು ಮೇಲ್ವರ್ಗಗಳ ದೇವತೆಗಳಾಗಿ ಪರಿವರ್ತನೆ ಹೊಂದುವುದೂ ಉಂಟು. ಮಾದೇಶ್ವರ ಈಶ್ವರನ ಇನ್ನೊಂದು ಅವತಾರ ಅದೇ ರೀತಿ ಜುಂಜಪ್ಪ ಕೃಷ್ಣನ ಅವತಾರ ಎನ್ನುವ ಭಾವನೆಗಳು ಇವಕ್ಕೆ ಸಾಕ್ಷಿ. ಮಂಟೇಸ್ವಾಮಿ ಕಾವ್ಯದ ಪುಣ್ಯಕ್ಷೇತ್ರಗಳಾಗಿ ಬೊಪ್ಪೇಗೌಡನಪುರ, ಕಪ್ಪಡಿ-ಚಿಕ್ಕಲೂರು- ಮಳವಳ್ಳಿಗಳನ್ನು ಗುರುತಿಸಲಾಗಿದೆ. ಮಲೆಮಾದೇಶ್ವರ ಕಾವ್ಯದ ಪುಣ್ಯಕ್ಷೇತ್ರ ಮಲೆಮಾದೇಶ್ವರ ಬೆಟ್ಟ ಇದೂ ಕೂಡ ಮೈಸೂರು ಜಿಲ್ಲೆಗೆ ಸೇರಿದೆ. ಎಲ್ಲಮ್ಮ ಕಾವ್ಯದ ಕಥಾನಾಯಕಿ ಎಲ್ಲಮ್ಮನನ್ನು ಸವದತ್ತಿ ಎಲ್ಲಮ್ಮ ಎಂತಲೇ ಗುರುತಿಸುವ ಪರಿಪಾಠವಿದೆ. ಸೌದತ್ತಿಯೇ ಎಲ್ಲಮ್ಮನ ಪುಣ್ಯಕ್ಷೇತ್ರವಾಗಿದೆ. ಕಾಡುಗೊಲ್ಲರ ಅಧಿದೇವತೆ ಜುಂಜಪ್ಪನ ಪುಣ್ಯಕ್ಷೇತ್ರ ತುಮಕೂರು ಜಿಲ್ಲೆಯ ಹಾಗಲವಾಡಿ ಮತ್ತು ಕಳವೇರ ಹಳ್ಳಿಗಳಲ್ಲಿ ಇದೆ. ಮೈಲಾರ ಲಿಂಗನಕಾವ್ಯ ಹಾಡುವ ಗೊರವರು ಹಿರಿಯ ಮೈಲಾರ, ಮಣ್ಣು ಮೈಲಾರ ಮತ್ತು ಮುಡುಕುತೊರೆಗಳನ್ನು ಪುಣ್ಯಕ್ಷೇತ್ರವೆಂದು ಭಾವಿಸಿದ್ದಾರೆ.

ಮೌಖಿಕ ಮಹಾಕಾವ್ಯಗಳು ಆರಾಧ್ಯದೈವವೊಂದರ ಧಾರ್ಮಿಕ ಗುರುವೊಬ್ಬರ ಮಹಿಮೆಗಳನ್ನು ಪ್ರಸಾರ ಮಾಡುವ ಉದ್ದೇಶವನ್ನು ಹೊಂದಿರುತ್ತದೆ. ಕಾವ್ಯನಾಯಕನ ಸಾಹಸಗಳನ್ನು ಮನಮುಟ್ಟುವಂತೆ ಸರಳವಾಗಿ ಹೃದ್ಯವಾಗಿ ಹೇಳುವುದರಿಂದ ಕೇಳುಗರನ್ನು ಸುಲಭವಾಗಿ ಆಕರ್ಷಿಸಬಹುದಾಗಿದೆ. ಆಸಕ್ತಿಯಿಂದ ಕಾವ್ಯ ಕೇಳಿದ ಗಾಯಕರು ಆ ಕಾವ್ಯನಾಯಕನ ಮಹಿಮೆ ಕೊಂಡಾಡಿ ಆತನ ಆರಾಧಕರಾಗಿ ಮಾರ್ಪಾಟಾಗುವುದುಂಟು. ಕೆಲವೊಮ್ಮೆ ಜನತೆ ತಮ್ಮ ಮನೆ ದೇವರಾಗಿಯೂ ಸ್ವೀಕರಿಸಬಹುದಾಗಿದೆ.

ದುಷ್ಟ ಶಿಕ್ಷಣ-ಶಿಷ್ಟ ರಕ್ಷಣಗಳು ಮೌಖಿಕ ಮಹಾಕಾವ್ಯದ ಮೂಲತತ್ವವಾಗಿರುತ್ತದೆ. ಅನ್ಯಾಯ ವಂಚನೆ ಮೋಸ ಕಿರುಕುಳ ಉಂಟು ಮಾಡುವವರನ್ನು ನಾಶ ಮಾಡಿ ಅಥವಾ ಸೋಲಿಸಿ ನ್ಯಾಯ ಸತ್ಯಕ್ಕೆ ಸ್ಥಾನ ಕಲ್ಪಿಸಿಕೊಡುವುದನ್ನು ಸಾಮಾನ್ಯವಾಗಿ ಎಲ್ಲಾ ಮೌಖಿಕ ಮಹಾಕಾವ್ಯಗಳಲ್ಲಿ ಕಾಣುತ್ತೇವೆ. ಕಾವ್ಯನಾಯಕ ತನಗೆ ತಿರುಗಿಬಿದ್ದವರನ್ನು ನಾಮಾವಶೇಷ ಮಾಡಿ ತನಗೆ ಒಲಿದವರಿಗೆ ಉತ್ತಮ ಬದುಕು ಕಲ್ಪಿಸಿಕೊಡುವುದನ್ನು ಕಾಣಬಹುದಾಗಿದೆ. ಮಂಟೇಸ್ವಾಮಿ ಶಿಷ್ಯವಾದ ಸಿದ್ದಪ್ಪಾಜಿ ಹಲಗೂರಿನ ಪಾಂಚಾಳ ವಂಶದವರೊಂದಿಗೆ ಸೆಣಸುವುದು, ಮಾದೇಶ್ವರ ಬೇವಿನಹಟ್ಟಿ ಕಾಳಮ್ಮ ಇಕ್ಕೇರಿ ದೇವಮ್ಮರನ್ನು ನಾಶಮಾಡಿ ತನಗೊಲಿದ ಸಂಕಮ್ಮನಿಗೆ ಮಕ್ಕಳ ಫಲಕೊಟ್ಟು ಆಕೆ ಬಂಜೆಯಲ್ಲ ಎಂದು ರೂಪಿಸುವುದು, ಜುಂಜಪ್ಪ ತನ್ನ ಸೋದರಮಾವರೊಂದಿಗೆ ಹೋರಾಡುವುದು ಇದಕ್ಕೆ ಸಾಕ್ಷಿಯಂತಿದೆ.

ಮೌಖಿಕ ಮಹಾಕಾವ್ಯದ ನಾಯಕರುಗಳು ಅನೇಕ ಪವಾಡಗಳನ್ನು ಮದ್ದು ಮಾಯಗಳನ್ನು ಬಲ್ಲವರಾಗಿರುತ್ತಾರೆ. ಈ ಕಾರಣಕ್ಕಾಗಿಯೇ ಕಾವ್ಯದಲ್ಲಿನ ಇತರ ಜನಸಮೂಹಕ್ಕಿಂತ ವಿಶಿಷ್ಟಶಕ್ತಿ ಪಡೆದವರಾಗಿರುತ್ತಾರೆ. ನಿಜಜೀವನದಲ್ಲಿ ಕಾಣಲಾಗದ ಅದ್ಭುತ ಪವಾಡಗಳ ವರ್ಣನೆಯನ್ನು ಇಲ್ಲಿ ಕಾಣಬಹುದಾಗಿದೆ. ಕಪ್ಪುದೂಳ್ತ ಮತ್ತು ಮಾಯದ ಬೇಳ್ಮೆಯಿಂದ ಇಕ್ಕೇರಿ ದೇವಮ್ಮ ಬೇವಿನ ಕಾಳಮ್ಮನ ಮನೆಗಳನ್ನು ಮಾದೇಶ್ವರ ಸುಟ್ಟು ಹಾಕುತ್ತಾನೆ. ಮಂಟೇಸ್ವಾಮಿ ಈ ಬುತ್ತಿಗೆಟ್ಟಿ ಒಡೆಯುವ

ಸನ್ನಿವೇಶ ಮಂಟೇಸ್ವಾಮಿ ಕಾವ್ಯದಲ್ಲಿ ಬರುತ್ತದೆ. ತೊಟ್ಟ ಬಳೆಗಳೆಲ್ಲ ಹಾವು ಚೇಳುಗಳಾಗುವ ಅದ್ಭುತದ ಸನ್ನಿವೇಶಗಳು ನಡೆಯುತ್ತದೆ.

ಮೌಖಿಕ ಮಹಾಕಾವ್ಯ ಹಾಡುವ ಗಾಯಕವರ್ಗ ಗುರುಮಠವೊಂದರಿಂದಲೋ ಹಿರಿಯ ಭಕ್ತರಿಂದಲೋ ದೀಕ್ಷೆ ಪಡೆದ ಶಿಷ್ಯರುಗಳೇ ಆಗಿದ್ದು ಅವರು ಆ ಕಾವ್ಯಗಳ ಪ್ರಸಾರಕ್ಕಾಗಿ ತಮ್ಮನ್ನೇ ಮುಡುಪಾಗಿಟ್ಟುಕೊಳ್ಳುತ್ತಾರೆ. ಪೀಳಿಗೆಯಿಂದ ಪೀಳಿಗೆಗೆ ವರ್ಗಾವಣೆ ಹೊಂದುವ ಇಂಥ ಸುದೀರ್ಘ ಕಾವ್ಯಗಳನ್ನು ತಮ್ಮ ಕಿರಿಯರಿಗೆ ಬೋಧಿಸುತ್ತಾರೆ. ಹಾಗೆಯೇ ತಮ್ಮ ಹಿರಿಯರಿಂದ ಶ್ರದ್ಧೆಯಿಟ್ಟು ಕಲಿತುಕೊಳ್ಳುತ್ತಾರೆ. ಕೆಲವು ಗಾಯಕರು ಹೊಟ್ಟೆ ಪಾಡಿಗಾಗಿ ಮಹಾಕಾವ್ಯದ ಪ್ರಮುಖ ಕಾವ್ಯಭಾಗಗಳನ್ನು ಹಾಡಿ ಜನರ ಮನಗೆಲ್ಲಿಸಿ ಅವರಿಂದ ಹಣ ಮತ್ತು ದಾನ್ಯವನ್ನು ಪಡೆಯುತ್ತಾರೆ. ಇವರನ್ನು ವೃತ್ತಿಗಾಯಕರು ಎಂತಲೂ ಕರೆಯುತ್ತಾರೆ. ಮಂಟೇಸ್ವಾಮಿ ಕಾವ್ಯ ಹಾಡುವ ನೀಲಗಾರರು, ಮಾದೇಶ್ವರ ಕಾವ್ಯ ಹಾಡುವ ಕಂಸಾಳೆಯವರು, ಜುಂಜಪ್ಪ ಕಾವ್ಯ ಹಾಡುವ ಗಣೆಯವರು, ಎಲ್ಲಮ್ಮ ಕಾವ್ಯ ಹಾಡುವ ಚೌಡಿಕೆಯರು ಮತ್ತು ಮೈಲಾರಲಿಂಗನ ಕಾವ್ಯ ಹಾಡುವ ಗೊರವರು, ಅರ್ಜುನ ಜೋಗಿ ಕಾವ್ಯ ಹಾಡುವ ಕಿನ್ನರಿ ಜೋಗಿಗಳು ಮೊದಲಾದ ಪ್ರತ್ಯೇಕ ಗಾಯಕ ವರ್ಗಗಳಿರುವುದನ್ನು ಕಾಣಬಹುದಾಗಿದೆ.

ಹೀಗಾಗಿ ಮೌಖಿಕ ಮಹಾಕಾವ್ಯಗಳ ಸಾಲಿನಲ್ಲಿ ಮಂಟೇಸ್ವಾಮಿ ಕಾವ್ಯಕ್ಕೆ ಹೆಚ್ಚಿನ ಮಹತ್ವವಿದೆ. ಜನಪದ ಮಹಾಕಾವ್ಯಗಳಲ್ಲಿ ಇದು ಅತ್ಯಂತ ಮುಖ್ಯವಾದುದು. ಏಕೆಂದರೆ ಮಂಟೇಸ್ವಾಮಿ ಕಾವ್ಯ ಮಾದೇಶ್ವರ ಕಾವ್ಯದಂತೆ ಹತ್ತು ಹಲವು ದಿಕ್ಕಿನಲ್ಲಿ ಹರಿಯುವುದಿಲ್ಲ. ಇದೊಂದು ಅಖಂಡಕಾವ್ಯ, ಕ್ರಮಬದ್ಧವಾದ ಏಕಸೂತ್ರಕ್ಕೆ ಒಳಪಡುವ ಕಾವ್ಯ, ನಿರ್ದಿಷ್ಟ ನೆಲೆಯಿಂದ ಹೊರಟು, ತನ್ನ ಪಥದಲ್ಲಿ ಗುರಿ ತಪ್ಪದೆ ಹರಿದು ಅಂತ್ಯವನ್ನು ಸಾಧಿಸಿಕೊಳ್ಳುವ ವಿಶಿಷ್ಟ ಸ್ವರೂಪದ ಕಾವ್ಯ ಇದಾಗಿದೆ.

೫:೧.೧ ಮೌಖಿಕ ಮಹಾಕಾವ್ಯವಾಗಿ ಮಂಟೇಸ್ವಾಮಿ

ಜನಪದ ಮೌಖಿಕ ಮಹಾಕಾವ್ಯಗಳ ಸಾಲಿನಲ್ಲಿ ಮಂಟೇಸ್ವಾಮಿ ಕಾವ್ಯ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದೆ. ಲೀಲೆಗಾರರು ಅಥವಾ ನೀಲಗಾರರು ಎಂದು ಕರೆಯಲ್ಪಡುವ ಗಾಯಕವರ್ಗ ಮಂಟೇಸ್ವಾಮಿ ಸಿದ್ದಪ್ಪಾಜಿ ಮತ್ತು ರಾಚಪ್ಪಾಜಿಯನ್ನು ಕುರಿತು ಹಾಡುವ ಸುದೀರ್ಘ ಕಾವ್ಯವನ್ನು ಜನಪದ ಮೌಖಿಕ ಮಹಾಕಾವ್ಯಗಳಲ್ಲಿ ಒಂದೆಂದು ಗುರುತಿಸಲಾಗಿದೆ. ಒಂದು ಪೀಳಿಗೆಯ ಕಥೆಯಾಗಿ ವಿಸ್ತಾರವಾಗಿ ಹಬ್ಬಿ ನಿಂತ ಈ ಕಾವ್ಯ ಮೌಖಿಕ ಮಹಾಕಾವ್ಯದ ಎಲ್ಲಾ ಲಕ್ಷಣಗಳನ್ನು ಪಡೆದುಕೊಂಡಿದೆ. ಹಲವು ಪಾತ್ರಗಳು, ಹಲವು ವ್ಯಕ್ತಿತ್ವಗಳು, ಹಲವು ಮನೋಭಾವನೆಗಳು ಬಂದು ಹೋಗುವ ಈ ಕಾವ್ಯದಲ್ಲಿ ಹಲವು ಸಂಸ್ಕೃತಿಯ ಹೆಜ್ಜೆ ಗುರುತುಗಳನ್ನು ಕಾಣಬಹುದಾಗಿದೆ. ಸತ್ಯ- ನ್ಯಾಯ-ಧರ್ಮ ಮಾನವೀಯತೆಗಳಂಥ ಸಾಮಾಜಿಕ ಮೌಲ್ಯಗಳು ತಮಗೆ ತಾವೇ ಸ್ಥಾಪಿತವಾಗಲು ಯತ್ನಿಸುವಾಗ ಹಲವು ಕ್ಲಿಷ್ಟ ಸನ್ನಿವೇಶಗಳಿಗೆ ಮೈಯೊಡ್ಡುವುದನ್ನು ಕಾಣಬಹುದು. ಕಡೆಗಣಿಸಲ್ಪಟ್ಟ ವ್ಯಕ್ತಿತ್ವವೊಂದು ಸ್ಥಾಪಿತವಾದ ಸಾಮಾಜಿಕ ಮೌಲ್ಯಗಳಿಗೆ ವ್ಯತಿರಿಕ್ತವಾಗಿ ನಡೆದು ತನ್ನ ಮೂಲದ ಹೊಸ ಮೌಲ್ಯಗಳ ಸೃಷ್ಟಿಗಾಗಿ ತಹತಹಿಸುವ ಮನಸ್ಸು ಕಾವ್ಯದುದ್ದಕ್ಕೂ ಹರಿದಾಡಿದೆ.

ಮಂಟೇಸ್ವಾಮಿ ೧೫ನೇ ಶತಮಾನದಲ್ಲಿದ್ದ ಮಹಾ ಪುರುಷ. ಮಾನವತ್ವದಿಂದ ದೈವತ್ವಕ್ಕೇರಿದವನು. ಇವನನ್ನು ಕುರಿತ ಕಾವ್ಯವೇ ಮಂಟೇಸ್ವಾಮಿ ಕಾವ್ಯ.

ಮೈಸೂರು ಜಿಲ್ಲೆಯ ಮಳವಳ್ಳಿ, ಮಂಡ್ಯ, ಶ್ರೀರಂಗಪಟ್ಟಣ, ಮೈಸೂರು, ಕೊಳ್ಳೇಗಾಲ ಚಾಮರಾಜನಗರ ಜಿಲ್ಲೆಗಳಲ್ಲಿ ನೀಲಗಾರರು (ಮಂಟೇಸ್ವಾಮಿ ಒಕ್ಕಲಿನವರು) ಮಂಟೇಸ್ವಾಮಿ ಕಾವ್ಯವನ್ನು ಹಾಡುತ್ತಾರೆ. ಆ ಪ್ರದೇಶದಲ್ಲೆಲ್ಲಾ ತುಂಬಾ ಜನಪ್ರಿಯ ಕಾವ್ಯವಾದ ಇದು ನೀಲಗಾರರಿಗೆ ಧಾರ್ಮಿಕ ಕಾವ್ಯವಾಗಿದೆ. ಮುಖ್ಯವಾಗಿ ಈ ಕಾವ್ಯವನ್ನು ನೀಲಗಾರ ದೀಕ್ಷೆ ಪಡೆದ ಕುರುಬರು, ಉಪ್ಪಲಿಗ ಶೆಟ್ಟರು, ಮಡಿವಾಳರು, ಗಾಣಿಗರು, ಅಕ್ಕಸಾಲಿಗರು ಹಾಡುತ್ತಾರೆ. ಹೆಚ್ಚಾಗಿ ಹರಿಜನರು ಈ ಕಾವ್ಯವನ್ನು ಹಾಡುವುದನ್ನು ಕಾಣಬಹುದು.

ಮಂಟೇಸ್ವಾಮಿಯವರನ್ನು ಧರೆಗೆ ದೊಡ್ಡವರು, ಅಲ್ಲಮಪ್ರಭು, ಪ್ರಭುದೇವರು, ಪರಂಜ್ಯೋತಿ ಎಂದು ಕರೆಯುವರು. ನೀಲಗಾರ ಗಾಯಕರಿಂದ ಜೀ.ಶಂ. ಪರಮಶಿವಯ್ಯ, ತಂಮಪ ಮೂರ್ತಿ, ಬೀರನಹಳ್ಳಿ ಚೌಡೇಗೌಡ, ರಾ ವೆಂಕಟೇಶ ಇಂದ್ವಾಡಿ. ಹಿ.ಚಿ. ಬೋರಲಿಂಗಯ್ಯನವರು ಈ ಕಾವ್ಯದ ವಿವಿಧ ಪಠ್ಯಗಳನ್ನು ಸಂಗ್ರಹಿಸಿದ್ದಾರೆ.

ನೀಲಗಾರರು ಮಂಟೇಸ್ವಾಮಿಗಳನ್ನು ಕುರಿತು ಹಾಡುವ ಜನಪದ ಮಹಾಕಾವ್ಯಕ್ಕೆ ಧರೆಗೆ ದೊಡ್ಡವರ ಕತೆ, ಧರೆಗೆ ದೊಡ್ಡವರ ವಚನ, ಮಂಟೇಸ್ವಾಮಿ ಕತೆ, ಸಿದ್ದಪ್ಪಾಜಿಕತೆ ಎಂದು ಕರೆಯಲಾಗಿದೆ. ಮಹಾಕಾವ್ಯವೆನ್ನುವುದು ಶಾಸ್ತ್ರೀಯ ಅಧ್ಯಯನಗಳ ಪರಿಭಾಷೆಯಾಗಿದೆ. ಈ ಕತೆಯನ್ನು ಸಂಪೂರ್ಣವಾಗಿ ಕಲಿಯಲು ಅವರಿಗೆ ನಾಲ್ಕಾರು ವರ್ಷಗಳೇ ಬೇಕು. ಮೊದಲು ಗುರುಗಳ ಜೊತೆ ಹೋಗಿ ಹಿಮ್ಮೇಳದಲ್ಲಿದ್ದು ಕತೆಯನ್ನು ಕಲಿತ ಮೇಲೆ ತಾವೇ ಒಂದು ತಂಡ ಕಟ್ಟಿಕೊಳ್ಳುತ್ತಾರೆ. ಕತೆ ಕಲಿಯುವ ಪ್ರತ್ಯೇಕ ಗುಂಪುಗಳಾಗುವ ತಲೆಮಾರಿನಿಂದ ತಲೆಮಾರಿಗೆ ಈ ಕತೆ ಪ್ರಸಾರವಾಗುವ ಕ್ರಮ ಇದಾಗಿದೆ. ಗುರುವಿನಿಂದ ಕತೆ ಕಲಿತ ಗಾಯಕ ತನ್ನ ಬಿಡುವಿನ ವೇಳೆಯಲ್ಲಿ ತಾನೊಬ್ಬನೇ ಊರೂರುಗಳಿಗೆ ಹೋಗಿ ಈ ಕತೆಗಳನ್ನು ಹಾಡಿ ಭಿಕ್ಷೆ ಬೇಡುತ್ತಾನೆ. ಜಾತ್ರೆಯ ಬಿಡದಿಗಳಲ್ಲಿ ತಂಗಿದಾಗ, ಹೊಸಮನೆಗೆ ಹೋಗುವಾಗ, ಸತ್ತ, ಕೆಟ್ಟವರಿಗೆ ಹಬ್ಬ ಮಾಡುವಾಗ, ಮಕ್ಕಳನ್ನು ದೀಕ್ಷೆ ಕೊಟ್ಟು ನೀಲಗಾರನನ್ನಾಗಿ ಬಿಡಿಸಿದಾಗ ಇವರು ತಂಡಗಳಾಗಿ ಹೋಗಿ ಇಡೀ ರಾತ್ರಿ ಕತೆ ಹಾಡುತ್ತಾರೆ. ಇವರ ವೃತ್ತಿಯೇ ಗಾಯನವಾದ್ದರಿಂದ ಮಂಟೇಸ್ವಾಮಿ ಕತೆಯಲ್ಲದೆ, ಮಾದಪ್ಪನ ಕತೆ, ಬಾಲನಾಗಮ್ಮನಕತೆ, ಮೈದಾಳರಾಮ, ಚಾಮುಂಡಿ, ಬಸವಣ್ಣ, ಸಾರಂಗಧರ, ನೀಲವೇಣಿ, ಪಿರಿಯಾ ಪಟ್ಟಣ ಕಾಳಗ, ಚೆನ್ನಿಗರಾಮ ಮುಂತಾದ ಕತೆಗಳನ್ನು ಹಾಡುತ್ತಾರೆ. ಮಂಟೇಸ್ವಾಮಿ ಮಾದಪ್ಪನ ಕತೆಗಳು ಸುಮಾರು ಮೂರು ನಾಲ್ಕು ರಾತ್ರಿಗಳ ಕತೆಗಳು, ಮಹಾಕತೆಗಳು, ಉಳಿದವನ್ನು ಉಪಕತೆಗಳೆನ್ನುತ್ತಾರೆ. ಇವು ಒಂದೊಂದು ರಾತ್ರಿ ಕತೆಗಳು. ಧರೆಗೆ ದೊಡ್ಡವರ ಕತೆಯಲ್ಲಿ ಕೂಡ ಆಯ್ದು ಭಾಗಗಳನ್ನು ಒಕ್ಕಲಿನವರು ಇಚ್ಛೆಪಟ್ಟ ಪ್ರಸಂಗಗಳನ್ನು ಹಾಡುತ್ತಾರೆ.

ಉದಾ : ಸಿದ್ದಪ್ಪಾಜಿ ಪವಾಡ, ದೊಡ್ಡಮ್ಮನ ಪಡೆದ ಕತೆ, ಕೆಂಪಾಚಾರಿ ಭಾಗ ಇತ್ಯಾದಿ ಭಾಗಗಳನ್ನು ಹಾಡುವಾಗ ತಾಳು-ತುದಿ ಭಾಗಗಳನ್ನು ಏಟುಕಿಸುವ ಪ್ರಯತ್ನ ಮಾಡುತ್ತಾರೆ. ಈ ಕತೆಗೆ ಆದಿ-ಅಂತ್ಯಗಳಿವೆ ಎನ್ನುವುದಾಗಲೀ ಸಮಗ್ರವೆನ್ನುವ

ಕಲ್ಪನೆಯಾಗಲಿ ನೀಲಗಾರರಿಗೆ ಇಲ್ಲ. ಎಲ್ಲಾ ಪ್ರಸಂಗಗಳನ್ನು ಅಖಂಡವಾಗಿ ಕಟ್ಟುವುದರಲ್ಲೇ ಅವರಿಗೆ ಆಸಕ್ತಿ. ಈ ಅಖಂಡತೆಯ ಪರಿಕಲ್ಪನೆಯಲ್ಲಿ ಕಾವ್ಯ ಕಟ್ಟುತ್ತಲೇ ತಮ್ಮ ಸಾಂಸ್ಕೃತಿಕ ನಾಯಕ ಮಂಟೇಸ್ವಾಮಿಯನ್ನು ಅಖಂಡವಾಗಿಸಿಕೊಂಡಿದ್ದಾರೆ.

ಇದುವರೆಗೂ ಮಂಟೇಸ್ವಾಮಿಗಳ ಜೀವನ ವಿವರಗಳನ್ನು ಕುರಿತಂತೆ ಮೇಲೆ ತಿಳಿಸಿದ ಐದು ಜನಪದ ಮಹಾಕಾವ್ಯಗಳು ಸಂಗ್ರಹವಾಗಿ ಪ್ರಕಟವಾಗಿವೆ. ಅದರಲ್ಲಿ ಮೊದಲನೆ ಕಾವ್ಯವನ್ನು ಜಾನಪದ ಅಧ್ಯಯನದ ಬಹುಮುಖ್ಯ ವ್ಯಕ್ತಿಯಾದ ಡಾ.ಜೀ.ಶಂ.ಪರಮಶಿವಯ್ಯನವರು ಸಂಗ್ರಹಿಸಿರುವ 'ಮಂಟೇಸ್ವಾಮಿ ಕಾವ್ಯ' ಮೊದಲನೆಯದು. ಈ ಕಾವ್ಯ ಧರೆಗೆ ದೊಡ್ಡವರ ಸಾಲಿನಿಂದ ಆರಂಭವಾಗಿ ಸಿದ್ದಪ್ಪಾಜಿ, ರಾಚಪ್ಪಾಜಿ, ಚಿಕ್ಕಲೂರು ಸಾಲಿನಿಂದ ಮುಕ್ತಾಯವಾಗುವ ಅಖಂಡಕಾವ್ಯ ಕೆಲವು ನೀಲಗಾರರು ತಾಳುಗತೆ ಬಿಟ್ಟು ಸಿದ್ದಪ್ಪಾಜಿಯ ಕಥೆಯೊಂದನ್ನೇ ಹಾಡುವುದನ್ನು ಇದರಲ್ಲಿ ಕಾಣಬಹುದಾಗಿದೆ. ದಕ್ಷಿಣಕ್ಕೆ ಹೋದಂತೆಲ್ಲಾ ತಾಳುಗತೆ ಬಿಟ್ಟು ಹೋದಂತೆ ಕಾಣುತ್ತದೆ. ಸಮಸ್ತ ಕಥಾ ವಿಸ್ತಾರದಲ್ಲಿ ಏಕಮೇವ ಶಕ್ತಿಯಾಗಿ ಸಿದ್ದಪ್ಪಾಜಿ ವಿರಾಜಿಸುತ್ತಾರೆ. ''ಮಂಟೇಸ್ವಾಮಿ ಕಾವ್ಯದ ಕೇಂದ್ರ ವ್ಯಕ್ತಿ ಸಿದ್ದಪ್ಪಾಜಿಯವರೇ''[೧] ಎಂದಿದ್ದಾರೆ ಜೀ.ಶಂ.ಪ. ಅವರು. ಅದೇ ರೀತಿ ಡಾ. ಕಾಳೇಗೌಡ ನಾಗವಾರರವರು ''ಸಿದ್ದಪ್ಪಾಜಿಯವರೇ ಕೇಂದ್ರ ವ್ಯಕ್ತಿ'' ಎಂದಿದ್ದಾರೆ. ಸಿದ್ದಪ್ಪಾಜಿಯನ್ನು ನೀಲಗಾರರು 'ಹ್ಞಾಂ..... ಸಿದ್ದಯ್ಯ ಸ್ವಾಮಿ ಬನ್ನಿ' ಎಂದು ನೆನೆಯುತ್ತಾರೆ. ಸಿದ್ದಪ್ಪಾಜಿಯ ಘನಲೀಲೆಯನ್ನು ಪ್ರಸಾರ ಮಾಡುವುದೇ ತಮ್ಮ ಗುರಿ ಎಂಬಂತೆ ಅತಿ ಭಕ್ತಿಯಿಂದ ಹೃದಯ ತುಂಬಿ ಹಾಡುತ್ತಾರೆ. ಸಿದ್ದಪ್ಪಾಜಿಯ ಗಾಂಭೀರ್ಯ, ಗುರುಭಕ್ತಿ, ಅಚಲ ನಿಷ್ಠೆಗಳು ಹಲಗೂರಿನಲ್ಲಿ ಪವಾಡ ಗೆಲ್ಲಲು ಚೈತನ್ಯ ನೀಡುತ್ತವೆ. ಗುರುಮಂಟೇಲಿಂಗಸ್ವಾಮಿ ಸಿದ್ದಪ್ಪಾಜಿಯವರು ಸಂಘರ್ಷ ಹಲಗೂರಿನಲ್ಲಿ ಪವಾಡ ನಡೆಸುವ ವೈಖರಿ ಇವು ಕಾವ್ಯದ ಉತ್ತುಂಗ ಶಿಖರಗಳು. ಮಂಟೇಸ್ವಾಮಿ ಕಾವ್ಯ ಸಿದ್ದಪ್ಪಾಜಿಯ ಕಥೆಯೊಂದಿಗೆ ಮುಕ್ತಾಯವಾಗುತ್ತದೆ. ಮಂಟೇಸ್ವಾಮಿ ಸಿದ್ದಪ್ಪಾಜಿಗೆ ಚೈತನ್ಯ ತುಂಬಿ ಪವಾಡಗಳಿಂದ ಮೆರೆಯುವಂತೆ ಮಾಡುತ್ತಾರೆ.

ನೀಲಗಾರರು ಮಂಟೇಸ್ವಾಮಿ ಕಾವ್ಯವನ್ನು

''ಸಿದ್ದಯ್ಯ ಶಿವನೇ ಬನ್ನಿ
ಪವಾಡ ಗೆದ್ದಯ್ಯ ನೀವೇ ಬನ್ನಿ
ಸಿದ್ದು ಸಿದ್ದರಿಗೆಲ್ಲ ಅತಿ ಮುದ್ದು ಘನಲೀಲೆ
ಸಿದ್ದಯ್ಯ ಸ್ವಾಮಿ ಬನ್ನಿ''

ಎಂದು ಆರಂಭಿಸುತ್ತಾರೆ. ಕಾವ್ಯದುದ್ದಕ್ಕೂ ಇದು ಪಲ್ಲವಿಯಾಗಿ ಸಾಗುವುದನ್ನು ಕಾಣಬಹುದು.

ಜೀ.ಶಂ.ಪ ಅವರು ಮಂಟೇಸ್ವಾಮಿ ಕಾವ್ಯವನ್ನು ''ಧರೆಗೆ ದೊಡ್ಡವರ ಸಾಲು'', ''ರಾಚಪ್ಪಾಜಿ ಸಾಲು'', ''ಸಿದ್ದಪ್ಪಾಜಿ ಸಾಲು'', ''ಚಿಕ್ಕಲೂರು ಸಾಲು''ಗಳೆಂದು ನಾಲ್ಕು ಭಾಗಗಳಾಗಿ ವಿಂಗಡಿಸಿಕೊಂಡಿದ್ದಾರೆ. ಧರೆಗೆ ದೊಡ್ಡವರ ಸಾಲಿನಲ್ಲಿ ಮಂಟೇಸ್ವಾಮಿಯವರು ಕಲ್ಯಾಣದಿಂದ ಬಂದು ಮಾಚಯ್ಯನ ಹುಚ್ಚೆ ಒಲೆಯಲ್ಲಿ ಮಠವನ್ನು ಮಾಡಿದರೆಂಬ ಪ್ರಸ್ತಾಪವಿದೆ.

ಸಿದ್ದಪ್ಪಾಜಿ ಸಾಲಿನಲ್ಲಿ ಸಿದ್ದಪ್ಪಾಜಿಯನ್ನು ಶಿಷ್ಯನಾಗಿ ಪಡೆದು ಸಿದ್ದಪ್ಪಾಜಿ ಹಲಗೂರಿನಲ್ಲಿ ಪಾಂಚಾಳರಿಂದ ಕಬ್ಬಿಣದ ಭಿಕ್ಷೆಯನ್ನು ತಂದು ಮಂಟೇಸ್ವಾಮಿಯವರ ಒಕ್ಕಲು ಮಾಡಿದುದು ಇದ್ದರೆ, ರಾಚಪ್ಪಾಜಿ ಸಾಲಿನಲ್ಲಿ ರಾಚಪ್ಪಾಜಿಯವರು ಬೊಪ್ಪೇಗೌಡನಪುರದಿಂದ ದೊಡ್ಡಮ್ಮ ತಾಯಿಯವರ ಜೊತೆ ಹೊರಟು ಆಕೆ ತೋಪೊಂದರಲ್ಲಿ ಮುಟ್ಟಾಗಲು ಆಕೆಯನ್ನು ಅಲ್ಲೇ ನೆಲೆಸುವಂತೆ ಹೇಳಿ ಎಡತೊರೆ ಸಮೀಪದ ಕಪ್ಪಡಿ ಕ್ಷೇತ್ರಕ್ಕೆ ಬಂದು ತಾವು ಐಕ್ಯರಾದ ಕಥೆ ಬರುತ್ತದೆ. ಚಿಕ್ಕಲೂರು ಸಾಲಿನಲ್ಲಿ ಅನೇಕ ಪವಾಡಗಳನ್ನು ಮಾಡಿದ ಸಿದ್ದಪ್ಪಾಜಿಯವರು ಕೊನೆಗೆ ಚಿಕ್ಕಲೂರಿನಲ್ಲಿ ನೆಲೆಸುವ ಪ್ರಸಂಗ ಬರುತ್ತದೆ.

''ಬಸವಣ್ಣನವರ ದೃಢಮನ ಪರೀಕ್ಷೆ ಮಾಡಲು ಧರೆಗೆ ದೊಡ್ಡವರು ಮಹಾಮನೆಗೆ ಸೊಟ್ಟಕೈ, ಕುಂಟಕಾಲು, ಕುರುಡುಕಣ್ಣು, ಕಜ್ಜಿ ಮೈ ಬಿಟ್ಟುಕೊಂಡು ಕುಷ್ಟರೋಗಿಯಂತೆ ಬಂದು ಹೊಟ್ಟೆ ಹಸಿವು ಒಳಗೆ ಬಿಡಿ ಎನ್ನಲು ಬಿಡದೆ ಕಾವಲಿನವರು ಹೊರತಳ್ಳಿದರು. ನಾಲಿಗೆ ಇಲ್ಲದ ಘಂಟೆ ನಾದವಾಗಲು ಬಸವಣ್ಣನವರು ಆ ಶಬ್ದವನ್ನು ಕೇಳಿ ಓಡಿಬಂದು ದೊಡ್ಡವರಿಗೆ ನಮಸ್ಕರಿಸಿ ಒಳಗೆ ಬರುವಂತೆ ಬೇಡಿದರು ಅವರು ಬರಲು ನಿರಾಕರಿಸಲು ಕೈ ಹಿಡಿದು ಎತ್ತಲು ಕೈಯೇ ಕಾಲು ಹಿಡಿಯಲು ಕಾಲೇ ಕಿತ್ತು ಬರಲು ಅವನ್ನೆಲ್ಲಾ ಬಟ್ಟೆಯಲ್ಲಿ ಕಟ್ಟಿಕೊಂಡು ಮಹಾಮನೆಗೆ ಹೊತ್ತುಕೊಂಡು ಬರುವರು. ಅದನ್ನು ನೋಡಿದ ಜಂಗಮರ ಇಷ್ಟಲಿಂಗಗಳು ಮಾಯವಾಗಲು ಎಲ್ಲರೂ ಓಡಿ ಬಂದು ದೊಡ್ಡವರಿಗೆ ನಮಸ್ಕರಿಸಿದರು. ಆಗ ಅವರು ''ನೀವು ಮರ್ತ್ಯಲೋಕದೊಳಗೆ ಅಲ್ಲಾ ಖುದಾ ಅಕ್ಬರ್ ಇಮಾಮ್ ಸ್ವಾಮಿ'' ಅಂತ ದೇವರಪೂಜೆ ಮಾಡಿಕೊಂಡು ಹೋಗಿ ಮರ್ತ್ಯಲೋಕದಲ್ಲಿ ಮುಸಲ್ಮಾನರಾಗಿ ಹೋಗಿ ನಿಮ್ಮ ದೇವರಿಗೆ ಹನ್ನೊಂದು ದಿನಗಂಟ ಕಾತರಲಿಂಗ ಕಟ್ಟಿಸಿಕೊಳ್ಳಿ''[೬] ಎಂದರು. ಅಲ್ಪಸ್ವಲ್ಪ ಬದಲಾವಣೆಗಳೊಡನೆ ಇಂಥ ಪ್ರಸಂಗ ಮಾದೇಶ್ವರ ಕಾವ್ಯದಲ್ಲೂ ಬರುತ್ತದೆ. ಆದರೆ ಅವರನ್ನು ಮುಸಲ್ಮಾನರಾಗಿ ಎಂದು ಹೇಳುವ ಪ್ರಸಂಗವಿಲ್ಲ. ಮುಸಲ್ಮಾನರು ಮಂಟೇಸ್ವಾಮಿ ತಮ್ಮವರೆಂದು ಹೇಳಿಕೊಳ್ಳುವರು. ಶಿವನ ಸಮುದ್ರದ ಬಳಿ ದರ್ಗದ ಗುರುಗಳು ಮೋಕ್ಷಾವಲ್ಲಿ ಎಂಬ ಹೆಸರಿನ ಮಂಟೇದಯ್ಯನವರು ಇಬ್ಬರೂ ಉತ್ತರದೇಸದಿಂದ ಬಂದರೆಂದೂ ಹಿಂದೂಗಳ ಜೊತೆ ಸೇರಿಕೊಂಡು ಈ ಪರಿವರ್ತನೆ ಪಡೆದವರೆಂದೂ ಅವರ ಹೇಳಿಕೆ. ಈಗಲೂ ಮುಸಲ್ಮಾನರು ಮಂಟೇಸ್ವಾಮಿಕಾವ್ಯ ಶೈವ, ವೈಷ್ಣವ, ಮುಸ್ಲಿಂ ಪರಂಪರೆಯನ್ನು ಹೊಂದಿದೆ ಎನ್ನಬಹುದು. ಹೀಗೆ ಮಂಟೇಸ್ವಾಮಿ ಹಿಂದೂ ಮುಸ್ಲಿಮರ ಬಾಂಧವ್ಯ ಬೆಸೆದು ಕಾವ್ಯ ಹೊಸ ತಿರುವು ಕೊಡುತ್ತದೆ.

ಹೀಗೆ ಜೀ.ಶಂ.ಪರಮಶಿವಯ್ಯನವರು ಈ ರೀತಿಯಲ್ಲಿ ಮಂಟೇಸ್ವಾಮಿಯ ಜೀವನ ಚರಿತ್ರೆಯನ್ನು ಕಟ್ಟಿಕೊಟ್ಟಿದ್ದಾರೆ.

ಹಾಗೆಯೇ ಮಂಟೇಸ್ವಾಮಿ ಕಾವ್ಯ ಸಂಗ್ರಹಿಸಿದ ಪಟ್ಟಿಯಲ್ಲಿ ತಂಮಪಮೂರ್ತಿ ಮತ್ತು ಬೀಡನಹಳ್ಳಿ ಚೌಡೇಗೌಡರು ನಂತರದವರು. ಈ ಇಬ್ಬರೂ ಒಂದೊಂದು ಪಠ್ಯವನ್ನು ಸಂಗ್ರಹಿಸಿದ್ದಾರೆ. ಈ ಕಾವ್ಯಗಳ ಪಠ್ಯಗಳಲ್ಲಿ ಲಿಖಿತ ಪಠ್ಯಕ್ರಮದ ಗ್ರಂಥಸಂಪಾದನೆ ಕ್ರಮವನ್ನು ಅನುಸರಿಸಿದ್ದಾರೆ.

ಮಂಟೇಸ್ವಾಮಿ ಒಕ್ಕಲಿನವರು ಹೆಚ್ಚು ಮೈಸೂರು, ಮಂಡ್ಯ ಜಿಲ್ಲೆಗಳಲ್ಲಿ ಕಂಡು ಬರುವುದರಿಂದ ಈ ಎರಡು ಜಿಲ್ಲೆಗಳಲ್ಲಿ ಹೆಚ್ಚು ಕತೆ ಹಾಡುವ ನೀಲಗಾರ ಕಲಾವಿದರು ಇದ್ದಾರೆ. ಈ ಎರಡು ಸೀಮೆಗಳಲ್ಲಿ ಎರಡು ಗುರು ಪರಂಪರೆಗಳು ಇರುವುದು ಸೂಕ್ಷ್ಮವಾಗಿ ಗೋಚರಿಸುತ್ತದೆ. ಮಂಡ್ಯ ಜಿಲ್ಲೆ ಗುರುಪರಂಪರೆಯ ನೀಲಗಾರರು ಅಲ್ಲಿನ ಸುತ್ತಮುತ್ತಲಿನ ಸಾಂಸ್ಕೃತಿಕ ವಿವರಗಳನ್ನು ಎತ್ತಿಕೊಂಡು ತಂಬೂರಿ, ಗಗ್ಗರ, ಢಕ್ಕೆಗಳನ್ನು ಪ್ರಧಾನವಾದ ವಾದ್ಯ ಪರಿಕರಗಳನ್ನಾಗಿ ಬಳಸಿ ಕತೆ ಹಾಡುತ್ತಾರೆ. ಅದೇ ರೀತಿ ಮೈಸೂರು ಜಿಲ್ಲೆಯ ಗುರುಪರಂಪರೆಯ ನೀಲಗಾರರು ಮೈಸೂರಿನ ಸುತ್ತಮುತ್ತಲಿನ ಸಾಂಸ್ಕೃತಿಕ ವಿವರಗಳನ್ನು ಕತೆಗಳಲ್ಲಿ ಸೇರಿಸಿ ಹಾಡುತ್ತಾರೆ. ಇವರು ಮುಖ್ಯವಾಗಿ ತಂಬೂರಿ, ಗಗ್ಗರ, ದಮ್ಮಡಿಯನ್ನು ಬಳಸಿ ಹಾಡುತ್ತಾರೆ. ಮಂಡ್ಯಜಿಲ್ಲೆಯ ಮೇಳನಾದಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡುವುದರಿಂದ ವಾದ್ಯ ಪರಿಕರಗಳನ್ನು ಹೆಚ್ಚು ಬಳಸುತ್ತಾರೆ. ಮೈಸೂರು ಜಿಲ್ಲೆಯವರು ಕತೆಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟು ಹಾಡುತ್ತಾರೆ.

ರಾ. ವೆಂಕಟೇಶ ಇಂದ್ವಾಡಿಯವರು ಸಂಪಾದಿಸಿರುವ ''ಧರೆಗೆ ದೊಡ್ಡವರ ಕತೆ''ಯನ್ನು ಮೈಸೂರು ಜಿಲ್ಲೆಯ ಶ್ರೀಕಾರಪುರದ ಪುಟ್ಟಮಾದಯ್ಯನವರ ಶಿಷ್ಯರಾದ ಶ್ರೀ ಮೋಳೆ ರಾಚಯ್ಯನವರು ಹಾಡಿದ್ದಾರೆ.

''ಮಂಡ್ಯ ಜಿಲ್ಲೆಯ ಪಠ್ಯಗಳಿಗೂ ಮೈಸೂರು ಜಿಲ್ಲೆಯ ಪಠ್ಯಗಳಿಗೂ ಎದ್ದು ಕಾಣುವ ವ್ಯತ್ಯಾಸವೆಂದರೆ ದೊಡ್ಡಮ್ಮ ತಾಯಿಯನ್ನು ಮಂಡ್ಯ ಜಿಲ್ಲೆಯ ಗಾಯಕರು ಕಾಗಿನೆಲೆಯಿಂದ ಪಡೆದರೆ ಮೈಸೂರು ಜಿಲ್ಲೆಯ ಗಾಯಕರು ದೊಡ್ಡಮ್ಮ ತಾಯಿಯನ್ನು ಮೈಸೂರು ಸಂಸ್ಥಾನದಿಂದ ಪಡೆಯುತ್ತಾರೆ. ಮೇಲುನೋಟಕ್ಕೆ ಕತೆಯಲ್ಲಿ ಈ ವ್ಯತ್ಯಾಸ ಕಂಡುಬಂದರೂ ಕತೆಯ ಒಟ್ಟು ಆಶಯಕ್ಕೆ ಭಂಗಬರದಂತೆ ನಿರ್ವಹಿಸುವ ಸಾಂಸ್ಕೃತಿಕ ಬದ್ಧತೆಗಳು ಈ ಎರಡು ಮೇಳಗಳಲ್ಲಿ ಕಂಡುಬರುತ್ತದೆ.''[೬]

ಮುಖ್ಯವಾಗಿ ಈ ಕತೆಯಲ್ಲಿ ಮಂಟೇಸ್ವಾಮಿಗಳು ಕೈಲಾಸದಿಂದ ಬಂದು ಬ್ರಹ್ಮಾಂಡವನ್ನು ಸೃಷ್ಟಿಸಿ, ಕಲ್ಯಾಣವನ್ನು ಬರಿದುಮಾಡಿ, ಧರೆಗೆ ದೊಡ್ಡವರಾಗಿ, ಆದಿಕಲ್ಯಾಣದಲ್ಲಿ ಅಲ್ಲಮನಾಗಿ, ರಾಚಪ್ಪಾಜಿಯನ್ನು ಪಡೆದು ಕೊಡೇಕಲ್ಲಿನಲ್ಲಿ ಕೊಂಡು ಮಕ್ಕಳನ್ನು ಪಡೆದು ಕೊಡಲಾದಯ್ಯನಾಗಿ ವಿಜಯನಗರ ಗಾರುಡಿಗರ ಗೆದ್ದು ಚೆನ್ನಾಜಮ್ಮನನ್ನು ಪಡೆದು ಚೆನ್ನಮಂಟೇದನಾಗಿ, ತುರುಕಾಂಡದಲ್ಲಿ ಹರೇ ಅಲ್ಲನಾಗಿ ಬೊಪ್ಪಣಪುರದಲ್ಲಿ ಕುರಿದೊಡ್ಡಿ ಚಂದ್ರಶಾಲೆಯಾಗಿ, ಮಾಚಯ್ಯನ ಕತ್ತೆ ಕೊಟ್ಟಿಗೆ ಉರಿಗದ್ದುಗೆಯಾಗಿ ಪಡೆದು ಮೈಸೂರಿನಲ್ಲಿ ಮಾಗುರುವಾಗು ಮಾರಳ್ಳಿಯಲ್ಲಿ ಮಗ ಕೆಂಪಾಚಾರಿ ಪಡೆದು ಸಿದ್ದಪ್ಪಾಜಿ ಮಾಡಿ ಕಬ್ಬಿಣ ತರಿಸಿಕೊಂಡು ಮಠ ಮನೆ ಮಾಡಿ ಕತ್ತಲರಾಜ್ಯಕ್ಕೆ ಜ್ಯೋತಿ ಲಿಂಗಯ್ಯನಾಗಿ ತನ್ನ ಶಿಷ್ಯರಿಗೆಲ್ಲಾ ಸೇವೆ ನೇಮಕಟ್ಟುಗಳನ್ನು ಮಾಡಿ ಮಠಮನೆಯ ಪಾತಾಳಬಾವಿಯಲ್ಲಿ ಬಾರಿಗುಂಡನ್ನು ಬಾಚಿಕೊಂಡು ಮರ್ತ್ಯ ಲೋಕಕ್ಕೆ ಮರೆಯಾಗಿ ಹೋಗುತ್ತಾರೆ.

''ಚರಿತ್ರೆಯನ್ನು ಕ್ರಮಬದ್ಧವಾಗಿ ಕಾಣುವ ನಮ್ಮ ಇಂದಿನ ಅಧ್ಯಯನ ಮಾದರಿಗಳಿಗೆ ಈ ಕತೆ ಸವಾಲಾಗಿ ಬಿಡುತ್ತದೆ. ಧರೆಗೆ ದೊಡ್ಡವರ ಕತೆ ಮಂಟೇದರಿಂದ ಪ್ರಾರಂಭವಾಗಿ ತಮ್ಮ ಸಿಸುಮಗನಾದ ಸಿದ್ದಪ್ಪಾಜಿಯಿಂದ ಕೊನೆಗೊಳ್ಳುತ್ತದೆ. ಕತೆಯ ಅರ್ಧಭಾಗದವರೆಗೆ ಮಂಟೇದರು ಕೇಂದ್ರ ವ್ಯಕ್ತಿಯಾಗಿರುತ್ತಾರೆ. ನಂತರ ಕತೆಯನ್ನು ಸಿದ್ದಪ್ಪಾಜಿಯವರು ಬೆಳೆಸುತ್ತಾರೆ. ಈ

ಇಬ್ಬರ ನಂತರ ಒಟ್ಟು ಕತೆಯಲ್ಲಿ ಅನೇಕ ಉಪನಾಯಕ ಕತೆಗಳು ಸೇರಿಕೊಂಡು ಧರೆಗೆ ದೊಡ್ಡವರ ಕತೆಯೆಂದು ಕರೆಯಲ್ಪಟ್ಟಿದೆ.''[೪]

ಹೀಗೆ ಡಾ. ವೆಂಕಟೇಶ ಇಂದ್ವಾಡಿಯವರ ಧರೆಗೆ ದೊಡ್ಡವರ ಕತೆಯಲ್ಲಿ ಈ ರೀತಿಯಾಗಿ ಕಥಾಭಾಗ ಮುಂದುವರಿಯುತ್ತದೆ.

೧೯೯೬ರಲ್ಲಿ ಡಾ.ಹಿ.ಚಿ.ಬೋರಲಿಂಗಯ್ಯ ಅವರು ಬುಡಕಟ್ಟು ಮಹಾಕಾವ್ಯ ಮಾಲೆಯಡಿಯಲ್ಲಿ ''ಮಂಟೇಸ್ವಾಮಿ'' ಎಂಬ ಬೃಹತ್ ಕಾವ್ಯವನ್ನು ಸಂಪಾದಿಸಿದ್ದಾರೆ. ಈ ಕಾವ್ಯವನ್ನು ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿದೆ. ಈ ಕಾವ್ಯವು ಒಟ್ಟು ೮೩೫ ಪುಟಗಳಿಂದ ಕೂಡಿದ್ದು ೨೩೫೦೦ ಸಾಲುಗಳನ್ನು ಒಳಗೊಂಡ ಮಹಾಕಾವ್ಯವಾಗಿದೆ. ಈ ಪಠ್ಯವನ್ನು ಮೈಸೂರು ಬಳಿಯ ಇನಕಲ್ಲು ಮಹಾದೇವಯ್ಯನವರು ಹಾಡಿದ್ದಾರೆ. ಡಾ. ಬೋರಲಿಂಗಯ್ಯನವರು ಸುದೀರ್ಘವಾದ ಪ್ರಾಸ್ತಾವನೆಯೊಂದಿಗೆ ಬೃಹತ್ ಕಥಾನಕವನ್ನು ಅತ್ಯಂತ ವೈಜ್ಞಾನಿಕವಾಗಿ ಸಂಪಾದಿಸಿದ್ದಾರೆ.

ಬೋರಲಿಂಗಯ್ಯನವರು ಸಂಗ್ರಹಿಸಿರುವ ಕಾವ್ಯದಲ್ಲಿ ಮುಖ್ಯವಾಗಿ ಮಂಟೇಸ್ವಾಮಿ ಕಲ್ಯಾಣ ಪಟ್ಟಣವನ್ನು ಪ್ರವೇಶ ಮಾಡುವ ರೀತಿಯೇ ತುಂಬಾ ರೋಚಕವಾಗಿದೆ. ಅಸಹ್ಯಕರ ವೇಶದ ಕುಷ್ಠರೋಗಿ ಕಲ್ಯಾಣ ಪ್ರವೇಶ ಮಾಡಿ ಎಲ್ಲರನ್ನು ದಿಗ್ಭ್ರಮೆಗೊಳಿಸುವುದರಿಂದ ಹಿಡಿದು ರಂಡ ಪುಂಡ ಜಂಗಮರು ಕಟ್ಟಿದ ಲಿಂಗಗಳನ್ನು ಕಲ್ಯಾಣಿಯಲ್ಲಿ ಮಾಯ ಮಾಡುವವರೆಗಿನ ದೃಶ್ಯ ಅನೇಕ ಸಾಂಸ್ಕೃತಿಕ ಚರ್ಚೆಗಳಿಗೆ ಎಡೆ ಮಾಡಿಕೊಡುತ್ತದೆ. ಇಲ್ಲಿ ಮುಖ್ಯವಾಗಿ ಆತ್ಮದಲ್ಲಿ ಶುದ್ಧಿಯಿಲ್ಲದ ಕೆಲವರು ಕಟ್ಟಿದ ಲಿಂಗದ ಕಲ್ಪನೆಯನ್ನು ಹುಸಿಗೊಳಿಸುವ ಆಶಯ. ಕಲ್ಯಾಣದಲ್ಲಿ ಉಳಿಯಲು ಯೋಗ್ಯರಾದ ಶರಣರು ಕೇವಲ ಕೆಳವರ್ಗದವರು ಮಾತ್ರ ಎಂಬುದನ್ನು ಗಮನಿಸಬಹುದು. ಕೊನೆಗೆ ಮಂಟೇಸ್ವಾಮಿ ಪರೀಕ್ಷೆಯಲ್ಲಿ ಪಾಸಾಗಿ ಉಳಿಯುವವರೆಂದರೆ ಹೊಲೆಯರ ಹೊನ್ನಪ್ಪ, ಮಾದಿಗರ ಚೆನ್ನಯ್ಯ, ಮಡಿವಾಳ ಮಾಚಪ್ಪ, ಗಾಣಿಗರ ದಾಸಪ್ಪ, ಅಂಬಿಗರ ಚೌಡಯ್ಯ ಇತ್ಯಾದಿ ಶೂದ್ರಾತಿ ಶೂದ್ರರು ಮಾತ್ರ ಇವೇ ನಿಜವಾದ ಶರಣರು ಎಂಬುದು ಇವರ ಕಲ್ಪನೆ. ಇವರ ದೃಷ್ಟಿಯಲ್ಲಿ ಕಲ್ಯಾಣ ಕೂಡ ಭ್ರಷ್ಟವಾಗಿತ್ತು ಅದನ್ನು ಮಂಟೇಸ್ವಾಮಿ ಶುಚಿಗೊಳಿಸಿ ಬಸವಣ್ಣನವರಿಗೆ ಒಪ್ಪಿಸುತ್ತಾರೆ. ವೀರಶೈವ ಪುರಾಣಗಳು ಅಥವಾ ಶೂನ್ಯ ಸಂಪಾದನೆಯಲ್ಲಿ ಕಾಣಲಾಗದ ಈ ಚಿಕಿತ್ಸಕ ಆಶಯವನ್ನು ಬೋರಲಿಂಗಯ್ಯನವರ ಪಠ್ಯದಲ್ಲಿ ಕಾಣಬಹುದು. ಒಟ್ಟಾರೆ ಮಂಟೇಸ್ವಾಮಿ ಕಾವ್ಯದ ಕಲ್ಯಾಣ ಪಟ್ಟಣದ ಸಾಲು ಚಳುವಳಿಯ ನಂತರದ ಕಲ್ಯಾಣ ಪಟ್ಟಣದ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದ್ದು ಅಲ್ಲಿನ ಅಜ್ಞಾನಕ್ಕೆ ತಾರತಮ್ಯಕ್ಕೆ ಬರೆದ ಭಾಷ್ಯವಾಗಿ ಕಾಣಿಸುತ್ತದೆ.

ಮಂಟೇಸ್ವಾಮಿಯ ಪರ್ಯಟನೆಯ ಜೊತೆಗೇ ಸಾಗುವ ಈ ಕಥಾನಕ ಮುಖ್ಯವಾಗಿ ಶಿಶು ಮಕ್ಕಳನ್ನು ಸಂಪಾದಿಸುತ್ತಾ ಹೋಗುತ್ತದೆ. ಶಿಶುಮಕ್ಕಳನ್ನು ಪಡೆಯುವುದು ಇಲ್ಲಿ ಸಾಂಕೇತಿಕ. ಅವರ ಮೂಲಕ ಒಂದೊಂದು ಜನವರ್ಗವೇ ಮಂಟೇಸ್ವಾಮಿಯ ಧಾರ್ಮಿಕ ಪರಿಧಿಯ ಒಳಕ್ಕೆ ಸೇರಿಬಿಡುತ್ತಾರೆ. ರಾಚಪ್ಪಾಜಿ, ತೋಪಿನ ದೊಡ್ಡಮ್ಮತಾಯಿ, ಚೆನ್ನಾಜಮ್ಮ, ಮಡಿವಾಳ ಮಾಚಯ್ಯ, ಫಲಹಾರದಯ್ಯ, ಸಿದ್ದಪ್ಪಾಜಿ ಮುಂತಾದವರನ್ನು ಮಂಟೇಸ್ವಾಮಿಗಳು ತಮ್ಮ ಪಂಥದ

ಅನುಯಾಯಿಗಳಾಗಿ ಮಾಡಿಕೊಂಡು ಶಿಷ್ಯರನ್ನಾಗಿ ಪಡೆದುಕೊಳ್ಳುತ್ತಾರೆ. ಮೋಡಿ, ಮಾಟ, ತಂತ್ರ, ವಿದ್ಯೆಗಳು ಇಲ್ಲಿ ಸರಾಗವಾಗಿ ಬಂದು ಹೋಗುತ್ತವೆ. ''ಮಂಟೇಸ್ವಾಮಿ ಕಾವ್ಯದ ಬಹಳ ಮುಖ್ಯ ಅಂಶವೆಂದರೆ ಎಲ್ಲಿಯೂ ಅದು ಹಿಂಸೆಯ ರೂಪ ತಾಳುವುದಿಲ್ಲ. ಆದರೆ ಮಂಟೇಸ್ವಾಮಿ ಅಹಂಕಾರಿಗಳನ್ನು ಬಿಡುವವನಲ್ಲ ಅವರು ಎಷ್ಟೇ ದೊಡ್ಡವರಾದರೂ ಅಂಥವರ ಅಸ್ತಿತ್ವವನ್ನು ಪಲ್ಲಟಗೊಳಿಸಬಲ್ಲ ಶಕ್ತಿ ಅವನಿಗಿದೆ. ಎಂಥದ್ದನ್ನು ಅಧೀನ ಮಾಡಿಕೊಳ್ಳಬಲ್ಲ ಚಾತುರ್ಯ ಮಂಟೇಸ್ವಾಮಿಗಿದೆ.''[೫]

ಈ ಕಾವ್ಯ ಪಠ್ಯದಲ್ಲಿ ಬರುವ ರಾಚಪ್ಪಾಜಿ ಸಾಲು ಹಾಗೂ ಮೋಡಿ ವಿಚಾರಗಳು ಫಲಹಾರದಯ್ಯನ ಸಾಲಿನ ರೋಚಕ ನರಬಲಿ ಮತ್ತು ಬಲಿಯಾಗುವ ಹುಡುಗ ಫಲಾರದಯ್ಯನಾಗಿ ಪರಿವರ್ತಿತವಾಗುವ ಸಾಂಸ್ಕೃತಿಕ ಸಂದರ್ಭ. ದೊಡ್ಡಮ್ಮ ತಾಯಿಗೆ ಹೇಳುವ ಕಾಲಜ್ಞಾನ ವಿಚಾರಗಳು ಇವೆಲ್ಲವೂ ಅಧ್ಯಯನಕ್ಕೆ ಯೋಗ್ಯವಾದ ವಿಚಾರಗಳು. ಇಲ್ಲಿ ಅತ್ಯಂತ ಮುಖ್ಯವಾದ ಕಥಾ ಭಾಗವೆಂದರೆ ಕೆಂಪಾಚಾರಿ ಮತ್ತು ಸಿದ್ದಪ್ಪಾಜಿಯದು. ಕೆಂಪಾಚಾರಿಯಾಗಿದ್ದವನು ಸಿದ್ದಪ್ಪಾಜಿಯಾಗಿ ಪರಿವರ್ತಿತವಾಗುವ ಅವಧಿ ಕಾವ್ಯದ ದೃಷ್ಟಿಯಿಂದ ಅತ್ಯಂತ ಮುಖ್ಯವಾಗುತ್ತದೆ. ಪಾಂಚಾಳ ಜನ ವರ್ಗವನ್ನು ತನ್ನ ಪರಿಧಿಗೆ ಸೇರಿಸಿಕೊಳ್ಳುವ ಮೂಲಕ ಕಬ್ಬಿಣ ಉತ್ಪಾದಿಸುವ ವರ್ಗವೊಂದನ್ನು ಒಲಿಸಿಕೊಳ್ಳುವುದು ಮಂಟೇಸ್ವಾಮಿ ಅಪೇಕ್ಷೆಯಾಗಿದೆ.

ಹೀಗೆ ವಿಸ್ತಾರವಾಗಿ ಈ ಕತೆ ಸಾಗುತ್ತಾ ಹೋಗುತ್ತದೆ. ಕೊನೆಗೆ ಮಂಟೇಸ್ವಾಮಿ ತನ್ನ ಶಿಷ್ಯನಾದ ಸಿದ್ದಪ್ಪಾಜಿಗೆ ತನ್ನ ಸಕಲ ಬಿರುದುಗಳನ್ನು ಕೊಟ್ಟು ಇಲ್ಲಿಯೂ ಪಾತಾಳ ಪ್ರವೇಶ ಮಾಡುತ್ತಾನೆ. ಶತಮಾನಗಳಿಂದ ಮೌಖಿಕ ಕಾವ್ಯವಾಗಿ ಉಳಿದು ಬೆಳೆದುಕೊಂಡು ಬಂದಿರುವ ಈ ಕತೆ ತನ್ನದೇ ಆದ ಸಾಂಸ್ಕೃತಿಕ ವಿವರಗಳ ಮೂಲಕ ತನ್ನ ಇಚ್ಛೆಗೆ ತಕ್ಕವಾದ ನಾದ ಲಯಗಳ ಮೂಲಕ ಹೊಸ ಚರಿತ್ರೆಯ ರಚನೆಗೆ ಒತ್ತಾಯಿಸುತ್ತದೆ.

ಹೀಗೆ ಮಂಟೇಸ್ವಾಮಿ ಕಾವ್ಯವು ಸುದೀರ್ಘವಾದ ಕಥಾನಕವಾಗಿದ್ದು ಜನಸಾಮಾನ್ಯರಿಗೆ, ಓದುಗರಿಗೆ ಅರ್ಥವಾಗುವಂಥ ಸರಳಸ್ವರೂಪದ ಕಾವ್ಯ ಇದಾಗಿದೆ. ಹಾಗಾಗಿ ಮಂಟೇಸ್ವಾಮಿ ಕಥೆ ಮಹಾಕಾವ್ಯದ ಎಲ್ಲಾ ಲಕ್ಷಣಗಳನ್ನು ರೂಪಗಳನ್ನು ಹೊಂದಿದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ''ಕರ್ನಾಟಕದ ವ್ಯಾಪ್ತಿಗೊಳಪಡುವ ಜನಪದ ಮಹಾಕಾವ್ಯಗಳಲ್ಲಿ ಅತ್ಯಂತ ಪ್ರಮುಖವಾದ ಅವಳಿ ಮಹಾಕಾವ್ಯಗಳೆಂದರೆ ಮಲೆಮಾದೇಶ್ವರ ಮಹಾಕಾವ್ಯ ಮತ್ತು ಮಂಟೇಸ್ವಾಮಿ ಮಹಾಕಾವ್ಯ.''[೬]

೫ :೨ ಸಮಕಾಲೀನ ಪರಂಪರೆಗಳು

ನೀಲಗಾರ ಪರಂಪರೆಯಂತೆಯೇ ಇನ್ನು ಉಳಿದ ಅನೇಕ ಸಮಕಾಲೀನ ಪರಂಪರೆಗಳನ್ನು ೧೫ನೇ ಶತಮಾನದಲ್ಲಿ ಕಾಣಬಹುದು. ಅವುಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

೫:೨.೧ ಕೊಡೇಕಲ್ಲು ಪರಂಪರೆ

ಕೊಡೇಕಲ್ಲು ಪರಂಪರೆ ಮತ್ತು ನೀಲಗಾರ ಪರಂಪರೆಗಳೆರಡು ವಿಭಿನ್ನ ಪಂಥಗಳಾಗಿ ಉತ್ತರ-ದಕ್ಷಿಣದಲ್ಲಿ ಏಕಕಾಲದಲ್ಲಿ ಹರಡಿಕೊಂಡಿವೆ. ಇವೆರಡು ೧೫ನೇ ಶತಮಾನದಲ್ಲಿ ಹುಟ್ಟಿಕೊಂಡವು. ದೋಣಿ ನದಿಯ ದಡದ ಮೇಲಿರುವ ಕೊಡೇಕಲ್ಲು

ಗ್ರಾಮ ಗುಲಬರ್ಗಾ ಜಿಲ್ಲೆಯ ಸುರಪುರ ತಾಲ್ಲೂಕಿನಲ್ಲಿದೆ. ಮೂಲತಃ ಹಂಪಿಯಲ್ಲಿ ಹುಟ್ಟಿದ ಬಸವಣ್ಣನವರು ದೇಶ ಸಂಚಾರ ಮಾಡುತ್ತಾ ಕೊಡೇಕಲ್ಲಿಗೆ ಬಂದು ಬೇಡರ ಹನುಮನಾಯಕನಿಂದ ಈ ಪ್ರದೇಶವನ್ನು ಕೊಂಡು, ಕೊಡೇಕಲ್ಲಿನಲ್ಲೊಂದು ಪರಂಪರೆಯನ್ನೇ ಹುಟ್ಟು ಹಾಕಿದರು ಎಂದು- 'ನಂದಿ ಆಗಮಲೀಲೆ' ತಿಳಿಸುತ್ತದೆ. ದಕ್ಷಿಣಕ್ಕೆ ಹೋದ ಮಂಟೇಸ್ವಾಮಿ ಕುರುಬ ಬೊಪ್ಪೇಗೌಡನ ಹಟ್ಟಿಯನ್ನು ತನ್ನ ನೆಲೆಯಾಗಿಸಿಕೊಳ್ಳುತ್ತಾನೆ. ಇವರ ತೋರುಗದ್ದುಗೆಗಳಿರುವ ಕೆಲೂರು-ಮೈಸೂರು ಮುಲತಃ ಕುರುಬರ ನೆಲೆಗಳೇ ಆಗಿವೆ ಎಂಬುದು ಸ್ಪಷ್ಟವಾಗುತ್ತದೆ. ಮುಖ್ಯವಾಗಿ ಪಶುಪಾಲನ ವೃತ್ತಿಯನ್ನು ಪ್ರಧಾನ ಕಸುಬಾಗಿಸಿಕೊಂಡಿದ್ದ ಬೇಡರ-ಕುರುಬರ ನೆಲೆಗಳನ್ನು ಇವೆರಡು ಪರಂಪರೆಗಳು ತಮ್ಮ ಸಾಂಸ್ಕೃತಿಕ ಕೇಂದ್ರಗಳನ್ನಾಗಿಸಿಕೊಂಡಿವೆ. ಬೇಡರ-ಕುರುಬರೊಟ್ಟಿಗೆ ಇನ್ನಿತರ ಕೆಳವರ್ಗದ ಜನರನ್ನು ಒಕ್ಕಲಾಗಿಸಿಕೊಂಡು ಈ ಪರಂಪರೆಗಳು ಬೆಳೆದಿವೆ ಎಂಬುದು ತಿಳಿದುಬರುತ್ತದೆ.

ಕೊಡೇಕಲ್ಲು ಸಾಹಿತ್ಯ ಕೊಡೇಕಲ್ಲು ಬಸವಣ್ಣನವರನ್ನು ಕಲ್ಯಾಣದ ಬಸವಣ್ಣನ ಪುನರವತಾರವೆಂದೇ ಹೇಳುತ್ತದೆ. ಇವನ ಗುರು ಆರೂಢ ಸಂಗಮೇಶ, ಕೊಡೇಕಲ್ಲು ಬಸವಣ್ಣನವರಿಗೂ ಇಬ್ಬರು ಹೆಂಡತಿಯರಿದ್ದರು. ಮೊದಲನೆಯ ಹೆಂಡತಿ ತೀರಿಕೊಂಡ ಬಳಿಕ ಎರಡನೆಯ ಹೆಂಡತಿಯಾಗಿ ನೀಲಮ್ಮನನ್ನು ಮದುವೆಯಾದ ಬಸವಣ್ಣನವರು ಮೂವರು ಮಕ್ಕಳನ್ನು ಪಡೆಯುತ್ತಾರೆ.

''ಸುತರು ಮೂವರು ನೀಲಾಂಬಿಕೆಗೆ
ಪ್ರಥಮದಲಿ ರಾಚಣ್ಣ ಅಗ್ರಜ
ದ್ವಿತಿಯದಲಿ ಗುಹೇಶ್ವರ ಸಂಗಯ್ಯನೆಂಬ ಬಾಲಕನು''[೭]

ಎಂದು ''ನಂದಿ ಆಗಮಲೀಲೆ'' ತಿಳಿಸುತ್ತದೆ. ಈ ನಂದಿ ಆಗಮಲೀಲೆಯನ್ನು ಕೊಡೇಕಲ್ಲು ಬಸವಣ್ಣನವರ ವಂಶಿಕನೇ ಆದ ವೀರಸಂಗಯ್ಯ (೧೫೮೯) ಬರೆದಿದ್ದಾನೆ. ಈ ಕೃತಿ ಮುಖ್ಯವಾಗಿ ಕೊಡೇಕಲ್ಲು ಬಸವಣ್ಣನವರ ಪರಂಪರೆಯ ಮೇಲೆ ಐತಿಹಾಸಿಕವಾಗಿ ಬೆಳಕು ಚೆಲ್ಲುತ್ತದೆ. ಮಂಟೇಸ್ವಾಮಿಗಳು ದಕ್ಷಿಣದಿಂದ ಕೊಡೇಕಲ್ಲಿಗೆ ಬಂದರು ಎಂಬುದನ್ನು ಈ ಕೃತಿ ಸ್ಪಷ್ಟಪಡಿಸುತ್ತದೆ.

ಕೊಡೇಕಲ್ಲು ಪರಂಪರೆ ಬರಹದ ಪರಂಪರೆ. ಕೊಡೇಕಲ್ಲು ಬಸವಣ್ಣನವರ ಮಗ ರಾಚಪ್ಪಯ್ಯ ಮತ್ತು ಮೊಮ್ಮಗ ವೀರಸಂಗಯ್ಯ ಇವರು ರಚಿಸಿದ ಸಾಹಿತ್ಯವನ್ನು ''ದೊಡ್ಡವರ ವಚನ ತಾಲೂಕು'' ಎಂದು ಕರೆಯುತ್ತಾರೆ. ಕೊಡೇಕಲ್ಲು ಬಸವಣ್ಣನವರು ಕಾಲಜ್ಞಾನ, ಖಂಡಜ್ಞಾನ, ನೀತಿಜ್ಞಾನ ಭೋದಜ್ಞಾನಗಳೆಂಬ ವಿವಿಧ ಪ್ರಕಾರಗಳ ಸಾಹಿತ್ಯವನ್ನು ರಚಿಸಿದ್ದಾರೆ. ಇವರ ಮಗ ರಾಚಪ್ಪಯ್ಯ ೧೨ ಕಾವ್ಯಗಳನ್ನು ಬರೆದಿದ್ದಾನೆ. ಮೊಮ್ಮಗ ವೀರಸಂಗಯ್ಯ 'ನಂದಿ ಆಗಮಲೀಲೆ'ಯನ್ನು ಬರೆದಿದ್ದಾನೆ. ಕೊಡೇಕಲ್ಲಿನಲ್ಲಿ ಮಂಟೇಸ್ವಾಮಿಯವರ ಕಾಲಜ್ಞಾನ ನುಡಿಗಳು ಲಭ್ಯವಾಗಿದ್ದು ಜಾತ್ರೆ ಸಂದರ್ಭದಲ್ಲಿ ಅವನ್ನು ವಾಚಿಸುತ್ತಾರೆ. ಕೊಡೇಕಲ್ಲು ಬಸವಣ್ಣನವರ ಮಗ ರಾಚಪ್ಪಯ್ಯ ಮಂಟೇದವರೊಟ್ಟಿಗೆ ದಕ್ಷಿಣಕ್ಕೆ ಬಂದು ನೀಲಗಾರ ಪರಂಪರೆಯಲ್ಲಿ ರಾಚಪ್ಪಾಜಿ ಎಂದು ಕರೆಸಿಕೊಂಡಿದ್ದಾನೆ.

ಕೊಡೇಕಲ್ಲು ಬಸವಣ್ಣನವರ ಶಿಷ್ಯೆ ನಾಗಾವಿ ಈರಪ್ಪಯ್ಯನ ಸಂತಾನದವರಾದ ಗಾದಿಮೂಲಕ, ಮಹಲಿನ ಮಠದವರು ಎಂದು ಕರೆಯುವ ಪೀಠಾಧೀಶರು ಕೊಡೇಕಲ್ಲು ಮಠದಲ್ಲಿದ್ದು ಈ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಇವರದು ಸಂಸಾರಿಮಠ, ಹೊಕ್ರಾಣಿ ನಂದ್ಯಾಳ, ಮುತ್ತಗಿ, ಬಸವನ ಬಾಗೇವಾಡಿ, ಕರಭಂಟನಾಳ ಮೊದಲಾದವು ಕೊಡೇಕಲ್ಲಿನ ಶಾಖಾ ಮಠಗಳಾಗಿವೆ. ಈ ಮೂಲಮಠ ಶಾಖಾಮಠಗಳು ತಮ್ಮ ಪೂರ್ವಿಕರು ಬರೆದ ಕೊಡೇಕಲ್ಲು ಸಾಹಿತ್ಯವನ್ನು ರಕ್ಷಿಸಿಕೊಂಡು ಪ್ರತಿಗಳನ್ನು ಮಾಡಿಕೊಂಡು ಧಾರ್ಮಿಕ ಆಚರಣೆಗಳ ಸಂದರ್ಭದಲ್ಲಿ ಓದುವ ಪರಿಪಾಠ ಬೆಳೆಸಿಕೊಂಡಿದ್ದಾರೆ. ಇದನ್ನು ಅವರು ಕೊಡೇಕಲ್ಲು ಸಾಹಿತ್ಯ ಪೆಟ್ಟಿಗೆ ಎಂದು ಕರೆದುಕೊಂಡು ಗುರು-ಶಿಷ್ಯ ಪರಂಪರೆಗಳೆರಡೂ ತಮ್ಮ ಆಚರಣೆಗಳ ಸಂದರ್ಭದಲ್ಲಿ ಪೆಟ್ಟಿಗೆಯನ್ನು ಪೂಜೆ ಮಾಡುತ್ತಾರೆ, ಗುರು ಪರಂಪರೆಯವರು ವಚನಗಳನ್ನು ಓದುತ್ತಾರೆ. ಇದು ವಚನ ಓದಿನ ಪರಂಪರೆಯಾಗಿಯೇ ಬೆಳೆದು ಬಂದಿದೆ. ಜಾತ್ರೆಗಳ ಸಂದರ್ಭದಲ್ಲಿ ಗ್ರಂಥಗಳನ್ನು ಪಲ್ಲಕ್ಕಿಯಲ್ಲಿಟ್ಟು ಮೆರವಣಿಗೆ ಮಾಡುತ್ತಾರೆ. ವಚನಗಳ ಓದೇ ಅಲ್ಲಿನ ಪ್ರಧಾನ ಆಚರಣೆಯಾಗಿದೆ.

ಕೊಡೇಕಲ್ಲು ಪರಂಪರೆ ಲಿಖಿತ ವಚನಗಳ ಓದಿನ ಆಚರಣಾತ್ಮಕ ಪರಂಪರೆಯಾದರೆ, ದಕ್ಷಿಣದ ನೀಲಗಾರ ಪರಂಪರೆ ಅಲಿಖಿತ ಮೌಖಿಕ ಪರಂಪರೆಯಾಗಿದೆ. ನೀಲಗಾರರು ತಮ್ಮ ಸಾಂಸ್ಕೃತಿಕ ನಾಯಕರ ಚರಿತ್ರೆಯನ್ನು ನೆಪವಾಗಿಸಿಕೊಂಡು ತಮ್ಮ ಕಾಲದ ಅನೇಕ ಪರಿಕಲ್ಪನೆಗಳನ್ನು ಸೇರಿಸಿಕೊಂಡು 'ಧರೆಗೆ ದೊಡ್ಡವರ ಕತೆ'ಯನ್ನು ಹಾಡುತ್ತಾರೆ. ಕಾವ್ಯದ ದೃಷ್ಟಿಯಿಂದ ಲಿಖಿತ ವಚನಗಳಿಗಿಂತ ಮೌಖಿಕ ಕಾವ್ಯ ವೈವಿಧ್ಯಮಯವಾಗಿದೆ. ಪ್ರತಿಮೆ, ಪರಿಕಲ್ಪನೆ, ಸಮಕಾಲೀನತೆಯ ಗಾಢವಾದ ಅನುಭವವನ್ನು ಕಟ್ಟಿಕೊಡುತ್ತದೆ.

''ಕೊಡೇಕಲ್ಲು ಸಾಹಿತ್ಯ ಲಿಖಿತಗೊಂಡದ್ದೇ ಒಂದು ಕುತೂಹಲದ ಸಂಗತಿ. ಮುಸ್ಲಿಂ ಉಪಟಳದಿಂದ ಅಮರಗನ್ನಡವೆಂಬ ಸಂಕೇತ ಲಿಪಿಯೊಂದನ್ನು ಬಳಕೆಗೆ ತಂದರು ಎನ್ನಲಾಗಿದೆ.''[೪] ಹಾಗಿದ್ದಲ್ಲಿ ಬರೆದು ಬಚ್ಚಿಡುವುದಕ್ಕಿಂತ ಬರೆಯದೇ ನೆನಪಿನಲ್ಲಿಡುವುದು ರಕ್ಷಣೆಯ ದೃಷ್ಟಿಯಿಂದ ಇನ್ನೂ ಸುಲಭವಾಗುತ್ತಿತ್ತು. ಬಹುಶಃ ಆ ಕಾಲದ ವೀರಶೈವ ಶಿಷ್ಟಕಾವ್ಯಗಳ ಲಿಖಿತ ಪ್ರಕ್ರಿಯೆಯ ಪ್ರಭಾವವೇ ಕಾರಣವಾಗಿರಬಹುದು. ಏಕೆಂದರೆ ಈಗಾಗಲೇ ಹರಿಹರ, ಚಾಮರಸ ಮುಂತಾದ ಕವಿಗಳ ೧೨ನೇ ಶತಮಾನದ ಶರಣ ಜೀವನ ಕಥಾನಕಗಳನ್ನು ಕುರಿತು ಕಾವ್ಯರಚನೆ ಮಾಡಿದ್ದರು. ಈ ಲಿಖಿತ ಪರಂಪರೆಯ ಪ್ರಭಾವ ಕೊಡೇಕಲ್ಲು ಸಾಹಿತ್ಯ ರಚನೆಕಾರರಲ್ಲಿ ಉಂಟಾಗಿದೆ.

ಹಾಗಾಗಿ ವೀರಶೈವ ಧರ್ಮದ ಬರಹಕ್ಕೊಳಪಡಿಸುವ ಪ್ರಕ್ರಿಯೆ ಕೊಡೇಕಲ್ಲು ಸಾಹಿತ್ಯ ಲಿಖಿತವಾಗಲು ಕಾರಣವಾಗಿರಬಹುದು. ದಕ್ಷಿಣದ ಕಾವೇರಿ ನದಿಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವೀರಶೈವ ಧರ್ಮದ ಪ್ರಭಾವ ಕಂಡುಬರುವುದಿಲ್ಲ. ಆದ್ದರಿಂದಾಗಿ ಮಂಟೇಸ್ವಾಮಿಗಳು ಮತ್ತು ರಾಚಪ್ಪಯ್ಯ ಆ ಕ್ಷೇತ್ರವನ್ನು ಆಯ್ದುಕೊಂಡರು ಎನಿಸುತ್ತದೆ. ಉತ್ತರದಿಂದ ಬಂದ ರಾಚಪ್ಪಯ್ಯ ಮತ್ತು ಮಂಟೇಸ್ವಾಮಿಗಳು ದಕ್ಷಿಣದಲ್ಲಿ ಯಾವ ಕಾವ್ಯಗಳನ್ನು ರಚಿಸಲಿಲ್ಲ. ಬದಲಿಗೆ ಇವುಗಳನ್ನು ಮೀರಿ ಸಾಮಾಜಿಕ ಆಂದೋಲನದಲ್ಲಿ ತಮ್ಮನ್ನು ಗುರುತಿಸಿಕೊಂಡರು. ಕೊಡೇಕಲ್ಲು ಸಾಹಿತ್ಯ ಲಿಖಿತಗೊಂಡು

ಸ್ಥಾವರ ಪರಂಪರೆಯಾಗಿ ಕಂಡುಬಂದರೆ, ನೀಲಗಾರ ಪರಂಪರೆ ಜಂಗಮ ಪ್ರವೃತ್ತಿಯ ನಿರಂತರತೆಯ ಸಂಕೇತವಾಗುತ್ತದೆ. ಇವೆರಡೂ ಸಹ ವಚನಚಳುವಳಿಯ ಆಶಯಗಳಿಂದ ಹುಟ್ಟಿದ ಪರಂಪರೆಗಳಾದರೂ ಒಂದು ಲಿಖಿತ ಪರಂಪರೆ ಮತ್ತೊಂದು ಮೌಖಿಕ ಆಚರಣಾತ್ಮಕ ಪರಂಪರೆಗಳಾಗಿ ಉತ್ತರ ದಕ್ಷಿಣದಲ್ಲಿ ಇವೆರಡೂ ಪರಂಪರೆಗಳು ಹಬ್ಬಿಕೊಂಡಿವೆ ಎಂಬುದು ತಿಳಿದುಬರುತ್ತದೆ. (ಈ ವಿಚಾರಗಳ ಹೆಚ್ಚಿನ ಅಧ್ಯಯನಕ್ಕಾಗಿ ಡಾ. ವೆಂಕಟೇಶ ಇಂದ್ವಾಡಿ ಅವರ ಗ್ರಂಥ ಹಾಗೂ ಡಾ. ಬಸವಲಿಂಗ ಸೊಪ್ಪಿನಮಠ ಅವರ ಗ್ರಂಥ ನೋಡಿ.)

೫ :೨.೨ ಮಲೆಮಾದೇಶ್ವರ ಪರಂಪರೆ

ಕರ್ನಾಟಕದ ದಕ್ಷಿಣ ತುದಿಯ ಬೆಟ್ಟ ಸಾಲುಗಳನ್ನು ತನ್ನ ಕೇಂದ್ರವನ್ನಾಗಿ ಮಾಡಿಕೊಂಡು ಮಲೆಮಾದೇಶ್ವರ ಮಂಟೇಸ್ವಾಮಿಯಂತೆಯೇ ವಿಭಿನ್ನ ಸ್ವರೂಪದ ಶರಣನಾಗಿ ಅನೇಕ ಒಕ್ಕಲುಗಳನ್ನು ಪಡೆದಿದ್ದಾನೆ. ಅಪಾರ ಭಕ್ತಿ ಸಮೂಹವನ್ನು ಹೊಂದಿರುವ ಮಾದೇಶ್ವರನ ಬಗೆಗೆ ಕೂಡ ಬೃಹತ್ ಸ್ವರೂಪದ ಕಥಾನಕ ಸೃಷ್ಟಿಯಾಗಿದೆ. ಮಲೆಮಾದೇಶ್ವರ ಕಾವ್ಯವನ್ನು ಮೊದಲಿಗೆ ಪಿ.ಕೆ. ರಾಜಶೇಖರ ಅವರು ಸಂಗ್ರಹಿಸಿ ಸಂಪಾದಿಸಿ ಪ್ರಕಟಿಸಿದರು. ಕನ್ನಡ ವಿಶ್ವವಿದ್ಯಾಲಯ ಡಾ. ಕೇಶವನ್ ಪ್ರಸಾದ್‌ರವರ ಸಂಪಾದಕತ್ವದಲ್ಲಿ ಹೆಬ್ಬಣಿ ಮಾದಯ್ಯನವರಿಂದ ಹಾಡಿದ ಕಾವ್ಯವನ್ನು ಪ್ರಕಟಿಸಿದ್ದಾರೆ. ಮಂಟೇಸ್ವಾಮಿಯ ಕಾವ್ಯದಂತೆಯೇ ಹಲವು ಸಾಲುಗಳಲ್ಲಿ ಮಾದೇಶ್ವರನ ಕಥೆ ವಿಸ್ತರಿಸಿಕೊಂಡಿದೆ. ಮಲೆ ಮಾದೇಶ್ವರ ಕೂಡ ಕಲ್ಯಾಣದ ಕಲ್ಪನೆಯ ಪರಿಧಿಯಲ್ಲಿ ಬರುವ ಒಬ್ಬ ಶರಣ. ಮಲೆಮಾದೇಶ್ವರ ಮತ್ತು ಮಂಟೇಸ್ವಾಮಿ ಕಾವ್ಯಗಳೆರಡೂ ಈ ಇಬ್ಬರು ನಾಯಕರನ್ನು ಉತ್ತರ ದೇಶದಿಂದ ಬಂದವರು ಎಂದು ಹೇಳುತ್ತದೆ. ಅಂದರೆ ಈ ಇಬ್ಬರೂ ಕಲ್ಯಾಣದ ಕಡೆಯಿಂದ ದಕ್ಷಿಣಾಭಿಮುಖವಾಗಿ ಹೊರಟು ಕನ್ನಡ ನಾಡಿನ ದಕ್ಷಿಣದಲ್ಲಿ ನೆಲೆ ಮಾಡಿಕೊಂಡು ಒಂದೊಂದು ಪಂಥವನ್ನು ಆರಂಭಿಸಿದಂತೆ ಕಾಣುತ್ತದೆ. ಈ ಇಬ್ಬರು ಸಮಕಾಲೀನರೇ ಎಂಬುದು ಗೊತ್ತಿಲ್ಲ. ಆದರೆ ಮಲೆಮಾದೇಶ್ವರ ಮಾದಿಗರ ಕುಲದವನಿರಬೇಕೆಂದು ಮಂಟೇಸ್ವಾಮಿ ಹೊಲೆಯ ಕುಲದವನೆಂದೂ ತರ್ಕಿಸಲಾಗುತ್ತಿದೆ.

ಮಲೆಮಾದೇಶ್ವರನ ಪಂಥವನ್ನು ಒಪ್ಪಿ ಅವನಿಗೆ ಒಕ್ಕಲಾದವರನ್ನು ಕಂಸಾಳೆ ಗುಡ್ಡರು ಎಂದು ಕರೆಯಲಾಗುತ್ತದೆ. ಈ ಗುಡ್ಡರು ನೀಲಗಾರರ ಹಾಗೆಯೇ ಗಾಯನ ಸಂಪ್ರದಾಯವನ್ನೇ ಪ್ರಧಾನ ವೃತ್ತಿಯನ್ನಾಗಿ ಮಾಡಿಕೊಂಡವರು. ಕಂಚಿನ ತಾಳವಾದ ಕಂಸಾಳೆಯನ್ನು ಎರಡು ಕೈಯಲ್ಲಿ ಹಿಡಿದು ಲಯಬದ್ಧವಾಗಿ ಬಾರಿಸುತ್ತಾ ಹಾಡಲು ತೊಡಗಿದರೆ ಹತ್ತಾರು ರಾತ್ರಿಗಳಷ್ಟು ಕಾಲ ಕತೆ ಮಾಡುತ್ತಾರೆ. ಇವರ ಕತೆಯಲ್ಲಿ ಮಾದಪ್ಪನ ಹುಟ್ಟಿನ ಸಾಲು, ಶ್ರವಣ ದೊರೆಯನ್ನು ಕೊಂದ ಸಾಲು, ಸಂಕಮ್ಮನಿಗೆ ಮಕ್ಕಳ ಫಲ ಕೊಟ್ಟ ಸಾಲು, ಬೇವಿನಹಟ್ಟಿ ಕಾಳಿಯನ್ನು ನಾಶಮಾಡಿದ ಸಾಲು, ಆಲಂಬಾಡಿ ಜುಂಜೇಗೌಡನನ್ನು ಒಕ್ಕಲಾಗಿ ಪಡೆದ ಸಾಲು, ಉಪ್ಪಲಿಗ ಶೆಟ್ಟರ ಮೂಗಣ್ಣನನ್ನು ಭಕ್ತನನ್ನಾಗಿ ಮಾಡಿಕೊಂಡ ಸಾಲು, ಬೇಡರ ಕಣ್ಣಪ್ಪನ ಸೇವೆ ಪಡೆಯುವ ಸಾಲು ಮುಂತಾಗಿ ಅನೇಕ ಕಥಾಭಾಗಗಳಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಸಂಕಮ್ಮನಸಾಲು, ಕಾಳಮ್ಮನಸಾಲು.

ಮಲೆಮಾದೇಶ್ವರ ಮತ್ತು ಮಂಟೇಸ್ವಾಮಿ ಪರಂಪರೆಗಳಲ್ಲಿ ಬಹುಮುಖ್ಯವಾಗಿ ಕಾಣುವ ಅಂಶವೆಂದರೆ ಅತಿಮಾನುಷ ಪವಾಡಗಳನ್ನು ಮೆರೆಯುವುದು. ಮಾಟ ಮಂತ್ರಗಳ ಮೂಲಕ ಎದುರಾಳಿಗಳನ್ನು ಗೆಲ್ಲುವುದು. ಈ ಇಬ್ಬರು ನಾಯಕರು ಸದಾ ಪಯಣ ಮಾಡುವಂತವರು ಇವರು ಏನೂ ಇಲ್ಲದ ಬೈರಾಗಿಗಳು, ಅವರ ಸರಳ ನಡೆ ಮತ್ತು ವ್ಯಕ್ತಿತ್ವಗಳೇ ಅವರನ್ನು ಆಕರ್ಷಿತರನ್ನಾಗಿ ಮಾಡಿದೆ. ಕಲ್ಯಾಣದಲ್ಲಿ ಕೆಳಜಾತಿಗಳ ಮೇಲಿನ ಪ್ರೀತಿ ಕಡಿಮೆಯಾದಂತೆ ವೀರಶೈವಧರ್ಮ ಇತರ ಧರ್ಮಗಳಂತೆಯೇ ಸಾಂಸ್ಥಿಕ ರೂಪವನ್ನು ಪಡೆಯಿತು. ಅಂಥ ಸಂದರ್ಭದಲ್ಲಿ ಬಹುಶಃ ಬಸವಣ್ಣ ಮತ್ತು ಅಲ್ಲಮ ಪ್ರಭುಗಳ ನಂತರದ ಒಂದೆರಡು ಶತಮಾನಗಳಲ್ಲಿ ಈ ನಾಯಕ ಇಬ್ಬರು ಅಂಥ ಒಂದು ಸಾಂಸ್ಥಿಕ ಸ್ವರೂಪದ ವೀರಶೈವ ಧರ್ಮದ ವಿರುದ್ಧ ಒಂದು ಪರ್ಯಾಯ ಧರ್ಮವನ್ನು ಕಟ್ಟುವ ಹಂಬಲದಿಂದ ಈ ಕಡೆ ಬಂದಂತೆ ಕಾಣುತ್ತದೆ. ಆ ಕಾರಣದಿಂದಾಗಿಯೇ ಶೂದ್ರರು ಮತ್ತು ಅತಿಶೂದ್ರರು ಈ ನಾಯಕರಿಗೆ ಒಕ್ಕಲಾಗಿರುವಂತೆ ಕಾಣುತ್ತದೆ. ಎಲ್ಲಾ ಕೆಳವರ್ಗದವರನ್ನು ಒಟ್ಟುಗೂಡಿಸುವ ಕಲ್ಯಾಣದ ಆಶಯವನ್ನು ನಂತರದ ಶತಮಾನಗಳಲ್ಲಿ ಈ ಇಬ್ಬರು ಈಡೇರಿಸಿದಂತೆ ಕಾಣುತ್ತದೆ. ಅದರ ಕುರುಹುವಾಗಿ ವಿವಿಧ ಸಮುದಾಯಗಳ ಅಪಾರ ಭಕ್ತಿ ಸಮೂಹ ಇಂದಿಗೂ ಕಂಡು ಬರುತ್ತಿದ್ದಾರೆ.

ಮಲೆ ಮಾದೇಶ್ವರನ ಕೇಂದ್ರಸ್ಥಾನ ಮಲೆ ಮಾದೇಶ್ವರ ಬೆಟ್ಟ. ಅರಣ್ಯದಿಂದ ಕೂಡಿದ ಈ ಪ್ರದೇಶ ಇವತ್ತಿಗೂ ದುರ್ಗಮವಾಗಿದೆ. ಶಿವರಾತ್ರಿಯಲ್ಲಿ ನಡೆಯುವ ಜಾತ್ರೆಗೆ ಸಾವಿರಾರು ಕಂಸಾಳೆ ಭಕ್ತರು ಬರುತ್ತಾರೆ ಮತ್ತು ಕಂಸಾಳೆ ಪ್ರದರ್ಶನ ನೀಡುತ್ತಾರೆ. ನೀಲಗಾರ ಗುಡ್ಡರಂತೆಯೇ ಈ ಕಂಸಾಳೆ ಗುಡ್ಡರೂ ಕೂಡ ಮಾದೇಶ್ವರನ ಒಕ್ಕಲಿನವರ ಮನೆಗಳಿಗೆ ಹೋಗಿ ಧಾರ್ಮಿಕ ಕ್ರಿಯೆಗಳನ್ನು ನಡೆಸಿಕೊಡುತ್ತಾರೆ.

ಒಟ್ಟಿನಲ್ಲಿ ಈ ಮಲೆಮಾದೇಶ್ವರ ಪಂಥ ಕೂಡ ನೀಲಗಾರ ಪಂಥದ ಉದ್ದೇಶ ಮತ್ತು ಆಶಯಗಳನ್ನೇ ಹೊಂದಿದ್ದು ಆ ಪಂಥಕ್ಕೆ ಸಮಾನಾಂತರವಾಗಿ ನಡೆದುಕೊಂಡು ಬಂದಿದೆ. ವಿಶೇಷವೆಂದರೆ ಕಂಸಾಳೆಯ ಗುಡ್ಡರು ಮಂಟೇಸ್ವಾಮಿಯ ಕಥನವನ್ನು, ನೀಲಗಾರ ಗುಡ್ಡರು ಮಾದೇಶ್ವರನ ಕಥನವನ್ನು ಯಾವುದೇ ಭೇದ ಭಾವವೂ ಇಲ್ಲದೆ ಹಾಡುತ್ತಾರೆ. ಆದರೆ ಹಾಡುವ ಶೈಲಿ ಮತ್ತು ಕಥನರೂಪಗಳು ಮಾತ್ರ ಅವರವರ ಪಂಥದ ಹಿನ್ನೆಲೆಯಲ್ಲಿ ಇರುತ್ತದೆ.

ಅಡಿಟಿಪ್ಪಣಿಗಳು

೧. ಜೀ.ಶಂ. ಪರಮಶಿವಯ್ಯ, ದಕ್ಷಿಣ ಕರ್ನಾಟಕ ಜಾನಪದ ಕಾವ್ಯ ಪ್ರಕಾರಗಳು, ೧೯೭೯, ಪು. ೧೬೦

೨. ಜೀ.ಶಂ.ಪರಮಶಿವಯ್ಯ, ಮಂಟೇಸ್ವಾಮಿ ಕಾವ್ಯ, ೧೯೭೩, ಪು.೯

೩. ವೆಂಕಟೇಶ ಇಂದ್ವಾಡಿ, ೧೯೯೬, ಪು. XVIII, ಪ್ರಸ್ತಾವನೆ

೪. ಅದೇ, ಪು. XVIII, ಪ್ರಸ್ತಾವನೆ

೫. ಬೋರಲಿಂಗಯ್ಯ ಹೀ.ಚಿ. ಮಂಟೇಸ್ವಾಮಿ, ೧೯೯೭, ಪ್ರಸ್ತಾವನೆ ನೋಡಿ

೬. ರಾಜಶೇಖರ ಪಿ.ಕೆ. ೧೯೭೩, ಮಲೆಯ ಮಾದೇಶ್ವರ ಭಾಗ ೧, ಪ್ರಸ್ತಾವನೆ

೭. ಬಸವಲಿಂಗ ಸೊಪ್ಪಿನಮಠ (ಸಂ.), ಕೊಡೇಕಲ್ಲು ಬಸವಣ್ಣ ಒಂದು ಅಧ್ಯಯನ, ೧೯೯೫, ಪು. ೭೩

೮. ಅದೇ, ಪು. ೨೮೭

ಅಧ್ಯಾಯ ೬

ಅರ್ಥ

೬ :೧ ನೀಲಗಾರರ ವೃತ್ತಿಗಳು

೬ :೧ ನೀಲಗಾರರ ವೃತ್ತಿಗಳು

ಯಾವುದೇ ವ್ಯಕ್ತಿ ತಾನು ಬದುಕಲು ಯಾವುದಾದರೊಂದು ಉದ್ಯೋಗ ಕೈಗೊಳ್ಳಲೇಬೇಕು. ಪ್ರತಿಯೊಬ್ಬರಲ್ಲಿಯೂ ಉದ್ಯೋಗದ ಆಯ್ಕೆಯಲ್ಲಿ ಬೌದ್ಧಿಕ ಮತ್ತು ದೈಹಿಕ ಸಾಮರ್ಥ್ಯ ಪ್ರಮುಖ ಪಾತ್ರ ವಹಿಸುತ್ತದೆ. ಪ್ರಕೃತಿಯ ಮಧ್ಯದಲ್ಲಿ ಜೀವಿಸುವ ಮಾನವ ಪ್ರಕೃತಿಯ ವಸ್ತುಗಳನ್ನು ಅವಲಂಬಿಸಿಕೊಂಡು ಜೀವನ ನಡೆಸಬೇಕಾಗುತ್ತದೆ. ಉದ್ಯೋಗ ಮನುಷ್ಯನ ಲಕ್ಷಣವಾದ್ದರಿಂದ ಕಲಿತವನಾಗಲಿ, ಕಲಿಯುವವನಾಗಲಿ ಏನಾದರೊಂದು ಕಸುಬಿಗೆ ಅಂಟಿಕೊಂಡಿರುತ್ತಾನೆ. ಆ ವೃತ್ತಿ ಅವರವರ ಆಸಕ್ತಿಗೆ ಸಂಬಂಧಿಸಿದ್ದುದ್ದಾಗಿದೆ. ಮಾನವ ಈ ರೀತಿಯ ಉದ್ಯೋಗ ನಿರತನಾಗುವುದರಿಂದ ಮಾತ್ರ ಒಂದು ಸಮುದಾಯದ ಅಭಿವೃದ್ಧಿ ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಉದ್ಯೋಗವೇ ಬದುಕಿನ ಅವಲಂಬನವಾಗುತ್ತದೆ, ಜೀವನ ನಿರ್ವಹಣೆಯ ಮಾರ್ಗವೂ ಆಗುತ್ತದೆ. ಅವನು ಯಾವುದಾದರೊಂದು ಉದ್ಯೋಗವನ್ನು ಕೈಗೊಳ್ಳಲೇಬೇಕು. ಉದ್ಯೋಗವಿಲ್ಲದೆ ಮಾನವ ಬದುಕಲು ಸಾಧ್ಯವಿಲ್ಲ.

ನೀಲಗಾರರ ವಿವಿಧ ಒಕ್ಕಲಿನವರು ಹಿಂದಿನಿಂದಲೂ ಆಯಾಯ ಜಾತಿಯ ಕಸುಬುಗಳನ್ನು ನಿರ್ವಹಿಸುತ್ತಿದ್ದು, ಆಯ್ಕೆ ಮಾಡಿಕೊಂಡ ಕೆಲವರು ಧಾರ್ಮಿಕ ಆಚರಣೆಗಳಿಗೆ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ. ಇಂದು ಕೆಲವು ನೀಲಗಾರರು ಬಿಕ್ಷಾಟನೆಯ ವೃತ್ತಿಗೆ ಅನಿವಾರ್ಯವಾಗಿ ಅಂಟಿಕೊಂಡಿರುವುದನ್ನು ನಾವು ಕಾಣಬಹುದಾಗಿದೆ.

ನೀಲಗಾರ ಸಮುದಾಯದಲ್ಲಿ ಮುಖ್ಯವಾಗಿ ಎರಡು ಹಂತಗಳಲ್ಲಿ ಉದ್ಯೋಗವನ್ನು ಕೈಗೊಳ್ಳುವವರಾಗಿದ್ದಾರೆ. ಹಿಂದಿನಿಂದಲೂ ನಂಬಿಕೊಂಡು ಬಂದ ಉದ್ಯೋಗಗಳು, ಅವು ಸಾಂಪ್ರದಾಯಿಕ ವೃತ್ತಿಗಳು. ಅದೇ ರೀತಿ ಇವತ್ತಿನ ಸಂದರ್ಭ ಜೀವನೋಪಾಯಕ್ಕಾಗಿ ಕೆಲವು ವೃತ್ತಿಗಳನ್ನು ಅವಲಂಬಿಸುತ್ತಿದ್ದಾರೆ. ಇಂತಹವುಗಳಿಗೆ ಅವಲಂಬಿತ ವೃತ್ತಿ ಎಂದು ವಿಭಾಗಿಸಿ ವಿವೇಚಿಸುವ ಪ್ರಯತ್ನ ಮಾಡಲಾಗಿದೆ. ನೀಲಗಾರರು ಹಿಂದಿನಿಂದಲೂ ಕೆಲವು ವೃತ್ತಿಗಳನ್ನು ಸಾಂಪ್ರದಾಯಕವಾಗಿ ಮಾಡುತ್ತಾ ಬಂದಿದ್ದು ನಂತರ ಧಾರ್ಮಿಕ ಕ್ಷೇತ್ರಕ್ಕೆ ಸೇರಿಕೊಂಡು ಅವರ ಸಾಂಸ್ಕೃತಿಕ ನಾಯಕರೆನಿಸಿದ ಮಂಟೇಸ್ವಾಮಿ, ಸಿದ್ದಪ್ಪಾಜಿ ಮತ್ತು ರಾಚಪ್ಪಾಜಿಯವರ ಒಕ್ಕಲುಗಳಾಗಿ ಆ ಮೂಲಕ ಶಿಷ್ಯತ್ವವನ್ನು ಪಡೆದುಕೊಂಡು ಸ್ವಾಮಿಯ ಲೀಲೆಗಳನ್ನು ಕೊಂಡಾಡುವುದರ ಮೂಲಕ ಜೀವನ ಸಾಗಿಸುತ್ತಿರುವ ಕೆಲವು ನೀಲಗಾರರ ಒಕ್ಕಲುಗಳನ್ನು ಕಾಣಬಹುದಾಗಿದೆ. ಹಾಗೆಯೇ ಸಾಂಪ್ರದಾಯಿಕವಾಗಿ ಕೆಲವು ವೃತ್ತಿಗಳನ್ನು ಮಾಡುತ್ತಲೇ ಬಂದವರೂ ಸಾಕಷ್ಟಿದ್ದಾರೆ.

ನೀಲಗಾರ ಸಮುದಾಯದಲ್ಲಿ ಮುಖ್ಯವಾಗಿ ಉಪ್ಪಾರರು, ಮಡಿವಾಳರು, ಲಿಂಗಾಯಿತರು, ವಿಶ್ವಕರ್ಮಿಗಳು, ಕುಂಬಾರರು, ಕುರುಬರು, ಮಾದಿಗರು, ಹರಿಜನರು, ಅರಸುಗಳು ಈ ಎಲ್ಲಾ ಒಕ್ಕಲುಗಳು ಈ ಸಮುದಾಯದ ಕಕ್ಷೆಗೆ ಒಳಪಡುವವರಾಗಿದ್ದಾರೆ. ಪ್ರತಿಯೊಂದು ಒಕ್ಕಲಿನವರು ಆಯಾ ಜಾತ್ಯಾಧಾರಿತ ಕಸುಬುಗಳಲ್ಲಿ ತೊಡಗಿದವರಾಗಿರುತ್ತಾರೆ. ಅವರ ವೃತ್ತಿಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

೬ :೧.೧ ಸಾಂಪ್ರದಾಯಿಕ ವೃತ್ತಿಗಳು

೧. ಉಪ್ಪು ತಯಾರಿಕೆ : ನೀಲಗಾರ ಸಮುದಾಯದ ಉಪ್ಪಾರರು ಉಪ್ಪು ತಯಾರಿಸುವ ಕಾಯಕದಲ್ಲಿ ತೊಡಗುತ್ತಾರೆ. ಇವರು ಸಾಂಪ್ರದಾಯಿಕವಾಗಿ ಉಪ್ಪು ತಯಾರಿಸುವ ವೃತ್ತಿಯಲ್ಲಿ ತೊಡಗಿದವರಾಗಿದ್ದರು. ಇವರು ಮೊದಲಿಗೆ ಇಳಿಜಾರಾದ ಜಾಗ ಆಯ್ದುಕೊಂಡು ಚೌಕಾಕಾರದ ಪಾತಿಗಳನ್ನು ಮಾಡಿಕೊಳ್ಳುತ್ತಾರೆ. ಪಾತಿಗಳು ಒಂದರ ಕೆಳಗೆ ಒಂದು ಬರುವಂತೆಯೂ ಒಂದೇ ಸರಳ ರೇಖೆಯಲ್ಲಿ ಇರುವಂತೆಯೂ ಮಾಡಿಕೊಳ್ಳುತ್ತಾರೆ. ಈ ಸ್ಥಳದಲ್ಲಿ ಮೇಲಿನ ಪಾತಿಯು ಅದರ ಕೆಳಗೆ ಸ್ವಲ್ಪ ದೂರದಲ್ಲಿ ಇನ್ನೊಂದು ಪಾತಿಯು ಮತ್ತು ಕೆಳಗೆ ಮತ್ತೊಂದು ಪಾತಿಯೂ ಹೀಗೆ ನಾಲ್ಕು ಮತ್ತು ಐದನೇ ಪಾತಿಗಳನ್ನು ಮಾಡಿಕೊಳ್ಳುತ್ತಾರೆ. ಈ ಪಾತಿಗಳು ೧೫ ಅಡಿ ಸುತ್ತಳತೆ ಹೊಂದಿದ್ದು ೪ ಅಡಿ ಆಳವಾಗಿರುತ್ತವೆ. ಇದರ ಒಳಭಾಗದ ಗೋಡೆಗಳಿಗೆ ಸುಣ್ಣವನ್ನು ಲೇಪಿಸಿ ಗಟ್ಟಿಗೊಳಿಸಿಕೊಳ್ಳುತ್ತಾರೆ. ಇದರಂತೆ ಒಂದು ಪಾತಿಯಿಂದ ಇನ್ನೊಂದು ಪಾತಿಗೆ ಹೇರಿ ಹರಿದು ಬರಲು ಮಾಡಿರುವ ಕಾಲುವೆಗಳಿಗೂ ಸುಣ್ಣದಗಾರೆ ಗಚ್ಚಿನಿಂದ ಬಳಿದು ಭದ್ರಪಡಿಸಿರುತ್ತಾರೆ. ಹೀಗೆ ಮಾಡುವುದರಿಂದ ಪಾತಿಯಲ್ಲಿಯ ನೀರು ಇಂಗಿ ಹೋಗದಂತೆಯೂ ಬಸಿದ ನೀರಿಗೆ ಮಣ್ಣು ಸೇರದಂತೆಯೂ ತಡೆಯುತ್ತಾರೆ. ಒಬ್ಬರ ಪಾತಿಯಿಂದ ಇನ್ನೊಬ್ಬರ ಪಾತಿಗೆ ಉಪ್ಪಿನನೀರು ಸರಾಗವಾಗಿ ಹರಿಯಲು ಇದರಿಂದ ಸಹಾಯಕವಾಗುತ್ತದೆ.

ಹೀಗೆ ಪಾತಿಗಳು ನಿರ್ಮಾಣವಾದ ನಂತರ ಮೊದಲ ನಾಲ್ಕು ಪಾತಿಗಳಿಗ ಆವಿಗೆ ಸೊಪ್ಪನ್ನು ಕಾಲುಭಾಗದಷ್ಟೆ ಪಾತಿಗಳಿಗೆ ತುಂಬುತ್ತಾರೆ. ಒಂದನೇ ಪಾತಿಯಲ್ಲಿರುವ ಆವಿಗೆ ಸೊಪ್ಪಿನ ಮೇಲೆ ಚೌಳು ಮಣ್ಣನ್ನು ತುಂಬಿ ಅದರ ಮೇಲೆ ನೀರನ್ನು ಹಾಯಿಸುತ್ತಾರೆ. ಹೀಗೆ ಹಾಯಿಸಿದ ನೀರು ಚೌಳು ಮಣ್ಣಿನ ಮೇಲೆ ೫ ರಿಂದ ೬ ಗಂಟೆಗಳವರೆಗೆ ನಿಂತು ಆವಿಗೆ ಸೊಪ್ಪಿನಿಂದ ಕೆಳಗೆ ಬಸಿದು ಕಾಲುವೆ ಮೂಲಕ ಎರಡನೇ ಪಾತಿಗೆ ಹರಿದು ಅಲ್ಲಿಯ ಸೊಪ್ಪಿನ ಮೇಲಿನಿಂದ ಬಸಿದು ಕಾಲುವೆ ಮೂಲಕ ಮೂರನೇ ಪಾತಿಗೆ ಹರಿಯುತ್ತದೆ. ಹೀಗೆ ಬಸಿದ ಉಪ್ಪಿನ ನೀರು ನಾಲ್ಕನೇ ಪಾತಿಯಲ್ಲಿ ಚೆನ್ನಾಗಿ ಸೋಸಿಕೊಂಡು ಪರಿಶುದ್ಧವಾಗಿ ಐದನೇ ಪಾತಿಯಲ್ಲಿ ಶೇಖರವಾಗುತ್ತದೆ. ಐದನೇ ಪಾತಿಯಲ್ಲಿ ಶೇಖರವಾದ ಉಪ್ಪಿನ ನೀರು ಚೆನ್ನಾಗಿ ಸೂರ್ಯನ ಬಿಸಿಲಿನಲ್ಲಿ ಒಣಗಿ ಗಟ್ಟಿಯಾಗುತ್ತದೆ. ಹೀಗೆ ಗಟ್ಟಿಯಾದ ಉಪ್ಪನ್ನು ಒಂದು ಕಡೆ ರಾಶಿ ಹಾಕುತ್ತಾರೆ. ಇಂಥ ಉಪ್ಪು ತಯಾರಿಸುವ ಜಾಗವನ್ನು ಮಾಳಿಗೆ ಎಂದು ಕರೆಯುತ್ತಾರೆ.

ಹೀಗೆ ಉಪ್ಪಾರರು ಸಾಂಪ್ರದಾಯಿಕವಾಗಿ ಹಿಂದೆ ಉಪ್ಪು ತಯಾರಿಸುವ ವೃತ್ತಿಯಲ್ಲಿ ತೊಡಗಿಕೊಂಡರು. ನಂತರ ಇವರು ಅವಲಂಬಿತ ವೃತ್ತಿಗಳಾದ ಮರಗೆಲಸ, ಗಾರೆ, ಮಣ್ಣಿನ ಕೆಲಸ, ಕಲ್ಲು ಕೆಲಸ, ಮನೆಗಳ ನಿರ್ಮಾಣ ಮತ್ತು ವ್ಯವಸಾಯ

ಮುಂತಾದ ಕೆಲಸಗಳಲ್ಲಿ ತೊಡಗಿಕೊಂಡರು. ಇವರಲ್ಲಿ ಗಾಯಕರಾದವರು ಇಂದು ನೀಲಗಾರ ಪರಂಪರೆಯ ಸಾಂಸ್ಕೃತಿಕ ನಾಯಕರ ಕಥೆಗಳನ್ನು ಹೇಳುವುದರ ಮೂಲಕ ಜೀವನ ಸಾಗಿಸುವವರಾಗಿದ್ದಾರೆ.

೨. ಕೃಷಿ : ಉಪ್ಪು ತಯಾರಿಸುವ ಉಪ್ಪಾರರು ಮಾಳಿಗೆಯಿಂದ ಊರುಗಳಿಗೆ ಬಂದಾಗ ಸಹಜವಾಗಿ ಜನರು ವ್ಯವಸಾಯ ಮಾಡಲು ಪ್ರಾರಂಭಿಸಿದರು. ತಮಗೆ ಸುಲಭದಲ್ಲಿ ಸಿಗುವ ಭೂಮಿಯನ್ನು ಖರೀದಿಸಿ ಅನಂತರ ಹಂತಹಂತವಾಗಿ ಭೂಮಿಯ ಸುತ್ತಮುತ್ತಲಿನ ಸ್ಥಳಗಳನ್ನು ವ್ಯವಸಾಯಕ್ಕೆ ಯೋಗ್ಯವಾದ ಸ್ಥಳಗಳನ್ನಾಗಿ ಮಾಡಿಕೊಂಡರು. ಆ ವೇಳೆಯಲ್ಲಿ ಇವರು ಒಕ್ಕಲಿಗರಿಂದ ಪ್ರಬಾವಿತರಾದರು. ತೆಂಗು, ಭತ್ತ, ರಾಗಿ, ಜೋಳ ಮುಂತಾದವುಗಳನ್ನು ಬೆಳೆದು ತಮಗೆ ಬೇಕಾದ ಆಹಾರ ಪದಾರ್ಥಗಳನ್ನು ಒದಗಿಸಿಕೊಳ್ಳುತ್ತಾ ಬಂದರು. ಆದರೆ ಮೂಲವೃತ್ತಿಯಿಂದ ತಕ್ಷಣ ಈ ವ್ಯವಸಾಯಕ್ಕೆ ಹೊಂದಿಕೊಳ್ಳಲು ಕಷ್ಟವಾದುದರಿಂದ ಮೊದಮೊದಲು ನಷ್ಟವನ್ನು ಅನುಭವಿಸಿದರು. ವ್ಯವಸಾಯಕ್ಕೆ ಸಂಬಂಧಿಸಿದ ಅವರ ಆಚರಣೆಗಳಲ್ಲಿ ಅವರು ವಾಸಿಸುವ ಪ್ರದೇಶದ ಬಹು ಸಂಖ್ಯಾತ ಸಮುದಾಯದವರನ್ನು ಅನುಸರಿಸುತ್ತಾರೆ.

೨. ಮರಗೆಲಸ : ಉಪ್ಪಾರರು ಉಪ್ಪು ತಯಾರಿಸುವ ವೃತ್ತಿ ಬಿಟ್ಟ ನಂತರ ಕೆಲವರು ತಮ್ಮ ಜೀವನೋಪಾಯಕ್ಕಾಗಿ ಮರಗೆಲಸವನ್ನು ಮಾಡಲು ಪ್ರಾರಂಭಿಸಿದರು. ಇದು ಕಲಿತ ವೃತ್ತಿಯಾದುದರಿಂದ ಈ ಕೆಲಸದಲ್ಲಿ ಹೆಚ್ಚು ನಾಜೂಕನ್ನು ಗುರುತಿಸಲು ಸಾಧ್ಯವಿಲ್ಲ. ಮನೆಗಳ ಬಾಗಿಲು, ಕಿಟಕಿ, ಗಾಡಿ ಮತ್ತು ಪೀಠೋಪಕರಣಗಳನ್ನು ಮಾಡುವುದೇ ಮುಖ್ಯವಾಗಿದೆ. ಇದರ ಜೊತೆ ಜೊತೆಗೆ ವ್ಯವಸಾಯ ಉಪಕರಣಗಳನ್ನು ಮಾಡುತ್ತಾರೆ.

ಹೀಗೆ ಉಪ್ಪಾರರು ತಮ್ಮ ಮೂಲವೃತ್ತಿಯನ್ನು ಬಿಟ್ಟು ಬೇರೆ ಬೇರೆ ಕೆಲಸಗಳನ್ನು ತಕ್ಷಣದಲ್ಲಿ ಹೇಗೆ ಕರಗತಮಾಡಿಕೊಂಡರು ಎನ್ನುವುದು ಮುಖ್ಯವಾಗುತ್ತದೆ. ಪೂರ್ವದಲ್ಲಿ ಈ ಜನಾಂಗದವರು ಉಪ್ಪನ್ನು ತಯಾರಿಸುವ ಜೊತೆಗೇನೇ ಬೇರೆ ಕುಶಲ ಕೆಲಸಗಳನ್ನು ಮಾಡುತ್ತಿದ್ದರು ಎನ್ನುವ ಉದಾಹರಣೆಗಳು ಇವೆ.

೩. ಪಶುಪಾಲನೆ : ನೀಲಗಾರ ಸಮುದಾಯದಲ್ಲಿ ಕುರುಬ ಒಕ್ಕಲಿನವರು ಪ್ರಮುಖರಾದವರು. ಇವರ ಮೂಲ ಸಾಂಪ್ರದಾಯಿಕ ವೃತ್ತಿ ಕುರಿಸಾಕಾಣಿಕೆ ಮತ್ತು ಪಶುಪಾಲನೆಯೇ ಆಗಿರುತ್ತದೆ. ಇವರು ಹಿಂದಿನಿಂದಲೂ ಈ ಕಸುಬುಗಳನ್ನು ಮುಂದುವರಿಸಿದ್ದಾರೆ. ಅಲೆಮಾರಿ ಪಶುಪಾಲನೆಯಲ್ಲಿ ನಿರತವಾಗಿದ್ದ ಒಟ್ಟು ಜನವರ್ಗ ಬೇಸಾಯದಿಂದ ನೆಲೆಗೊಳ್ಳುವ ಪ್ರವೃತ್ತಿ ಬೆಳೆಸಿಕೊಂಡಾಗ ಈ ಕುರುಬ ಎಂಬ ಪದದ ವ್ಯಾಪ್ತಿ ಸಂಕುಚಿತವಾಯಿತು. ಇವರು ತಮ್ಮ ಒಕ್ಕಲುಗಳಲ್ಲಿ ಕೊಡುವ ಮತ್ತು ತರುವ ವೈವಾಹಿಕ ಸಂಬಂಧಕ್ಕಾಗಿ ಅನೇಕ ಬಳಿ ಬೆಡಗುಗಳನ್ನು ಸೃಷ್ಟಿಸಿದರು. ಇವರಲ್ಲಿ ಮುಖ್ಯವಾಗಿ ಹಾಲುಮತ, ಗೊಂಡ, ಗೊರವ, ಕಂಬಳಿ, ಅಂಡೇಕುರುಬ, ಒಡೇರು ಮುಂತಾದ ಪಂಗಡಗಳನ್ನು ಕಾಣುತ್ತೇವೆ.

ಈ ಒಕ್ಕಲಿನವರು ಸಾಂಪ್ರದಾಯಿಕ ವೃತ್ತಿಯ ಜೊತೆ ಜೊತೆಗೆ ಕೆಲವು ಕೈ ಕಸುಬುಗಳನ್ನು ಮಾಡುವವರಾಗಿದ್ದಾರೆ. ಹಾಗೆಯೇ ವ್ಯವಸಾಯವನ್ನು ಕೂಡ ಅವಲಂಬಿಸಿದ್ದು ಇಂದಿಗೂ ಈ ವೃತ್ತಿಯನ್ನು ಮಾಡುತ್ತಾರೆ. ಹೀಗಾಗಿ ಇವರು ಸಾಂಪ್ರದಾಯಿಕ ವೃತ್ತಿಯ ಜೊತೆಗೆ ಅವಲಂಬಿತ ವೃತ್ತಿಯಲ್ಲಿ ನಿರತರಾದವರಾಗಿದ್ದಾರೆ.

೪. ಬಟ್ಟೆ ಒಗೆಯುವುದು : ನೀಲಗಾರ ಸಮುದಾಯದಲ್ಲಿ ಮಡಿವಾಳ ಒಕ್ಕಲಿನವರು ಅತ್ಯಂತ ಪ್ರಮುಖರಾಗಿದ್ದಾರೆ. ಇವರು ಸಾಂಪ್ರದಾಯಕ ವೃತ್ತಿಯಾಗಿ ಬಟ್ಟೆ ಒಗೆಯುವ ಕಾಯಕದಲ್ಲಿ ತೊಡಗುತ್ತಾರೆ. ಇಂದಿಗೂ ಸಹ ಈ ವೃತ್ತಿಯನ್ನು ಅವಲಂಬಿಸಿಕೊಂಡು ಬಂದವರಾಗಿದ್ದಾರೆ. ಮಂಟೇಸ್ವಾಮಿ ಪರಂಪರೆಯಲ್ಲಿ ಅತ್ಯಂತ ಪ್ರಮುಖಪಾತ್ರ ಇವರದ್ದಾಗಿದೆ. ಇವರು ಆಯಾಯ ಊರುಗಳಲ್ಲಿ ಇಷ್ಟಿಷ್ಟು ಮನೆಗಳಂತೆ ಹಂಚಿಕೊಂಡು ಈ ವೃತ್ತಿಯನ್ನು ಮಾಡುವವರಾಗಿದ್ದಾರೆ. ಮಡಿವಾಳ ಜನಾಂಗದಲ್ಲಿ ಮುಖ್ಯವಾಗಿ ನಾಲ್ಕು ಪಂಗಡಗಳನ್ನು ಕಾಣಬಹುದು. ಅವುಗಳೆಂದರೆ, ಕೊಂಗ ಅಗಸ, ತಂಬಳ ಅಗಸ, ತೆಲಗ ಅಗಸ, ನಾರಾಯಣಸ್ವಾಮಿ ಕುಲ ಎಂಬುದಾಗಿ ಇರುವುದನ್ನು ಇಂದಿಗೂ ಕಾಣಬಹುದಾಗಿದೆ. ಇವರನ್ನು ೧೨ ಬಣ್ಣದವರೆಂದು ಕರೆಯುತ್ತಾರೆ. ಈ ಎಲ್ಲಾ ಪಂಗಡಗಳಿಗೂ ಆಚರಣೆ ಪದ್ಧತಿ ಒಂದೇ ಆಗಿರುತ್ತದೆ ಮತ್ತು ಎಲ್ಲರೂ ಒಟ್ಟಿಗೆ ಸೇರುತ್ತಾರೆ. ಪ್ರಮುಖವಾಗಿ ಹಬ್ಬ ಜಾತ್ರೆಗಳಲ್ಲಿ ಮತ್ತು ಮದುವೆ ಸಮಾರಂಭಗಳಲ್ಲಿ ಇವರ ಪಾತ್ರ ಅದ್ವಿತೀಯವಾದುದು. ಈ ಸಂದರ್ಭಗಳಲ್ಲಿ ಮಡಿ ಬಟ್ಟೆಯನ್ನು ಹಾಸುವುದರ ಮೂಲಕ ಪವಿತ್ರಗೊಳಿಸುವುದು ಇವರ ಮುಖ್ಯ ವೃತ್ತಿಯಾಗಿರುತ್ತದೆ. ಹಾಗೆಯೇ ದೇವರ ಉತ್ಸವ ಸಂದರ್ಭಗಳಲ್ಲಿ ಪಂಜುಸೇವೆ ಮಾಡುವ ಜವಾಬ್ದಾರಿಯು ಸಹ ಇವರದೇ ಆಗಿರುತ್ತದೆ.

ಮಡಿವಾಳರು ಇವತ್ತಿನ ಆಧುನಿಕತೆಗೆ ಸ್ಪಂದಿಸಿ ಮೂಲ ವೃತ್ತಿಯ ಜೊತೆಗೆ ಹಲವು ಅವಲಂಬಿತ ವೃತ್ತಿಯಲ್ಲಿ ನಿರತರಾಗಿದ್ದಾರೆ. ಹೂ ಕಟ್ಟುವುದು, ಕೂಲಿ ಕೆಲಸ ಮಾಡುವುದು ಇವೇ ಮುಂತಾದ ವೃತ್ತಿಯನ್ನು ಅವಲಂಬಿಸಿದ್ದಾರೆ. ಈ ಒಕ್ಕಲಿನಲ್ಲಿ ಮಂಟೇಸ್ವಾಮಿಯ ಕತೆ ಹಾಡುವ ಸಂಪ್ರದಾಯ ಇಲ್ಲ.

ಹೀಗೆ ಮಡಿವಾಳ ನೀಲಗಾರರು ದೀಕ್ಷೆ ಪಡೆಯುವುದರ ಮೂಲಕ ಮಂಟೇಸ್ವಾಮಿ ಒಕ್ಕಲುಗಳಾಗಿದ್ದಾರೆ. ಇವರಲ್ಲಿ ನಡೆಯುವ ಪ್ರತಿಯೊಂದು ಆಚರಣೆ ಮತ್ತು ಸಂಪ್ರದಾಯಗಳು ಬೇರೆಯೇ ಆಗಿರುತ್ತದೆ ಮತ್ತು ವಿಶಿಷ್ಟವಾಗಿರುತ್ತವೆ.

೫. ಒಕ್ಕಲುತನ : ಮಾನವ ಅಲೆದಾಡುವುದನ್ನು ಬಿಟ್ಟು ಒಂದೆಡೆ ನೆಲೆಸಿದಂದಿನಿಂದ ಪ್ರಾಣಿಗಳನ್ನು ಪಳಗಿಸಿಕೊಂಡು ಒಕ್ಕಲುಗಳನ್ನು ಪ್ರಾರಂಭಿಸಿದನು. ಕ್ರಮೇಣ ಆಳುವವನೆ ಒಡೆಯನಾಗಿ ಇನ್ನುಳಿದವರು ಅವನ ಗುಲಾಮರಾದರು. ರೈತನ ಬೆನ್ನೆಲುಬಾದ ಈ ಬೇಸಾಯ ಹಿಂದಿನಿಂದಲೂ ರೂಢಿಗತವಾಗಿ ಬೆಳೆದು ಬಂದಿರುವುದನ್ನು ಕಾಣಬಹುದಾಗಿದೆ. ರೈತನು ಕೃಷಿ ಮಾಡುವುದರಲ್ಲಿ ಪರಿಣತಿ ಪಡೆದ ನಂತರ ಆ ರೈತನಿಗೆ ಮತ್ತು ಬೆಳೆಗೆ ಉತ್ತಮ ಪ್ರಾಶಸ್ತ್ಯ ದೊರತಂತಾಯಿತು. ಇವತ್ತಿನ ಆಧುನೀಕರಣ ಸಂದರ್ಭದಲ್ಲಿ ರೈತರು ತಮ್ಮ ವೃತ್ತಿಯನ್ನೇ ಅವಲಂಬಿಸಿಕೊಂಡಿದ್ದಾರೆ. ಆದರೆ ಇವತ್ತಿನ ಸಂದರ್ಭದಲ್ಲಿ ರೈತರು ಜಾಗತೀಕರಣಕ್ಕೆ ಬಲಿಯಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದನ್ನು ಕಾಣಬಹುದಾಗಿದೆ. ಇವತ್ತು ರೈತರು ಬೆಳೆಯನ್ನು ಬೆಳೆಯದಿದ್ದರೆ ನಮಗೆ ಯಾವುದೇ ಆಹಾರ ಪದಾರ್ಥಗಳ ಬೆಲೆಗಳು ಗಗನ ಮುಟ್ಟುವುದರಲ್ಲಿ ಸಂದೇಹವೇ ಇಲ್ಲ. ಆದ್ದರಿಂದ ರೈತರು ಜನಾಂಗದ ಜೀವಾಳವಾಗಿದ್ದಾರೆ.

ನೀಲಗಾರ ಒಕ್ಕಲಿಗರು ಕೃಷಿ ಬೇಸಾಯದ ಜೊತೆಗೆ ಇನ್ನು ಹಲವು ವೃತ್ತಿಗಳನ್ನು ಅವಲಂಬಿಸಿರುವುದನ್ನು ಕಾಣಬಹುದಾಗಿದೆ. ಇದರ ಜೊತೆಗೆ ವ್ಯಾಪಾರ ಮಾಡುವುದು ಹಾಗೂ ಸರ್ಕಾರಿ ಉದ್ಯೋಗವನ್ನು ಕೆಲವರು ಅವಲಂಬಿಸಿರುವುದು ಕಂಡುಬರುತ್ತದೆ.

ಒಕ್ಕಲಿಗರಲ್ಲಿ ಮಂಟೇಸ್ವಾಮಿಯ ಕಥೆ ಹೇಳುವ ಸಂಪ್ರದಾಯ ಇಲ್ಲ. ಆದರೆ ಕಥೆ ಹಾಡುವವರನ್ನು ಮದುವೆ ಮತ್ತು ಹೊಸ ಮನೆ ಗೃಹಪ್ರವೇಶದ ಸಂದರ್ಭದಲ್ಲಿ ಕರೆಯಿಸಿ ಪ್ರೋತ್ಸಾಹಿಸಿ ಕಥೆ ಹಾಡಿಸುತ್ತಾರೆ.

೬. ಕೂಲಿ : ನೀಲಗಾರ ಸಮುದಾಯದ ಬಹುಪಾಲು ಕೃಷಿಯೇತರ ಒಕ್ಕಲಿನವರು ಈ ಕೂಲಿ ಕೆಲಸವನ್ನು ಅವಲಂಬಿಸಿರುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಯಲಾಯಿತು. ಇವರಲ್ಲಿ ಕೆಲವರು ಇವತ್ತಿಗೂ ಕೂಲಿಯನ್ನೇ ನಂಬಿ ಜೀವನ ಸಾಗಿಸುತ್ತಿರುವುದನ್ನು ಕಾಣಬಹುದು. ದಿನವೊಂದಕ್ಕೆ ನಿಗದಿಪಡಿಸಿದ ಸಂಭಾವನೆಗಾಗಿ ಕೆಲಸ ಮಾಡುವುದೇ ಕೂಲಿ. ಇದರಲ್ಲಿ ದಿನಗೂಲಿ, ಕಾಯಗೂಲಿ, ಖಾಯಂಕೂಲಿ ಎಂದು ಮೂರು ಬಗೆಗಳು. ನಿತ್ಯ ಕೆಲಸ ಮಾಡುವುದು ದಿನಗೂಲಿ, ನಿತ್ಯ ಹೊಲ ಹಾಗೂ ದನಗಳನ್ನು ಇಂತಿಷ್ಟು ಕೂಲಿ ಎಂದು ಕಾಯುವುದು ಕಾಯಗೂಲಿ, ಒಂದು ವಾರದಿಂದ ತಿಂಗಳು, ಮೂರು ತಿಂಗಳು ಇಲ್ಲವೇ ಆರು ತಿಂಗಳು ವರ್ಷಗಳವರೆಗೆ ಕೆಲಸ ಮಾಡುವುದು ಖಾಯಂಕೂಲಿ. ದಿನಗೂಲಿ ಹಾಗೂ ಕಾಯಂಗೂಲಿಯವರನ್ನು ಮಾಲಿಕರು ನಾಳೆ ಕೆಲಸಕ್ಕೆ ಹಚ್ಚಬಹುದು ಇಲ್ಲವೇ ಬಿಡಬಹುದು. ಆದರೆ ಖಾಯಂಕೂಲಿ ಹಾಗಲ್ಲ ಅವರನ್ನು ಕೆಲಸದಿಂದ ಬಿಡಿಸುವುದಿಲ್ಲ ಮತ್ತು ದಿನಗೂಲಿಯವರಿಗಿಂತ ಖಾಯಂಕೂಲಿ ಹೆಚ್ಚಿರುತ್ತದೆ. ಕೂಲಿ ಆಳುಗಳ ಸಂಖ್ಯೆ ಹೆಚ್ಚಿದ್ದು ಖಾಯಂ ಆಳುಗಳ ಸಂಖ್ಯೆ ಕಡಿಮೆ ಇರುತ್ತದೆ. ಸುಗ್ಗಿಯ ಸಮಯದಲ್ಲಿ ಕೂಲಿ ಆಳುಗಳ ಕೊರತೆ ಕಂಡುಬರುತ್ತದೆ.

ಆಗ ಪಕ್ಕದ ಹಳ್ಳಿಗಳಿಂದ ಆಳುಗಳನ್ನು ಎತ್ತಿನಗಾಡಿ ಇಲ್ಲವೇ ಟ್ರಾಕ್ಟರ್, ಟ್ರಕ್‌ದಲ್ಲಿ ಕರೆತಂದು ಸರಳ ಹಾಗೂ ಹಗುರವಾದ ಕೆಲಸಗಳಿಗೆ ಹೆಣ್ಣಾಳುಗಳನ್ನು ಶ್ರಮದಾಯಕ ಕೆಲಸಗಳಿಗೆ ಗಂಡಾಳುಗಳನ್ನು ನಿಯಮಿಸುತ್ತಾರೆ. ಅಂದರೆ ಗಂಡಾಳುಗಳನ್ನು ಗದ್ದೆಯ ಕೆಲಸಕ್ಕೆ ಹಾಗೂ ಹೆಣ್ಣಾಳುಗಳನ್ನು ನಾಟಿ ನೆಡುವುದಕ್ಕೊ, ಕಬ್ಬು ಕಡಿಯುವುದಕ್ಕೊ ಅಥವಾ ಇತರ ಹಗುರ ಕೆಲಸಗಳಿಗೆ ನೇಮಿಸುತ್ತಾರೆ. ಆಳುಗಳು ಸರಿಯಾಗಿ ಕೆಲಸ ಮಾಡುತ್ತಾರೆಯೋ, ಇಲ್ಲವೋ ಎಂಬುದನ್ನು ನೋಡಿಕೊಳ್ಳಲು ಮತ್ತು ವಾರಕ್ಕೊಮ್ಮೆ ಪಗಾರ ಮಾಡಲು ಮೇಸ್ತ್ರಿ ಅಥವಾ ಗುಮಾಸ್ತರನ್ನು ನೇಮಣಿಕೆ ಮಾಡಿಕೊಂಡಿರುತ್ತಾರೆ. ಈ ರೀತಿಯಾಗಿ ಜೀತದಾಳುಗಳಾಗಿ, ಖಾಯಂ ಕೂಲಿಕಾರರಾಗಿ ಇಂದು ಎಷ್ಟೋ ನೀಲಗಾರರು ಜೀವನ ಸಾಗಿಸುತ್ತಿದ್ದಾರೆ.

೭. ಚಪ್ಪಲಿ ತಯಾರಿಸುವುದು : ನೀಲಗಾರರ ಸಮುದಾಯದಲ್ಲಿ ಈ ವೃತ್ತಿಯನ್ನು ಮಾದಿಗರು ಆಚರಿಸುತ್ತಿದ್ದರು. ವಂಶಪಾರಂಪರಿಕವಾಗಿ ಈ ಒಕ್ಕಲಿನವರು ಮಾಡುತ್ತಾ ಬಂದಿರುವ ವೃತ್ತಿಗಳನ್ನು ಕುರಿತು ಶಾಸನಗಳಲ್ಲಿ ಸಾಹಿತ್ಯ ಕೃತಿ ಹಾಗೂ ಜನಪದ ತ್ರಿಪದಿಗಳಲ್ಲಿ ಉಲ್ಲೇಖಗೊಂಡಿದೆ. ತಲೆ ತಲಾಂತರದಿಂದ ಇವರೆಲ್ಲರೂ ಚರ್ಮದ ಕೆಲಸದಲ್ಲಿ ಅಷ್ಟೇ ಅಲ್ಲ ಬೇರೆ ವೃತ್ತಿಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವುದು ಕಂಡುಬರುತ್ತದೆ.

ಅದೇ ರೀತಿ ಸಾಹಿತ್ಯ ಕೃತಿಗಳಲ್ಲಿಯೂ ಇವರ ವೃತ್ತಿಗಳನ್ನು ಕುರಿತ ಉಲ್ಲೇಖಗಳಿವೆ. ''ಮಾದಿಗರು ತೊಗಲನ್ನು ಹದ ಮಾಡುವ ಅದರಿಂದ ಬಾರುಗಳನ್ನು ತಯಾರಿಸುವ ಕೆಲಸವನ್ನು ಮಾಡುತ್ತಿದ್ದರು. ''ಮಾದಿಗನಂತೆ ಬಾರೆತ್ತುವರ್''' ಕಿರಿದಪ್ಪ ಪೃತಪಿಂಗಂ ದರೆಗಿದ ಮೊದೆಗನು ಮೆಗ್ಗದ ವ್ಯಂತಂಗ ಎಂಬ ಮುಂತಾದ ಮಾತುಗಳು ನಯಸೇನನ ಕೃತಿಯಲ್ಲಿ ಉಕ್ತವಾಗಿವೆ. ಹರಿಗೋಲು ಚರ್ಮದ ಪಾದರಕ್ಷೆಗಳು ಮಿಣಿ, ಬಾರುಕೋಲು, ಮೃದಂಗ, ನಗಾರಿ ಇತ್ಯಾದಿ ಚರ್ಮವಾದ್ಯಗಳು ಎಗ್ಗೆ,

ತುಪ್ಪಗಳನ್ನು ತುಂಬಲು ಉಪಯೋಗಿಸುತ್ತಿದ್ದು ಸಿದ್ದೆಲಿಕೆ-ಬುದ್ದಲಿಕೆಗಳೆಂಬ ಚರ್ಮದ ಚೀಲಗಳು. ಇವುಗಳನ್ನು ಹರಿಜನರು ತಯಾರಿಸುತ್ತಿದ್ದರೆಂದು ಅಂಬಿಗರ ಚೌಡಯ್ಯನ ವಚನವೊಂದು ವಿವರಿಸುತ್ತದೆ.[೬]

ಹೀಗೆ ಹರಿಜನ ನೀಲಗಾರರು ತಮ್ಮ ವಂಶಪಾರಂಪರ್ಯವಾದ ವೃತ್ತಿಯ ಜೊತೆಗೆ ಅವಲಂಬಿತ ವೃತ್ತಿಗಳನ್ನು ಮಾಡುತ್ತಾರೆ.

೮. ಬೀಡಿ ಕಟ್ಟುವುದು : ನೀಲಗಾರ ಸಮುದಾಯದಲ್ಲಿ ಹರಿಜನರು ಬೀಡಿ ಕಟ್ಟುವ ವೃತ್ತಿಯನ್ನು ಅವಲಂಬಿಸಿದವರಾಗಿದ್ದಾರೆ. ಇವರು ಮನೆಯಲ್ಲಿ ಕುಳಿತು ಮಾಡುವ ಕೆಲಸ ಇದಾದ್ದರಿಂದ ಬೆಳಗಿನ ಹೊತ್ತಿನಿಂದ ಸಂಜೆಯವರೆಗೆ ಕೂಡ ಹೆಂಗಸರು ಬೀಡಿ ಕಟ್ಟುತ್ತಾರೆ. ಕೂಲಿ ಕೆಲಸಕ್ಕೆ ಹೋಗದ ಮುದುಕರು, ಹೆಂಗಸರು, ಮಕ್ಕಳು ಈ ಕೆಲಸ ಮಾಡುತ್ತಾರೆ. ಶಾಲೆಯನ್ನು ಮುಗಿಸಿ ಬಂದ ನಂತರ ಹುಡುಗ-ಹುಡುಗಿಯರು ಇದರಲ್ಲಿ ಸೇರಿಕೊಳ್ಳುತ್ತಾರೆ. ಬೀಡಿ ಸೊಸೈಟಿಯಿಂದ ಬೀಡಿ ಕಟ್ಟುವ ಸಾಮಗ್ರಿಗಳನ್ನು ತಂದು ಕಟ್ಟಿ ಅದನ್ನು ಚೆನ್ನಾಗಿ ಪ್ಯಾಕ್ ಮಾಡಿ ಸಾವಿರದ ಲೆಕ್ಕದಲ್ಲಿ ಬೀಡಿ ಎಣಿಕೆ ತೋರಿಸಿ ಹಣ ಪಡೆಯುತ್ತಾರೆ. ದಿನಕ್ಕೆ ಕೆಲವರು ಮೂವತ್ತು ರೂಪಾಯಿಗಳವರೆಗೆ ಹಣಗಳಿಸುವುದುಂಟು. ಕೆಲವರು ಬೀಡಿ ಕಟ್ಟುವುದರಿಂದ ಟಿ.ಬಿ. ಕಾಯಿಲೆ ಬರುತ್ತದೆಂದು ಆ ಕೆಲಸವನ್ನು ಮಾಡುವುದಿಲ್ಲ. ಮನೆಯಲ್ಲಿ ಕುಳಿತು ಮಾಡುವ ಈ ಕೆಲಸ ಲಾಭದಾಯಕವೆಂದು ತಿಳಿದವರೂ ಇದ್ದಾರೆ. ದೈಹಿಕ ಶ್ರಮಬಿಟ್ಟು ಕೂಲಿಗೆ ಹೋಗಲಾರದ ಗಂಡಸರೂ ಬೀಡಿ ಕಟ್ಟಿ ಹಿರಿಯರಿಂದ ಹೀಯಾಳಿಸಿಕೊಳ್ಳುತ್ತಾರೆ.

ಹೀಗಾಗಿ ಇವತ್ತಿಗೂ ಈ ಸಮುದಾಯದವರು ಬೀಡಿ ಕಟ್ಟುವುದನ್ನು ನಿದರ್ಶನವಾಗಿ ಕೊಳ್ಳೇಗಾಲದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಗಮನಿಸಬಹುದಾಗಿದೆ. ಹೀಗೆ ಹರಿಜನರು ತಮ್ಮ ಇತರ ವೃತ್ತಿಯ ಜೊತೆಗೆ ವ್ಯಾಪಾರ, ಕೂಲಿ ಮಾಡುವುದು ಮುಂತಾದ ಅವಲಂಬಿತ ವೃತ್ತಿಗಳಲ್ಲಿ ತೊಡಗಿಕೊಳ್ಳುತ್ತಾರೆ.

೬ :೧.೨ ಅವಲಂಬಿತ ವೃತ್ತಿಗಳು

ಮಂಟೇಸ್ವಾಮಿ ಪರಂಪರೆಯ ನೀಲಗಾರ ಸಮುದಾಯದವರು ಕೆಲವು ಸಾಂಪ್ರದಾಯಿಕ ವೃತ್ತಿಗಳ ಜೊತೆಗೆ, ಇವತ್ತಿನ ಆಧುನಿಕ ಜಗತ್ತಿಗೆ ಹೊಂದಿಕೊಂಡಂತೆ ಕೆಲವು ಅವಲಂಬಿತ ವೃತ್ತಿಗಳನ್ನು ಮಾಡುವ ಕೆಲಸದಲ್ಲಿ ನಿರತರಾಗಿರುವುದನ್ನು ಕಾಣಬಹುದಾಗಿದೆ. ತಮ್ಮ ಜೀವನೋಪಾಯಕ್ಕಾಗಿ ಕೆಲವು ವೃತ್ತಿಗಳನ್ನು ಅವಲಂಬಿಸಿದ್ದಾರೆ, ಅದನ್ನು ಅವಲಂಬಿತ ವೃತ್ತಿ ಎನ್ನಬಹುದು. ಇಂದು ಹೆಚ್ಚು ನೀಲಗಾರರು ಈ ಎಲ್ಲಾ ವೃತ್ತಿಗಳನ್ನು ಕೈಬಿಟ್ಟು ಕೇವಲ ಮಂಟೇಸ್ವಾಮಿಯ ಮಹಿಮೆಯನ್ನು ಕೊಂಡಾಡುವುದರ ಮೂಲಕ ಶಿಷ್ಯ ವೃತ್ತಿಯನ್ನು ಆರಂಭಿಸುವುದನ್ನು ಕಾಣಬಹುದಾಗಿದೆ. ಇವತ್ತಿನ ಜಾಗತೀಕರಣದ ಸಂದರ್ಭದಲ್ಲಿಯೂ ನೀಲಗಾರರು ಯಾವುದೇ ವ್ಯತ್ಯಾಸಗಳಿಲ್ಲದೆ ಸುಮಾರು ರಾತ್ರಿಗಳು ಮುಗಿಯದಂತಹ ಮಂಟೇಸ್ವಾಮಿ ಕಥೆಗಳನ್ನು ಹಾಡುವುದರ ಮೂಲಕ ಜೀವನ ಸಾಗಿಸುತ್ತಿರುವುದನ್ನು ಕಾಣಬಹುದು. ಇವರಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಏಕೈಕ ಗುರಿ ತಮ್ಮ ದೈವದ ಮಹಿಮೆಯನ್ನು ಕೊಂಡಾಡುವುದು ಮಾತ್ರ ಆಗಿರುತ್ತದೆ.

ಅಧ್ಯಾಯ ೭

ವರ್ತಮಾನ

೭ :೧ ನೀಲಗಾರರ ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿತ್ಯಂತರಗಳು

೭:೧ ನೀಲಗಾರರ ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿತ್ಯಂತರಗಳು

ನೀಲಗಾರರ ಬಗೆಗೆ ಇದುವರೆಗೆ ನಡೆದಿರುವ ಅಧ್ಯಯನಗಳು ಹಾಗೂ ನನ್ನ ಕ್ಷೇತ್ರಕಾರ್ಯ ಮತ್ತು ಅಧ್ಯಯನದಲ್ಲಿ ಗಮನಿಸಿದ ಹಾಗೆ ಬಹುಪಾಲು ಜನರು ಅನಕ್ಷರಸ್ಥರಾಗಿರುವುದು ಕಂಡುಬರುತ್ತದೆ. ಆದರೆ ಅವರಲ್ಲಿ ಹೇರಳವಾಗಿ ಮೌಖಿಕ ಸಾಹಿತ್ಯವಿದೆ. ಈ ಹಿನ್ನೆಲೆಯಲ್ಲಿ ತಮ್ಮನ್ನು ಕುರಿತು ದಾಖಲೆಗಳನ್ನು ಸೃಷ್ಟಿಸಿ ಚರಿತ್ರೆ ಕಟ್ಟುವ ಸಾಹಸಕ್ಕೆ ಅವರುಗಳು ತೊಡಗಿಲ್ಲ. ಸಾಮಾಜಿಕವಾಗಿ ಬಹುಪಾಲು ನೀಲಗಾರರು ಕೆಳಸ್ತರದಲ್ಲಿದ್ದಾರೆ. ಮಾದೇಶ್ವರ ಮತ್ತು ಮಂಟೇಸ್ವಾಮಿಯ ಲೀಲೆಗಳನ್ನು ಹಾಡುತ್ತಾ ಇವರು ಬದುಕು ಸಾಗಿಸುವುದನ್ನು ಕಾಣಬಹುದು. ಆದರೆ ನೀಲಗಾರ ದೀಕ್ಷೆಯನ್ನು ಪಡೆದವರೆಲ್ಲಾ ಲೀಲೆಗಳನ್ನು ಹಾಡುವವರಲ್ಲ, ಅವರಲ್ಲಿ ಕೆಲವರಷ್ಟೇ ಈ ಕತೆ ಕಲಿತು ಕಾವ್ಯಕತೆಯ ಪರಂಪರೆಯನ್ನು ಮುಂದುವರಿಸುತ್ತಾರೆ. ಒಕ್ಕಲಿನವರು ತಮ್ಮ ಮೊದಲ ಮಗನಿಗೆ ಕಡ್ಡಾಯವಾಗಿ ನೀಲಗಾರ ದೀಕ್ಷೆ ಕೊಡಿಸುತ್ತಾರೆ. ಹೀಗೆ ದೀಕ್ಷೆ ಪಡೆದವರೆಲ್ಲಾ ನೀಲಗಾರ ಎಂಬ ಹೆಸರಿನಿಂದ ಕರೆಯಲ್ಪಡುತ್ತಾರೆ. ಗಾಯಕರು ಕಥಾ ಪರಂಪರೆಯನ್ನು ಬೆಳೆಸಿದರೆ ದೀಕ್ಷೆ ಪಡೆದ ನೀಲಗಾರರು ತಮ್ಮ ದೈವಕ್ಕೆ ನಡೆದುಕೊಳ್ಳುವ ಆಚರಣೆಗಳಿಂದ ನೀಲಗಾರ ಪರಂಪರೆಯನ್ನು ಬೆಳೆಸಿದ್ದಾರೆ.

ನಗರೀಕರಣದ ಪ್ರಭಾವದಿಂದಾಗಿ ನೀಲಗಾರರು ಇತ್ತೀಚೆಗೆ ತಮ್ಮ ಮೂಲ ಕಸುಬನ್ನು ಬಿಟ್ಟು ನಗರಗಳನ್ನು ಸೇರುತ್ತಿದ್ದಾರೆ. ನಗರ ಪ್ರದೇಶದಲ್ಲಿ ವಿವಿಧ ರೀತಿಯ ಕೆಲಸಗಳು ಅವರನ್ನು ಆಕರ್ಷಣೆ ಹುಟ್ಟಿಸಿ ಕರೆಯುತ್ತಿವೆ. ಆದರೆ ಅಕ್ಷರವಂತರಾಗದೆ ಇವರು ನಗರಗಳನ್ನು ಸೇರುತ್ತಿರುವುದು ವಿಷಾದದ ಸಂಗತಿಯಾಗಿದೆ. ಇವರು ತಮ್ಮ ದೈವಗಳ ಆರಾಧನೆಗಳ ನಡುವೆ ಸಿಕ್ಕು ಒಂದು ರೀತಿಯ ಸಾಮಾಜಿಕ ಶೋಷಣೆಗೆ ಒಳಗಾಗಿದ್ದಲ್ಲದೇ, ಈಗ ಅನಕ್ಷರಸ್ಥರಾಗಿ ಬಾಳುತ್ತಾ ನಗರಗಳಲ್ಲಿ ಮತ್ತೊಂದು ರೀತಿಯ ಆರ್ಥಿಕ ಶೋಷಣೆಗೆ ಒಳಗಾಗಿದ್ದಾರೆ.

ನೀಲಗಾರರಲ್ಲಿ ಯಾರೂ ಶಿಕ್ಷಕ ವೃತ್ತಿ, ಬ್ಯಾಂಕ್ ನೌಕರಿ, ಪೋಲೀಸ್ ಇಲಾಖೆ ಮೊದಲಾದ ಸೇವಾ ವಿಭಾಗಗಳಿಗೆ ಕಡಿಮೆ ಪ್ರಮಾಣದಲ್ಲಿ ಸೇರಿಕೊಂಡಿರುವುದು ಕಂಡುಬರುತ್ತದೆ. ಕೆಲವರು ಕೆಳದರ್ಜೆಯ ಕೆಲಸಗಾರರಾಗಿಯೇ ತೃಪ್ತಿ ಹೊಂದುತ್ತಿದ್ದಾರೆ. ಇತ್ತೀಚಿನ ತಂತ್ರಜ್ಞಾನದ ಪ್ರಭಾವದಿಂದಾಗಿ ಅಲ್ಲೊಂದು ಇಲ್ಲೊಂದು ದೊರೆಯುತ್ತಿದ್ದ ಕೆಲಸಗಳು ಸಹ ಇವರಿಗೆ ಗಗನ ಕುಸುಮಗಳಾಗಿವೆ. ಕೆಲವರಿಗೆ ಬ್ಯಾಂಕ್‌ಗಳು ಆರ್ಥಿಕ ಸೌಲಭ್ಯ ನೀಡಿ ಸರ್ಕಾರದ ವತಿಯಿಂದ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇವರಿಗೆ ಆರ್ಥಿಕ ಸೌಲಭ್ಯವನ್ನು ಸರ್ಕಾರ ಒದಗಿಸಿಕೊಟ್ಟರೆ ಅವರು ತಮ್ಮದೇ ಆದ ಗುಡಿ ಕೈಗಾರಿಕೆಗಳನ್ನು ಬೆಳೆಸಬಹುದು. ಇಲ್ಲವೇ ಸ್ವತಂತ್ರ ಉದ್ದಿಮೆಗಳನ್ನು ಸೃಷ್ಟಿಸಿಕೊಳ್ಳಬಹುದು. ಮೂಲತಃ ಬಡತನದಲ್ಲಿ ನರಳುತ್ತಿದ್ದ ನೀಲಗಾರರಿಗೆ ಆರ್ಥಿಕ ಬೆನ್ನೆಲುಬೇ ಇಲ್ಲದಂತಾಗುತ್ತದೆ. ಕೃಷಿ ಕಾರ್ಮಿಕರಾಗಿ, ಜೀತದಾಳುಗಳಾಗಿ ಅರಣ್ಯ ಭೂಮಿಯನ್ನೇ

ಒತ್ತುವರಿ ಮಾಡಿ ಅತಂತ್ರ ಸಾಗುವಳಿದಾರರಾಗಿ ಬದುಕುತ್ತಿರುವ ಇವರಿಗೆ ತಂತ್ರಜ್ಞಾನ ಮತ್ತು ಜಾಗತೀಕರಣದ ಸೌಲಭ್ಯಗಳಂತೂ ದೊರೆಯುವ ಹಾಗೇ ಇಲ್ಲ.

ಆಧುನಿಕತೆ ಭಾರತೀಯನಿಗೆ ಅಧ್ಯಯನದ ಹೊಸ ಹೊಸ ಅವಕಾಶಗಳನ್ನು ಸೃಷ್ಟಿಸಿದರೂ ಅಧ್ಯಯನಕ್ಕೆ ವಸ್ತುಗಳಾಗಿರುವ ನೀಲಗಾರ ಸಮುದಾಯಗಳ ಪರಿಸ್ಥಿತಿ ಹೆಚ್ಚು ಹೆಚ್ಚು ಶೋಚನೀಯ ಸ್ಥಿತಿಯಾಗಿಯೇ ಉಳಿದಿದೆ. ಬಹುಶಃ ಇಪ್ಪತ್ತನೇ ಶತಮಾನದ ಆರಂಭದಲ್ಲಿ ತಮ್ಮ ಪಾರಂಪರಿಕ ವೃತ್ತಿಯಿಂದಾಗಿ ತುಂಬಾ ಸ್ವಾವಲಂಬಿಗಳಾಗಿದ್ದ ನೀಲಗಾರರು ಇಂದು ಆರ್ಥಿಕವಾಗಿ ಶೋಚನೀಯ ಸ್ಥಿತಿಯನ್ನು ತಲುಪಿದ್ದಾರೆ. ಸಾಮಾಜಿಕವಾಗಿ ನಿಷೇಧಗಳು ಇವರ ಮೇಲಿದ್ದರೂ ಕೂಡ ಒಪ್ಪಿತ ವ್ಯವಸ್ಥೆಯಲ್ಲಿ ಜೀವನ ನಿರ್ವಹಣೆ ಮಾಡುತ್ತಿದ್ದ ಇವರಿಗೆ ಸಾಮಾಜಿಕ ಬಾದೆ ತಾಗುವಷ್ಟು ಸೂಕ್ಷ್ಮತೆಯನ್ನು ಬೆಳೆಸಿಕೊಂಡಿದ್ದುದು ಕೂಡ ದುರ್ಬಲ ಎನಿಸುತ್ತವೆ.

ಆದರೆ ಇಪ್ಪತ್ತನೇ ಶತಮಾನ ಪೂರ್ಣಗೊಂಡ ಈ ದಿನಗಳಲ್ಲೂ, ನಮ್ಮ ಸಮಾಜ ಮತ್ತು ವ್ಯವಸ್ಥೆ ಈ ಸಮುದಾಯವನ್ನು ಕುರಿತು ಯಾವುದೇ ಆಶಾದಾಯಕ ಭಾವನೆಯನ್ನು ಮೂಡಿಸದೆ ಇರುವುದನ್ನು ಕಾಣಬಹುದು. ಭಾರತದಲ್ಲಿ ಮತ್ತು ಪಾಕಿಸ್ತಾನಗಳಲ್ಲಿ ಆರೋಗ್ಯ, ಶಿಕ್ಷಣ, ಭೂಸುಧಾರಣೆಗಳನ್ನು ಸಂಪೂರ್ಣ ನಿರ್ಲಕ್ಷಿಸಲಾಯಿತು. ನಂತರದ ದಿನಗಳಲ್ಲಿ ತಮ್ಮ ಆರ್ಥಿಕತೆಯನ್ನು ಜಾಗತೀಕರಣದ ಪೈಪೋಟಿಗಳಿಗೆ ಒಳಪಡಿಸಿದಾಗ ಜಾಗತಿಕ ಪೈಪೋಟಿಯನ್ನು ಎದುರಿಸಲು ಈ ರಾಷ್ಟ್ರಗಳು ಸಾಮರ್ಥ್ಯ ಹೊಂದಲಾರದೇ ಹೋದವು.''[೨] ಅಮಾರ್ತ್ಯಸೇನ್‌ರವರು ತಿಳಿಸುವುದು ಕೂಡ ಇದನ್ನೇ. ಸಾಮರ್ಥ್ಯ ಹೊಂದಿದ ಸಮುದಾಯಗಳು ಜಾಗತೀಕರಣ ಪ್ರಕ್ರಿಯೆಗೆ ತಮ್ಮನ್ನು ತೆರೆದುಕೊಂಡರೆ, ಸಾಮರ್ಥ್ಯ ಪಡೆಯದ ಸಮುದಾಯಗಳು ಜಾಗತೀಕರಣ ಪ್ರಕ್ರಿಯೆಯಿಂದ ಇನ್ನೂ ಮುದುಡುವ ಸ್ಥಿತಿಗೆ ಇಳಿಯುತ್ತದೆ.''[೨]

ಆಧುನಿಕತೆ ಹೆಚ್ಚಿದಂತೆಲ್ಲಾ ಈ ವೃತ್ತಿಮೂಲ ಸಮುದಾಯಗಳು ಹೆಚ್ಚಿನ ಆತಂಕಗಳಿಗೆ ಒಳಗಾಗುತ್ತಲೇ ಇವೆ. ಆಧುನಿಕತೆಯ ಪರಿಣಾಮವಾಗಿ ವೃತ್ತಿಮೂಲ ಸಮುದಾಯಗಳು ಜನತೆಯ ಕಣ್ಣಿನಿಂದ ದೂರಾಗುತ್ತಿವೆ. ಸಾಮಾಜಿಕ ನಿರ್ಲಕ್ಷ್ಯದಿಂದಾಗಿ ಕಳೆದುಹೋಗುತ್ತಿರುವ ಇಂತಹ ಸಮುದಾಯಗಳು ಇಂದು ಸವಕಲು ನಾಣ್ಯವಾಗುತ್ತಿವೆ. ಆಧುನಿಕತೆಯಿಂದಾಗಿ ಅಲಕ್ಷ್ಯಕ್ಕೊಳಗಾಗಿರುವ ನೀಲಗಾರ ಸಮುದಾಯವು ಆರ್ಥಿಕವಾಗಿ ಹಿಂದುಳಿದಂತೆ ರಾಜಕೀಯವಾಗಿಯೂ ಹಿಂದುಳಿದಿದೆ. ಇಂದು ಪರಿಶಿಷ್ಟ ಜಾತಿ ಪಂಗಡಗಳಲ್ಲಿ ಬಹುಶಃ ಈ ಸಮುದಾಯಕ್ಕಿಂತ ರಾಜಕೀಯವಾಗಿ ಪ್ರಬಲವಾಗಿರುವ ಎಷ್ಟೋ ಸಮುದಾಯಗಳು ಸೇರ್ಪಡೆಗೊಳ್ಳುತ್ತಿರುವುದನ್ನು ಮತ್ತು ಒತ್ತಡಗಳನ್ನು ಹೇರುತ್ತಿರುವುದನ್ನು ದಿನಪತ್ರಿಕೆಗಳಲ್ಲಿ ದಿನವೂ ಓದುತ್ತೇವೆ. ಆದರೆ ನೀಲಗಾರರಂತಹ ಸಮುದಾಯಗಳು ಇದ್ಯಾವುದರ ಗೊಡವೆಗೂ ಹೋಗದೆ ತನ್ನ ಪಾಡಿಗೆ ಕೃಷಿಯನ್ನು ಮಾಡುವ ಮತ್ತು ಸ್ವಾಮಿಯ ಕಥೆಗಳನ್ನು ಹೇಳುವ ಕಾಯಕಕ್ಕೆ ಮಾತ್ರ ಸೀಮಿತಗೊಂಡುಬಿಟ್ಟಿದೆ.

ಆಧುನಿಕತೆಯ ಪ್ರವೇಶದಿಂದಾಗಿಯೇ ಅನಾನುಕೂಲಕರ ಸ್ಥಿತಿಗೆ ನೂಕಲ್ಪಟ್ಟ ಈ ಸಮುದಾಯಕ್ಕೆ ಅಕ್ಷರಜ್ಞಾನದ ಕೊರತೆ ಆರ್ಥಿಕ ಸ್ವಾವಲಂಬನೆ ಇಲ್ಲದೇ ಇರುವುದು, ಸಾಮಾಜಿಕವಾಗಿ ತುಂಬಾ ಹಿಂದುಳಿದಿರುವುದು ಮುಂತಾದ ಅನಿಷ್ಟಗಳೆಲ್ಲಾ ಇವರ ಅಭಿವೃದ್ಧಿಗೆ ಕಾಲ್ತೊಡಕಾಗಿವೆ.

ಅಧ್ಯಾಯ ೮

ಉಪಸಂಹಾರ

ವಚನ ಚಳುವಳಿಯ ಆಶಯಗಳನ್ನು ಕೇಂದ್ರವಾಗಿಸಿಕೊಂಡು ಸಾಂಸ್ಕೃತಿಕ ಪಂಥಗಳನ್ನು ಕಟ್ಟಿಕೊಂಡಿರುವ ಅನೇಕ ಸಮುದಾಯಗಳು ಕರ್ನಾಟಕದಲ್ಲಿವೆ. ವಚನಯುಗದ ವಿಕಾಸವೆಂದರೆ ವೀರಶೈವ ಧರ್ಮವಷ್ಟೇ ಅಲ್ಲ ಇವುಗಳೊಟ್ಟಿಗೆ ಸಾಂಸ್ಕೃತಿಕ ಪಂಥಗಳ ಅಧ್ಯಯನವು ಮುಖ್ಯ. ಈ ಸಾಂಸ್ಕೃತಿಕ ಪಂಥಗಳನ್ನು ಅರಿಯುವುದರಿಂದ ವಚನಯುಗದ ಸಂಸ್ಕೃತಿ ಚಿಂತನೆಗೆ ಇನ್ನಷ್ಟು ವ್ಯಾಪಕತೆ ಲಭ್ಯವಾಗುತ್ತದೆ.

ಈ ಸಾಂಸ್ಕೃತಿಕ ಪಂಥಗಳಲ್ಲಿ ನೀಲಗಾರ ಪರಂಪರೆಯು ಒಂದಾಗಿದೆ. ಇದು ಅಲ್ಲಮ, ಮಂಟೇಸ್ವಾಮಿ ಅಭಿನ್ನರೆಂದು ಹೇಳುತ್ತಾ ಮೌಖಿಕ ಧಾರೆಯನ್ನು ತನ್ನ ಅಭಿವ್ಯಕ್ತಿ ಮಾಧ್ಯಮವಾಗಿ ರೂಢಿಸಿಕೊಂಡಿದೆ. ಇದು ತನ್ನ ಅಭಿವ್ಯಕ್ತಿಗೆ ತನ್ನದೇ ಆದ ಭಾಷೆಯ ವಿಧಾನಗಳನ್ನು ಹುಡುಕಿಕೊಂಡಿದೆ. ಇಂಥ ಪಂಥಗಳ ಸಂಶೋಧನೆಯು ಹೊಸದೊಂದು ಸಂಶೋಧನಾ ವಿಧಾನವನ್ನು ಅಪೇಕ್ಷಿಸುತ್ತಿವೆ.

"ಮಂಟೇಸ್ವಾಮಿಗಳು ಕರ್ನಾಟಕದ ದಕ್ಷಿಣಕ್ಕೆ ಪ್ರಯಾಣ ಮಾಡಿ ಉತ್ತರದಲ್ಲಿ ತಮ್ಮ ಕುರುಹುಗಳನ್ನು ಉಳಿಸಿ ಕೊನೆಗೆ ದಕ್ಷಿಣದಲ್ಲಿ ನೆಲೆಗೊಂಡಿದ್ದಾರೆ. ಈ ಉತ್ತರ ದಕ್ಷಿಣ ಚಲನೆಯನ್ನು ಅವರ ಬದುಕಿನ ಚಲನೆಯಾಗಿ ಪರಿಭಾವಿಸಿ ನೀಲಗಾರರು ಧರೆಗೆ ದೊಡ್ಡವರ ಕತೆಯನ್ನು ಕಟ್ಟಿದ್ದಾರೆ. ಅದು ಶೂನ್ಯ ಸಂಪಾದನೆಗಳ ಮಾದರಿಯಲ್ಲಿದೆ."

ಈ ಸಂತನ ಸಾಂಸ್ಕೃತಿಕ ದಾರಿ ನದಿಯ ಮಾರ್ಗವನ್ನು ಅವಲಂಬಿಸಿದೆ. ನಂತರದ ರಾಜಕೀಯ ವ್ಯಾಪಾರದ ಉದ್ದೇಶದಿಂದ ಈ ಸಾಂಸ್ಕೃತಿಕ ದಾರಿಗಳು ತಮ್ಮ ಪ್ರಾಮುಖ್ಯತೆಯನ್ನು ಕಳೆದುಕೊಂಡಿವೆ. ಬಹುಶಃ ಮಂಟೇಸ್ವಾಮಿ ಪರಂಪರೆ ಉತ್ತರ ದಕ್ಷಿಣದಲ್ಲಿ ವಿಭಿನ್ನ ಸ್ವರೂಪ ತಾಳುವುದಕ್ಕೆ ಇದು ಒಂದು ಕಾರಣವಾಗಿರಬಹುದು.

ಪ್ರಧಾನ ಸಂಸ್ಕೃತಿಗಳು ನಿರಾಕರಿಸಿದ ವಸ್ತುಗಳಿಂದಲೇ ಒಂದು ಸಂಸ್ಕೃತಿಯನ್ನು ರೂಪಿಸಿಕೊಳ್ಳುವ ಲಕ್ಷಣವನ್ನು ನೀಲಗಾರ ಪರಂಪರೆ ತಿಳಿಸುತ್ತದೆ. ಸಂಸ್ಕೃತಿಯ ರೂಪೀಕರಣದಲ್ಲಿ ಇವರ ತಾತ್ವಿಕತೆ ಪ್ರಧಾನ ಧಾರೆಗಳಿಗೆ ಸವಾಲುಗಳಂತಿವೆ. ನೀಲಗಾರ ಪರಂಪರೆಯಲ್ಲಿರುವ ಈ ತರಹದ ವೈರುದ್ಯಗಳನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯವಿದೆ.

ಸಮುದಾಯ ಅಧ್ಯಯನವೆನ್ನುವುದು ಕೇವಲ ಮಾನವ ಶಾಸ್ತ್ರಜ್ಞರ ಸ್ವತ್ತೆಂದು ಪರಿಭಾವಿಸುತ್ತಿದ್ದ ಕಾಲವೊಂದಿತ್ತು. ಅದಕ್ಕೆ ವಿಭಿನ್ನವಾಗಿ ಜನಪದ ವಿದ್ವಾಂಸರು ಸಹ ಸಮುದಾಯ ಅಧ್ಯಯನ ಮಾಡುವುದು ಸಾಧ್ಯವೆಂದು ತೋರಿಸಿಕೊಟ್ಟಿದ್ದಾರೆ.

ನೀಲಗಾರ ಸಮುದಾಯ ದಕ್ಷಿಣ ಕರ್ನಾಟಕದ ಮೈಸೂರು-ಮಂಡ್ಯ-ಚಾಮರಾಜನಗರ ಜಿಲ್ಲೆಗಳಲ್ಲಿ ವಾಸಿಸುತ್ತಿದ್ದಾರೆ. ತೀರ ಭಿನ್ನ ಸಂಸ್ಕೃತಿಯನ್ನು ಮೈಗೂಡಿಸಿಕೊಂಡ ವಿಶಿಷ್ಟ ಸಮುದಾಯಗಳಲ್ಲಿ ನೀಲಗಾರ ಸಮುದಾಯ ಒಂದಾಗಿದೆ. ಇಂತಹ ವಿಶಿಷ್ಟ ಪರಂಪರೆಯ ಸಮುದಾಯವೊಂದರ ಒಳಪದರಗಳನ್ನು ಈ ಪ್ರಬಂಧದಲ್ಲಿ ಬಚ್ಚಿಡಲಾಗಿದೆ. ಆ ಪ್ರಕಾರವಾಗಿ ಅಧ್ಯಯನ ನಡೆಸಲಾಗಿದೆ.

'ನೀಲಗಾರರು: ಒಂದು ಧಾರ್ಮಿಕ ಸಮುದಾಯ ಅಧ್ಯಯನ' ಎಂಬ ಶೀರ್ಷಿಕೆಯಡಿಯಲ್ಲಿ ರಚನೆಗೊಂಡ ಈ ಪ್ರಬಂಧದ ಮೊದಲ ಅಧ್ಯಾಯದ ಪ್ರಸ್ತಾವನೆಯಲ್ಲಿ ಅಧ್ಯಯನದ ಉದ್ದೇಶ ಮಹತ್ವ ಮತ್ತು ವ್ಯಾಪ್ತಿ ನೀಲಗಾರರನ್ನು ಕುರಿತು ಇಲ್ಲಿಯವರೆಗೆ ನಡೆದ ಅಧ್ಯಯನಗಳು. ಅಧ್ಯಯನಕ್ಕಾಗಿ ಕೈಗೊಂಡ ವಿಧಾನಗಳು ಮುಂತಾಗಿ ವಿಭಾಗೀಕರಿಸಲಾಗಿದೆ. ಎರಡನೇ ಅಧ್ಯಾಯದಲ್ಲಿ ಚರಿತ್ರೆ ಎಂದಿದ್ದು ಅದರಲ್ಲಿ ಮಧ್ಯಕಾಲೀನ ಧಾರ್ಮಿಕ ಚಟುವಟಿಕೆಗಳು, ಕೆಳವರ್ಗದ ಪರ್ಯಾಯ ಚಿಂತನೆಗಳು, ನೀಲಗಾರರ ಚಾರಿತ್ರಿಕ ಬೆಳವಣಿಗೆಗಳ ಬಗ್ಗೆ ಚರ್ಚಿಸಲಾಗಿದೆ. ಅಧ್ಯಾಯ ಮೂರರಲ್ಲಿ ಸಮಾಜ ಎಂದಿದ್ದು ಅದರಲ್ಲಿ ನೀಲಗಾರ ಜಾತಿಯ ವಿವಿಧ ಒಕ್ಕಲುಗಳು, ಪ್ರಾದೇಶಿಕ ವಿವರ, ನೀಲಗಾರರ ಸಾಮಾಜಿಕ ಸಂರಚನೆಯಲ್ಲಿ ಕುಟುಂಬ ಪದ್ಧತಿ, ಮನೆಗಳ ನಿರ್ಮಾಣ, ನ್ಯಾಯ ಪದ್ಧತಿ, ಬೇಟೆ, ಜಾತಿ ಬಹಿಷ್ಕಾರ ಮತ್ತು ಜಾತಿಗೆ ಸೇರಿಸಿಕೊಳ್ಳುವ ಪ್ರಕ್ರಿಯೆ ನೀಲಗಾರರ ವಿಧಿ-ನಿಷೇಧಗಳು ಮುಂತಾದ ಚರ್ಚೆಗಳನ್ನು ಮಾಡಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಸಂಸ್ಕೃತಿ ಎಂದಿದ್ದು ಆಚರಣೆಗಳನ್ನು ಚರ್ಚಿಸಲಾಗಿದೆ. ಅದರಲ್ಲಿ ಜೀವನಾವರ್ತನ ಆಚರಣೆಗಳು, ವಾರ್ಷಿಕ ಆಚರಣೆಗಳು ಎಂದು ವಿಭಾಗಿಸಿಕೊಳ್ಳಲಾಗಿದೆ. ಜೀವನಾವರ್ತನ ಆಚರಣೆಗಳಲ್ಲಿ ಜನನ, ಋತುಮತಿಶಾಸ್ತ್ರ, ದೀಕ್ಷೆ, ಮದುವೆ, ಮರಣ ಮುಂತಾದ ವಿವರಗಳಿದ್ದು, ವಾರ್ಷಿಕ ಆಚರಣೆಗಳಲ್ಲಿ ಹಬ್ಬಗಳು, ಗದ್ದುಗೆಗಳು, ಜಾತ್ರೆಗಳು, ಕಂಡಾಯಗಳು, ಮಠಗಳು ಮುಂತಾದ ವಿವರಗಳ ಜೊತೆಗೆ ದೈವಗಳು ಕುಲಪದ್ಧತಿ ಎಂದು ವರ್ಗೀಕರಿಸಿಕೊಂಡು ವಿಶ್ಲೇಷಿಸಲಾಗಿದೆ.

ಅಧ್ಯಾಯ ಐದರಲ್ಲಿ ಪರಂಪರೆ ಎಂದಿದ್ದು ಮೌಖಿಕ ಮಹಾಕಾವ್ಯಗಳು, ಅವುಗಳ ಸಾಂಸ್ಕೃತಿಕ ನಾಯಕರು, ಸಮಕಾಲೀನ ಪರಂಪರೆಗಳು ಎಂದು ವಿಭಾಗಿಸಿಕೊಳ್ಳಲಾಗಿದೆ. ಮೌಖಿಕ ಮಹಾಕಾವ್ಯದಲ್ಲಿ ಮೌಖಿಕ ಮಹಾಕಾವ್ಯದ ರೂಪ ಲಕ್ಷಣಗಳನ್ನು ಹಾಗೂ ನೀಲಗಾರರು ಹಾಡುವ ಮಂಟೇಸ್ವಾಮಿ ಮಹಾಕಾವ್ಯದ ವಿವಿಧ ಪಠ್ಯಗಳನ್ನೂ ವಿವರಿಸಲಾಗಿದೆ. ಸಾಂಸ್ಕೃತಿಕ ನಾಯಕರು ಎಂಬ ಭಾಗದಲ್ಲಿ ಮಂಟೇಸ್ವಾಮಿ ಪರಂಪರೆಯವರನ್ನೆಲ್ಲರನ್ನು ಬೇರೆ ಬೇರೆಯಾಗಿ ವರ್ಗೀಕರಿಸಿಕೊಂಡು ಅಧ್ಯಯನ ಮಾಡಲಾಗಿದೆ. ಜೊತೆಗೆ ಮಂಟೇಸ್ವಾಮಿಯ ಸಮಕಾಲೀನ ಪರಂಪರೆಗಳನ್ನು ಅಧ್ಯಯನದ ಮೂಲಕ ಗುರುತಿಸಲಾಗಿದೆ.

ಅಧ್ಯಾಯ ಆರರಲ್ಲಿ ಅರ್ಥ ಎಂದಿದ್ದು, ಅದರಲ್ಲಿ ನೀಲಗಾರರ ವೃತ್ತಿಗಳನ್ನು ಗುರುತಿಸಲಾಗಿದೆ. ಈ ಭಾಗದಲ್ಲಿ ಸಾಂಪ್ರದಾಯಿಕ ವೃತ್ತಿ ಮತ್ತು ಅವಲಂಬಿತ ವೃತ್ತಿಗಳೆಂದು ವರ್ಗೀಕರಿಸಿಕೊಂಡು ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಏಳರಲ್ಲಿ ವರ್ತಮಾನ ಎಂದಿದ್ದು ನೀಲಗಾರರ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಿತ್ಯಂತರಗಳ ಚರ್ಚೆ ಇದೆ. ಅದರಲ್ಲಿ ನೀಲಗಾರರ ಆಧುನಿಕ ಸಂದರ್ಭದಲ್ಲಿರುವ ಸ್ಥಾನವನ್ನು ಗಮನಿಸಲಾಗಿದೆ.

ಅಧ್ಯಾಯ ಎಂಟು ಸಮಾರೋಪವಾಗಿದ್ದು, ಅದರೊಂದಿಗೆ ಅನುಬಂಧಗಳನ್ನು ಕೊಡಲಾಗಿದೆ. ಅನುಬಂಧ ಒಂದರಲ್ಲಿ ನುಡಿಗಟ್ಟುಗಳು ಹಾಗೂ ನೀಲಗಾರರ ತಂಡಗಳ ವಿವರಗಳನ್ನು ಕೊಡಲಾಗಿದೆ. ಅನುಬಂಧ ಎರಡರಲ್ಲಿ ನೆನೆವಾರ್ತೆಗಳು, ತೋರುಗದ್ದುಗೆಗಳು ಮತ್ತು ನೀಲಗಾರರ ಸಾಂಸ್ಕೃತಿಕ ಕೇಂದ್ರಗಳನ್ನು ನಕ್ಷೆ ಮೂಲಕ ಗುರುತಿಸಲಾಗಿದ್ದು, ಅವರ ಧಾರ್ಮಿಕ ಆಚರಣೆಗಳ ಭಾವಚಿತ್ರಗಳನ್ನು ಕೂಡ ಕೊಡಲಾಗಿದೆ.

ಅನುಬಂಧ ಮೂರರಲ್ಲಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂದರ್ಶಿಸಿದ ಮುಖ್ಯ ವಕ್ತೃಗಳ ವಿವರಗಳನ್ನು ಕೊಡಲಾಗಿದೆ. ಹಾಗೆಯೇ ನೀಲಗಾರರು ಬಳಸುವ ಸಾಂಸ್ಕೃತಿಕ ಪದಗಳಿಗೆ ಅರ್ಥವನ್ನು ನೀಡಲಾಗಿದೆ. ಕೊನೆಯಲ್ಲಿ ಅಧ್ಯಯನಕ್ಕೆ ಪೂರಕವಾದ ಗ್ರಂಥಗಳ ಪಟ್ಟಿಯನ್ನು ನೀಡಲಾಗಿದೆ.

ಒಟ್ಟಿನಲ್ಲಿ ಈ ಅಧ್ಯಯನ ನೀಲಗಾರ ಸಮುದಾಯಗಳ ಸಾಂಸ್ಕೃತಿಕ ಅಧ್ಯಯನಕ್ಕೆ ಹೆಚ್ಚು ಒತ್ತು ಕೊಟ್ಟಿದೆ. ಜಾತ್ರೆ ಹಬ್ಬಗಳಲ್ಲಿ ಇವರ ಆಚರಣೆಗಳನ್ನು ಕುರಿತು ಪಡೆದ ಮಾಹಿತಿಗಳನ್ನು ಚಿತ್ರ ಸಮೇತ ವಿವರಿಸಲಾಗಿದೆ. ಈ ಪರಂಪರೆಗೆ ಪೂರಕವಾಗಿರುವ ಒಟ್ಟು ಮಾಹಿತಿಗಳನ್ನು ಸಮಗ್ರವಾಗಿ ಕಲೆಹಾಕಿ ಅಗತ್ಯವಿರುವಲ್ಲಿ ಸಂಬಂಧಿಸಿದ ಮಾಹಿತಿಗಳನ್ನು ಸಂಕ್ಷಿಪ್ತವಾಗಿ ವಿಶ್ಲೇಷಿಸಲಾಗಿದೆ. ಈ ದೃಷ್ಟಿಯಿಂದ ಇದೊಂದು ಮಾಹಿತಿ ದತ್ತವಾದ ಅಧ್ಯಯನ ವಾಗಿರುವುದರ ಜೊತೆಗೆ ವಿಶ್ಲೇಷಣಾ ವಿಧಾನವನ್ನು ಒಳಗೊಳ್ಳಲು ಯತ್ನಿಸಿದೆ ಎಂದು ನಮ್ರವಾಗಿ ಹೇಳಬಯಸುತ್ತೇನೆ.

ಕೆಳವರ್ಗದ ಜನ ಅದರಲ್ಲೂ ಅಕ್ಷರದಿಂದ ವಂಚಿತರಾದ ಜನಾಂಗ ತನ್ನ ಸಾಂಸ್ಕೃತಿಕ ವಿವರಗಳನ್ನು ಹೇಗೆ ಕಾವ್ಯವಾಗಿಸಿಕೊಂಡು ಪರಂಪರೆಯನ್ನು ಕಟ್ಟುತ್ತದೆ ಎಂಬುದನ್ನು ಈ ಒಕ್ಕಲಿನ ಆಚರಣೆಗಳಲ್ಲಿ ವಿವರಿಸಲಾಗಿದೆ. ಈ ಪರಂಪರೆಯಲ್ಲಿ ಉಳಿದುಕೊಂಡಿರುವ ಸಂಕೇತಗಳ ವಿಶಿಷ್ಟ ಆಚರಣೆಗಳ ಅಧ್ಯಯನ ನಡೆದರೆ ಚರಿತ್ರೆಯನ್ನು ಪುನರ್ ರಚಿಸುವ ಪ್ರಯತ್ನವಾಗಬಹುದು. ಅದರಲ್ಲಿ ಮುಖ್ಯವಾಗಿ ನಾಥಸಿದ್ಧರ ಪರಂಪರೆ ಅವಶೇಷವಾಗಿದ್ದು ಇಲ್ಲಿ ಪಳೆಯುಳಿಕೆ ರೂಪದಲ್ಲಿ ಉಳಿದುಕೊಂಡು ಬಂದಿದೆ.

ಆಧುನಿಕತೆಯ ಬಿರುಸು ಪ್ರಧಾನ ಸಂಸ್ಕೃತಿಗಳ ಹೊಡೆತದ ನಡುವೆ ಈ ಒಕ್ಕಲಿನ ಜನ ತಮ್ಮ ಸಂಸ್ಕೃತಿಯನ್ನು ಸಂರಕ್ಷಿಸಿಕೊಳ್ಳುವ ಯತ್ನದಲ್ಲಿದ್ದಾರೆ. ಅವುಗಳನ್ನು ತಮ್ಮ ಮೌಖಿಕ ಕಾವ್ಯ ಮತ್ತು ಧಾರ್ಮಿಕ ಆಚರಣೆಗಳ ಮೂಲಕ ಪ್ರತಿನಿಧಿಸಿದ್ದಾರೆ. ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳಲ್ಲಿ ವಾಸವಾಗಿರುವ ಒಕ್ಕಲಿನವರ ಬಗ್ಗೆ ಈ ಅಧ್ಯಯನ ನಿಮ್ಮ ಗಮನ ಸೆಳೆಯುವುದರ ಜೊತೆಗೆ ಉನ್ನತ ಅಧ್ಯಯನಗಳಿಗೆ ಪೂರಕವಾಗಬಹುದು ಎಂದು ನಂಬಿದ್ದೇನೆ.

ಅಧ್ಯಯನದಲ್ಲಿ ಕಂಡುಕೊಂಡ ಅಂಶಗಳು

೧. ನೀಲಗಾರ ಸಮುದಾಯದಲ್ಲಿ ಹೆಚ್ಚು ಕೆಳವರ್ಗದವರೇ ಆಗಿದ್ದು ಇವರಲ್ಲಿ ಬಹುತೇಕ ಹಿಂದುಳಿದವರು. ?

೨. ನೀಲಗಾರ ಸಮುದಾಯದವರು ಸರ್ಕಾರಿ ಹುದ್ದೆಗಳಿಂದ ವಂಚಿತರಾಗಿದ್ದಾರೆ.

೩. ಇವರಲ್ಲಿ ಒಂದೇ ಸಮುದಾಯವಿದ್ದರೂ ಆಯಾಯ ಒಕ್ಕಲಿನ ಮುಖ್ಯಸ್ಥರ ಮೂಲಕ ನ್ಯಾಯ ತೀರ್ಮಾನವಾಗುತ್ತವೆ.

೪. ಪ್ರತಿಯೊಂದು ಒಕ್ಕಲಿನಲ್ಲಿಯೂ ಒಬ್ಬೊಬ್ಬ ಪುರುಸಾನಿ (ಗುರು) ಇದ್ದು ಇವರು ಎಂಟು-ಹತ್ತು ಹಳ್ಳಿಗೆ ಒಬ್ಬರಂತೆ ಮುಖ್ಯಸ್ಥರಾಗಿರುತ್ತಾರೆ.

೫. ಇವರಲ್ಲಿ ಅವಿಭಕ್ತ ಕುಟುಂಬಗಳೇ ಹೆಚ್ಚು ಕಂಡುಬರುತ್ತದೆ.

೬. ನೀಲಗಾರ ಸಮುದಾಯದಲ್ಲಿ ಒಟ್ಟು ಒಂಬತ್ತು ಒಕ್ಕಲುಗಳು ಇರುವುದು ಕಂಡುಬರುತ್ತದೆ.

೭. ನೀಲಗಾರ ಪರಂಪರೆ ವಚನ ಚಳುಳಿಯ ಆಶಯಗಳನ್ನು ಮೈಗೂಡಿಸಿಕೊಂಡಿದೆಯಾದರೂ ಪ್ರತಿ ಸಂಸ್ಕೃತಿಯೊಂದರ ನಿರ್ಮಾಣ ಇದರ ಆಂತರ್ಯದ ಆಶಯವಾಗಿದೆ.

೮. ನೀಲಗಾರರಲ್ಲಿ ಹಲವಾರು ಒಕ್ಕಲುಗಳು (ಜಾತಿ) ಸೇರಿದ್ದರೂ ಧಾರ್ಮಿಕ ಆಚರಣೆಗಳ ಸಂದರ್ಭದಲ್ಲಿ ಎಲ್ಲರೂ ಒಟ್ಟಿಗೆ ಸೇರುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಕೊಳ್ಳಲಾಗಿದೆ.

೯. ಈ ಸಮುದಾಯದವರು ರಾಜಕೀಯದಿಂದ ದೂರವಿರುವುದು ಕಂಡುಬರುತ್ತದೆ. ?

೧೦. ನೀಲಗಾರರ ಕ್ಷೇತ್ರವಾದ ಚಿಕ್ಕಲೂರು, ಬೊಪ್ಪಣಪುರ, ಕಪ್ಪಡಿ ಈ ಮೂರು ಕ್ಷೇತ್ರಗಳಲ್ಲಿ ಮಾತ್ರ ಜಾತ್ರೆ-ಉತ್ಸವಗಳು ಜರುಗುತ್ತವೆ.

೧೧. ನೀಲಗಾರ ಗುಡ್ಡರು ದೈವದ ಸಂಕೇತ ಎಂದು ನಂಬಲಾಗುತ್ತದೆ.

೧೨. ನೀಲಗಾರರು ಯಾವುದೇ ಒಂದು ಜಾತಿಯ ಪರಿಕಲ್ಪನೆಗೆ ಒಳಪಟ್ಟಿಲ್ಲ. ಒಟ್ಟಿನಲ್ಲಿ ಅವರೆಲ್ಲರೂ ಒಂದು ಸಮುದಾಯವಾಗಿ ಬದುಕುತ್ತಿರುವುದನ್ನು ಇಂದಿಗೂ ಕಾಣಬಹುದು.

೧೩. ನೀಲಗಾರರು ಮಂಟೇಸ್ವಾಮಿಕತೆ ಹಾಡುವುದರ ಮುಖಾಂತರ ತಮ್ಮ ಜೀವನ ಸಾಗಿಸುತ್ತಿದ್ದು ಇತ್ತೀಚೆಗೆ ಅದು ಭಿಕ್ಷಾವೃತ್ತಿಗೆ ಪರಿವರ್ತನೆಗೊಳ್ಳುತ್ತಿರುವುದನ್ನು ಕಾಣಲಾಗಿದೆ.

೧೪. ನೀಲಗಾರ ಸಮುದಾಯದ ದೈವಗಳಿಗೆ ದೇವಾಲಯಗಳಿಲ್ಲದಿರುವುದು ಕಂಡುಬರುತ್ತದೆ. ಇಲ್ಲಿ ಗದ್ದುಗೆಗಳು ಮಾತ್ರ ಇದ್ದು ಮುಚ್ಚು ಪೂಜೆ ನಡೆಯುತ್ತದೆ.

೧೫. ಈ ಸಮುದಾಯದಲ್ಲಿ ಎಷ್ಟೇ ಶ್ರೀಮಂತರಾದರೂ ಸೋಮುವಾರ ಮತ್ತು ಶುಕ್ರವಾರ ಒಂದು ಮನೆಯನ್ನಾದರೂ ಭಿಕ್ಷೆ ಮಾಡಲೇಬೇಕು ಎಂಬುದು ಇವರ ಪದ್ಧತಿ.

೧೬. ಮಂಟೇಸ್ವಾಮಿಯ ಕಥೆಗಳನ್ನು ಕೆಲವೇ ಒಕ್ಕಲಿನ ನೀಲಗಾರರು ಮಾತ್ರ ಹಾಡುತ್ತಾರೆ. (ಹರಿಜನರು, ಕುರುಬರು, ಉಪ್ಪಾರರು)

೧೭. ನೀಲಗಾರ ಸಮುದಾಯದ ಮುಖ್ಯ ಉದ್ದೇಶ ತಮ್ಮ ಪರಂಪರೆಯನ್ನು ಮುಂದುವರಿಸುವುದೇ ಆಗಿರುವುದನ್ನು ಕಾಣಬಹುದು.

೧೮. ನೀಲಗಾರ ಸಮುದಾಯದಲ್ಲಿ ಮಾದಿಗರು ಮಾತ್ರ ದೀಕ್ಷೆ ಪಡೆದುಕೊಳ್ಳದಿರುವುದು ಕಂಡುಬರುತ್ತದೆ. ಆದರೆ ಒಕ್ಕಲಾಗಿ ಮುಂದುವರಿಯುತ್ತಾರೆ.

೧೯. ಇವತ್ತಿನ ಆಧುನಿಕ ಸಂದರ್ಭದಲ್ಲಿಯೂ ಸಹ ಅವರ ಕ್ಷೇತ್ರಗಳಾದ ಚಿಕ್ಕಲೂರು, ಬೊಪ್ಪೇಗೌಡನಪುರ, ಕಪ್ಪಡಿ ಇವುಗಳಲ್ಲಿ ಜಾತ್ರೆ ಉತ್ಸವಗಳು ಪ್ರತಿ ವರ್ಷವೂ ನಡೆಯುವುದರ ಮೂಲಕ ತಮ್ಮ ಪರಂಪರೆ ಉಳಿಸಿಕೊಳ್ಳುತ್ತಿರುವುದು ಕಂಡುಬರುತ್ತದೆ.

೨೦. ನೀಲಗಾರರು ತಮ್ಮ ಮಂಟೇಸ್ವಾಮಿ ಮತ್ತು ಅವ ಶಿಷ್ಯರ ರೂಪದ ದೈವಗಳನ್ನು ಬಿಟ್ಟು ಉಳಿದ ಯಾವುದೇ ದೈವಕ್ಕೂ ನಡೆದುಕೊಳ್ಳದಿರುವುದನ್ನು ಕಾಣಬಹುದು. ?

೨೧. ನೀಲಗಾರರನ್ನು ಒಂದು ಧಾರ್ಮಿಕ ಸಮುದಾಯವಾಗಿ ಈ ಅಧ್ಯಯನದ ಮೂಲಕ ಗುರುತಿಸಲಾಗಿದೆ.

ಅನುಬಂಧಗಳು

ಅನುಬಂಧ ೧

೧.೧ ನುಡಿಗಟ್ಟುಗಳು

೧.೨ ನೀಲಗಾರರ ತಂಡಗಳು

೧ : ೧ ನುಡಿಗಟ್ಟುಗಳು

ನೀಲಗಾರ ಪರಂಪರೆಯಲ್ಲಿ ತಮ್ಮ ದೈವ ಮಂಟೇಸ್ವಾಮಿಯನ್ನು ಕುರಿತು ಹಾಡುವಾಗ ಕೆಲವು ನುಡಿಗಟ್ಟುಗಳನ್ನು ಜೊತೆಯಲ್ಲಿ ಸೇರಿಸಿ ಹಾಡುತ್ತಾರೆ. ಅಂತಹ ನುಡಿಗಟ್ಟುಗಳನ್ನು ಈ ಕೆಳಗೆ ಕಾಣಿಸಲಾಗಿದೆ. (ಇವುಗಳನ್ನು ವೆಂಕಟೇಶ ಇಂದ್ವಾಡಿ ಅವರ ಗ್ರಂಥದಿಂದ ಆಯ್ದುಕೊಳ್ಳಲಾಗಿದೆ.)

ಅರಮನ ಬರಿದಾದ್ರು ಗುರಮನ ಬರಿದಾಗಲ್ಲ,
ಅರಸಗಳ ಬಟ್ಟೆಯಾದ್ರು ಅಗಸಗಳ್ ಮೈಮೇಲ ಆರ್‌ಗಳ್ಳ,
ಅವಮಾನ ನನಗ, ಭೌಮಾನ ನಿನಗ,
ಆದಿಕಲ್ಯಾಣಕ್ಕೆ, ಅಲ್ಲಮನೇ ತಂದೆ,
ಆರವತ್ತಾರು ಕಾಜ, ಮುವತ್ತಾರು ಬಿರುದು,
ಆರುಗಳಿಗೆ ಮೂರು ನಿಮಿಷ ಜಾಮನಿದ್ರೆ,
ಉಗ್ರಾಣದ ಮನ್ಗ ಉಬ್ಬಿ ಉರ್ಕಂಡ್, ನುಗ್ಗುತ್ತಾರೆ.
ಉಣ್ಣಾಪಂತೀಲೀ ವಂಚನ ಮಾಡ್ದರಾ ಕೈಲಾಸದಲ್ಲಿ ತಳವಿಲ್ಲ
ಉತ್ತರದೇಶದ ಉರಿಕಂಡಾಯ
ಉಳಿ ಮುಟ್ಟದ ಲಿಂಗ
ಋಷಿ ಸೇವಾಗಿಂತ ವಿಷ ಕುಡಿಯಾದು ವಾಸಿ
ಎಗ್ಗಲಮೂಲತಿಟ್ಟು ಕಬ್ಬಿಣ ಕಛೇರಿಯೊಳಗಾ ತಬ್ಬಲಿ ಮಗನ ನಿನಗೇನ್ ಕೆಲ್ಸ?
ಎಡದ ಕಾಲ್ಗ ಎಂಡ್ರದ ಕಲ್ಲು ಎಳನಾಗರ ಮರಿಯಾಗ್ಲಿ
ಏಳೂರು ಸುತ್ತುದ್ರು ಓಲಂಬ್ಲಿ ಸಿಗದೇ ಹೋಗಲಿ
ಒಟ್ಟು ಮಾರ್ಣಕೊಟ್ಟು ಹುಟ್ಟಗಿಬ್ಬರ ಮಡ್ಗಿ
ಒಡಹುಟ್ಟ ಚಿನ್ನ ಕಳ್ಳದೇ ಇದ್ರಾ, ನಿಮ್ಗ ಹೊಟ್ಟೆನೋವ್ ಬರಲಿ
ಕಂಡಾಯ ಅಂದ್ರೆ ಉಂಟು ಕಂಡ್ವರ್‍ಯಾರು ಇಲ್ಲ
ಕನ್ನ ಪ್ರಾಯದ ಹುಡುಗ ಕಂತ ಬೊಂತ ಹೊತ್ಕಂಡು

ಕಣ್ಣುಬ್ಬು ನೋಡಿದ್ರಾ ಕಬ್ಬಕ್ಕಿ ಗೂಡಿನಂಗಾ

ಕಪ್ಪಡಿ ಕೈಲಾಸ, ಚಿಕ್ಕಲೂರು ಗುರುಮಠ ನಿತ್ಯಪೂಜಾ ಬೊಪ್ಪಣಪುರ

ಕರಿತಲಾ ಜಾತಿ, ಹೆಣ್ಣಾ, ಕಣ್ಣೆತ್ತಿ ನೋಡಾದಿಲ್ಲಾ

ಕರೆದು ಕಾಂಚಾಣ ಕೊಟ್ಟು. ಮೊರದಲ್ಲಿ ಭಿಕ್ಷಾಕೊಟ್ಟು ಮರ್ವಾದಿ ಮಾಡಿಲ್ಲಾ

ಕಲ್ಯಾಣ ಪಟ್ಟಣ ಕಟುಕರಂಗಡಿಯಾಯ್ತು

ಕಾಕೋಳಿ ಕೂಗಿ, ಲೋಕ ಬೆಳಗಾಗಿ

ಕಾರಂಜಿ ಕೆರೆಯೊಳಗಾ, ಕಾವಿ ಡೇರಾ ಹಾಕಿ

ಕುರಿಕೊಟ್ಗ, ಉರಿಗದ್ಗ, ಕತ್ತಕೊಟ್ಗ ಚಂದ್ರಶಾಲ, ಉಬ್ಬಹೊಲ ಊಳಿಗಾರಮನೆ

ಕುಲೇಳು ಹದಿನೆಂಟು ಜಾತಿಯೊಳಗೆ ಏಕದುಡ ಪರಂಜ್ಯೋತಿ

ಕೆಬ್ಬ ಕಟ್ಟಲೇ ಕಂಡಾಯ ಬೆಳಗಿ ಕವಡ ಸಾಂಬ್ರಾಣಿ ಹಾಕಿ ಮಂಗಳಾರತಿ ಕೊಟ್ಟ.

ಕೊಟ್ಟ ಮಾತಿಗೆ ತಪ್ಪಬೇಡ, ಕೆಟ್ಟ ಯೋಚನೆ ಮಾಡಬೇಡ

ಖಂಡುಗ ಸಾಮ್ರಾಣಿ, ಕೆಂಡದ ಪವಾಡ,

ಗುಡ್ಡನ ಬಿಟ್ಟು, ಗುರುಮಣಿಕಟ್ಟಿ, ಜಲ್ಮಶುದ್ಧ ಮಾಡ್ಬೇಕು.

ಗುರುಮುಟ್ಟಿದ ಗುಡ್ಡ

ಜಡಚಾರಕ ಗಂಡ ಅರಶೂನ್ಯಕ ಒಡೆಯ

ಜಾತಿಗ ಜಾತಿ ವೈರಿ, ನೀರ್ಗ ಪಾಸ ವೈರಿ

ತಿಪ್ಪಾಮೇಲಾ ಹಸ್ಸಿಟ್ಟರೂ ಹತ್ತಕಾ ಉರಿಯೋ ಪರಂಜ್ಯೋತಿ

ತಿರುಕ ತಿಂದ್ರು ಕಿರಿಮಗ್ನ ಕೊಡಾದಿಲ್ಲ

ಧರೆಯ ತಂದವರು, ಧರೆಗೆ ದೊಡ್ಡವರು

ನನ್ನ ಹಂಗು ನರರ್ಗ ಉಂಟು ನರರ ಹಂಗು ನನಗಿಲ್ಲ,

ನರಮನುಷ ನರಮನುಷನ್ಗ ಬೊಗ್ಗದಿಲ್ಲಾ ಮಾರಿ ಉಯಿಲು ಅಂದ್ರಾ ಬೊಗ್ಗ ತಾನ

ನರರಿಗೆ ನಾಲ್ಕು ಕಾಲು ಮಂಚ, ನನ್ಗ ಮೂಕ್ಕಾಲು ಮಂಚ

ನಾನು ಮರೆಯೋ ದೇವರಾದ್ರ, ನೀನು ಮೆರೆಯೋ ದೇವ್ರು

ನಾಳ ಕಲಿಯುಗದಲ್ಲಿ ಗುಡ್ಡ ಗುಡ್ಡಗಳಿಗೆಲ್ಲಾ ಗುದ್ದಾಟ

ಜೋಗ್ ಜೋಗಿಗಳಿಗೆಲ್ಲಾ ಗೋಜಾಟ

ನೀಡಿದವರ್ಗ ನಿಜ ಸಾಕ್ಷಿ, ಮಾಡಿದವರ್ಗ ಮನಸಾಕ್ಷಿ ತೋಡಿದ

ಬಾವಿಗ ಜಲ ಸಾಕ್ಷಿ

ನೆನೆದವರ ಮನದಲ್ಲಿ ಮನ ಮುಟ್ಟಿ ವಾಲಾಡಿ, ನಂಬಿ

ದವರ ಮನ ಒಳಗಾ ತುಂಬಿ ತುಳುಕಾಡಿ

ಅನ್ನ ಇಕ್ಕಿದವರ ಮನೆಯ ಪುಣ್ಯವಂತರ ಮಾಡಿ

ಮೆರೆತವರ ಮನೆಗ ಮಾರಿ ಕೂಡ್ತೀನಿ.

ಪಟ್ನ ಆಳೋ ತಂದೆಯಿಲ್ಲದೆ ಹೋದ್ರು, ಕೊಟ್ನ ಕುಟ್ಕೋ

ತಾಯ್ಡಿರುಬೇಕು.

ಬಡಗ ಬಾಗಿಲ ಮಠ, ಬೆಡಗಿನ ಚಂದ್ರಶಾಲ

ಬಡವರ್ಗ ದೇವ್ರ ಮ್ಯಾಲ್‌ಗಾನ, ಬಲಿಗಾರರ್ಗ ಸಿರಿಸಂಪತ್ತಿನ

ಮ್ಯಾಲ ಗ್ಯಾನ.

ಬಸವಣ್ಣನ ಹೆಸರೇಳಿ , ಭಸುಮಾಂಗ ಧರಿಸಿ,

ಬಾರಿ ಕಂಡಾಯಕ, ಭಂಗಿ ನಿವೇದನ

ಬಾರಿಗುಂಡಾ ತೆಗೆದು, ಬಾಗಿಲಗಡ್ಡೆ ಚಾಚುತಾರ

ಬೂದಿ ಮುಚ್ಚಿದ ಕೆಂಡ, ಭೂಲೋಕ ಗಂಡ

ಬೆಂಕಿ ಕೆಂಡದ ಮಾತ್ಗ, ಮಾರಳ್ಳಿ ಹಾಳ್ ಆಯ್ತು

ಬೆಳ್ಳಿ ಮೂಡಿ ಬೆಳಕರಿದು ಬಂತು,

ಭಂಗಿ ಕುಡಿದ್ರು ಬಂಗಾರ, ಸರಾಫ್ ಕುಡಿದ್ರು ಸರದಾರ

ಭಾಗ್ಯ ಭಾಗ್ಯಕ್ಕೆಲ್ಲಾ, ಮಕ್ಕಳ ಭಾಗ್ಯ ದೊಡ್ಡದು

ಭಿಕ್ಷಕ್ಕೆ ಬಂದವ, ಬಿಸಿ ಅನ್ನ ಕೇಳ್ದಂಗಾ

ಭಿಕ್ಷಾ ತಕ್ಕೋ ಬೀದಿ ದೇವರೇ, ಕೋರಣ್ಯ ತಕ್ಕೋ ಕುಲದ ಸ್ವಾಮಿ

ಭಿಕ್ಷೆ ಎಂದರೆ ಲಕ್ಷ್ಯವಿಲ್ಲ, ದಾನ ಎಂದರೆ ಗ್ಯಾನವಿಲ್ಲ

ಮಾಟ್ನಕೂಟದ ಕರ್ತೃ ಕಾಣೋ, ಮಂಟೇಲಿಂಗಯ್ಯ ಕಾಣೋ,

ಮಾರಳ್ಳಿ ಹಾಳಾಗಿ ಮಳವಳ್ಳಿ ಏಳ್ಗೆ ಆಗಲಿ

ಮಾರಾಣಿ ಮನೆಯಲ್ಲಿ, ಮೊದಲ ಭಿಕ್ಷಾ

ಮಾಲಂಗಿ ಮಡುವಾಗಿ, ತಲಕಾಡು ಮರಳಾಗಿ

ಮೈಸೂರು ರಾಜರ್ಗ ಮಕ್ಕಳಿಲ್ಲವಾಗಲಿ

ಮುತ್ತಿನ ಜೋಳಿಗ ತೆಗೆದು ಮುಂಗೈಗಾಧರ ಮಾಡಿ
ಮುಟ್ಟನಳ್ಳಿ ತೋಪ್‌ನಲ್ಲಿ, ಮುಟ್ಟಿ ಪೂಜೆ ಮಾಡಿ
ಮುಟ್ಟಿಲ್ಲದ ಜಾಗವಿಲ್ಲ ಎಂಜಲಿಲ್ಲದ ಸ್ಥಳವಿಲ್ಲ
ಮೂಗಲ್ಲಿ ಹೊನ್ನುತ್ತ ನೆತ್ತಿಮ್ಯಾಲ ಮತ್ತಿಮಠ ಬೆನ್ನಲ್ಲಿ
ಬ್ಯಾಲದ ಮಠ ಕೆಣ್ಣಲ್ಲಿ ಕಜ್ಜನಗೂಡು
ಮೂರು ನಾಮದ ಒಡೆಯ, ಮೂಡಲ ಮುತ್ತತ್ತಿರಾಯ
ಮೈಲಗಷ್ಟೆ ಕೈ ಮೈ ಕೈಗೆಲ್ಲಾ ಒರಿಸಿ
ಲಕ್ಷಿಕನ ಕಣಜ ಬರಿದಾದ್ರು ಭಿಕ್ಷುಕನ ಜೋಳ್ಗ ಬರಿದಾಗಲ್ಲ
ಸಾವಿರ ಬಂದ್ರು, ಸಂದಗ ಲಯ
ಸೂಜಿಗಾತ್ರದ ಕನ್ನ ದಬ್ಬಳ ಗಾತ್ರದ ಬೆಳಕು
ಹಸಿ ತಿಂದು ಹುಸಿ ಬೊಗಳ್ ಬೇಡ
ಹಾದಿಗ ಎಲವಾರ ಚಾಜಕ್ಕೆ ಮಳವಳ್ಳಿ ಪೂಜಕ್ಕೆ ಬೊಪ್ಪಣಪುರ
ಹುಟ್ಟು ಬಂಜೆ ದಟ್ಟ ಧರಣಿ
ಹೆತ್ತ ಮಕ್ಕಳ, ಬಿತ್ತಿದ ಬೆಳೆಯೊ, ದಾನ ಕೊಡದುಂಟಾ
ಹೊಂಗ ತೋಪಿನಲ್ಲಿ ಹೊರಸೂತ್ಗವಾಗಿ
ಹೊಸದಾರು ಅನ್ನೋದು ಹೊರ‍್ಗನವರ‍್ಗ ಪಡಶಾಲ, ಅನ್ನೋದು ಪರದೇಶಿಗಳ್ಗ

೧ : ೨ ನೀಲಗಾರರ ತಂಡಗಳು

ಹೆಸರು	ವಿಳಾಸ	ವಯಸ್ಸು	ಜಾತಿ
೧.	ಕಾರಪುರದ ಪುಟ್ಟಮಾದಯ್ಯ ಗೋಪಾಲಪುರ, ಟಿ.ನರಸೀಪುರ ಅಂಚೆ ಮೈಸೂರು ಜಿಲ್ಲೆ	೯೦	ಆದಿಜಾಂಬವ
೨.	ದಿ॥ ಶ್ರೀ ಕೆಬ್ಬೇಪುರ ರಾಚಯ್ಯ ಕೆಬ್ಬೇಪುರ ಹುಂಡಿಪುರ ಅಂಚೆ ಗುಂಡ್ಲಪೇಟೆ ತಾಲ್ಲೂಕು ಚಾಮರಾಜನಗರ ಜಿಲ್ಲೆ	೬೨	ಆದಿಜಾಂಬವ

೩.	ದಿ॥ ಮಳವಳ್ಳಿ ರಾಚಯ್ಯ ಮಳವಳ್ಳಿ ಅಂಚೆ ಮಂಡ್ಯ ಜಿಲ್ಲೆ	೮೦	ಹರಿಜನ
೪.	ಅಟ್ಲಮಾದಯ್ಯ ದೊಡ್ಡಿಂದುವಾಡಿ ಕೊಳ್ಳೇಗಾಲ ತಾಲ್ಲೂಕು ಚಾಮರಾಜನಗರ ಜಿಲ್ಲೆ	೫೦	ಹರಿಜನ
೫.	ಬಸವಯ್ಯ S/o ಗವಿಯಯ್ಯ ದೊಡ್ಡಿಂದುವಾಡಿ ಕೊಳ್ಳೇಗಾಲ ತಾಲ್ಲೂಕು ಚಾಮರಾಜನಗರ ಜಿಲ್ಲೆ	೪೫	ಆದಿಜಾಂಬವ
೬.	ಶ್ರೀಮತಿ ರಾಜಮ್ಮ W/o ಅಟ್ಲಮಾದಯ್ಯ ದೊಡ್ಡಿಂದುವಾಡಿ ಅಂಚೆ ಕೊಳ್ಳೇಗಾಲ ತಾಲ್ಲೂಕು ಚಾಮರಾಜನಗರ ಜಿಲ್ಲೆ	೪೫	ಆದಿಜಾಂಬವ
೭.	ದಿ॥ ಗಂಡಾಗುಂಡಿ ತಮ್ಮಯ್ಯಶೆಟ್ಟಿ ದೊಡ್ಡಿಂದುವಾಡಿ ಅಂಚೆ ಕೊಳ್ಳೇಗಾಲ ತಾಲ್ಲೂಕು ಚಾಮರಾಜನಗರ ಜಿಲ್ಲೆ	೭೦	ಉಪ್ಪಾರ
೮.	ಶ್ರೀ ಮೋಳೆ ರಾಚಯ್ಯ ಕೊಳ್ಳೇಗಾಲ ಮೋಳೆ ಕೊಳ್ಳೇಗಾಲ ತಾಲ್ಲೂಕು ಚಾಮರಾಜನಗರ ಜಿಲ್ಲೆ	೫೫	ಉಪ್ಪಾರ
೯.	ಶ್ರೀ ಕುಂತೂರು ಕಾಳಶೆಟ್ಟಿ ಕುಂತೂರು ಅಂಚೆ ಚಾಮರಾಜನಗರ ಜಿಲ್ಲೆ	೭೦	ಗಾಣಿಗ

೧೦.	ಉಲ್ಲಂಬಳ್ಳಿ ಮಾದಯ್ಯ ಮಳವಳ್ಳಿ ಮಳವಳ್ಳಿ ಅಂಚೆ ಮಂಡ್ಯಜಿಲ್ಲೆ	೫೬	ವಾಲ್ಮೀಕಿ
೧೧.	ಶ್ರೀ ಕೃಷ್ಣಾಪುರ ಮಹಾದೇವಸ್ವಾಮಿ ಮಳವಳ್ಳಿ ಅಂಚೆ ಮಂಡ್ಯ ಜಿಲ್ಲೆ	೪೯	ಆದಿಜಾಂಬವ
೧೨.	ಮಂಟೇಲಿಂಗಯ್ಯ ಕ್ಯಾತಮಾರ‍್ನಹಳ್ಳಿ ಪಾಂಡವಪುರ ತಾಲ್ಲೂಕು ಮಂಡ್ಯ ಜಿಲ್ಲೆ	೬೦	ಮಡಿವಾಳರು
೧೩.	ಕೆಂಪಮ್ಮ ಬನ್ನೂರು ಬನ್ನೂರು ಅಂಚೆ ಟಿ.ನರಸೀಪುರ ತಾಲ್ಲೂಕು ಮಂಡ್ಯಜಿಲ್ಲೆ	೫೦	ಹರಿಜನ
೧೪.	ಮಹಾದೇವಯ್ಯ ಪುರಿಗಾಲಿ ಅಂಚೆ ಟೀ ನರಸೀಪುರ ತಾಲ್ಲೂಕು ಮಂಡ್ಯಜಿಲ್ಲೆ	೩೨	ಹರಿಜನ
೧೫.	ಮಹಾದೇವಯ್ಯ ಹಿನಕಲ್ಲು ಅಂಚೆ ಮೈಸೂರು ಜಿಲ್ಲೆ	೪೫	ಆದಿ ಕರ್ನಾಟಕ
೧೬.	ಎಸ್ ರಾಚಯ್ಯ ಕೆಸರೆ ಅಂಬೇಡ್ಕರ್ ನಗರ ಮೈಸೂರು	೬೦	ಆದಿ ಕರ್ನಾಟಕ

೧೭.	ತಂಬೂರಿ ನಿಂಗೇಗೌಡ ೪/೨ ಕಿಡಗಣ್ಣಮ್ಮನ ಬಡಾವಣೆ ಸೂರ್ಯ ಬೇಕರಿ ರಸ್ತೆ ಕುಂಬಾರ ಕೊಪ್ಪಲು ಮೈಸೂರು	೫೦	
೧೮.	ತಂಬೂರಿ ಮಹಾದೇವಯ್ಯ ಸಿದ್ದಯ್ಯನಪುರ ಅಂಚೆ ಕೊಳ್ಳೇಗಾಲ ತಾಲ್ಲೂಕು ಚಾಮರಾಜನಗರ ಜಿಲ್ಲೆ	೪೨	ಹರಿಜನ
೧೯.	ಹುಚ್ಚಯ್ಯ ಮತ್ತು ತಂಡ ರಮಾಳ್ಳಿ ಕ್ಯಾಸಮಾರನಹಳ್ಳಿ ಮೈಸೂರು	೫೫	ಉಪ್ಪಾರ
೨೦.	ಮಾದೇಶ ಮತ್ತು ತಂಡ ಮಾರಳ್ಳಿ ಗ್ರಾಮ ಮಳವಳ್ಳಿ ತಾಲ್ಲೂಕು	೫೫	ಹರಿಜನ
೨೧.	ಲಕ್ಷ್ಮಮ್ಮ ಯರೂರು ಅಂಚೆ ಯಳಂದೂರು ತಾಲ್ಲೂಕು ಚಾಮರಾಜನಗರ ಜಿಲ್ಲೆ	೫೦	ಹರಿಜನ
೨೨.	ಶಾರದಮ್ಮ ಎಡೆತೊರೆ ಗರ್ಗೇಶ್ವರಿ ಅಂಚೆ ಟೀ ನರಸೀಪುರ ತಾಲ್ಲೂಕು	೫೦	ಹರಿಜನ
೨೩.	ಕೆಂಚೇರ ಚಿಕ್ಕ ಚೆನ್ನಪ್ಪನ ಮಠದ ನೀಲಗಾರರು ದೇಪೇಗೌಡನಪುರ ಅಲ್ಲರ ಅಂಚೆ, ನಂಜನಗೂಡು ತಾಲ್ಲೂಕು.	೪೭	ಹರಿಜನ

೨೪.	ಮಂಟೇಲಿಂಗ ಮತ್ತು ತಂಡ ಕೊಡನ ಕೊಪ್ಪಲು ಟಿ. ನರಸೀಪುರ ತಾಲ್ಲೂಕು	೫೦	ಹರಿಜನ
೨೫.	ಮಂಟೇಸಿದ್ದಯ್ಯ ಮತ್ತು ತಂಡ ದನಿಗೇರಿ ಕೊಳ್ಳೇಗಾಲ ತಾಲ್ಲೂಕು ಚಾಮರಾಜನಗರ ಜಿಲ್ಲೆ	೫೫	ಹರಿಜನ
೨೬.	ಪುಟ್ಟರಾಜು ಮತ್ತು ತಂಡ ಕೆಸರೆ, ಅಂಬೇಡ್ಕರ್ ನಗರ ಮೈಸೂರು	೪೫	ಹರಿಜನ
೨೭.	ಕಾಳಾವಾರ ಸಿದ್ದಶೆಟ್ಟರು ಮತ್ತು ತಂಡ ಕೃಷ್ಣಾಪುರ ಕೊಂಗನಪುರ ಅಂಚೆ ಯಳಂದೂರು ತಾಲ್ಲೂಕು	೫೨	ಉಪ್ಪಾರ

ಅನುಬಂಧ ೨

೨.೧ ನೆನೆವಾರ್ತೆಗಳು

೨.೨ ತೋರುಗದ್ದುಗೆಗಳು

೨.೩ ನಕ್ಷೆ, ಭಾವಚಿತ್ರಗಳು

೨ : ೧ ನೆನೆ ವಾರ್ತೆಗಳು (ತಿರುಮಂತ್ರ) *

ಪರಾಪರ ವಸ್ತು ಪಾವನಮೂರುತಿ
ಪರಮಗುರು ಪರಂಜ್ಯೋತಿ
ಧರೆಗೆ ದೊಡ್ಡಯ್ಯನಿಗೆ || ಶರಣು ಶರಣಾರ್ಥಿ ||

ಮೊಟ್ಟ ಮದಲಿಗೆ ಓಂಕಾರ ಸ್ವರೂಪನಾಗಿ
ಆಕಾಶ ತಂದು ಆದಿ ಸಂಗಮೇಶ್ವರನಾಗಿ
ಉತ್ತರ ಕಾಂಡದಲ್ಲಿ ಉತ್ಪತ್ತಿಯಾಗಿ
ಉತ್ತರ ದೇಶದ ಸಿದ್ದನಾಗಿ
ಕತ್ತಲ ರಾಜ್ಯದಲ್ಲಿ ಜ್ಯೋತಿಲಿಂಗಯ್ಯನಾಗಿ
ಆದಿ ಕಲ್ಯಾಣದಲ್ಲಿ ಅಲ್ಲಮಪ್ರಭುವಾಗಿ
ತುರುಕಾಂಡ್ಯದಲಿ ಹರೇ ಅಲ್ಲನಾಗಿ
ಕೊಡೇಕಲ್ಲಿನಲ್ಲಿ ಕೊಡಾಲದಯ್ಯನಾಗಿ
ಮೈಸೂರಿನಲ್ಲಿ ಮಾಗುರುವಾಗಿ
ಆದಿ ಹೊನ್ನಾಯಕನಹಳ್ಳಿಯಲ್ಲಿ
ಚೆನ್ನ ಮಂಟೇಸ್ವಾಮಿಯಾಗಿ
ನಿಡುಘಟ್ಟದಲ್ಲಿ ಮುದ್ದಮ್ಮನಿಂದ
ಮಂಟೇದರೆಂದು ನಾಮಕರಣವಾದ
ಧರೆಗೆ ದೊಡ್ಡವರ ಪಾದಕ್ಕೆ || ಶರಣು ಶರಣಾರ್ಥಿ ||

* ಗುಡ್ಡನಾಗಿ ಗುರುಮಣಿಕಟ್ಟಿದ ಮೇಲೆ ನೀಲಗಾರರು ಧಾರ್ಮಿಕ ಪೂಜಾ ಸಂದರ್ಭಗಳಲ್ಲಿ ಹಿರಿಯ ಗುಡ್ಡ ಹೇಳುವ ಈ ತಿರುಮಂತ್ರಗಳನ್ನು ಕೇಳಿಸಿಕೊಂಡು ಸಿಸುಮಕ್ಕಳು ''ಶರಣು ಶರಣಾರ್ಥಿ''ಯೆಂದು ಹೇಳಿ ಜಾಗಟೆ ಬಾರಿಸುತ್ತಾರೆ. ಗುರು ಗುಡ್ಡನಿಗೆ ದೀಕ್ಷೆ ಕೊಡುವಾಗ ಈ ತಿರುಮಂತ್ರಗಳನ್ನು ಹೇಳಿಕೊಡಬೇಕು. ಈ ತಿರುಮಂತ್ರವನ್ನು ಹಾಡಿದವರು. ಶ್ರೀ ಮೋಳೆ ರಾಚಯ್ಯನವರು.

ಕೈಲಾಸದಿಂ ನಡೆದು

ಕಲ್ಯಾಣ ತುರುಕಾಣ್ಯ

ಉಳುಮೆ ಮಹಾಮನೆ

ಕೊಡೇಕಲ್ಲು ಚಿತ್ರದುರ್ಗ

ಕಾಗಿನೆಲೆ ಸಖರಾಯಪಟ್ಟಣ

ಚೆನ್ನಪಟ್ಟಣ ಹಲವಾರ

ಕೂರ್ಮಗೆರೆ ಹಾದಿ

ಹೊನ್ನಾಯಕನಹಳ್ಳಿ

ಮಳವಳ್ಳಿ - ಕುಂದೂರು

ನಿಡುಘಟ್ಟ ಮಾರಳ್ಳಿಯಿಂದ

ಬಂದು ರಾಜ ಬೊಪ್ಪಣಪುರದಲ್ಲಿ

ಒರಗಿರುವ ಮಂಟೇಸ್ವಾಮಿಗೆ || ಶರಣು ಶರಣಾರ್ಥಿ||

ಒಂದು ಪಡಿ ಅಕ್ಕಿಯಾಕಿ

ಒಂದ್ ಬದನೆಕಾಯಿ ಹಾಕಿ

ಲಕ್ಷದ ತೊಂಭತ್ತಾರು

ಗಣಂಗಳಿಗೆ ನಿಚ್ಚಭೋಜನ ಮಾಡಿ

ಮಿಕ್ಕಿದ ಪ್ರಸಾದವ

ಕಲ್ಲು ಬಂಡಿ ಕಟ್ಟಿ

ಕೈಲಾಸಕ್ಕೆ ಕಳುಹಿಸಿದ

ನೀಲಮ್ಮನವರ ಪಾದಕ್ಕೆ || ಶರಣು ಶರಣಾರ್ಥಿ||

ಮಗ್ಗ - ಮರಳ್ಳಿ

ಹೆಗ್ಗಡದೇವನ ಕೋಟ

ಪಟ್ಲ - ಪಾಲಳ್ಳಿ

ಸಂತ - ಸರಗೂರು

ಅರಕೆರೆ - ಬನ್ನೂರು

ತುರುಕ್ರಾಳ ರಾಜ್ಯ

ಒಕ್ಲು ಮಾಡಿ

ಹಂಸಪುರ ಗ್ರಾಮ

ಎಡೆತೊರೆ ಗ್ರಾಮ

ಚಂದಗಾಲ ತೋಟ

ಚುಂಚನಕಟ್ಟೆ ತಾಲ್ಲೂಕು

ಮೈಸೂರು ದಿಸರಕಟ್ಟೆ

ಒಕ್ಕಲು ಪಡೆದು

ಕಪ್ಪಡಿ - ಕೈಲಾಸದಲ್ಲಿ

ನೆಲೆಗೊಂಡಿರುವ

ಕಿಡುಗಣ್ಣ ರಾಚಪ್ಪಾಜಿಯವರ ಪಾದಕ್ಕೆ ||ಶರಣು ಶರಣಾರ್ಥಿ||

ಬಡವರ ಮನೆಯ ಜ್ಯೋತಿ

ಬಲಿಗಾರ ಮನೆಯ ಜ್ಯೋತಿ

ಅರಸಗಳ ಮನೆಯ ಜ್ಯೋತಿ

ಗುರ‍್ಗಗಳ ಮನೆಯ ಜ್ಯೋತಿ

ಸತ್ತವರ ಮನೆಯ ಜ್ಯೋತಿ

ಹೆತ್ತವರ ಮನೆಯ ಜ್ಯೋತಿ

ಕುರುಬನ ಮನೆಯ ಜ್ಯೋತಿ

ಕುಂಬಾರನ ಮನೆಯ ಜ್ಯೋತಿ

ಒಡೆಯನ ಮನೆಯ ಜ್ಯೋತಿ

ಹೊಲೆಯನ ಮನೆಯ ಜ್ಯೋತಿ

ಕುಲೇಳು ಹದಿನೆಂಟು ಜಾತಿಯೊಳಗೆ

ಏಕದುಡ ಪರಂಜ್ಯೋತಿ

ಧರೆಗೆ ದೊಡ್ಡವರ ಪಾದಕ್ಕೆ ||ಶರಣು ಶರಣಾರ್ಥಿ||

ಕಂಡಾಯ ಹೊತ್ಕಂಡು

ತಂಬೂರಿ ಎತ್ಕಂಡು

ಕಾವಿ ಜೋಳ್ಗ ಕಂಕ್ಳುಳ್ಗ ಹಾಕ್ಕಂಡು

ಉರಿಸಿಂಗಿ ಕೊರಾಡ

ಬೆನ್ನ ಹಿಂದೆ ಕಟಕಂಡು

ಕೊರಳು ತುಂಬಾ ರುದುರಾಕ್ಷಿ

ತಾಮ್ರದ ಮೈ ಜ್ವಾಲ

ಗಂಡು ಗತ್ರಿ ಪವಾಡ

ಏಲು ಗಿಣ್ಣಿನ ಬೆತ್ತ

ನವಿಲುಗರಿ ಗೊಂತ

ಬಲದ ಕೈಲಿ ಹಿಡಕಂಡು

ಏಳ್ ನೂರ್ ಎಪ್ಪತ್ತೇಳು

ಮರಿಜಡೆ ಕುರಜಡೆ

ಎಡಕೆ ಬಲಕ ಬಿಟುಕಂಡು

ಕತ್ತಲರಾಜ್ಯದಲ್ಲಿ ಬಂದು

ನೆಲಗೊಂಡ ನಮ್ಮಪ್ಪಾಜಿ

ಧರೆಗೆ ದೊಡ್ಡವರ ಪಾದಕ್ಕೆ ||ಶರಣು ಶರಣಾರ್ಥಿ||

ಹರನ ಗುರುವು ಭಿಕ್ಷಾ

ಗುರುಕೊಟ್ಯ ಜೋಳ್ಗ ಭಿಕ್ಷಾ

ಸಟುಗ ಸಂಗಯ್ಯ ಭಿಕ್ಷಾ

ಹಾದಿ ಎಲವಾರ ಭಿಕ್ಷಾ

ಧರೆ ತಂದವರ ಭಿಕ್ಷಾ

ಧರೆಗೆ ದೊಡ್ಡವರ ಭಿಕ್ಷಾ

ಉರಿಕಂಡಾಯ ಭಿಕ್ಷಾ

ಮಾರಾಣಿ ಮನೆಯಲ್ಲಿ

ಮೊದಲ ಭಿಕ್ಷಾ ಸಾರಿದ

ಧರೆಗೆ ದೊಡ್ಡವರ ಪಾದಕ್ಕೆ ||ಶರಣು ಶರಣಾರ್ಥಿ||

ಮೈಸೂರು ಮರಾಣಿಯ

ಮಗಳಾಗಿ

ಕಿಡುಗಣ್ಣ ರಾಚಪ್ಪಾಜಿಗೆ

ಸತಿಯಾಗಿ

ಹೊಂಗ ತೋಪಿನಲ್ಲಿ

ಹೊರ ಸೂತ್ರವಾಗಿ

ಮುಟ್ಟನಹಳ್ಳಿ ತೋಪಿನಲ್ಲಿ

ನೆಲೆಗೊಂಡಿರುವ

ತೋಪಿನ ದೊಡ್ಡಮ್ಮನವರ ಪಾದಕ್ಕೆ || ಶರಣು ಶರಣಾರ್ಥಿ ||

ಜಡ ಜಾರಕ ಗಂಡ

ಅರಶೂನ್ಯಕೆ ಒಡೆಯ

ಮಾಟ್ಗ ಕೂಟ್ಗದ ಕರ್ತೃ

ಮಂಟೇಲಿಂಗಯ್ಯ ಶಿಷ್ಯ

ಕಪ್ಪಡಿ ರಾಚಪ್ಪಾಜಿಯವರ ಪಾದಕ್ಕೆ || ಶರಣು ಶರಣಾರ್ಥಿ||

ಕಪ್ಪಡಿ ಕೈಲಾಸ

ಚಿಕ್ಕಲೂರು ಗುರುಮಠ

ಹಾದಿಗ ಎಲವಾರ

ಚಾಜಕ್ಕ ಮಳವಳ್ಳಿ

ಪೂಜಕ್ಕ ಬೊಪ್ಪಣಪುರ

ಪಡೆದ ಧರೆಗೆ ದೊಡ್ಡವರ ಪಾದಕ್ಕೆ ||ಶರಣು ಶರಣಾರ್ಥಿ||

ಆರು ಖಂಡ್ಗ ಎಕ್ಕರಾಲು

ಮೂರು ಖಂಡ್ಗ ಕಳ್ಳಿಹಾಲು

ಸುಣ್ಣದ ತಿಳಿ ಬೆರಸಿ

ಹನ್ನೆರಡು ಖಂಡ್ಗ

ಉರಿಭಂಗಿ ಸೊಪ್ಪು

ಒಳ್ಳೆಣ್ಣೆ ಒಳಗೆ ಬೆರಸಿ

ಪಂಚಪತ್ರ ರಸ

ನಾಗರಾವಿನ ವಿಷ

ಅಂಗೈಗಾ ಹಾಕ್ಕಂಡು

ಹದ್ದೂಡಿ ಮಿಟ್ಟಮಾಡಿ

ಚರಮುಖ ಹೊಡೆದು

ತೆರವ ಗೆಂಡ ಮಾಡಿ

ಬಾರಿ ಕಂಡಾಯಕ್ಕ

ಭಂಗಿ ನಿವೇದನೆ ಮಾಡುವ

ಧರೆಗೆ ದೊಡ್ಡವರ ಪಾದಕ್ಕೆ || ಶರಣು ಶರಣಾರ್ಥಿ ||

ಕತ್ತಕೊಟ್ಗ ಚಂದ್ರಶಾಲೆಯಾಗಿ

ಉಬ್ಬ ಓಲ ಊಳಿಗಾರ ಮನೆಯಾಗಿ

ತೊಟ್ಟಿ ಜಾಗ ಮಜ್ಜನ ಬಾವಿಗೆ

ಧಾರೆ ಎರೆದುಕೊಟ್ಟ

ಮಡಿವಾಳ ಮಾಚಯ್ಯ

ಮಲ್ಲಿಗೆ ಮಾದೇವಮ್ಮನವರ ಪಾದಕ್ಕೆ || ಶರಣು ಶರಣಾರ್ಥಿ ||

ಎಲಕುಂದೂರು ಬೆಟ್ಟ

ಕಾಳಿಂಗನ ಕಲ್ಲುಗವಿಲಿ

ಮಂಡಲವಾದ ಹಿಡ್ದು

ಮಂಡಕ್ಕ ಕಟ್ಕಂಡು

ನಾಗರಾಜ ಹಿಡ್ದು

ನಡಿಗ ಕಟ್ಕಂಡು

ಹೆಬ್ಬಾವ ಹಿಡ್ದು

ಮೊಗ್ಗಲ ದಿಂಚ್ ಮಾಡಿ

ಮಿಕ್ಕಾದ ಹಾವು ಚೇಳ

ಹೊದುಕೆ ಮಾಡ್ಕಂಡು

ಉತ್ತರದಿಕ್ಕ ತಲ

ದಕ್ಷಿಣದಿಕ್ಕ ಪಾದ ಹಾಕಿ

ಏಕವಾಗಿ ಮಲಗಿದ್ದ
ಸಿದ್ದಪ್ಪಾಜಿಯವರ ಪಾದಕ್ಕೆ || ಶರಣು ಶರಣಾರ್ಥಿ ||

ಕಣ್ಣಲ್ಲಿ ಕಜ್ಜನಗೂಡು
ಕಿವಿಲೀ ಹೆಜ್ಜೇನು
ಮೂಗಲ್ಲಿ ಹೊನ್ನುತ್ತ
ಕಂಕಳಲ್ಲಿ ಹಾವು ಚೇಳು
ಎದೆಗೂಡಲ್ಲಿ ಚಿಪಲಕ್ಕಿ
ಮರಿಮಾಡಿ
ನೆತ್ತಿಮ್ಯಾಲ ಮತ್ತಿಮರ
ಜಿನ್ನದ ಮ್ಯಾಲ ಬೇಲದ ಮರ
ಎಪ್ಪತ್ತೇಳು ಕುಡಿ ಒಡೆಯ
ಪಾತಾಳಕ್ಕೆ ಬೀಳ್ ಬಿಡ್ಕಂಡು
ಕೈ - ಕಾಲ್ - ಉಗುರು
ಭೂಮಿಗ್ ಬೀಳ್ ಬಿಡ್ಕಂಡು
ಕಾಳಿಂಗನ ಕಲ್ಲುಗವಿಲೀ
ಹೊರಗಿರುವ ಸಿದ್ದಪ್ಪಾಜಿಯವರ ಪಾದಕ್ಕೆ || ಶರಣು ಶರಣಾರ್ಥಿ||

ಕುರುಬರ ಬೀರಯ್ಯನ ಮನ ಊರ್ಗದಾರ
ಮಡಿವಾಳ ಮಾಚಯ್ಯನ ಮನ ಮಡಿಬಟ್ಟಾ
ಕುಂಬಾರ ಗುಂಡಯ್ಯನ ಮನ ದೇವರಗಡ್ಗ
ಹೊಲಾರ ಹೊನ್ನಯ್ಯನ ಮನ ವಾದ್ಯ
ದೇವಾಂಗದ ದಾಸಯ್ಯನ ಮನ ಅರಿಸಿಣಕೊನೆ
ಮಾದಾರಿ ಚನ್ನಯ್ಯನ ಮನ ಗ್ಯಾರಂದ ತಂದು
ಹಡಪದ ಅಪ್ಪಣ್ಣನ ಬಂದು ಮಂಡ ಚವರ ಮಾಡಿ
ಗುಡ್ಡನ ಬಿಟ್ಟು ಗುರುಮಣಿ ಕಟ್ಟಿ
ಬಸವಣ್ಣನ ಹೆಸರೇಳಿ ಭಸ್ಮಾಂಗ ಧರಿಸಿ
ರೇಚಪ್ಪಾಜಿ ಬಂದು ಕಾವಿ ಕೊಟ್ಟು

ದೊಡ್ಡಮ್ಮತಾಯಿ ಬಂದು ಮಟ್ಟಿಕಪ್ಪ ಇಕ್ಕಿ

ಗುರುದೇವರಿಂದ ಗುರುಮಣಿ ಪಡೆದ

ಸಿದ್ದಪ್ಪಾಜಿಯವರ ಪಾದಕ್ಕೆ || ಶರಣು ಶರಣಾರ್ಥಿ ||

ಹುಚ್ಚನೀಲಿ - ಬೆಪ್ಪನೀಲಿ

ಆನಂದ ನೀಲಿ - ಔತಣದ ನೀಲಿ

ರಸಸಿದ್ದನನೀಲಿ - ಹುಸಿಸಿದ್ದನ ನೀಲಿ

ರೋಣಿಸಿದ್ದನನೀಲಿ - ರೇವಣಸಿದ್ದನನೀಲಿ

ಗಳಗಸಿದ್ದನನೀಲಿ - ಗವಿಸಿದ್ದನ ನೀಲಿ

ಒಂದಲ್ಲಾ- ಎರಡಲ್ಲಾ ಎಂಭತ್ತೆಂಟು ನೀಲಿಗಳಲ್ಲಿ

ಒಲಿದು ವಾಲಾಡಿದ ಸಿದ್ದಪ್ಪಾಜಿಯವರ ಪಾದಕ್ಕೆ || ಶರಣು ಶರಣಾರ್ಥಿ ||

ಎಲ್ಲಮ್ಮ ಏಕನಾತಿ

ಗೊನಳ್ಳಿ ಗೊತ್ತಗಾತಿ

ಸಾಗಾಡಿ ರಾಕಾಸಿ

ಬನ್ನೂರ ಹೇಮಾದ್ರಿ

ಸ್ವಾಸಲಿ ಹೊನ್ನಾದೇವಿ

ಉತ್ತನಳ್ಳಿ ಮಾರಮ್ಮ

ಬೆಟ್ಟದ ಮಾರಮ್ಮ

ಮೂಗೂರ ತಿಬ್ಬಮ್ಮ

ಕೆಸ್ತೂರ ಕಿಡಗಣ್ಣ

ಬೇಲೂರು ಚೆನ್ನಾಜಿ

ಗುಂಡಾಪುರ ಮಾರಮ್ಮ

ಹೊಸೂರು ಮಾರಮ್ಮ

ಕುಂತೂರ ಮಾರಮ್ಮ

ಕಲ್ಲೂರ ಮಾರಮ್ಮ

ಹೊಸಳ್ಳಿ ಮಾರಮ್ಮ

ಬೆಳಕೋಡಿ ಸತ್ಯವತಿ

ಅಜ್ಜೀಪುರದ ಮಾರಿ

ಹನೂರ ಮಾರಮ್ಮ

ಅಗ್ನಿಕೊಂಡದವಳೇ

ಒಳಗೆರೆ ಹುಚ್ಚಮ್ಮ

ಶಿಂಷಾಮುದ್ರದ ಮಾರಿ

ಹಾಲ್ ಮಾರಿ ಕೂಗಮಾರಿ

ಪಾಳ್ಯದ ಸೀಗ್ ಮಾರಿ

ಏಳುನೂರ ಎಪ್ಪತ್ತೇಳು ಮಾರಿರಾ

ದಂಡಿಸಿದ ಧರೆಗೆ ದೊಡ್ಡವರ ಪಾದಕ್ಕೆ || ಶರಣು ಶರಣಾರ್ಥಿ||

ಹನ್ನೆರಡು ಹಾಳುದ್ದ

ಪಾತಾಳ ಬಾವಿಯೊಳಗ

ಆಕಾಶ ಹೊದ್ಕ ಮಾಡಿ

ಭೂಮಿ ಕಟಂಗಳಮಾಡಿ

ನಕ್ಷತ್ರಗಳಲ್ಲಿ ಚಿತ್ರಬರ್ದ್ಬುಟ್ಟು

ಗುಡುಡು ಮಿಂಚು

ಜಾಗಟೆ ಮಾಡಿ

ಸೂರ್ಯಚಂದ್ರಾದಿಗಳ

ತಾಣ ದಿವ್ಗ ಮಾಡಿ

ಬಾರಿ ಗುಂಡ ಕಲ್ಗ ಚಾಚ್ಕಂಡು

ಉತ್ತರ ದಿಕ್ಕ ತಲ

ದಕ್ಷಿಣಕ್ಕೆ ಪಾದ

ಪಾತಾಳ ಬಾವಿಯಲ್ಲಿ

ಏಕವಾಗಿ ಒರಗಿರುವ

ಪರಂಜ್ಯೋತಿಯವರ ಪಾದಕ್ಕೆ || ಶರಣು ಶರಣಾರ್ಥಿ ||

೨ :೨ ಮೈಸೂರು ಭಾಗದ 'ತೋರುಗದ್ದುಗೆಗಳು'

೧. ಮೈಸೂರು ಜಿಲ್ಲೆ

೧. ಕಪ್ಪಡಿ

೨. ಮೈಸೂರು

೩. ಚುಂಚನಕಟ್ಟೆ

೨. ಮಂಡ್ಯಜಿಲ್ಲೆ

೧. ಬೊಪ್ಪೇಗೌಡನಪುರ (ಮೂಲಮಠ)

೨. ಮಳವಳ್ಳಿ

೩. ಆದಿಹೊನ್ನಾಯಕನಹಳ್ಳಿ

೪. ಹಲಗೂರು

೫. ಚಿಲ್ಲಾಪುರ

೬. ಮುಟ್ಟನಹಳ್ಳಿ

೩. ಚಾಮರಾಜನಗರ

೧. ಚಿಕ್ಕಲೂರು

೨. ಕುರುಬನ ಕಟ್ಟೆ

೩. ಮುತ್ತತ್ತಿ

ನೀಲಗಾರರ ಧಾರ್ಮಿಕ ಕೇಂದ್ರಗಳು





೧. ಬೊಪ್ಪೇಗೌಡನಪುರ ಗುರುಮಠ



೨. ಆಕಾಶ ತಟ್ಟೆ



೩. ಮಳವಳ್ಳಿ ಮಠ



೪. ಬಾರಿ ನಗಾರಿ



೫. ಉರಿಗದ್ದುಗೆ, ಬೊಪ್ಪೇಗೌಡನಪುರ



೬. ಚಕ್ಕಕಟ್ಟಿ



೭. ಚೆನ್ನಾಜಮ್ಮ ಗದ್ದುಗೆ, ಕಪ್ಪಡಿ



೮. ತೋರುಗುಂಪಾಯ



೯. ನೀಲಗಾರರ ಮೇಳ




೧೦.ರಾಜಪ್ಪಾಜಿ ಗದ್ದುಗೆ, ಕಪ್ಪಡಿ



೧೧. ಉರಿಗದ್ದುಗೆ ಏರಿರುವ ಸ್ವಾಮಿ, ಕಪ್ಪಡಿ



೧೨. ಕಪ್ಪಡಿ ಜಾತ್ರೆ



೧೪. ಮುಡಿಸೇವೆ, ಚಿಕ್ಕಲ್ಲೂರು



೧೩. ದೊಡ್ಡಮ್ಮತಾಯಿ ಗದ್ದುಗೆ,



೧೫. ಬಿರುದು ಬಿಂಕಗಳು, ಚಿಕ್ಕಲ್ಲೂರು



೧೬. ಸಿದ್ದಯ್ಯ ಚೆನ್ನಯ್ಯನ ಕಂಡಾಯಗಳು, ಕುರುಬನಕಟ್ಟೆ



೧೮. ನೀಲಗಾರ ದೀಕ್ಷೆ, ಚಿಕ್ಕಲ್ಲೂರು



೧೭. ದೀಕ್ಷಿತರಾದ ನೀಲಗಾರರು, ಚಿಕ್ಕಲ್ಲೂರು



೧೯. ಪಟ್ಟದ ಬಸವ, ಚಿಕ್ಕಲ್ಲೂರು



೨೦. ಪರಿತಿ ಸೇವೆ, ಚಿಕ್ಕಲ್ಲೂರು



೨೧. ಬಾರಿಗಂಟೆ ಕಾಳಯ್ಯ, ಚಿಕ್ಕಲ್ಲೂರು



೨೨. ಬಾಡೂಟ (ಪಂಕ್ತಿ ಸೇವೆ), ಚಿಕ್ಕಲ್ಲೂರು



೨೩. ಚಿಕ್ಕಲ್ಲೂರು ಜಾತ್ರೆ



೨೪. ಚಂದ್ರಮಂಡಲ, ಚಿಕ್ಕಲ್ಲೂರು



೨೫. ಕಂಡಾಯ ಮೆರವಣಿಗೆ



೨೬. ಕಂಡಾಯ ಮೆರವಣಿಗೆಯಲ್ಲಿ ಸ್ವಾಮೀಜಿ, ಚಿಕ್ಕಲ್ಲೂರು



೨೮. ಮುತ್ತತ್ತಿರಾಯ, ಮುತ್ತತ್ತಿ



೨೭. ಕಾಳಣ್ಣ, ಕೆಂಚಣ್ಣ (ಹರಿಗೆಗಳು), ಮುತ್ತತ್ತಿ

ಅನುಬಂಧ ೩

೩.೧ ವಕ್ತೃಗಳ ವಿವರ

ಕ್ರ.ಸಂ.	ಹೆಸರು	ವಯಸ್ಸು	ಜಾತಿ	ಊರು	ತಾಲ್ಲೂಕು	ಜಿಲ್ಲೆ
೧.	ಪ್ರಭುದೇವರಾಜೇ ಅರಸು ಆಡಳಿತಾಧಿಕಾರಿ ಮಂಟೇಸ್ವಾಮಿ ಸಂಸ್ಥಾನ ಮಠ	೪೫	ಅರಸು	ಬೊಪ್ಪೇಗೌಡನಪುರ	ಮಳವಳ್ಳಿ	ಮಂಡ್ಯ
೨.	ಉಲ್ಲಂಬಳ್ಳಿ ಮಾದಯ್ಯ	೫೯	ವಾಲ್ಮೀಕಿ	ಮಳವಳ್ಳಿ	ಮಳವಳ್ಳಿ	ಮಂಡ್ಯ
೩.	ಗುರುರಾಜು	೪೦	ಹರಿಜನ	ಕೆಸರೆ (ಅಂಬೇಡ್ಕರ್‌ನಗರ)	ಮೈಸೂರು	ಮೈಸೂರು
೪.	ಮಂಟೇಸಿದ್ದಯ್ಯ	೫೮	ಹರಿಜನ	ದನಿಗೇರಿ	ಕೊಳ್ಳೇಗಾಲ	ಚಾಮರಾಜನಗರ
೫.	ತಂಬೂರಿನಿಂಗೇಗೌಡ	೫೩	ಹರಿಜನ	ಕುಂಬಾರಕೊಪ್ಪಲು	ಮೈಸೂರು	ಮೈಸೂರು
೬.	ಕೆಂಪಮ್ಮ	೫೨	ಹರಿಜನ	ಬನ್ನೂರು	ಟಿ.ನರಸೀಪುರ	ಮೈಸೂರು
೭.	ಶ್ರೀಕೃಷ್ಣಾಪುರದ ಮಹಾದೇವಸ್ವಾಮಿ	೫೦	ಆದಿಜಾಂಬವ	ಮಳವಳ್ಳಿ	ಮಳವಳ್ಳಿ	ಮಂಡ್ಯ
೮.	ರಂಗಯ್ಯ	೭೨	ಹರಿಜನ	ಮಳಲಿ	ಕೆ.ಆರ್. ನಗರ	ಮೈಸೂರು
೯.	ಹೊಸಕೇರಿ ಸಿದ್ದಯ್ಯ	೭೦	ಹರಿಜನ	ಕೊಳ್ಳೇಗಾಲ	ಕೊಳ್ಳೇಗಾಲ	ಚಾಮರಾಜನಗರ
೧೦.	ವೆಂಕಟರಮಣಶೆಟ್ಟಿ	೫೮	ಮಡಿವಾಳ	ನರೀಪುರ	ಕೊಳ್ಳೇಗಾಲ	ಚಾಮರಾಜನಗರ
೧೧.	ನಿಂಗರಾಜು	೩೫	ಕುರುಬ	ಸರಗೂರು	ಕೊಳ್ಳೇಗಾಲ	ಚಾಮರಾಜನಗರ
೧೨.	ಸಿದ್ದಯ್ಯ	೪೫	ಹರಿಜನ	ಸರಗೂರು	ಕೊಳ್ಳೇಗಾಲ	ಚಾಮರಾಜನಗರ
೧೩.	ಮಾದೇವ	೩೨	ಕುರುಬ	ನರೀಪುರ	ಕೊಳ್ಳೇಗಾಲ	ಚಾಮರಾಜನಗರ
೧೪.	ರಾಚಶೆಟ್ಟಿ	೬೫	ಮಡಿವಾಳ	ಮಳಲಿ	ಕೆ.ಆರ್.ಪೇಟೆ	ಮಂಡ್ಯ
೧೫.	ರಂಗಶೆಟ್ಟಿ	೪೨	ಮಡಿವಾಳ	ನರೀಪುರ	ಕೊಳ್ಳೇಗಾಲ	ಚಾಮರಾಜನಗರ
೧೬.	ಮಂಟೇದಯ್ಯ	೪೦	ಹರಿಜನ	ಸತ್ತೇಗಾಲ	ಕೊಳ್ಳೇಗಾಲ	ಚಾಮರಾಜನಗರ

೧೭.	ಶಿವನಂಜಯ್ಯ	೪೮	ಹರಿಜನ	ಪೂರಿಗಾಲಿ	ಮಳವಳ್ಳಿ	ಮಂಡ್ಯ
೧೮.	ಹೋಟೆಲ್ ದೊಡ್ಡಯ್ಯ	೫೦	ಕುರುಬ	ಕೀರ್ತಿನಗರ	ಮಳವಳ್ಳಿ	ಮಂಡ್ಯ
೧೯.	ರಂಗಶೆಟ್ಟಿ	೫೨	ಮಡಿವಾಳ	ಕೋಟೆಬೀದಿ	ಮಳವಳ್ಳಿ	ಮಂಡ್ಯ
೨೦.	ಮಹದೇವು	೪೮	ಕುಂಬಾರ	ಕೋಟೆಬೀದಿ	ಮಳವಳ್ಳಿ	ಮಂಡ್ಯ
೨೧.	ಪೋಲೀಸ್ ಪುಟ್ಟಣ್ಣ	೪೭	ಗಂಗಡಿಕಾರ	ಹೊನ್ನಾಯ್ಕನಹಳ್ಳಿ	ಮಳವಳ್ಳಿ	ಮಂಡ್ಯ
೨೨.	ದೇವರಾಜು	೪೮	ಕುರುಬ	ಜಿಂಕನಹಳ್ಳಿ	ಕೊಳ್ಳೇಗಾಲ	ಚಾಮರಾಜನಗರ
೨೩.	ಮರಯ್ಯ S/Oನೀಲಿ ಸಿದ್ದಯ್ಯ	೪೬	ಹರಿಜನ	ಜಿಂಕನಹಳ್ಳಿ	ಕೊಳ್ಳೇಗಾಲ	ಚಾಮರಾಜನಗರ
೨೪.	ಮಂಟೇಲಿಂಗಯ್ಯ	೬೩	ಮಡಿವಾಳ	ಕ್ಯಾತಮಾರನಹಳ್ಳಿ	ಪಾಂಡವಪುರ	ಮಂಡ್ಯ
೨೫.	ಸಿದ್ದಪ್ಪ	೫೮	ಹರಿಜನ	ಕೆ.ಆರ್.ನಗರ	ಕೆ.ಆರ್.ನಗರ	ಮೈಸೂರು
೨೬.	ಮಹಾದೇವಯ್ಯ	೩೫	ಹರಿಜನ	ಪೂರಿಗಾಲಿ	ಮಳವಳ್ಳಿ	ಮಂಡ್ಯ
೨೭.	ಕೃಷ್ಣಶೆಟ್ಟಿ	೪೨	ಮಡಿವಾಳ	ನರೀಪುರ	ಕೊಳ್ಳೇಗಾಲ	ಚಾಮರಾಜನಗರ
೨೮.	ಗೋವಿಂದ ಶೆಟ್ಟಿ	೬೦	ಮಡಿವಾಳ	ಸತ್ತೇಗಾಲ	ಕೊಳ್ಳೇಗಾಲ	ಚಾಮರಾಜನಗರ
೨೯.	ಸಣ್ಣಯ್ಯ	೭೦	ಹರಿಜನ	ಸರಗೂರು	ಕೊಳ್ಳೇಗಾಲ	ಚಾಮರಾಜನಗರ
೩೦.	ರಾಜೇಗೌಡ ಲೇ.ಕಂಪ್ಲಿ ರಾಜೇಗೌಡ	೬೦	ಕುರುಬ	ನರೀಪುರ	ಕೊಳ್ಳೇಗಾಲ	ಚಾಮರಾಜನಗರ
೩೧.	ಚಿಕ್ಕರಂಗಪ್ಪ	೬೦	ಮಡಿವಾಳ	ನರೀಪುರ	ಕೊಳ್ಳೇಗಾಲ	ಚಾಮರಾಜನಗರ
೩೨.	ಪೂಜಾರಿ	೫೫	ಲಿಂಗಾಯಿತ	ಕುರುಬನಕಟ್ಟೆ	ಕೊಳ್ಳೇಗಾಲ	ಚಾಮರಾಜನಗರ
೩೩.	ಶಿವಮ್ಮ	೪೦	ಮಡಿವಾಳ	ನರೀಪುರ	ಕೊಳ್ಳೇಗಾಲ	ಚಾಮರಾಜನಗರ
೩೪.	ಮಲ್ಲಯ್ಯ	೬೦	ಹರಿಜನ	ಸರಗೂರು	ಕೊಳ್ಳೇಗಾಲ	ಚಾಮರಾಜನಗರ
೩೫.	ಗುರುಬಸವ	೩೮	ಕುರುಬ	ಕೀರ್ತಿನಗರ	ಮಳವಳ್ಳಿ	ಮಂಡ್ಯ
೩೬.	ಶಾಂತರಾಜು	೩೫	ಕುರುಬ	ಸತ್ತೇಗಾಲ	ಕೊಳ್ಳೇಗಾಲ	ಚಾಮರಾಜನಗರ
೪೦.	ಕೆಂಪಮ್ಮ	೪೦	ಗಾಣಿಗ	ಸತ್ತೇಗಾಲ	ಕೊಳ್ಳೇಗಾಲ	ಚಾಮರಾಜನಗರ
೪೧.	ಸಿದ್ದರಾಜು	೪೫	ಗಾಣಿಗ	ಸತ್ತೇಗಾಲ	ಕೊಳ್ಳೇಗಾಲ	ಚಾಮರಾಜನಗರ
೪೨.	ಮಂಟಯ್ಯ/ಮಳವಳ್ಳಿ ರಾಚಯ್ಯ	೭೦	ಹರಿಜನ	ಸತ್ತೇಗಾಲ	ಕೊಳ್ಳೇಗಾಲ	ಚಾಮರಾಜನಗರ

೪೩.	ರಾಚಯ್ಯ	೭೨	ಹರಿಜನ	ಸರಗೂರು	ಕೊಳ್ಳೇಗಾಲ	ಚಾಮರಾಜನಗರ
೪೪.	ಪುಟ್ಟಸ್ವಾಮಿ	೪೫	ಕುಂಬಾರ	ಕೋಟೆಬೀದಿ	ಮಳವಳ್ಳಿ	ಮಂಡ್ಯ
೪೫.	ದೊಡ್ಡರಾಚಯ್ಯ	೫೦	ಹರಿಜನ	ಜಿಂಕನಹಳ್ಳಿ	ಕೊಳ್ಳೇಗಾಲ	ಚಾಮರಾಜನಗರ
೪೬.	ಬಸವರಾಜು	೩೫	-	ಗಾಂಧಿನಗರ	ಮೈಸೂರು	ಮೈಸೂರು
೪೭.	ವೆಂಕಟೇಶ	೩೨	ಮಡಿವಾಳ	ನರೀಪುರ	ಕೊಳ್ಳೇಗಾಲ	ಚಾಮರಾಜನಗರ
೪೮.	ಚಿಕ್ಕರಾಜ	೪೫	ಹರಿಜನ	ಕೋಟೆಬೀದಿ	ಮಳವಳ್ಳಿ	ಮಂಡ್ಯ
೪೯.	ಸಿದ್ದಯ್ಯ	೬೦	ಹರಿಜನ	ಜಿಂಕನಹಳ್ಳಿ	ಕೊಳ್ಳೇಗಾಲ	ಚಾಮರಾಜನಗರ
೫೦.	ಹುಚ್ಚಯ್ಯ	೫೫	ಉಪ್ಪಾರ	ಕ್ಯಾತಮಾರನಹಳ್ಳಿ	ಪಾಂಡವಪುರ	ಮಂಡ್ಯ
೫೧.	ತಂಬೂರಿ ಮಹಾದೇವಯ್ಯ	೪೨	ಹರಿಜನ	ಸಿದ್ದಯ್ಯನಪುರ	ಕೊಳ್ಳೇಗಾಲ	ಚಾಮರಾಜನಗರ
೫೨.	ಬಸವಯ್ಯ	೪೮	ಆದಿಜಾಂಬವ	ದೊಡ್ಡಿಂದುವಾಡಿ	ಕೊಳ್ಳೇಗಾಲ	ಚಾಮರಾಜನಗರ
೫೩.	ರಾಜೇಗೌಡ	೫೫	ಕುರುಬ	ಜಿಂಕನಹಳ್ಳಿ	ಕೊಳ್ಳೇಗಾಲ	ಚಾಮರಾಜನಗರ
೫೪.	ಲಿಂಗರಾಜು	೩೫	ಕುಂಬಾರ	ಕೀರ್ತಿನಗರ	ಮಳವಳ್ಳಿ	ಮಂಡ್ಯ
೫೫.	ಸಿದ್ದಯ್ಯ	೬೦	ಹರಿಜನ	ಜಿಂಕನಹಳ್ಳಿ	ಕೊಳ್ಳೇಗಾಲ	ಚಾಮರಾಜನಗರ
೫೬.	ನಿಂಗರಾಜು	೫೧	ಹರಿಜನ	ಕೆಂಪನಪುರ	ಟೀ ನರಸೀಪುರ	ಮೈಸೂರು
೫೭.	ಕುಂತೂರು ಕಾಳಶೆಟ್ಟಿ	೬೩	ಗಾಣಿಗ	ಕುಂತೂರು	ಕೊಳ್ಳೇಗಾಲ	ಚಾಮರಾಜನಗರ
೫೮.	ಬಾರಿ ಗಂಟೆ ಕಾಳಯ್ಯ	೬೦	ಹರಿಜನ	ಮುಟ್ಟನಹಳ್ಳಿ	ಮಳವಳ್ಳಿ	ಮಂಡ್ಯ
೫೯.	ಚೆನ್ನಮ್ಮ ಲೇ.ರಾಚಯ್ಯ	೫೫	ಹರಿಜನ	ಜಿಂಕನಹಳ್ಳಿ	ಕೊಳ್ಳೇಗಾಲ	ಚಾಮರಾಜನಗರ
೬೦.	ಚಿಕ್ಕರಾಜೇಗೌಡ	೪೮	ಕುರುಬ	ನರೀಪುರ	ಕೊಳ್ಳೇಗಾಲ	ಚಾಮರಾಜನಗರ
೬೧.	ಮಂಟಯ್ಯ	೭೦	ಹರಿಜನ	ಜಿಂಕನಹಳ್ಳಿ	ಕೊಳ್ಳೇಗಾಲ	ಚಾಮರಾಜನಗರ
೬೨.	ಕೃಷ್ಣ	೩೮	ಮಡಿವಾಳ	ನರೀಪುರ	ಕೊಳ್ಳೇಗಾಲ	ಚಾಮರಾಜನಗರ
೬೩.	ನಂಜುಂಡ ಲೇ. ಲಿಂಗಯ್ಯ	೪೮	ಹರಿಜನ	ಜಿಂಕನಹಳ್ಳಿ	ಕೊಳ್ಳೇಗಾಲ	ಚಾಮರಾಜನಗರ

೩.೨ ಸಾಂಸ್ಕೃತಿಕ ಪದಕೋಶ

ಅಲ್ಲಮ ಪ್ರಭು : ಆದಿಕಲ್ಯಾಣದಲ್ಲಿ ಮಂಟೇಸ್ವಾಮಿಗಳು ಅಲ್ಲಮನಾಗಿ ಹುಟ್ಟಿದರು. ಅಲ್ಲಮನ ಅವತಾರವೇ ಮಂಟೇಸ್ವಾಮಿ ಎಂದು ನೀಲಗಾರರ ನಂಬಿಕೆ.

ಅವತಾರ : ಧರೆಗೆ ದೊಡ್ಡವರ ಕಥೆಯಲ್ಲಿ ಅವತಾರಗಳ ಕಲ್ಪನೆ ಬರುತ್ತದೆ. ಮಂಟೇಸ್ವಾಮಿ ಕಲ್ಯಾಣದಲ್ಲಿದ್ದ ಬಾಚಿ ಬಸಪ್ಪಾಜಿ, ಅಕ್ಕಮಹಾದೇವಿ, ಗಂಗಾಂಬಿಕೆ, ಕ್ರಮವಾಗಿ ಕೆಂಪಚಾರಿ, ದೊಡ್ಡಮ್ಮತಾಯಿ, ಚೆನ್ನಾಜಮ್ಮನಾಗಿ ಕಲಿಗಾಲದ ಅವತಾರವೆತ್ತುತ್ತಾರೆ.

ಅಸ್ಮಿತತೆ : ಗುರುತಿಸಿಕೊಳ್ಳುವಿಕೆ

ಆಕಾಶ ತಟ್ಟೆ : ಕಾರ್ತಿಕ ಮಾಸ ಪ್ರಾರಂಭವಾದಾಗ ಬೊಪ್ಪಗೌಡನ ಪುರದಲ್ಲಿ ಈ ಆಕಾಶ ತಟ್ಟೆಯನ್ನು ಕಟ್ಟುತ್ತಾರೆ. ಬೊಂಬಿನಲ್ಲಿ ನಕ್ಷತ್ರ ಮಾದರಿಯಲ್ಲಿ ಈ ಆಕಾಶ ತಟ್ಟೆಯನ್ನು ಮಾಡುತ್ತಾರೆ.

ಆದಿಕಲ್ಯಾಣ : ೧೨ನೇ ಶತಮಾನದ ಚಾರಿತ್ರಿಕ ಕಲ್ಯಾಣವನ್ನು ನೀಲಗಾರರು ಪುರಾಣೀಕರಿಸಿಕೊಂಡಿದ್ದಾರೆ. ಆದ್ದರಿಂದ ಕಾವಿಕಲ್ಯಾಣ, ಕಡೇಕಲ್ಯಾಣ, ಆದಿಕಲ್ಯಾಣ ಎನ್ನುವ ಪರಿಕಲ್ಪನಾತ್ಮಕ ಕಲ್ಯಾಣಗಳನ್ನು ತರುತ್ತಾರೆ.

ಆನಂದದ ನೀಲಿ : ಭಂಗಿ ಸೇದಿದಾಗ ಉಂಟಾಗುವ ಎಂಭತ್ತೇಂಟು ನೀಲಿಗಳಲ್ಲಿ ಒಂದು.

ಉಡಿತುಂಬು : ಮಡಿಲುತುಂಬು. ಅಕ್ಕಿ, ಕೊಬ್ಬರಿ, ಅಡಿಕೆ, ಎಲೆ, ಕಾಯಿ, ಹಣ್ಣು, ಉತ್ತತ್ತಿ, ಅರಿಸಿನ-ಕುಂಕುಮಗಳನ್ನು ಒಂದು ಹೊಸ ಬಟ್ಟೆಯಲ್ಲಿ ಕಟ್ಟಿ, ಸೊಂಟಕ್ಕೆ ಕಟ್ಟುವ ಸಂಪ್ರದಾಯ.

ಉಬ್ಬೆ : ಮೈಲಿಗೆ ಬಟ್ಟೆಗಳನ್ನು ಒಗೆಯುವ ಮೊದಲು ಒಂದು ದೊಡ್ಡ ಒಲೆಯ ಮೇಲೆ ಬೇಯಿಸುತ್ತಾರೆ. ಈ ಒಲೆಗೆ ಉಬ್ಬೆಒಲೆ ಎನ್ನುತ್ತಾರೆ. ಮಂಟೇಸ್ವಾಮಿಗಳು ಮಾಚಯ್ಯನ ಈ ಉಬ್ಬೆ ಒಲೆಯ ಜಾಗವನ್ನು ಉಳಿಗಾರ ಮನೆಯಾಗಿ ಪಡೆಯುತ್ತಾರೆ.

ಉರ್ಗಮನೆ : ಅಡುಗೆ ಮಾಡುವ ದೊಡ್ಡ ಮನೆ. ಮಡಿವಾಳ ಮಾಚಯ್ಯನ ಉಬ್ಬೆಒಲೆ ಮಂಟೇಸ್ವಾಮಿಗೆ ಉಳಿಗಾರ ಮನೆಯಾಗುತ್ತದೆ.

ಉರ್ಗುದಾರ : ಕೂದಲಿನಿಂದ ಉರಿ ಮಾಡಿದ ದಾರ. ಕೆಂಪಾಚಾರಿಗೆ ದೀಕ್ಷೆ ಕೊಡುವಾಗ ಕೈಗೆ ಕಂಕಣ ಕಟ್ಟುವ ಶಾಸ್ತ್ರಕ್ಕೆ ಈ ದಾರ ಬೇಕಾಗುತ್ತದೆ. ಕುರುಬರಬೀರಯ್ಯ ಈ ಉರ್ಗುದಾರವನ್ನು ತಂದುಕೊಡುತ್ತಾನೆ.

ಉರಿಗದ್ದುಗೆ	:	ಬೊಪ್ಪೇಗೌಡನ ಕುರಿಹುಂಡಿಯೇ ಉರಿಗದ್ದುಗೆ. ಜಾತ್ರೆಗಳ ಮತ್ತು ಮಠಗಳ ಆಚರಣೆಗಳಲ್ಲಿ ಉರಿಗದ್ದುಗೆ ಏರುವ ಆಚರಣೆ ಇದೆ. ಇದು ಕಪ್ಪಡಿ ಜಾತ್ರೆಯಲ್ಲಿ ಉರಿಗದ್ದುಗೆ ಏರುವುದು ವಿಶಿಷ್ಟ ಆಚರಣೆ.
ಎಡೆ	:	ಪೂರ್ವಿಕರ ಸ್ಮರಣೆಗೆ ಹಾಕುವ ಊಟ. ಇಲ್ಲಿ ಮಡಿವಾಳಮಾಚಯ್ಯ ಮಂಟೇಸ್ವಾಮಿಗಳಿಗೆ ಮಗನನ್ನು ಕೊಂದು ಎಡೆಹಾಕುತ್ತಾನೆ.
ಎದುರು ಸೇವೆ	:	ಯುಗಾದಿ ಹಬ್ಬದ ಅಮವಾಸ್ಯೆಯ ದಿನ ಬೊಪ್ಪೇಗೌಡನಪುರದಲ್ಲಿ ನಡೆಯುವ ಒಂದು ದಿನದ ಜಾತ್ರೆಗೆ ಎದುರು ಸೇವೆ ಎನ್ನುತ್ತಾರೆ. ಕಪ್ಪಡಿಯಲ್ಲಿ ಇಪ್ಪತ್ತೈದು ದಿನಗಳ ಜಾತ್ರೆಗಳನ್ನು ಮುಗಿಸಿ ತಮ್ಮ ಪರಿವಾರದೊಡನೆ ಮಳವಳ್ಳಿ ಮಠದವರು, ಬೊಪ್ಪೇಗೌಡನಪುರದ ಮಠದವರು ಪರಸ್ಪರ ಎದುರುಗೊಂಡು ಅಮವಾಸ್ಯೆಯ ದಿನ ಮಠ ಪ್ರವೇಶ ಮಾಡುವ ಈ ಆಚರಣೆಯನ್ನು ಎದುರು ಸೇವೆ ಎಂದು ಕರೆಯುತ್ತಾರೆ.
ಏಳುಗಿಣ್ಣಿನ ಬೆತ್ತ	:	ಇದು ಮಂಟೇಸ್ವಾಮಿ ಬಿರುದುಗಳಲ್ಲಿ ಒಂದು. ಸಿಸು ಮಕ್ಕಳಿಗೆ ದೀಕ್ಷೆಯಾದಾಗ ಇದನ್ನು ಕೊಡುತ್ತಾರೆ. ಏಳುಗಿಣ್ಣುಗಳಿರುವ ಬಿದುರನ್ನೇ ಆಯ್ಕೆ ಮಾಡಿ ತರುತ್ತಾರೆ. ಏಳರ ಸಂಖ್ಯೆ ಪವಿತ್ರವಾದುದು ಎಂದು ನೀಲಗಾರರ ನಂಬಿಕೆ.
ಐರಾಣಿಶಾಸ್ತ್ರ	:	ಕುಂಬಾರನಿಂದ ಹೊಸ ಮಡಿಕೆಗಳನ್ನು ಶಾಸ್ತ್ರೋಕ್ತವಾಗಿ ಪಡೆಯುವ ಶಾಸ್ತ್ರ.
ಒಕ್ಕಲುಗೇರಿ	:	ಒಕ್ಕಲಿನವರು ವಾಸಿಸುವ ಕೇರಿ. ಬೇಸಾಯವನ್ನು ಪ್ರಧಾನ ವೃತ್ತಿಯನ್ನಾಗಿಟ್ಟುಕೊಂಡು ಅನುಕೂಲವಾಗಿರುವವರನ್ನು ಒಕ್ಕಲಿಗರೆಂದು ಕರೆಯುತ್ತಾರೆ.
ಕಂಕಣ	:	ನೀಲಗಾರರಿಗೆ ಎರಡು ಕಂಕಣಗಳನ್ನು ಕಟ್ಟುತ್ತಾರೆ. ಒಂದು ದೀಕ್ಷೆಯಾಗುವಾಗ ಗುರುಕಂಕಣ ಮತ್ತೊಂದು ಮದುವೆಯಾಗುವಾಗ ನರಗಂಕಣ.
ಕಂಡಾಯ	:	ಕತ್ತಿ ಎನ್ನುವ ಅರ್ಥವಿದೆ. ನೀಲಗಾರ ಪರಂಪರೆಯ ಪವಿತ್ರವಾದ ಸಂಕೇತ. ಈ ಪರಂಪರೆಯ ಒಬ್ಬೊಬ್ಬ ಶರಣನ ಸಂಕೇತವಾಗಿ ಒಂದೊಂದು ಕಂಡಾಯವಿದೆ.
ಕಟ್ಲೆ	:	ಸತ್ತ ವ್ಯಕ್ತಿ ಹನ್ನೊಂದನೇ ದಿನ ಪೂಜಿಸಿ ಕೂಳು ಹಾಕುವ ದಿನ.
ಕತ್ತೆ ಕೊಟ್ಟಿಗೆ	:	ಮಾಚಯ್ಯನ ಕತ್ತೆಕೊಟ್ಟಿಗೆ ಮಂಟೇಸ್ವಾಮಿಗಳಿಗೆ ಚಂದ್ರಶಾಲೆಯಾಗುತ್ತದೆ.
ಕಪ್ಪುದೂಳ್ತ	:	ನೀಲಗಾರರು ಬಳಸುವ ತಿಲಕೆ, ಗಾಳಿಗಾಚಾರವನ್ನು ಬಿಡಿಸುವುದಕ್ಕೆ ಈ ಕಪ್ಪುದೂಳ್ತವನ್ನು ಬಳಸುತ್ತಾರೆ.
ಕಾರ್ಯ	:	ಗಂಡ ಹೆಂಡತಿಯನ್ನು ಪ್ರಥಮವಾಗಿ ಒಂದುಮಾಡುವ ದಿನ.

ಕೊಡಮಕ್ಕ : ಸಖರಾಯಪಟ್ಟಣದ ರಾಜನ ಮಕ್ಕಳನ್ನು ಕೊಂಡು ತಂದುದ್ದಕ್ಕೆ ಕೊಡ ಮಕ್ಕಳಾಗುತ್ತಾರೆ. ಈಗಲೂ ಹಿರಿಯವರಿಗೆ ಗುರುಪಟ್ಟ ಬೊಪ್ಪಣಪುರ, ಕಿರಿಯವರಿಗೆ ರಾಜಪಟ್ಟ ಮಳವಳ್ಳಿ ಮಠ ಹಂಚಿಕೆಯಾಗಿದೆ.

ಕುರಿಕೊಟ್ಟಿಗೆ : ಮಾಚಯ್ಯನ ಕುರಿಕೊಟ್ಟಿಗೆಯನ್ನು ಮಂಟೇಸ್ವಾಮಿಗಳು ಉರಿಗದ್ದುಗೆಯಾಗಿ ಪಡೆಯುತ್ತಾರೆ.

ಕುರುಬನಕಟ್ಟೆ : ಇದು ಕೊಳ್ಳೆಗಾಲ ತಾಲ್ಲೂಕಿನಲ್ಲಿದೆ. ನೀಲಯ್ಯ, ಚೆನ್ನಯ್ಯರ ಗದ್ದುಗೆಗಳಿರುವ ಸ್ಥಳ.

ಕೂಡಿಕೆ : ಹೆಂಡತಿಯನ್ನು ಕಳೆದುಕೊಂಡವನು ಆಗುವ ಮದುವೆ. ಇದನ್ನು ಕೂಡಾವಳಿ ಎಂತಲೂ ಕರೆಯುತ್ತಾರೆ.

ಕ್ಯಾರಣ್ಯ : ಭಿಕ್ಷೆ. ಗುಡ್ಡನು ಭಿಕ್ಷೆಮಾಡುವುದನ್ನು ಕ್ಯಾರಣ್ಯ ಎನ್ನುತ್ತಾರೆ.

ಗಂಜಲ : ಹಸುವಿನ ಮೂತ್ರ. ಪವಿತ್ರತೆಯ ಸಂಕೇತ.

ಗದ್ದುಗೆ : ಈ ಪರಂಪರೆಯ ಸಾಂಸ್ಕೃತಿಕ ನಾಯಕರ ಸಮಾಧಿಗಳಿರುವ ಜಾಗ. ಇವು ನೀಲಗಾರರ ಧಾರ್ಮಿಕ ಕೇಂದ್ರಗಳಾಗಿವೆ.

ಗಳಗ ಸಿದ್ಧ : ಧರೆಗೆ ದೊಡ್ಡವರ ಕಥೆಯಲ್ಲಿ ಬರುವ ಎಪ್ಪತ್ತೆಂಟು ಸಿದ್ಧರಲ್ಲಿ ಒಬ್ಬ.

ಘನ ನೀಲಿ : ಎಪ್ಪತ್ತೆಂಟು ನೀಲಿಗಳಲ್ಲಿ ಘನ ನೀಲಿ ಒಂದು. ಈ ಘನನೀಲಿಯನ್ನು ಪಡೆದವನು ಸಿದ್ದಪ್ಪಾಜಿ. ಅವನಿಗೆ ನೀಲಿ ಸಿದ್ದಪ್ಪಾಜಿ ಎಂದು ಹೆಸರು ಇದೆ.

ಚಂದ್ರ ಮಂಡಲ : ಚಿಕ್ಕಲ್ಲೂರು ಜಾತ್ರೆಯಲ್ಲಿ ಮೊದಲ ದಿನ ನಡೆಯುವ ಆಚರಣೆ. ಇದಕ್ಕೆ ಪರಂಜ್ಯೋತಿ ಸೇವೆ ಎಂದು ಕರೆಯುತ್ತಾರೆ. ಆಗ ತಾನೆ ಕಾಡಿನಿಂದ ತಂದ ಹಸಿ ಅಚ್ಚೆಯಲ್ಲಿ ಚಂದ್ರಮಂಡಲವನ್ನು ಕಟ್ಟಿ ಹೂವು, ಹೊಂಬಾಳೆಯಿಂದ ಅಲಂಕರಿಸಿ ಭಕ್ತರು ಕೊಡುವ ಎಣ್ಣೆ ಪಂಜುಗಳನ್ನು ಕಟ್ಟುತ್ತಾರೆ. ನಂತರ ಮಠದ ಸ್ವಾಮಿಗಳು ಮಧ್ಯರಾತ್ರಿಗೆ ಬಂದು ಉರಿ ಹಚ್ಚುತ್ತಾರೆ.

ಚಹರೆ : ಗುರುತಿಸಿಕೊಳ್ಳುವುದು

ಚನ್ನಾಜಮ್ಮ : ಮಂಟೇಸ್ವಾಮಿಗಳ ಶಿಷ್ಯೆ. ವಿಜಯನಗರದ ಗಾರುಡಿಗರ ಮಗಳೆಂದು ಕಥೆಯಲ್ಲಿ ಹೇಳುತ್ತಾರೆ. ರಾಚಪ್ಪಾಜಿ ವಿಜಯನಗರದಲ್ಲಿ ಗಾರುಡಿಗರನ್ನು ಸೋಲಿಸಿ ಇವಳನ್ನು ಪಡೆಯುತ್ತಾರೆ.

ಚಿಕ್ಕಲ್ಲೂರು : ಕೊಳ್ಳೇಗಾಲ ತಾಲ್ಲೂಕಿನಲ್ಲಿ ಸಿದ್ದಪ್ಪಾಜಿಯವರ ಗದ್ದುಗೆ ಇರುವ ಪವಿತ್ರ ಸ್ಥಳ. ಪ್ರತಿ ವರ್ಷ ಜನವರಿಯಲ್ಲಿ ಐದು ದಿನಗಳ ಜಾತ್ರೆ ನಡೆಯುತ್ತದೆ.

ಚಿಲ್ಲಾಪುರ	:	ಮಳವಳ್ಳಿ ತಾಲ್ಲೂಕಿನಲ್ಲಿರುವ ಒಂದು ಊರು. ಇಲ್ಲಿ ಬೃಹತ್ ಗಾತ್ರದ ಕಬ್ಬಿಣದ ಅಡಿಗಲ್ಲು ಇದೆ. ನೀಲಗಾರರು ಇದನ್ನು ಪುರಾಣೀಕರಿಸಿಕೊಂಡು ಮಂಟೇಸ್ವಾಮಿಗಳು ಪವಾಡ ಮಾಡಿದಾಗ ಉಂಟಾದುದ್ದು ಎಂದು ನಂಬಿದ್ದಾರೆ.
ಜಾಡು	:	ಜಾಗ ಹುಡುಕುವುದು.
ಜೋಳಿಗೆ	:	ಸಿಸುಮಕ್ಕಳಿಗೆ ದೀಕ್ಷೆ ಕೊಟ್ಟಾಗ ಭಿಕ್ಷೆ ಮಾಡಲು ಜೋಳಿಗೆ ಕೊಡುತ್ತಾರೆ. ಈ ಜೋಳಿಗೆ ಪವಿತ್ರವಾದುದು ಎಂಬ ನಂಬಿಕೆ ಇದೆ.
ತೋರುಗದ್ದಿಗೆ	:	ಈ ಪರಂಪರೆಯ ಶರಣರು ಭೇಟಿ ಮಾಡಿದ ಸ್ಥಳಗಳಲ್ಲಿ ಅವರ ಕುರುಹುಗಳಾಗಿ ಗದ್ದುಗೆಗಳನ್ನು ಕಟ್ಟಿಕೊಂಡರೆ ಅವುಗಳಿಗೆ ತೋರುಗದ್ದಿಗೆ ಎನ್ನುತ್ತಾರೆ.
ದಾಸಯ್ಯ	:	ವೈಷ್ಣವ ಸಂಪ್ರದಾಯದ ಗುಡ್ಡ. ತಿರುಪತಿ ಇವರ ಧಾರ್ಮಿಕ ಕೇಂದ್ರ. ಧರೆಗೆ ದೊಡ್ಡವರ ಕತೆಯಲ್ಲಿ ಮುತ್ತತ್ತಿರಾಯನ ಪಾತ್ರ ಈ ಸಂಪ್ರದಾಯವನ್ನು ಪ್ರತಿನಿಧಿಸುತ್ತದೆ.
ದೊಡ್ಡಇಳ್ಯಾ	:	ಒಪ್ಪಂದ ಮಾಡಿಕೊಂಡು, ಒಪ್ಪಿಗೆ ತೆಗೆದುಕೊಳ್ಳುವ ದಿನ.
ನಾಗೇರು	:	ಹಸುಗಳಿಗೆ ಬರುವ ಒಂದು ಕಾಯಿಲೆ. ಹಲಗೂರು ಪಾಂಚಾಲದವರ ದನಕರುಗಳಿಗೆ ಮಂಟೇಸ್ವಾಮಿಗಳು ಶಾಪ ಕೊಟ್ಟಾಗ ಅವುಗಳಿಗೆ ನಾಗೇರು ಬಂದು ಸಾಯುತ್ತವೆ.
ನಿವಾಳಿಸು	:	ದೃಷ್ಠಿ ತೆಗೆಯುವುದು.
ನೆನೆವಾರ್ತೆ	:	ನೀಲಗಾರರು ಧಾರ್ಮಿಕ ಪೂಜಾ ಸಂದರ್ಭಗಳಲ್ಲಿ ತಮ್ಮ ಸಾಂಸ್ಕೃತಿಕ ನಾಯಕರನ್ನು ನೆನೆದು ಸ್ಮೃತಿ ಮಾಡುತ್ತಾರೆ. ಇದಕ್ಕೆ ನೆನೆವಾರ್ತೆಗಳೆಂದು ಕರೆಯುತ್ತಾರೆ.
ಪಂತಿ ಸೇವೆ	:	ಸಿದ್ಧರ ಸೇವೆ ಎನ್ನುವುದು ಇನ್ನೊಂದು ಹೆಸರು. ಚಿಕ್ಕಲ್ಲೂರು ಜಾತ್ರೆಯ ಮೂರನೇ ದಿನಕ್ಕೆ ಈ ಸೇವೆ ನಡೆಯುತ್ತದೆ. ಆ ದಿನ ಬಾಡು (ಮಾಂಸ), ಭಂಗಿ, ಮದ್ಯ ಇತ್ಯಾದಿ ಸೇವನೆಗಳು ಜಾತ್ರೆಯಲ್ಲಿ ನಡೆಯುತ್ತವೆ.
ಫಲಹಾರದಯ್ಯ	:	ಇವರು ಮಂಟೇಸ್ವಾಮಿಯ ಶಿಷ್ಯ.
ಪರ್ಸೆ	:	ಜಾತ್ರೆ
ಪಾದ ಪೂಜೆ	:	ಗಂಡಿನ ಕಾಲುಗಳನ್ನು ಅವನ ತಂಗಿ ಮತ್ತು ಅಕ್ಕ ತೊಳೆದು ಪೂಜಿಸುವ ಶಾಸ್ತ್ರ. ಈ ಪದ್ಧತಿ ಎಲ್ಲ ಜನಾಂಗಗಳಲ್ಲೂ ಸಾಮಾನ್ಯವಾಗಿ ಕಂಡು ಬರುತ್ತದೆ.
ಪುರುಸಾನಿ	:	ನೀಲಗಾರರಿಗೆ ದೀಕ್ಷೆ ಕೊಡುವ ಹಿರಿಯ ಗುರು. ಹತ್ತಾರು ಊರುಗಳಿಗೆ ಸೇರಿ ಒಬ್ಬ ಪುರುಸಾನಿಯನ್ನು ನೇಮಿಸುತ್ತಾರೆ. ಇವನನ್ನು ಪುರುಷೇಕಾರಿ ಎಂತಲೂ ಕರೆಯುವರು.

ಬಯಕೆ : ಸೀಮಂತ

ಬಿಡದಿ : ಜಾತ್ರೆಗಳಿಗೆ ಹೋಗುವ ಒಕ್ಕಲಿನವರು ಒಂದು ವಾರ ತಿಂಗಳುಗಳಷ್ಟು ಕಾಲ ಅಲ್ಲೇ ತಂಗುತ್ತಾರೆ. ಹೀಗೆ ಬೀಡು ಬಿಡುವ ಜಾಗಗಳನ್ನು ಬಿಡದಿಗಳೆಂದು ಕರೆಯುತ್ತಾರೆ.

ಬೆಡಗು : ನೀಲಗಾರ ಸಮುದಾಯದ ಕುಲ.

ಬೊಗಳು ಸನ್ನಿ : ನಿರಂತರವಾಗಿ ಬೊಗಳುವ ರೋಗ. ಮಾರಿಯರು, ಪಾಂಚಾಲದವರ ಊರಿಗೆ ನುಗ್ಗಿ ಅವರಿಗೆ ಕೊಡುವ ರೋಗಗಳಲ್ಲಿ ಒಂದು.

ಭಂಗಿ : ಇದಕ್ಕೆ ಸಿದ್ದುಪತ್ರೆ ಗಾಂಜಾ ಎನ್ನುವ ಹೆಸರು ಇವೆ. ನೀಲಗಾರರ ಪರಂಪರೆಯಲ್ಲಿ ಪವಿತ್ರವಾದ ವಸ್ತು. ಮಂಟೇಸ್ವಾಮಿಗಳು ಪವಾಡಗಳನ್ನು ಮಾಡುವ ಪೂರ್ವದಲ್ಲಿ ಭಂಗಿ ಸೇದುತ್ತಾರೆ.

ಭಂಗಿ ಮಾಂಸ : ಚಿಕ್ಕಲ್ಲೂರು ಜಾತ್ರೆಯ ಪಂತಿಸೇವೆಯ ದಿನ ಕೆಲವು ಸಮುದಾಯಗಳು ಮಾಂಸಕ್ಕೆ ಭಂಗಿ ಸೊಪ್ಪು ಬೆರಸಿ ಅಡುಗೆಯನ್ನು ತಯಾರು ಮಾಡುತ್ತಾರೆ. ಆಗ ತಾನೇ ನೀಲಗಾರ ದೀಕ್ಷೆ ಪಡೆದ ವಟುವಿಗೆ ಈ ಊಟವನ್ನು ಕೊಡುತ್ತಾರೆ.

ಮರುಪೂಜೆ : ದೊಡ್ಡ ಪೂಜೆಯಾದ ಮಾರನೆಗೆ ಮರುಪೂಜೆ ಇರುತ್ತದೆ. ದೊಡ್ಡ ಪೂಜೆಯಾದ ದಿನ ಕಂಡಾಯಗಳನ್ನು ಮನೆಗೆ ತುಂಬಿಸಿಕೊಂಡವರು ಅದರ ನಾಳೆಗೆ ಗುಡ್ಡ ಗುರುವಯ್ಯಗಳಿಗೆ ಬಾಡಿನ (ಮಾಂಸ) ಊಟ ಹಾಕುತ್ತಾರೆ.

ಮಾದಲಿ ಪೂಜೆ : ಕಪ್ಪಡಿ ಜಾತ್ರೆಯಲ್ಲಿ ರಾಚಪ್ಪಾಜಿಯವರಿಗೆ ನಡೆಯುವ ಸೇವೆ. ಈ ಜಾತ್ರೆ ಪ್ರಾರಂಭವಾದ ಇಪ್ಪತ್ತೈದನೇ ದಿನಕ್ಕೆ ಈ ಸೇವೆ ಇರುತ್ತದೆ.

ಮುಟ್ಟನಹಳ್ಳಿ : ದೊಡ್ಡಮ್ಮತಾಯಿ ಇಲ್ಲಿ ಮುಟ್ಟಾದ ಕಾರಣ ಮುಟ್ಟನಹಳ್ಳಿ ಎಂದು ಹೆಸರು ಬಂದಿದೆ, ಎಂದು ನೀಲಗಾರರು ಹಾಡುತ್ತಾರೆ.

ಮುಟ್ಟುಪೂಜೆ : ಭಕ್ತನು ಗದ್ದುಗೆಗಳನ್ನು ಮುಟ್ಟಿ ಪೂಜೆ ಮಾಡುವುದಕ್ಕೆ ಮುಟ್ಟು ಪೂಜೆ ಎಂದು ಕರೆಯುತ್ತಾರೆ. ಈ ಪೂಜೆ ಇರುವುದು ದೊಡ್ಡಮ್ಮ ತಾಯಿ ಗದ್ದುಗೆಗೆ ಮಾತ್ರ.

ಮುಡಿ ಸೇವೆ : ತಲೆಯ ಕೂದಲನ್ನು ತೆಗೆಯುವ ಆಚರಣೆ. ಬೊಪ್ಪೇಗೌಡನಪುರದಲ್ಲಿ ಯುಗಾದಿಯಾದ ಮಾರನೆ ದಿನ ನಡೆಯುತ್ತದೆ. ಇದೇ ಸೇವೆ ಚಿಕ್ಕಲ್ಲೂರು ಕಪ್ಪಡಿ ಜಾತ್ರೆಗಳಲ್ಲೂ ನಡೆಯುತ್ತದೆ.

ಮುತ್ತತ್ತಿರಾಯನ ಸೇವೆ : ಚಿಕ್ಕಲ್ಲೂರು ಜಾತ್ರೆಯಲ್ಲಿ ಕೊನೆಯ ದಿನ ನಡೆಯುವ ಸೇವೆ.

ಮೆರೆಯ ದೇವರು	:	ಮಂಟೇಸ್ವಾಮಿಗಳು ನೀಲಯ್ಯ, ಚನ್ನಯ್ಯ ಎಂಬ ಶಿಷ್ಯರಿಗೆ ಕಂಡಾಯಗಳನ್ನು ಕೊಟ್ಟು ಇವು ಮೆರೆಯದೇವರಾಗಿ, ನಾನು ಮರೆಯದೇವರಾಗುತ್ತೇನೆ ಎಂದು ವರ ಕೊಡುತ್ತಾರೆ.
ಲಕ್ಷ್ಮಿ ಮಾಡುವುದು	:	ಮದುವೆಯ ದಿನ ಗೊತ್ತು ಮಾಡಿ ಲಗ್ನ ಪತ್ರಿಕೆ ಬರೆಯುವ ಸಂಪ್ರದಾಯ.
ಸಣ್ಣ ಇಳ್ಯಾ	:	ಒಪ್ಪಂದದ ಮಾತುಕತೆ ಮತ್ತು ಕೊಡುವ ತೆಗೆದುಕೊಳ್ಳುವ ದಿನ.
ಸಾಲಾವಳಿ	:	ಗಂಡು ಹೆಣ್ಣಿನ ಮೊದಲಕ್ಷರಗಳು ಸಾಂಕೇತಿಸುವ ನಕ್ಷತ್ರಗಳು ಒಂದುಗೂಡುತ್ತವೇ ಇಲ್ಲವೇ ಎಂಬುವುದನ್ನು ಪುರೋಹಿತನಿಂದ ತಿಳಿದುಕೊಳ್ಳುವಿಕೆ.
ಸೇರು ಒಕ್ಕಲು	:	ತಮ್ಮ ಹರಕೆಯನ್ನು ಈಡೇರಿಸಿದರೆ ಮಂಟೇಸ್ವಾಮಿಗಳಿಗೆ, ಒಕ್ಕಲಾಗುವವರನ್ನು ಸೇರುಒಕ್ಕಲು ಎನ್ನುತ್ತಾರೆ.
ಹಂದರ	:	ಚಪ್ಪರ, ಮದುವೆಯ ಹಿಂದಿನ ದಿನ ಹಾಕುವ ಸಂಪ್ರದಾಯಿಕ ಚಪ್ಪರ.
ಹಲಗೂರು	:	ಮಳವಳ್ಳಿ ತಾಲ್ಲೂಕಿನ ಗ್ರಾಮ. ಪೂರ್ವದಲ್ಲಿ ಸಂಪ್ರದಾಯಿಕ ಕುಲುಮೆಗಳಿಂದ ಕಬ್ಬಿಣ ಉತ್ಪಾದನೆಯನ್ನು ಮಾಡುತ್ತಿದ್ದ ಶ್ರೀಮಂತ ಪಟ್ಟಣ. ಪಾಂಚಾಲದವರ ಉತ್ಪಾದನಾ ಚಟುವಟಿಕೆಯ ಕೇಂದ್ರ.
ಹಸೆಕಟ್ಟೆ	:	ಗೋಡೆಯಲ್ಲಿ ಬರೆದ ಚಿತ್ರ. ಮದುವೆಯಲ್ಲಿ ಹೆಣ್ಣು ಗಂಡನ್ನು ಕೂಡಿಸುವ ಜಾಗದ ಗೋಡೆಯ ಮೇಲೆ ಇರುತ್ತದೆ.
ಹಸೆ ದೀಪ	:	ಮದುವೆಯಲ್ಲಿ ಹಾಲುಗಂಬಕ್ಕೆ ಕಟ್ಟಿದ ದೀಪ.
ಹಾಲುಗಂಬ	:	ಮದುವೆ ಚಪ್ಪರದಡಿ ಹಾಲು ಬರುವ ಮರದ ಕಂಬಗಳನ್ನು ನೆಡುವ ಸಾಂಪ್ರದಾಯಿಕ ಆಚರಣೆ. ಇದು ಫಲವಂತಿಕೆಯ ಸಂಕೇತ.

೩.೩ ಪರಾಮರ್ಶನ ಗ್ರಂಥಗಳು

೧. ಈಶ್ವರ ಎನ್.ಜೋಶಿ : ೧೯೮೩, ದಕ್ಷಿಣ ಕನ್ನಡದ ಕುಡುಬಿಯರು, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೨. ಕಪಟರಾಳ ಕೃಷ್ಣರಾವ್ : ೧೯೫೫, ಲಾಕುಳ ಶೈವರ ಇತಿಹಾಸ, ಪ್ರಸಾರಾಂಗ ಧಾರವಾಡ, ವಿ.ವಿ. ಧಾರವಾಡ.

೩. ಕಪಟರಾಳ ಕೃಷ್ಣರಾವ್ : ೧೯೭೦, ಕರ್ನಾಟಕ ಸಂಸ್ಕೃತಿಯ ಸಂಶೋಧನೆ, ಉಷಾ ಸಾಹಿತ್ಯಮಾಲೆ, ಮೈಸೂರು.

೪. ಕರಿಶೆಟ್ಟಿ ರುದ್ರಪ್ಪ : ೧೯೯೫, ಮ್ಯಾಸನಾಯಕರು ಒಂದು ಜನಾಂಗಿಕ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೫. ಕಾಳೇಗೌಡ ನಾಗವಾರ : ಕಾಡುಗೊಲ್ಲರ ಜಾನಪದ ಒಂದು ಅಧ್ಯಯನ, ಬೆಂಗಳೂರು. (ಅಪ್ರಕಟಿತ) ಪಿಎಚ್.ಡಿ. ಪದವಿಗಾಗಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದ ಮಹಾಪ್ರಬಂಧ.

೬. ಕಾಳೇಗೌಡ ನಾಗವಾರ : ೧೯೯೬, ಜನಪದ ಸಾಹಿತ್ಯ, ಯುಗಾದಿ ಪ್ರಕಾಶನ, ಬೆಂಗಳೂರು.

೭. ಕೃಷ್ಣಮೂರ್ತಿ, ಮ.ಸು. : ೧೯೯೨, ಸಿದ್ದ ಸಾಹಿತ್ಯ, ಪ್ರಸಾರಾಂಗ, ಮೈಸೂರು ವಿ.ವಿ. ಮೈಸೂರು.

೮. ಖಂಡೋಬಾ, ಪಿ.ಕೆ. : ೧೯೯೧, ಕರ್ನಾಟಕದ ಲಂಬಾಣಿಗಳು ಒಂದು ಸಾಂಸ್ಕೃತಿಕ ಅಧ್ಯಯನ, ದಿ ತೇಜಸಿಂಗ ರಾಠೋಡ ಮೆಮೋರಿಯಲ್ ಟ್ರಸ್ಟ್, ಗುಲ್ಬರ್ಗ

೯. ಗುರುಪ್ರಸಾದ್, ಸಿ.ಟಿ. : ೨೦೦೦, ಕನ್ನಡ ಜಾನಪದ ಗ್ರಂಥಸೂಚಿ (೧೯೭೫-೨೦೦೦) ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೧೦. ಚಂದ್ರಶೇಖರ ಕಂಬಾರ : ೧೯೮೫, ಕನ್ನಡ ಜಾನಪದ ವಿಶ್ವಕೋಶ : ಸಂಪುಟ ೧, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೧೧. ಚಂದ್ರಶೇಖರ, ಟಿ.ಆರ್. : ೨೦೦೦, **ಅನುಭಾವಿಗಳ ಕ್ರಾಂತಿ,** ವೀರಶೈವ ಅಧ್ಯಯನ ಸಂಸ್ಥೆ, ಗದಗ.

೧೨. ಚಕ್ಕೆರೆ ಶಿವಶಂಕರ : ೧೯೯೩, : **ಗೊರವರ ಸಂಸ್ಕೃತಿ,** ಸಾಹಿತ್ಯ ಪರಿಷತ್, ಬೆಂಗಳೂರು.

೧೩. ಚನ್ನಬಸಪ್ಪ, ಗೊ.ರು. : ೧೯೭೮, **ಗ್ರಾಮಜ್ಯೋತಿ,** ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೧೪. ಚಲುವೇಗೌಡ, ತ.ಚಿ. : ೧೯೭೦, **ಕೆಲವು ಜನಪದ ಸಂಪ್ರದಾಯಗಳು : ತಳಗವಾದಿ** ಪ್ರಕಾಶನ, ಸರಸ್ವತಿಪುರಂ, ಮೈಸೂರು.

೧೫. ಚಿದಾನಂದ ಮೂರ್ತಿ, ಎಂ. : ೧೯೭೦, **ಸಂಶೋಧನ ತರಂಗ,** ಪ್ರಸಾರಾಂಗ, ಬೆಂಗಳೂರು, ವಿ.ವಿ.

೧೬. ಚಿದಾನಂದ ಮೂರ್ತಿ ಎಂ. : ೧೯೮೫, **ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ** ಕರ್ನಾಟಕ ವಿಶ್ವವಿದ್ಯಾಲಯ, ಪ್ರಸಾರಾಂಗ, ಧಾರವಾಡ.

೧೭. ಜವರಯ್ಯ, ಮ.ನ. : ೧೯೯೪, **ಪರಂಪರೆ ಹಾಗೂ ದಲಿತ ಬಂಡಾಯ ಸಾಹಿತ್ಯ ಸಮಗ್ರ ಅಧ್ಯಯನ,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ, ಮೈಸೂರು.

೧೮. ಜವರೇಗೌಡ ದೇ. : ೧೯೭೬, **ಜಾನಪದ ಅಧ್ಯಯನ** ಡಿ.ವಿ.ಕೆ. ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು.

೧೯. ದೇವೇಂದ್ರಕುಮಾರ ಹಕಾರಿ : ೧೯೯೭, **ಹಬ್ಬ ಮತ್ತು ಆಚರಣೆಗಳು ಸ್ವರೂಪ ವ್ಯಾಪ್ತಿ,** ಜಾನಪದ ಸಾಹಿತ್ಯ ದರ್ಶನ, ಭಾಗ ೧೦, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨೦. ನಂಜಮ್ಮಣಿ ಎಂ. : ೧೯೭೧, **ಸಾಮಾಜಿಕ ಮಾನವಶಾಸ್ತ್ರ,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ, ಮೈಸೂರು.

೨೧. ನಾಗರಾಜ್ ಡಿ.ಆರ್. : ೧೯೯೯, **ಅಲ್ಲಮ ಮತ್ತು ಶೈವ ಪ್ರತಿಭೆ,** ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

೨೨. ನಾಗರಾಜ, ಡಿ.ಆರ್. : ೧೯೯೬, **ಸಾಹಿತ್ಯ ಕಥನ,** ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

೨೩. ನಾಗರಾಜಪ್ಪ, ಕೆ.ಜಿ. : ೧೯೮೫, **ಮರುಚಿಂತನೆ,** ಪ್ರಣತಿ ಪ್ರಕಾಶನ, ತುಮಕೂರು.

೨೪. ನಾಗರಾಜಯ್ಯ ಹಂ.ಪ. : ೧೯೮೫, **ಕರ್ನಾಟಕದ ಜಾತ್ರೆಗಳು,** ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೨೫. ನಾರಾಯಣ ಪಿ.ವಿ. : ೧೯೯೦, ವಚನ ನಿರ್ವಚನ, ಪುಸ್ತಕಾಲಯ ಬೆಂಗಳೂರು.

೨೬. ನಾಯಕ ಹಾ.ಮಾ. : ೧೯೭೨, ಸಂವಾದ, ಉಷಾ ಸಾಹಿತ್ಯ ಮಾಲೆ, ಮೈಸೂರು.

೨೭. ನಾಯಕ, ಹಾ.ಮಾ. : ೧೯೭೪, ಜಾನಪದ ಸ್ವರೂಪ, ತ.ವೆಂ.ಸ್ಮಾರಕ ಗ್ರಂಥಮಾಲೆ, ಮೈಸೂರು.

೨೮. ಪ್ರಭಾಕರ, ಎ.ಎಸ್. : ೨೦೦೦, ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೯. ಪರಮಶಿವಮೂರ್ತಿ ಟಿ.ಎಂ. : ೧೯೮೦, ಧರೆಗೆ ದೊಡ್ಡವರ ಕಾವ್ಯ, ಬೆಂಗಳೂರು.

೩೦. ಪರಮಶಿವಯ್ಯ, ಜೀ.ಶಂ. : ೧೯೭೩, ಶ್ರೀ ಮಂಟೇಸ್ವಾಮಿ ಕಾವ್ಯ, ಸಾಹಿತ್ಯಸದನ, ಮೈಸೂರು.

೩೧. ಪರಮಶಿವಯ್ಯ, ಜೀ.ಶಂ. : ೧೯೭೫, ಜಾನಪದ ಕೆಲವು ಮುಖಗಳು, ಕರ್ನಾಟಕ, ಸರಕಾರಿ ಪ್ರಕಾಶನ ಮಂದಿರ, ಬೆಂಗಳೂರು.

೩೨. ಪರಮಶಿವಯ್ಯ ಜೀ.ಶಂ. : ೧೯೭೮, ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು, ಪ್ರಸಾರಾಂಗ, ಮೈಸೂರು ವಿ.ವಿ, ಮೈಸೂರು.

೩೩. ಪರಮಶಿವಯ್ಯ ಜೀ.ಶಂ. ೧೯೮೦, ಮಂಟೇಸ್ವಾಮಿಯ ನೀಲಗಾರರು, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು.

೩೪. ಪರಮಶಿವಯ್ಯ, ಜೀ.ಶಂ. : ೧೯೮೮, ಮೈಲಾರನ ಗೊರವರು, ಐ.ಬಿ.ಎಚ್, ಪ್ರಕಾಶನ ಬೆಂಗಳೂರು.

೩೫. ಪಾಟೀಲ, ಪಿ.ಎಸ್. : ೧೯೯೦, ಬಸವಾದಿ ಪ್ರಥಮರ ಭಕ್ತಿ ಚಳುವಳಿಯ ಭೌತಿಕವಾದೀ ಅಧ್ಯಯನಗಳು ದಿ, ಬಂಧನಾಳ ಶ್ರೀ ವೃಷಭಲಿಂಗೇಶ್ವರ ವಿದ್ಯಾವರ್ಧಕ ಟ್ರಸ್ಟ್, ಬಿಜಾಪುರ.

೩೬. ಪಾಂಡುರಂಗ ಡಿ.ಆರ್. : ೧೯೯೦, ದಕ್ಷಿಣ ಕನ್ನಡ ಜಿಲ್ಲೆಯ ಭೈರರು ಸಾಹಿತ್ಯಿಕ ಸಾಂಸ್ಕೃತಿಕ ಅಧ್ಯಯನ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ.

೩೭. ಪುಟ್ಟಯ್ಯ ಬಿ.ಎಂ. : ೧೯೯೯, ಅಲಕ್ಷಿತ ವಚನಕಾರರ ಲೋಕದೃಷ್ಟಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೩೮. ಪುರುಷೋತ್ತಮ ಬಿಳಿಮಲೆ : ೧೯೯೦, ಕರಾವಳಿ ಜಾನಪದ, ಮಂಗಳೂರು ವಿ.ವಿ, ಮಂಗಳೂರು

೩೯. ಪುರುಷೋತ್ತಮ ಬಿಳಿಮಲೆ : ೧೯೯೩, ಕೊರಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೪೦. ಬಸವರಾಜ ಕಲ್ಗುಡಿ : ೧೯೮೮, ಮಧ್ಯಕಾಲೀನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೪೧. ಬಸವರಾಜ ಸಬರದ : ೧೯೯೨, ವಚನ ಚಳುವಳಿ, ಗುಲ್ಬರ್ಗ ವಿಶ್ವವಿದ್ಯಾಲಯ, ಗುಲ್ಬರ್ಗ.

೪೨. ಬಸವರಾಜ ಸಬರದ : ೧೯೯೩, ಬಸವೇಶ್ವರ ಮತ್ತು ಪುರಂದರದಾಸ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ.

೪೩. ಬಸವಲಿಂಗ ಸೊಪ್ಪಿಮಠ : ೧೯೯೫, ಕೊಡೇಕಲ್ಲು ಬಸವಣ್ಣ ಒಂದು ಅಧ್ಯಯನ, ಶ್ರೀ ಕೊಡೇಕಲ್ಲು ಬಸವೇಶ್ವರ ಅಧ್ಯಯನ ಸಂಸ್ಥೆ, ಕೊಡೇಕಲ್ಲು.

೪೪. ಬೆನಕನಹಳ್ಳಿ ಜಿ.ನಾಯಕ್ : ೧೯೮೪, ಕಿಳ್ಳೆಕ್ಯಾತರು, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೪೫. ಬೋರಲಿಂಗಯ್ಯ, ಹಿ.ಚಿ. : ೧೯೮೧, ದಾಸಪ್ಪ-ಜೋಗಪ್ಪ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೪೬. ಬೋರಲಿಂಗಯ್ಯ, ಹಿ.ಚಿ. : ೧೯೯೫, ಕಾಡು ಕಾಂಕ್ರೀಟ್ ಮತ್ತು ಜಾನಪದ, ಅಕ್ಷರ ಪ್ರಕಾಶನ, ಸಾಗರ.

೪೭. ಬೋರಲಿಂಗಯ್ಯ, ಹಿ.ಚಿ. (ಸಂ) : ೧೯೯೭, ಮಂಟೇಸ್ವಾಮಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೪೮. ಬೋರಲಿಂಗಯ್ಯ, ಹಿ.ಚಿ. : ೧೯೯೮, ಮಂಟೇಸ್ವಾಮಿ ಕಾವ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು.

೪೯. ಬೋರಲಿಂಗಯ್ಯ, ಹಿ.ಚಿ. : ೨೦೦೦, ಬುಡಕಟ್ಟು ದೈವಾರಾಧನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೫೦. ಮಂಜುಳಾದೇವಿ, ಎಂ.ಎಸ್. : ೧೯೯೭, ಧರೆಗೆ ದೊಡ್ಡವರು ಮಂಟೇಸ್ವಾಮಿ, ಮಯೂರ ಪ್ರಕಾಶನ, ಶಿವರಾಂ ಪೇಟೆ, ಮೈಸೂರು.

೫೧. ಮುಗಳಿ ರಂ. ಶ್ರೀ : ೧೯೯೮, ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್ ಹೌಸ್, ಮೈಸೂರು.

೫೨. ರಂಗಸ್ವಾಮಿ, ಡಿ.ಟಿ. : ೧೯೭೧, ಭಾರತದ ಹಬ್ಬ ಹರಿದಿನಗಳು, ಸಮಾಜ ಪುಸ್ತಕಾಲಯ, ಧಾರವಾಡ.

೫೩. ರಮೇಶ, ಸ.ಚಿ. : ೧೯೯೬ ದಕ್ಷಿಣ ಕರ್ನಾಟಕದ ಉಪ್ಪಾರರ ಜಾನಪದ ಅಧ್ಯಯನ, ವಿದ್ಯಾರಣ್ಯ (ಅಪ್ರಕಟಿತ) ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ.

೫೪. ರಹಮತ್ ತರೀಕೆರೆ : ೧೯೯೩, ಪ್ರತಿಸಂಸ್ಕೃತಿ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು.

೫೫. ರಹಮತ್ ತರೀಕೆರೆ : ೧೯೯೮, ಕರ್ನಾಟಕದ ಸೂಫಿಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೫೬. ರಹಮತ್ ತರೀಕೆರೆ : ೨೦೦೦, ವಿಶ್ವಕೋಶ ೨ ಧರ್ಮ, ಪ್ರಸಾರಾಂಗ,ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೫೭. ರಾಜಶೇಖರ ಪಿ.ಕೆ. : ೧೯೭೩, ಮಲೆಯ ಮಾದೇಶ್ವರ ಭಾಗ ೧, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.

೫೮. ರಾಜೇಂದ್ರ, ಡಿ.ಕೆ. : ೧೯೮೬, ಮುರಾವು, ತಳಗವಾದಿ ಪ್ರಕಾಶನ, ಮೈಸೂರು.

೫೯. ರಾಮಚಂದ್ರೇಗೌಡ ಹಿ.ಶಿ. : ೧೯೭೯, ಜನಪದ ಉಡುಗೆ ತೊಡುಗೆಗಳು, ಗ್ರಾಮಜ್ಯೋತಿ ಸಂ, ಚನ್ನಪ್ಪಗೋರು, ಕೆ.ಆರ್.ಲಿಂಗಪ್ಪ ಅಭಿನಂದನಾ ಗ್ರಂಥ ಸಮಿತಿ, ಬೆಂಗಳೂರು.

೬೦. ರಾಮಯ್ಯ ಕೋಟಿಗಾನಹಳ್ಳಿ : ೧೯೯೩, ಸಿಂದ್ ಮಾದಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೬೧. ರುದ್ರಪ್ಪ : ೧೯೯೫, ಜನಪದ ಸಾಹಿತ್ಯದಲ್ಲಿ ಮಂಟೇಸ್ವಾಮಿ, ವಿಶ್ವ ಆಧ್ಯಾತ್ಮ ವಿಕಾಸ ಪ್ರತಿಷ್ಠಾನ, ಬೆಂಗಳೂರು.

೬೨. ಲಕ್ಕಪ್ಪಗೌಡ ಎಚ್.ಜೆ. : ೧೯೮೩, ಮಲೆನಾಡು ಜಾನಪದ, ಬಿ.ಆರ್.ಪ್ರೊಜೆಕ್ಟ್ ಶಿವಮೊಗ್ಗ.

೬೩. ಲಕ್ಕಪ್ಪಗೌಡ ಎಚ್.ಜೆ. : ೧೯೯೭, ಜಾನಪದ ಕೈಪಿಡಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೬೪. ವೆಂಕಟೇಶ ಇಂದ್ವಾಡಿ, ರಾ. : ೧೯೯೬, ಧರೆಗೆ ದೊಡ್ಡವರ ಕತೆ, ವಿಶ್ವವಿದ್ಯಾಲಯ ಪ್ರಕಾಶನ, ಬೆಂಗಳೂರು.

೬೫. ವೆಂಕಟೇಶ ಇಂದ್ವಾಡಿ, ರಾ. : ೧೯೯೯, ಮಂಟೇಸ್ವಾಮಿ ಪರಂಪರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೬೬. ವೆಂಕಟೇಶ ಇಂದ್ವಾಡಿ, ರಾ. : ೨೦೦೦, **ಸಾಂಸ್ಕೃತಿಕ ಪದಕೋಶ : ನೀಲಗಾರರು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೬೭. ವೆಂಕಟೇಶ ಇಂದ್ವಾಡಿ, ರಾ. : **ನೀಲಗಾರ ಒಕ್ಕಲುಗಳ ಸಾಂಸ್ಕೃತಿಕ ಅಧ್ಯಯನ** (ಅಪ್ರಕಟಿತ)

೬೮. ಶಂಕರನಾರಾಯಣ ತೀ.ನಂ. : ೧೯೮೨, **ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು**, ಪ್ರಸಾರಾಂಗ, ಮೈಸೂರು ವಿ.ವಿ, ಮೈಸೂರು.

೬೯. ಶಿವಪ್ರಕಾಶ, ಎಚ್.ಎಸ್. : ೧೯೯೫, **ಮೊದಲ ಕಟ್ಟಿನ ಗದ್ಯ**, ಅಭಿನವ ಪ್ರಕಾಶನ, ಬೆಂಗಳೂರು.

೭೦. ಶಿವಪ್ರಕಾಶ ಎಚ್.ಎಸ್. : ೧೯೯೫, **ಮಂಟೇಸ್ವಾಮಿ ಕಥಾ ಪ್ರಸಂಗ**, ಬೆಳ್ಳಿಚುಕ್ಕಿ ಪ್ರಕಾಶನ, ಬೆಂಗಳೂರು.

೭೧. ಶಿವರಾಮು ವಿ.ಎನ್. : ೧೯೮೯, **ಜನಪದ ವೈದ್ಯ**, ಕರ್ನಾಟಕ ಜಾನಪದ,ಬೆಂಗಳೂರು, ಪ್ರ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೭೨. ಶಿವರುದ್ರಪ್ಪ, ಜಿ.ಎಸ್. : ೧೯೮೧, **ಕರ್ನಾಟಕ ಜಾನಪದ**, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೭೩. ಶಿವಾನಂದ ಎಸ್.ವಿರಕ್ತಮಠ : ೧೯೯೯, **ರಾಚಪ್ಪಯ್ಯನ ಸಮಗ್ರ ಕೃತಿಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೭೪. ಷಣ್ಮುಖಯ್ಯ ಅಕ್ಕೂರ ಮಠ : **ಸೂಫಿ ಸಂತರ ಅನುಭಾವ ಪಥ**, ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳಿ, ಮೂರುಸಾವಿರಮಠ, ಹುಬ್ಬಳ್ಳಿ.

೭೫. ಷೇಕ್ ಅಲಿ, ಶಿವಣ್ಣ ಕೆ.ಎಸ್. (ಸಂ) : ೧೯೯೭, **ಕರ್ನಾಟಕ ಚರಿತ್ರೆ ಸಂಪುಟ-೩**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೭೬. ಸಿದ್ದಯ್ಯ ಪುರಾಣಿಕ : ೧೯೭೭, **ಶರಣ ಚರಿತಾಮೃತ**, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು.

೭೭. ಸುಧಾಕರ (ಸಂ) : ೧೯೯೬, **ಕುರುಬರ ಚರಿತ್ರೆ**, ಪ್ರತಿಭಾ ಪ್ರಕಾಶನ, ಮೈಸೂರು.

೭೮. ಸ್ವಾಮಿ, ಬಿ.ಎಸ್. : ೧೯೯೩, **ಮಲೆಯ ಮಾದೇಶ್ವರ ಒಂದು ಅಧ್ಯಯನ**, ನವೀನ ಪ್ರಕಾಶನ, ಬೆಂಗಳೂರು.

೭೯. ಸ್ವಾಮಿ, ಬಿ.ಎಸ್. : ೧೯೯೩, **ಜಾನಪದ ಸೌರಭ**, ಗೋರಕ್ಷನಾಥ ಪ್ರಕಾಶನ, ಬೆಂಗಳೂರು.

೮೦. ಹರಿದಾಸ ಭಟ್ಟಾಚಾರ್ಯ (ಸಂ) : ೧೯೭೦, **ಯುಗಯಾತ್ರಿ ಭಾರತೀಯ ಸಂಸ್ಕೃತಿ**, ಸಂಪುಟ : ೧ ಪ್ರಸಾರಾಂಗ, ಮೈಸೂರು ವಿ.ವಿ, ಮೈಸೂರು.

೮೧. ಹರಿಲಾಲ್ ಕೆ. ಪವಾರ : ೧೯೯೫, **ಕರ್ನಾಟಕದ ಹೆಳವರು, ಒಂದು ಅಧ್ಯಯನ**, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೮೨. ಹಿರಿಯಣ್ಣ ಅಂಬಳಿಕೆ : ೧೯೯೯, **ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೮೩. ಹಿರೇಮಠ ಎಸ್.ಎಸ್. : ೧೯೯೭, **ಮಾದಾರ ಚನ್ನಯ್ಯನ ನಾಡಿನಲ್ಲಿ**, ಸಮತಾ ಪ್ರಕಾಶನ ಹರಪನಹಳ್ಳಿ.

ನಿಯತಕಾಲಿಕೆಗಳು, ಪತ್ರಿಕೆಗಳು

೧. **ಕನ್ನಡ ಅಧ್ಯಯನ** (ಚಳಿ ಸಂಚಿಕೆ) ಸಂಪುಟ ೫, ಸಂಚಿಕೆ ೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ

೨. **ಕನ್ನಡ ಅಧ್ಯಯನ** (ಮಳೆ ಸಂಚಿಕೆ) ಸಂಪುಟ ೫, ಸಂಚಿಕೆ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩. **ಕನ್ನಡ ಅಧ್ಯಯನ** (ಮಳೆ ಸಂಚಿಕೆ) ಸಂಪುಟ ೮, ಸಂಚಿಕೆ ೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. **ಜಾನಪದ ಜಗತ್ತು**, (ಸಂಚಿಕೆಗಳು) ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು.

೫. **ಸಂಶೋಧನಾ ತರಂಗ** (ಸಂಚಿಕೆಗಳು)

೬. **ಪ್ರಬುದ್ಧ ಕರ್ನಾಟಕ** (ಸಂಚಿಕೆಗಳು) ಮೈಸೂರು ವಿ.ವಿ. ಮೈಸೂರು.

೭. **ಸಂಕ್ರಮಣ** (ಸಂಚಿಕೆಗಳು)

೮. **ಪ್ರಜಾವಾಣಿ** (ಸಾಪ್ತಾಹಿಕ ಪುರವಣಿ) ಎಂ.ಜಿ. ರಸ್ತೆ, ಬೆಂಗಳೂರು.

೯. **ಸಂಯುಕ್ತ ಕರ್ನಾಟಕ** (ಸಾಪ್ತಾಹಿಕ ಸೌರಭ)

೧೦. **ಕನ್ನಡ ಪ್ರಭ** (ಸಾಪ್ತಾಹಿಕ ಪ್ರಭ)

೧೧. **ವಿಜಯ ಕರ್ನಾಟಕ** (ಸಾಪ್ತಾಹಿಕ ಪುರವಣಿ)